

ಪ್ರಭಾವಶಾಲಿ ಐತಿಹಾಸಿಕ ಕಾದಂಬರಿ

ವ್ಯಾಲೆಂಟಿನ್ ಕಾತ್ಯೇವ್

ಬಿಳಿ ಹಾಯಿ

ಅನುವಾದ
ಕೆ. ಎಸ್. ಕೃಷ್ಣಮೂರ್ತಿ

ಭಾರತೀ ಪ್ರಕಾಶನ
ಕೃಷ್ಣಮೂರ್ತಿಪುರಂ : : ಮೈಸೂರು

This Kannada Translation of *White Sail Gleams*! by Valentin Kataev has been published by the kind permission and co-operation of V/O "Mezdhunarodnaya Kniga" Moscow, 200 USSR.

ಮೊದಲನೆಯ ಮುದ್ರಣ : ೧೯೫೮

ಬೆಲೆ : ರೂ. ೨.೦೦

ಮುದ್ರಕರು
ಜಿ. ಹೆಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮೊದಲ ಮಾತು

‘ಬಿಳಿ ಹಾಯಿ’ ಕಾದಂಬರಿಯ ಕರ್ತೃ ವ್ಯಾಲೆಂಟಿನ್ ಕಾತ್ಯೇವ್ ಇತಿಹಾಸ ಪ್ರಸಿದ್ಧವಾದ ...ಕ್ಟೋಬರ್ ಮಹಾಕ್ರಾಂತಿಯ ಅನಂತರದ ಕಾಲದಲ್ಲಿ ಕೃತಿರಚನೆಯನ್ನು ಮಾಡಿದ ಸಾಹಿತಿಗಳ ...ಂಪಿಗೆ ಸೇರುತ್ತಾನೆ. ವ್ಯಾಲೆಂಟಿನ್ ಕಾತ್ಯೇವ್ ಜನ್ಮ ತಾಳಿದ್ದು ೧೮೯೭ರಲ್ಲಿ. ಯೂರೋಪ್ ...ಡವನ್ನು ವ್ಯಾಪಿಸಿದ ಮಹಾಯುದ್ಧದ ಕಾಲದಲ್ಲಿ, ಕಾತ್ಯೇವ್ ಇನ್ನೂ ಹುಡುಗನಾಗಿ ...ಗಲೆ, ಸ್ವಯಂಸೇವಕನಾಗಿ ಸೈನ್ಯವನ್ನು ಸೇರಿದ. ರಷ್ಯಾದೇಶದಲ್ಲಿ ನಡೆದ ಅಂತಃಕಲಹದ ...ಲದಲ್ಲಿ ಉಕ್ರೈನ್‌ನಲ್ಲಿದ್ದು ಒಳಯುದ್ಧದ ರೋಮಾಂಚಕಾರಿ ಅನುಭವವನ್ನು ಪ್ರತ್ಯಕ್ಷವಾಗಿ ...ದ. ಸುಮಾರು ೧೯೧೦ನೆಯ ಇಸವಿಯಿಂದಲೇ ಕಾತ್ಯೇವ್ ಸಣ್ಣಕತೆಗಳನ್ನು ಬರೆಯಲಾರಂಭಿ... ಮುಂದೆ ಅಕ್ಟೋಬರ್ ಮಹಾಕ್ರಾಂತಿಯ ಬಳಿಕ ದೇಶದ ಜನರಲ್ಲಿ ಉಂಟಾದ ನವ...ತನದಲ್ಲಿ ಕಾತ್ಯೆವ್ ಅಮಿತ ಉತ್ಸಾಹವನ್ನು ತೋರಿಸಿದ. ೧೯೨೭ರಲ್ಲಿ ಪ್ರಕಟವಾದ ...ಟುಕಳ್ಳರು) ‘ದಿ ಎಂಬೆಸಲರ್ಸ್’ ಕಾದಂಬರಿಯಲ್ಲಿ ರಷ್ಯದ ಹೊಸ ಆರ್ಥಿಕ ನೀತಿಯ ಕಾಲದ ಜೀವನವನ್ನು ವರ್ಣಿಸಲಾಗಿದೆ. ಈ ಕಾದಂಬರಿಯಲ್ಲಿ ಕಾತ್ಯೇವ್‌ನ ವಿನೋದಶೀಲತೆಯೂ ...ಂಬನ ಶಕ್ತಿಯೂ ಚೆನ್ನಾಗಿ ವ್ಯಕ್ತವಾಗಿವೆ. ರಷ್ಯದ ಪಂಚವಾರ್ಷಿಕ ಯೋಜನೆಯ ಕಾಲದ ...ರ ಜೀವನವನ್ನೂ ಕ್ರಿಯಾಶಕ್ತಿಯನ್ನೂ ಚಿತ್ರಿಸುವ ‘ಮುಂದರಿ ಕಾಲವೇ!’ (‘ಸ್ಪೀಡ್ ಅಪ್ ...ರ್’) (೧೯೩೩) ಎಂಬ ಕಾದಂಬರಿಯಲ್ಲಿ ಉತ್ಸಾಹಕ್ಕೆ ಕೊರತೆಯೇನೂ ಇಲ್ಲ. ಇವನ ‘ಒಂಟಿ ...ಹಾಯಿ’ (‘ಲೋನ್ಲಿ ವೈಟ್ ಸೇಯಿಲ್’) ೧೯೩೭ರಲ್ಲಿ ಪ್ರಕಟವಾಯಿತು. ಕಾತ್ಯೇವ್ ಕಥೆ ...ದಂಬರಿಗಳನ್ನೇ ಅಲ್ಲದೆ ನಾಟಕಗಳನ್ನೂ ರಚಿಸಿದ್ದಾನೆ.

ಕಾತ್ಯೇವ್‌ನ ‘ಬಿಳಿಹಾಯಿ’ ಇವನ ಹಿಂದಿನ ಕಾದಂಬರಿಗಳಿಗಿಂತ ಭಿನ್ನವಾದುದಾಗಿದೆ. ...ರ ಮೊದಲನೆಯ ಕ್ರಾಂತಿಯ ಕಾಲದ ಒಡೆಸ್ಸ ನಗರದ ಹಿನ್ನಲೆಯಲ್ಲಿ ಈ ಕಾದಂಬರಿ ರಚಿತ...ದೆ. ‘ಪೊತ್ಯೆಮ್ಕಿನ್’ ಎಂಬ ಕಪ್ಪು ಸಮುದ್ರದ ನೌಕಾದಳದ ಹಡುಗು ರಷ್ಯದ ಕ್ರಾಂತಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿತು. ಆ ಹಡಗಿನ ನಾವಿಕರು ಕ್ರಾಂತಿಯನ್ನು ಹೂಡಿ ಬಂಡಾಯ...ರ ಪಕ್ಷವನ್ನು ಸೇರಿಕೊಂಡರು. ಬಂಡಾಯಗಾರರನ್ನು ಬಗ್ಗುಬಡಿಯಲು ಸರ್ಕಾರವು ...ದ್ದ ಹಡಗುಗಳನ್ನು ಕಳುಹಿಸಿಕೊಟ್ಟಿತು. ಸರ್ಕಾರದ ಯುದ್ಧದ ಹಡಗುಗಳ ನಾಕರರು ...ಯಗಾರರಮೇಲೆ ಕೈಮಾಡಲು ನಿರಾಕರಿಸಿದರು. ಆದರೇನು ? ಬಂಡಾಯಗಾರರ ಕೆಂಪು ...ಟವು ಪೊತ್ಯೆಮ್ಕಿನ್ ಹಡಗಿನಮೇಲೆ ಹೆಚ್ಚುಕಾಲ ಹಾರಾಡುವ ಅದೃಷ್ಟವನ್ನು ಪಡೆದುಕೊಳ್ಳ... ಸುವ್ಯಸ್ಥಿತ ನಾಯಕತ್ವವು ಬಂಡಾಯಗಾರರಲ್ಲಿ ಇಲ್ಲದೇ ಹೋಯಿತು. ಅವರಿಗೆ ಆಹಾರದ ...ಕಲ್ಲಿದ್ದಲಿನ ಅಭಾವವೂ ಉಂಟಾಯಿತು. ಈ ಕಾರಣಗಳಿಂದ ಬಂಡಾಯಗಾರರು ಬೇಗ ...ಗುವ ಪರಿಸ್ಥಿತಿ ಉಂಟಾಯಿತು. ಈ ಚರಿತ್ರೆಯ ಘಟನೆ ಕಾದಂಬರಿಗೆ ಆಧಾರವಾಗಿದೆ. ...ಮ್ಕಿನ್’ ಹಡಗಿನಿಂದ ತಪ್ಪಿಸಿಕೊಂಡ ಬಂಡಾಯಗಾರ ನಾವಿಕನು ಒಡೆಸ್ಸನಗರಕ್ಕೆ ಬಂದು

ಅಲ್ಲಿ ಸ್ವಲ್ಪಕಾಲ ಚಳುವಳಿಯಲ್ಲಿ ಭಾಗವಹಿಸಿದ. ಪೋಲೀಸರ ಕಣ್ಣಿಗೆ ಮಣ್ಣೆರಚಿ ಅವ ಒಡೆಸ್ಸ ನಗರದಲ್ಲಿ ಅಡಗಿ ಕುಳಿತಿದ್ದ. ಇವನಿಗೆ ಸಹಾಯಕರಾದವರು ಇಬ್ಬರು ಹುಡುಗ ಹತ್ತು ವರ್ಷ ವಯಸ್ಸಿನ ಬೆಸ್ತರ ಹುಡುಗ ಒಬ್ಬ, ಎಂಟೂವರೆ ವರ್ಷದ ಶಾಲಾ ಉಪಾಧ್ಯಾಯ ಮಗ ಇನ್ನೊಬ್ಬ. ಇವರುಗಳೇ ಕಾದಂಬರಿಗೆ ನಾಯಕರು. ಕೊನೆಯಲ್ಲಿ ನಾವಿಕನು ಒಡೆಸ್ಸದಿಂ ತಪ್ಪಿಸಿಕೊಂಡು ಹೋಗಲು ಸಹಾಯ ಮಾಡುವವರೂ ಈ ಬಾಲಕರೇ. ೧೯೦೫ರ ಕ್ರಾಂತಿ ಕಾಲದ ಒಡೆಸ್ಸನಗರದ ಅಂದಿನ ರಾಜಮಾರ್ಗಗಳು, ಗಲ್ಲಿಗಳು, ಬೀದಿಗಳು, ಧನಿಕರ ಸೌಧಗಳ ಬಡವರ ಮನೆಗಳು, ಕುದರೆ ಟ್ರಾಂಗಾಡಿಗಳು, ಶ್ರೀಮಂತರ ಭೋಗಜೀವನ, ಬಡವರ ಕಷ್ಟ ಬದುಕು, ಸುಡುವ ಬೇಸಗೆ, ಕೊರೆಯುವ ಹಿಮ, ಸಮುದ್ರದ ತೀರ ಮೊದಲಾದುವುಗಳ ಕಾದಂಬರಿಗೆ ಐತಿಹಾಸಿಕ ಕಳೆಯನ್ನು ತುಂಬುತ್ತವೆ. ಕಪ್ಪು ಸಮುದ್ರದ ನಿಗೂಢಶಕ್ತಿಯಿಂದ ಆ ಸಲ್ಪಟ್ಟ ಕಥಾಲೋಕದಲ್ಲಿ ಹುಡುಗರ ಸಾಹಸದ ಉಸಿರಾಡುತ್ತಿದೆ ಈ ಕಾದಂಬರಿ. ಅಲ್ಲದೆ ಚ ವಳಿಯ ಉದ್ವೇಗವಾತಾವರಣ, ಅಂದಿನ ಚಳುವಳಿಗಳು ಮತ್ತು ಹೋರಾಟಗಳು ಕಣ್ಣಿಗೆ ಕ ದಂತೆ ನೈಜವಾಗಿಯೂ ಹೃದಯಂಗಮವಾಗಿಯೂ ವರ್ಣಿತವಾಗಿವೆ.

"ಮಕ್ಕಳು ವಿಚಾರ ಶೀಲರೂ ಅವಲೋಕನ ಚತುರರೂ ಆಗಿರುತ್ತಾರೆ. ಅವರು ತ ಸುತ್ತಮುತ್ತ ಏನು ನಡೆಯುತ್ತದೆ ಎಂಬುದನ್ನು ದೊಡ್ಡವರಿಗಿಂತ ಅತಿವಿವರವಾಗಿ ತಿಳಿದುಕೋ ತ್ತಾರೆ." ಎಂಬ ಮಾತಿನ ನಿದರ್ಶನ ಈ ಕಾದಂಬರಿಯಲ್ಲಿ ಸ್ಪಷ್ಟವಾಗಿದೆ. ಹುಡುಗರು ಹ ಪ್ರಪಂಚವನ್ನು ಅವಲೋಕಿಸುತ್ತಾರೆ ಎಂಬುದನ್ನು ವಾಸ್ತವವಾಗಿ ವಿವರವಾಗಿ ವರ್ಣಿಸಿರುವುದ ಇಲ್ಲಿ ಕಾಣಬಹುದಾಗಿದೆ. ಇದು ಉತ್ತಮವಾದ ರಷ್ಯನ್ ಮಕ್ಕಳ ಸಾಹಿತ್ಯವೆಂಬ ಹೆಸರ ಪಡೆದಿದೆಯಾದರೂ ಮಕ್ಕಳ ಮನೋವೃತ್ತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ಕಾದಂಬರಿ ಮಕ್ಕಳ ತಂದೆತಾಯಿಯವರಿಗೂ ಉಪಯುಕ್ತ ಮನೋರಂಜಕ ಕೃತಿಯಾಗಿದೆ.

ಈ ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಲು ನನಗೆ ವಿಶೇಷವಾಗಿ ಪ್ರೋತ್ಸಾ ಕೊಟ್ಟ ಮಿತ್ರರುಗಳಾದ ಶ್ರೀ ಜಿ. ಹೆಚ್. ರಾಮರಾವ್ ಅವರಿಗೂ, ಶ್ರೀ ಬಿ. ನರಸಿಂಗರಾ ಅವರಿಗೂ ಋಣಿಯಾಗಿದ್ದೇನೆ. ಇದರ ಪ್ರಕಟನ ಕಾರ್ಯವನ್ನು ನಿರ್ವಹಿಸಿದ ಭಾರತಿ ಪ್ರಕಾ ಸಂಸ್ಥೆಗೂ ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂ ಹೌಸ್‌ನ ಒಡೆಯರಿಗೂ, ಕೆಲಸಗಾರರಿಗೂ ನನ್ನ ವಂದನೆಗಳು.

ಮೈಸೂರು
೧೫-೮-೧೯೫೮

ಕೆ. ಎಸ್. ಕೃಷ್ಣಮೂರ್ತಿ

ಅರಿಕೆ

ವ್ಯಾಲೆಂಟಿನ್ ಕಾತ್ಯೇವ್ ಇತ್ತೀಚಿನ ಬರೆಹಗಾರ. ೧೮೯೭ರಲ್ಲಿ ಜನಿಸಿದವನು. ತರುಣದಲ್ಲಿಯೇ ಈತ ಬುನಿನ್ ಮತ್ತು ಟಾಲ್ಸ್‌ಟಾಯ್ ಇವರುಗಳ ಪ್ರಭಾವಕ್ಕೆ ಒಳಗಾದ. ಇವನಿಗೆ ಬದುಕಿನ ಸ್ವರೂಪ ದರ್ಶನದಲ್ಲಿ ಹೆಚ್ಚು ಆಸಕ್ತಿ. ಇವನ ಬರೆಹಗಳಲ್ಲೆಲ್ಲಾ ಭಾವ ಗೀತೆಗಳ ಮಧುರ ಧಾಟಿ ಎದ್ದು ಕಾಣುತ್ತದೆ.

ಪ್ರಕೃತ ಭಾಷಾಂತರಿಸಿರುವ ಕಾದಂಬರಿ ಇವನ ಇತರ ಬರೆಹಗಳಿಂದ ಭಿನ್ನವಾದುದು. ಇದು ಕ್ರಾಂತಿಕಾರಿ ಸಂಪ್ರದಾಯವನ್ನು ಯಥಾರ್ಥವಾಗಿ ಪ್ರತಿಬಿಂಬಿಸುವ ಐತಿಹಾಸಿಕ ಕಾದಂಬರಿಗಳ ಗುಂಪಿಗೆ ಸೇರಿದುದು. ಇದರ ನಾಯಕರುಗಳು ಇಬ್ಬರು ಹುಡುಗರು; (ಅವರಲ್ಲಿ ಒಬ್ಬ ಬೆಸ್ತರ ಹುಡುಗ) ಮತ್ತು ಪೊತ್ಯೊಮ್ಕಿನ್ ಎಂಬ ಬಂಡಾಯ ಹಡಗಿನ ನಾವಿಕ. ಈ ಕಾದಂಬರಿಯ ಹಿನ್ನಲೆ ೧೯೦೫ರ ಕ್ರಾಂತಿಯ ಒಡೆಸ್ಸಾ ನಗರ. ಪೋಲೀಸರ ಗುಮಾನಿಗೆ ಸಿಕ್ಕಿಬಿದ್ದಿದ್ದ ನಾವಿಕ ಈ ಇಬ್ಬರು ಹುಡುಗರ ಸಹಾಯದಿಂದ ರುಮೇನಿಯಾಕ್ಕೆ ಪಾರಾಗುತ್ತಾನೆ. ಕಡಲಿನ ವಾತಾವರಣದಿಂದ ತುಂಬಿರುವ ಈ ಕಾದಂಬರಿ ಬಾಲ್ಯದ ಸಾಹಸಜೀವನದ ಪ್ರತೀಕವಾಗಿದೆ.

ಸರಳವಾಗಿಯೂ ಚೆನ್ನಾಗಿಯೂ ಹೇಳಿರುವ ಈ ಕಾದಂಬರಿಯ ಸಾಹಿತ್ಯರಮಣೀಯತೆ ಕನ್ನಡ ಓದುಗರ ಮನಸ್ಸನ್ನು ಸೆಳೆಯುವುದೆಂದು ನಂಬಿದ್ದೇವೆ.

ಈ ಕಾದಂಬರಿಯ ಸ್ವಾರಸ ಸ್ವಲ್ಪವೂ ಕೆಡದಂತೆ ಅನುವಾದ ಮಾಡಿಕೊಟ್ಟ ಸೆಯಿಂಟ್ ಫಿಲೋಮಿನಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೆ. ಎಸ್. ಕೃಷ್ಣಮೂರ್ತಿಯವರಿಗೂ ಮತ್ತು ಈ ಪುಸ್ತಕದ ಮುಖಚಿತ್ರವನ್ನು ಬರೆದುಕೊಟ್ಟ ಶ್ರೀ ಆರ್. ಎಸ್. ಎನ್. ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಕಾದಂಬರಿಯನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲು ಎಲ್ಲ ವಿಧವಾದ ಸಹಾಯ ಸೌಲಭ್ಯಗಳನ್ನೊದಗಿಸಿದ "ಮೆಜ್ದುನಾರೋದ್ನಾಯಾ ಕ್ನಿಗಾ" ಅವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಪ್ರಕಾಶಕರು

ಪರಿವಿಡಿ

೧. ಬೀಳ್ಕೊಡಿಗೆ

ನಸುಕಿನ ಐದು ಗಂಟೆ ಸಮಯದಲ್ಲಿ ಹೊಲಮನೆಯ ಅಂಗಳದಿಂದ ಕಹಳೆಯ ಕೂಗು ಕೇಳಿಬಂತು.

ತೀಕ್ಷ್ಣವಾಗಿ ಸೀಳಿಕೊಂಡು ಬಂದ ಈ ನಾದ ನೂರಾರು ತಂತಿಗಳಿಂದ ಹೊರ ಹೊರಟ ಸಂಗೀತದ ಸ್ವರಗಳಂತೆ ಅನುರಣಿತವಾಯಿತು. ಅದು ಸಿಹಿಬಾದಾಮಿ ತೋಟದಿಂದ ಬೆಂಗಾಡಾದ ಹುಲ್ಲಿನ ಮೈದಾನಕ್ಕೂ ಮತ್ತು ಕಡಲಿನ ಕಡೆಗೂ ವೇಗವಾಗಿ ನುಗ್ಗಿಕೊಂಡು ಹೋಯಿತು. ಕಡಲಿನ ದಡದಲ್ಲಿ ಚಾಚಿ ನಿಂತಿದ್ದ ಕಡಿದಾದ ದಿಣ್ಣೆಯುದ್ದಕ್ಕೂ ಅದರ ಪ್ರತಿಧ್ವನಿಯು ಅಲೆ ಅಲೆಯಾಗಿ ಉರುಳುತ್ತಾ ಹೋಗಿ ಕೊನೆಗೆ ಶೋಕಭಾವದಿಂದ ಅಳಿದುಹೋಯಿತು.

ಅದು ಕುದುರೆಗಾಡಿಯ ಪ್ರಯಾಣದ ಮೊದಲ ಸೂಚನೆಯಾಗಿತ್ತು.

ಎಲ್ಲ ಇಲ್ಲಿಗೆ ಮುಗಿದಿತ್ತು. ಬೀಳ್ಕೊಡಿಗೆಯ ಕಟು ಸಮಯ ಬಂದಿತ್ತು.

ನಿಜ ಹೇಳುವುದಾದರೆ ಬೀಳ್ಕೊಡುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ಬೇಸಗೆಯ ರಜಾ ಕಾಲದಲ್ಲಿ ಅಲ್ಲಿ ವಾಸಿಸಲು ಬಂದಿದ್ದ ಕೆಲವೇ ನಿವಾಸಿಗಳು ಇತ್ತೀಚಿನ ಘಟನೆಗಳಿಗೆ ಅಂಜಿ ಮಧ್ಯಕಾಲದಲ್ಲಿಯೇ ಆ ಸ್ಥಳವನ್ನು ಬಿಟ್ಟು ಹೊರಡಲಾರಂಭಿಸಿದರು.

ಹೊಲಮನೆಯಲ್ಲಿ ಈಗ ಅತಿಥಿಗಳಾಗಿ ಉಳಿದುಕೊಂಡಿದ್ದ ನಿವಾಸಿಗಳೆಂದರೆ ಒಡೆಸ್ಸಾದ ಉಪಾಧ್ಯಾಯನಾದ ವಾಸಿಲಿ ಪೆತ್ರೋವಿಚ್ ಬಾಚಿ, ಮತ್ತು ಮೂರೂವರೆ ಹಾಗೂ ಎಂಟೂವರೆ ವರ್ಷ ವಯಸ್ಸಿನ ಅವನ ಇಬ್ಬರು ಮಕ್ಕಳು. ಹಿರಿಯ ಹುಡುಗನ ಹೆಸರು ಪೇತ್ಯ, ಕಿರಿಯ ಹುಡುಗ ಪಾವಲಿಕ್. ಇಂದು ಅವರೂ ಕೂಡ ತಮ್ಮ ಊರಿಗೆ ಹೊರಟಿದ್ದರು.

ಕಹಳೆಯು ಕೂಗಿದ್ದೂ, ದೊಡ್ಡ ಕಪ್ಪು ಕುದುರೆಗಳನ್ನು ಲಾಯದಿಂದ ಹೊರಕ್ಕೆ ಹಿಡಿದುಕೊಂಡು ಬಂದಿದ್ದೂ ಅವರ ಪ್ರಯಾಣಕ್ಕಾಗಿಯೇ ಆಗಿದ್ದಿತು.

ಕಹಳೆಯು ಕೂಗುವುದಕ್ಕಿಂತ ಬಹು ಮುಂಚಿತವಾಗಿಯೇ ಪೇತ್ಯ ಹಾಸಿಗೆಯಿಂದ ಎದ್ದಿದ್ದ. ಹೊರಡುವ ಉದ್ವೇಗದಲ್ಲಿ ಅವನಿಗೆ ರಾತ್ರಿ ಸರಿಯಾಗಿ ನಿದ್ದೆಕೂಡ ಬಂದಿರಲಿಲ್ಲ. ಹಕ್ಕಿಗಳ ಕಿಲಿಪಿಲಿ ಶಬ್ದವನ್ನು ಕೇಳಿದೊಡನೆ ಎದ್ದು ಬಟ್ಟೆಹಾಕಿಕೊಂಡು ಹೊರಗೆ ಹೊರಟ.

ತೋಟ, ಮೈದಾನ ಮತ್ತು ಹೊಲಮನೆಯ ಅಂಗಳ ಎಲ್ಲವೂ ಚಳಿಯ ಜಾಡಿನಲ್ಲಿ ನೀರವವಾಗಿತ್ತು. ಸಮುದ್ರದಿಂದ ಸೂರ್ಯ ಮೇಲೇರಿ ಸಾಗುತ್ತಿದ್ದ. ಆದರೆ ಕಡಲ ದಂಡೆಯ ದಿಣ್ಣೆಯು ಸೂರ್ಯನನ್ನು ಮರೆಮಾಡಿತ್ತು.

ಪೇತ್ಯ ತನ್ನ ಭಾನುವಾರದ ಉಡುಪು ಹಾಕಿದ್ದ: ಬಿಳಿಯ ಅಂಚಿನ ಕೊರಳುಪಟ್ಟಿಯಿಂದ ಶೋಭಾಯಮಾನವಾಗಿದ್ದ ಸಮುದ್ರನೀಲಿಯ ನಾವಿಕರ ಅಂಗಿ ಮತ್ತು ಚಡ್ಡಿ, ಫ್ರಾನ್ಸಿನ ಲೈಲ್ ದಾರದ ಉದ್ದನೆಯ ಕಾಲುಚೀಲ, ಗುಂಡಿಹಾಕಿದ ಬೂಡ್ಸು, ಅಗಲವಾದ ಅಂಚಿನ ಹುಲ್ಲಿನ ಹ್ಯಾಟು. ಬೇಸಿಗೆಯ ರಜಕ್ಕೆ ಬಂದಂದಿನಿಂದೀಚೆಗೆ ಪೇತ್ಯ ಬೆಳೆದಿದ್ದ. ಅವನ ದೇಹದ ಈ ಬೆಳವಣಿಗೆಯಿಂದಾಗಿ ಆ ಉಡುಪು ಅವನಿಗೆ ಬಿಗಿಯಾಗಿದ್ದುದನ್ನು ಕಾಣಬಹುದಾಗಿತ್ತು.

ಅಷ್ಟು ರೋಮಾಂಚಕಾರಿಯಾದ ಬೇಸಗೆಯನ್ನು ಕಳೆದಿದ್ದ ಸ್ಥಳಗಳಿಗೆಲ್ಲ ಕೊನೆಯ

ನಮಸ್ಕಾರ ಹೇಳಿ ಅವುಗಳನ್ನು ಬೀಳ್ಕೊಳ್ಳುತ್ತ ಚಳಿಯಲ್ಲಿ ಗಡಗಡ ನಡುಗುತ್ತ ಹೊಲಗದ್ದೆಗಳ ಸುತ್ತ ನಿಧಾನವಾಗಿ ನಡೆದುಕೊಂಡು ಹೊರಟಿದ್ದ.

ಬೇಸಗೆಯುದ್ದಕ್ಕೂ ಆ ಸ್ಥಳಗಳಲ್ಲಿ ಪೇತ್ಯ ಮೈಮೇಲೆ ಹೆಚ್ಚಿನ ಬಟ್ಟೆಗಳಿಲ್ಲದೆ ಓಡಾಡಿದ್ದ. ಈಗ ಅವನ ಚರ್ಮ ಬಿಸಿಲಿನಿಂದ ಸುಟ್ಟು ಇಂಡಿಯಾ ದೇಶದ ಜನರಂತೆ ಕಂದು ಬಣ್ಣಕ್ಕೆ ತಿರುಗಿತ್ತು; ಅವನು ಬರಿಗಾಲಿನಲ್ಲಿ ಮುಳ್ಳುಗಳ ಮೇಲೂ ಕಲ್ಲು ನೆಲದ ಮೇಲೂ ಓಡಾಡಬಲ್ಲವನಾಗಿದ್ದ; ದಿವಸಕ್ಕೆ ಮೂರುಸಲ ಸಮುದ್ರತೀರದ ಮರಳಿನಲ್ಲಿ ಕುಳಿತು ಕಡಲಿನ ಕೆಂಪು ಜೇಡಿಮಣ್ಣನ್ನು ಮೈಗೆಲ್ಲ ಬಳಿದುಕೊಂಡು ತನ್ನ ಎದೆಯ ಮೇಲೆ ಉಗುರಿನಿಂದ ಚಿತ್ರಗಳನ್ನು ಬರೆದುಕೊಳ್ಳುತ್ತಿದ್ದ. ಕಡಲಿನ ಕರೆಯುದ್ದಕ್ಕೂ ಇದ್ದ ಬಂಡೆಗಳ ಸಂದಿನಲ್ಲಿ ಅನೇಕ ಹಕ್ಕಿಗಳು ಗೂಡುಕಟ್ಟಿಕೊಂಡು ವಾಸಮಾಡುತ್ತಿದ್ದುವು. ಕಟ್ಟು ಕಥೆಗಳಲ್ಲಿ ಬರುವಂಥ ಆಶ್ಚರ್ಯಕರವಾದ ಆ ಹಕ್ಕಿಗಳ ನೀಲಿಗರಿಗಳನ್ನು ತನ್ನ ಕೂದಲುಗಳಿಗೆ ಸಿಕ್ಕಿಸಿಕೊಂಡಾಗಲಂತೂ ಅವನು ಪಕ್ಕ ರೆಡ್‌ಇಂಡಿಯನ್ ಮನುಷ್ಯನಂತೆ ಕಾಣುತ್ತಿದ್ದ. ಈ ಎಲ್ಲ ಸುಖಸಂಪತ್ತಿನ ಸ್ವಚ್ಛಂದವಾದ ಅನುಭವದ ಬಳಿಕ ಪುನಃ ಬಿಗಿಯಾದ ನಾವಿಕರ ಉಣ್ಣೆಯ ಅಂಗಿ, ಚುಚ್ಚುವ ಕಾಲುಚೀಲ, ಒತ್ತುವ ಪಾದರಕ್ಷೆಗಳು, ಮತ್ತು ಕಿವಿಯ ಹತ್ತಿರ ಉಜ್ಜುವ ಹುಲ್ಲಿನ ಪರಂಗಿ ಟೋಪಿ-ಇವುಗಳನ್ನು ಧರಿಸಿಕೊಂಡು ನಡೆಯುವುದೆಂದರೆ!

ಪೇತ್ಯ ಟೋಪಿಯನ್ನೆತ್ತಿ ತನ್ನ ಬೆನ್ನಕಡೆಗೆ ಸರಿಸಿದನು. ಆಗ ಅದು ಬೆನ್ನ ಹಿಂದೆ ಬುಟ್ಟಿಯಂತೆ ತೂಗಾಡಲಾರಂಭಿಸಿತು.

ಕ್ವಾಕ್ ಕ್ವಾಕ್ ಎನ್ನುತ್ತ ಎರಡು ಕೊಬ್ಬಿದ ಬಾತುಗಳು ಒಲೆದಾಡುತ್ತ ಮಂದಗತಿಯಿಂದ ನಡೆದುಕೊಂಡುಹೋದವು. ಈ ಸೊಗಸುಗಾರ ಪುಟ್ಟಸ್ವಾಮಿಯ ಕಡೆಗೆ ಪರಕೀಯನೋ ಎಂಬಂತೆ ಒಂದು ತಿರಸ್ಕಾರ ಪೂರ್ಣವಾದ ದೃಷ್ಟಿಯನ್ನೆಸೆದು ಅವು ಒಂದು ಪೊದೆಯೊಳಕ್ಕೆ ಒಂದರ ಹಿಂದೊಂದು ನುಗ್ಗಿದುವು.

ಅವು ಬೇಕೆಂತಲೆ ಅವನ ಮುಖಭಂಗ ಮಾಡಿದುವೋ, ಇಲ್ಲ ಸುಮ್ಮನೆ ಅವನ ಗುರುತು ಹಿಡಿಯಲು ಮರೆತುವೋ ಎಂಬುದು ಪೇತ್ಯನಿಗೆ ಅರ್ಥವಾಗಲಿಲ್ಲ. ಆದರೂ ಅವನಿಗೆ ಇದ್ದಕ್ಕಿದ್ದ ಹಾಗೆ ದುಃಖ ಒತ್ತರಿಸಿಬಂದು ಅತ್ತು ಬಿಡುವಷ್ಟರಮಟ್ಟಿಗೆ ಹೃದಯ ಭಾರವಾಯಿತು. ಈ ಮುಂಜಾನೆಯ ಚಳಿಯ ನಿರ್ಜನ ಜಗತ್ತಿನಲ್ಲಿ ತಾನು ಸಂಪೂರ್ಣವಾಗಿ ಅಪರಿಚಿತನೆಂಬ ಭಾವನೆ ಅವನ ಎದೆಯನ್ನು ಕೊರೆಯಲಾರಂಭಿಸಿತು. ಕಸಕಡ್ಡಿಗಳನ್ನು ಹಾಕಿ ಬೆಂಕಿ ಹೊತ್ತಿಸಿ ತಾವು ಆಲೂಗೆಡ್ಡೆಯನ್ನು ಸುಟ್ಟುಕೊಳ್ಳುತ್ತಿದ್ದ ತೋಟದ ಮೂಲೆಯ ಕುತೂಹಲಕರವಾದ ಹಳ್ಳವೂ ಕೂಡ ನಂಬಲಾರದಷ್ಟು ಪರಕೀಯವೂ ಅಪರಿಚಿತವೂ ಆಗಿರುವಂತೆ ತೋರಿತು.

ಸೂರ್ಯ ಗಗನದಲ್ಲಿ ಮೇಲಕ್ಕೇರಲಾರಂಭಿಸಿದ್ದ.

ಹೊಲಮನೆಯ ಅಂಗಳ ಮತ್ತು ತೋಟವನ್ನು ಇನ್ನೂ ನೆರಳು ಆವರಿಸಿತ್ತು. ಆದರೆ ಅಲ್ಲಿಯ ನೌಕರರ ನಿವಾಸವಾದ ಮಣ್ಣುಗುಡಿಸಲಿನ ಹುಲ್ಲು ಚಾವಣಿಯ ಮೇಲೆ ಅಲ್ಲಲ್ಲಿ ಬಿಟ್ಟಿದ್ದ ನಸುಗೆಂಪಿನ, ಹಳದಿಯ ಮತ್ತು ನೀಲಿಯ ಕುಂಬಳಕಾಯಿಗಳ ಮೇಲೆ ಬಾಲಸೂರ್ಯನ ಹೊಳೆಹೊಳೆಯುವ ತಂಪಾದ ಹೊಂಗಿರಣಗಳು ಬಿದ್ದು ಅವು ಮೋಹಕವಾಗಿದ್ದುವು.

ಮನೆಯಲ್ಲಿ ನೂಲುತೆಗೆದ ದಾರದಿಂದ ನೆಯ್ದ ಚೌಕಳಿ ನಮೂನೆಯ ಲಂಗ, ಮತ್ತು ಕಪ್ಪು

ಕೆಂಪುದಾರಗಳಿಂದ ಕತ್ತರಿ ಹೂಲಿಗೆಯ ಕಸೂತಿ ಹಾಕಿದ ಮಾಸಲು ಬಣ್ಣದ ರವಿಕೆ--ಇವುಗಳನ್ನು ಧರಿಸಿ ಕೆದರಿದ ಕೂದಲಿಗೆ ಕಬ್ಬಿಣದ ಬಾಚಣಿಗೆಯೊಂದನ್ನು ಸಿಕ್ಕಿಸಿಕೊಂಡಿದ್ದ ನಿದ್ದೆಗಣ್ಣಿನ ಅಡಿಗೆಯವಳು ಹಿಂದಿನ ದಿನದ ಆರಿದ ಇದ್ದಿಲನ್ನು ಬಾಗಿಲ ಮೆಟ್ಟಿಲಿನ ಎದುರಿಗೆ ಟೀ ನೀರನ್ನು ಕುದಿಸುವ ಸಮೋವಾರ್‌ನಿಂದ ಹೊರಕ್ಕೆ ಚೆಲ್ಲುತ್ತಿದ್ದಳು.

ಮುಪ್ಪನ್ನು ಸೂಚಿಸುತ್ತ ಸುಕ್ಕುಸುಕ್ಕಾಗಿದ್ದ ಅಡಿಗೆಯವಳ ಕೊರಳಿನಲ್ಲಿ ಮೇಲಕ್ಕೂ ಕೆಳಕ್ಕೂ ಕುಣಿದಾಡುತ್ತಿದ್ದ ಮಣಿಗಳ ಸರವನ್ನು ನೋಡುತ್ತ ಪೇತ್ಯ ನಿಂತಿದ್ದ.

"ಹೊರಟು ಬಿಡುತ್ತೀಯೊ ?" ಎಂದು ಅವಳು ಉದಾಸೀನಭಾವದಿಂದ ಕೇಳಿದಳು.

"ಹೌದು" ಎಂದು ಹುಡುಗ ಉತ್ತರ ಕೊಟ್ಟಾಗ ಅವನ ಧ್ವನಿ ಕಂಪಿಸಿತು.

"ನಿನಗೆ ಶುಭವಾಗಲಿ."

ಎಂದು ಹೇಳಿ ಅವಳು ನೀರಿನ ಪೀಪಾಯಿಯ ಹತ್ತಿರಕ್ಕೆ ಹೋದಳು. ಅವಳು ತನ್ನ ಚೌಕಳಿ ಲಂಗದ ಅಂಚನ್ನು ಕೈಗೆ ಸುತ್ತಿಕೊಂಡು ಪೀಪಾಯಿಯಿಂದ ನೀರುಬರುವ ರಂಧ್ರಕ್ಕೆ ಹಾಕಿದ್ದ ಬಿರಡೆಯನ್ನು ಕಿತ್ತಳು.

ದಪ್ಪದಾದ ದುಂಡನೆಯ ನೀರಿನಧಾರೆ ಕಮಾನಿನಂತೆ ಹೊರಕ್ಕೆ ನುಗ್ಗಿಬಂದು ನೆಲಕ್ಕೆ ಸುರಿಯಲಾರಂಭಿಸಿತು. ಅದರಿಂದ ಹೊಳೆ ಹೊಳೆಯುವ ಮುತ್ತಿನಂಥ ತುಂತುರು ಹನಿಗಳು ಎರಚಿ ಕೆಂಧೂಳನ್ನು ಆವರಿಸಿದುವು.

ಅಡಿಗೆಯವಳು ಸಮೋವಾರನ್ನು ನೀರಿನ ಧಾರೆಯ ಕೆಳಗೆ ಇಟ್ಟಳು. ಹೊಸ ನೀರು ಅದರ ಮೇಲೆ ಬೀಳುತ್ತಿದ್ದ ಹಾಗೆ ಅದು ನರಳಿದಂತೆ ಶಬ್ದಮಾಡಿತು.

ಇಲ್ಲ, ಯಾರೊಬ್ಬರಿಂದಲೂ ಸಹಾನುಭೂತಿಯ ಲವಲೇಶವೂ ಇಲ್ಲ!

ಕ್ರೋಕೆ ಚೆಂಡಾಟದ ಮೈದಾನ, ಹುಲ್ಲುಗಾವಲು, ಲತಾಗೃಹ--ಎಲ್ಲ ಸ್ಥಳಗಳಲ್ಲಿಯೂ ಅದೇ ಮೈತ್ರಿಯಿಲ್ಲದ ಮೌನ, ಅದೇ ಶೂನ್ಯ ವಾತಾವರಣ.

ಆದರೂ ಅತ್ಯಲ್ಪ ಕಾಲದ ಹಿಂದೆ ಎಷ್ಟೊಂದು ಉಲ್ಲಾಸ ಮತ್ತು ಹರ್ಷವಿತ್ತು! ಎಷ್ಟೊಂದು ಮುದ್ದುಮುದ್ದಾದ ಹುಡುಗಿಯರು, ತುಂಟ ಹುಡುಗರು! ಎಷ್ಟೊಂದು ಕೀಟಲೆಗಳು, ಅವಾಂತರಗಳು, ಆಟಗಳು, ಜಗಳಗಳು, ಠೂಪಿ ಬಿಡುವುದು, ಸಂಗಕಟ್ಟಿಕೊಳ್ಳುವುದು, ಮುತ್ತುಗಳ ಸುರಿಮಳೆ, ಸ್ನೇಹ!

ಜಮೀನಿನ ಯಜಮಾನ ರುಡಾಲ್ಫ್ ಕಾರ್ಲೋವಿಚ್‌ನು ಬೇಸಗೆಯನ್ನು ಕಳೆಯಲು ಬಂದಿದ್ದ ವಿಲಾಸಿಗಳಿಗೆ ತನ್ನ ಹೆಂಡತಿ ಲೂಯಿಸ ಫ್ರಾಂತ್ಸೇವ್ನಾಳ ಹುಟ್ಟಿದ ಹಬ್ಬದ ದಿವಸ ಎಂಥ ಮೋಹಕವಾದ ಸಂತೋಷಕೂಟವನ್ನು ಏರ್ಪಡಿಸಿದ್ದನು!

ಆ ಸಮಾರಂಭವನ್ನು ಪೇತ್ಯ ಎಂದೂ ಮರೆಯಲಾರ.

ಬೆಳಗ್ಗೆ ಸಿಹಿಬಾದಾಮಿ ಮರಗಳ ಅಡಿಯಲ್ಲಿ ಒಂದು ದೊಡ್ಡ ಮೇಜನ್ನು ಇಡಲಾಗಿತ್ತು. ಅದರ ಮೇಲೆ ಕಾಡುಹೂವುಗಳ ಗೊಂಚಲುಗಳನ್ನು ಅಲ್ಲಲ್ಲಿ ಜೋಡಿಸಿಟ್ಟು ಅಲಂಕರಿಸಲಾಗಿತ್ತು. ಮೇಜಿನ ಮೇಲೆ ಮಧ್ಯದಲ್ಲಿ ಬೈಸಿಕಲ್ ಚಕ್ರದಷ್ಟು ದೊಡ್ಡ ಕೇಕನ್ನು ಇಡಲಾಗಿತ್ತು.

ಸಕ್ಕರೆಯ ಪಾಕದಿಂದ ವಿಧವಿಧವಾಗಿ ಅಲಂಕರಿಸಿದ್ದ ಆ ಕೇಕಿಗೆ ಮೂವತ್ತೈದು ಮೇಣದ ಬತ್ತಿಗಳನ್ನು ಸಿಕ್ಕಿಸಿ ಅವುಗಳನ್ನು ಹಚ್ಚಿದ್ದರು. ಮೇಣದ ಬತ್ತಿಗಳ ಸಂಖ್ಯೆಯಿಂದ ಲೂಯಿಸಳ

ವಯಸ್ಸನ್ನು ಸುಲಭವಾಗಿ ತಿಳಿಯಬಹುದಾಗಿತ್ತು.

ಸಿಹಿಬಾದಾಮಿ ಗಿಡಗಳ ಕೆಳಗಡೆ ಏರ್ಪಡಿಸಲಾಗಿದ್ದ ಉಪಾಹಾರಕ್ಕೆ ಬೇಸಿಗೆ ರಜಕ್ಕಾಗಿ ಬಂದಿದ್ದ ಎಲ್ಲ ಅತಿಥಿಗಳನ್ನೂ ಆಹ್ವಾನಿಸಲಾಗಿತ್ತು.

ಆರಂಭದಲ್ಲಿದ್ದ ಉಲ್ಲಾಸ ಆ ದಿನವೆಲ್ಲ ಮುಂದುವರಿಯಿತು. ಸಂಜೆ ಮಕ್ಕಳಿಗಾಗಿ ವಿವಿಧಾಲಂಕಾರಗಳ ನರ್ತನಕೂಟ ನಡೆಯಿತು. ಸಂಗೀತ ಮತ್ತು ಬಾಣಬಿರುಸುಗಳೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ತಮಗಾಗಿ ತಯಾರುಮಾಡಿದ್ದ ಸೊಗಸಾದ ವಿವಿಧ ಉಡುಪುಗಳನ್ನು ಎಲ್ಲ ಮಕ್ಕಳೂ ಧರಿಸಿದ್ದರು. ಬಾಲಕಿಯರು ನಾಗಕನ್ಯೆಯರಂತೆಯೂ, ಕಂದಾರೆಯವರಂತೆಯೂ ಕಾಣಿಸಿಕೊಂಡರು. ಬಾಲಕರು ರೆಡ್ ಇಂಡಿಯನರಾಗಿಯೂ, ಠಕ್ಕರಾಗಿಯೂ, ಚೀಣಿಗೊಂಬೆಗಳಾಗಿಯೂ, ನಾವಿಕರಾಗಿಯೂ ಶೋಭಿಸಿದರು. ಅವರೆಲ್ಲ ಥಳಥಳನೆ ಹೊಳೆಯುವ ಬಣ್ಣ ಬಣ್ಣದ ಭರ್ಜರಿ ಬಟ್ಟೆಯ ಅಥವಾ ಕಾಗದದ ಉಡುಪುಗಳಿಂದ ಅಲಂಕರಿಸಿಕೊಂಡಿದ್ದರು.

ಮರ್ಮರ ಶಬ್ದ ಮಾಡುತ್ತಿದ್ದ ಜಲ್ಲಿಕಾಗದದ ಲಂಗಗಳೂ ಹಾಗೂ ಮೇಲಂಗಿಗಳೂ, ತಂತಿಯ ತೊಟ್ಟಿನ ಮೇಲೆ ನಿಲ್ಲಿಸಿದ್ದ ಕೃತಕ ಗುಲಾಬಿ ಹೂವುಗಳೂ, ಮತ್ತು ಹಾರಾಡುತ್ತಿದ್ದ ರೇಷ್ಮೆಯ ರಿಬ್ಬನ್‌ಗಳನ್ನು ಕಟ್ಟಿದ ಖಂಜರಿಗಳೂ ಅಲ್ಲಿದ್ದುವು.

ಸ್ವಾಭಾವಿಕವಾಗಿ ಅತ್ಯುತ್ತಮವಾದ ವೇಷ ಪೇತ್ಯನದಾಗಿತ್ತೆಂದು ಹೇಳಲೇಬೇಕಾಗಿಲ್ಲ. ಅದು ಹಾಗಿಲ್ಲದೆ ಇರುವುದು ಸಾಧ್ಯವೇ ಹೇಳಿ! ಅವನ ತಂದೆ ಅದನ್ನು ತಯಾರುಮಾಡುವುದಕ್ಕೆ ಎರಡು ದಿನಗಳನ್ನು ತೆಗೆದುಕೊಂಡಿದ್ದರು. ಅವರ ಮೂಗಿಗೆ ಸಿಕ್ಕಿಸಿಕೊಂಡಿದ್ದ ಕನ್ನಡಕವು ಕೆಲಸ ಮಾಡುತ್ತಿದ್ದಾಗ ಎಷ್ಟು ಸಲ ಜಾರಿಬಿತ್ತೋ! ತಂದೆಗೆ ಹತ್ತಿರದ ದೃಷ್ಟಿ. ಗೋಂದಿನ ಸೀಸೆ ಕಣ್ಣಿಗೆ ಕಾಣದೆ ಅದನ್ನು ಉರುಳಿಸಿದಾಗಲೆಲ್ಲ "ಈ ಹುಚ್ಚು ಏರ್ಪಾಡು" ಮಾಡಿದವರನ್ನು ಕುರಿತು ಉಗ್ರಶಾಪವನ್ನು ತಮ್ಮಲ್ಲಿಯೇ ಗೊಣಗಿಕೊಳ್ಳುತ್ತಿದ್ದರು. ಅಲ್ಲದೆ "ಈ ಅವಿವೇಕದ ಬುದ್ಧಿ" ಯಾರಿಗೆ ಹೊಳೆಯಿತೋ ಎಂದು ತಮ್ಮ ಜುಗುಪ್ಸೆಯನ್ನು ಸರ್ವಸಾಧಾರಣವಾಗಿ ತೋರಿಸಿಕೊಳ್ಳುತ್ತಿದ್ದರು.

ಅವರು ತಮ್ಮ ಕೆಲಸದ ಬೇಸರವನ್ನು ಕಳೆದುಕೊಳ್ಳಲು ಹಾಗೆ ಹೇಳಿಕೊಳ್ಳುವುದು ವಾಡಿಕೆಯಾಗಿತ್ತು. ತಾವು ತಯಾರಿಸುತ್ತಿದ್ದ ಪೋಷಾಕು ಕೆಟ್ಟು ಹೋಗಬಹುದೆಂಬ ಹೆದರಿಕೆಯೂ ಕೂಡ ಅವರಿಗಿಲ್ಲದಿರಲಿಲ್ಲ. ಹಾಗೇನಾದರೂ ಕೆಟ್ಟು ಹೋದರೆ ತಮಗೆ ಅಪಮಾನವಾಗಬಹುದೆಂಬ ಭಯ ಬೇರೆ. ಅದೆಷ್ಟು ಪ್ರಯಾಸ ಅವರದು! ಏನು ಬೇಕಾದರೂ ಹೇಳಿ, ಅವರು ಸಿದ್ಧಗೊಳಿಸಿದ ಪೋಷಾಕು ಮಾತ್ರ ಬಹಳ ಆಕರ್ಷಕವಾಗಿದ್ದಿತು.

ಅದು ಹಿಂದಿನಕಾಲದ ವೀರರು ಧರಿಸುತ್ತಿದ್ದ ಯುದ್ಧಕವಚದಂತಿತ್ತು. ಚಿನ್ನ ಮತ್ತು ಬೆಳ್ಳಿಗಳಂತೆ ಥಳಥಳನೆ ಹೊಳೆಯುತ್ತಿದ್ದ ಗಿಲೀಟು ಕಾಗದವನ್ನು ತಂತಿಯ ಚೌಕಟ್ಟಿನ ಮೇಲೆ ಅಂಟಿಸಿ ಅದನ್ನು ಬಹು ಕುಶಲತೆಯಿಂದ ಮಾಡಲಾಗಿತ್ತು. ಹಾರಾಡುತ್ತಿದ್ದ ಗರಿಯಿಂದ ಅಲಂಕೃತವಾದ ಶಿರಸ್ತ್ರಾಣವು ಸರ್‌ವಾಲ್ಟರ್‌ಸ್ಕಾಟ್ ಎಂಬ ಆಂಗ್ಲ ಕಾದಂಬರಿಕಾರನ ಐತಿಹಾಸಿಕ ಕಾಗಂಬರಿಗಳಲ್ಲಿ ಬರುವ ನೈಟ್‌ಗಳು ಧರಿಸುತ್ತಿದ್ದಂಥದೇ ಆಗಿತ್ತು. ಅದರಲ್ಲಿ ವಿಶೇಷವೇನೆಂದರೆ ಶಿರಸ್ತ್ರಾಣದ ಮುಂದುಗಡೆಯಲ್ಲಿ ಕಣ್ಣು ಮೂಗುಗಳನ್ನು ಮುಚ್ಚಿರುವ ಭಾಗವಾದ ಮೊಗ

ಕಾಪನ್ನು ಮೇಲಕ್ಕೆ ಕೆಳಕ್ಕೆ ಇಳಿಸಿ ಎತ್ತಬಹುದಾಗಿತ್ತು.

ಹೆಚ್ಚಿಗೆ ಏನು, ಅದು ಎಷ್ಟು ಸೊಗಸಾಗಿತ್ತೆಂದರೆ ಎರಡನೆಯ ಜೋಡಿಗಾಗಿ ಜೋಯಳ ಪಕ್ಕದಲ್ಲಿ ಪೇತ್ಯನನ್ನು ನಿಲ್ಲಿಸಿದರು. ಆ ಹೊಲಮನೆಯಲ್ಲೆಲ್ಲ ಜೋಯ ಅತಿ ಚಂದದ ಹುಡುಗಿಯಾಗಿದ್ದಳು. ಅವಳು ಸದ್ಗುಣಭರಿತಳಾದ ಅಪ್ಸರೆಯಂತೆ ಕಾಣುತ್ತಿದ್ದಳು. ಅವಳು ಗುಲಾಬಿ ಬಣ್ಣದ ಉಡುಪನ್ನು ಧರಿಸಿದ್ದಳು.

ಚೀಣೀ ಲಾಂದ್ರಗಳನ್ನು ತಗಲುಹಾಕಿದ ತೋಟದ ಸುತ್ತ ತೋಳಿನಲ್ಲಿ ತೋಳು ಹಾಕಿಕೊಂಡು ಅವರು ನಲಿದಾಡಿದರು. ಆ ಗಾಢಾಂಧಕಾರದಲ್ಲಿದ್ದ ಮರಗಿಡಗಳ ಮೇಲೆ ಅಲ್ಲಲ್ಲಿ ತೂಗುಹಾಕಿದ್ದ ಕೆಂಪು ಮತ್ತು ಹಸುರಿನ ಬಂಗಾಳ ದೀಪಗಳ ಬೆಳಕು ಚೆಲ್ಲಿ ಅವು ನಂಬಲಾರದಷ್ಟು ಉಜ್ವಲವಾಗಿ ಮಿನುಗುತ್ತಿದ್ದುವು.

ಲತಾಗೃಹದಲ್ಲಿ ಗಾಜಿನ ಚಿಮಣಿಗಳೊಳಗಿದ್ದ ಮೋಂಬತ್ತಿಗಳ ದೀಪಗಳ ಬೆಳಕಿನಲ್ಲಿ ಹಿರಿಯರು ಭೋಜನ ಮಾಡಿದರು. ಪತಂಗಗಳು ಎಲ್ಲ ಕಡೆಗಳಿಂದಲೂ ಹಾರಿಬಂದು ದೀಪದ ಮೇಲೆರಗಿ ಸೀದು ಮೇಜಿಗೆ ಹೊದಿಸಿದ್ದ ಬಟ್ಟೆಯ ಮೇಲೆ ಬಿದ್ದುವು.

ಬಂಗಾಳ ದೀಪಗಳಿಂದ ಭಸ್ಸೆಂದು ಶಬ್ದಮಾಡುತ್ತ ನಾಲ್ಕು ಆಕಾಶಬಾಣಗಳು ಹೊರಟು ನಿಧಾನವಾಗಿ ಗಗನವನ್ನಡರಿದುವು.

ಅಲ್ಲಿ ಚಂದ್ರನೂ ಕೂಡ ಹೊಳೆಯುತ್ತಿದ್ದ. ಪೇತ್ಯ ಮತ್ತು ಜೋಯ ತೋಟದ ಒಂದು ಕೊನೆಯನ್ನು ಸೇರಿದಾಗ ಮಾತ್ರ ಈ ವಿಷಯ ಅವರಿಗೆ ತಿಳಿಯಿತು. ತಿಂಗಳು ಬೆಳಕು ಮರದ ಎಲೆಗಳ ಮೂಲಕ ಹಾದು ಬಂದು ಎಷ್ಟರಮಟ್ಟಿಗೆ ಮಾಯೆಯನ್ನು ಬೀರಿತೆಂದರೆ ಈ ಹುಡುಗಿಯ ಕಣ್ಣ ಬಿಳುಪು ತೆಳುನೀಲಿಯಾಗಿ ರಂಜಿಸಿತು. ಮುದಿ ಸಿಹಿಬಾದಾಮಿ ಮರದ ನೆಳಲಿನಲ್ಲಿ ಆಟದ ದೋಣಿ ತೇಲುತ್ತಿದ್ದ ಪೀಪಾಯಿಯ ಕಪ್ಪು ಛಾಯೆಯ ನೀರಿನಲ್ಲಿಯೂ ಅದೇ ನೀಲಿ ನರ್ತಿಸುತ್ತಿತ್ತು.

ಇಂಥ ಸ್ಥಳದಲ್ಲಿ ತಮಗೆ ತಿಳಿಯದಂತೆ ಆ ಹುಡುಗನೂ ಆ ಹುಡುಗಿಯೂ ಪರಸ್ಪರ ಮುತ್ತಿಟ್ಟರು. ಬಳಿಕ ಅವರು ತಮ್ಮ ಮನಸ್ಸಿನಲ್ಲುದಿಸಿದ ಸಂಕೋಚವನ್ನು ಮರೆಸಲು ಆವೇಶಪೂರಿತರಾಗಿ ಗಟ್ಟಿಯಾಗಿ ಕೂಗುತ್ತ ಓಡಿದರು. ಹೊಲಮನೆಯ ಹಿತ್ತಿಲುಭಾಗಕ್ಕೆ ಬಂದಾಗಲೇ ಅವರು ನಿಂತದ್ದು, ಅಲ್ಲಿ ಯಜಮಾನಿತಿಗೆ ಶುಭಾಶಯವನ್ನು ಕೋರಲು ಬಂದಿದ್ದ ಹೊಲದ ಕೂಲಿಗಾರರು ತಮ್ಮದೇ ಆದ ಸಂತೋಷಕೂಟದಲ್ಲಿ ಮಗ್ನರಾಗಿದ್ದರು.

ಆಳುಮಕ್ಕಳ ಅಡಿಗೆಯ ಮನೆಯಿಂದ ತಂದ ಮರದ ಮೇಜಿನ ಮೇಲೆ ಬೀರ್ ತುಂಬಿದ್ದ ಒಂದು ಸಣ್ಣ ಪೀಪಾಯಿಯೂ, ವೋಡ್ಕ ಎಂಬ ಉತ್ತಮ ಮದ್ಯದಿಂದ ತುಂಬಿದ್ದ ಎರಡು ಹೂಜಿಗಳೂ, ಒಂದು ಬೋಗುಣಿಯಲ್ಲಿ ಕರಿಮಿನೂ ಮತ್ತು ಗೋಧಿಯ ಬ್ರೆಡ್ಡಿನ ಚೂರುಗಳೂ ಇದ್ದುವು. ನೆರಿಗಳನ್ನಿಟ್ಟು ಹೊಲಿದಿದ್ದ ಚೀಟಿಬಟ್ಟೆಯ ಹೊಸ ರವಿಕೆಯನ್ನು ತೊಟ್ಟುಕೊಂಡಿದ್ದ ಅಡಿಗೆಯವಳು ಆ ಸಂತೋಷ ಸಮಾರಂಭದಲ್ಲಿ ಮಗ್ನರಾಗಿದ್ದವರಿಗೆ ಬಿರುಸಿನಿಂದ ಮೀನಿನ ತುಂಡುಗಳನ್ನು ಬಡಿಸುತ್ತ ಅವರ ಪಾನಪಾತ್ರೆಗಳಿಗೆ ಮದ್ಯವನ್ನು ಸುರಿಯುತ್ತಿದ್ದಳು. ಸಂಗೀತಗೋಷ್ಠಿಯ ವಾದಕನೊಬ್ಬನು ಗುಂಡಿಬಿಚ್ಚಿದ ಅಂಗಿಯನ್ನು ಧರಿಸಿಕೊಂಡು ಮೊಣಕಾಲುಗಳನ್ನಗಲಿಸಿಕೊಂಡು ಒಂದು ಕಾಲುಮಣೆಯಯ ಮೇಲೆ ಕುಳಿತಿದ್ದ. ಅವನು ತಾನು ಊದ್ಯ

ತ್ತಿದ್ದ ಉಸುರಿನವಾದ್ಯದ ಮಂದ್ರಸ್ವರದ ಗುಂಡಿಗಳ ಮೇಲೆ ಬೆರಳುಗಳನ್ನಾಡಿಸುತ್ತ ಆ ಕಡೆಯಿಂದ ಈ ಕಡೆಗೆ ಓಲಾಡುತ್ತಿದ್ದ.

ಸೆಟೆದುಕೊಂಡು ನೆಟ್ಟಗೆ ನಿಂತಿದ್ದ ಸರಳಮುಖಮುದ್ರೆಯ ಜನರಿಬ್ಬರು ತಮ್ಮ ಕೈಗಳಿಂದ ನಡುವನ್ನು ಬಳಸಿ ಹಿಡಿದುಕೊಂಡು ಹಿಮ್ಮಡಿಗಳನ್ನು ಠೀವಿಯಿಂದ ಎತ್ತಿ ಎತ್ತಿ ಇಡುತ್ತ ಪೋಲ್ಕನೃತ್ಯದಲ್ಲಿ ಮಗ್ನರಾಗಿದ್ದರು. ಹಲವು ಜನ ಸ್ತ್ರೀಯರು ಹೊಚ್ಚ ಹೊಸದಾದ ಕರವಸ್ತ್ರಗಳಿಂದ ಅಲಂಕರಿಸಿಕೊಂಡು ಆಡಿನ ತೊಗಲಿನಿಂದ ಮಾಡಿದ ನರ್ತನದ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಒಬ್ಬ ತೋಳುಗಳನ್ನೊಬ್ಬರು ಹಿಡಿದುಕೊಂಡು ನಿಂತಿದ್ದರು. ಅವರು ತಮ್ಮ ಬೆಡಗನ್ನು ಹೆಚ್ಚಿಸಿಕೊಳ್ಳುವುದಕ್ಕೂ ಚರ್ಮವನ್ನು ಮೃದು ಮಾಡಿಕೊಳ್ಳುವುದಕ್ಕೂ ಟೊಮಾಟೊ ಹಣ್ಣಿನ ರಸವನ್ನು ಕೆನ್ನೆಗೆ ಬಳಿದುಕೊಂಡಿದ್ದರು.

ರುಡಾಲ್ಫ್ ಕಾರ್ಲೋವಿಚ್ ಮತ್ತು ಲೂಯಿಸ ಫ್ರಾಂತ್ಸೇವ್ನ ಇಬ್ಬರೂ ಒಬ್ಬ ಕೂಲಿಗಾರನ ಹತ್ತಿರದಿಂದ ಹಿಂದು ಹಿಂದಕ್ಕೆ ಸರಿಯುತ್ತಿದ್ದರು.

ಆ ಕೂಲಿಗಾರನು ಕಂಠಪೂರ್ತಿ ಕುಡಿದಿದ್ದ. ಹಲವು ಜನರು ಅವನನ್ನು ಹಿಂದಕ್ಕೆ ಎಳೆದ ಹಿಡಿದು ನಿಲ್ಲಿಸಿಕೊಂಡಿದ್ದರು. ಅವನು ಬಿಡಿಸಿಕೊಳ್ಳುವುದಕ್ಕೆ ಶ್ರಮಪಡುತ್ತಿದ್ದ. ಮಧ್ಯದಲ್ಲಿ ಗೀಳಿಹೋಗಿದ್ದ ಅವನ ಷರಟಿನ ಮೇಲಕ್ಕೆ ಮೂಗಿನಿಂದ ರಕ್ತ ಚಿಮ್ಮಿ ಹರಿಯುತ್ತಿತ್ತು. ಅವನು ಉಗ್ರವಾಗಿ ಆಣೆಯಿಟ್ಟುಕೊಳ್ಳುತ್ತಿದ್ದ; ಹಲ್ಲು ಕಡಿಯುತ್ತಿದ್ದ. ಅವನ ಕೊರಳಸೆರೆ ಬಿಗಿದುಕೊಂಡಿತ್ತು. ತಡೆತಡೆದು ಹುಚ್ಚು ಹುಚ್ಚು ಮಾತುಗಳನ್ನಾಡುತ್ತ ಕಿರಿಚಿಕೊಳ್ಳುತ್ತಿದ್ದ: "ಎರಡು ತಿಂಗಳು ಕತ್ತೆ ಹಾಗೆ ದುಡಿಸಿಕೊಂಡು ಮೂರು ರೂಬಲ್ ಐವತ್ತು ಕೊಪೆಕ್‌ಕೊಡೋಕೆ ಬರ್ತಾನೆ. ಜಿಪುಣ! ಲೇ ಕತ್ತೇಮಗನೆ, ನನ್ನ ಕೈಗೆ ಸಿಕ್ಕು, ಕತ್ತು-ಕತ್ತು ಹಿಸುಕಿ ಹಾಕಿಬಿಡ್ತೀನಿ! ಬೆಂಕಿ ಕಡ್ಡಿ ಕೊಡ್ರೋ ಇಲ್ಲಿ, ಅವನ ಮನೆ ಮಠಕ್ಕೆಲ್ಲ ಹುಟ್ಟಿದ ಹಬ್ಬ ಮಾಡ್ದೆ ಇದ್ರೆ ಆಯ್ತಲ್ಲ! ಗ್ರಿಷ್ಕ ಕಾತೋವ್‌ಸ್ಕಿ ಇಲ್ಲಿರಬೇಕಾಗಿತ್ತು! ಏ ಹೆಗ್ಗಣ, ಬಾರೋ ಇಲ್ಲಿ, ಗಂಡಸ್ತನ ತೋರಿಸೋ." ತೊಳಸುತ್ತಿರುವ ಅವನ ಕೆಂಡಗಣ್ಣುಗಳಲ್ಲಿ ಬೆಳುದಿಂಗಳು ಮಿನುಗಿತು.

"ಲೋ ಗಾವ್ರಿಲ! ಹಲ್ಲು ಹಿಡಿದು ಮಾತಾಡು. ಹೆಚ್ಚಿಗೆ ಹರಟಿದರೆ ಫಾಸಿ ಆಗುತ್ತೆ, ಗೊತ್ತೋ?" ಎಂದು ಯಜಮಾನ ಮೆತ್ತನೆದನಿಯಲ್ಲಿ ಹೇಳುತ್ತ ಹಿಂದು ಹಿಂದಕ್ಕೆ ಸರಿಯುತ್ತಿದ್ದ.

"ಬಾರೋ, ಹಗ್ಗ ತಗೊಂಡು ಬಾ. ಫಾಸಿಯಂತೆ ಫಾಸಿ. ಯಾಕೆ ಅಲ್ಲೇ ನಿಂತುಬಿಟ್ಟೇ? ಹೂ ಬಾ. ಮುಂದಕ್ಕೆ ಹೆಜ್ಜೆ ಹಾಕು. ಏ ಜಿಗಣೆ, ರಕ್ತ ಹೀರೂವಂತೆ ಬಾ. ಥೂ." ಏದುತ್ತ ಕೂಲಿಗಾರ ಅರಚಿದ.

ಸೊಗಸಾದ ಸಂತೋಷ ಸಮಾರಂಭದ ಉಲ್ಲಾಸಕ್ಕೆ ಬದಲಾಗಿ ಭಯಂಕರವಾದ ದಿಗ್ಭ್ರಮೆಗೊಳಿಸುವ ಸನ್ನಿವೇಶವನ್ನು ನೋಡಿದ ಆ ಇಬ್ಬರು ಮಕ್ಕಳೂ ಗಾವ್ರಿಲನು ರುಡಾಲ್ಫ್ ಕಾರ್ಲೋವಿಚ್‌ನ ಕತ್ತು ಕತ್ತರಿಸುವನೆಂದೂ ಮನೆ ಮಠಕ್ಕೆಲ್ಲ ಬೆಂಕಿ ಹಾಕುವನೆಂದೂ ಕಿರಿಚಿಕೊಂಡು ಹಿಂದಕ್ಕೆ ಓಡಿದರು.

ಆಗಿನ ಗಾಬರಿಯನ್ನು ಊಹಿಸುವುದಸದಳವಾಗಿತ್ತು.

ತಂದೆತಾಯಿಗಳು ಮಕ್ಕಳುಗಳನ್ನು ಕೊಠಡಿಯೊಳಕ್ಕೆ ಕರೆದುಕೊಂಡು ಓಡಿದರು. ಮನೆಯ ಬಾಗಿಲುಗಳಿಗೆಲ್ಲ ಬೀಗಹಾಕಿದರು. ಬಿರುಗಾಳಿ ಜೋರಾಗಿ ಬೀಸತೊಡಗಿದಾಗ ಮಾಡುವಂತೆ

ಸರಸರನೆ ಕಿಟಕಿಗಳನ್ನು ಮುಚ್ಚಿದರು. ತನ್ನ ಸಂಸಾರದೊಡನೆ ಅಲ್ಲಿ ಕೆಲವು ದಿನಗಳನ್ನು ಕಳೆಯಲು ಬಂದಿದ್ದ ಗ್ರಾಮಾಧಿಕಾರಿ ಚುವ್ಯಕೋವನು ಕಬ್ಬಿಣದ ಕಮಾನನ್ನು ಒದೆಯುತ್ತ ಚೆಂಡುಗಳನ್ನು ಚೆಲ್ಲಾಪಿಲ್ಲಿಯಾಗಿ ಬಿಸಾಡಿ ಮರದ ದಾಂಡನ್ನು ಒಗೆದು ಕ್ರೋಕೇ ಚೆಂಡಾಟದ ಮೈದಾನವನ್ನು ದಾಟಿಕೊಂಡು ಹೋದನು.

ಅವನು ಜೋಡಿನಳಿಗೆಯ ಬಂದೂಕನ್ನು ಸಿದ್ಧಪಡಿಸಿಟ್ಟುಕೊಂಡಿದ್ದನು.

ಗಾಬರಿ ಪಡದೆ ಪ್ರಶಾಂತರಾಗಿರಬೇಕೆಂದು ರುಡಾಲ್ಫ್ ಕಾರ್ಲೋವಿಚ್ ಬೇಸಿಗೆ ರಜದ ನಿವಾಸಿಗಳನ್ನು ಕೇಳಿಕೊಂಡುದೆಲ್ಲ ವ್ಯರ್ಥವಾಯಿತು. ಅಪಾಯವೇನೂ ಇಲ್ಲವೆಂದೂ ಗಾವ್ರಿಲನನ್ನು ಕೈಕಾಲುಕಟ್ಟಿ ನೆಲಮಾಳಿಗೆಯಲ್ಲಿ ಕೂಡಿಡಲಾಗಿದೆಯೆಂದೂ ಮಾರನೆಯ ದಿನ ಪೋಲೀಸಿನವರು ಬಂದು ಅವನನ್ನು ಹಿಡಿದುಕೊಂಡು ಹೋಗುವರೆಂದೂ ಎಷ್ಟು ಭರವಸೆ ಕೊಟ್ಟರೂ ಎಲ್ಲ ನಿಷ್ಪ್ರಯೋಜನವಾಯಿತು.

ಅಂದು ರಾತ್ರಿ ಸ್ಟೆಪ್ಪಿ ಮೈದಾನದಲ್ಲಿ ಆಕಾಶದಲ್ಲಿ ಒಂದು ಕಡೆ ಕೆಂಪು ಉರಿ ನಿಗಿನಿಗಿ ಎಂದು ಬೆಳಗುತ್ತಿದ್ದುದು ಕಂಡುಬಂದಿತು. ನೆರೆಯ ಹೊಲಮನೆಯೊಂದು ಸುಟ್ಟುಹೋಯಿತೆಂದು ಮಾರನೆಯದಿನ ವದಂತಿ ಹರಡಿತು. ಕೂಲಿಗಾರರೇ ಬೆಂಕಿಹಾಕಿದರೆಂಬ ವರ್ತಮಾನವೂ ಅದರ ಜತೆಯಲ್ಲೇ ಹೊರಟಿತು.

ಒಡೆಸ್ಸನಗರದಿಂದ ಬಂದಜನ ಆ ಪಟ್ಟಣದಲ್ಲಿ ಗಲಭೆ ನಡೆಯಿತೆಂದು ತಿಳಿಸಿದರು. ರೇವಿನ ಮಹಾದ್ವಾರದ ಬಳಿಯಿದ್ದ ಮರದ ಸೇತುವೆ ಹತ್ತಿಕೊಂಡು ಉರಿಯುತ್ತಿದೆಯೆಂದು ಗಾಳಿ ಸಮಾಚಾರ ಹೊರಟಿತು.

ಪೋಲೀಸಿನವನು ಮಾರನೆಯ ಬೆಳಗ್ಗೆ ಹೊತ್ತು ಹುಟ್ಟುವುದಕ್ಕೆ ಮೊದಲೇ ಬಂದು ಗಾವ್ರಿಲನನ್ನು ಹಿಡಿದುಕೊಂಡು ಹೋದ. ಪೋಲೀಸಿನವನ ಮೂರು ಕುದುರೆ ಸಾರೋಟಿನ ಗಂಟೆಗಳ ಶಬ್ದವನ್ನು ಪೇತ್ಯ ತನ್ನ ನಿದ್ದೆಯಲ್ಲೂ ಕೇಳಿದನಂತೆ.

ಬೇಸಗೆ ರಜದಲ್ಲಿ ತಂಗಲು ಅಲ್ಲಿಗೆ ಬಂದಿದ್ದವರೆಲ್ಲ ಬೇಸಿಗೆ ಮುಗಿಯುವುದಕ್ಕೆ ಮೊದಲೇ ತಮ್ಮ ತಮ್ಮ ಊರುಗಳಿಗೆ ಹೊರಟು ನಿಂತರು. ಅತ್ಯಲ್ಪಕಾಲದಲ್ಲೇ ಆ ಹೊಲಮನೆ ಪಾಳು ಬಿದ್ದಂತೆ ಬಿಕೋ ಎನ್ನಿಸಿತು.

ಪೇತ್ಯ ಮುದಿ ಸಿಹಿಬಾದಾಮಿ ಮರದಡಿಯಲ್ಲಿದ್ದ ತನ್ನ ಪ್ರೀತಿಯ ನೀರಿನ ತೊಟ್ಟಿಯ ಪಕ್ಕದಲ್ಲಿ ಸಾವಕಾಶವಾಗಿ ಹೆಜ್ಜೆಹಾಕುತ್ತ ಸಂಚರಿಸುತ್ತಿದ್ದ. ಆ ನೀರನ್ನು ಒಂದು ಸಣ್ಣ ಕೊಂಬೆಯಿಂದ ಹೊಡೆದ. ಇಲ್ಲ, ಆ ನೀರಿನ ತೊಟ್ಟಿ ಹಿಂದಿನ ತೊಟ್ಟಿಯಾಗಿರಲಿಲ್ಲ, ಆ ನೀರೂ ಹಿಂದಿನದಾಗಿರಲಿಲ್ಲ, ಮತ್ತು ಆ ಏಪ್ರಿಕಾಟ್ ಮರವೂ ಕೂಡ ಅದೇ ಆಗಿರಲಿಲ್ಲ. ಖಂಡಿತವಾಗಿಯೂ ಪ್ರತಿಯೊಂದೂ ವ್ಯತ್ಯಾಸವಾಗಿತ್ತು. ಪ್ರತಿಯೊಂದರ ಮೋಡಿಯೂ ಕಳಚಿಬಿದ್ದಿತ್ತು. ಪ್ರತಿಯೊಂದೂ ಅತಿ ದೂರದ ಗತಕಾಲದಿಂದ ಪೇತ್ಯನನ್ನು ನೋಡುತ್ತಿದ್ದುವು.

ತನ್ನ ಈ ಕೊನೆಯ ಸಂದರ್ಶನಕಾಲದಲ್ಲಿ ಕಡಲೂ ಕೂಡ ನಿರ್ದಯವೂ ವಿಶ್ವಾಸಹೀನವೂ ಆಗಿರುತ್ತದೋ?

ಪರೀಕ್ಷಿಸಿನೋಡೋಣವೆಂದು ಪೇತ್ಯ ಸಮುದ್ರದಡದ ದಿಣ್ಣೆಯ ಕಡೆಗೆ ಓಡಿದ.

೨. ಕಡಲು

ಕ್ಷಿತಿಜದಲ್ಲಿ ಮೇಲೇರಲಾರಂಭಿಸಿದ್ದ ಸೂರ್ಯನ ಕಿರಣಗಳು ಪೇತ್ಯನ ಕಣ್ಣುಗಳ ಮೇಲೆ ಬಿದ್ದು ಕಣ್ಣು ಮಂಜಾಗುವಂತೆ ಮಾಡಿದುವು. ತಳಗಡೆ ಸಮುದ್ರವು ಮೆಗ್ನೀಷಿಯಂ ಲೋಹ ಉರಿದಂತೆ ನಿಗಿನಿಗಿ ಜ್ವಲಿಸುತ್ತಿತ್ತು. ಈಗ ಇದ್ದಕ್ಕಿದ್ದಂತೆ ಸ್ಟೆಪ್ಪಿ ಮೈದಾನವು ಅಗೋಚರ ವಾದಂತಾಯಿತು.

ಬೆಳ್ಳಿಯಂತೆ ಹೊಳೆಯುತ್ತಿದ್ದ ಕಾಡುಜಾತಿಯ ಆಲಿವ್ ಪೊದೆಗಳು ದಿಣ್ಣೆಯ ಅಂಚಿನಲ್ಲಿ ಮಂದಮಾರುತದ ದೆಸೆಯಿಂದ ಕಂಪಿಸುತ್ತಿದ್ದುವು.

ಒಂದು ಕಡಿದಾದ ಕಾಲುದಾರಿಯು ದಿಣ್ಣೆಯ ಮೇಲಿನಿಂದ ಸಮುದ್ರದ ಕಡೆಗೆ ನುಲಿದು ಕೊಂಡು ಹೋಗಿತ್ತು. ಆ ಕಾಲು ಹಾದಿಯುದ್ದಕ್ಕೂ ಬರಿಗಾಲಿನಲ್ಲಿ ಓಡುವುದು ಪೇತ್ಯನಿಗೆ ಬಳಕೆಯಾಗಿತ್ತು. ಆದರೆ ಇಂದು ಪಾದರಕ್ಷೆಗಳು ಅವನಿಗೆ ತೊಂದರೆ ಕೊಡುತ್ತಿದ್ದವು. ಅಟ್ಟೆ ಜಾರುತ್ತಿತ್ತು. ಅವನ ಕಾಲುಗಳು ಸ್ವಾಧೀನ ತಪ್ಪಿ ಜಾರಿಕೊಂಡು ಹೋಗಲಾರಂಭಿಸಿದುವು. ಅದನ್ನು ತಡೆಯುವುದು ಅವನಿಗೇ ಅಸಾಧ್ಯವಾಗಿತ್ತು. ಮೊದಲನೆಯ ತಿರುವು ಬರುವವರೆಗೂ ಆಯತಪ್ಪಿ ಬೀಳುವುದನ್ನು ಹೇಗೋ ತಪ್ಪಿಸಿಕೊಂಡ. ತನ್ನ ಮಂಡಿಗಳನ್ನು ನೆಲಕ್ಕೆ ಕೊಟ್ಟು ದಾರಿಯ ಮೇಲುಗಡೆ ನೇತಾಡುತ್ತಿದ್ದ ಮರದ ಬೇರುಗಳನ್ನು ಬಿಗಿಯಾಗಿ ಹಿಡಿದುಕೊಂಡ್ಡ್ರೆ ಆ ಬೇರುಗಳು ಒಣಗಿ ಪೊಳ್ಳಾಗಿದ್ದರಿಂದ ಕೈಗೆ ಕಿತ್ತು ಬಂದವು. ಕಾಲ ಕೆಳಗಿನ ಮಣ್ಣು ಕುಸಿ ಯಿತು. ಕೋಕೋ ಬಣ್ಣದ ನಯವಾದ ಧೂಳಿನ ಮೋಡ ಎದ್ದು ಅವನನ್ನು ಆವರಿಸಿತು. ಧೂಳು ಮೂಗಿನೊಳಕ್ಕೆ ತುಂಬಿಕೊಂಡು ಗಂಟಲಿಗೆ ಅಡರಿಕೊಂಡಿತು. ಪೇತ್ಯನಿಗೆ ಸಾಕು ಬೇಕಾಯಿತು. ಆದರೆ ಇಂಥ ತೊಂದರೆಗೀಡಾಗುವುದು ಅವನಿಗೆ ಹಿತವೇ ಆಗಿತ್ತು.

ಉಸಿರುಕಟ್ಟಿ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಕಿರಿಚಿಕೊಂಡ ; ತೋಳುಗಳನ್ನು ಬೀಸುತ್ತ ಕಣ್ಣು ಮುಚ್ಚಿಕೊಂಡು ನುಗ್ಗಿದ.

ಅವನ ಟೋಪಿಯೊಳಕ್ಕೆ ಗಾಳಿ ತುಂಬಿಕೊಂಡ ಕಾರಣದಿಂದ ಅದು ಬೆನ್ನ ಹಿಂದುಗಡೆ ಮೇಲಕ್ಕೂ ಕೆಳಕ್ಕೂ ಹಾರಾಡಲಾರಂಭಿಸಿತು. ಅವನ ಕುತ್ತಿಗೆ ಪಟ್ಟಿ ಗಾಳಿಯಲ್ಲಿ ಪಟಪಟನೆ ಹೊಡೆದುಕೊಳ್ಳುತ್ತಿತ್ತು. ಮುಳ್ಳುಗಳು ಅವನ ಕಾಲು ಚೀಲಗಳಿಗೆ ಅಂಟಿಕೊಂಡುವು. ದಿಣ್ಣೆ ಯಿಂದ ಸಮುದ್ರದ ತೀರಕ್ಕೆ ಇಳಿಜಾರು ಮೆಟ್ಟಿಲು ಮೆಟ್ಟಿಲಾಗಿತ್ತು. ಆ ಸ್ವಾಭಾವಿಕವಾದ ದೊಡ್ಡ ಸೋಪಾನಗಳಲ್ಲಿ ಒಂದರಿಂದ ಒಂದಕ್ಕೆ ಕುಪ್ಪಳಿಸುತ್ತ ಸಮುದ್ರ ತೀರದ ಮರಳಿನ ಮೇಲಕ್ಕೆ ಹೋಗಿಬಿದ್ದ. ಮರಳು ತಣ್ಣಗಿತ್ತು, ಬಿಸಿಲಿನಿಂದ ಕಾದಿರಲಿಲ್ಲ, ಮರಳು ಬೆರಗು ಗೊಳಿಸುವಷ್ಟು ಶುಭ್ರವಾಗಿಯೂ ನಯವಾಗಿಯೂ ಇದ್ದಿತು. ಅವ್ವಲ್ ಪೇಣಿ ರವೆಯನ್ನು ನೋಡಿದಮೇಲೆ ಅದನ್ನು ನೋಡಬೇಕಾಗಿರಲಿಲ್ಲ. ಹಿಂದಿನ ದಿನದ ಹೆಜ್ಜೆಯ ಗುರುತುಗಳು ಮರಳಿನಲ್ಲಿ ಮೂಡಿ ಅಲ್ಲಲ್ಲಿ ಸಣ್ಣ ಸಣ್ಣ ಹಳ್ಳಗಳಾಗಿದ್ದುವು. ಸೂಕ್ಷ್ಮದೃಷ್ಟಿಗೆ ಮಾತ್ರ ಗೋಚರ ವಾಗುವಷ್ಟು ಮರಳಿನ ದಡವು ನೀರಿನ ಕಡೆಗೆ ಇಳಿಜಾರಾಗಿತ್ತು. ನಾಲಗೆಯಿಂದ ದಡವನ್ನು ನೆಕ್ಕಲು ನೀಡಿದೆಯೋ ಎಂಬಂತೆ ನೀರಿನ ಬಳಿಯ ಮರಳಿನ ಮೇಲೆ ಶುಭ್ರವಾದ ನೊರೆಯು ಪದರ ಪದರವಾಗಿ ನಿಂತಿತ್ತು. ಆ ಮರಳು ತೇವವಾಗಿಯೂ ಕಪ್ಪಗೂ ಮೆತ್ತಗೂ ಇದ್ದಿತು. ಮರಳಿನ

ನೆಲವು ಬಿಗಿಯಾಗಿದ್ದುದರಿಂದ ನಡೆಯಲು ಸರಾಗವಾಗಿತ್ತು.

ಈ ಮರಳಿನ ಸಮುದ್ರತೀರವು ಪ್ರಪಂಚದಲ್ಲೆಲ್ಲ ಅತ್ಯಂತ ಸುಂದರವಾದುದಾಗಿದ್ದಿತು. ಇದು ಕೆರೋಲಿನೋ ಬುಗಾಜ್‌ನಿಂದ ಡ್ಯಾನ್ಯೂಬ್ ನದಿಯ ಮುಖದವರೆಗೂ, ಅಲ್ಲಿಂದ ರುಮೇನಿಯಾ ದೇಶದ ಗಡಿಯವರೆಗೂ ಎತ್ತರವಾದ ದಿಣ್ಣೆಯ ಮಗ್ಗುಲಲ್ಲಿ ಸುಮಾರು ಒಂದು ನೂರು ಮೈಲಿಗಳಷ್ಟು ದೂರ ವ್ಯಾಪಿಸಿತ್ತು. ಬೆಳಗಿನ ಹೊತ್ತಿನಲ್ಲಿ ಆ ಮರಳು ದಂಡೆಯು ನೀರವವೂ ನಿಸರ್ಗರಮಣೀಯವೂ ಆಗಿದ್ದಿತು.

ತಾನು ಏಕಾಂಗಿಯೆಂಬ ಭಾವನೆಯ ಹಿಡಿತಕ್ಕೆ ಪೇತ್ಯ ಸಿಕ್ಕಿಕೊಂಡ. ಆದರೆ ಅದು ಈ ಬಾರಿ ಹಿಂದಿನದಕ್ಕೆಲ್ಲ ಬೇರೆಯಾದುದಾಗಿತ್ತು. ಇದು ಅಭಿಮಾನಪೂರ್ವಕವಾದ ಪೌರುಷದ ಒಂಟಿತನವಾಗಿತ್ತು. ನಿರ್ಜನ ದ್ವೀಪದಲ್ಲಿ ಏಕಾಂಗಿಯಾಗಿ ಬಾಳಿದ ರಾಬಿನ್ಸನ್ ಕ್ರೂಸೋ ನಂತಾಗಿದ್ದ ಪೇತ್ಯ.

ಪೇತ್ಯ ಮೊದಲು ಆ ಹೆಜ್ಜೆಯ ಗುರುತುಗಳನ್ನು ಪರೀಕ್ಷಿಸ ತೊಡಗಿದ. ಸಾಹಸಾನ್ವೇಷಕನ ನುರಿತ ಸೂಕ್ಷ್ಮವಾದ ಕಣ್ಣುಗಳನ್ನು ಅವನು ಹೊಂದಿದ್ದ.

ಹೆಜ್ಜೆಯ ಗುರುತುಗಳು ಅವನನ್ನು ಸುತ್ತುಗಟ್ಟಿದ್ದುವು. ಮಹಾಕೃತಿಯೊಂದನ್ನು ಮನನ ಮಾಡುವಂತೆ ಅವುಗಳನ್ನು ಅಧ್ಯಯನಮಾಡತೊಡಗಿದ.

ದಡದ ದಿಣ್ಣೆಯಮೇಲೆ ಸುಟ್ಟ ಕಪ್ಪು ನೆಲವೂ ಚೆಲ್ಲಿದ ಬೂದಿಯೂ ಕಂಡುಬಂದರೆ ದೇಶೀಯ ಕಾಡುಜನರು ತೋಡುದೋಣಿಗಳಲ್ಲಿ ಬಂದು ಅಲ್ಲಿ ಇಳಿದಿದ್ದರೆಂದೂ, ಅವರು ಬೆಂಕಿ ಮಾಡಿ ಅಡಿಗೆ ಊಟಮಾಡಿಕೊಂಡು ಹೋಗಿದ್ದರೆಂದೂ ಅದರ ಅರ್ಥವಾಗಿದ್ದಿತು. ಕಡಲ ಬಿಳಿ ಹಕ್ಕಿಗಳ ಗುರುತುಗಳು ಮರಳಿನಮೇಲೆ ಬೀಸಣಿಗೆಯ ಆಕಾರದಲ್ಲಿ ಮೂಡಿದ್ದರೆ ಸಮುದ್ರದಲ್ಲಿ ಶ್ಮಶಾನ ಮೌನ ಆವರಿಸಿರುವುದೆಂದೂ, ದಡದ ಬಳಿಯಲ್ಲಿ ರಾಶಿರಾಶಿ ಮೀನುಗಳಿರುವುವೆಂದೂ ಅರ್ಥವಾಗುವುದು.

ಫ್ರೆಂಚ್‌ದೇಶದ ಗುರುತಿನ ಉದ್ದದ ಬಿರಡೆಯೂ, ಬಿಳಿಚಿಕೊಂಡ ನಿಂಬೆಹಣ್ಣಿನಸಿಪ್ಪೆಯೂ ನೀರಿನಲ್ಲಿ ತೇಲಿಕೊಂಡು ಬಂದು ದಡದ ಮರಳಿನಮೇಲೆ ಬಿದ್ದಿದ್ದರೆ ಕೆಲವುದಿನಗಳ ಹಿಂದೆ ಸಮುದ್ರದಮೇಲೆ ದೂರದಲ್ಲಿ ಒಂದು ವಿದೇಶಿ ಹಡಗು ಹಾದುಹೋಗಿದ್ದಿತೆಂದು ನಿಸ್ಸಂದೇಹವಾಗಿ ತಿಳಿಯಬಹುದಾಗಿದ್ದಿತು.

ಇಷ್ಟುಹೊತ್ತಿಗೆ ಸೂರ್ಯನು ಕ್ಷಿತಿಜದಿಂದ ಇನ್ನೂ ಕೊಂಚ ಮೇಲಕ್ಕೆ ಏರಿದ್ದನು. ಈಗ ಸಮುದ್ರವು ಎಲ್ಲೆಡೆಗಳಲ್ಲೂ ಹೊಳೆಯುತ್ತಿರಲಿಲ್ಲ. ಕ್ಷಿತಿಜದ ಬಳಿ ದೀರ್ಘವಾದ ಒಂದು ಬೆಳಕಿನ ಪ್ರವಾಹವಿದ್ದಿತು; ಮತ್ತು ದಡದ ಮರಳಿಗೆ ಬಡಿಯುತ್ತಿದ್ದ ಅಲೆಗಳ ಕನ್ನಡಿಯಲ್ಲಿ ಹತ್ತಾರು ನಕ್ಷತ್ರಗಳಂತೆ ಸೂರ್ಯ ಹೊಳೆಯುತ್ತಿದ್ದ. ಹೀಗೆ ಈ ಎರಡು ನಿದರ್ಶನಗಳ ಮೂಲಕ ಸೂರ್ಯನು ಬೆಳಗುತ್ತಿರುವನೆಂಬುದನ್ನು ತಿಳಿಯಬಹುದಾಗಿದ್ದಿತು.

ಅನಂತವಾಗಿ ಅಪಾರವಾಗಿ ಹರಡಿದ್ದ ಕಡಲಿನ ಉಳಿದೆಲ್ಲೆಡೆಯಲ್ಲೂ ಗಂಭೀರವಾದ ಮೌನ ಆವರಿಸಿದ್ದಿತು. ಸಾಗರದ ಈ ಮೌನದಲ್ಲಿ ನೀಲಿಯ ಛಾಯೆಯು ಅಷ್ಟೊಂದು ಕೋಮಲವಾಗಿಯೂ ದುಃಖಪೂರ್ಣವಾಗಿಯೂ ಮಿನುಗುತ್ತಿದ್ದುದನ್ನು ನೋಡಿದಾಗ ಪೇತ್ಯನಿಗೆ ತಾನೇ ತಾನಾಗಿ ಈ ಕೆಳಗಿನ ಕವನದ ಸಾಲುಗಳು ನೆನಪಿಗೆ ಬಂದುವು:

ಬಿಳಿಹಾಯಿ ಮಿನುಗುತಿದೆ ದೂರದಲೊಂಟಿಯಾಗಿ
ನೀಲಿಮಂಜಿನೊಳಗಿಂ ನೊರೆತೆರೆಯಮೇಲಾಡಿ....

ಆದರೆ ಕವನದಲ್ಲಿ ವರ್ಣಿಸಿರುವಂತೆ ಯಾವ ಹಡಗಿನ ಬಿಳಿಹಾಯಿಯೂ ಅಲ್ಲಿ ಕಾಣಿಸುತ್ತಿರಲಿಲ್ಲ, ಕಡಲು ಮಂಜಿನಿಂದ ಮುಸುಕಿಯೂ ಇರಲಿಲ್ಲ. ಅಲ್ಲಿಗೂ ಇಲ್ಲಿಗೂ ಇಷ್ಟೇ ವ್ಯತ್ಯಾಸ.

ಪೇತ್ಯ ಮಂತ್ರಮುಗ್ಧನಾದಂತೆ ತದೇಕಚಿತ್ತತೆಯಿಂದ ಕಡಲನ್ನು ನಿಟ್ಟಿಸುತ್ತಿದ್ದ.

ಸಾಗರಾವಲೋಕನದಲ್ಲಿ ಎಷ್ಟುಹೊತ್ತು ಕಳೆದರೂ ಬೇಸರವುಂಟಾಗುವುದಿಲ್ಲ. ಸಾಗರವು ನೋಡುವವರ ಕಣ್ಣೆದುರಿಗೇ ಗಳಿಗೆಗಳಿಗೆಗೂ ಬದಲಾಯಿಸುತ್ತಿರುತ್ತದೆ.

ಪ್ರಶಾಂತ ಸಮಯದಲ್ಲಿ ಸಮುದ್ರ ನಸುನೀಲಿಯಾಗಿ ತೋರುತ್ತದೆ. ಅಲ್ಲೊಂದು ಇಲ್ಲೊಂದು ಕಡೆ ಬಿಳಿಯ ಬೆಳಕಿನ ಗೆರೆ ಹೊಳೆಯುತ್ತಿರುತ್ತದೆ. ಇಲ್ಲದಿದ್ದರೆ ನೀಲಿಗಪ್ಪು ಬಣ್ಣದಿಂದ ಉಜ್ಜಲವಾಗಿ ಬೆಳಗುತ್ತಿರುತ್ತದೆ. ಅದೂ ಇಲ್ಲದಿದ್ದರೆ ಅಲೆಗಳ ಏರಿಳಿತಗಳು ಬಿಳಿಗುದುರೆಗಳು ನರ್ತಿಸುತ್ತಿರುವಂತೆ ಕಾಣಿಸುತ್ತಿರುತ್ತವೆ. ನಿರ್ಮಲವಾದ ಹೊಸಗಾಳಿ ಬೀಸುತ್ತಿದ್ದರೆ ಇದ್ದಕ್ಕಿದ್ದಂತೆ ಸಮುದ್ರ ಅಚ್ಚನೀಲಿಯಾಗಿರುವಂತೆ ತೋರುತ್ತದೆ. ಆಗ ಅದು ಒಂದೇ ಸಮನಾಗಿ ಜುಂಜುಕತ್ತರಿಸಿಬಿಟ್ಟ ಉಣ್ಣೆಯ ಕುಚ್ಚಿನ ಮೇಲೆ ಕೈಯೊಡಿಸಿದಷ್ಟು ನಯವಾಗಿ ನುಣುಪಾಗಿ ಇರುತ್ತದೆ.

ಬಿರುಗಾಳಿ ಆರಂಭವಾದಾಗ ಸಮುದ್ರ ಉಗ್ರವಾಗುತ್ತದೆ. ಗಾಳಿ ಸಮುದ್ರವನ್ನು ಅತಿ ಎತ್ತರಕ್ಕೆ ಹೊಡೆದೆಬ್ಬಿಸುತ್ತದೆ. ಕಡಲ ಬಿಳಿ ಹಕ್ಕಿ ಚೀರುತ್ತ ಸ್ಲೇಟುಕಪ್ಪು ಬಣ್ಣದ ಆಕಾಶವನ್ನು ಸೀಳಿಕೊಂಡು ಹಾರಿ ಹೋಗುತ್ತದೆ. ಅಲೆಗಳು ಒಂದರ ಮೇಲೊಂದು ಉರುಳುತ್ತ ಸತ್ತ ಹಂದಿಮೀನೊಂದರ ಹೊಳೆಯುವ ಶವವನ್ನು ದಡದುದ್ದಕ್ಕೂ ಚಿಮ್ಮಿಸುತ್ತಿರುತ್ತವೆ. ಬಿರುಗಾಳಿಯಿಂದ ಎದ್ದ ಧೂಳಿನ ಮೋಡಗಳ ಮೇಲುಗಡೆ ಆಕಾಶದ ಅಂಚಿನಲ್ಲಿ ಕೋಚುಕೋಚಾದ ಗೋಡೆಯಂತೆ ಕಡುಹಸಿರು ಎದ್ದು ಕಾಣುತ್ತದೆ. ಹಸಿರು ಬಣ್ಣದ ಹೆದ್ದೆರೆಗಳು ಒಂದರ ಹಿಂದೆ ಒಂದರಂತೆ ಏಳುತ್ತ ಫಿರಂಗಿಯ ಮೊರೆತದಂತೆ ಅಬ್ಬರಿಸುತ್ತ ದಡಕ್ಕೆ ಅಪ್ಪಳಿಸುತ್ತವೆ. ಆಗ ನೀರಿನ ತುಂತುರುಗಳು ಎರಚಿ ನಯವಾದ ಮಂಜು ಕವಿದಂತೆ ತೋರುತ್ತದೆ. ದಡದ ಎತ್ತರವಾದ ಬಂಡೆಗಳ ತುದಿಯಿಂದ ತೆಳು ಮಸ್ಲಿನ್ ಪರದೆಯನ್ನು ಇಳಿಬಿಟ್ಟಂತೆ ಅದು ತೋರುತ್ತದೆ. ಅಲೆಗಳ ಅಪ್ಪಳಿಸುವಿಕೆಯಿಂದ ಬಂಡೆಗಳು ಅದಿರುವುದರಿಂದ ಧರೆಯೂ ಅದಿರುತ್ತಿರುವಂತೆ ಭ್ರಾಂತಿಯನ್ನುಂಟು ಮಾಡುತ್ತಿರುತ್ತದೆ.

ಈ ಅಪಾರವಾದ ಸಾಗರದ ಅನಂತ ರಹಸ್ಯದಲ್ಲಿ ಕಡಲಿನ ಆಕರ್ಷಣೆಯ ಗುಟ್ಟು ಅಡಗಿದೆ.

ಬೆಳುದಿಂಗಳು ಇಲ್ಲದ ಜುಲೈ ತಿಂಗಳ ಒಂದಿರುಳಿನಲ್ಲಿ ನಿಮ್ಮ ತೋಳನ್ನು ನಸುಬಿಸುಪಾದ ಕಪ್ಪುನೀಲಿಯ ನೀರಿನಲ್ಲಿ ಅದ್ದುತ್ತೀರಿ ಎನ್ನಿ. ಆಗ ಹಠಾತ್ತನೆ ನೀಲಿಯ ಚುಕ್ಕಿಗಳು ಅದರ ಎಲ್ಲೆಡೆಯೂ ಮಿನುಗುವುದನ್ನು ಕಾಣುತ್ತೀರಿ. ಈ ಮಿಣುಕು ಕಡಲಿನ ನಿಗೂಢರಹಸ್ಯವಲ್ಲದೆ ಮತ್ತೇನು ? ಅಥವಾ ಇದು ಕಣ್ಣಿಗೆ ಕಾಣದ ಹಡಗುಗಳ ಚಲಿಸುತ್ತಿರುವ ಬೆಳಕೋ, ಮಾಯಾದೀಪದ ಮಂದಪ್ರಕಾಶವೋ ? ಮರಳು ಕಣಗಳಲ್ಲಿ ಮಾನವಬುದ್ಧಿಗೆ ನಿಲುಕದ ರಹಸ್ಯಗಳು ಅಸಂಖ್ಯಾತವಾಗಿರಬಹುದಲ್ಲವೇ !

.....ಈಗ ಹೇಳಿ ಸಮುದ್ರದ ಮೇಲೆ ದೂರದಲ್ಲಿ ಕಾಣಿಸಿಕೊಂಡ ಯುದ್ಧನೌಕೆಯ ನೋಟವು

ರಹಸ್ಯದಿಂದ ಕೂಡಿತ್ತೆಂಬುದು ನಿಜವಲ್ಲವೇ ?

ಆ ಯುದ್ಧನೌಕೆ ಸಮುದ್ರದಲ್ಲಿ ಕಾಣಿಸಿಕೊಂಡಿತು. ಅದರ ಹಿಂದೆಯೇ ಒಡೆಸ್ಸರೇವಿನಲ್ಲಿ ಅಗ್ನಿ ತಲೆದೋರಿತು. ಅದರ ಜ್ವಾಲೆಯು ನಲವತ್ತು ಮೈಲಿಗಳ ದೂರದವರೆಗೂ ಕಾಣಿಸುತ್ತಿತ್ತು. ಅಲ್ಲಿಯ ಮರದ ಸೇತುವೆ ಉರಿಯುತ್ತಿದೆ ಎಂಬ ವಾರ್ತೆ ಒಡನೆ ಎಲ್ಲ ಕಡೆಗೂ ಹಬ್ಬಿತು.

ಆ ಬಳಿಕ "**ಪೊತ್ಯೆಮ್ಕಿನ್**" ಎಂಬ ಮಾತು ಎಲ್ಲರ ಬಾಯಲ್ಲೂ ಕೇಳಬಂತು. ಬಂಡಾಯಗಾರರ ಆ ಏಕಮಾತ್ರ ಯುದ್ಧನೌಕೆಯು ಬೆಸ್ಸರೇಬಿಯನ್ ತೀರದ ಕಡೆ ದಿಗಂತದಲ್ಲಿ ಕಾಣಿಸಿಕೊಂಡಿತು ಬಹುದೂರದಲ್ಲಿ ಈ ಹಡಗಿನಿಂದ ಹೊರಟ ಹೊಗೆಯ ಸಾಲನ್ನು ಸ್ವಲ್ಪವಾದರೂ ನೋಡಬೇಕೆಂಬ ಅಪೇಕ್ಷೆಯಿಂದ ಹೊಲದ ಕೆಲಸಗಾರರು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಕಡಲದಡದ ಎತ್ತರವಾದ ಬಂಡೆಯನ್ನು ಏರಿ ನಿಂತುಬಿಡುತ್ತಿದ್ದರು. ಕೆಲವು ಸಲ ಅವರು ತಮಗೆ ಆ ಹೊಗೆ ಕಾಣಿಸಿತು ಎಂದು ಕೊಳ್ಳುತ್ತಿದ್ದರು. ಆಗ ಅವರು ಬಂಡಾಯಗಾರರನ್ನು ಅಭಿನಂದಿಸುವಂತೆ ತಮ್ಮ ಟೋಪಿಗಳನ್ನೂ ಷರಟುಗಳನ್ನೂ ಸೆಳೆದುಕೊಂಡು ಅವುಗಳನ್ನು ಆವೇಶದಿಂದ ಗಾಳಿಯಲ್ಲಿ ಬೀಸುತ್ತಿದ್ದರು.

ನಿಜ ಹೇಳುವುದಾದರೆ ಪೇತ್ಯ ಕಣ್ಣಲ್ಲಿ ಕಣ್ಣಿಟ್ಟುಕೊಂಡು ನೋಡಿದರೂ ಸಹ ಆ ಸಾಗರದ ನೀರವ ವಿಸ್ತಾರದಲ್ಲಿ ಏನನ್ನೂ ಗುರುತಿಸಲಾರದೆ ಹೋದ. ಆದರೆ ಒಂದೇ ಒಂದು ಸಲ ಮಾತ್ರ, ಇನ್ನೊಬ್ಬ ಹುಡುಗನಿಂದ ಕೇವಲ ಒಂದು ನಿಮಿಷ ಕಾಲ ಬೇಡಿಪಡೆದುಕೊಂಡ ಸಣ್ಣ ದೂರದರ್ಶಿಯಮೂಲಕ ನೋಡಿದಾಗ, ಪಟಸ್ತಂಭದಿಂದ ಕೆಂಪು ಬಾವುಟವು ಹಾರಾಡುತ್ತಿದ್ದುದನ್ನೂ ಮೂರು ಕೊಳವೆಗಳಿಂದ ಕೂಡಿದ ನೆರಳಿನಂತೆ ಕಂಡ ತೆಳುಹಸುರಿನ ಹಡಗಿನ ಹೊರ ಆಕಾರವನ್ನೂ ಗುರುತಿಸಿದ.

ಆ ಹಡಗು ರುಮೇನಿಯಾ ದೇಶಕ್ಕೆ ಮುಖಮಾಡಿಕೊಂಡು ಪಶ್ಚಿಮದ ಕಡೆಗೆ ವೇಗದಿಂದ ಹೋಗುತ್ತಿದ್ದಿತು. ಮಾರನೆಯ ದಿನ ಬಾನಂಚಿನ ಉದ್ದಕ್ಕೂ ಹೊಗೆಯ ಮೋಡವು ಕೆಳಮಟ್ಟದಲ್ಲಿ ಹರಡಿತು. "**ಪೊತ್ಯೆಮ್ಕಿನ್**" ಹಡಗನ್ನು ಅಟ್ಟಿಸಿಕೊಂಡು ಹೊರಟ ಕಪ್ಪು ಸಮುದ್ರದ ಇಡೀ ನೌಕಾದಳವೇ ಅದಾಗಿದ್ದಿತು.

"**ಪೊತ್ಯೆಮ್ಕಿನ್**" ಹಡಗು ಕಾನ್ಸ್ಟಾಂಟ್ಸ ನಗರವನ್ನ ತಲಪಿ ಅಲ್ಲಿ ಅದು ರುಮೇನಿಯಾ ಸರ್ಕಾರಕ್ಕೆ ಶರಣಾಗತವಾಗಬೇಕಾಯಿತು ಎಂಬ ವರ್ತಮಾನವನ್ನು ಡ್ಯಾನ್ಯೂಬ್ ನದೀ ಮುಖದಿಂದ ದೊಡ್ಡ ಕಪ್ಪು ದೋಣಿಗಳಲ್ಲಿ ಪ್ರಯಾಣ ಮಾಡಿ ಬಂದ ಬೆಸ್ತರು ತಂದರು. ಆ ಹಡಗಿನ ನಾವಿಕರು ಅಲ್ಲಿಂದ ದಡವನ್ನು ಸೇರಿ ದಿಕ್ಕಾಪಾಲಾಗಿ ಚದುರಿದರು.

ಹಲವಾರು ದಿನಗಳವರೆಗೆ ಏನಪಾಯ ಸಂಭವಿಸೀತೋ ಎಂದು ಜನ ತಲ್ಲಣಿಸುತ್ತಿದ್ದರು. ಹೀಗಿರುವಲ್ಲಿ ಒಂದು ದಿನ ಬೆಳಗ್ಗೆ ಸೂರ್ಯೋದಯದ ಸಮಯದಲ್ಲಿ ಹೊಗೆಯ ಸಾಲು ಪುನಃ ದಿಗಂತವನ್ನು ಮುಚ್ಚಿತು.

ಸ್ವಾಧೀನಪಡಿಸಿಕೊಂಡ ಬಂಡಾಯಗಾರರ ಹಡಗನ್ನು, ಹಗ್ಗ ಕಟ್ಟಿ ದನಗಳನ್ನು ಎಳೆದುಕೊಂಡು ಹೋಗುವಹಾಗೆ, ಸರಪಣಿ ಕಟ್ಟಿ ಕಾನ್ಸ್ಟಾಂಟ್ಸದಿಂದ ಸೆವಾಸ್ತಪೂಲಿಗೆ ಎಳೆದುಕೊಂಡು ಹೋಗುತ್ತಿದ್ದ ಕಪ್ಪುಸಮುದ್ರದ ನೌಕಾದಳ ಅದು ಎಂಬುದನು ಆ ಹೊಗೆಯ

ಸಾಲು ಸೂಚಿಸಿತು.

ಆ ಬಂಡಾಯಗಾರ ಹಡಗನ್ನು ಬಿಟ್ಟು ಅದರ ನಾವಿಕರು ಓಡಿಹೋಗಿದ್ದರು. ಅದರ ಯಂತ್ರಗಳಲ್ಲೆಲ್ಲ ನೀರು ತುಂಬಿಕೊಂಡಿದ್ದಿತು. ಹಡಗಿನ ಮೇಲೆ ಹಾರಾಡುತ್ತಿದ್ದ ಬಂಡಾಯಗಾರರ ಬಾವುಟವನ್ನು ಕೆಳಗಿಳಿಸಲಾಗಿತ್ತು. ಬೆಂಗಾವಲಿಗಾಗಿ ಅದರ ಅಕ್ಕ ಪಕ್ಕಗಳಲ್ಲಿ ಬರುತ್ತಿದ್ದ ಹಡಗುಗಳ ಹೊಗೆ ಅದನ್ನು ಸುತ್ತುಗಟ್ಟಿತ್ತು. ಈ ಸ್ಥಿತಿಯಲ್ಲಿ ಸಮುದ್ರದಲ್ಲಿ ಎಳೆಸಿಕೊಂಡು ಅದು ನಿಧಾನವಾಗಿ ಮುಂದು ಮುಂದಕ್ಕೆ ಹೋಗುತ್ತಿತ್ತು. ಅದು ಬೆಸ್ಸರೇಬಿಯಾದ ದಿಣ್ಣೆಗಳನ್ನು ದಾಟಲು ಬಹುಕಾಲವನ್ನು ತೆಗೆದುಕೊಂಡಿತು. ಹೊಲಗದ್ದೆಗಳ ಕೆಲಸಗಾರರೂ, ಗಡಿಕಾವಲಿನವರೂ, ಬೆಸ್ತರೂ ದಡದಿಂದ ಅದರ ಮಂದಗತಿಯನ್ನು ಮೌನವಾಗಿ ನಿರೀಕ್ಷಿಸುತ್ತಲಿದ್ದರು. ಇಡೀ ನೌಕಾದಳ ಕಣ್ಣಿಗೆ ಕಾಣದಂತಾಗುವವರೆಗೂ ಅವರು ಹಾಗೆಯೇ ನಿಂತು ನೋಡುತ್ತಿದ್ದರು.

ನೀಲಿ ಎಣ್ಣೆಯನ್ನು ಸುರಿದಂತೆ ಆ ಸಮುದ್ರ ಪುನಃ ಶಾಂತವೂ ಸಾಧುವೂ ಆದಂತೆ ಕಾಣಲಾರಂಭಿಸಿತು.

ಇದೇ ಸಮಯಕ್ಕೆ ಸ್ಟೆಪ್ಪಿ ಮೈದಾನದ ರಸ್ತೆಗಳಲ್ಲಿ ಪೋಲೀಸ್ ಸವಾರರು ಕಾಣಿಸಿಕೊಂಡರು. **"ಪೊತ್ಯೆಮ್ಕಿನ್"** ಹಡಗಿನಿಂದ ಓಡಿಹೋದ ಬಂಡಾಯಗಾರ ನಾವಿಕರನ್ನು ಹಿಡಿದುತರಲು ರುಮೇನಿಯಾದ ಗಡಿಗೆ ಅವರನ್ನು ಕಳುಹಿಸಲಾಗಿದ್ದಿತು.

....ಪೇತ್ಯ ಕೊಟ್ಟಕೊನೆಯಸಲ ಒಂದು ಸಣ್ಣ ಈಜು ಹೊಡೆಯಬೇಕೆಂದು ನಿಶ್ಚಯಿಸಿದ. ಅವನು ನೀರಿನೊಳಕ್ಕೆ ಧುಮುಕಿದುದೇ ಒಂದು ಮುಳುಗು ಹಾಕಿ ಮೇಲೆದ್ದ. ಬಳಿಕ ಮಗ್ನನಾಗಿ ಈಜುತ್ತ ತಣ್ಣಗಿದ್ದ ನೀರನ್ನು ಕಂದುಬಣ್ಣದ ನಯವಾದ ತೋಳುಗಳಿಂದ ಸೀಳಿಕೊಂಡು ಹೋಗಲಾರಂಭಿಸಿದನೋ ಇಲ್ಲವೋ ಹೊರಜಗತ್ತಿನ ನೆನಪೇ ಅವನಿಗೆ ಉಳಿಯಲಿಲ್ಲ.

ಮೊದಲು ದಡದ ಬಳಿ ಇದ್ದ ಆಳವಾದ ಸ್ಥಳದಲ್ಲಿ ಈಜುತ್ತ ಹೋಗಿ ಆಚೆಯ ಕಡೆಯಲ್ಲಿದ್ದ ಮರಳು ದಿಣ್ಣೆಯನ್ನು ಮುಟ್ಟಿದ. ಅಲ್ಲಿ ಅವನು ಮೊಣಕಾಲುದ್ದ ನೀರಿನಲ್ಲಿ ಎದ್ದುನಿಂತುಕೊಂಡು ನಡೆಯಲಾರಂಭಿಸಿದ ಮತ್ತು ಆ ತಿಳಿನೀರಿನ ತಳದಲ್ಲಿ ಪದರ ಪದರವಾಗಿ ಕಾಣಿಸುತ್ತಿದ್ದ ಮರಳು ನೆಲವನ್ನು ನೋಡಿದ.

ಮೊದಲ ನೋಟಕ್ಕೆ ನೀರಿನ ತಳದಲ್ಲಿ ಏನೂ ಕಾಣಿಸಲಿಲ್ಲ. ಆದರೆ ಹತ್ತಿರದಿಂದ ದೃಷ್ಟಿಸಿ ನೋಡಿದಾಗ ಅಲ್ಲಿಯೂ ಜೀವಿಗಳಿದ್ದುದು ಕಂಡು ಬಂದಿತು. ನೀರಿನ ಅಡಿಯಲ್ಲಿ ಪದರ ಪದರವಾಗಿ ಕಾಣಿಸುತ್ತಿದ್ದ ಮರಳಿನ ಮೇಲುಗಡೆ ಸನ್ಯಾಸಿ ಏಡಿಗಳು ಚಲಿಸುತ್ತಿದ್ದುವು. ಅವು ಒಂದೊಂದು ಸಲ ಮೇಲಕ್ಕೆ ಕಾಣಿಸಿಕೊಳ್ಳುತ್ತಲೂ, ಒಂದೊಂದು ಸಲ ಬಚ್ಚಿಟ್ಟುಕೊಳ್ಳುತ್ತಲೂ ಇದ್ದುವು. ಪೇತ್ಯ ನೀರಿನ ತಳದಿಂದ ಅವುಗಳಲ್ಲಿ ಒಂದನ್ನು ಎತ್ತಿಕೊಂಡು ಬಹು ಉಪಾಯವಾಗಿ ಚಿಪ್ಪಿನಿಂದ ಅದನ್ನು ಹೊರಕ್ಕೆಳೆದ. ಅದಕ್ಕೆ ಪುಟ್ಟ ಮುಳ್ಳುಗಳು ಇದ್ದ ವಿಷಯ ಕೈಗೆ ಎತ್ತಿಕೊಂಡಾಗ ಸ್ಪಷ್ಟವಾಗಿ ಕಾಣಿಸಿತು. ಹುಡುಗಿಯರು ಆ ಚಿಪ್ಪುಗಳನ್ನು ದಾರದಲ್ಲಿ ಕೋದು ಅದರಿಂದ ಸೊಗಸಾದ ಹಾರವನ್ನು ಮಾಡಿಕೊಳ್ಳುತ್ತಾರೆ. ಆದರೆ ಗಂಡಸರಿಗೇಕೆ ಅದರ ಗೋಜು!

ಬಳಿಕ ಪೇತ್ಯ ಒಂದು ಲೋಳೆಮೀನನ್ನು ಕಂಡು ಅದನ್ನು ಹಿಂಬಾಲಿಸಿದ. ಅದರ ಸ್ಪರ್ಶಾಂಗವು ಗಾಜಿನಂತೆ ಹೊಳೆಯುತ್ತಿತ್ತು. ಅಂಚಿನಲ್ಲಿ ಉದ್ದಕ್ಕೂ ಸ್ಪರ್ಶಾಂಗದ ರೋಮಗಳಿದ್ದುದನ್ನು

ನೋಡಿದಾಗ ದೀಪದ ಮೇಲಿನ ಗಾಜಿನ ಮರೆ ನೆನಪಿಗೆ ಬರುತ್ತಿತ್ತು. ಆ ಲೋಳೆಮೀನು ಮೇಲು ನೋಟಕ್ಕೆ ನಿಶ್ಚಲವಾಗಿ ಜೋತುಬಿದ್ದಿರುವಂತೆ ತೋರುತ್ತಿತ್ತು. ಆದರೆ ಅದು ನಿಜವಲ್ಲ. ಬಟ್ಟಲಿನ ಆಕಾರದ ಅದರ ದೇಹದ ತೆಳ್ಳನೆಯ ನೀಲಿಯ ಹೊಳಪಿನ ಪಕ್ಕವು ಉಸಿರಾಡುವಿಕೆಯಿಂದ ಪ್ಯಾರಾಚೂಟಿನ ಅಂಚಿನಂತೆ ಏರಿ ಇಳಿಯುತ್ತಿತ್ತು. ಅದರ ಸ್ಪರ್ಶಾಂಗವೂ ಕೂಡ ಸ್ಪಂದಿಸುತ್ತಿತ್ತು. ಪೇತ್ಯ ಬರುತ್ತಿದ್ದುದನ್ನು ಕಂಡು ಅಪಾಯದ ಮುನ್ಸೂಚನೆಯನ್ನು ಗ್ರಹಿಸಿದ ಆ ಲೋಳೆಮೀನು ನೀರಿನ ಅಡಿಗೆ ಮಗ್ಗುಲಾಗಿ ಈಜಿಕೊಂಡು ಹೋಯಿತು. ಆದರೆ ಅಷ್ಟರಲ್ಲಿ ಪೇತ್ಯ ಅದನ್ನು ಥಕ್ಕನೆ ಹಿಡಿದ. ತುರುಚಿಮುಳ್ಳಿನಂತೆ ಚುಚ್ಚುವ ಅದರ ವಿಷಪೂರಿತವಾದ ಅಂಚು ತಗುಲದಂತೆ ಎಚ್ಚರಿಕೆಯಿಂದ ಅದರ ಬಟ್ಟಲಿನ ಆಕಾರದ ಅಂಗವನ್ನು ಎರಡು ಕೈಗಳಿಂದಲೂ ಹಿಡಿದುಕೊಂಡು ನೀರಿನಿಂದ ಮೇಲಕ್ಕೆ ಎತ್ತಿಕೊಂಡ. ಆಮೇಲೆ ಅದರ ಭಾರವಾಗಿದ್ದರೂ ಸಡಿಲವಾಗಿದ್ದ ಪೊಳ್ಳು ದೇಹವನ್ನು ದಡಕ್ಕೆ ತೂಗಿ ಎಸೆದ.

ಸ್ಪರ್ಶಾಂಗದ ಕೆಲವು ರೋಮಗಳನ್ನು ದಾರಿಯಲ್ಲಿ ಕೆಡವುತ್ತ ಆ ಲೋಳೆಮೀನು ಎಸೆದ ರಭಸಕ್ಕೆ ಗಾಳಿಯಲ್ಲಿ ಹಾರಿಬಂದು ತೇವವಾದ ಮರಳಿನ ಮೇಲೆ ಧೊಪ್ಪೆಂದು ಬಿದ್ದಿತು. ಕೂಡಲೆ ಅದರ ಲೋಳೆಯಲ್ಲಿ ನೇಸರು ಬೆಳ್ಳಿಯ ನಕ್ಷತ್ರದಂತೆ ಹೊಳೆಯಿತು.

ಕೇಕೆ ಹಾಕುತ್ತ ಪೇತ್ಯ ಮರಳಿನ ದಿಣ್ಣೆಯಮೇಲಿನಿಂದ ಪುನಃ ಆಳವಾದ ನೀರಿಗೆ ಧುಮುಕಿದ. ಅಲ್ಲಿ ನೀರಿನ ಅಡಿಯಲ್ಲಿ ಕಣ್ಣು ತೆರೆದುಕೊಂಡು ಈಜುವ ತನ್ನ ಮನಮೆಚ್ಚಿನ ಕ್ರೀಡೆಯಲ್ಲಿ ತೊಡಗಿದ.

ಏನು ಪರಮಾನಂದ!

ಹುಡುಗನ ಕುತೂಹಲಭರಿತ ನಯನಗಳ ಎದುರಿಗೆ ಜಲಾಂತರ್ಗತ ಮೋಹಕ ಲೋಕ ವಿಸ್ತರಿಸಿತ್ತು. ಬಣ್ಣಬಣ್ಣದ ಕಲ್ಲುಗಳು ಭೂತಕನ್ನಡಿಯಲ್ಲಿ ಕಾಣಿಸುವಂತೆ ತಮ್ಮ ಸಾಮಾನ್ಯ ಆಕಾರಕ್ಕಿಂತ ದಪ್ಪನಾಗಿ ಕಾಣಿಸಿದುವು. ಕಲ್ಲುಗಳನ್ನು ನೆಲಕ್ಕೆ ಹಾಕಿ ಗಟ್ಟಿಮಾಡಿದ ಗಚ್ಚಿನೆಲದ ರಸ್ತೆಯಂತೆ ಸಮುದ್ರದ ತಳವು ತೋರಿತು.

ಬಾಲಶಶಿಯ ಮಂದಪ್ರಕಾಶವೋ ಎನ್ನುವಂತೆ ನೀರಿನೊಳಕ್ಕೆ ಬಂದ ಸೂರ್ಯನ ಎಳೆಯ ಹಸುರು ಕಿರಣಗಳು ಮನೋಹರವಾಗಿದ್ದುವು. ಸಮುದ್ರದಲ್ಲಿ ಬೆಳೆದುನಿಂತಿದ್ದ ಗಿಡಗಳ ಕಾಂಡಗಳು ಎಳೆಹಸುರು ಕಿರಣಗಳ ಬೀಳುವಿಕೆಯಿಂದ ಕಥೆಗಳಲ್ಲಿ ಬರುವ ಮೋಹಕವಾದ ಸುಂದರ ವನವೋ ಎಂಬ ಭ್ರಾಂತಿಯನ್ನುಂಟುಮಾಡುತ್ತಿದ್ದುವು.

ಕ್ರೂರವಾದ ಮುಂಗಾಲಿನ ಉಗುರುಗಳನ್ನು ಕೊಂಬುಗಳಂತೆ ನೀಡಿಕೊಂಡು ಸಮುದ್ರದ ಗಿಡಗಳ ಬೇರುಗಳ ನಡುವೆ ಬಹು ದೊಡ್ಡ ಆಕಾರದ ಮುದಿ ಏಡಿಯೊಂದು ದೇಹವನ್ನು ಓರೆ ಮಾಡಿಕೊಂಡು ಬೇಗಬೇಗ ಹೋಗುತ್ತಿತ್ತು. ಅದು ದುಂಡು ಪೆಟ್ಟಿಗೆಯಂತೆ ಇದ್ದ ಉಬ್ಬುಬೆನ್ನನ್ನು ತನ್ನ ಎಂಟುಕಾಲುಗಳ ಮೇಲೆ ಹೊತ್ತುಕೊಂಡು ಹೋಗುತ್ತಿತ್ತು. ಅದರ ಬೆನ್ನಿನಮೇಲೆ ಕಲ್ಲಿನಂತೆ ಗಂಟುಗಂಟಾಗಿದ್ದ ಬಿಳಿಯ ಚುಕ್ಕೆಗಳಿದ್ದುವು.

ಈ ದಡಿಯ ಏಡಿಯನ್ನು ನೋಡಿ ಪೇತ್ಯ ಕೊಂಚವೂ ದಿಗಿಲು ಬೀಳಲಿಲ್ಲ. ಏಡಿಗಳನ್ನು ಹಿಡಿಯುವ ವಿಧಾನ ಅವನಿಗೆ ತಿಳಿದಿತ್ತು. ಎರಡು ಬೆರಳುಗಳಿಂದ ಅದರ ಬೆನ್ನನ್ನು ಧೈರ್ಯವಾಗಿ ಹಿಡಿದುಕೊಂಡರಾಯಿತು. ಆಗ ಅವು ಕಚ್ಚಲಾರವು.

ಆದರೆ ಅವನಿಗೆ ಏಡಿಯ ವಿಷಯದಲ್ಲಿ ಆಸಕ್ತಿ ಇರಲಿಲ್ಲ. ಅದು ಪರರ ಕಾಟವಿಲ್ಲದೆ ಶಾಂತಿಯಿಂದ ತೆವಳಿಕೊಂಡು ಹೋಗಲಿ ಪಾಪ, ಎಂದುಕೊಂಡು ಸುಮ್ಮನಾದನು. ಅಲ್ಲಿ ಏಡಿಗಳಿಗೇನೂ ಬರವಿರಲಿಲ್ಲ. ದಡದ ಮರಳಿನ ಮೇಲೆಲ್ಲ ಏಡಿಗಳ ಒಣಗಿದ ಮುಳ್ಳುಗಳೂ ಕೆಂಪು ಚಿಪ್ಪುಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು.

ಅವನಿಗೆ ಕಡಲ್ಗುದುರೆಗಳಲ್ಲಿ ಆಸಕ್ತಿ ಹೆಚ್ಚು.

ಆಗತಾನೆ ಕಡಲಿನ ಕಳೆಗಳ ನಡುವೆ ಕಡಲ್ಗುದುರೆಗಳ ಒಂದು ಸಣ್ಣ ತಂಡವೇ ಕಾಣಿಸಿಕೊಂಡಿತು. ಅವುಗಳ ಮುಖ ಮತ್ತು ಎದೆ ಉಳಿಯಂತೆ ಚೂಪು ಮತ್ತು ಚಪ್ಪಟೆ. ಅವು ನೋಡುವವರ ಕಣ್ಣಿಗೆ ಚದುರಂಗದ ಕುದುರೆಮುಖದ ಕಾಯಿಗಳಂತೆ ಕಾಣಿಸುತ್ತಿದ್ದುವು. ಮುಂದುಗಡೆಗೆ ಸುರುಳಿ ಸುತ್ತಿಕೊಂಡಿದ್ದ ಬಾಲಗಳು ಮಾತ್ರ ತದ್ವಿರುದ್ಧವಾಗಿದ್ದುವು. ಅವು ನೆಟ್ಟಗೆ ನಿಂತು ಬಲೆಯಂತಿರುವ ಈಜುರೆಕ್ಕೆಗಳನ್ನು ಅಲ್ಲಾಡಿಸುತ್ತ ನೇರವಾಗಿ ಪೇತ್ಯನ ಕಡೆಗೆ ಬರುತ್ತಿದ್ದುವು. ನೀರಿನಡಿಯಲ್ಲಿ ವಾಸಿಸುವುದೆಂದು ಹೇಳಲಾಗುವ ಹಾವಿನ ರೂಪವೂ ಹಕ್ಕಿಗಳ ರೆಕ್ಕೆಯೂ ಇರುವಂಥ ಡ್ರ್ಯಾಗನ್‌ಗಳೆಂಬ ಭಯಂಕರ ಪ್ರಾಣಿಗಳಂತೆ ಅವು ಆಗ ಕಾಣಿಸುತ್ತಿದ್ದುವು. ಅಂದು ಬೆಳಗ್ಗೆ ಅಷ್ಟು ಬೇಗನೆ ಬೇಟೆಗಾರನೊಬ್ಬ ಬರುವನೆಂದು ಅವು ಎಂದೆಂದೂ ನಿರೀಕ್ಷಿಸಿರಲಿಲ್ಲವೆಂಬುದು ಅವುಗಳ ನಡತೆಯಿಂದ ಸ್ಪಷ್ಟವಾಗಿ ತೋರುತ್ತಿತ್ತು.

ಪೇತ್ಯನ ಹೃದಯ ಹರ್ಷದಿಂದ ಹಿಗ್ಗಿಹೋಯಿತು. ಅವನ ಸಂಗ್ರಹದಲ್ಲಿ ಒಂದೇ ಒಂದು ಕಡಲ್ಗುದುರೆ ಮಾತ್ರ ಇತ್ತು, ಅದೂ ಸುಕ್ಕುಗಟ್ಟಿದ ಮುದಿ. ಇಲ್ಲಿದ್ದವುಗಳಲ್ಲಿ ಒಂದೊಂದೂ ದೊಡ್ಡದಾಗಿದ್ದುವಲ್ಲದೆ ನೋಡುವುದಕ್ಕೆ ಅಂದವಾಗಿಯೂ ಇದ್ದುವು.

ಇಂಥ ಅಪೂರ್ವ ಸುಸಂಧಿಯನ್ನು ಕಳೆದುಕೊಳ್ಳುವುದೆಂದರೆ ಶುದ್ಧ ಹುಚ್ಚುತನವೇ ಸರಿ. ಪೇತ್ಯ ಉಸಿರು ತೆಗೆದುಕೊಳ್ಳುವುದಕ್ಕಾಗಿ ನೀರಿನ ಮೇಲುಗಡೆಗೆ ಬಂದ. ಕೂಡಲೆ ತನ್ನ ಬೇಟೆಯನ್ನು ಆರಂಭಿಸಬೇಕೆಂದುಕೊಂಡ. ಆದರೆ ಇದ್ದಕ್ಕಿದ್ದಂತೆ ಅವನ ತಂದೆ ಕಡಲಿನ ದಡದ ದಿಣ್ಣೆಯಮೇಲೆ ನಿಂತಿದ್ದುದು ಅವನ ಕಣ್ಣಿಗೆ ಬಿದ್ದಿತು.

ತಂದೆ ನಿಂತಿದ್ದ ದಿಣ್ಣೆ ಬಹು ಎತ್ತರವಾಗಿತ್ತು. ಮತ್ತು ಅಲ್ಲಿಂದ ಕೇಳಿಬರುತ್ತಿದ್ದ ಸ್ವರವೂ ದುರ್ಬಲವಾಗಿತ್ತು. ಆದುದರಿಂದ "ಊ....ಊ....ಊ...." ಎಂಬಷ್ಟು ಮಾತ್ರ ತೇಲಿಕೊಂಡು ಬಂದು ಪೇತ್ಯನ ಕಿವಿಗೆ ಬೀಳುತ್ತಿತ್ತು.

ಪೇತ್ಯನಿಗೆ ಗೊತ್ತು ಆ ಅಸ್ಪಷ್ಟ ಸ್ವರಗಳಿಗೆ ಅರ್ಥವೇನೆಂದು: "ಎಲ್ಲಿ ಹಾಳಾದೆಯೋ, ಪೋಲಿ! ಎಲ್ಲೆಲ್ಲೂ ನಿನ್ನ ಹುಡುಕಾಡಿ ಸತ್ತೆ. ಕುದುರೆ ಗಾಡಿ ಕಾದು ನಿಂತಿದೆ. ನಿನ್ನಿಂದಾಗಿ ಹಡಗು ತಪ್ಪಿಹೋದರೆ ಗತಿ ಏನು? ಅಪ್ರಯೋಜಕ, ಬೇಗ ಬಾ."

ಅಂದು ಬೆಳಗ್ಗೆ ಯಾವ ಅಗಲಿಕೆಯ ನೋವಿನಿಂದ ಪೇತ್ಯ ಎಚ್ಚರಗೊಂಡಿದ್ದನೋ ಅದು ಈಗ ತಂದೆಯ ಕೂಗಿನಿಂದ ಪುನಃ ಜಾಗ್ರತವಾಯಿತು. ಹತಾಶನಾಗಿ ಗಟ್ಟಿಯಾಗಿ "ಬಂದೇ, ಬಂದೇ" ಎಂದು ಕೂಗಿದ.

ಆಗ ಅದು "ಏ....ಏ...." ಎಂದು ದಿಣ್ಣೆಯಕಡೆಯಿಂದ ಪ್ರತಿಧ್ವನಿ ಕೊಟ್ಟಿತು.

ಪೇತ್ಯ ತನ್ನ ಬಟ್ಟೆಯನ್ನು ಒದ್ದೆಯ ಮೈಮೇಲಕ್ಕೆ ಎಳೆದುಕೊಂಡ. ನಿಜ ಹೇಳುವುದಾದರೆ ಅದು ಅವನಿಗೆ ಎಷ್ಟು ಹಿತವಾಗಿತ್ತೋ! ಆಮೇಲೆ ಆತುರ ಆತುರವಾಗಿ ಓಡಿದ.

೩. ಸ್ಟೆಪ್ಪಿಯಲ್ಲಿ

ಹೆಬ್ಬಾಗಿಲಿನ ಎದುರಿಗೆ ರಸ್ತೆಯಲ್ಲಿ ಆಗಲೆ ಕುದುರೆಗಾಡಿ ಬಂದು ನಿಂತಿತ್ತು. ಗಾಡಿಹೊಡೆಯುವವನು ಗಾಡಿಯ ಒಂದು ಚಕ್ರದಮೇಲೆ ಹತ್ತಿ ಪ್ರಯಾಣ ಹೊರಟಿದ್ದವರ ಮಡಿಸಬಹುದಾದ ಕ್ಯಾನ್‌ವಾಸ್ ಬಟ್ಟೆಯ ಮಂಚಗಳನ್ನೂ ಬಿಳಿ ಬದನೆಯ ಗಿಡಗಳ ಬುಟ್ಟಿಗಳನ್ನೂ ಗಾಡಿಯ ಮೇಲುಭಾಗಕ್ಕೆ ಕಟ್ಟುತ್ತಿದ್ದನು. ಗಾಡಿ ಹೊರಟಿದ್ದ ಪ್ರಯೋಜನವನ್ನು ಪಡೆದುಕೊಂಡು ಆ ಜಮೀನಿನ ಯಜಮಾನನು ಗಿಡಗಳನ್ನು ಅಕರ್‌ಮಾನ್ ಪಟ್ಟಣಕ್ಕೆ ಕಳುಹಿಸುತ್ತಿದ್ದನು.

ಪುಟ್ಟ ಪಾವಲಿಕ್ ಒಂದು ಹೊಸ ನೀಲಿಯ ಅಂಗಿಯನ್ನೂ, ಚೆನ್ನಾಗಿ ಗಂಜಿ ಹಾಕಿ ಫಳಫಳನೆ ಹೊಳೆಯುತ್ತಿದ್ದ ಟೋಪಿಯನ್ನೂ ಧರಿಸಿ ಕುದುರೆಗಳಿಗೆ ಸ್ವಲ್ಪದೂರದಲ್ಲಿ ನಿಂತಿದ್ದ. ಆ ಕುದುರೆಗಳ ಲಗಾಮು ಕಡಿವಾಣ ಮೊದಲಾದವುಗಳನ್ನು ಬಹಳ ವಿವರವಾಗಿಯೂ ಸೂಕ್ಷ್ಮವಾಗಿಯೂ ಪರೀಕ್ಷಿಸುತ್ತಿದ್ದ.

ಜೀವಂತ ಕುದುರೆಗಳ ನಿಜವಾದ ಕಡಿವಾಣ ಲಗಾಮು ಮೊದಲಾದುವುಗಳು ತನ್ನ ಮನೆಯಲ್ಲಿದ್ದ ಕಾಗದದ ಸರಿಯಿಂದ ಮಾಡಿದ ಆಟದ ಕುದುರೆ ಕುಡ್ಲಾಟ್ಕಕ್ಕಿಂತ ಬೇರೆಯಾಗಿದ್ದುದನ್ನು ನೋಡಿ ಅತ್ಯಾಶ್ಚರ್ಯದಿಂದ ಅವನ ಬಾಯಿ ಕಟ್ಟಿಹೋಗಿತ್ತು. ಆಟದ ಕುದುರೆಯನ್ನು ಪಾವಲಿಕ್ ತನ್ನ ಜತೆಯಲ್ಲಿ ತಂದಿರಲಿಲ್ಲವಾಗಿ ಒಡೆಸ್ಸ ನಗರದ ಮನೆಯಲ್ಲಿ ಅದು ತನ್ನ ಯಜಮಾನನ ಬರುವಿಕೆಗಾಗಿ ಕಾದಿದ್ದಿತು.

ಕುಡ್ಲಾಟ್ಕನನ್ನು ತಮಗೆ ಮಾರಿದ ಅಂಗಡಿಯವನು ಎಲ್ಲೋ ಸರಿಯಾದ ಕುದುರೆಯನ್ನು ತರಿಸಿರಲಿಲ್ಲವೆಂದು ಕಾಣುತ್ತೆ !

ಕುದುರೆಗಳ ಕಣ್ಣುಗಳಿಗೆ ಪಕ್ಕಕ್ಕೆ ಮರೆಯಾಗಿರುವಂತೆ ಕಟ್ಟಿರುವಂಥ ಸುಂದರವಾದ ಚರ್ಮದ ಪಟ್ಟಿಗಳು ತನ್ನ ಕುಡ್ಲಾಟ್ಕಕ್ಕಿರಲಿಲ್ಲ. ತಾನು ನಗರವನ್ನು ತಲಪಿದೊಡನೆ ಕುಡ್ಲಾಟ್ಕನ ಕಣ್ಣುಗಳೆರಡಕ್ಕೂ ಅಂಥ ಎರಡು ಪಟ್ಟಿಗಳನ್ನಿಟ್ಟು ಹೊಲಿಯಬೇಕೆಂದು ಅಪ್ಪನನ್ನು ಮರೆಯದೆ ಕೇಳುವುದಾಗಿ ಮನಸ್ಸಿನಲ್ಲಿ ಮಾಡಿಕೊಂಡ.

ಕುಡ್ಲಾಟ್ಕ ನೆನಪಿಗೆ ಬಂದೊಡನೆ ಆತಂಕವು ಪವಲಿಕನ ಮನಸ್ಸನ್ನು ಇರಿಯಿತು. ಜತೆಗಿಲ್ಲದೆ ಅದು ಮನೆಯ ಅಟ್ಟದಲ್ಲಿ ಹೇಗೆ ತಾನೆ ಒಂಟಿಯಾಗಿ ಕಾಲ ಕಳೆಯುತ್ತ ಇದ್ದೀತು ? ಚಿಕ್ಕಮ್ಮ ಕಾತ್ಯಾನ ಅದಕ್ಕೆ ಹುರುಳಿಯನ್ನೂ ಹುಲ್ಲನ್ನೂ ಕೊಡುತ್ತಿದ್ದಾಳೆಯೆ ? ಇಲಿಗಳು ಅದರ ಬಾಲವನ್ನು ಕಚ್ಚಿ ತಿಂದುಬಿಟ್ಟಿವೆಯೋ ಹೇಗೆ ? ನಿಜ, ಅದರ ಬಾಲ ತಾನೆ ಎಲ್ಲಿ ಹೆಚ್ಚಾಗಿ ಉಳಿದಿತ್ತು ? ಕಂತಿಗೆ ಸುತ್ತಿದ್ದ ಮೆತ್ತನೆಯ ಬಟ್ಟೆಯಮೇಲೆ ಅಂಟಿಕೊಂಡಿದ್ದ ಒಂದೆರಡು ಕೂದಲುಗಳು ಮಾತ್ರ ಉಳಿದಿದ್ದುವು. ಆದರೆ....

ತವಕದಿಂದ ಉದ್ರಿಕ್ತನಾದ ಪವಲಿಕ್ ನಾಲಗೆ ಕಚ್ಚಿಕೊಂಡು ಅಪ್ಪನನ್ನೂ ಅಣ್ಣನನ್ನೂ ಆತುರಗೊಳಿಸಲು ಓಡಿದ.

ಕುಡ್ಲಾಟ್ಕನ ಗತಿ ಏನಾಗಿದೆಯೋ ಎಂದು ಅವನ ಮನಸ್ಸು ಕೊರೆಯುತ್ತಿದ್ದರೂ ಕೂಡ ಅವನು ತನ್ನ ಪ್ರಯಾಣದ ಕೈಚೀಲವನ್ನು ಒಂದು ನಿಮಿಷವೂ ಬಿಟ್ಟಿರಲಿಲ್ಲ. ಅದನ್ನು ತನ್ನ ಹೆಗಲಿಗೆ ಹಾಕಿಕೊಂಡು ಪುಟ್ಟ ಕೈಗಳೆರಡರಿಂದಲೂ ಬಿಗಿಯಾಗಿ ಹಿಡಿದುಕೊಂಡಿದ್ದನು. ಅದಕ್ಕೆ

ಕಾರಣವಿಲ್ಲದೆಯೂ ಇರಲಿಲ್ಲ. ಆ ಚೀಲದಲ್ಲಿ ಒಂದು ಚಾಕಲೇಟ್ ತುಂಡು ಮತ್ತು ಕೆಲವು ಕಾರ ಬಿಸ್ಕತ್ತುಗಳು ಇದ್ದುವಷ್ಟೇ ಅಲ್ಲದೆ ಅವನ ಜೀವನಿಧಿಯೂ ಅಲ್ಲಿತ್ತು. ದುಡ್ಡಿನ ಡಬ್ಬಿಯಾಗಿ ಉಪಯೋಗಿಸುತ್ತಿದ್ದ ಕೋಕೋ ಟಿನೇ ಅವನ ಆನಿಧಿಯಾಗಿತ್ತು ಒಂದು ಬೈಸಿಕಲ್ಲನ್ನು ಕೊಂಡು ಕೊಳ್ಳಬೇಕೆಂದು ಅದರಲ್ಲಿ ಹಣವನ್ನು ಕೂಡಿಡುತ್ತಿದ್ದನು. ಮೂವತ್ತೆಂಟು ಅಥವಾ ಮೂವತ್ತೊಂಬತ್ತು ಕೊಪೆಕ್ಕುಗಳಷ್ಟು ಹಣವನ್ನು ಅವನು ಆಗಲೇ ಮಿಗಿಸಿದ್ದನು.

ಗೋಧಿಹಿಟ್ಟಿನ ಬ್ರೆಡ್ಡು ಮತ್ತು ಹಸುವಿನ ಹಾಲಿನ ಉಪಾಹಾರವನ್ನು ತೀರಿಸಿಕೊಂಡು ತಂದೆಯೂ ಪೇತ್ಯನೂ ಕುದುರೆಯ ಗಾಡಿಯ ಕಡೆಗೆ ಬರುತ್ತಿದ್ದರು.

ಮದ್ಯಸಾರದಲ್ಲಿ ಕೆಡದಂತೆ ಇಟ್ಟ ಸೂಜಿಮೀನುಗಳ ಒಂದು ಜಾಡಿ, ಚಿಟ್ಟೆಗಳು, ಜೀರುಂಡೆ ಹುಳುಗಳು, ಚಿಪ್ಪುಗಳು, ಏಡಿಗಳು-ಇವುಗಳನ್ನೊಳಗೊಂಡ ತನ್ನ ಸ್ವಂತ ಸಂಗ್ರಹವನ್ನು ಪೇತ್ಯ ತನ್ನ ಕಂಕುಳಲ್ಲಿ ಇರುಕಿಕೊಂಡು ಬಂದ.

ಅವರನ್ನು ಕಳುಹಿಸಿಕೊಡಲು ಹೆಬ್ಬಾಗಿಲಿನವರೆಗೆ ಬಂದಿದ್ದವರೆಲ್ಲರಿಗೂ ಹೃತ್ಪೂರ್ವಕವಾದ ಕೊನೆಯ ನಮಸ್ಕಾರಗಳನ್ನು ಮೂವರೂ ಹೇಳಿದರು. ಬಳಿಕ ಗಾಡಿಯನ್ನು ಏರಿ ಕುಳಿತರು. ಗಾಡಿ ಹೊರಟಿತು.

ಜಮೀನಿನ ಅಂಚಿನಲ್ಲಿಯೇ ರಸ್ತೆ ಹೋಗುತ್ತಿತ್ತು

ಹಣ್ಣಿನ ತೋಟ, ಲತಾಗೃಹ, ಕೋಳಿ ಗೂಡುಗಳು, ಮತ್ತು ದನದ ಕೊಟ್ಟಿಗೆಗಳನ್ನು ಹಿಂದಕ್ಕೆ ಹಾಕುತ್ತ, ರಸ್ತೆಯುದ್ದಕ್ಕೂ ಗಾಡಿಗೆ ಕಟ್ಟಿದ್ದ ನೀರಿನ ತೊಟ್ಟಿಯನ್ನು ಕಟಕಟ ಎಂದು ಶಬ್ದಮಾಡುತ್ತ ಗಾಡಿಯು ಮುಂದಕ್ಕೆ ಸಾಗಿತು. ಕೊನೆಗೆ ಅದು ಕಾಳಕ್ಕೊವ ಮತ್ತು ತೂರುವ ಗೋಧಿಯ ಕಣವನ್ನು ತಲಪಿತು. ಈ ರೀತಿಯ ಕಣಕ್ಕೆ ಮಧ್ಯ ರಷ್ಯಾದಲ್ಲಿ **ತೋಕ್** ಎಂದೂ, ಬೆಸ್ಸರೇಬಿಯಾದಲ್ಲಿ **ಗರ್‌ಮಾನ್** ಎಂದೂ ಹೆಸರು. ರಸ್ತೆಯ ಪಕ್ಕದ ದಿಣ್ಣೆಯಿಂದ ಈ **ಗರ್‌ಮಾನ್** ಪ್ರಪಂಚ ಆರಂಭವಾಗುತ್ತಿತ್ತು. ರಸ್ತೆಯ ಪಕ್ಕದ ದಿಣ್ಣೆಯಮೇಲೆ ಮುಳ್ಳುಗಿಡಗಳು ಒತ್ತಾಗಿ ಬೆಳೆದು ನಿಂತಿದ್ದುವು. ಅವುಗಳಲ್ಲಿ ಹಳದಿ ಕೆಂಪು ಮಿಶ್ರವರ್ಣದ ಸಣ್ಣಸಣ್ಣ ಹಣ್ಣುಗಳು ಬಿಟ್ಟಿದ್ದುವು. ಆ ಗಿಡಗಳ ಮೇಲೆಲ್ಲ ಧೂಳು ಕವಿದಿತ್ತು.

ಮನೆಗಳಷ್ಟು ಎತ್ತರವಾದ ಹಳೆಯ ಮತ್ತು ಹೊಸ ಹುಲ್ಲು ಬಣವೆಗಳ ಒಂದು ನಗರವೇ ಅಲ್ಲಿ ಏರ್ಪಟ್ಟಿತ್ತು. ಆ ನಗರದಲ್ಲಿ ನಿಜವಾದ ರಸ್ತೆಗಳೂ, ಓಣಿಗಳೂ, ಕುರುಡುಗಲ್ಲಿಗಳೂ ಇದ್ದುವು. ಪದರಪದರವಾಗಿ ಕಪ್ಪಗಿದ್ದ ಹಳೆಯ ಹುಲ್ಲಿನ ಬಣವೆಗಳ ಪಕ್ಕದಲ್ಲಿ ಎರಕದ ಕಬ್ಬಿಣದಂತೆ ಗಟ್ಟಿಯಾಗಿ ತೋರುತ್ತಿದ್ದ ನೆಲದಿಂದ ಅಲ್ಲಲ್ಲಿ ಗೋಧಿಯ ಮೊಳಕೆಗಳು ಚಿಗುರೊಡೆದಿದ್ದುವು. ಅವು ಪಚ್ಚೆಮಣಿಗಳ ಬತ್ತಿಗಳಂತೆ ಸ್ವಚ್ಛವಾಗಿ ಹೊಳೆಯುತ್ತಿದ್ದುವು.

ಹಸುರು, ಹಳದಿ ಮತ್ತು ಕೆಂಪು ಬಣ್ಣಗಳು ಸೇರಿದ ದಟ್ಟವಾದ ಹೊಗೆಯನ್ನು ಹಬೆಯಂತ್ರದ ಕೊಳವಿಗಳು ಹೊರಕ್ಕೆ ಉಗಿಯುತ್ತಿದ್ದುವು. ಕಣ್ಣಿಗೆ ಕಾಣಿಸದೆ ಇದ್ದ ಒಕ್ಕುವ ಯಂತ್ರವೊಂದು ಒಂದೇ ಸಮನೆ ಶಬ್ದಮಾಡುತ್ತಿತ್ತು. ರೈತ ಹೆಂಗಸರು ಕೈಯಲ್ಲಿ ಕವೆಗೋಲುಗಳನ್ನು ಹಿಡಿದುಕೊಂಡು ಒಂದು ಹೊಸ ಬಣವೆಯ ಮೇಲುಭಾಗದಲ್ಲಿ ಮೊಳಕಾಲುದ್ದ ಗೋಧಿಯಲ್ಲಿ ನಡೆಯುತ್ತಿದ್ದರು. ಹೊಟ್ಟಿನ ಹೊಗೆಯಮೇಲೆ ಓರೆಯಾದ ಸೂರ್ಯರಶ್ಮಿಗಳು ಬಿದ್ದಿದ್ದುವು

ಕವೆಗೋಲುಗಳಿಗೆ ಸಿಕ್ಕಿಹಾಕಿಕೊಂಡಿದ್ದ ಗೋಧಿಯ ತೆನೆಗಳ ನೆರಳು ಹೊಟ್ಟಿನ ಹೊಗೆಯಮೇಲೆ ಬಿದ್ದು ಅವು ಚಲಿಸುತ್ತಿರುವಂತೆ ಭಾಸವಾಗುತ್ತಿತ್ತು. ಚೀಲ, ತಕ್ಕಡಿ ಮತ್ತು ತೂಕದ ಬಟ್ಟು ಗಳು ದೂರದಿಂದ ಹೊಳೆಯುತ್ತಿದ್ದುವು. ಹೊಸದಾಗಿ ಗೋಧಿಯನ್ನು ಬಡಿದು ರಾಶಿಹಾಕಿ ಅದರ ಮೇಲೆ ಮೇಣಗಪ್ಪಟವನ್ನು ಹೊದಿಸಿದ್ದ ಉದ್ದವಾದ ಗುಡ್ಡೆಯ ಆಕಾರವು ಗಾಡಿಯಲ್ಲಿ ಕುಳಿತಿದ್ದ ವರ ಕಣ್ಣೋಟದಿಂದ ಹಿಂದಕ್ಕೆ ಧಾವಿಸಿತು.

ಮುಂದೆ ಕುದುರೆಗಾಡಿಯು ಸ್ಟೆಪ್ಪಿ ಹುಲ್ಲುಗಾವಲನ್ನು ಪ್ರವೇಶಿಸಿತು.

ಸ್ಟೆಪ್ಪಿ ಮೈದಾನದಲ್ಲಿ ಉಳಿದ ವರ್ಷಗಳಲ್ಲಿದ್ದಂತೆಯೇ ಪ್ರಾರಂಭದಲ್ಲಿ ಎಲ್ಲವೂ ಇದ್ದಿತೆಂದು ಒಂದು ಮಾತಿನಲ್ಲಿ ಹೇಳಬಹುದು. ಸುತ್ತಲೂ ಹತ್ತಾರು ಮೈಲಿಗಳಷ್ಟುದೂರದವರೆಗೂ ಸಮತಲ ವಾದ ನಿರ್ಜನವಾದ ಹೊಲಗಳಲ್ಲಿ ಎದ್ದು ಕಾಣುತ್ತಿದ್ದ ಕೂಳೆಗಳು, ಅಭ್ರಕದಂತೆ ಮಿನುಗುತ್ತಿದ್ದ ಬಿಳಿಯ ಬಣ್ಣದ ಒಣಗಿಸಿದರೂ ಬಣ್ಣಗೆಡದ ಜಾತಿಯ ಗಿಡಗಳು, ತನ್ನ ಬಿಲದ ಬಳಿ ಕುಳಿತ ಅಳಿಲ ಜಾತಿಯ ಮಾರ್ಮಟ್ ಎಂಬ ಪ್ರಾಣಿ, ಜಜ್ಜಿದ ಹಾವಿನಂತೆ ಕಾಣಿಸುತ್ತಿದ್ದ ಹರಿದ ಹಗ್ಗದ ತುಂಡುಗಳು....ಎಲ್ಲವೂ ಅದೇ.

ಆದರೆ ಇದ್ದಕ್ಕಿದ್ದಂತೆ ಧೂಳಿನ ಮೋಡವೊಂದು ಎದುರುಗಡೆಯಲ್ಲಿ ಕಾಣಿಸಿಕೊಂಡಿತು. ರಸ್ತೆಯಲ್ಲಿ ಎದುರುಗಡೆಯಿಂದ ಪೋಲೀಸ್ ಸವಾರರು ನಾಗಾಲೋಟದಿಂದ ಧಾವಿಸಿ ಬರುತ್ತಿದ್ದರು.

"ನಿಲ್ಲಿಸು."

ಕುದುರೆಗಾಡಿಯು ನಿಂತಿತು. ಒಬ್ಬ ಪೋಲೀಸ್ ಸವಾರ ಹತ್ತಿರಕ್ಕೆ ಬಂದ. ಅವನ ಹಸಿರು ಹೆಗಲುಪಟ್ಟಿಯ ಹಿಂದುಗಡೆ ಅಂಕಿಗಳನ್ನು ಗುರುತುಮಾಡಿದ್ದ ಸಣ್ಣ ಬಂದೂಕು ತೂಗಾಡುತ್ತಿತ್ತು. ಪದಾತಿ ಸೈನಿಕರು ತಮ್ಮ ವಿರಾಮಕಾಲದಲ್ಲಿ ಹಾಕಿಕೊಳ್ಳುವಂಥ ಟೋಪಿಯನ್ನು ತಲೆಯಮೇಲೆ ಓರೆಯಾಗಿ ಹಾಕಿಕೊಂಡಿದ್ದ. ಅದು ಮೇಲಕ್ಕೂ ಕೆಳಕ್ಕೂ ಆಡುತ್ತಿತ್ತು. ಕುದುರೆಯ ಜೀನು ಚರಪರ ಶಬ್ದ ಮಾಡುತ್ತ ಕಟುವಾಸನೆಯನ್ನು ಬೀರುತ್ತಿತ್ತು.

ಉಸಿರು ಹುಯ್ಯುತ್ತ ಗೊರಗುಟುತ್ತಿದ್ದ ಕುದುರೆಯ ಮೂತಿ ಗಾಡಿಯ ಕಿಟಕಿಯ ಸಮಕ್ಕೆ ಬಂದು ನಿಂತಿತು. ಹೊಳೆಯುತ್ತಿದ್ದ ಕಬ್ಬಿಣದ ಕಡಿವಾಣವನ್ನು ಬಿಳಿಯ ಹಲ್ಲುಗಳಿಂದ ಕುದುರೆ ಕಡಿಯುತ್ತಿದ್ದುದು ಗಾಡಿಯೊಳಗಿನ ಪ್ರಯಾಣಿಕರ ಕಣ್ಣಿಗೆ ಕಾಣಿಸುತ್ತಿತ್ತು. ರಬ್ಬರಿನಂತೆ ಇದ್ದ ಕಪ್ಪುತುಟಿಗಳಿಂದ ಹಸಿರುಹುಲ್ಲಿನ ಬಣ್ಣದ ನೊರೆ ತೊಟ್ಟಿಕ್ಕುತ್ತಿತ್ತು. ಮೃದುವಾದ ಎಳೆಗೆಂಪು ಬಣ್ಣದ ಮೂಗಿನ ಹೊಳ್ಳೆಗಳಿಂದ ಬಿಸಿಯುಸಿರು ಗಾಡಿಯಲ್ಲಿದ್ದ ಮೂರು ಜನ ಪ್ರಯಾಣಿಕರ ಮೇಲಕ್ಕೂ ಬೀರಿತು. ಕುದುರೆಯು ತನ್ನ ಕರಿಯ ತುಟಿಗಳನ್ನು ಪೇತ್ಯನ ಹುಲ್ಲಿನ ಟೋಪಿಯನ್ನು ಕಚ್ಚಲೋ ಎಂಬಂತೆ ಒಳಕ್ಕೆ ನೀಡಿತು.

"ಒಳಗೆ ಯಾರು?" ಒಂದು ಒರಟು ಸೈನಿಕ ಸ್ವರವು ಗಾಡಿಯಲ್ಲಿ ಕುಳಿತಿದ್ದವರಿಗೆ ತಲೆಯ ಮೇಲುಗಡೆಯಿಂದ ಅರಚಿದಂತೆ ಕೇಳಿಸಿತು.

"ಗಾಡಿಯೊಳಗಿನವರು ಬೇಸಿಗೆ ರಜದ ನಿವಾಸಿಗಳು. ನಾನು ಅವರನ್ನು ಹಡಗಿಗೆ ಕರೆದೊಯ್ಯುತ್ತಿದ್ದೇನೆ. ಅವರು ಅಕ್ಕರ್‌ಮಾನ್‌ಗೆ ಹೋಗುತ್ತಿದ್ದಾರೆ ಮತ್ತು ಅಲ್ಲಿಂದ ಹಡಗು ಹತ್ತಿ ನೇರವಾಗಿ ಒಡೆಸ್ಸಕ್ಕೆ ಪ್ರಯಾಣ ಮಾಡುತ್ತಾರೆ. ಇಲ್ಲೇ ಹತ್ತಿರದ ಹೊಲಮನೆಯಲ್ಲಿ ಈ ಬೇಸಿಗೆ

ಯನ್ನು ಕಳೆದರು. ಜೂನ್ ತಿಂಗಳ ಮೊದಲಲ್ಲೇ ಇಲ್ಲಿಗೆ ಬಂದರು. ಈಗ ಅವರು ತಮ್ಮ ಊರಿಗೆ ಹಿಂದಿರುಗುತ್ತಿದ್ದಾರೆ." ಗಾಡಿ ಹೊಡೆಯುವವನು ಸರಸರನೆ ಅಸ್ವಾಭಾವಿಕವಾದ ಮೆಲುದನಿಯಲ್ಲಿ ಉತ್ತರ ಕೊಟ್ಟ.

"ಎಲ್ಲಿ, ಅವರ ಮುಖ ನೋಡೋಣ ಸ್ವಲ್ಪ" ಎಂದು ಹೇಳಿ ಹಳದಿ ಮೀಸೆ ಹಾಗು ಹುಬ್ಬುಗಳು ನುಣ್ಣಗೆ ಕ್ಷೌರ ಮಾಡಿಸಿಕೊಂಡ ಗದ್ದದ ಮತ್ತು ಹಸಿರು ಪಟ್ಟಿಯ ಮೇಲೆ ಅಂಡಾಕಾರದ ಬಿಲ್ಲೆಯುಳ್ಳ ಟೋಪಿಯನ್ನು ಧರಿಸಿದ ತಲೆಯ ಕೆಂಪು ಮೂತಿಯೊಂದು ಕಿಟಕಿಯಲ್ಲಿ ಕಾಣಿಸಿಕೊಂಡಿತು.

"ಯಾರು ನೀವು ?"

"ಸೂಟಿಗೆ ಬಂದವರು." ತಂದೆ ಮುಗುಳು ನಗುತ್ತ ಹೇಳಿದರು.

ಸೈನಿಕನಿಗೆ ಆ ಮುಗುಳು ನಗೆಯಾಗಲಿ "ಸೂಟಿಗೆ ಬಂದವರು" ಎಂಬ ಗೆಲುವಿನ ಮಾತಾಗಲಿ ಹಿಡಿಸಲಿಲ್ಲ. ತನ್ನನ್ನು ಗೇಲಿ ಮಾಡಿದಂತೆಯೇ ತೋರಿತು ಅವನಿಗೆ.

"ನೀವು ಮಜಾ ಮಾಡೋಕೆ ಬಂದಿದ್ದವರು ಅನ್ನೋದು ನಿಮ್ಮನ್ನು ನೋಡಿದರೇನೆ ಕಾಣುತ್ತೆ" ಎಂದು ಒರಟಾಗಿ ನುಡಿದು, "ಅದನ್ನೇನು ನೀವು ನನಗೆ ಹೇಳಬೇಕಾದ್ದಿಲ್ಲ, ನೀವು ಯಾವ ರೀತಿಯ ಸೂಟಿಗೆ ಬಂದ ಜನ ಅನ್ನೋದಷ್ಟನ್ನು ತಿಳಿಸಿಬಿಡಿ." ಎಂದ.

ತಂದೆಯ ಮುಖ ಕೋಪ ಮತ್ತು ಅಪಮಾನಗಳಿಂದ ಬಿಳಿಚಿಕೊಂಡಿತು. ದವಡೆಯೂ ತೆಳುಗಡ್ಡವೂ ಕಂಪಿಸಲಾರಂಭಿಸಿದುವು. ನಡುಗುತ್ತಿರುವ ಬೆರಳುಗಳಿಂದ ತಮ್ಮ ಕೋಟಿನ ಗುಂಡಿಗಳನ್ನು ಹಾಕಿಕೊಂಡು ಮೂಗಿನ ಮೇಲಿನ ಕನ್ನಡಕವನ್ನು ಸರಿಮಾಡಿಕೊಂಡರು.

"ನನ್ನೆದುರಿಗೆ ದುರಭಿಮಾನದಿಂದ ಮಾತಾಡಲು ನಿನಗೆಷ್ಟು ಧೈರ್ಯ?" ಎಂದು ಕೀಚಲು ಧ್ವನಿಯಲ್ಲಿ ಗಟ್ಟಿಯಾಗಿ ಹೇಳಿದರು. "ನಾನು ವಿಶ್ವವಿದ್ಯಾನಿಲಯ ಸಮಿತಿಯ ಸದಸ್ಯ ಬಾಚಿ, ಪ್ರೌಢ ಶಾಲೆಯ ಅಧ್ಯಾಪಕ. ಪೀಟರ್ ಮತ್ತು ಪಾಲ್ ಇವರಿಬ್ಬರೂ ನನ್ನ ಮಕ್ಕಳು. ನಾವು ಒಡೆಸ್ಸಕ್ಕೆ ಹೋಗುತ್ತಿದ್ದೇವೆ." ತಂದೆಯ ಹಣೆಯಲ್ಲಿ ನಸುಗೆಂಪಿನ ಚುಕ್ಕಿಗಳು ಕಾಣಿಸಿಕೊಂಡುವು.

"ಕ್ಷಮಿಸಿ ಮಹಾಸ್ವಾಮಿ" ಎಂದು ಆ ಸೈನಿಕ ವಿನಯದಿಂದ ನುಡಿದಾಗ ಅವನ ನಿಸ್ತೇಜವಾದ ಕಣ್ಣುಗಳು ಎದ್ದು ತೋರುತ್ತಿದ್ದುವು. "ನನಗೆ ಗೊತ್ತಾಗಲಿಲ್ಲ" ಎಂದು ಚಾವಟಿ ಕೋಲನು ಹಿಡಿದಿದ್ದ ಕೈಯಿಂದ ನಮಸ್ಕಾರ ಮಾಡಿದನು.

ತಾನು ಅದುವರೆಗೆ ಕೇಳದೇ ಇದ್ದ "ವಿಶ್ವವಿದ್ಯಾನಿಲಯ ಸಮಿತಿಯ ಸದಸ್ಯ" ಎಂಬ ಗಂಭೀರ ಬಿರುದನ್ನು ಕೇಳಿ ಅವನು ಹೆದರಿಕೆಯಿಂದ ಭೂಮಿಗಿಳಿದು ಹೋದ. "ಅನಿಷ್ಟ ತೊಲಗಿತು. ನನ್ನನ್ನು ಎಲ್ಲಿ ಸಂಕಟಕ್ಕೆ ಸಿಕ್ಕಿ ಹಾಕಿ ಬಿಡುತ್ತಾನೋ ಅಂತಿದ್ದೆ. ನನ್ನ ಕುತ್ತಿಗೇಗೆ ಬಂದಿತ್ತಲ್ಲ. ಸದ್ಯ." ಎಂದು ಅವನು ಆಲೋಚಿಸುತ್ತ ಕುದುರೆಯನ್ನು ಹಿಮ್ಮಡಿಯ ಮುಳ್ಳಿನಿಂದ ಚುಚ್ಚಿ ನಾಗಾಲೋಟದಿಂದ ಓಡಿಸಿಕೊಂಡು ಹೋದ.

"ಎಲ್ಲೋ ಪೆದ್ದು!" ಸೈನಿಕ ಸಾಕಷ್ಟು ದೂರ ಸಾಗಿದ ಬಳಿಕ ಪೇತ್ಯ ಟೀಕಿಸಿದ.

ತಂದೆಗೆ ಪುನಃ ಕೋಪ ಕೆರಳಿತು: "ನಾಲಗೆ ಬಿಗಿಹಿಡಿ. ನೀನು ಆ ಮಾತಾಡಬೇಡ ಅಂತ ಎಷ್ಟು ಸಲ ಹೇಳಿದ್ದೀನಿ ನಿನಗೆ. 'ಪೆದ್ದ' ಅಂತ ಮೇಲಿಂದ ಮೇಲೆ ಹೇಳೋನು ತಾನೇ ಪೆದ್ದು ಎನ್ನುವುದನ್ನು ತಿಳಿದಿರೋದಿಲ್ಲ. ಅಂಥವನು ಇತರರಿಗಿಂತ ಬುದ್ಧಿವಂತನೇನು ಆಗಿರೋದಿಲ್ಲ

ಎನ್ನುವುದನ್ನು ಮರೆಯಬೇಡ."

ಬೇರೆ ಯಾವುದಾದರೂ ಸಮಯವಾಗಿದ್ದಿದ್ದರೆ ಪೇತ್ಯ ಅಪ್ಪನೊಡನೆ ವಾದಿಸುತ್ತಿದ್ದ. ಆದರೆ ಈಗ ಬಾಯಿ ಮುಚ್ಚಿಕೊಂಡು ಮೌನದಿಂದ ಕುಳಿತ. ಅವನಿಗೆ ತಂದೆಯ ಮನಸ್ಸಿನ ಸ್ಥಿತಿಯು ಅರಿವಾಗಿತ್ತು.

ತಂದೆ ಬಿರುದು ಬಾವಲಿಗಳ ವಿಚಾರ ಬಂದಾಗಲೆಲ್ಲ ತಿರಸ್ಕಾರ ಪೂರ್ಣವಾಗಿ ಮಾತಾಡುತ್ತಿದ್ದರು. ಅವರು ಎಂದೆಂದೂ ತಮ್ಮ ಸಾಂಪ್ರದಾಯಿಕ ಪೋಷಾಕನ್ನು ಧರಿಸುತ್ತಿರಲಿಲ್ಲ. ತಮಗೆ ದೊರೆತಿದ್ದ ಮೂರನೆಯ ದರ್ಜೆಯ ಸೇಂಟ್ ಆನಾ ಪ್ರಶಸ್ತಿಯನ್ನೂ ಕೂಡ ಹಾಕಿಕೊಳ್ಳುತ್ತಿರಲಿಲ್ಲ. ಯಾವ ವಿಶೇಷವಾದ ಸಾಮಾಜಿಕ ಹಕ್ಕು ಬಾಧ್ಯತೆಗಳನ್ನೂ ಅವರು ಅಂಗೀಕರಿಸುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ರಷ್ಯಾ ದೇಶದ ಎಲ್ಲ ನಿವಾಸಿಗಳೂ "ಪ್ರಜೆಗಳು"; ಅದಕ್ಕಿಂತ ಗುಂಜಿ ತೂಕ ಹೆಚ್ಚೂ ಇಲ್ಲ, ಕಡಮೆಯೂ ಇಲ್ಲ, ಇಂಥವರು ಈಗ ಹಠಾತ್ತಾಗಿ ಕೋಪದಿಂದ ಏನು ಹೇಳಿಬಿಟ್ಟರು ಎಂಬುದು ದೇವರಿಗೇ ಗೊತ್ತು. ಅದೂ ಯಾರಿಗೆ? ಒಬ್ಬ ಸಾಧಾರಣ ಸೈನಿಕನಿಗೆ. "ಪ್ರೌಢಶಾಲೆಯ ಅಧ್ಯಾಪಕ", "ವಿಶ್ವವಿದ್ಯಾನಿಲಯ ಸಮಿತಿಯ ಸದಸ್ಯ", "ನನ್ನೆದುರಿಗೆ ದುರಭಿಮಾನದಿಂದ ಮಾತಾಡಲು ನಿನಗೆಷ್ಟು ಧೈರ್ಯ?" ಅಬ್ಬ ಎಂಥ ಮಾತುಗಳಿವು!

"ಓಹ್ ಅವಿವೇಕದ ಪರಮಾವಧಿ!" "ಛೀ, ಧಿಕ್ಕಾರ!" ತಂದೆಯ ಕಂಗೆಟ್ಟ ಮುಖದಲ್ಲಿ ಸ್ಪಷ್ಟವಾಗಿ ಪೇತ್ಯ ಓದಿದ.

ಈ ಕೋಲಾಹಲಕರ ಸನ್ನಿವೇಶದಲ್ಲಿ ಗಾಡಿ ಹೊಡೆಯುವವನು ತನ್ನ ಚಾವಟಿಯ ಬಾರನ್ನು ಎಲ್ಲೋ ಬೀಳಿಸಿಬಿಟ್ಟಿದ್ದ. ದೀರ್ಘ ಪ್ರಯಾಣಗಳಲ್ಲಿ ಇದೇನು ಹೊಸದಲ್ಲ. ಈಗ ಅವನು ಗಾಡಿಯಿಂದಿಳಿದು ರಸ್ತೆಯುದ್ದಕ್ಕೂ ಅದನ್ನು ಹುಡುಕುತ್ತ ಧೂಳು ಕವಿದ ಗಿಡಗಂಟಿಗಳಲ್ಲಿ ತನ್ನ ಚಾವಟಿಯ ಕೋಲನ್ನು ತಿವಿದು ನೋಡುತ್ತ ಹೆಜ್ಜೆಯಿಡುತ್ತಿದ್ದ. ಕೊನೆಗೆ ಬಾರು ಸಿಕ್ಕಿತು. ಅದನ್ನು ಕೋಲಿನ ತುದಿಗೆ ಕಟ್ಟಿ ಗಂಟುಹಾಕಿ ಹಲ್ಲಿನಿಂದ ಕಚ್ಚಿ ಎಳೆದು ಬಿಗಿಪಡಿಸಿದ. "ಅವರ ಮನೆ ಹಾಳಾಗ!" ಎಂದು ಶಪಿಸುತ್ತ ಗಾಡಿಯ ಹತ್ತಿರಕ್ಕೆ ಬಂದ. "ರಸ್ತೇಲಿ ಅಲ್ಲಿಂದಿಲ್ಲೀಗೆ ದೆವ್ವಗಳ ಹಾಗೆ ಓಡಾಡೋದು; ಸಿಕ್ಕಿದ ಜನಗಳನ್ನು ದಿಗಿಲು ಬೀಳಿಸೋದು, ಬೇರೆ ಕೆಲಸವೇ ಇಲ್ಲ." ಎಂದ.

"ಅವರಿಗೇನು ಬೇಕಂತೆ?" ತಂದೆ ಕೇಳಿದರು.

"ದೇವರೇ ಬಲ್ಲ. ಯಾರನ್ನೋ ಬೇಟೆ ಆಡ್ತಿದಾರೆ ಅಂತ ಕಾಣುತ್ತೆ. ಇನ್ನೇನು ತಾನೆ ಇರುತ್ತೆ. ಇಲ್ಲಿಗೆ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿರೋ ಜಮೀನುದಾರ ಬಲಾಬನೋವನ ಮನೆ ಮಠಕ್ಕೆಲ್ಲ ಬೆಂಕಿ ಇಟ್ಟರಂತೆ. ಪೊತ್ಯೆಮ್ಕಿನ್ ಹಡಗಿನಿಂದ ತಪ್ಪಿಸಿಕೊಂಡು ಬಂದ ಒಬ್ಬ ನಾವಿಕನೇ ಹಾಗೆ ಮಾಡಿರಬೇಕು ಎನ್ನುತ್ತಾರೆ. ಈಗ ಅವನನ್ನು ಎಲ್ಲ ಕಡೆಯಲ್ಲೂ ಹುಡುಕಿಕೊಂಡು ಅಲೆಯುತ್ತಾ ಇದ್ದಾರೆ. ಇಲ್ಲೇ ಎಲ್ಲೋ ಈ ಸ್ಟೆಪ್ಪೇ ಮೈದಾನದಲ್ಲಿ ಅಡಗಿಕೊಂಡಿದಾನೆ ಅಂತ ಹೇಳ್ತಾರೆ. ಏನೋ ಮಹಾಕಾರ್ಯ ಮಾಡೋರ ಹಾಗೆ ಓಡಾಡ್ತಾರೆ ಇವರು. ಸರಿ ಹೊತ್ತಾಯ್ತು ಹೊರಡೋಣ." ಹೀಗೆ ಹೇಳಿ ಸಾರಥಿಗಾಗಿ ಇರುವ ಎತ್ತರವಾದ ಪೆಟ್ಟಿಗೆ ಜಾಗವನ್ನು ಹತ್ತಿ ಕುಳಿತು ಕಡಿವಾಣವನ್ನು ಕೈಗೆ ತೆಗೆದುಕೊಂಡ. ಗಾಡಿ ಮುಂದುವರಿಯಿತು.

ಆ ಬೆಳಗ್ಗೆ ಹವ ಬಹು ಹಿತವಾಗಿತ್ತು. ಆದರೆ ಈಗ ಎಲ್ಲರ ಮನಸ್ಸೂ ಕೆಟ್ಟಿತ್ತು.

ಚಾಮರದಂತೆ ಬಿಳಿಯ ಮೋಡದ ಗೊಂಚಲುಗಳು ಇದ್ದ ನೀಲಾಕಾಶ. ಮೈದಾನದಲ್ಲಿ ಅಲ್ಲಲ್ಲಿ ಕಾಣಬಹುದಾಗಿದ್ದ ಕುದುರೆಯ ತಲೆ ಬುರುಡೆಗಳು ಮತ್ತು ಎತ್ತಿನ ಕೊಂಬುಗಳು, ಮೈದಾನದ ಮೇಲುಗಡೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆಅಲೆಯಾಗಿ ಓಡಾಡುತ್ತಿರುವ ಬಿಳಿ ಮೋಡಗಳು--ಈ ಸೋಜಿಗದ ಜಗತ್ತು ಮಾನವನ ಸುಖ ಸಂತೋಷಾರ್ಥವಾಗಿಯೇ ಸೃಷ್ಟಿಯಾದಂತೆ ಇತ್ತು. ಇಂಥ ಪ್ರಪಂಚದಲ್ಲಿ ಯಾಕೋ ಎಲ್ಲವೂ ಸರಿಯಿದ್ದಂತೆ ಎನ್ನಿಸಲಿಲ್ಲ; ಏನೋ ಸಂಚು ಹೂಡಿದ್ದಂತೆ ಇತ್ತು.

ತಂದೆ, ಗಾಡಿಹೊಡೆಯುವವನು ಮತ್ತು ಪೇತ್ಯ ಇವರ ಮನಸ್ಸಿನಲ್ಲಿ ಇವೇ ಭಾವನೆಗಳು ಇಣಿಕಿಹಾಕಿದ್ದವು. ಆದರೆ ಪಾವಲಿಕ್ ತನ್ನದೇ ಆದ ಆಲೋಚನಾ ಪ್ರಪಂಚದಲ್ಲಿ ಮುಳುಗಿದ್ದ. ಅವನ ಚುರುಕಾದ ದೃಷ್ಟಿ ಕಿಟಕಿಯ ಆಚೆ ಎಲ್ಲೋ ನೆಟ್ಟಿತ್ತು. ಒಂದೇ ಸಮನೆ ಕತ್ತರಿಸಿದ್ದ ಅವನ ಮುಂಗುರುಳುಗಳು ಹಣೆಯಮೇಲೆ ಶೋಭಿಸುತ್ತಿದ್ದುವು. ಅವನ ಬೆಣ್ಣೆಯಂಥ ದುಂಡು ಮುಖ ಗಂಟಿಕ್ಕಿತ್ತು.

"ಅಪ್ಪ!" ಕಿಟಕಿಯಿಂದ ಮುಖವನ್ನು ಒಳಕ್ಕೆಳೆದುಕೊಳ್ಳದೆ ಹಾಗೆಯೇ ಹಠಾತ್ತನೆ ಕೇಳಿದ.

"ಅಪ್ಪ, ಜಾರ್ ಅಂದರೆ ಏನು?"

"ನೀನು ಏನು ಹೇಳುತ್ತೀಯೋ ನನಗೆ ಗೊತ್ತಿಲ್ಲ" ತಂದೆ ಎಂದರು.

"ಆ ಜಾರ್ ಅನ್ನೋನು ಯಾರಪ್ಪ?"

"ಅವನು....ಒಬ್ಬ ಮನುಷ್ಯ."

"ಥೂ, ನೀ ಹೋಗಪ್ಪ. ಮನುಷ್ಯ ಅನ್ನೋದು ನನಗೂ ಗೊತ್ತು. ಅವನು ಯಾರು, ಅವನ ಕೆಲಸವೇನು ಅಂತ ಕೇಳಿದೆ? ಗೊತ್ತಾಯಿತೇನಪ್ಪ?"

"ಇಲ್ಲ ನನಗೆ ಗೊತ್ತಾಗಲಿಲ್ಲ."

"ಬೇಕೂಂತ ಹಾಗೆ ಹೇಳ್ತೀಯ, ಅಪ್ಪ. ನಿನಗೆ ಗೊತ್ತಿಲ್ಲದೆ ಏನು. ಅವನು ಯಾರು, ಏನು ಅಂತ ಹೇಳಪ್ಪ."

"ಅಯ್ಯೋ ದೇವರೇ. ಅವನು ಯಾರು? ಅವನು ಯಾರು? ಅಂತ ಒಂದೇ ಸಮನೆ ಹೊಡಕೋತೀಯಲ್ಲ. ಅವನು ಕಿರೀಟಧಾರಿ ಸಾರ್ವಭೌಮ ಅಂತ ತಿಳಿದುಕೋ ಬೇಕಾದರೆ."

"ಕಿರೀಟಧಾರಿ ಅಂದರೆ ಏನು?"

ತಂದೆ ಪಾವಲಿಕನನ್ನು ಕಠಿಣ ದೃಷ್ಟಿಯಿಂದ ನೋಡಿದರು. "ಏನೋ ಅದು?"

"ಅವನು ಕಿರೀಟಧಾರಿ ಅಂದೆಯಲ್ಲಪ್ಪ, ಅದು ಏನು, ಅವನಿಗೆ ಯಾಕೆ ಆ ಹೆಸರು ಬಂತು?"

"ಎಲ್ಲೋ ತಲೆಹರಟೆ. ಸುಮ್ಮನೆ ಕೂತುಕೋ." ಎಂದು ತಂದೆ ಗದರಿಸಿ ಕೋಪದಿಂದ ಮುಖ ತಿರುಗಿಸಿಕೊಂಡರು.

೪. ಬಾವಿಯ ಬಳಿಯಲ್ಲಿ

ಬೆಳಗ್ಗೆ ಸುಮಾರು ಹತ್ತುಗಂಟೆಯ ಸಮಯದಲ್ಲಿ ಅವರು ಕುದುರೆಗಳಿಗೆ ನೀರು ಕುಡಿಸುವುದಕ್ಕಾಗಿ ಒಂದು ಅರ್ಧ ಮಾಲ್ಡೇವಿಯನ್ ಮತ್ತು ಅರ್ಧ ಯುಕ್ರೇನಿಯನ್ ಹಳ್ಳಿಯ ಬಳಿ ನಿಂತರು.

ತಂದೆ ಪಾವಲಿಕನ ಕೈಯ್ಯನ್ನು ಹಿಡಿದುಕೊಂಡು ಕರಬೂಜದ ಹಣ್ಣುಗಳನ್ನು ಕೊಂಡುಕೊಂಡು ಬರುವುದಕ್ಕಾಗಿ ಹಳ್ಳಿಯೊಳಕ್ಕೆ ಹೋದರು. ಪೇತ್ಯ ಕುದುರೆಗಳ ಬಳಿನಿಂತ. ಅವುಗಳಿಗೆ ನೀರು ಕುಡಿಸುವುದನ್ನು ನೋಡುವುದರಲ್ಲಿ ಅವನಿಗೆ ಆಸಕ್ತಿ.

ಆ ಭಾರವಾದ ಗಾಡಿಯನ್ನು ಎಳೆದುಕೊಂಡು ಬಂದಿದ್ದ ಕುದುರೆಗಳನ್ನು ಬಾವಿಯ ಬಳಿಗೆ ಸಾರಥಿ ಹಿಡಿದುಕೊಂಡು ಹೋದ. ಅದು "ಏತದ ಬಾವಿ"ಯ ಜಾತಿಗೆ ಸೇರಿದುದು.

ಸಾರಥಿಯು ಚಾವಟಿಯನ್ನು ತನ್ನ ಬೂಡ್ಸಿನ ತುದಿಗೆ ಸಿಕ್ಕಿಸಿಕೊಂಡ. ಬಾವಿಯ ಮೇಲು ಭಾಗದಲ್ಲಿ ನೆಟ್ಟಗೆ ಇಳಿಬಿದ್ದಿದ್ದ ಉದ್ದನೆಯ ಗಳುವನ್ನು ಹಿಡಿದುಕೊಂಡ. ಒಂದು ಭಾರವಾದ ಮರದ ತೊಟ್ಟಿಯನ್ನು ಸರಪಣಿಯಿಂದ ಆ ಗಳುವಿನ ತುದಿಗೆ ಕಟ್ಟಿದ. ಎರಡು ಕೈಗಳಿಂದಲೂ ಆ ಗಳುವನ್ನು ಕೆಳಕ್ಕೆ ಎಳೆಯುತ್ತ ತೊಟ್ಟಿಯನ್ನು ಬಾವಿಯೊಳಕ್ಕೆ ಇಳಿಸಿದ. ಆಗ ಏತದ ಮರವು ಕಿರುಗುಟ್ಟಿತು. ಏತದ ಮರದ ಮೇಲಿನ ತುದಿಯು ಬಾವಿಯೊಳಕ್ಕೆ ಇಣಿಕಿ ನೋಡಲು ಪ್ರಯತ್ನಿಸುತ್ತಿದೆಯೋ ಎಂಬಂತೆ ಬಗ್ಗಿತು. ನೀರಿನ ತೊಟ್ಟಿಯ ಭಾರವನ್ನು ಸರಿದೂಗಿಸಲು ಅದರ ಇನ್ನೊಂದು ತುದಿಗೆ ಒಂದು ದೊಡ್ಡ ಕಲ್ಲನ್ನು ಸೇರಿಸಿ ಕಟ್ಟಲಾಗಿತ್ತು. ಅದು ನಿಧಾನವಾಗಿ ಮೇಲಕ್ಕೆ ಹೋಗುತ್ತಿತ್ತು.

ಪೇತ್ಯ ಬಾವಿಯ ಕಟ್ಟೆಯ ಮೇಲೆ ಮಲಗಿಕೊಂಡು ಬಗ್ಗಿ ದುರ್ಬೀನಿನಲ್ಲಿ ಕಣ್ಣಿಟ್ಟು ನೋಡುವಂತೆ ಬಾವಿಯೊಳಕ್ಕೆ ತಲೆಯನ್ನು ಹಾಕಿದ.

ಬಾವಿಯು ದುಂಡಾಗಿತ್ತು; ಮೇಲಿನಿಂದ ಕೆಳಕ್ಕೆ ಪಾತಾಳದವರೆಗೆ ಹೋಗಿತ್ತು, ಬಾವಿಯ ಒಳ ದಡದಲ್ಲಿ ಸುತ್ತ ಇದ್ದ ಕಲ್ಲಿನ ಕಟ್ಟಡದ ಮೇಲೆ ಮಖಮಲ್ಲಿನಂತೆ ನಯವಾದ ಪಾಚಿ ಕಟ್ಟಿತ್ತು. ಬಾವಿಯ ತಳದ ಶೀತ ಕೃಷ್ಣಛಾಯೆಯಲ್ಲಿ ಸಣ್ಣ ನೀರಿನ ವೃತ್ತವು ಮಿನುಗುತ್ತಿತ್ತು. ಪೇತ್ಯನ ಟೋಪಿಯ ಪ್ರತಿಬಿಂಬವು ಛಾಯಾ ಚಿತ್ರದಂತೆ ಸ್ಪಷ್ಟವಾಗಿ ಆ ನೀರಿನಲ್ಲಿ ಕಾಣಿಸಿತು.

ಪೇತ್ಯ ಕೂಗುಹಾಕಿದ, ಗುಡಾಣದೊಳಗಿನಿಂದ ಬರುವಂತೆ ಪ್ರತಿಧ್ವನಿಯು ಬಾವಿಯನ್ನು ತುಂಬಿಕೊಂಡು ಬಂದಿತು.

ಆ ನೀರಿನ ತೊಟ್ಟಿಯು ಕೆಳಕೆಳಕ್ಕೆ ಹೋಗುತ್ತಲೇ ಇತ್ತು. ಅದು ಮೇಲಿನಿಂದ ನೋಡುವ ಕಣ್ಣಿಗೆ ಪುಟ್ಟದಾಗಿ ಕಾಣಿಸಲಾರಂಭಿಸಿದರೂ ಕೂಡ ನೀರನ್ನು ಮುಟ್ಟಿರಲಿಲ್ಲ. ಕೊನೆಗೆ ಫಳೀರನೆ ನೀರಿಗೆ ಅಪ್ಪಳಿಸಿದ ಒಂದು ದುರ್ಬಲವಾದ ಶಬ್ದ ಕೇಳಿಬಂದಿತು. ತೊಟ್ಟಿ ನೀರಿನಲ್ಲಿ ಮುಳುಗಿ ಗುಳುಗುಳು ಶಬ್ದಮಾಡಿದ ಬಳಿಕ ಮೇಲಕ್ಕೆ ಬರಲಾರಂಭಿಸಿತು. ತೊಟ್ಟಿಯ ನೀರು ತುಳುಕಿದಾಗ ಟಪ್ ಟಪ್ ಎಂದು ಕಾಗದದ ಪೊಟ್ಟಣಗಳನ್ನು ಒಡೆದಾಗ ಆಗುವಂತೆ ಶಬ್ದವಾಗುತ್ತಿತ್ತು.

ಅಸಂಖ್ಯಾತ ಜನರು ಕೈಯಾಡಿಸಿದ್ದರಿಂದ ಗಾಜಿನಂತೆ ನುಣುಪಾಗಿ ಹೊಳೆಯುತ್ತಿದ್ದ

ಆ ಗಳುವು ಮೇಲಕ್ಕೆ ಬರಲು ದೀರ್ಘಕಾಲವನ್ನು ತೆಗೆದುಕೊಂಡಿತು. ಕೊನೆಗೊಂದುಸಲ ಒದ್ದೆಯಾದ ಸರಪಣಿಯು ಕಾಣಿಸಿಕೊಂಡಿತು. ಕೊನೆಯ ಬಾರಿಗೆ ಏತದ ಮರವು ಕಿರುಗುಟ್ಟಿತು. ಸಾರಥಿಯು ತನ್ನ ಗಟ್ಟಿಮುಟ್ಟಾದ ಕೈಗಳಿಂದ ನೀರು ತುಂಬಿ ಭಾರವಾಗಿದ್ದ ಆ ತೊಟ್ಟಿಯನ್ನು ಹಿಡಿದು ಎಳೆದುಕೊಂಡ. ಬಳಿಕ ಅದರ ನೀರನ್ನು ಹರಿದೋಣಿಗೆ ಸುರಿದ.

ಆದರೆ ಅವನು ಮೊದಲು ಮಾಡಿದ ಕೆಲಸವೆಂದರೆ ತಾನು ನೀರು ಕುಡಿಯಲು ಆ ತೊಟ್ಟಿಯನ್ನೇ ಮೇಲಕ್ಕೆತ್ತಿ ಅದಕ್ಕೆ ಬಾಯಿ ಕೊಟ್ಟುದು. ಗಾಡಿಯವನು ನೀರು ಕುಡಿದ ಅನಂತರ ಪೇತ್ಯನೂ ಅದೇ ರೀತಿ ನೀರನ್ನು ಕುಡಿದ. ಕುದುರೆಗಳಿಗೆ ನೀರು ಕುಡಿಸುವ ಆ ಕಾರ್ಯಕ್ರಮದಲ್ಲಿ ಇದು ಅತ್ಯಂತ ರೋಮಾಂಚಕಾರಿಯಾದ ಅನುಭವ. ಬಾವಿಯ ನೀರು ತುಂಬ ತಿಳಿಯಾಗಿಯೂ ಮಂಜುಗಡ್ಡೆಯಷ್ಟು ಶೀತಳವಾಗಿಯೂ ಇದ್ದಿತು. ಪೇತ್ಯ ತನ್ನ ಮೂಗನ್ನೂ ಗದ್ದವನ್ನೂ ನೀರಿನೊಳಕ್ಕೆ ಅದ್ದಿದ. ನೀರಿನ ತೊಟ್ಟಿಯ ಒಳಭಾಗಕ್ಕೆ ಒಂದು ರೀತಿಯ ಹಸುರು ಅಂಟು ಬಣ್ಣವನ್ನು ಬಳಿದಿತ್ತು. ಮರದ ತೊಟ್ಟಿ ಮತ್ತು ಅದರ ಹಸುರು ಬಣ್ಣ-ಇವೆರಡೂ ಸೇರಿ ಒಂದು ಅಲೌಕಿಕ ಆಕರ್ಷಣೆಯನ್ನುಂಟುಮಾಡುತ್ತಿದ್ದುವು. ಅವು ಯಾವುದೋ ಒಂದು ಗತಕಾಲದ ಪ್ರಾಚೀನತೆಯನ್ನು ನೆನಪಿಗೆ ತರುತ್ತಿದ್ದುವು; ಪ್ರಾಯ: ಒಂದು ಸುಂದರ ಕಾನನದ ಸ್ಮರಣೆಯನ್ನುಂಟುಮಾಡುತ್ತಿದ್ದುವು. ರಷ್ಯಾ ದೇಶದ ಅದ್ಭುತರಮ್ಯ ಕಥೆಗಳಲ್ಲಿ ಬರುವ ಹಿಟ್ಟು ಬೀಸುವ ಮರದ ಯಂತ್ರ, ಅದರ ಮಾಟಗಾರ ಯಜಮಾನ, ಅಲ್ಲಿಯ ನೀರಿನ ಕೊಳ ಮತ್ತು ಅದರಲ್ಲಿ ವಾಸಿಸುತ್ತಿದ್ದ ಕಪ್ಪೆರಾಣಿ—ಈ ಚಿತ್ರಗಳು ಮನಸ್ಸಿನ ಪರದೆಯ ಮೇಲೆ ಮಾಯವಾಗುತ್ತಿದ್ದುವು.

ಆ ಕೊರೆಯುವ ನೀರಿನಿಂದ ಪೇತ್ಯನ ಹಣೆ ನೋಯಲಾರಂಭಿಸಿತು. ಆದರೆ ಅದು ಬಿಸಿಲುಕಾಲವಾದುದರಿಂದ ಆ ನೋವು ಬೇಗ ಮಾಯವಾಗುವುದೆಂದು ಅವನು ಧೈರ್ಯವಾಗಿದ್ದ.

ಕುದುರೆಗಳಿಗೆ ಕುಡಿಸಲು ಎಂಟು ಹತ್ತು ತೊಟ್ಟಿಗಳಷ್ಟಾದರೂ ನೀರು ಬೇಕಾಗುವುದೆಂಬ ಅಂಶ ಪೇತ್ಯನಿಗೆ ಚೆನ್ನಾಗಿ ಗೊತ್ತಿತ್ತು. ಕೊನೆಯ ಪಕ್ಷ ನೀರು ಕುಡಿಸುವುದಕ್ಕೆ ಅರ್ಧ ಗಂಟೆಯಷ್ಟು ಕಾಲವಾದರೂ ಆಗುತ್ತಿತ್ತು ಎಂಬುದು ಖಂಡಿತ. ಹಾಗೆಯೇ ಕೊಂಚ ಅಡ್ಡಾಡಿಕೊಂಡು ಬರುವಷ್ಟು ಸಮಯವಿತ್ತು.

ಪೇತ್ಯ ನೀರಿನ ಹರಿದೋಣಿಯ ಬಳಿಯ ದಾರಿಯನ್ನು ಹಿಡಿದು ಜಾಗರೂಕತೆಯಿಂದ ಹೆಜ್ಜೆಯಿಡಲಾರಂಭಿಸಿದ. ಅಲ್ಲಿಯ ಮಣ್ಣು ಪಾದರಕ್ಷೆಗೆ ಹಾಕುವ ಬಣ್ಣದಂತೆ ಕಪ್ಪಗಿತ್ತು. ನೆಲದಲ್ಲಿ ಹಂದಿಗಳ ಕಾಲು ಹೆಜ್ಜೆಯ ಗುರುತುಗಳು ಕಾಣಿಸುತ್ತಿದ್ದುವು. ಅಲ್ಲಿಂದ ಅವನು ಒಂದು ಹುಲ್ಲುಮಾಳದ ಮೂಲಕ ಹಾದು ಚರಂಡಿಯನ್ನು ಹಿಂಬಾಲಿಸುತ್ತ ಹೋದ. ಆ ದಾರಿಯಲ್ಲಿ ಅಲ್ಲಲ್ಲಿ ಬಾತುಕೋಳಿಗಳು ಸಂಚರಿಸುತ್ತಿದ್ದುವು.

ಎತ್ತರವಾಗಿ ಬೆಳೆದಿದ್ದ ಜೊಂಡು, ಜೇಣಿ ಹುಲ್ಲು ಮತ್ತು ಕಳೆಗಳ ವನವಿದ್ದ ಒಂದು ಜೌಗು ಪ್ರದೇಶಕ್ಕೆ ಚರಂಡಿಯು ಅವನನ್ನು ಕರೆದೊಯ್ದಿತು. ಸೂರ್ಯನು ನೆತ್ತಿಯ ಮೇಲೇರಿ ಪ್ರಕಾಶಮಾನವಾಗಿ ಹೊಳೆಯುತ್ತಿರುವಾಗಲೂ ತಂಪಾದ ನಸು ಬೆಳಗಿನ ರಾಜ್ಯವೇ ಅಲ್ಲಿ ವಿರಾಜಿಸುತ್ತಿತ್ತು. ಪೇತ್ಯನ ಮೂಗಿನ ಸೆಲೆ ಒಡೆಯುವಂತೆ ತೀಕ್ಷ್ಣವಾದ ವಾಸನೆ ಹೊಡೆಯಿತು.

ತಲೆಬೇನೆ ಗಿಡಗಳ ಮಧುರವಾದ ಹಾಗೂ ಹಿತಕರವಾದ ವಾಸನೆ ಬೆರೆತ ಜೇಣಿ ಹುಲ್ಲಿನ ತೀವ್ರ ಗಂಧವು ನಿಜವಾಗಿಯೂ ತಲೆ ನೋವನ್ನೇ ಬರಿಸಿತು.

ಆ ಗಿಡಗಳಲ್ಲಿ ಚೂಪಾದ ಎಲೆಗಳೂ, ದಪ್ಪ ಮುಳ್ಳುಗಳಿಂದ ತುಂಬಿದ ಹತ್ತಿಯಕಾಯಿಗಳಂಥ ಕಪ್ಪುಹಸುರಿನ ಕಾಯಿಗಳೂ ಇದ್ದುವು; ಅಲ್ಲದೆ ಬಹು ಕೋಮಲವಾಗಿಯೂ ಅತಿ ಬಿಳುಪಾಗಿಯೂ ಇದ್ದ ಉದ್ದವಾದ ವಾಸನೆಯ ಹೂವುಗಳೂ ಇದ್ದುವು. ಅವುಗಳ ಬಳಿ ಕೆಲವು ವಿಷಜಾತಿಯ ಗಿಡಗಳು ಬೆಳೆದು ನಿಂತಿದ್ದುವು.

ದಾರಿಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡ ದೊಡ್ಡ ಕಪ್ಪೆಯೊಂದು ಕುಳಿತಿತ್ತು. ಕಪ್ಪೆಯನ್ನು ನೋಡುವುದಿಲ್ಲವೆಂದು ಪೇತ್ಯ ತನ್ನ ಕೈಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರಯತ್ನ ಮಾಡಿದ. ಅದರ ತಲೆಯ ಮೇಲೆ ಯಕ್ಷಿಣಿ ಕಥೆಗಳಲ್ಲಿ ಬರುವಂಥ ಒಂದು ಚಿನ್ನದ ಕಿರೀಟವೆಲ್ಲಿ ಕಾಣಿಸಿಬಿಡುವುದೋ ಎಂಬ ದಿಗಿಲು ಅವನಿಗೆ.

ಅದ್ಭುತರಮ್ಯ ಕಥೆಗಳಲ್ಲಿ ಬರುವಂಥ ವನಗಳಂತೆ ಆ ಇಡೀ ಸನ್ನಿವೇಶವು ಪೇತ್ಯನಿಗೆ ಗೋಚರವಾಯಿತು. ಆ ಸ್ಥಳವನ್ನು ಯಾವುದೋ ಯಕ್ಷಿಣಿ ಆವರಿಸಿದ್ದಂತೆ ಅನಿಸಿತು ಅವನಿಗೆ. ಅಲ್ಲೇ ಎಲ್ಲೋ ಹತ್ತಿರದಲ್ಲಿ ಕೋಮಲಾಂಗಿಯೂ ವಿಶಾಲಾಕ್ಷಿಯೂ ಆದ ಅಲಿನುಷ್ಕ ತನ್ನ ಸಹೋದರ ಇವಾನುಷ್ಕನಿಗಾಗಿ ಗಟ್ಟಿಯಾಗಿ ಅಳುತ್ತ ಅಲೆಯುತ್ತಿರಬೇಕಲ್ಲವೇ! ಒಂದು ಪೊದೆಯೊಳಗಿನಿಂದ ಪುಟ್ಟ ಬಿಳಿಯ ಕುರಿಮರಿಯೊಂದು ಹೊರಕ್ಕೆ ಓಡಿಬಂದು ಸಣಕಲು ಸ್ವರದಲ್ಲಿ 'ಬ್ಯಾ ಬ್ಯಾ' ಎಂದು ಕೂಗಿದ್ದಿದ್ದರೆ ಪೇತ್ಯನಿಗೆ ಹುಚ್ಚು ಹಿಡಿಯುವಷ್ಟು ಹೆದರಿಕೆಯಾಗುತ್ತಿದ್ದಿತೆಂಬುದರಲ್ಲಿ ಸಂಶಯವಿರಲಿಲ್ಲ. ಆ ಹುಡುಗ ಪುಟ್ಟ ಕುರಿಮರಿಯ ವಿಷಯವನ್ನು ಯೋಚಿಸಬಾರದೆಂದು ನಿರ್ಧರಿಸಿದ. ಆದರೆ ಆ ಆಲೋಚನೆಗಳನ್ನು ಹೊರಗಟ್ಟಲು ಅವನು ಪ್ರಯತ್ನಪಟ್ಟಷ್ಟೂ ಅವು ತಂಡತಂಡವಾಗಿ ಅವನ ಮನಸ್ಸಿಗೆ ನುಗ್ಗುತ್ತಿದ್ದುವು. ಅವನು ತನ್ನ ಮನಸ್ಸನ್ನು ತಡೆಗಟ್ಟಲು ಪ್ರಯತ್ನ ಪಟ್ಟಷ್ಟೂ ಆ ಕಡು ಹಗಲಿನ ಮಾಯಾ ಜಗತ್ತಿನಲ್ಲಿ ಏಕಾಂಗಿಯಾಗಿರಲು ನಡುಕ ಹುಟ್ಟುತ್ತಿತ್ತು. ತಾನು ಕಿರಿಚಿಕೊಳ್ಳದೆ ಇರಬೇಕೆಂಬ ಉದ್ದೇಶದಿಂದ ದೃಷ್ಟಿಯನ್ನು ಒಂದೇ ದಿಕ್ಕಿಗೆ ಮಾಡಿಕೊಂಡು ಕಿರುಗಣ್ಣಿನಿಂದ ದಾರಿ ನೋಡುತ್ತ ಆ ವಿಷಜಾತಿಯ ಸಸ್ಯವರ್ಗಗಳ ಸ್ಥಳದಿಂದ ಒಂದೇ ಉಸಿರಿಗೆ ಪಲಾಯನಮಾಡಿದ. ಒಂದು ಚಿಕ್ಕ ರೈತನ ಮನೆಯ ಹಿತ್ತಿಲು ಕಡೆ ಬಂದಾಗಲೇ ಅವನು ನಿಂತದ್ದು.

ಅಲ್ಲಿ ಒಂದು ತಡಿಕೆ ಬೇಲಿಯಿತ್ತು. ಆ ಬೇಲಿಯ ದಸಿಗಳ ಮೇಲೆ ಉದ್ದಕ್ಕೂ ಜೇಡಿಮಣ್ಣಿನ ಪಾತ್ರೆಗಳನ್ನು ಪ್ರದರ್ಶನಕ್ಕೆ ಇಡುವಂತೆ ತೂಗು ಹಾಕಲಾಗಿತ್ತು. ಆ ಒಕ್ಕಲಿಗನ ಮನೆಯ ಹಿತ್ತಿಲಿನಲ್ಲಿ ಮನೋಹರವಾದ ಸಣ್ಣದಾದೊಂದು ಕಣವನ್ನು ಪೇತ್ಯ ಕಂಡ. ಹೊಲದಿಂದ ಆಗತಾನೆ ಹೊಸದಾಗಿ ಬಂದಿದ್ದ ಗೋದಿಯನ್ನು ಆ ಚಿಕ್ಕ ಕಣದಲ್ಲಿ ಹರಡಿತ್ತು. ಉದ್ದವಾದ ನೆರಿಗೆಯ ಲಂಗವನ್ನುಟ್ಟ ಸುಮಾರು ಹನ್ನೊಂದು ವರ್ಷ ವಯಸ್ಸಿನ ಹುಡುಗಿಯೊಬ್ಬಳು ಅದರ ಮಧ್ಯೆ ನಿಂತಿದ್ದಳು. ಅವಳು ಚೀಟಿ ಬಟ್ಟೆಯ ಉಬ್ಬಿದ ತೋಳಿನ ರವಿಕೆಯನ್ನು ತೊಟ್ಟು ಕಣ್ಣುಗಳವರೆಗೂ ಬರುವಂತೆ ಒಂದು ಕರವಸ್ತ್ರವನ್ನು ಕಟ್ಟಿಕೊಂಡಿದ್ದಳು. ಸೂರ್ಯನ ಕಿರಣಗಳು ತನ್ನ ಕಣ್ಣಿಗೆ ಬೀಳದಂತೆ ತನ್ನ ಮೊಣಕೈಗಳನ್ನು ಮರೆಮಾಡಿಕೊಂಡಿದ್ದಳು. ಒಂದರ ಮುಂದೆ ಒಂದರಂತೆ ಕಟ್ಟಿದ್ದ ಎರಡು ಕುದುರೆಗಳ ಹಗ್ಗವನ್ನು ಕೈಲಿ ಹಿಡಿದುಕೊಂಡು ಅವಳು ಕಣದ ಕಂಬದ ಸುತ್ತ ಚಕ್ರಾಕಾರವಾಗಿ ಅವುಗಳನ್ನು ಸುತ್ತಿಸುತ್ತ ಬರಿಗಾಲುಗಳನ್ನು ಎತ್ತಿಟ್ಟುಕೊಂಡು ಅವುಗಳ ಹಿಂದೆ ಹಿಂದೆ ಹೋಗುತ್ತಿದ್ದಳು. ಕಣದಲ್ಲಿ ಹರಡಿದ್ದ ಗೋಧಿಯು ಹೊಳೆಹೊಳೆಯುತ್ತಿತ್ತು. ಆ

ಗೋಧಿಯ ಹರವಿನ ಮೇಲೆ ಉರುಳುಗಲ್ಲನ್ನು ಎಳೆಯುತ್ತ ಕುದುರೆಗಳು ತಮ್ಮ ಗೊರಸುಗಳಿಂದ ಹುಲ್ಲನ್ನು ಸ್ವಲ್ಪ ಸ್ವಲ್ಪವಾಗಿ ಚದುರಿಸುತ್ತ ಹೆಜ್ಜೆ ಹಾಕುತ್ತಿದ್ದುವು. ಭಾರವಾದ ಉರುಳುಗಲ್ಲು ಗೋಧಿಯ ಮೇಲೆ ಪುಟನೆಗೆಯುತ್ತಿದ್ದರೂ ಶಬ್ದ ಮಾಡುತ್ತಿರಲಿಲ್ಲ.

ಮಂಜಿನ ಮೇಲೆ ಜಾರುವ ಆಟವನ್ನು ಆಡಲು ಉಪಯೋಗಿಸುವ ಜಾರುಮರದಂತೆ ಮುಂದುಗಡೆಗೆ ಬಗ್ಗಿಸಿದ್ದ ಒಂದು ಅಗಲವಾದ ಹಲಗೆಯನ್ನು ಉರುಳುಗಲ್ಲು ತನ್ನ ಹಿಂದೆ ಎಳೆದುಕೊಂಡು ಬರುತ್ತಿತ್ತು. ಹಲಗೆಯ ತಳಭಾಗದಲ್ಲಿ ಹರಿತವಾದ ಗಚ್ಚುಕಲ್ಲಿನ ಮುಳ್ಳುಗಳನ್ನು ಮೆಟ್ಟಿತ್ತು. ಆ ಕಲ್ಲುಗಳು ತೆನೆಯಿಂದ ಕಾಳುಗಳನ್ನು ಬಿಡಿಸಿ ಬೇರೆಮಾಡುವ ಕೆಲಸವನ್ನು ಸೊಗಸಾಗಿ ಮಾಡುತ್ತಿದ್ದವು. ಹಲಗೆ ವೇಗವಾಗಿ ಜಾರಿಕೊಂಡು ಹೋಗುತ್ತಿತ್ತು. ಅದರ ಮೇಲೆ ಪೇತ್ಯನ ವಯಸ್ಸಿನ ಒಬ್ಬ ಹುಡುಗ ನಿಂತಿದ್ದ. ಅವನು ಮಾಸಲು ಬಣ್ಣದ ಷರಟನ್ನು ಹಾಕಿಕೊಂಡಿದ್ದ. ತಲೆಯ ಮೇಲಿನ ಟೋಪಿ ಕಿವಿಯವರೆಗೂ ಬಂದಿತ್ತು. ಕೆಳಕ್ಕೆ ಬೀಳದಂತೆ ಸಮತೂಕದಲ್ಲಿ ನಿಲ್ಲಲು ಅವನು ಶ್ರಮಿಸುತ್ತಿದ್ದ. ಅದನ್ನು ಅವನು ಒಂದು ಸಾಹಸಕಾರ್ಯ ಮಾಡುವವನಂತೆ ಭಾವಿಸಿದ್ದ. ಜಾರುಬಂಡಿಯಲ್ಲಿ ಮಂಜುಮುಚ್ಚಿದ್ದ ಬೆಟ್ಟದ ಮೇಲಿನಿಂದ ಕೆಳಕ್ಕೆ ರಭಸದಿಂದ ಬರುವಂತೆ ಅವನು ತಿಳಿದುಕೊಂಡಿದ್ದನೇನೋ!

ಅವನ ಕಾಲಬಳಿ ಸುಂದರವಾದ ಕೂದಲಿನ ಪುಟ್ಟ ಹುಡುಗಿಯು ಪದ್ಮಾಸನ ಹಾಕಿ ಇಲಿಯಂತೆ ಮೈಯನ್ನು ಚಿಕ್ಕದು ಮಾಡಿಕೊಂಡು ಕುಳಿತಿದ್ದಳು. ತನ್ನ ಎರಡು ಕೈಗಳಿಂದಲೂ ಅಣ್ಣನ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದಳು. ಅವಳ ಕೈಗಳು ನಡುಗುತ್ತಿದ್ದವು.

ಕುದುರೆಗಳು ಸುತ್ತುತ್ತಿದ್ದ ಚಕ್ರಾಕಾರವಾದ ದಾರಿಯ ಸುತ್ತ ಮರದ ಕವೆಗೋಲಿನಿಂದ ಗೋಧಿಯನ್ನು ಮಗುಚಿಹಾಕುತ್ತ ಕುದುರೆಗಳ ಕಾಲುಗಳ ಅಡಿಗೆ ಹೋಗುವಂತೆ ಒಬ್ಬ ಮುದುಕ ತಳ್ಳುತ್ತಿದ್ದ. ಆ ವೃತ್ತಾಕಾರವಾದ ಗೋಧಿಯ ಹರಹು ಆಗಾಗ್ಗೆ ವಿಸ್ತಾರವಾಗುತ್ತಿದ್ದಿತು. ಒಬ್ಬಳು ಮುದುಕಿ ಅದನ್ನು ಸನಿಕೆಯಿಂದ ಸರಿಪಡಿಸುತ್ತಿದ್ದಳು.

ಸೂರ್ಯನಿಂದ ಸುಟ್ಟ ಕಪ್ಪು ಚರ್ಮದ ಹೆಂಗಸೊಬ್ಬಳು ಸ್ವಲ್ಪ ದೂರದಲ್ಲಿದ್ದ ಬಣಿವೆಯ ಹತ್ತಿರ ತೂರುಯಂತ್ರದ ಹಿಡಿಯನ್ನು ತಂಬೂರಿಯನ್ನು ಹಿಡಿಯುವಷ್ಟು ಸರಾಗವಾಗಿ ಹಿಡಿದು ನಿಂತುಕೊಂಡು ಕೆಲಸಮಾಡುತ್ತಿದ್ದಳು. ಗಂಡಸಿನ ಕೈಗಳಂತೆ ಅವಳ ಕೈಗಳಲ್ಲಿ ನರಗಳು ಉಡಿದುಕೊಂಡಿದ್ದುವು. ಆ ಯಂತ್ರದಲ್ಲಿನ ಕೆಂಪು ಅಲಗುಗಳು ಹೊಳೆಯುತ್ತಿದ್ದುವು. ಆ ತೂರುವ ಯಂತ್ರದಿಂದ ಹೊರಬಂದ ಹೊಟ್ಟಿನ ಹೊಳೆಯುವ ಮೋಡವನ್ನು ಗಾಳಿ ಹೊಡೆದುಕೊಂಡು ಹೋಗುತ್ತಿದ್ದಿತು. ಗಾಳಿಯಲ್ಲಿ ಹಾರುವಂಥ ತೆಳ್ಳನೆಯ ಮಸ್ಲಿನ್ ಬಟ್ಟೆಯಂತೆ ಹೊಟ್ಟಿನ ಧೂಳು ಎತ್ತರವಾದ ಕಳೆಗಳ ಮೇಲೂ ನೆಲದಮೇಲೂ ಹರಡಿತು. ಅಲ್ಲಿಂದ ಹೊರಟ ಹೊಟ್ಟಿನ ಕಣಗಳ ತಂಡವು ಹತ್ತಿರದ ತರಕಾರಿ ತೋಟವನ್ನು ಪ್ರವೇಶಿಸಿತು. ಅಲ್ಲಿ ಒಂದು ಬೆದರುಗೊಂಬೆ ನಿಂತಿತ್ತು. ಆ ಗೊಂಬೆಯ ತಲೆಗೆ ಕೆಂಪು ಪಟ್ಟಿಯ ಟೋಪಿಯನ್ನು ಹಾಕಿದ್ದರು. ಒಂದಾನೊಂದು ಕಾಲದಲ್ಲಿ ಆ ಟೋಪಿ ಶ್ರೀಮಂತರ ತಲೆಯನ್ನು ಅಲಂಕರಿಸಿತ್ತಾದರೂ ಅದು ಈಗ ಹರಿದಿದ್ದರೆ ಆಶ್ಚರ್ಯವೇನಾಗಿರಲಿಲ್ಲ. ಗೊಂಬೆಗೆ ಹೊದಿಸಿದ್ದ ಹರುಕು ಚಿಂದಿ ಹಳದಿಗೆಂಪಿನ ಟೊಮಾಟೋ ಹಣ್ಣಿನ ಒಣಗಿದ ಎಲೆಗಳ ಮೇಲೆ ಹರಡಿತ್ತು.

ಪೇತ್ಯ ಕಂಡ ಈ ಚಿಕ್ಕ ಕಣದಲ್ಲಿ ಯಜಮಾನನೊಬ್ಬನನ್ನುಳಿದು ರೈತನ ಮನೆಯವರೆಲ್ಲರೂ

ಕೆಲಸಮಾಡುತ್ತಿದ್ದರು. ಆ ಮನೆಯ ಯಜಮಾನ ಆ ಸಮಯದಲ್ಲಿ ಮಂಚೂರಿಯಾದ ಯುದ್ಧಕ್ಕೆ ಹೋಗಿದ ನೆಂಬುದನ್ನು ಬೇರೆ ಹೇಳಬೇಕಾಗಿರಲಿಲ್ಲ. ಅದೇ ಹೊತ್ತಿನಲ್ಲಿ ಪ್ರಾಯ: ಅವನು ಉತ್ತರ ಚೀಣಾದ ಪರ್ವತದ ಬಳಿಯ ಹೊಲದಲ್ಲಿ ಅಡಗಿಕೊಂಡಿದ್ದಿರಬಹುದು ಮತ್ತು ಜಪಾನಿಯರು ಅವನ ಮೇಲೆ ಗುಂಡನ್ನು ಹಾರಿಸುತ್ತಿದ್ದಿರಬಹುದು.

ಆ ಭಾಗದ ಜನರು ಬಡವರಾದುದರಿಂದ ಅವರ ಕಣ ದೊಡ್ಡದಾಗಿರಲಿಲ್ಲ, ಅಲ್ಲಿ ಕೆಲಸ ಮಾಡುವ ಜನರೂ ಕಡಮೆ. ಬೇಸಿಗೆಯ ರಜದಲ್ಲಿ ಪೇತ್ಯ ವಾಸಿಸುತ್ತಿದ್ದ ಜಮೀನಿನ ಕಣದಲ್ಲಿ ಹೆಚ್ಚು ಜನರು ಭರದಿಂದ ಕೆಲಸಮಾಡುತ್ತಿದ್ದರು, ಅಲ್ಲಿ ಥಂಡಿಯಾಗಿ ಹುಲ್ಲಿನ ಬಣವೆಗಳಿರುತ್ತಿದ್ದುವು, ಗೋಧಿಯ ರಾಶಿ ಸುರಿದಿರುತ್ತಿದ್ದಿತು. ಆದರೆ ಈ ಚಿಕ್ಕ ಕಣದಲ್ಲಿ ಪೇತ್ಯ ಕಂಡ ಸರಳ ದೃಶ್ಯವು ಅವನಿಗೆ ಆಕರ್ಷಕವಾಗಿದ್ದಿತು. ಉರುಳುಗಲ್ಲಿನ ಹಿಂದೆ ಜಾರಿಕೊಂಡು ಹೋಗುತ್ತಿದ್ದ ಹಲಗೆಯ ಮೇಲೆ ಸವಾರಿ ಮಾಡಬೇಕೆಂಬ ಉತ್ಕಟೇಚ್ಛೆ ಪೇತ್ಯನಿಗಿದ್ದಿತು. ಅಥವಾ ಕೊನೆಯ ಪಕ್ಷ ಆ ತೂರುವಯಂತ್ರದ ಹಿಡಿಯನ್ನಾದರೂ ಒಮ್ಮೆ ಹಿಡಿದು ತಿರುಗಿಸಬೇಕೆಂಬ ಚಪಲ ಅವನಿಗೆ. ಬೇರೆ ಯಾವುದಾದರೂ ಸಮಯವಾಗಿದ್ದಿದ್ದರೆ ಆ ಹಲಗೆಯ ಮೇಲೆ ತನ್ನನ್ನು ಒಂದು ಕ್ಷಣ ನಿಲ್ಲಿಸಿಕೋ ಎಂದು ಆ ಹುಡುಗನನ್ನು ಕೇಳಿಕೊಳ್ಳದೆ ಇರುತ್ತಲೇ ಇರಲಿಲ್ಲ. ಆದರೆ ಅವನ ದುರದೃಷ್ಟ, ಅವನಿಗೆ ಗಾಡಿಯ ಬಳಿಗೆ ಹೋಗುವ ಆತುರ.

ಕೂಡಲೇ ಗಾಡಿಯ ಬಳಿಗೆ ಹಿಂದಿರುಗಿದ.

ಆ ಹುಲ್ಲಿನ ಮೆರುಗು, ಆ ಮಣ್ಣು ಜೋಪಡಿಯ ಸುಣ್ಣ ಬಳಿದ ಅಂದವಾದ ಗೋಡೆ, ಅಲ್ಲಿಯ ರೈತ ಹುಡುಗರ ಆಟದ ಸಾಮನುಗಳಾದ ಒಣಗಿಸಿದ ಚಿಕ್ಕ ಸೋರೆಬುರುಡೆಗಳು, ಚಿಂದಿ ಬಟ್ಟೆಯಿಂದ ಮಾಡಿದ ಬೊಂಬೆಗಳು, ಗುಡಿಸಿಲಿಗೆ ಹೊದಿಸಿದ್ದ ಜೊಂಡಿನ ಛಾವಣಿಯ ಬೆಂಗಟೆಯ ಮೇಲೆ ಗೂಡಿನ ಪಕ್ಕದಲ್ಲಿ ನಿಂತುಕೊಂಡಿದ್ದ ಬೆಳ್ಳಕ್ಕಿ—ರೈತನ ಮನೆಯ ಆವರಣದಲ್ಲಿ ಕಂಡ ಈ ಒಂದೊಂದೂ ಸರಳವಾದ ಹಾಗೂ ವಿವರವಾದ ಚಿತ್ರವನ್ನು ಪೇತ್ಯ ಎಂದೆಂದಿಗೂ ಮರೆಯುವಂತಿರಲಿಲ್ಲ.

ಒಂದು ಚಿತ್ರ ಮಾತ್ರ ಪೇತ್ಯನ ಮನಸ್ಸಿನಲ್ಲಿ ಬಹುಸ್ಪಷ್ಟವಾಗಿ ಬೇರೂರಿತು. ಆ ಬೆಳ್ಳಕ್ಕಿಯ ನಿಲುವು ಅವನನ್ನು ಮರುಳು ಮಾಡಿತ್ತು. ಬಿಗಿಯಾದ ತೋಳಿನ ಅಂಗಿಯನ್ನು ಹಾಕಿಕೊಂಡಂತಿದ್ದ ಅದರ ದೇಹ ಮತ್ತು ಒಂದು ಕಾಲನ್ನು ಬಗ್ಗಿಸಿಕೊಂಡು ನಿಂತದ್ದರಿಂದ ಕೆಂಪು ಬೆತ್ತದಂತೆ ಕಾಣಿಸುತ್ತಿದ್ದ ಅದರ ಒಂದೇ ಒಂದು ಕಾಲು, ಕುಟುಕುತ್ತಿದ್ದುದರಿಂದ ಟಕ್ ಟಕ್ ಎಂದು ಶಬ್ದಮಾಡುತ್ತಿದ್ದ ಅದರ ಉದ್ದವಾದ ಕೆಂಪು ಕೊಕ್ಕು—ಈ ಒಂದೊಂದೂ ಸುಸ್ಪಷ್ಟವಾಗಿ ಅವನ ಮನಸ್ಸಿನಲ್ಲಿ ಮೂಡಿತ್ತು.

"ಗ್ರಾಮಾಡಳಿತ ಕಚೇರಿ" ಎಂಬ ಹೆಸರಿನ ನೀಲಿಯ ಹಲಗೆಯನ್ನು ತಗಲುಹಾಕಿದ್ದ ಒಂದು ಮನೆಯ ಮುಂದುಗಡೆ ಕಂಬಗಳಿಗೆ ಮೂರು ಕುದುರೆಗಳನ್ನು ಕಟ್ಟಿಹಾಕಲಾಗಿತ್ತು. ಕುದುರೆಗಳಿಗೆ ಜೀನುಹಾಕಿ ಸಿದ್ಧಪಡಿಸಿ ನಿಲ್ಲಿಸಿದ್ದರು.

ಸೈನಿಕನೊಬ್ಬನು ಮೆಟ್ಟಲುಗಳ ಮೇಲೆ ನೆರಳಿನಲ್ಲಿ ಕುಳಿತು ನಾಡು ಹೊಗೆಸೊಪ್ಪನ್ನು ಕಾಗದದಲ್ಲಿ ಸುರುಳಿ ಸುತ್ತಿ ಮಾಡಿದ ಸಿಗರೇಟನ್ನು ಸೇದುತ್ತ ಕುಳಿತಿದ್ದ. ಅವನ ಬೂಡ್ಸುಗಳು ಕೊಳೆಯಾಗಿದ್ದವು ಮತ್ತು ಅವನ ಮೊಣಕಾಲುಗಳ ನಡುವೆ ಕತ್ತಿ ಹೊಳೆಯುತ್ತಿತ್ತು.

"ಅಲ್ರೀ, ನಿಮಗೆ ಇಲ್ಲಿ ಏನು ಕೆಲಸ?" ಎಂದು ಪೇತ್ಯ ಪ್ರಶ್ನಿಸಿದ.

ತಲೆಯಿಂದ ಕಾಲಿನವರೆಗೆ ಈ ಪೇಟೆಯ ಹುಡುಗನನ್ನು ಸೈನಿಕ ಸಾವಧಾನವಾಗಿ ಪರಿಶೀಲಿಸಿದ ಬಳಿಕ ತನ್ನ ಹಲ್ಲುಗಳ ಸಂದಿನಿಂದ ಹಳದಿ ಉಗುಳನ್ನು ಪಿಚಕಾರಿಯಂತೆ ಹೊರಕ್ಕೆ ಚಿಮ್ಮಿಸಿದ.

"ಒಬ್ಬ ನಾವಿಕನನ್ನು ಬೇಟೆಯಾಡುತ್ತಿದ್ದೇನೆ" ಎಂದು ಎಲ್ಲೋ ನೋಡುತ್ತ ಅಲಕ್ಷ್ಯದಿಂದ ನುಡಿದ.

ಸೈನಿಕರು ಬಹು ಪ್ರಯಾಸದಿಂದ ಶೋಧಿಸುತ್ತಿದ್ದರೂ ಕೈಗೆ ಸಿಕ್ಕದೆ ಸ್ಟೆಪ್ಪಿ ಹುಲ್ಲುಗಾವಲಿನಲ್ಲಿ ಇಲ್ಲೇ ಎಲ್ಲೋ ಅಡಗಿ ಕುಳಿತುಕೊಂಡಿದ್ದು ಹೊಲ ಮನೆಗಳಿಗೆ ಹೆಂಕಿ ಹಾಕುತ್ತ ಇರುವ ನಾವಿಕ ಎಂಥ ಭಯಂಕರ ರಹಸ್ಯ ವ್ಯಕ್ತಿಯೋ ಎಂದು ಆಶ್ಚರ್ಯಪಡುತ್ತ ಪೇತ್ಯ ಬಿಸಿಲಿನಿಂದ ಕಾದ ನಿರ್ಜನವಾದ ಬೀದಿಯಲ್ಲಿ ಹೆಜ್ಜೆ ಹಾಕುತ್ತಿದ್ದ. ಈ ಭಯಂಕರ ದಾರಿಗಳ್ಳ ಕುದುರೆ ಗಾಡಿಗಳನ್ನು ಮಾರ್ಗ ಮಧ್ಯದಲ್ಲಿ ಮುತ್ತಿದರೆ ಏನು ಗತಿ?

ಪೇತ್ಯ ತನ್ನ ಅಂಜಿಕೆಯನ್ನು ತಂದೆಗಾಗಲಿ ಪಾವಲಿಕನಿಗಾಗಲಿ ತಿಳಿಸಲಿಲ್ಲ. ಅವರಿಗೆ ಯಾಕೆ ಇಲ್ಲದ ಕ್ಲೇಶ! ಆದರೆ ತಾನು ಆ ದಾರಿಗಳ್ಳನ ಮೇಲೆ ಒಂದು ಕಣ್ಣಿಟ್ಟು ಜಾಗರೂಕನಾಗಿರಬೇಕೆಂದುಕೊಂಡ. ಮೊದಲೇ ಎಚ್ಚತ್ತುಕೊಳ್ಳುವುದೊಳ್ಳೆಯದೆಂದು ಯೋಚಿಸಿ ಕಳ್ಳನು ಬಂದರೆ ಅವನ ಕೈಗೆ ಸಿಕ್ಕದಂತೆ ತನ್ನ ನಿಧಿಯನ್ನು ಪೀಠದ ಅಡಿಯಲ್ಲಿ ಇನ್ನೂ ಹಿಂದಕ್ಕೆ ತಳ್ಳಿದ.

ಹಳ್ಳಿಯನ್ನು ಬಿಟ್ಟು ಕುದುರೆಗಾಡಿ ಗುಡ್ಡದ ಮೇಲಕ್ಕೆ ಹತ್ತಲಾರಂಭಿಸಿತೋ ಇಲ್ಲವೋ ಪೇತ್ಯ ತನ್ನ ಮುಖವನ್ನು ಕಿಟಕಿಗೆ ಸೇರಿಸಿ ಅಂಟಿಸಿದಂತೆ ಬಿಗಿಯಾಗಿಟ್ಟುಕೊಂಡ. ಆ ದಾರಿಗಳ್ಳ ಯಾವ ಕ್ಷಣದಲ್ಲಿ ಪಟಕ್ಕನೆ ಗಾಡಿಯೊಳಕ್ಕೆ ಬರುವನೋ ಎಂದು ಪ್ರತಿಯೊಂದು ತಿರುವನ್ನೂ ರಸ್ತೆಯ ಆಚೀಚೆಯನ್ನೂ ಕಾತರತೆಯಿಂದ ನೋಡುತ್ತಲಿದ್ದ. ಏನೇ ಬಂದರೂ ಪಟ್ಟಣ ಬರುವವರೆಗೂ ತನ್ನ ಆ ಸ್ಥಳವನ್ನು ಬಿಟ್ಟು ಕದಲಬಾರದೆಂದು ನಿರ್ಧರಿಸಿದ.

ಅಪಾಯದ ಅರಿವಿಲ್ಲದ ತಂದೆ ಮತ್ತು ಪಾವಲಿಕರು ಅದೇ ಸಮಯದಲ್ಲಿ ಕರಬೂಜದ ಹಣ್ಣಿನ ಸವಿಯಲ್ಲಿ ಮುಳುಗಿದ್ದರು. ಅನೇಕ ಸಾರಿ ಅಗಸನಿಗೆ ಹಾಕಿದ್ದುದರಿಂದ ಮಾಸಿದ್ದ ಮತ್ತು ನಾಲ್ಕು ಮೂಲೆಗಳಲ್ಲಿಯೂ ಸಣ್ಣ ಹೂಗೊಂಚಲಿನ ಕಸೂತಿ ಹಾಕಿದ್ದ ಒಂದು ಸಾಧಾರಣ ದಿಂಬು ಚೀಲದಲ್ಲಿ ಹತ್ತು ಹಣ್ಣುಗಳಿದ್ದುವು. ಅವುಗಳನ್ನು ಒಂದೊಂದು ಕೊಪೆಕ್ಕಿಗೆ ಒಂದರಂತೆ ಕೊಂಡು ತಂದಿದ್ದರು. ಮೇಲೆಲ್ಲ ಬಲೆಯಂತೆ ಗೆರೆಗಳಿದ್ದ ಬೂದಿಹಸಿರು ಬಣ್ಣದ ಒಂದು ಹಣ್ಣನ್ನು ತಂದೆ ಕೈಗೆ ತೆಗೆದುಕೊಂಡರು. "ಈಗ ನಾವು ಈ ಪ್ರಸಿದ್ಧವಾದ ಕರಬೂಜದ ಹಣ್ಣುಗಳನ್ನು ವಿಚಾರಿಸಿಕೊಳ್ಳೋಣ" ಎಂದು ಹೇಳುತ್ತ ಚಾಕುವಿನಿಂದ ಉದ್ದುದ್ದವಾಗಿ ಕತ್ತರಿಸಿದರು. ಹಣ್ಣನ್ನು ಪುಸ್ತಕವನ್ನು ಬಿಡಿಸುವಂತೆ ಬಿಡಿಸಿ ಅಚ್ಚುಗಳನ್ನು ಕೈಗೆ ತೆಗೆದುಕೊಂಡರು. ಹಣ್ಣಿನ ಹಿತಕರವಾದ ಕಂಪು ಗಾಡಿಯನ್ನೆಲ್ಲಾ ಆವರಿಸಿತು. ಒಳಗಿನ ಮೆತ್ತಗಿನ ಭಾಗವನ್ನು ಗುಂಡಗೆ ಚಾಕುವಿನಿಂದ ಕತ್ತರಿಸಿ ಅದನ್ನು ಕಿಟಕಿಯಿಂದಾಚೆ ಬಿಸಾಡಿದರು. ಅನಂತರ ಹಣ್ಣನ್ನು ತೆಳುವಾದ ಚೂರುಗಳನ್ನಾಗಿ ಕತ್ತರಿಸಿದರೋ ಇಲ್ಲವೋ ಎಲ್ಲರ ಬಾಯಲ್ಲೂ ನೀರೂರಿತು. "ತುಂಬ ರುಚಿಯಾಗಿರುವಂತಿದೆ" ಎಂದು ಟೀಕಿಸುತ್ತ ಮಡಿಯಾದ ಒಂದು ಕರವಸ್ತ್ರದ ಮೇಲೆ ಚೂರುಗಳನ್ನಿಟ್ಟರು.

ಹಣ್ಣಿನ ಮೇಲೆ ಕಣ್ಣಿಟ್ಟು ನೋಡುತ್ತಾ ಚಡಪಡಿಸುತ್ತಿದ್ದ ಪಾವಲಿಕನು ದಪ್ಪ ಚೂರೊಂದನ್ನು ಎರಡು ಕೈಗಳಿಂದಲೂ ಗಬಕ್ಕನೆ ತೆಗೆದುಕೊಂಡು ಬಾಯಿಗೆ ಕೊಟ್ಟ. ಹಣ್ಣಿನ ಅಂಚುಗಳು ಕಿವಿಗೆ ತಗಲುವುದನ್ನೂ ನೋಡದೆ ಬಾಯಿಯ ಒಳಕ್ಕೆ ತುರುಕಿಕೊಂಡ. ಕರಕರ ಎಂದು ಶಬ್ದ ಮಾಡುತ್ತಾ ತಿನ್ನುತ್ತಿರುವಾಗ ಹಣ್ಣಿನ ರಸ ಅವನ ಗದ್ದಕ್ಕೆ ಹರಿದು ತೊಟ್ಟಿಕ್ಕುತ್ತಿತ್ತು.

ತಂದೆ ಒಂದು ಸಣ್ಣ ಚೂರನ್ನು ಮಾತ್ರ ಬಾಯಲ್ಲಿ ಕಚ್ಚಿ, ರುಚಿನೋಡಿ ಕಣ್ಣು ಮುಚ್ಚಿಕೊಂಡು "ನಿಜವಾಗಿಯೂ ಸೊಗಸಾದ ಹಣ್ಣು" ಎಂದರು. "ಹುಂ, ಹುಂ", ಎಂದು ಪಾವಲಿಕ್ ಅನುಮೋದಿಸಿದ.

ಇದಿಷ್ಟೂ ತನ್ನ ಬೆನ್ನ ಹಿಂದೆ ನಡೆಯುತ್ತಿದ್ದರೆ ಪೇತ್ಯ ಎಷ್ಟುಹೊತ್ತು ಸಹಿಸಿಕೊಂಡು ಮನಸ್ಸನ್ನು ಬಿಗಿಹಿಡಿದು ಕುಳಿತಾನು! ಅಪಾಯದ ವಿಷಯವನ್ನು ಮರೆತು ಕರಬೂಜದ ಹಣ್ಣಿಗೆ ತನ್ನನ್ನು ತಾನು ಸಮರ್ಪಿಸಿಕೊಂಡ.

೫. ಪರಾರಿಯಾದವನು

ಅಕರ್‌ಮಾನ್‌ಗೆ ಹತ್ತು ಮೈಲಿಗಳಿರುವಂತೆ ದ್ರಾಕ್ಷಿ ತೋಟಗಳು ಆರಂಭವಾದುವು. ಕರಬೂಜದ ಹಣ್ಣನ್ನು ತಿಂದು ಸಿಪ್ಪೆಯನ್ನು ಕಿಟಕಿಯಿಂದಾಚೆಗೆ ಎಸೆದು ಬಹಳ ಹೊತ್ತಾಗಿತ್ತು. ಪ್ರಯಾಣದಲ್ಲಿ ಬೇಸರ ತಲೆದೋರಿತ್ತು. ಆದರೆ ನಡುಹಗಲು ಸಮೀಪಿಸುತ್ತಿತ್ತು.

ಬೆಳಗಿನ ಮಂದಮಾರುತವು ಪೂರ್ಣವಾಗಿ ನಿಂತು ಹೋಗಿದ್ದುದರಿಂದ ಅದು ಮುಂದೆ ಶರತ್ಕಾಲವು ಬರುವುದಿದೆ ಎಂಬುದನ್ನು ಸೂಚಿಸುತ್ತಿತ್ತು. ಜುಲೈ ಮಧ್ಯ ಭಾಗದಲ್ಲಿರುವಂತೆ ಸೂರ್ಯ ಉರಿಯುತ್ತಿದ್ದ; ಸೂರ್ಯನ ಕಿರಣಗಳು ಹೆಚ್ಚು ಶಾಖವಾಗಿಯೂ ವ್ಯಾಪಕವಾಗಿಯೂ ಇದ್ದುವು.

ರಸ್ತೆಯಲ್ಲಿ ಎರಡು ಅಡಿ ಮರಳು ತುಂಬಿತ್ತು. ಆ ಭಾರವಾದ ಗಾಡಿಯನ್ನು ಮರಳಿನಲ್ಲಿ ಎಳೆಯಲು ಕುದುರೆಗಳು ಬಹು ಕಷ್ಟಪಡುತ್ತಿದ್ದುವು, ಗಾಡಿಯ ಮುಂದಿನ ಸಣ್ಣ ಚಕ್ರಗಳು ಗುಂಬದವರೆಗೂ ಮರಳಿನಲ್ಲಿ ಹೂತಿದ್ದುವು. ಹಿಂದುಗಡೆಯ ದೊಡ್ಡ ಚಕ್ರಗಳು ಮರಳಿನಲ್ಲಿದ್ದ ನೀಲಿಯ ಕಪ್ಪೆಚಿಪ್ಪುಗಳನ್ನು ಪುಡಿಪುಡಿ ಮಾಡುತ್ತ ನಿಧಾನವಾಗಿ ಜೋಲಾಡುತ್ತಾ ಮುಂದು ಮುಂದಕ್ಕೆ ಹರಿಯುತ್ತಿದ್ದುವು.

ಹಿಟ್ಟಿನಂಥ ನಯವಾದ ಧೂಳಿನ ಮೋಡವೆದ್ದು ಪ್ರಯಾಣಿಕರ ಮೂಗಿಗೆ ತುಂಬಿ ಉಸಿರು ಕಟ್ಟಿಸುತ್ತಿತ್ತು. ಪ್ರಯಾಣಿಕರ ಹುಬ್ಬುಗಳೂ ಕಣ್ಣೆವೆಗಳೂ ಮರಳಿನಿಂದ ಬೂದಿ ಬಣ್ಣಕ್ಕೆ ತಿರುಗಿದ್ದುವು. ಹಲ್ಲುಗಳ ನಡುವೆ ಮರಳುಗಳು ಸೇರಿಕೊಂಡು ಕರ ಕರ ಎನ್ನಿಸುತ್ತಿದ್ದುವು. ಪಾವಲಿಕ್‌ನಸು ಚಾಕಲೇಟ್ ಬಣ್ಣದ ಕನ್ನಡಿಯಂತೆ ಹೊಳೆಯುತ್ತಿದ್ದ ಕಣ್ಣುಗಳನ್ನು ಅರಳಿಸುತ್ತಾ ಒಂದೇ ಸಮನೆ ಸೀನುತ್ತಿದ್ದ. ಗಾಡಿ ಹೊಡೆಯುವವನು ಹಿಟ್ಟಿನ ಗಿರಣಿಯಲ್ಲಿ ಕೆಲಸಮಾಡುವವನಂತೆ ಆಗಿದ್ದ. ಅವರ ಸುತ್ತಮುತ್ತ ದ್ರಾಕ್ಷಿ ತೋಟಗಳು ಅನಂತವಾಗಿ ಹಬ್ಬಿದ್ದುವು.

ಧೂಳು ತುಂಬಿ ಬೂದಿಬಣ್ಣಕ್ಕೆ ತಿರುಗಿದ್ದ ಒಣಗಿದ ಭೂಮಿಯ ಮೇಲೆ ಅಲ್ಲಲ್ಲಿ ತಿರುಚಿ ನುಲಿದಂತಿದ್ದ ಹಳೆಯ ದ್ರಾಕ್ಷಿ ಬಳ್ಳಿಗಳು ನಿಂತಿದ್ದುವು. ಸಂಧಿವಾತದಿಂದ ಆ ರೀತಿ ನುಲಿದು

ಕೊಂಡಿವೆಯೋ ಎಂದು ನೋಡಿದವರಿಗೆ ಅನ್ನಿಸುತ್ತಿತ್ತು. ಸುಂದರವಾಗಿದ್ದ ಹಸಿರು ಎಲೆಗಳಿಂದ ಆ ಬಳ್ಳಿಗಳನ್ನು ಪ್ರಕೃತಿಯು ಅಲಂಕರಿಸದೆ ಹೋಗಿದ್ದಿದ್ದರೆ ಅವು ವಿಕಾರವಾಗಿ ತೋರುತ್ತಿದ್ದ ವೆಂಬುದರಲ್ಲಿ ಸಂಶಯವಿಲ್ಲ. ಆಗ ಅವುಗಳಲ್ಲಿ ಯಾವ ಆಕರ್ಷಣೆಯೂ ಇರುತ್ತಿರಲಿಲ್ಲ. ವಿವಿಧ ಚಿತ್ರಾಕೃತಿಗಳಂತೆ ರಂಜಿಸುತ್ತಿದ್ದ ನುಲಿದ ವಕ್ರಾಕಾರದ ಬಳ್ಳಿಗಳು, ಆ ಬಳ್ಳಿಗಳಲ್ಲಿದ್ದ ಕೋಚು ಕೋಚಾದ ಎಲೆಗಳು, ಅವುಗಳ ಮೇಲೆ ಅಲ್ಲಲ್ಲಿ ಕಾಣಿಸುವ ಮೈಲುತುತ್ತದ ಆಕಾಶ ನೀಲಿಯ ಚುಕ್ಕೆಗಳು—ಇವೆಲ್ಲವುಗಳ ಮೇಲೆ ಸೂರ್ಯನ ಕಿರಣಗಳು ಬಿದ್ದು ಅವು ಹಚ್ಚ ಹಸಿರು ಮೈದಾನದಂತೆ ಆಪ್ಯಾಯಮಾನವಾಗಿದ್ದುವು. ಹೊಸಬಳ್ಳಿಗಳು ಆಸರೆಗಾಗಿ ನೆಟ್ಟ ತೀನುಗಳನ್ನು ಬಳಸಿಕೊಂಡು ನೆಟ್ಟಗೆ ಮೇಲೇರಿದ್ದುವು, ಅದೇ ಬಲಿತ ಬಳ್ಳಿಗಳು ದ್ರಾಕ್ಷಿಯ ಗೊಂಚಲುಗಳ ಭಾರದಿಂದ ಬಗ್ಗಿ ಇಳಿ ಬಿದ್ದಿದ್ದುವು.

ಎಲೆಗಳ ಮರೆಯಲ್ಲಿ ಅಡಗಿದ ದ್ರಾಕ್ಷಿಯ ಗೊಂಚಲಗಳನ್ನು ಚುರುಕಾದ ಕಣ್ಣುಗಳು ಮಾತ್ರ ಗುರುತಿಸಬಲ್ಲವು. ಅನನುಭವಿಯಾದ ವ್ಯಕ್ತಿಯೊಬ್ಬ ಎಕರೆಗಳಷ್ಟು ದೂರ ದ್ರಾಕ್ಷಿಯ ತೋಟಗಳ ದಾರಿಯಲ್ಲಿ ಹಾದು ಹೋದರೂ ಒಂದೇ ಒಂದು ಗೊಂಚಲನ್ನಾದರೂ ಕಾಣಲಾರ. ಆದರೂ ಒಂದೊಂದು ಬಳ್ಳಿಯಲ್ಲೂ ಗೊಂಚಲುಗಳು ಜೋತು ಬಿದ್ದಿರುತ್ತವೆ. "ಸ್ವಾಮಿ ಅಪರಿಚಿತರೇ, ಇಗೋ ಇಲ್ಲಿಯೇ ಇದ್ದೇವೆ ನಾವು. ಗೊಂಚಲು ಗೊಂಚಲುಗಳಾಗಿ ಸುತ್ತ ಮುತ್ತ ತುಂಬಿದ್ದೇವೆ. ನಮ್ಮನ್ನು ಬಿಡಿಸಿಕೊಂಡು ಬಾಯಿಗೆ ಹಾಕಿಕೊಳ್ಳಿ. ಬನ್ನಿ ಸ್ವಾಮಿ. ನೀವೋ ಶುದ್ಧ ಶುಂಠಕಾಯಿಗಳು. ನಿಮಗೇನೂ ಗೊತ್ತಾಗುವುದಿಲ್ಲ." ಎಂದು ಅವು ಹೇಳಿದಂತಾಗುತ್ತದೆ. ಆಗ ಇದ್ದಕ್ಕಿದ್ದಂತೆ ಅವನ ಕಣ್ಣೆದುರಿಗೆ ಮೂಗಿಗೇ ತಗಲುವಂತೆ ಒಂದು ಗೊಂಚಲು ತೂಗಾಡುತ್ತದೆ. ಆ ಬಳಿಕ ಇನ್ನೊಂದು, ಮತ್ತೊಂದು, ಮಗುದೊಂದು—ಹೀಗೆ ಐಂದ್ರಜಾಲಿಕನು ಯಕ್ಷಿಣಿ ಕೋಲನ್ನು ಆಡಿಸಿದೊಡನೆಯೇ ಒಂದು ಅದ್ಭುತವು ನಿರ್ಮಿತವಾಗುವಂತೆ ತೋಟದಲ್ಲೆಲ್ಲ ದ್ರಾಕ್ಷಿ ಗೊಂಚಲುಗಳ ಒಂದು ಉಜ್ವಲ ಪ್ರಪಂಚವೇ ಕಣ್ಣೆದುರಿಗೆ ಬಂದು ನಿಲ್ಲುತ್ತದೆ.

ಇಂಥ ವಿಷಯಗಳಲ್ಲಿ ಪೇತ್ಯ ಬಹು ನಿಪುಣ. ಅವನ ಚುರುಕಾದ ಕಣ್ಣುಗಳಿಂದ ಗೊಂಚಲುಗಳು ತಪ್ಪಿಸಿಕೊಂಡಾವೇ? ಇಷ್ಟೇ ಅಲ್ಲ, ಅವನು ಗಾಡಿಯಲ್ಲಿ ಹೋಗು ಹೋಗುತ್ತಿರುವಂತೆಯೇ ಒಂದೊಂದೂ ಯಾವ ಜಾತಿಯದು ಎಂಬುದನ್ನು ಹೇಳಬಲ್ಲ.

ಅಲ್ಲಿ ಹಲವು ಜಾತಿಯ ದ್ರಾಕ್ಷಿಗಳು ಇದ್ದುವು.

ಚಾವುಸ್ ಜಾತಿಗೆ ಸೇರಿದ ದ್ರಾಕ್ಷಿಗಳು ದಪ್ಪವಾಗಿ ಎಳೆಹಸುರಿನ ಬಣ್ಣಕ್ಕೆ ಇರುತ್ತವೆ. ಅವುಗಳ ಮಂದವಾದ ಸಿಪ್ಪೆಯ ಮೇಲೆ ಮಸಕು ಮಸಕಾಗಿ ಕುಳಿಗಳು ಕಾಣಿಸುತ್ತವೆ. ಆ ಹಣ್ಣುಗಳು ತ್ರಿಕೋಣಾಕಾರದ ಗೊಂಚಲುಗಳಾಗಿ ನೇತಾಡುತ್ತವೆ. ಒಂದೊಂದೂ ಸುಮಾರು ಎರಡು ಮೂರು ಪೌಂಡುಗಳಷ್ಟು ತೂಗುತ್ತವೆಂದು ಹೇಳಬಹುದು. ಅನುಭವಿಗಳಾದ ಜನರ ನುರಿತ ಕಣ್ಣುಗಳಿಗೆ ಲೇಡೀಸ್ ಫಿಂಗರ್ ಜಾತಿಯನ್ನು ಗುರುತಿಸುವುದರಲ್ಲಿ ಮೋಸವಾಗುವುದಿಲ್ಲ. ಅವೂ ಕೂಡ ಎಳೆ ಹಸುರು ಬಣ್ಣವೇ. ಆದರೆ ಚಾವುಸ್ ಜಾತಿಗಿಂತ ಹೆಚ್ಚು ಉದ್ದವಾಗಿಯೂ ಹೊಳಪಿನಿಂದ ಕೂಡಿಯೂ ಇರುತ್ತವೆ.

ಔಷಧಿಯ ಉಪಯೋಗಕ್ಕೆ ಬರುವ ಕೋಮಲವಾದ ಶಶ್ಲ ಎಳೆಗೆಂಪು ಬಣ್ಣದ ಮಸ್ಕಾಟೆಲ್ ಎರಡೂ ಅವಳಿಜವಳಿಗಳೇ. ಆದರೂ ಅವೆರಡರಲ್ಲಿ ಎಷ್ಟೊಂದು ಅಂತರ! ದುಂಡು

ದುಂಡಾದ ಶಶ್ಲ ಜಾತಿಯ ದ್ರಾಕ್ಷಿ ಹಣ್ಣುಗಳು ಗೊಂಚಲಿನಲ್ಲಿ ಬಹು ಒತ್ತಾಗಿ ಹೆಣೆದುಕೊಂಡಿರುವುದರಿಂದ ಬಿಡಿ ಹಣ್ಣುಗಳ ಆಕಾರವು ಎದ್ದು ಕಾಣುವುದಿಲ್ಲ; ಬದಲಾಗಿ ಇಡೀ ಗೊಂಚಲು ಘನಾಕೃತಿಯಾಗಿ ಕಾಣುತ್ತದೆ. ಜೇನು ತುಪ್ಪದ ಬಣ್ಣದ ಹಣ್ಣಿನ ಮೇಲೆ ಸೂರ್ಯನು ಪ್ರತಿಫಲಿಸಿ ಅದಕ್ಕೊಂದು ವಿಶೇಷ ಸೊಬಗುಂಟಾಗಿರುತ್ತದೆ. ಆದರೆ ಎಳೆಗೆಂಪುಬಣ್ಣದ ಮಸ್ಕಾಟೆಲ್ ಹಣ್ಣಿನ ಮೇಲೆ ಒಂದು ಕೆನ್ನೀಲಿಯ ಲೇಪವಿರುವುದರಿಂದ ಸೂರ್ಯನು ಅದರಲ್ಲಿ ಹೊಳೆಯುವುದಿಲ್ಲ.

ನೀಲಿಗಪ್ಪುಬಣ್ಣದ ಇಸಬೆಲ, ಚಾವುಸ್, ಶಶ್ಲ, ಮತ್ತು ಮಸ್ಕಾಟೆಲ್—ಎಲ್ಲವೂ ಆ ದ್ರಾಕ್ಷಿಯ ತೋಟದಲ್ಲಿ ಸೊಗಸಾಗಿ ಹಣ್ಣಾಗಿದ್ದವು; ನೋಡುವುದಕ್ಕೆ ಎರಡು ಕಣ್ಣುಗಳು ಸಾಲವು. ವಿಮರ್ಶಾತ್ಮಕ ಬುದ್ಧಿಯುಳ್ಳ ಚಿಟ್ಟೆಗಳೂಕೂಡ ಅವುಗಳನ್ನು ಪುಷ್ಪಗಳೆಂದು ಭ್ರಮಿಸಿ ಅವುಗಳ ಮೇಲೆ ಕುಳಿತು ತಪ್ಪು ಉದ್ದವಾದ ಕೋಡುಗಳಿಂದ ದ್ರಾಕ್ಷಿಬಳ್ಳಿಗಳ ಕುಡಿಯೊಡನೆ ಹೆಣೆದುಕೊಳ್ಳುತ್ತಿದ್ದುವು.

ದ್ರಾಕ್ಷಿ ಬಳ್ಳಿಗಳ ಈ ಸಮುದಾಯದಲ್ಲಿ ಆಗೊಂದು ಈಗೊಂದು ಹುಲ್ಲಿನ ಜೋಪಡಿ ಕಾಣಿಸುತ್ತಿತ್ತು. ಗುಡಿಸಿನ ಬಳಿಯ ಸಿಹಿಬಾದಾಮಿ ಮರದ ನೆರಳಿನಲ್ಲಿ ಒಂದು ಮೈಲುತುತ್ತದ ತೊಟ್ಟಿ ಇರುತ್ತಿತ್ತು.

ಆ ಹಚ್ಚನೆಯ ಪುಟ್ಟ ಜೋಪಡಿಗಳನ್ನು ಆಸೆಯಿಂದ ಪೇತ್ಯ ದೃಷ್ಟಿಸಿ ನೋಡಿದ. ಬೇಸಗೆಯ ದಿವಸಗಳಲ್ಲಿ ಮಧ್ಯಾಹ್ನ ಊಟವಾದ ಮೇಲೆ ಅಂಥ ಜೋಪಡಿಯೊಳಗೆ ಬೆಚ್ಚಗಿರುವ ಒಣಹುಲ್ಲಿನ ಮೇಲೆ ಕುಳಿತುಕೊಳ್ಳುವುದರಿಂದುಂಟಾಗುವ ಸುಖದ ಪರಿಚಯ ಪೇತ್ಯನಿಗೆ ಚೆನ್ನಾಗಿತ್ತು. ಪುದೀನ ಮತ್ತು ಕೊತ್ತುಂಬರಿ ಸೊಪ್ಪುಗಳ ನರುಗಂಪನ್ನು ಭಾರವಾದ ನಿಶ್ಚಲವಾದ ಗಾಳಿಯು ತನ್ನಲ್ಲಿ ತುಂಬಿಕೊಂಡಿರುತ್ತದೆ. ಹೊರಗಡೆ ಬಿಸಿಲಿನಲ್ಲಿ ಕಡಲೆಕಾಯಿಗಳು ಚಟ್‌ಚಟ್ ಎನ್ನುತ್ತ ಒಣಗುತ್ತಿರುತ್ತವೆ. ಓಹ್ ಏನು ಸೊಗಸು! ಸ್ವರ್ಗ ಸಮಾನ!

ಎಲ್ಲವನ್ನೂ ತನ್ನ ಪ್ರಭಾವಕ್ಕೊಳಪಡಿಸಿಕೊಂಡಿದ್ದ ಅಚಲವಾದ ಬಿಸಿಲಿನ ಅಲೆಗಳಲ್ಲಿ ದ್ರಾಕ್ಷಿ ಬಳ್ಳಿಗಳು ಲಯಬದ್ಧವಾಗಿ ಕಂಪಿಸುತ್ತಿದುವು. ಅಲ್ಲದೆ ಬಿಸಿಲಿನಿಂದ ನಿಸ್ತೇಜವಾದ ಧೂಳು ತುಂಬಿದ ನಸುನೀಲಿಯಾದ ಗಗನವು ಸ್ಟೆಪ್ಪಿ ಮೈದಾನದ ಮೇಲುಗಡೆ ಅನಂತವಾಗಿ ವಿಸ್ತರಿಸಿತ್ತು.

ಅಬ್ಬಾ ಎಷ್ಟು ಆಶ್ಚರ್ಯಕರ! ಇದ್ದಕ್ಕಿದಂತೆ ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಏನೊ ಒಂದು ಅಸಾಧಾರಣಸಂಗತಿ ನಡೆದುಹೋಯಿತು. ಯಾವುದು ಮೊದಲು ಯಾವುದು ಆಮೇಲೆ ಎಂಬುದನ್ನು ಹೇಳುವುದೂ ಕಷ್ಟವಾಗಿತ್ತು.

ಹೇಗೂ, ಬಂದೂಕಿನ ಶಬ್ದವು ಮೊದಲು ಕೇಳಿಸಿತೆಂದು ಹೇಳಬಹುದು. ದ್ರಾಕ್ಷಿ ತೋಟಗಳಲ್ಲಿ ಸಾಮಾನ್ಯವಾಗಿ ಹಕ್ಕಿಗಳನ್ನು ಹೊಡೆಯಲು ಉಪಯೋಗಿಸುವ ಸಣ್ಣ ಬಂದೂಕಿನ ಪೊಳ್ಳು ಶಬ್ದವೇನಲ್ಲ ಅದು. ಆ ಶಬ್ದವನ್ನು ಕೇಳಿ ಭಯವಾಗುವುದೂ ಇಲ್ಲ. ಆದರೆ ಇದು ಅದಲ್ಲ. ಸೈನಿಕ ಬಂದೂಕಿನ ಅಮಂಗಳಕರವಾದ ಭಯಂಕರ ಸಿಡಿತವಿದು.

ಆ ಕ್ಷಣದಲ್ಲಿ ರಾವುತರು ಉಪಯೋಗಿಸುವ ಸಣ್ಣ ಬಂದೂಕನ್ನು ಹಿಡಿದ ಪೋಲೀಸ್ ಸವಾರನು ರಸ್ತೆಯಲ್ಲಿ ಕಾಣಿಸಿಕೊಂಡನು. ಅವನು ಬಂದೂಕನ್ನು ಮೇಲಕ್ಕೆತ್ತಿ ದ್ರಾಕ್ಷಿ ತೋಟದೊಳಕ್ಕೆ ಗುರಿಯಿಟ್ಟನು. ಬಳಿಕ ತನ್ನ ಮನಸ್ಸನ್ನು ಬದಲಾಯಿಸಿ ಎತ್ತಿದ್ದ ಬಂದೂಕನ್ನು ಇಳಿಸಿ ಜೀನಿನ ಮೇಲೆ ಇರಿಸಿಕೊಂಡನು. ಮುಂದಕ್ಕೆ ಬಾಗಿ ಕುದುರೆಯನ್ನು ಚಪ್ಪರಿಸಿ ರಸ್ತೆಯ

ಪಕ್ಕದಲ್ಲಿದ್ದ ಹಳ್ಳ ಮತ್ತು ಏರಿಗಳೆರಡನ್ನೂ ಒಂದೇ ಏಟಿಗೆ ಹಾರಿಸಿ ನೇರವಾಗಿ ದ್ರಾಕ್ಷಿತೋಟದೊಳಕ್ಕೆ ಓಡಿಸಿದನು. ತನ್ನ ಟೋಪಿಯನ್ನು ಕೈಗೆ ತೆಗೆದುಕೊಂಡು ಹುರುಪಿನಿಂದ ಕುದುರೆಯನ್ನು ತಟ್ಟಿದನು. ದ್ರಾಕ್ಷಿಗಳನ್ನು ಕುದುರೆ ಕಾಲುಗಳಿಂದ ನಿರ್ದಯವಾಗಿ ತುಳಿಸುತ್ತ ಮುಂದಕ್ಕೆ ದೌಡಾಯಿಸಿದನು.

ಕುದುರೆಗಾಡಿ ತನ್ನಷ್ಟಕ್ಕೆ ತಾನು ಮುಂದುವರಿಯುತ್ತಿತ್ತು. ಸ್ವಲ್ಪ ಹೊತ್ತು ಒಂದು ನರ ಪಿಳ್ಳೆಯೂ ಕಾಣಲಿಲ್ಲ.

ಇದ್ದಕ್ಕಿದ್ದಂತೆ ಗಾಡಿಯ ಹಿಂಬಾಗದಲ್ಲಿ ತೋಟದ ಅಂಚಿನಲ್ಲಿದ್ದ ಏರಿಯ ಮೇಲಿನ ಪೊದೆಗಳಲ್ಲಿ ಸರಸರ ಶಬ್ದವಾಯಿತು. ಪಕ್ಕದ ಕಾಲುವೆಯೊಳಕ್ಕೆ ಒಬ್ಬ ವ್ಯಕ್ತಿ ನೆಗೆದು ಅಲ್ಲಿಂದ ಮೆತ್ತಗೆ ರಸ್ತೆಗೆ ಹತ್ತಿ ಬಂದ. ಅವನು ಗಾಡಿಯ ಹಿಂದುಗಡೆ ಏಳುತ್ತಿದ್ದ ದಟ್ಟವಾದ ಧೂಳಿನ ಮೋಡದಲ್ಲಿ ಕಣ್ಣು ತಪ್ಪಿಸಿಕೊಂಡು ಗಾಡಿಯನ್ನು ಹಿಂಬಾಲಿಸಿಕೊಂಡು ಬರಲಾರಂಭಿಸಿದ.

ಮುಂದುಗಡೆ ಎತ್ತರವಾದ ಪೀಠದಲ್ಲಿ ಕುಳಿತ ಗಾಡಿ ಹೊಡೆಯುವವನು ಈ ವ್ಯಕ್ತಿಯನ್ನು ಕಂಡವರಲ್ಲಿ ಪ್ರಾಯಶಃ ಮೊದಲನೆಯವನಿರಬೇಕು. ಲಗಾಮನ್ನು ಎಳೆದು ಗಾಡಿಯನ್ನು ನಿಲ್ಲಿಸುವುದಕ್ಕೆ ಬದಲಾಗಿ ಅವನು ಚಾವಟಿಯನ್ನು ತನ್ನ ತಲೆಯ ಮೇಲುಗಡೆ ಜೋರಾಗಿ ಬೀಸುತ್ತಾ ಕುದುರೆಗಳನ್ನು ನಾಗಾಲೋಟದಿಂದ ಓಡಿಸಿದ.

ಆದರೆ ಅಷ್ಟುಹೊತ್ತಿಗೆ ಆ ಅಪರಿಚಿತ ವ್ಯಕ್ತಿಯು ಗಾಡಿಯ ಮೆಟ್ಟುಹಲಗೆಯ ಮೇಲಕ್ಕೆ ನೆಗೆದು ನಿಂತಿದ್ದ. ಹಿಂದಿನ ಬಾಗಿಲನ್ನು ತೆರೆದು ಒಳಗೆ ಬಗ್ಗಿನೋಡಿದ. ಬಹಳ ಕಷ್ಟಪಟ್ಟುಕೊಂಡು ಅವನು ಉಸಿರುಬಿಡುತ್ತಿದ್ದ. ಅವನೊಬ್ಬ ಗಿಡ್ಡವ್ಯಕ್ತಿ. ಅವನ ತರುಣ ಮುಖವು ಹೆದರಿಕೆಯಿಂದ ಕಳೆಗುಂದಿತ್ತು. ಅವನ ಕಣ್ಣುಗಳು ಕಂದು ಬಣ್ಣದವಾಗಿದ್ದುವು. ಅವನ ಮುಖದಲ್ಲಿ ಗೆಲವು ಇಲ್ಲವೇ ಭಯ ಇವೆರಡರಲ್ಲಿ ಯಾವ ಭಾವವಾದರೂ ತೋರಿಬರುತ್ತಿದ್ದಿತೆನ್ನಬಹುದಾಗಿತ್ತು.

ಸಣ್ಣಗೆ ಕತ್ತರಿಸಿದ ಕೂದಲಿನ ದಪ್ಪವಾದ ದುಂಡನೆಯ ತಲೆಯ ಮೇಲೆ ಟೋಪಿಯೊಂದು ಓರೆಯಾಗಿ ಕುಳಿತಿದ್ದಿತು. ಆ ಹೊಳೆಯುತಿದ್ದ ಟೋಪಿಯ ಮೇಲೆ ಒಂದು ಗುಂಡಿಯಿತ್ತು. ಅವನು ಮೇಲೆ ಹಾಕಿಕೊಂಡಿದ್ದ ಬಿಗಿಯಾದ ಜಾಕೆಟ್ಟಿನ ಒಳಗಡೆ ರೈತರು ತೊಟ್ಟುಕೊಳ್ಳುವಂಥ ಕಸೂತಿಮಾಡಿದ ಷರಟು ಇತ್ತು. ಅವನು ಹೊಲಗದ್ದೆಗಳಲ್ಲಿ ಕೆಲಸಮಾಡುವ ಆಳು ಇರಬಹುದೇನೋ ಎಂದು ಅದರಿಂದ ಊಹಿಸುವುದು ಸಾಧ್ಯವಿತ್ತು. ಧೂಳು ತುಂಬಿದ ನೀಲಿಯ ಉಣ್ಣೆಯ ಷರಾಯಿಯನ್ನು ನೋಡಿದಾಗ ಅವನು ಶ್ರಮಜೀವಿಯೂ ಅಲ್ಲ, ರೈತನೂ ಅಲ್ಲ ಎಂಬುದು ವಿದಿತವಾಗುತ್ತಿತ್ತು. ಕಾಲಿನ ಹತ್ತಿರ ಷರಾಯಿ ಸ್ವಲ್ಪ ಮೇಲಕ್ಕೆಳೆದುಕೊಂಡಂತೆ ಇದ್ದುದರಿಂದ ಕಾಲಿಗೆ ಧರಿಸಿದ್ದ ತುಕ್ಕಿನ ಬಣ್ಣದ ಬೂಡ್ಸು ಕಾಣುತ್ತಿತ್ತು. ನಾವಿಕರ ಬೂಡ್ಸಿನಂತೆ ಅದು ಕಾಣುತ್ತಿದ್ದಿತು.

"ನಾವಿಕ!" ಪೇತ್ಯನ ಮನಸ್ಸಿನಲ್ಲಿ ಈ ಭಯಂಕರ ಭಾವನೆ ಹೊಳೆಯಿತೋ ಇಲ್ಲವೋ ಬಾಗಿಲ ಹಿಡಿಯನ್ನು ಬಿಗಿಯಾಗಿ ಹಿಡಿದಿದ್ದ ಆಗಂತುಕನ ಮುಂಗೈ ಮೇಲೆ ಲಂಗರಿನ ಹಚ್ಚೆ ಹುಯ್ದ ಚಿತ್ರ ಕಣ್ಣಿಗೆ ಬದ್ದಿತು. ಆಗ ಪೆತ್ಯನ ದಿಗಿಲನ್ನು ಏನು ಹೇಳೋಣ!

ಇದ್ದಕ್ಕಿದಂತೆ ತಾನು ಪ್ರಯಾಣಿಕರ ನಡುವೆ ಅಡ್ಡ ಬಂದುದಕ್ಕೆ ಆಗಂತುಕನಿಗೂ ಮನಸ್ಸಿನಲ್ಲಿ ಕಿರಿಕಿರಿಯಾಗಿತ್ತು. ಮೂಗಿನ ಮೇಲೆ ಕನ್ನಡಕವನ್ನು ಧರಿಸಿ ಬಾಯಿ ಕಟ್ಟಿಕೊಂಡು ಕುಳಿತಿದ್ದ ಮನುಷ್ಯನನ್ನೂ ಹೆದರಿದ ಇಬ್ಬರು ಹುಡುಗರನ್ನೂ ನೋಡಿ ಆಗಂತುಕ ತುಟಿಗಳನ್ನಲ್ಲಾಡಿಸಿದ.

ಆದರೆ ಮಾತುಮಾತ್ರ ಹೊರಡಲಿಲ್ಲ. "ಸ್ವಾಮಿ" ಎಂದು ಆರಂಭಿಸ ಬೇಕೆಂದೋ ಅಥವಾ ಕ್ಷಮೆ ಬೇಡಬೇಕೆಂದೋ ಅವನ ಪ್ರಯತ್ನವಿದ್ದಂತೆ ಕಂಡಿತು. ಅದರ ಫಲವಾಗಿ ಅವನ ಮುಖದ ಮೇಲೆ ಪ್ರಯತ್ನ ಪೂರ್ವಕವಾಗಿ ಶೂನ್ಯ ಮುಗುಳುನಗೆ ಮಾತ್ರ ಮೂಡಿತು.

ಕೈಬೀಸಿ ಇನ್ನೇನು ಮೆಟ್ಟು ಹಲಗೆಯಿಂದ ರಸ್ತೆಗೆ ಧುಮುಕ ಬೇಕು, ಅಷ್ಟರಲ್ಲಿ ಒಬ್ಬ ಕುದುರೆ ಸವಾರ ಹಠಾತ್ತನೆ ಮುಂದುಗಡೆ ರಸ್ತೆಯಲ್ಲಿ ದೃಷ್ಟಿಗೆ ಬಿದ್ದ. ನಾವಿಕ ಗಾಡಿಯ ಮೂಲೆಯ ಹಿಂದಿನಿಂದ ಬಹು ಎಚ್ಚರಿಕೆಯಿಂದ ನೋಡಿದ. ಸೈನಿಕರು ಧೂಳಿನ ನಡುವೆ ಧಾವಿಸಿ ಬರುತ್ತಿರುವುದು ಕಂಡಿತು. ತಕ್ಷಣವೇ ಗಾಡಿಯ ಒಳಕ್ಕೆ ನೆಗೆದು ಬಾಗಿಲನ್ನು ಧಡಾರನೆ ಹಾಕಿಕೊಂಡ.

ದೈನ್ಯದಿಂದ ಬೇಡಿಕೊಳ್ಳುವವನಂತೆ ಪ್ರಯಾಣಿಕರ ಕಡೆಗೆ ನೋಡಿ, ತುಟಿಪಿಟಕ್ಕೆನ್ನದೆ ಅಂಬೆಗಾಲಿಕ್ಕಿಕೊಂಡು ಪೇತ್ಯನ ಸಂಗ್ರಹವನ್ನು ಮುಚ್ಚಿಟ್ಟಿದ್ದ ತಳಕ್ಕೆ ಅವನು ತೆವಳಿಕೊಂಡು ಹೋದಾಗ ಪೇತ್ಯನಿಗೆ ದಿಗಿಲೇ ಆಯಿತು.

ಪೇತ್ಯ ನಿರಾಶಾಭಾವದಿಂದ ತಂದೆಯ ಮುಖವನ್ನು ನೋಡಿದ. ಆದರೆ ತಂದೆ ಮಾತ್ರ ಸ್ವಲ್ಪವೂ ಅಲ್ಲಾಡದೆ ಕುಳಿತಿದ್ದರು. ಅವರ ಮುಖ ಭಾವಶೂನ್ಯವಾಗಿತ್ತು. ಅವರ ಗಡ್ಡ ನಿಶ್ಚಿತತೆಯನ್ನು ಸೂಚಿಸುವಂತೆ ಮುಂದಕ್ಕೆ ಚಾಚಿಕೊಂಡಿತ್ತು. ಕೈಗಳನ್ನು ಮಡಿಸಿ ಹೊಟ್ಟೆಯ ಮೇಲೆ ಇಟ್ಟುಕೊಂಡು ಹೆಬ್ಬೆರಳುಗಳನ್ನು ಮುರಿಯುತ್ತಿದ್ದರು.

"ಏನೂ ಆಗಿಲ್ಲ. ಈಗ ಯಾವ ಪ್ರಶ್ನೆಗಳನ್ನೂ ಕೇಳಕೂಡದು. ಏನೂ ನಡೆದಿಲ್ಲವೆಂಬಂತೆ ನಿಮ್ಮ ನಿಮ್ಮ ಸ್ಥಳಗಳಲ್ಲಿ ಸ್ವಸ್ಥವಾಗಿ ಕುಳಿತುಕೊಂಡು ಮೊದಲಿನ ಹಾಗೆ ಪ್ರಯಾಣ ಮಾಡಬೇಕು" ಎಂದು ಅವರ ಮುಖಭಾವ ಹೇಳುವಂತಿತ್ತು. ಪೇತ್ಯನೇನು, ಪುಟ್ಟ ಪಾವಲಿಕನು ಕೂಡ ತಂದೆಯ ಮನೋಗತವನ್ನು ಗ್ರಹಿಸಿಬಿಟ್ಟಿದ್ದ. ಗಪ್‌ಚಿಪ್ಪಾಗಿರುವುದೇ ಆಗ್ಗೆ ಭೂಷಣವಾಗಿತ್ತು. ಆಗಿನ ಸಂದರ್ಭದಲ್ಲಿ ಅದೇ ಅತ್ಯಂತ ಉತ್ತಮವಾದುದಾಗಿತ್ತು.

ಗಾಡಿ ಹೊಡೆಯುವವನಿಗೆ ಈ ಸಮಸ್ಯೆಯೇ ಇರಲಿಲ್ಲ. ಅವನು ಕುದುರೆಗಳ ಬೆನ್ನು ಚಪ್ಪರಿಸುತ್ತಲೂ, ಅವುಗಳನ್ನು ಚಾವಟಿಯಿಂದ ಗದರಿಸುತ್ತಲೂ ಸಾರಥಿತನದಲ್ಲಿ ಮಗ್ನನಾಗಿದ್ದ. ಏನಾಯಿತೆಂದು ಹಿಂದಿರುಗಿಯೂ ಸಹ ನೋಡಲಿಲ್ಲ.

ಒಂದು ಮಾತಿನಲ್ಲಿ ಹೇಳುವುದಾದರೆ ಅದು ಸರ್ವಾನುಮತದಿಂದ ಒಪ್ಪಿದ ಮೌನದ ಸಿತೂರಿಯಾಗಿತ್ತು.

ಕುದುರೆ ಸವಾರರು ಗಾಡಿಯ ಹತ್ತಿರಕ್ಕೆ ಬಂದರು.

ಸೈನಿಕರ ಮುಖಗಳು ಕಿಟಕಿಯಿಂದ ಒಳಕ್ಕೆ ಬಗ್ಗಿನೋಡಿದುವು. ಆದರೆ ಅಷ್ಟು ಹೊತ್ತಿಗೆ ನಾವಿಕ ಪೀಠದಡಿಯಲ್ಲಿ ಕಣ್ಮರೆಯಾಗಿದ್ದ.

ಮಕ್ಕಳೂ ಬಿಳಿಬದನೆ ಗಿಡಗಳೂ ಇದ್ದ ಗಾಡಿಯ ಆ ಶಾಂತ ವಾತಾವರಣದಲ್ಲಿ ಸಂದೇಹಾಸ್ಪದವಾದುದೇನೂ ಆ ಸೈನಿಕರಿಗೆ ಕಂಡು ಬರಲಿಲ್ಲ. ಅಲ್ಲಿ ನಿಲ್ಲದೆ ಅವರು ಮುಂದಕ್ಕೆ ಸವಾರಿ ಬಿಟ್ಟರು.

ಇದಾದ ಸುಮಾರು ಅರ್ಧಗಂಟೆಗಳವರೆಗೆ ಮೌನ ಆವರಿಸಿತ್ತು. ಅಲ್ಲಾಡದೆ ಆ ನಾವಿಕ ಪೀಠದಡಿಯಲ್ಲಿ ಮಲಗಿದ್ದ. ಪ್ರಶಾಂತತೆ ತಾಂಡವವಾಡುತ್ತಿತ್ತು. ಕೊನೆಗೆ ಹಸುರು ಜಾಲಿಮರಗಳ ನಡುವೆ ಚಿಕ್ಕಮನೆಗಳ ಒಂದು ಸಾಲು ಮುಂದುಗಡೆ ಕಣ್ಣಿಗೆ ಬಿತ್ತು. ಅದು

ಪಟ್ಟಣದ ಹೊರವಳಯ.

ಮೌನವನ್ನು ಮೊದಲು ಮುರಿದವರು ತಂದೆ. "ಓ, ಇನ್ನೇನು ಅಕರ್‌ಮಾನ್ ಹತ್ತಿರಕ್ಕೆ ಬಂದು ಬಿಟ್ಟೆವು. ಇನ್ನೇನು ಪಟ್ಟಣ ಕಾಣುತ್ತಲೇ ಇದೆ. ಅಬ್ಬ, ಎಷ್ಟು ಸೆಕೆ! ದಾರಿಯಲ್ಲಿ ಒಂದು ನರಹುಳುವಾದರೂ ಇರಬೇಕಲ್ಲ." ತಮಗೆ ತಾವೇ ಹೇಳಿಕೊಳ್ಳುವಂತೆ ಕಾಣಿಸಿದರೂ ಉದ್ದೇಶ ಪೂರ್ವಕವಾಗಿ ಗಟ್ಟಿಯಾಗಿ ಹೇಳುತ್ತ ಕಿಟಕಿಯಿಂದಾಚೆಗೆ ನೋಡುತ್ತಾ ನಿಂತರು. ತಂದೆಯವರ ಉಪಾಯ ಪೇತ್ಯನಿಗೆ ತಕ್ಷಣ ತಿಳಿದು ಹೋಯಿತು. "ಇನ್ನೇನು ಬಂದೇ ಬಿಟ್ಟೆವು. ಅಕರ್‌ಮಾನ್ ಬಂದು ಬಿಟ್ಟಿತು" ಎಂದು ಕೂಗಿದ. ಪಾವಲಿಕನ ತೋಳು ಹಿಡಿದು ಎಳೆದು ಕೊಂಡು ಬಂದು ಕಿಟಕಿಯ ಹತ್ತಿರ ನಿಲ್ಲಿಸಿಕೊಂಡ. ಕುತೂಹಲದ ಸೋಗಿನಿಂದ "ಪಾವಲಿಕ್, ಅಲ್ಲಿ ನೋಡು. ಆಕಾಶದಲ್ಲಿ ಸುಂದರವಾದ ಹಕ್ಕಿ, ಆಹಾ ಎಷ್ಟು ಚೆನ್ನಾಗಿದೆ!" ಎಂದ.

"ಎಲ್ಲಿ?" ನಾಲಿಗೆ ನೀಡಿಕೊಂಡು ಕೌತುಕದಿಂದ ಪಾವಲಿಕ್ ಕೇಳಿದ.

"ಅಯ್ಯೋ ಮಂಕೆ, ಅಲ್ಲಿ ನೋಡೋ ಅಲ್ಲಿ."

"ನಂಗೆ ಕಾಣಿಸೋದೆ ಇಲ್ಲ?"

"ಎಲ್ಲೋ ಕುರುಡು!"

ಆ ಸಮಯದಲ್ಲಿ ಅವರ ಬೆನ್ನ ಹಿಂದೆ ಏನೋ ಸರಿದಂತಾಯಿತು, ಬಾಗಿಲು ಹಾಕಿದ ಸದ್ದಾಯಿತು. ಪೇತ್ಯ ತಕ್ಷಣ ತಿರುಗಿ ನೋಡಿದ. ಎಲ್ಲವೂ ಮೊದಲಿನಂತೆಯೇ ಇತ್ತು. ಪೀಠದ ಕೆಳಗಿನಿಂದ ಬೂಡ್ಸು ಮಾತ್ರ ಹೊರಕ್ಕೆ ಚಾಚಿಕೊಂಡಿರಲಿಲ್ಲ, ಅಷ್ಟೆ. ತನ್ನ ಸಂಗ್ರಹ ಸುರಕ್ಷಿತವಾಗಿದೆಯೋ ಇಲ್ಲವೋ ಎಂದು ಪೇತ್ಯ ಪೀಠದ ಅಡಿಯನ್ನು ಗಾಬರಿಯಿಂದ ಬಗ್ಗಿ ನೋಡಿದ. ಅವು ಇದ್ದಲ್ಲೇ ಇದ್ದುವು. ಎಲ್ಲವೂ ಯಥಾವತ್ತಾಗಿತ್ತು.

ಕಿಟಕಿಯ ಬಳಿ ನಿಂತ ಪಾವಲಿಕ್ ತಲೆಯನ್ನು ಆಕಡೆಗೂ ಈಕಡೆಗೂ ತಿರುಗಿಸುತ್ತ ಹಕ್ಕಿಯನ್ನು ನೋಡುವ ಪ್ರಯತ್ನದಲ್ಲಿದ್ದ.

"ಹಕ್ಕಿ ಎಲ್ಲಿ? ತೋರಿಸು ಪೇತ್ಯ, ಹಕ್ಕಿ ತೋರಿಸು" ಎಂದು ತನ್ನ ಪುಟ್ಟ ಬಾಯಿಯನ್ನು ತಿರುಗಿಸುತ್ತ ಜಗಳಗಂಟಿಗನಂತೆ ಕೇಳಿದ.

"ಕೊಂಯ್‌ಗುಟ್ಟ ಬೇಡ, ಸುಮ್ಮನಿರೋ. ಹಕ್ಕಿ ಹಾರಿಹೋಯಿತು. ನನ್ನ ಸುಮ್ಮನೆ ಗೋಳು ಹುಯ್ಕೋಬೇಡ." ದೊಡ್ಡವನಂತೆ ಪೇತ್ಯ ಗತ್ತಿನಿಂದ ಹೇಳಿದ. ಪಾವಲಿಕ್ ನಿಟ್ಟುಸಿರು ಬಿಟ್ಟ. ತನಗೆ ಮೋಸವಾಯಿತೆಂದು ಅವನಿಗೆ ತಿಳಿಯಿತು. ಪೀಠದ ಕೆಳಗಡೆ ನೋಡಿದಾಗ ಅಲ್ಲಿ ನಾವಿಕ ಕಾಣಲಿಲ್ಲ. ಆಗ ಅವನಿಗೆ ಅತ್ಯಾಶ್ಚರ್ಯವಾಯಿತು.

"ಅಪ್ಪ, ಆ ಮನುಷ್ಯ ಎಲ್ಲಿ? ಅವನು ಎಲ್ಲಿಗೆ ಹೋದ?" ತಡೆಯಲಾರದೆ ನಡುಗುವ ಧ್ವನಿಯಲ್ಲಿ ಕೇಳಿಯೇ ಬಿಟ್ಟ.

"ವಟಗುಟ್ಟುವುದನ್ನು ನಿಲ್ಲಿಸು" ಎಂದು ತಂದೆ ಬಿರುಸಾಗಿ ನುಡಿದರು. ಹಕ್ಕಿಯೂ ಮಂಗಮಾಯವಾಯಿತು, ಮನುಷ್ಯನೂ ಕೂಡ ಇದ್ದಕ್ಕಿದ್ದಂತೆ ಅದೃಶ್ಯನಾಗಿದ್ದಾನೆ. 'ಎಲಾ ಇದೇನು' ಎಂಬ ಸಮಸ್ಯೆಯಲ್ಲಿ ಬಿದ್ದು ಪಾವಲಿಕ್ ಚಿಂತೆಯಿಂದ ಸುಮ್ಮನಾದ.

ನೆಲದ ಮೇಲಿನ ಸಣ್ಣ ಸಣ್ಣ ದುಂಡನೆಯ ಕಲ್ಲುಗಳ ಮೇಲೆ ಗಾಡಿಯ ಚಕ್ರ ಹರಿಯುತ್ತ ದಡಬಡ ಎಂದು ಶಬ್ದ ಮಾಡಿತು. ರಸ್ತೆಯ ಎರಡು ಕಡೆಯೂ ಇದ್ದ ಜಾಲಿಯ ಮರಗಳ ನೆರಳು

ಬಿದ್ದಿದ್ದ ರಸ್ತೆಗೆ ಗಾಡಿ ಬಂದಿತು. ಬೂದು ಬಣ್ಣದ ಟೆಲಿಫೋನ್ ಕಂಬಗಳು ಹಿಂದು ಹಿಂದಕ್ಕೆ ಓಡುತ್ತಿದ್ದುವು. ಕೆಂಪು ಹಂಚಿನ ಮನೆಯ ಸೂರುಗಳೂ ನೀಲಿಯ ಬಣ್ಣದ ಕಬ್ಬಿಣದ ಕಂಬಗಳೂ ಮಿಂಚಿಮಾಯವಾಗುತ್ತಿದ್ದುವು. ದೂರದಲ್ಲಿ ಅಳಿವೆಯ ನೀರು ಮಸಕು ಮಸಕಾಗಿ ಕಾಣಿಸಿ ಪುನಃ ಮರೆಯಾಯಿತು.

ರಾಸ್‌ಬೆರಿ ಹಣ್ಣಿನ ಬಣ್ಣದ ಷರಟನ್ನು ಹಾಕಿಕೊಂಡ ಐಸ್‌ಕ್ರೀಮ್ ಮಾರುವ ಮನುಷ್ಯನೊಬ್ಬ ಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮರಗಳ ನೆರಳಿನಲ್ಲಿ ನಡೆದುಕೊಂಡು ಹೋಗುತ್ತಿದ್ದ.

ಬಿಸಿಲನ್ನು ನೋಡಿದರೆ ಆಗಲೇ ಮಧ್ಯಾಹ್ನದ ಒಂದು ಗಂಟೆ ಕಳೆದಿತ್ತೆಂದು ತಿಳಿಯುತ್ತಿತ್ತು. ತುರ್ಗನೀವ್ ಹೊರಡುವುದು ಎರಡು ಗಂಟೆಗೆ.

ಹೋಟಲಿನ ಬಳಿ ನಿಲ್ಲದೆ ನೇರವಾಗಿ ಬಂದರು ಕಡೆಗೇ ಹೋಗಬೇಕೆಂದು ಗಾಡಿಯವನಿಗೆ ತಂದೆ ಹೇಳಿದರು. ಬಂದರು ಕಟ್ಟೆಯಲ್ಲಿ ನಿಂತಿದ್ದ ಹಡಗು ಆಗತಾನೆ ಒಂದು ದೀರ್ಘವಾದ ಸಿಳ್ಳನ್ನು ಊದಿತ್ತು.

೬. ತುರ್ಗನೀವ್

ಈ ಶತಮಾನದ ಆದಿಭಾಗದಲ್ಲಿಯೂ ಕೂಡ ತುರ್ಗನೀವ್ ಹಡಗನ್ನು ಹಿಂದಿನ ಕಾಲದ್ದೆಂದು ತಿಳಿಯುತ್ತಿದ್ದರು.

ಉದ್ದವಾಗಿದ್ದರೂ ಇಕ್ಕಟ್ಟಾಗಿದ್ದ ಹಡಗಿನ ಒಡಲು, ಹಡಗನ್ನು ಒಯ್ಯುತ್ತಿದ್ದ ಎರಡು ನೀರ್ಗಾಲಿಗಳು, ನೀಗಾಲಿಯನ್ನು ಮುಚ್ಚಿದ್ದ ದುಂಡು ಪೆಟ್ಟಿಗೆಯ ಸೀಳುಗಂಡಿಯ ಮೂಲಕ ಕಾಣುತ್ತಿದ್ದ ಎರಡು ಕೆಂಪು ತೇಲುಹಲಗೆಗಳು, ಹಡಗಿನ ಮೇಲ್ಭಾಗದಲ್ಲಿ ಗೋಚರಿಸುತ್ತಿದ್ದ ಎರಡು ಕೊಳವಿಗಳು—ಇವುಗಳನ್ನು ನೋಡಿದಾಗ ತುರ್ಗನೀವ್ ಒಂದು ದೊಡ್ಡ ವಿಹಾರ ದೋಣಿಯಂತೆ ತೋರುತ್ತಿತ್ತೇ ಹೊರತು ಚಿಕ್ಕ ಜಹಜಿನಂತೆ ಕಾಣುತ್ತಿರಲಿಲ್ಲ.

ತುರ್ಗನೀವ್ ಹಡಗು ನಿರ್ಮಾಣಕಾರ್ಯದ ಒಂದು ಪವಾಡವೆಂದೇ ಪೇತ್ಯನ ಎಣಿಕೆಯಾಗಿತ್ತು .ಒಡೆಸ್ಸ ಮತ್ತು ಅಕ್ಕರ್‌ಮಾನ್‌ಗಳ ನಡುವಿನ ಪ್ರಯಾಣವು ಅಟ್ಲಾಂಟಿಕ್ ಸಾಗರವನ್ನು ದಾಟುವ ದೀರ್ಘ ಸಮುದ್ರಯಾನಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ.

ಎರಡನೆ ತರಗತಿಯ ಟಿಕೆಟ್ಟಿನ ಬೆಲೆ ಕಡಮೆಯೇನಲ್ಲ, ಒಂದು ರೂಬಲ್ ಮತ್ತು ಹತ್ತು ಕೊಪೆಕ್ಕುಗಳು. ಪೇತ್ಯನ ತಂದೆ ಎರಡು ಟಿಕೆಟ್ಟುಗಳನ್ನು ಕೊಂಡುಕೊಂಡಿದ್ದರು. ಪಾವಲಿಕನಿಗೆ ಟಿಕೆಟ್ಟಿಲ್ಲ.

ಎಷ್ಟಾದರೂ ಹಡಗಿನ ಪ್ರಯಾಣವು ಅಗ್ಗವಾಗಿಯೂ ಮತ್ತು ಹಿತಕರವಾಗಿಯೂ ಇರುತ್ತಿತ್ತು. ದಾರಿಯುದ್ದಕ್ಕೂ ಅತಿಯಾಗಿಕುಲುಕುವ ಓವಿದಿಯೋಪಾಲ್ ಗಾಡಿಯಲ್ಲಿ ಮೈಜಜ್ಜಿಸಿಕೊಂಡು ನಲವತ್ತು ಮೈಲಿಗಳದೂರ ಪ್ರಯಾಣ ಮಾಡುವುದೆಂದರೆ! ಆ ಗಾಡಿಯೋ, ಅಹಹ! ಅದರ ಕಟ ಕಟ ಶಬ್ದ ತಲೆಚಿಟ್ಟು ಹಿಡಿಸುತಿತ್ತು. ಗಾಡಿಹಾಗಿರಲಿ, ಆ ಸಾರಥಿಯೋ ! ಅವನು ಯಹೂದಿ. ಒರಟುಬಟ್ಟೆಯ ಜೂಲಾದ ದೊಗಲೆ ಅಂಗಿ ಮೈಮೇಲೆ, ಅದರ ಮೇಲೆ ಕುದುರೆಗಾಡಿ ಹೊಡೆಯು

ವವನ ಗುರುತಾದ ಕೆಂಪುನಡುಪಟ್ಟಿ ಇತ್ತು. ಅವನ ಕಣ್ಣುಗಳೂ ಕೆಂಪು, ಕೂದಲುಗಳೂ ಕೆಂಪು, ಸಾಲದುದಕ್ಕೆ ಮಂಕುಬಡಿದ ಮೂರ್ತಿ. ಪ್ರಯಾಣಿಕರು ಯಾರಾದರೂ ಐದು ರೂಬಲ್ ನಾಣ್ಯವನ್ನು ಕೊಟ್ಟರೆ ಅದು ನಡೆಯುವುದೋ ಇಲ್ಲವೋ ಎಂದು ಪರೀಕ್ಷಿಸಲು ಅದನ್ನು ಹಲ್ಲಿಗೆ ಕೊಡುತ್ತಿದ್ದ. ಗಾಡಿಯಲ್ಲಿ ಪ್ರಯಾಣಮಾಡಿ ಮುಗಿಸುವ ಹೊತ್ತಿಗೆ ಅವನ ಪ್ರಯಾಣಿಕರ ಕರುಳು ಬಾಯಿಗೆ ಬರುತ್ತಿತ್ತು. ಎರಡು ಮೈಲಿಗಳಿಗೊಂದೊಂದು ಸಲ ನಿಲ್ಲಿಸುತ್ತ ತನ್ನ ಬಡಕಲು ತಟ್ಟುಗಳಿಗೆ ಹುರುಳಿ ತಿನ್ನಿಸುತ್ತಿದ್ದರೆ ಇನ್ನೆನಾದೀತು.

ಎರಡನೆ ತರಗತಿಯ ಪ್ರಯಾಣಿಕರ ಕೋಣೆಯೊಂದನ್ನು ಅವರು ಆಕ್ರಮಿಸಿಕೊಂಡು ಜಹಜಿನಲ್ಲಿ ಕಾಲೂರಿದರೋ ಇಲ್ಲವೋ ಪ್ರಯಾಣದ ಆಯಾಸದಿಂದಲೂ ಸೆಖೆಯಿಂದಲೂ ಪಾವಲಿಕ್ ಸೊರಗಿ ತೂಕಡಿಸಲಾರಂಭಿಸಿದ. ಕಪ್ಪುವೇಣಗಬಟೆದ ಮಲಗುಮಂಚದ ಮೇಲೆ ಪಾವಲಿಕನನ್ನು ಮೊದಲು ಮಲಗಿಸುವ ಕೆಲಸವಾಯಿತು. ಕಿಟಕಿಯಿಂದ ಒಳಬಂದ ಬಿಸಿಲಿನಿಂದ ಮಲಗುಮಂಚ ಸುಡುತ್ತಿತ್ತು.

ಎರಡನೆ ತರಗತಿಯ ಪ್ರಯಾಣಿಕರ ಕೋಣೆಗೆ ಹಿತ್ತಾಳೆಯ ಚೌಕಟ್ಟನ್ನೂ ಕಂಬಿಗಳನ್ನೂ ಹಾಕಿದ್ದರು. ಬೆಳಕು ಗಾಳಿಗಳು ಬರಲನುಕೂಲಿಸುವಂತೆ ದುಂಡನೆಯ ಕಿಂಡಿಗಳು ಹಡಗಿಗೆ ಒಂದು ಅಲಂಕಾರ. ಎರಡನೆತರಗತಿಯ ಕೋಣೆಗಳಿಗೆ ಇಂಥ ದುಂಡನೆಯ ಬೆಳಕಿಂಡಿಗಳು ಇಲ್ಲದೇ ಹೋದರೆ ಹಡಗಿನ ಪ್ರ ಯಾ ಣ ದ ಮಜವೇ ತಪ್ಪಿ ಹೋಗುತ್ತದೆ. ನಿಜವಾದ ದುಂಡಾದ ಬೆಳಕಿನ ಕಿಂಡಿಗಳು ಇದ್ದರೆ ನೌಕಾಗ್ರದ ಮೂರನೆ ತರಗತಿಯ ಪ್ರಯಾಣಿಕರ ಸ್ಥಳವೇ ಉತ್ತಮವಾದುದೆಂದೆನಿಸುವುದಿಲ್ಲವೇ? ಹೌದು, ಅಲ್ಲಿ ಮೆತ್ತಗೆ ಮಲಗುವ ಮಂಚಗಳಿರುತ್ತಿಲಿರಲ್ಲ, ಅವುಗಳಿಗೆ ಬದಲಾಗಿ ಮರದ ಹಲಗೆಯ ಸಾದಾ ಬೆಂಚುಗಳೇ ಇದ್ದದು. ಆದರೇನು, ಕುದುರೆ ಟ್ರಾಮುಗಳಲ್ಲಿಯೂ ಇಂಥವೇ ಮರದ ಬೆಂಚುಗಳಿರುವುವಲ್ಲವೇ.

ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವುದು "ಯೋಗ್ಯವಲ್ಲ" ಆದರೆ ಮೊದಲನೆ ತರಗತಿಯಲ್ಲಿಯ ಪ್ರಯಾಣ "ದುಬಾರಿ" ಎಂಬುದಾಗಿ ಅಂದಿನವರು ಭಾವಿಸುತ್ತಿದ್ದರು.

ಸಾಮಾಜಿಕ ಸ್ಥಾನಮಾನಗಳನ್ನು ಗಮನಕ್ಕೆ ತೆಗೆದುಕೊಂಡರೆ ಒಡೆಸ್ಸ ನಗರದ ಅಧ್ಯಾಪಕ ಬಾಚೆಯ ಕುಟುಂಬ ಮಧ್ಯಮವರ್ಗಕ್ಕೆ ಸೇರಿದ್ದು. ಆದುದರಿಂದ ಅವರು ಎರಡನೆಯ ತರಗತಿಯಲ್ಲಿಯೇ ಪ್ರಯಾಣ ಮಾಡಬೇಕು. ಇದು ಒಂದು ರೀತಿಯಲ್ಲಿ ಅನುಕೂಲ ಮತ್ತು ಹಿತಕರವಾಗಿತ್ತು; ಆದರೆ ಅದೇ ಇನ್ನೊಂದು ರೀತಿಯಲ್ಲಿ ಅನಾನುಕೂಲ ಮತ್ತು ಅಗೌರವವಾಗಿತ್ತು. ಯಾವ ತರಗತಿಯಲ್ಲಿ ತಮ್ಮ ಪರಿಚಿತರು ಪ್ರಯಾಣಮಾಡುವರೊ ಅದನ್ನು ಎಲ್ಲವೂ ಅವಲಂಬಿಸಿರುತ್ತದೆ.

ಆದುದರಿಂದಲೇ ಬಾಚಿ ಅನಾವಶ್ಯಕವಾದ ಅವಹೇಳನದ ಪ್ರಸಂಗಗಳಿಂದ ತಪ್ಪಿಸಿಕೊಳ್ಳಲು ಬೇಸಿಗೆಯ ತಂಪಾದ ನಿವಾಸ ಸ್ಥಳಗಳಿಂದ ಧನಿಕ ನೆರೆಹೊರೆಯವರೊಡನೆ ಹೊರಡುವ ವಾಡಿಕೆಯನ್ನಿಟ್ಟಿರಲಿಲ್ಲ.

ಆಗ ಟೊಮಾಟೋ ಮತ್ತು ದ್ರಾಕ್ಷಿಗಳ ಸುಗ್ಗಿ. ಹಡಗಿಗೆ ಅವುಗಳನ್ನು ತುಂಬುವ ಕೆಲಸ ಒಂದೇ ಸಮನೆ ಸಾಗಿತ್ತು. ಅದು ಮುಗಿದರೆ ತಾನೇ! ಬೇಜಾರು!

ಹಡಗಿನ ಹಗ್ಗವನ್ನು ಬಿಚ್ಚಿ ಎಸೆದು ಹೊರಡುವ ಕಾಲ ಬಂತೋ ಇಲ್ಲವೋ ಎಂಬುದನ್ನು ತಿಳಿಯಲು ಹಡಗಿನ ಡೆಕ್ಕಿಗೆ ಪೇತ ಹಲವು ಸಲ ಹೋಗಿ ಬಂದ. ಪ್ರತಿಸಲವೂ ಯಾವ ರೀತಿಯ

ಪ್ರಗತಿಯೂ ಅವನಿಗೆ ಕಂಡು ಬರಲಿಲ್ಲ. ಹಡಗಿಗೆ ಸಾಮಾನು ಸಾಗಿಸುವ ಜನರು ನಡೆದುಕೊಂಡು ಹೋಗಲನುಕೂಲಿಸುವಂತೆ ಬಂದರುಕಟ್ಟೆಗೂ ಹಡಗಿಗೂ ಹಾಕಿದ್ದ ಹಲಗೆಯ ಮೇಲೆ ಸಾಲಾಗಿ ಒಬ್ಬರ ಹಿಂದೆ ಒಬ್ಬರಂತೆ ಹಡಗಿನ ನೌಕರರು ತಮ್ಮ ಹೆಗಲುಗಳ ಮೇಲೆ ಬುಟ್ಟಿಗಳನ್ನೂ ಕುಕ್ಕೆಗಳನ್ನೂ ಹೊತ್ತುಕೊಂಡು ಹೋಗುತ್ತಿದ್ದರು. ಅದಕ್ಕೆ ಕೊನೆಯೇ ಇರಲಿಲ್ಲವೇನೋ! ಎಷ್ಟು ಹೊತ್ತಾದರೂ ಬಂದರುಕಟ್ಟೆಯ ಮೇಲಿದ್ದ ಸಾಮಾನು ಮಾತ್ರ ಕರಗಿದಂತೆಯೇ ಕಾಣುತ್ತಿರಲಿಲ್ಲ.

ಸಾಮಾನು ಭರ್ತಿ ಮಾಡುವ ಕೆಲಸವನ್ನು ನೋಡಿಕೊಳ್ಳುತ್ತಿದ್ದ ನೌಕಾಧಿಪತಿಯ ಸಹಾಯಕನ ಬಳಿಗೆ ನಡೆದು ಹೋಗಿ ಪೇತ್ಯ ಅವನ ಬಳಿಯಲ್ಲೇ ಅಡ್ಡಾಡಲಾರಂಭಿಸಿದ. ಸರಕನ್ನು ಇಳಿಸುತ್ತಿದ್ದ ಹಡಗಿನ ಮೆಲ್ಭಾಗದ ಬಾಗಿಲಿನ ಬಳಿಗೆ ಹೋಗಿ ದ್ರಾಕ್ಷಾರಸದ ಮೂರು ನಾಲ್ಕು ಪೀಪಾಯಿಗಳನ್ನು ಒಟ್ಟಿಗೆ ಸೇರಿಸಿ ಸರಪಣಿಗಳಿಗೆ ಕಟ್ಟಿ ಅವುಗಳನ್ನು ಉಪಾಯವಾಗಿ ಹೇಗೆ ಒಳಕ್ಕೆ ಇಳಿಸುತ್ತಿದ್ದರೆಂಬುದನ್ನು ಬಗ್ಗಿ ನೋಡಿದ.

ಪೇತ್ಯ ಬೇಕೆಂದೇ ಒಂದೊಂದು ಸಲ ತನ್ನ ಮೊಣಕೈಯನ್ನು ನೌಕಾಧಿಪತಿಯ ಸಹಾಯಕನಿಗೆ ತಗುಲುವಂತೆ ಅವನನ್ನು ಒರಸಿಕೊಂಡೇ ಓಡಾಡಿದ. ಇದು ಅವನ ಗಮನವನ್ನು ಸೆಳೆಯಲು ಮಾಡಿದ 'ಅನಿರೀಕ್ಷಿತವಾದರೂ ಉದ್ದೇಶಪೂರ್ವಕ' ವಾದ ಉಪಾಯವಾಗಿದ್ದಿತು.

"ಕೈಕಾಲುಗಳಿಗೆ ತೊಡರಿಕೊಳ್ತೀಯಲ್ಲೊ ಮಗು" ನೌಕಾಧಿಪತಿಯ ಸಹಾಯಕ ರೇಗಿದಂತೆ ಕಂಡರೂ ಔದಾಸೀನ್ಯದಿಂದ ಕೇಳಿದ.

ಪೇತ್ಯ ಇದನ್ನು ತಪ್ಪೆಂದು ಎಣಿಸಲಿಲ್ಲ. ಹೇಗಾದರೂ ಅವನೊಡನೆ ಮಾತಾಡುವಂತಾದರೆ ಸರಿ.

"ರೀ, ಬೇಗ ಹೊರಡ್ತೀವೋ ನಾವು?"

"ಹೌದು."

"ಯಾವಾಗ?"

"ಸಾಮಾನು ಭರ್ತಿಯಾದ ಕ್ಷಣ."

"ಸಾಮಾನು ಭರ್ತಿಯಾಗೋದು ಎಷ್ಟು ಹೊತ್ತಿಗೆ?"

"ನಾವು ಹೊರಡೋ ಹೊತ್ತಿಗೆ."

ಆತನನ್ನು ಹುರಿದುಂಬಿಸುವಂತೆ ಪೇತ್ಯ ಗಟ್ಟಿಯಾಗಿ ನಕ್ಕ.

"ನಿಜವಾಗಿ ಯಾವಾಗ ಅಂತ ಹೇಳಿ?"

"ದಾರಿ ಬಿಡು ಅಂದರೆ?"

ಪೇತ್ಯ ಉತ್ಸಾಹದ ನಡಿಗೆಯಿಂದ ಏನೂ ಅಹಿತವಾದುದು ನಡೆದೇ ಇಲ್ಲ ಎಂಬಂತೆ ಅಲ್ಲಿಂದ ಹೊರಟ. ಸ್ವಲ್ಪ ಹೊತ್ತಿನ ಸಂಭಾಷಣೆಯ ಬಳಿಕ ಅವರು ಬೇರೆ ಬೇರೆಯಾದರು. ಅಷ್ಟೆ ಹೊರತು, ಅದರಲ್ಲಿ ವಿಶೇಷವೇನೂ ಕಾಣಲಿಲ್ಲ.

ಪೇತ್ಯ ಹಡಗಿನ ಕಟಕಟೆಯ ಕಂಬಿಯ ಮೇಲೆ ಗದ್ದವನ್ನಿಟ್ಟುಕೊಂಡು ಬಂದರು ಕಟ್ಟೆಯನ್ನೇ ನೋಡುತ್ತಿದ್ದ. ಇಷ್ಟುಹೊತ್ತಿಗೆ ಅವನಿಗೆ ಬೇಜಾರಾಗಿ ಹೋಗಿತ್ತು!

ಅಲ್ಲಿ ತುರ್ಗನೀವ್ ಒಂದೇ ಅಲ್ಲದೆ ಇನ್ನೂ ಕೆಲವು ದೋಣಿಗಳಿಗೆ ಸಾಮಾನನ್ನು ತುಂಬುತ್ತಿದ್ದರು. ಬಂದರು ಕಟ್ಟೆಯೆಲ್ಲ ಗೋಧಿ ಗಾಡಿಗಳಿಂದ ಇಟ್ಟಣಿಸಿತ್ತು. ಹಡುಗಗಳ ಮೇಲಿನ ಚೌಕ

ವಾದ ಬಾಗಿಲುಗಳ ಮೂಲಕ ಇಳಿಗಾಲುವೆಗಳಲ್ಲಿ ಬಿಳಿಗೋಧಿ ರೇಷ್ಮೆಯಂತೆ ಸರಸರನೆ ಕೆಳಕ್ಕೆ ಹರಿದು ಹೋಗುತ್ತಿದ್ದಿತು. ಸಣ್ಣ ಧೂಳಿನಿಂದಾವೃತವಾಗಿದ್ದ ಚಚ್ಚೌಕವಾದ ಬಾಗಿಲಿನ ಮೇಲೆ ಸೂರ್ಯನ ಪ್ರಖರ ಕಿರಣಗಳು ಬಿದ್ದು ಸುಡುತ್ತಿದ್ದುವು.

ಅಲ್ಲಿ ಎಲ್ಲವೂ ಹಾಳುಸುರಿಯುತ್ತಿತ್ತು. ತರಕಾರಿ ತೋಟಗಳೊಳಗೆ ಬಿಸಿಲಿನಿಂದ ಸೊರಗಿದ ಎಲೆಗಳ ನೆರಳಿನಲ್ಲಿ ಆಪ್ಯಾಯಮಾನವಾಗಿ ಮಿನುಗುತ್ತಿರಬೇಕಾಗಿದ್ದ ಮೃದು ಮಧುರವಾದ ಟೊಮಾಟೋ ಹಣ್ಣುಗಳನ್ನು ಒಂದೇರೀತಿಯಾದ ಕುಕ್ಕೆಗಳಲ್ಲಿ ತುಂಬಿಬಿಟ್ಟಿದ್ದರು.

ತೋಟದ ಬಳ್ಳಿಗಳಲ್ಲಿ ಸುಂದರಕಲಾಕೃತಿಗಳಂತೆ ಶೋಭಾಯಮಾನವಾಗಿರಬೇಕಾಗಿದ್ದ ಸೊಂಪಾದ ದ್ರಾಕ್ಷಿಹಣ್ಣುಗಳನ್ನು ಬುಟ್ಟಿಗಳಲ್ಲಿ ಇರುಕಿ ತುಂಬಿ ಮೇಲೆ ಗೋಣಿಚೀಲ ಹಾಕಿ ಹೊಲಿದು ಅದರ ಮೇಲೆ ಚೀಟಿ ಅಂಟಿಸಿದ್ದನ್ನು ನೋಡಿದರೆ ಅಯ್ಯೋ ಎನ್ನಿಸುತ್ತಿತ್ತು

ರೈತರು ಅಷ್ಟೊಂದು ಕಷ್ಟಪಟ್ಟು ಸುಗ್ಗಿಯಲ್ಲಿ ಸಂಗ್ರಹಿಸಿದ ಗೋಧಿ, ಆ ಹೊಲಗಳ ಪರಿಮಳಗಳನ್ನೆಲ್ಲ ತುಂಬಿಕೊಂಡ ಹೊಂಬಣ್ಣದ ಗೋಧಿ ಅಲ್ಲಿ ಕೊಳಕು ತಟ್ಟಿನ ಮೇಲೆ ರಾಶಿ ಬಿದ್ದಿತ್ತು. ಜನ ತಮ್ಮ ಪಾದರಕ್ಷೆ ಧರಿಸಿದ ಕಾಲುಗಳಿಂದ ಅದನ್ನು ನಿರ್ಲಕ್ಷ್ಯವಾಗಿ ತುಳಿದಾಡುತ್ತ ಓಡಾಡುತ್ತಿದ್ದರು.

ಗೋಣಿಚೀಲಗಳು, ಹಡಗೆಗಳು, ಬುಟ್ಟಿಗಳು ಮತ್ತು ಪೀಪಾಯಿಗಳ ನಡುವೆ ಅಕ್ಕರ್ಮಾನ್ ಪೋಲಿಸಿನವನೊಬ್ಬ ದಾಪುಗಾಲು ಹಾಕುತ್ತ ಅಡ್ಡಾಡುತ್ತಿದ್ದ. ಅವನು ಬಿಳಿಯ ಸಮವಸ್ತ್ರವನ್ನು ಧರಿಸಿದ್ದ. ಅವನ ಕತ್ತಿನಲ್ಲಿ ಕಿತ್ತಲೆ ಬಣ್ಣದ ಪಿಸ್ತೂಲಿನ ದಾರ ಇದ್ದಿತು. ಅವನ ಪಕ್ಕದಲ್ಲಿ ಸೊಂಟದಿಂದ ಒಂದು ಉದ್ದವಾದ ಕತ್ತಿಯು ಇಳಿಬಿದ್ದಿತ್ತು.

ನಿಶ್ಚಲವಾದ ನದಿಯ ದಗೆ, ಧೂಳು ಮತ್ತು ನಿಧಾನವಾಗಿ ಒಂದೇ ಸಮನೆ ಹಡಗಿಗೆ ಸಾಮಾನು ಭರ್ತಿಮಾಡುತ್ತಿದ್ದ ಎಂದೆಂದೂ ಮುಗಿಯದ ಆ ಗಲಾಟೆ-ಎಲ್ಲದರ ದೆಸೆಯಿಂದ ಪೇತ್ಯನಿಗೆ ಜೊಂಪು ಹತ್ತಲಾರಂಭಿಸಿತು.

ಹಡಗು ಬೇಗ ಹೊರಡುವುದೋ ಇಲ್ಲವೋ ಎಂಬುದನ್ನು ತಿಳಿಯಲು ನೌಕಾಧಿಪತಿಯ ಸಹಾಯಕನು ಸ್ವಲ್ಪಬಿಡುವಾಗಿರುವ ಸಮಯವನ್ನು ನೋಡಿ ಪೇತ್ಯ ಪುನಃ ಅವನ ಹತ್ತಿರಕ್ಕೆ ಹೋದ. ಅವನಿಗೆ ಪುನಃ ಸಾಮಾನು ಭರ್ತಿಯಾದಾಗ ಹಡಗು ಹೊರಡುತ್ತೆ, ಹಡಗು ಹೊರಟಾಗ ಸಾಮಾನು ಭರ್ತಿ ಮಾಡಿ ಮುಗಿದಿರುತ್ತೆ.' ಎಂಬ ಹಿಂದಿನ ಉತ್ತರವೇ ದೊರಕಿತು.

ಪೇತ್ಯ ನಿದ್ದೆಯ ಮಂಪರಿನಲ್ಲಿ ಧ್ಯಾನಪರನಾಗಿ ನಿಂತ. ಹಾಗೇ ನೋಡಿದಾಗ ಅವನಿಗೆ ಇಡೀ ಪ್ರಪಂಚವೇ ವ್ಯಾಪಾರದ ಸರಕಾಗಿಕಾಣಿಸಿತು ಟೊಮಾಟೋ ಹಣ್ಣುಗಳು, ದೋಣಿಗಳು, ದಡದಲ್ಲಿರುವ ಮನೆಗಳು, ಮನೆಗಳ ಪಕ್ಕದಲ್ಲಿದ್ದ ನಿಂಬೆ ಬಣ್ಣದ ಬಣವೆಗಳು-ಎಲ್ಲ ವ್ಯಾಪಾರದ ಸರಕುಗಳೇ. ಯಾವುದಲ್ಲ,ಯಾವುದುಂಟು! ಹಡಗಿನ ನೌಕರರೂ ಸಹ ವ್ಯಾಪಾರದ ಸರಕೇ! ಪೇತ್ಯ ತೂರಾಡುತ್ತ ಕೋಣೆಗೆ ಹೋಗಿ ಪಾವಲಿಕನ ಪಕ್ಕದಲ್ಲಿ ಮಲಗಿಕೊಂಡ. ಅವನಿಗೆ ಮಲಗಿದೆನೆಂದು ತಿಳಿಯುವುದಕ್ಕೆ ಮೊದಲೇ ನಿದ್ರಾದೇವಿ ಅವನನ್ನು ಅಪ್ಪಿಬಿಟ್ಟಳು. ಕೊನೆಗೆ ಎಚ್ಚರಗೊಂಡು ನೋಡಿದಾಗ ಹಡಗು ಚಲಿಸುತ್ತಿತ್ತು.

ತಾನಿದ್ದ ಕೊಠಡಿಯು ಯಾವುದೋ ಒಂದು ವಿಚಿತ್ರ ರೀತಿಯಲ್ಲಿ ತನ್ನ ಸ್ಥಾನವನ್ನು ಬದಲಾಯಿಸಿದೆ ಎಂಬುದನ್ನು ಪೇತ್ಯ ಕಂಡ. ಈಗ ಹಡಗು ಹಗುರವಾದಂತೆ ಅನುಭವವಾಯಿತು.

ಸಮುದ್ರದ ನೀರಿನ ಅಲೆಗಳ ಹೊಳಪು ಹಡಗಿನ ಕೋಣೆಯ ಮೇಲುಗಡೆ ಪ್ರತಿಫಲಿಸುತ್ತಿತ್ತು.

ಹಡಗಿನ ಯಂತ್ರ ನಡೆಯುತ್ತಿತ್ತು; ನೀರ್ಗಾಲಿಗಳ ಚಲನೆಯ ಶಬ್ದ ಕೇಳಿ ಬರುತ್ತಿತ್ತು.

ಹಡಗು ಹೊರಡುವಾಗಿನ ರೋಮಾಂಚಕಾರಿ ಸನ್ನಿವೇಶವನ್ನು ನೋಡುವ ಅದೃಷ್ಟ ಪೇತ್ಯನ ಪಾಲಿಗೆ ಇಲ್ಲವಾಗಿತ್ತು. ಹಡಗು ಹೊರಡುವ ಕೊನೆಯ ಸೂಚನೆಯಾದ ಮೂರನೆಯ ಸಿಳ್ಳು, ನೌಕಾಧಿಪತಿಯ ಆಜ್ಞೆ, ಹಡಗಿಗೂ ಬಂದುರುಕಟ್ಟೆಗೂ ಜನ ಓಡಾಡಲು ಹಾಕಿದ್ದ ಹಲಗೆಯನ್ನು ಎತ್ತುವಿಕೆ, ನಾವೆಯನ್ನು ಬಂಧಿಸಿದ್ದ ಹಗ್ಗವನ್ನು ಕಳಚಿ ಎಸೆಯುವಿಕೆ.....ಒಂದೇ ಎರಡೇ ಎಲ್ಲ ವನ್ನೂ ಕಳೆದುಕೊಂಡಿದ್ದ. ಇವೆಲ್ಲವುಗಳಿಗಿಂತಲೂ ತೀವ್ರವಾದ ನಿರಾಶೆಯನ್ನುಂಟುಮಾಡಿದ ವಿಚಾರವೆಂದರೆ ತಂದೆಯಾಗಲಿ ಪಾವಲಿಕನಾಗಲಿ ಕೋಣೆಯಲ್ಲಿರಲಿಲ್ಲ. ತನ್ನನ್ನು ಬಿಟ್ಟು ಅವರು ಎಲ್ಲವನ್ನೂ ನೋಡಿಬಿಟ್ಟಿದ್ದರು.

"ನನ್ನನ್ನು ಯಾಕೆ ಏಳಿಸಲಿಲ್ಲ ?" ಗಟ್ಟಿಯಾಗಿ ಪೇತ್ಯ ಅರಚಿಕೊಂಡ. ನಿದ್ದೆಯಲ್ಲಿ ಯಾರೋ ತನ್ನನ್ನು ಸುಲಿಗೆ ಮಾಡಿದ್ದಂತೆ ಅನ್ನಿಸಿತು ಅವನಿಗೆ.

ಹಡಗಿನ ಡೆಕ್ಕಿಗೆ ಹೋಗಬೇಕೆಂದು ಕೋಣೆಯಿಂದ ಹೊರಕ್ಕೆ ರಭಸದಿಂದ ಧಾವಿಸಿದಾಗ ಅವನ ಕಾಲು ತೆಳುವಾದ ಹಿತ್ತಾಳೆಯ ಹೊಸ್ತಿಲಿಗೆ ಧಢಾರನೆ ಬಡಿಯಿತು, ಈ ಅಲ್ಪ ವಿಷಯ ಗಳಿಗೆಲ್ಲ ಗಮನ ಕೊಡುವಷ್ಟು ಸಮಯವಾಗಲಿ ತಾಳ್ಮೆಯಾಗಲಿ ಅವನಿಗಿರಲಿಲ್ಲ.

"ಥೂ, ಇದರಮನೆ ಹಾಳಾಗ !"

ಪೇತ್ಯನಿಗೆ ಅಷ್ಟೊಂದು ಉದ್ರೇಕಗೊಳ್ಳಬೇಕಾದ ಆವಶ್ಯಕತೆ ಇರಲಿಲ್ಲ. ಹಡಗಿನ ಹಗ್ಗವನ್ನು ಕಳಚಿ ದಡಕ್ಕೆ ಎಸೆದಾಗಿತ್ತು. ಆದರೆ ಅದು ಇನ್ನೂ ತನ್ನ ನೇರ ಮಾರ್ಗವನ್ನು ಹಿಡಿದಿರಲಿಲ್ಲ. ಆಗತಾನೆ ದಡದಿಂದ ಹೊರಟು ತಿರುಗುತ್ತಿತ್ತು. ಇನ್ನೂ ಆಸಕ್ತಿದಾಯಕವಾದ ಘಟನೆಗಳು ಮುಂದೆ ಜರಗತಕ್ಕವಿದ್ದುವು.

"ನಿಧಾನವಾಗಿ ಸಾಗಲಿ", "ಬಹು ನಿಧಾನ", "ನಿಲ್ಲಿಸು," "ಹಿಂದಕ್ಕೆ ಬಿಡು", "ಬಹು ಮೆತ್ತಗೆ ಹಿಂದಕ್ಕೆ", ಇವೇ ಮೊದಲಾದ ಚಿತ್ತಾಕರ್ಷಕವಾದ ಆಜ್ಞೆಗಳ ಸುರಿಮಳೆ ಆಗುವುದರಲ್ಲಿದ್ದುವು. ಇವೆಲ್ಲ ಬಾಯಿಪಾಠ ಮಾಡಿದಂತೆ ಪೇತ್ಯನಿಗೆ ಹೃದ್ಗತವಾಗಿದ್ದುವು.

ಬಂದರುಕಟ್ಟೆ ಹಿಂದು ಹಿಂದಕ್ಕೆ ಸರಿಯುತ್ತ ಸಣ್ಣನಾಗಿ ಕಾಣುತ್ತ ಬಂದು ವೃತ್ತಾಕಾರವಾಗಿ ಬಳಸುತ್ತಿದ್ದಂತೆ ತೋರಿತು.

ಹಡಗಿನ ಒಂದು ಪಕ್ಕದಲ್ಲಿ ಎಲ್ಲ ಪ್ರಯಾಣಿಕರೂ ಕಿಕ್ಕಿರಿದು ತುಂಬಿ ಬಿಟ್ಟಿದ್ದರು. ಪ್ರಯಾ ಣಿಕರು ತಮ್ಮ ಟೋಪಿಗಳನ್ನೂ ಕರವಸ್ತ್ರಗಳನ್ನೂ ಇನ್ನೂ ಬೀಸುತ್ತಿದ್ದುದನ್ನು ನೋಡಿದಾಗ ಪ್ರಪಂಚದ ಇನ್ನೊಂದು ತುದಿಗೆ ಪ್ರಯಾಣ ಹೊರಡುವ ಜನರು ಎಷ್ಟೊಂದು ಉದ್ವೇಗದಿಂದ ಕೂಡಿರುತ್ತಾರೋ ಅದಕ್ಕೇನೂ ಇವರು ಕಡಿಮೆಯಾಗಿರಲಿಲ್ಲ ಎಂದು ಹೇಳಬಹುದಾಗಿತ್ತು. ವಸ್ತು ಸ್ಥಿತಿಯೇನೆಂದರೆ ಕಾಗೆ ಹಾರಿದಂತೆ ನೇರವಾಗಿ ಮೂವತ್ತು ಮೈಲಿಗಳಷ್ಟು ದೂರ ಮಾತ್ರ ಅವರು ಹಡಗಿನಲ್ಲಿ ಪ್ರಯಾಣ ಮಾಡುವವರಾಗಿದ್ದರು. ಸಮುದ್ರಯಾನದ ಸಂಪ್ರದಾಯವೇ ಹಾಗಿದ್ದಿತು, ಮತ್ತು ದಾಕ್ಷಿಣಾತ್ಯರ ತೀವ್ರವಾದ ಸ್ವಭಾವವೂ ಹಾಗೆಯೇ.

ಅಲ್ಲಿದ್ದವರೆಲ್ಲ ಹೆಚ್ಚಾಗಿ ಮೂರನೆ ತರಗತಿಯ ಪ್ರಯಾಣಿಕರು ಮತ್ತು ಹಡಗಿನ ಮುಂಭಾ ಗದ ಕೆಳಡೆಕ್ಕಿನ ಮೇಲೆ ಪ್ರಯಾಣಮಾಡುವ ಜನರು. ಹಡಗಿನ ಮೇಲಿನ ಡೆಕ್ಕಿಗೆ ಬರಲು ಅವರಿಗೆ

ಅಪ್ಪಣೆಯಿಲ್ಲ. ಮೊದಲನೆಯ ಮತ್ತು ಎರಡನೆ ತರಗತಿಯ "ಮಡಿ" ಜನಗಳಿಗೆ ಡೆಕ್ಕು ವಿಾಸಲು.

ಮೇಲುಗಡೆ ಡೆಕ್ಕಿನಲ್ಲಿ ತಂದೆಯೂ ಪಾವಲಿಕನೂ ನಿಂತಿದ್ದುದನ್ನು ಪೇತ್ಯ ಕಂಡ. ಅವರೂ ಕೂಡ ಹುರುಪಿನಿಂದ ತಮ್ಮ ಟೋಪಿಗಳನ್ನು ಬೀಸುತ್ತಿದ್ದರು. ನೌಕಾಧಿಪತಿಯೂ ಅವನ ಎಲ್ಲ ನೌಕರ ವರ್ಗವೂ ಅಲ್ಲಿದ್ದರು. ನೌಕಾಧಿಪತಿಯ ಸಹಾಯಕನೂ ಬರಿಗಾಲಿನಲ್ಲಿದ್ದ ಇಬ್ಬರು ಚಾಕರರೂ ಕೂಡ ಅಲ್ಲಿಯೆ ನಿಂತಿದ್ದರು. ಹಡಗನ್ನು ನಡೆಸುವುದಕ್ಕೆ ಸಂಬಂಧಪಟ್ಟ ಕೆಲಸವನ್ನು ಯಾರಾದರೂ ಮಾಡುತ್ತಿದ್ದರೆ ಅವರು ನೌಕಾಧಿಪತಿ ಮತ್ತು ಅವನ ಕೈಕೆಳಗಿನ ಒಬ್ಬ ನೌಕರ ಎಂದು ಹೇಳ ಬಹುದಾಗಿತ್ತು. ನೌಕಾಧಿಪತಿಯ ಸಹಾಯಕನೂ ಮತ್ತು ಅವನ ಸಹೋದ್ಯೋಗಿಯೊಬ್ಬನೂ ಟಿಕೆಟ್ಟುಗಳನ್ನು ಮಾರುತ್ತಿದ್ದರು. ಅವರ ಕೈಗಳಲ್ಲಿ ಒಂದು ಬಣ್ಣದ ಕಾಗದದ ಸುರುಳಿಯೂ, ಸಾಮಾನ್ಯವಾಗಿ ರೊಟ್ಟಿ ಅಂಗಡಿಗಳಲ್ಲಿ ಕಾಣುವಂಥ ಹಸುರು ತಂತಿಯ ದುಡ್ಡಿನ ಪೆಟ್ಟಿಗೆಯೂ ಇದ್ದುವು. ದಡದಲ್ಲಿ ಟಿಕೆಟ್ಟುಗಳನ್ನು ಕೊಂಡುಕೊಳ್ಳದೇ ಇದ್ದಂಥ ಪ್ರಯಾಣಿಕರನ್ನು ವಿಚಾರಿಸುತ್ತ ಅವರಿಗೆ ಟಿಕೆಟ್ಟುಗಳನ್ನು ಕೊಡುತ್ತಿದ್ದರು.

ಹಡಗಿನ ಮೇಲೆ ಆಚೀಚೆಕಡೆ ಇದ್ದ ವೇದಿಕೆಗಳ ನಡುವೆ ಆ ಕಡೆಯಿಂದ ಈ ಕಡೆಗೆ ಮಾರು ಗಾಲು ಹಾಕುತ್ತ ನೌಕಾಧಿಪತಿ ಆಜ್ಞೆಗಳನ್ನು ಕೊಡುತ್ತಿದ್ದ. ಡೆಕ್ಕಿನ ಮೇಲಿನ ನೌಕರನೊಬ್ಬನು ಪ್ರಯಾಣಿಕರ ಮೆಚ್ಚುಗೆಯ ಕಣ್ಣುಗಳೆದುರಿಗೆ ದೊಡ್ಡ ಹಿತ್ತಾಳೆಯ ನೌಕಾ ದಿಕ್ಸೂಚಿಯನ್ನು ನೋಡುತ್ತಲೂ ತನ್ನ ಬರಿಗಾಲಿನಿಂದ ಆಗಾಗ್ಗೆ ಬಿಗಿಯಾಗಿ ಹಿಡಿದುಕೊಂಡು ನಿಂತು ಚಾಲಕ ಚಕ್ರವನ್ನು ತಿರುಗಿಸುತ್ತಲೂ ಇದ್ದನು. ಚಾಲಕ ಚಕ್ರವು ತಿರುಗಿಸಿದಾಗಲೆಲ್ಲ ಕಿರುಗುಟ್ಟುತ್ತಿತ್ತು. ಚುಕ್ಕಾಣಿಯ ಸರಪಣಿಗಳು ಹಿಂದಕ್ಕೂ ಮುಂದಕ್ಕೂ ಹರಿದಾಡುತ್ತ ಸ್ಥಾನಪಲ್ಲಟವಾಗುತ್ತಿದ್ದುವು. ಆಗ ಆ ಮಾರ್ಗದಲ್ಲಿ ಯಾರಾದರೂ ಸ್ತ್ರೀಯರು ಎಚ್ಚರ ತಪ್ಪಿ ತಮ್ಮ ಬಟ್ಟೆಗಳನ್ನು ನೆಲದಮೇಲೆ ಎಳೆದಾಡಿಕೊಂಡು ಹೋದರೆ ಆಗ ಆ ಸರಪಣಿಗಳು ನಿಷ್ಕರುಣವಾಗಿ ಅವರ ಬಟ್ಟೆಗಳನ್ನು ಹಿಡಿದು ನಿಲ್ಲಿಸಲೋ ಇಲ್ಲವೇ ಅವುಗಳನ್ನು ಹರಿದು ಹಾಕಲೋ ಸಿದ್ಧವಾಗಿರುತ್ತಿದ್ದುವು.

ಈಗ ಹಡಗು ಹಿಂದಕ್ಕೆ ಸರಿದು ನಿಧಾನವಾಗಿ ತಿರುಗುತ್ತಿತ್ತು.

"ಬಲಗಡೆಗೆತಿರುಗಿಸು" ಎಂದು ನೌಕಾಧಿಪತಿ ಕರ್ಣಧಾರನಿಗೆ ಆಜ್ಞೆ ಮಾಡಿದ. ತಿಂಡಿಪೋತನೂ ಬಾಯಿಹರಕನೂ ಅದಂಥ ವ್ಯಕ್ತಿಯ ಗಂಟಲಿನ ಹಾಗೆ ನೌಕಾಧಿಪತಿಯದು ಉತ್ಸಾಹಪೂರ್ಣವಾದ ಒಡಕಲು ಧ್ವನಿಯಾಗಿತ್ತು. ದಿಕ್ಸೂಚಿಗೆ ಮಾನ್ಯವಾದಷ್ಟು ದೂರದಲ್ಲಿ ಜನಸುತ್ತ ಗುಂಪು ಕಟ್ಟಿಕೊಂಡು ನಿಂತಿದ್ದರೂ ಕೂಡ ಅವರ ಕಡೆಗೆ ಒಂದಿಷ್ಟೂ ಗಮನಕೊಡದೆ "ಬಲಗಡೆಗೆ ತಿರುಗಿಸು !, ಕೊಂಚ ಇನ್ನೂ! ಎಲ್ಲಿ ಇನ್ನೊಂದು ರವಷ್ಟು! ಹಾ, ಸರಿ ಈಗ ಬಿಗಿಯಾಗಿ ಹಿಡಿದು ಬಿಡು! ಮುಂದೆ ಹೋಗಲಿ!" ಎಂದು ಆಜ್ಞೆ ಮಾಡುತ್ತಿದ್ದ.

ಹಡಗಿನ ಬಲಪಕ್ಕದ ವೇದಿಕೆಯ ಬಳಿಗೆ ನೌಕಾಧಿಪತಿ ಹೋದ. ಅಲ್ಲಿದ್ದ ಮಾತನಾಡುವ ಕೊಳವೆಯನ್ನು ಕೈಗೆ ತೆಗೆದುಕೊಂಡ. ಮೆಟ್ಟು ಸನ್ನೆಯನ್ನು ಒತ್ತಿದಾಗ ಹಡಗಿನ ಅಡಿಯಲ್ಲಿ ಗಂಟೆ ಟಂಗ್ ಟಂಗ್ ಎಂದಿತು. ಪ್ರಯಾಣಿಕರು ಗಾಂಭೀರ್ಯದಿಂದ ತಮ್ಮ ಹುಬ್ಬುಗಳನ್ನೆತ್ತಿ ಪರಸ್ಪರ ದೃಷ್ಟಿಗಳನ್ನು ವಿನಿಮಯ ಮಾಡಿಕೊಂಡರು. ನೌಕಾಧಿಪತಿಯ ಆಜ್ಞೆಗೆ ಸಲ್ಲುತ್ತಿದ್ದ ಗೌರವವೋ ಇದು ಎನ್ನಿಸುತ್ತಿತ್ತು. ಆಗ ತಾನೇ ನೌಕಾಧಿಪತಿ ಯಂತ್ರದ ಕೊಠಡಿಗೆ ಸಂಕೇತವನ್ನು ಕಳುಹಿಸಿದನೆಂದು ಅವರು ಅರ್ಥ ಮಾಡಿಕೊಂಡರು.

ಈಗ ಪೇತ್ಯ ಏನು ಮಾಡಬೇಕು? ವೇದಿಕೆಯ ಹತ್ತಿರಕ್ಕೆ ಓಡಿ ಹೋಗಿ ಅಲ್ಲಿ ನೌಕಾಧಿಪತಿಯು ಆಜ್ಞೆಗಳನ್ನು ಕೊಳವಿಯ ಮೂಲಕ ಘೋಷಿಸುವುದನ್ನು ನೋಡಬೇಕೇ, ಇಲ್ಲ ದಿಕ್ಸೂಚಿಯ ಹತ್ತಿರ ಕರ್ಣಧಾರನ ಬಳಿ ನಿಂತು ಅವನ ಕಾರ್ಯಚಟುವಟಿಕೆಗಳನ್ನು ಅವಲೋಕಿಸಬೇಕೆ? ತಾನು ಎರಡಾಗಬಾರದಿತ್ತೇ ಎಂಬಷ್ಟು ತವಕ ಅವನಿಗೆ. ಕೊನೆಗೆ ಮಾತಾಡುವ ಕೊಳವೆಯೇ ಗೆದ್ದಿತು. ಪೇತ್ಯ ವೇದಿಕೆಯ ಹತ್ತಿರಕ್ಕೆ ಪಾವಲಿಕನನ್ನು ಎಳೆದುಕೊಂಡು ಹೋದ. "ನೋಡು ಪಾವಲಿಕ್ ನೋಡು" ಎಂದು ಉತ್ಸಾಹದಿಂದ ಕೂಗಿದ. ತನಗೆ ನೌಕಾಚಾಲನೆಯ ಶಾಸ್ತ್ರದ ಅರಿವು ಇದೆಯೆಂಬುದನ್ನು ಅಲ್ಲೇ ಪಕ್ಕದಲ್ಲಿ ನಿಂತಿದ್ದ ಇಬ್ಬರು ಮುದ್ದು ಹುಡುಗಿಯರಿಗೆ ತೋರಿಸಿಗೊಳ್ಳ ಬೇಕೆಂಬ ಆಂತರಿಕ ಆಸೆಯು ಹುಟ್ಟಲೂ ಕೂಡ ಅವನಲ್ಲಿ ಸಮಯವಿರಲಿಲ್ಲ. "ಮುಂದೆ ಹೋಗಲಿ" ಎಂದು ನೌಕಾಧಿಪತಿ ಹೇಳುತ್ತಾನೆ ನೋಡು ಎಂದು ಪಾವಲಿಕನಿಗೆ ಹೇಳಿದ. ಆಗ "ಹಿಂದಕ್ಕೆ ನಿಧಾನವಾಗಿ" ಎಂದು ನೌಕಾಧಿಪತಿ ಕೊಳವೆಯೊಳಕ್ಕೆ ನುಡಿಯುವುದೇ!

ಕೆಳಗಡೆ ಗಂಟೆಯು ಪುನಃ ಟಿಂಗ್ ಟಿಂಗ್ ಶಬ್ದ ಮಾಡಿತು. ನೌಕಾಧಿಪತಿಯ ಆಜ್ಞೆ ಅರ್ಥವಾಯಿತೆಂದು ಅದು ಸೂಚನೆ ಕೊಟ್ಟಿತು.

೬. ಫೋಟೋ

ಅಕ್ಕರ್‌ಮಾನ್ ಆಗಲೇ ಕಣ್ಣುಗಳಿಂದ ಮರೆಯಾಗಿತ್ತು. ಪ್ರಾಚೀನ ತುರ್ಕಿಯ ಪಾಳು ಕೋಟೆಗಳೂ ಅಗೋಚರವಾಗಿದ್ದುವು. ಆದರೂ ನೀಸ್ಟರ್ ನದಿಯ ಅಗಲವಾದ ಅಳಿವೆಯ ಮೂಲಕ ಕೆಳಮುಖವಾಗಿ ಹಡಗು ಇನ್ನೂ ಸಾಗುತ್ತಿತ್ತು. ಸೂರ್ಯನ ಜಡ ಛಾಯೆ ಹರಡಿದ್ದ ಕಾಫಿ ಬಣ್ಣದ ಉತ್ಸಾಹ ರಹಿತ ನದಿಗೆ ಕೊನೆಯೇ ಇರಲಿಲ್ಲ. ನೀರು ಬಹಳ ಬಗ್ಗಡವಾಗಿದ್ದುದರಿಂದ ಆ ನೀರಿನ ಮೇಲೆ ಬಿದ್ದ ಹಡಗಿನ ನೆರಳು ಜೇಡಿಯ ಮಣ್ಣಿನ ನೆಲದ ಮೇಲೆ ಇದ್ದಂತೆ ಕಾಣಿಸುತ್ತಿತ್ತು.

ಸಮುದ್ರಯಾನವು ಇನ್ನೂ ನಿಜವಾಗಿ ಆರಂಭವಾಗಿಲ್ಲವೆಂದು ಆ ಪ್ರಯಾಣಿಕರು ನಂಬಿದ್ದರು. ಅಳಿವೆಯನ್ನು ನೋಡಿ ನೋಡಿ ಅವರಿಗೆ ಚಿಟ್ಟು ಹಿಡಿದಂತಾಗಿತ್ತು. ಸಮುದ್ರ ಇನ್ನೂ ಬರಲಿಲ್ಲವೇ ಎಂದು ನಿರೀಕ್ಷಿಸುತ್ತಿದ್ದರು. ಕೊನೆಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಕಳೆದ ಮೇಲೆ ಅಳಿವೆಯ ಮುಖದ ಹತ್ತಿರಕ್ಕೆ ಹಡಗು ಬಂದಿತು.

ಪೇತ್ಯ ಹಡಗಿನ ಅಂಚಿನಲ್ಲಿದ್ದ ಕಂಬಿಗಳಿಗೆ ಅಂಟಿಕೊಂಡಂತೆ ನಿಂತುಕೊಂಡ. ಹಡಗು ಸಮುದ್ರವನ್ನು ಸೇರುವ ಆ ಮಹಾ ಸನ್ನಿವೇಶದ ವಿವರದ ಒಂದು ಚೂರನ್ನೂ ಕಳೆದುಕೊಳ್ಳಲು ಅವನಿಗೆ ಇಚ್ಛೆಯಿರಲಿಲ್ಲ. ನೀರು ಇನ್ನೂ ಕೊಂಚ ಬಗ್ಗಡವಾಗಿತ್ತಾದರೂ ಸ್ವಲ್ಪ ಮಟ್ಟಿಗೆ ತಿಳಿಯಾಗಿದ್ದಂತೆ ಕಾಣಿಸುತ್ತಿತ್ತು. ಅಲೆಗಳು ಮೊದಲಿನವುಗಳಿಗಿಂತ ಹೆಚ್ಚು ಅಗಲವೂ ಎತ್ತರವೂ ಆಗಿದ್ದುವು. ಹಡಗುಗಳು ಅನುಸರಿಸಬೇಕಾದ ಮಾರ್ಗವನ್ನು ಗುರುತಿಸಲು ಅಲ್ಲಲ್ಲಿ ತೇಲು ಬುರುಡೆಗಳು ಕೆಂಪು ಕೋಟೆಯ ತೆನೆಗಳಂತೆ ಸಾಲಾಗಿ ತಲೆಯೆತ್ತಿ ನಿಂತಿದ್ದುವು. ನಾಯಿಕೊಡೆಯ ಆಕಾರದ ತೇಲು ಬುರುಡೆಗಳ ಮೇಲಿನ ಚೂಪಾದ ಟೋಪಿಗಳು ಮೇಲಕ್ಕೂ ಕೆಳಕ್ಕೂ ಆಡುತ್ತಿದ್ದವು. ಒಂದೊಂದು ಸಲ ಹಡಗಿನ ಪಕ್ಕಕ್ಕೆ ತಗಲುವುವೋ ಎನ್ನುವಷ್ಟು ಹತ್ತಿರದಲ್ಲಿ ಆ ತೇಲು ಬುರುಡೆಗಳು ತೇಲುತ್ತಿದ್ದವು. ರಾತ್ರಿಯ ಕಾಲದಲ್ಲಿ ದಾರಿ ತಿಳಿಯುವಂತೆ ಲಾಂದ್ರವನ್ನು ಇಡಲು ತೇಲು

ಬುರುಡೆಗಳ ನಡುವೆ ಕಬ್ಬಿಣದ ಪಂಜರಗಳಿದ್ದುವು. ತೇಲು ಬುರುಡೆಗಳು ಹಡಗಿನ ಪಕ್ಕಕ್ಕೆ ಬಂದಾಗ ಆ ಕಬ್ಬಿಣದ ಪಂಜರಗಳು ಸ್ಪಷ್ಟವಾಗಿ ಪೇತ್ಯನಿಗೆ ಕಾಣಿಸಿದುವು.

ಬೆಸ್ತರ ಕಪ್ಪು ದೋಣಿಗಳನ್ನೂ, ಮತ್ತು ಕಪ್ಪು ಹಾಯಿಗಳನ್ನು ಕಟ್ಟಿದ್ದ ಎರಡು ಸಣ್ಣ ದೋಣಿಗಳನ್ನೂ ತುರ್ಗನೀವ್ ಹಿಂದಕ್ಕೆ ಹಾಕಿತು. ಹಡಗಿನಿಂದ ಎದ್ದ ಅಲೆಗಳಿಂದ ಆ ದೋಣಿಗಳು ಮೇಲೇರಿ ಪುನಃ ಕೆಳಗಿಳಿದು ತೂಗಾಡಲಾರಂಭಿಸಿದುವು.

ಗಡಿಕಾವಲಿನವರ ಪಾಳೆಯಗಳಿದ್ದ ಸುಡುಮರಳಿನ ಕೆರೋಲಿನೋ ಬುಗಾಜ್ ಭೂಶಿರದಿಂದಾಚೆ ಎರಡು ಕಡೆಯೂ ಸಾಲಾಗಿ ತೇಲುಬುರುಡೆಗಳಿದ್ದುವು. ಈ ತೇಲುಬುರುಡೆಗಳ ಸಾಲು ವಿಶಾಲವಾದ ಸಮುದ್ರಕ್ಕೆ ದಾರಿಯನ್ನು ತೋರಿಸುತ್ತಿತ್ತು. ನೌಕಾಧಿಪತಿಯೇ ಖುದ್ದಾಗಿ ಬಂದು ಪ್ರತಿನಿಮಿಷವೂ ದಿಕ್ಸೂಚಿಯನ್ನು ನೋಡುತ್ತ ಯಾವ ದಾರಿಯಲ್ಲಿ ಹೇಗೆ ಹಡಗನ್ನು ಬಿಡಬೇಕೆಂದು ಕರ್ಣಧಾರನಿಗೆ ಹೇಳಿಕೊಡುತ್ತಿದ್ದ.

ಈಗ ನೀರು ಮೊದಲಿಗಿಂತ ತಿಳಿಯಾಗಿದ್ದಂತೆ ಕಂಡಿತು. ಸಮುದ್ರದ ಅಚ್ಚನೀಲಿಯು ಬೆರೆತುದರಿಂದ ನೀರು ತೆಳ್ಳಗೆ ತೋರುತ್ತಿತ್ತು.

"ಅರ್ಧವೇಗ!" ನೌಕಾಧಿಪತಿ ಮಾತುಕೊಳವೆಯ ಮೂಲಕ ಕೂಗಿದ.

ಹಡಗಿನ ಎದುರಿಗೆ ಏರಿಳಿಯುತ್ತಿದ್ದ ಅಲೆಗಳ ನೀಲಿಗಪ್ಪು ಸಮುದ್ರವು ಹಳದಿಯ ಅಳಿವೆಯಿಂದ ಪ್ರತ್ಯೇಕಿಸಿದಂತೆ ಬೇರೆಯಾಗಿ ಕಾಣಿಸುತ್ತಿತ್ತು.

"ಮಂದಗತಿ!"

ಸಮುದ್ರ ಮೇಲಿನಿಂದ ಸ್ವಚ್ಛವಾದ ಹೊಸಗಾಳಿ ಬೀಸಿತು.

"ಬಹು ನಿಧಾನ!"

ಉಸಿರಾಡುವುದನ್ನು ನಿಲ್ಲಿಸಿತೋ ಎನ್ನುವಂತೆ ಯಂತ್ರದ ಶಬ್ದ ಮಂದವಾಯಿತು. ಆಗ ತೇಲು ಹಲಗೆಗಳು ನೀರಿಗೆ ತಗಲುತ್ತಿರಲಿಲ್ಲವೆಂದೇ ಹೇಳಬಹುದಾಗಿತ್ತು. ಸಮತಳವಾದ ದಡವು ಬಹು ಹತ್ತಿರದಲ್ಲಿ ಕಾಣಿಸುತ್ತಿದ್ದುದರಿಂದ ನೀರನ್ನು ದಾಟಿಕೊಂಡು ಅಲ್ಲಿಂದ ದಡವನ್ನು ಸುಲಭವಾಗಿ ಸೇರಿಬಿಡಬಹುದು ಎನ್ನಿಸುತ್ತಿತ್ತು.

ಗಡಿಠಾಣ್ಯದ ಬಳಿ ಬಿಳಿಯ ಬಣ್ಣದ ದೀಪಸ್ತಂಭವು ನೋಡುವವರ ಕಣ್ಣುಗಳು ಕೋರೈಸುವಂತೆ ಬೆಳಕನ್ನು ಚೆಲ್ಲುತ್ತ ನಿಂತಿತ್ತು. ದೀಪಸ್ತಂಭದ ಮೇಲಿದ್ದ ಉದ್ದವಾದ ಧ್ವಜಸ್ತಂಭದ ತುದಿಯಲ್ಲಿ ನೌಕಾದಳದ ಬಾವುಟ ಗಾಳಿಯಲ್ಲಿ ಪಟಪಟನೆ ಹಾರಾಡುತ್ತಿತ್ತು. ದಡದ ಹತ್ತಿರ ಜೊಂಡುಗಳ ನಡುವೆ ಒಂದು ಫಿರಂಗಿ ದೋಣಿ ಅಲ್ಲಾಡದೆ ನಿಂತಿತ್ತು. ನೀರು ಬಗ್ಗಡವಾಗಿಲ್ಲದೆ ಇದ್ದ ಆಳವಿಲ್ಲದ ಸ್ಥಳದಲ್ಲಿ ಗಡಿಕಾವಲಿನ ಸೈನಿಕರು ಬಟ್ಟೆಗಳನ್ನು ಒಗೆಯುತ್ತ ನಿಂತಿದ್ದರು. ಅವರು ದೂರದಿಂದ ನೋಡುವುದಕ್ಕೆ ಪುಟ್ಟಪುಟ್ಟನಾಗಿ ಬೊಂಬೆಗಳಂತೆ ಕಾಣಿಸುತ್ತಿದ್ದರು. ಹಡಗು ಮುಂದಕ್ಕೆ ಓಡುತ್ತಿದ್ದಂತೆ ಈ ಒಂದೊಂದು ದೃಶ್ಯವೂ ಕೂಡ ಹಿಂದು ಹಿಂದಕ್ಕೆ ಓಡುತ್ತಿದ್ದಂತೆ ಭಾಸವಾಗುತ್ತಿತ್ತು. ಸೂರ್ಯನ ಬಿಸಿಲು ಹರಡಿದ್ದರಿಂದ ಎಲ್ಲವೂ ಪ್ರಕಾಶಮಾನವಾದ ಚಲನಚಿತ್ರಗಳೋಪಾದಿಯಲ್ಲಿ ಸ್ಪಷ್ಟವಾಗಿ ವಿವರ ವಿವರವಾಗಿ ಕಾಣಿಸುತ್ತಿದ್ದುವು.

ಕಡಲಿನ ಸಾಮೀಪ್ಯದಿಂದ ಹಡಗು ಮತ್ತು ಪ್ರಯಾಣಿಕರುಗಳ ಮೇಲಿನ ಧೂಳೆಲ್ಲ ಹಟಾತ್ತಾಗಿ ಎಲ್ಲೋ ಹಾರಿಹೋಗಿದ್ದಿತು. ಇಡೀ ಆವರಣವೆಲ್ಲ ಶುಭ್ರವಾಗಿಯೂ ಸ್ವಚ್ಛವಾಗಿಯೂ

ಕಂಡು ಬಂದಿತು.ಈಗ ಹಡಗಿನಲ್ಲಿದ್ದ ಹೆಡಗೆಗಳಲ್ಲೂ ಬುಟ್ಟಿಗಳಲ್ಲೂ ಒಂದು ಬದಲಾವಣೆ ಕಾಣಿಸಿತು. ಇದುವರೆಗೆ ಯಾವುದು ಕೇವಲ ವ್ಯಾಪಾರದ ಸಾಮಾನಾಗಿತ್ತೋ ಅದು ಈಗ ಹಡಗಿನ ಸರಕಾಗಿ ಪರಿಣಮಿಸಿತ್ತು.ಹಡಗು ಸಮುದ್ರದ ಹತ್ತಿರ ಹತ್ತಿರ ಬಂದ ಹಾಗೆಲ್ಲ ನಿಜವಾದ ಸರಕಿನಂತೆ ಅಲ್ಲಾಡುತ್ತ ಅವು ಕರಕರ ಎಂದು ಶಬ್ದ ಮಾಡುತ್ತಿದ್ದುವು.

"ಅರ್ಧವೇಗ!"

ಗಡಿಯಾಣ್ಯವು ಹಡಗಿನ ಹಿಂಭಾಗಕ್ಕೆ ಉಳಿಯಿತು. ಅದು ನಿಧಾನವಾಗಿ ಹಿಂದು ಹಿಂದಕ್ಕೆ ಸರಿಯುತ್ತ ಹೋಗಿ ದೂರದೂರ ತೇಲಿ ಹೋಗುತ್ತಿರುವಂತೆ ಕಾಣಿಸುತ್ತಿತ್ತು. ಹಡಗಿನ ಸುತ್ತ ಸ್ವಚ್ಛವಾದ ಕಡು ಹಸಿರು ನೀರು ವಿಸ್ತರಿಸಿತ್ತು. ಆಳವಾದ ನೀರನ್ನು ಸೇರಿದೊಡನೆ ಹಡಗು ಸರಾಗವಾಗಿ ತೇಲಿಕೊಂಡು ಹೋಗಲಾರಂಭಿಸಿತು. ಆಗ ಗಾಳಿಯು ಡೆಕ್ಕಿನ ಮೆಲಕ್ಕೆ ನೀರಿನ ತುಂತುರುಗಳನ್ನು ಎರಚಿತು.

"ಪೂರ್ಣವೇಗ !"

ಗೊರಗೊರ ಎಂದು ಒರಲುತ್ತಿದ್ದ ಹಡಗಿನ ಹೊಗೆ ಕೊಳವೆಗಳು ನಸುಗುಂಪು ಹೊಗೆಯ ಮೋಡವನ್ನು ಹೊರಕ್ಕೆ ಉಗುಳಲಾರಂಭಿಸಿದುವು. ಹಡಗಿನ ಹಿಂಭಾಗದ ಅಟ್ಟದ ಮೇಲೆ ನೆರಳಿಗಾಗಿ ಏರಿಸಿದ್ದ ಕಪ್ಪುಬಟ್ಟೆಯ ಛಾಯೆ ಓರೆಯಾಗಿ ಬಿದ್ದಿತು. ನಡುಗಡಲಿನ ದೊಡ್ಡದೊಡ್ಡ ಅಲೆಗಳೊಡನೆ ಹೋರಾಡುವುದು ಆ ಮುದಿಯಂತ್ರಕ್ಕೆ ಸುಲಭವಾಗಿರಲಿಲ್ಲ. ಪ್ರಯಾಸದಿಂದ ಯಂತ್ರ ದೀರ್ಘವಾಗಿ ಉಸಿರು ಹುಯ್ಯಲಾರಂಭಿಸಿತು. ಹಡಗಿನ ಹಳೆಯ ತಗಡುಗಳು ಕಟಕಟ ಶಬ್ದ ಮಾಡಿದುವು. ಹಡಗಿನ ಮುಂದುಗಡೆಯಲ್ಲಿ ಮೂಕಿ ಮರದ ಕೆಳಗಿನ ಲಂಗರು ಅಲೆಗಳಿಗೆ ತಲೆಬಗ್ಗಿಸಿತು.

ಪ್ರಯಾಣಿಕನೊಬ್ಬನ ಹುಲ್ಲಿನ ಹ್ಯಾಟನ್ನು ತಲೆಯಮೇಲಿನಿಂದ ಗಾಳಿ ಆಗಲೆ ಹಾರಿಸಿಕೊಂಡು ಹೋಗಿತ್ತು. ನೊರೆಗೂಡಿ ಹಿಂದು ಹಿಂದಕ್ಕೆ ಉರುಳುತ್ತಿದ್ದ ಅಗಲವಾದ ಹಡಗಿನ ಜಾಡಿನಲ್ಲಿ ಆ ಹ್ಯಾಟು ಉಯ್ಯಲೆಯಾಡುತ್ತ ತೇಲಿ ಹೋಗುತ್ತಿತ್ತು.

ನಾಲ್ಕು ಜನ ಕುರುಡ ಯೆಹೂದಿಗಳು ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ಡೆಕ್ಕಿನ ಮೇಲಕ್ಕೆ ಏಣಿಯ ಮೇಲಿನಿಂದ ಹತ್ತಿ ಬಂದರು. ಅವರು ನೀಲಿ ಕನ್ನಡಕಗಳನ್ನು ಹಾಕಿಕೊಂಡು ಕೈಯ್ಯಲ್ಲಿ ಗುಂಡು ಹ್ಯಾಟುಗಳನ್ನು ಹಿಡಿದುಕೊಂಡಿದ್ದರು. ಅವರು ಅಲ್ಲಿದ್ದ ಒಂದು ಬೆಂಚಿನ ಮೇಲೆ ಕುಳಿತುಕೊಂಡು "ಮಂಚೂರಿಯಾ ಗುಡ್ಡದ ದಾಳಿ" ಎಂಬ ಹಾಡನ್ನು ತಪ್ಪುತಪ್ಪಾದ ಸ್ವರಗಳಲ್ಲಿ ಪಿಟೀಲಿನಲ್ಲಿ ನುಡಿಸಲಾರಂಭಿಸಿದರು. ಅದನ್ನು ಕೇಳುವವರಿಗೆ ಜುಗುಪ್ಸೆ ಹುಟ್ಟುವುದು ಆಶ್ಚರ್ಯವೇನಾಗಿರಲಿಲ್ಲ. ಹಡಗಿನ ಯಂತ್ರದ ಶಬ್ದವು ಪಿಟೀಲಿನ ಹಾಡಿನೊಂದಿಗೆ ಶ್ರುತಿಯಂತೆ ಸೇರಿ ಕೊಂಡು ಹೋಗುತ್ತಿತ್ತು.

ಏಣಿಯ ಮೇಲಿನಿಂದ ಹಡಗಿನ ಪರಿಚಾರಕನೊಬ್ಬ ಹತ್ತಿಬಂದ. ಬೆನ್ನಿನ ಕಡೆಯಲ್ಲಿ ಬಾಲದಂತೆ ನೇತಾಡುವ ಕೋಟನ್ನು ಅವನು ಧರಿಸಿದ್ದ. ಕೋಟಿನ ಹಿಂದುಗಡೆಯು ಗಾಳಿಗೆ ಹಾರಾಡುತ್ತಿತ್ತು. ಬಹುಮಟ್ಟಿಗೆ ಶುಭ್ರವಾಗಿದ್ದ ಬಿಳಿಯ ಕೈಚೀಲವನ್ನು ಅವನು ಹಾಕಿಕೊಂಡಿದ್ದ. ಘುಸ್ಸೆನ್ನುತ್ತ ನೊರೆಯಿಂದ ತುಂಬಿದ್ದ ನಿಂಬೆ ಹಣ್ಣಿನ ರಸದ ಸೋಡಾ ಸೀಸೆಗಳನ್ನು ಅವನು ಕೆಳಕ್ಕೆ ಬೀಳದ ಹಾಗೆ ತಟ್ಟೆಯಲ್ಲಿಟ್ಟುಕೊಂಡು ಸರ್ಕಸ್ಸಿನವನಂತೆ ಓಡುತ್ತಬಂದ.

ಅವರು ಹಡಗಿನಲ್ಲಿ ಸಮುದ್ರವನ್ನು ಪ್ರವೇಶಿಸಿದ ವೈಖರಿಯಿದು.

ಪೇತ್ಯ ಆಗಲೇ ಹಡಗನ್ನೆಲ್ಲಾ ಪರೀಕ್ಷಿಸಿ ಬಿಟ್ಟಿದ್ದ. ತನಗೆ ಜತೆಯಾಗಬಹುದಾದ, ಅದರಲ್ಲೂ ತಾನು ಸ್ನೇಹಮಾಡಬಹುದಾಗಿದ್ದ ಹುಡುಗರು ಹಡಗಿನ ಮೇಲೆ ಯಾರೂ ಇಲ್ಲವೆಂಬುದನ್ನು ಅವನು ಕಂಡು ಹಿಡಿದಾಗಿತ್ತು. ತನಗಿದ್ದ ಹಡಗಿನ ವಿಚಾರಗಳ ಜ್ಞಾನವನ್ನು ಇಬ್ಬರು ಹುಡುಗಿಯರೆದುರಿಗೆ ಪ್ರದರ್ಶಿಸಲು ಹೋಗಿ ಅದರಲ್ಲಿ ವಿಫಲನಾಗಿದ್ದನಲ್ಲವೆ. ಆ ಹುಡುಗಿಯರನ್ನು ನೋಡಿದಾಗ ಸ್ವಲ್ಪ ಮಟ್ಟಿಗೆ ಅವನ ಆಸೆ ಅಂಕುರಿಸಿತ್ತು. ನಿಜ, ಆದರೆ ಅದು ಎಷ್ಟುಕಾಲ? ಮೊದಲನೆಯದಾಗಿ ಅವರು ಪ್ರಥಮ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದರು. ಅಲ್ಲದೆ ಅವರು ತಮ್ಮ ಶಿಕ್ಷಕಿಯೊಡನೆ ಫ್ರೆಂಚ್ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು. ಇದರಿಂದ ಎರಡನೆಯ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದ ಹುಡುಗನೊಡನೆ ಪರಸ್ಪರ ಸಮಾನವಾದ ಯಾವ ಸಂಬಂಧಕ್ಕೂ ಅವಕಾಶವಿಲ್ಲವೆಂಬುದನ್ನು ಅವರು ಬೆಳ್ಳಂಬೆಳಕಿನಂತೆ ಸ್ಪಷ್ಟಪಡಿಸಿಬಿಟ್ಟಿದ್ದರು. ಎರಡನೆಯದಾಗಿ ಆ ಹುಡುಗಿಯರಲ್ಲಿ ಒಬ್ಬಳು ಹಡಗು ಸಮುದ್ರವನ್ನು ಸೇರಿದ ಸಮಯದಿಂದ ಕಡಲ ಬೇನೆ ಬಂದು ಹಾಸಿಗೆ ಹಿಡಿದಿದ್ದಳು. ಪೇತ್ಯ ಮೊದಲನೆ ತರಗತಿಯ ಕೋಣೆಯ ತೆರೆದ ಬಾಗಿಲಿನ ಮೂಲಕ ನೋಡಿದಾಗ ಅವನಿಗೆ ಒಂದು ಮೃದುವಾದ ಮಖಮಲ್ ಮೆತ್ತೆಯ ಮೇಲೆ ಮಲಗಿದ ಹುಡುಗಿ ಕಾಣಿಸಿದಳು. ತನಗೆ ಲಭ್ಯವಿಲ್ಲದ ಮೊದಲನೆಯ ತರಗತಿಯ ವೈಭವನನ್ನು ಅವನು ಕಂಡ. ಅವಳು ನಿಂಬೆ ಹಣ್ಣನ್ನು ಚೀಪುತ್ತ ಮಲಗಿದ್ದಳು, ಇದು ಪೇತ್ಯನಿಗೆ ಹಿಡಿಸಲಿಲ್ಲ. ಅವಳು ಸುಂದರಿಯಾಗಿದ್ದಳೆಂಬುದರಲ್ಲಿ ಸಂಶಯವಿರಲಿಲ್ಲ; ಅಲ್ಲದೆ ಸೊಗಸಾಗಿ ಅಲಂಕರಿಸಿಕೊಂಡಿದ್ದಳು. ಲಂಗರಿನ ಚಿತ್ರವಿದ್ದ ಚಿನ್ನದ ಬಣ್ಣದ ಗುಂಡಿಗಳಿಂದ ಹೊಳೆಯುತ್ತಿರುವ ಪುಟ್ಟಕೋಟನ್ನು ತೊಟ್ಟುಕೊಂಡಿದ್ದಳು. ಫ್ರೆಂಚ್ ಶೈಲಿಯ ಕೆಂಪು ಗೊಂಡೆಯಿದ್ದ ನಾವಿಕರ ಟೋಪಿಯನ್ನು ಹಾಕಿಕೊಂಡಿದ್ದಳು. ಡೆಕ್ಕಿನ ಮೇಲಿದ್ದ ಇನ್ನೊಬ್ಬಳು ಹುಡುಗಿ ಮಹಾಜಂಬಗಾತಿ ಮತ್ತು ದೊಡ್ಡಸ್ತನದವಳು. ಅಷ್ಟೆ ಅಲ್ಲದೆ ಅವಳು ಎಳೇ ಮಕ್ಕಳಂತೆ ಹಟಮಾರಿ. ತಂದೆಯನ್ನು ಒಂದೇ ಸಮನೆ ಕಾಡುತ್ತಿದ್ದಳು. ಅವನ ತಂದೆ ಪಕ್ಕ ಮೀಸೆಗಳನ್ನು ಬಿಟ್ಟಿದ್ದ. ಅವನು ಶ್ರೀಮಂತನಂತೆ ಕಂಡರೂ ಜಡ ಮನುಷ್ಯನಾಗಿದ್ದ. ಜೋಲಾಡುತ್ತಿದ್ದ ತೋಳಿಲ್ಲದ ಉದ್ದವಾದ ಮೇಲು ಜುಬ್ಬವನ್ನು ಹಾಕಿಕೊಂಡಿದ್ದ. 'ಕ್ಯಾಪ್ಟನ್ ಗ್ರಾಂಟ್ಸ್‌ಚಿಲ್ಡ್ರನ್' ಎಂಬ ಗ್ರಂಥದಲ್ಲಿ ಬರುವ ಶ್ರೀಮಂತ ಗ್ಲೆನರ್‌ವಾನನೇ ಮೂರ್ತಿಮತ್ತಾದಂತೆ ಇದ್ದ.

ತಂದೆ ಮಗಳು ಇವರ ನಡುವೆ ಈ ಸಂಭಾಷಣೆ ನಡೆಯುತ್ತಿತ್ತು.

"ಅಪ್ಪ, ನನಗೆ ಬಾಯಾರಿಕೆ."

"ಹೋಗುತ್ತೆ ತಡಿ." ತಾನು ಕಣ್ಣಿಟ್ಟು ನೋಡುತ್ತಿದ್ದ ದೂರದರ್ಶಿಯಿಂದ ಮೇಲಕ್ಕೆ ತಲೆಯೆತ್ತದೆಯೇ ಶ್ರೀಮಂತ ಗ್ಲೆನರ್‌ವಾನ್ ನಿಧಾನವಾಗಿ ಉತ್ತರಕೊಟ್ಟ.

ಹುಡುಗಿ ಕಾಲಿನಿಂದ ನೆಲವನ್ನು ಒದೆಯುತ್ತಾ "ಬಾಯಾರಿಕೆ ಅಪ್ಪ!" ಎಂದು ಪುನಃ ಗಟ್ಟಿಯಾಗಿ ಕೂಗಿದಳು.

"ಇರಲಿ ಬಿಡು. ಆದಾಗಿ ಹೋಗುತ್ತೆ." ಮೊದಲಿಗಿಂತಲೂ ಶಾಂತವಾಗಿ ಅವಳ ತಂದೆ ಉತ್ತರಕೊಟ್ಟ.

"ಅಪ್ಪ ಬಾಯಾರಿಕೆ, ಅಪ್ಪ ಬಾಯಾರಿಕೆ, ಬಾಯಾರಿಕೇಪ್ಪ" ಎಂದು ಉಸುರು ಮಗುಚದೆ

ಮೊಂಡುತನದಿಂದ ಕೂಗಿದಳು. ಕೋಪಗೊಂಡ ಅವಳ ತುಟಿಗಳ ಮೇಲೆ ಎಂಜಲಿನ ನೊರೆ ಕಟ್ಟಿತ್ತು. ಶಾಂತಿ ದೇವತೆಯ ತಾಳ್ಮೆಯಾದರೂ ಅವಳ ಹಠದ ಎದುರು ನಿಲ್ಲುವುದು ಅಸಾಧ್ಯವಾಗಿತ್ತು. "ಅ....ಪ್ಪ....ಬಾ....ಯಾ....ರಿ....ಕೆ.... ಅಪ್ಪ....ಬಾ....ಯಾ....ರಿ....ಕೆ." ಅವಳು ರಾಗವೆಳೆಯುತ್ತಲೇ ಇದ್ದಳು.

ಶ್ರೀಮಂತ ಗ್ಲೆನರ್‌ವಾನ್ ಬಹುಸಾವಧಾನವಾಗಿ ಮೊದಲಿಗಿಂತಲೂ ಹೆಚ್ಚು ಔದಾಸೀನ್ಯದಿಂದ ಧ್ವನಿಯನ್ನು ಕೊಂಚವೂ ಏರಿಸದೆ "ಯೋಚಿಸಬೇಡ. ಅದಾಗಿ ಹೋಗುತ್ತೆ" ಎಂದು ಹೇಳಿದ.

ತಾವು ಹಿಡಿದ ಪಟ್ಟು ಬಿಡದ ಇಬ್ಬರು ವ್ಯಕ್ತಿಗಳ ನಡುವಿನ ಈ ವಿಚಿತ್ರ ಜಗಳ ಅಕರ್‌ಮಾನ್‌ನಿಂದ ಹೊರಟ ಸಮಯದಿಂದಲೂ ನಡೆಯುತ್ತಲೇ ಬಂದಿತ್ತು. ಸ್ವಾಭಾವಿಕವಾಗಿ ಅಂಥವಳೊಡನೆ ಪೇತ್ಯನ ಪರಿಚಯವಾಗುವ ಸಂಭವವೇ ಇರಲಿಲ್ಲ.

ಬಳಿಕ ಪೇತ್ಯನಿಗೆ ಕಾಲ ಕಳೆಯಲು ಒಂದು ಕುತೂಹಲದಾಯಕವಾದ ಕೆಲಸ ದೊರಕಿತು. ಪ್ರಯಾಣಿಕರಲ್ಲಿ ಒಬ್ಬನ ಹೆಜ್ಜೆಹಿಡಿದು ಅವನನ್ನು ಹಿಂಬಾಲಿಸುವುದೇ ಆ ಕೆಲಸವಾಗಿತ್ತು. ಆ ಪ್ರಯಾಣಿಕ ಹೋದಲ್ಲೆಲ್ಲ ಪೇತ್ಯ ಎಡಬಿಡದೆ ಅವನನ್ನು ಹಿಂಬಾಲಿಸುತ್ತಿದ್ದ. ಇದರಲ್ಲಿ ಪೇತ್ಯನ ಕುತೂಹಲ ಕುದುರುವುದು ಸಹಜವಾಗಿತ್ತು. ಏಕೆಂದರೆ ಅವನ ನಡವಳಿಕೆಯಲ್ಲಿ ಏನೋ ಒಂದು ವೈಚಿತ್ರ್ಯವನ್ನು ಮೊದಲಿನಿಂದಲೂ ಪೇತ್ಯ ಗುರುತಿಸಿದ್ದ. ಇತರ ಪ್ರಯಾಣಿಕರ ಕಣ್ಣಿಗೆ ಈ ವಿಸ್ಮಯಕರವಾದ ಸಂಗತಿ ಬಿದ್ದಿರಲಿಲ್ಲ. ಆದರೆ ಪೇತ್ಯನ ಸೂಕ್ಷ್ಮದೃಷ್ಟಿಗೆ ಅದು ಗೋಚರಿಸಿತ್ತಲ್ಲದೆ ಅದರಿಂದ ಅವನಿಗೆ ಆಶ್ಚರ್ಯವಾಗಿದ್ದಿತು.

ಈ ಮನುಷ್ಯನ ಬಳಿ ಟಿಕೆಟ್ಟೇ ಇರಲಿಲ್ಲ. ಇದು ನೌಕಾಧಿಪತಿಯ ಸಹಾಯಕನಿಗೂ ಗೊತ್ತಿತ್ತು. ಆದರೆ ಏನು ಕಾರಣವೋ ಏನೋ ಅವನು ಈ ಮನುಷ್ಯನನ್ನು ಏನೂ ಅಂದಿರಲಿಲ್ಲ. ಬಾಯಲ್ಲಿ ಸ್ಪಷ್ಟವಾಗಿ ವಿವರವಾಗಿ ಹೇಳದೆ ಹೋಗಿದ್ದರೂ ಆ ಮನುಷ್ಯ ಎಲ್ಲಿಗೆ ಬೇಕಾದರೂ, ಬೇಕಾದರೆ ಮೊದಲನೆಯ ತರಗತಿಯ ಕೊಠಡಿಗಳೊಳಕ್ಕೂ ಹೋಗಬಹುದೆಂದು ಅನುಮತಿ ಪಡೆದುಕೊಂಡಿದ್ದಂತೆ ತೋರುತ್ತಿತ್ತು. ಹಣದ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ನೌಕಾಧಿಪತಿಯ ಸಹಾಯಕ ಆ ಮನುಷ್ಯನ ಬಳಿ ಬಂದಾಗ ನಡೆದುದನ್ನೆಲ್ಲ ಸ್ಪಷ್ಟವಾಗಿ ಪೇತ್ಯ ಗಮನಿಸಿದ್ದ.

"ನಿನ್ನ ಟಿಕೆಟ್ಟೆಲ್ಲಿ?"

ಆ ಮನುಷ್ಯ ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ಅವನು ತಲೆಯಲ್ಲಾಡಿಸಿ "ಓ, ಸರಿ" ಎಂದು ಬಿಟ್ಟಿದ್ದ. ಆ ಬಳಿಕ ಆ ಪ್ರಯಾಣಿಕನ ಗೋಜಿಗೆ ಯಾರೂ ಹೋಗಿರಲಿಲ್ಲ; ಅವನನ್ನು ಯಾರೂ ಮಾತಾಡಿಸಿಯೂ ಇರಲಿಲ್ಲ. ಅವನು ಹಡಗಿನ ಮೂಲೆ ಮೂಲೆಯನ್ನೂ ಪರೀಕ್ಷಿಸುತ್ತ ಎಲ್ಲಾ ಕಡೆಯೂ ಅಲೆದಾಡಿದ. ಮೇಲ್ತರಗತಿಯ ಪ್ರಯಾಣಿಕರ ಕೋಣೆ, ಯಂತ್ರದ ಕೊಠಡಿ, ಉಪಾಹಾರದ ಕೊಠಡಿ, ಕಕ್ಕಸ್ಸು, ಸಾಮಾನು ಕುಳಿ....ಯಾವುದನ್ನಾದರೂ ಬಿಟ್ಟಿದ್ದರೆ ಕೇಳಿ.

ಅವನು ಯಾರಿರಬಹುದು?

ಜವಾನುದಾರನೇ? ಅಲ್ಲ. ಜವಾನುದಾರರು ಆ ರೀತಿಯ ಉಡುಪನ್ನು ಧರಿಸುತ್ತಿರಲಿಲ್ಲ. ಮತ್ತು ಆ ರೀತಿ ನಡೆದುಕೊಳ್ಳುತ್ತಲೂ ಇರಲಿಲ್ಲ. ಬೆಸ್ಸರೇಬಿಯನ್ ಜವಾನುದಾರರು ಯಾವಾ

ಗಲೂ ಭಾರವಾದ ಲಿನನ್ನಿನ ಮೇಲಂಗಿಯನ್ನೂ ಪ್ರಯಾಣ ಕಾಲದ ಬಿಳಿಯ ಟೋಪಿಯನ್ನೂ ಹಾಕಿಕೊಳ್ಳುತ್ತಿದ್ದರು. ಬೆರಳಿನ ಗುರುತು ಆ ಟೋಪಿಗಳ ಮೇಲಿರುವುದು ವಾಡಿಕೆ. ಅಲ್ಲದೆ ಅವರು ಗೋಧಿ ಬಣ್ಣದ ಇಳಿಬಿದ್ದ ಗುತ್ತಿಮೀಸೆ ಬಿಡುತ್ತಿದ್ದರು. ಬೀಗಹಾಕಿದ ಹೆಣಿಕೆ ಕಡ್ಡಿಯ ಪುಟ್ಟಪೆಟ್ಟಿಗೆ ಅವರ ಕೈಯಲ್ಲಿರುತ್ತಿತ್ತು. ಆ ಪೆಟ್ಟಿಗೆಯಲ್ಲಿ ಕಪ್ಪುಹತ್ತಿದ ಸಣ್ಣ ಕಡಲು ಮೀನುಗಳೂ, ಟೊಮೊಟೋ ಹಣ್ಣುಗಳೂ, ಸ್ವಲ್ಪ ಗಿಣ್ಣೂ ಮತ್ತು ಹಸುರು ಶೀಸೆಯಲ್ಲಿ ಎರಡು ಮೂರು ಪೈಂಟುಗಳಷ್ಟು ಬಿಳಿಯ ದ್ರಾಕ್ಷಾರಸವೂ ಇರುವುದು ವಾಡಿಕೆ. ಜಮೀನುದಾರರು ಮಿತವ್ಯಯದ ದೃಷ್ಟಿಯಿಂದ ಎರಡನೆ ತರಗತಿಯಲ್ಲಿ ಪ್ರಯಾಣಮಾಡುವುದು ಪದ್ಧತಿ. ಯಾವಾಗಲೂ ಒಂದೆಡೆ ಇರುವುದು, ತಮ್ಮ ಕೊಠಡಿಗಳಿಂದ ಸಾಮಾನ್ಯವಾಗಿ ಹೊರಗೆ ಬರದೆ ಇರುವುದು, ಸದಾ ಏನನ್ನಾದರೂ ತಿನ್ನುತ್ತಿರುವುದು ಇಲ್ಲವೇ ಇಸ್ಪೀಟು ಆಡುತ್ತಿರುವುದು—ಇದು ಅವರ ಅಭ್ಯಾಸವಾಗಿತ್ತು. ಇಂಥ ಜಮೀನುದಾರರ ಜೊತೆಯಲ್ಲಿ ಆ ಪ್ರಯಾಣಿಕ ಸೇರಿದ್ದನ್ನು ಪೇತ್ಯ ಕಾಣಲಿಲ್ಲ. ಬೇಸಿಗೆ ಕಾಲದ ಟೋಪಿಯನ್ನು ಹಾಕಿಕೊಂಡರೂ ಅವನು ಮೇಲಂಗಿಯನ್ನು ತೊಟ್ಟಿರಲಿಲ್ಲ. ಹೆಣಿಕೆ ಕಡ್ಡಿಯ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದಿರಲಿಲ್ಲ. ಅಂದರೆ ಅವನು ಜಮೀನುದಾರನಲ್ಲವೆಂಬುದು ಖಂಡಿತ.

ಹಾಗಿದ್ದರೆ ಅವನು ಅಂಚೆ ಇಲಾಖೆಯ ನೌಕರನೇ ಅಥವಾ ಉಪಾಧ್ಯಾಯನೇ ? ಅದೂ ಸಾಧ್ಯವಿರಲಿಲ್ಲ. ಚೀನ ರೇಷ್ಮೆ ಷರಟನ್ನು ಜಾಕೆಟ್ಟಿನ ಒಳಗಡೆ ಹಾಕಿಕೊಂಡಿದ್ದ. ಟೈಗೆ ಬದಲಾಗಿ ಚಿಕ್ಕ ಚಿಕ್ಕ ಕುಚ್ಚುಗಳಿದ್ದ ಕೆಂಪುದಾರವನ್ನು ಕೊರಳಲ್ಲಿ ಕಟ್ಟಿಕೊಂಡಿದ್ದ. ನುಲಿಚಿಬಿಟ್ಟ ಅವನ ಮೀಸೆ ಕಾಗೆಯಂತೆ ಕಪ್ಪಗೆ ಇತ್ತು. ನುಣ್ಣಗೆ ಕ್ಷೌರಮಾಡಿಸಿಕೊಂಡಿದ್ದರಿಂದ ಅವನ ಗದ್ದ ಹೊಳೆಯುತ್ತಿತ್ತು. ಇವುಗಳು ಅಂಚೆಯ ಅಥವಾ ಉಪಾಧ್ಯಾಯ ವೃತ್ತಿಯವರಿಗೆ ಹೊಂದಿಕೊಳ್ಳುತ್ತಿರಲಿಲ್ಲವಾದುದರಿಂದ ಅವನು ಆ ಇಬ್ಬರಲ್ಲಿ ಯಾರೂ ಆಗಿರಲಿಲ್ಲವೆಂಬುದರಲ್ಲಿ ಅನುಮಾನವೇ ಇರಲಿಲ್ಲ.

ಕೂದಲುಗಳು ಒಳಗಿನಿಂದ ಇಣಿಕಿನೋಡುತ್ತಿದ್ದ ಮೂಗಿನ ಒರಟಾದ ಮಾಂಸವನ್ನು ಕಚ್ಚಿಕೊಂಡು ಹೊಗೆ ಬಣ್ಣದ ಕನ್ನಡಕ ಕುಳಿತಿತ್ತು. ಆ ಕನ್ನಡಕ ತಕ್ಕಮಟ್ಟಿಗೆ ದೊಡ್ಡದಾಗಿಯೇ ಇತ್ತು. ಅಲ್ಲದೆ ಅಲ್ಲಿನ ಯಾವ ವರ್ಗದ ಪ್ರಯಾಣಿಕರೂ ಅಂಥ ಕನ್ನಡಕವನ್ನು ಧರಿಸುವವರಾಗಿರಲಿಲ್ಲ. ಇಷ್ಟೇ ಅಲ್ಲ. ಅವನು ಸಣ್ಣಗೆರೆಯ ಷರಾಯಿಯನ್ನು ಹಾಕಿಕೊಂಡಿದ್ದ, ಬಿಳಿಯ ಒರಟಾದ ಕಾಲುಚೀಲಗಳ ಮೇಲೆ ಪಾದರಕ್ಷೆಗಳನ್ನು ಮೆಟ್ಟಿದ್ದ.

ನಿಜ, ಇವನಲ್ಲಿ ಏನೋ ಸಂಶಯಾಸ್ಪದವಾದ ವಿಷಯ ಅಡಗಿತ್ತು ಎಂಬುದು ನಿರ್ವಿವಾದವಾಗಿತ್ತು. ಪೇತ್ಯ ಷರಾಯಿ ಜೇಬಿನೊಳಕ್ಕೆ ಕೈತುರುಕಿಕೊಂಡು (ಇದು ಉತ್ತಮನಡತೆಯಾಗಿರಲಿಲ್ಲ) ಹಡಗಿನ ಮೇಲೆಲ್ಲ ಆ ಪ್ರಯಾಣಿಕನನ್ನು ಹಿಂಬಾಲಿಸುತ್ತ ಶೀಘ್ರಿಯಿಂದ ಸುತ್ತಾಡಿದ.

ಮೊದಲು ಆ ಪ್ರಯಾಣಿಕ ಯಂತ್ರದ ಕೋಣೆ ಮತ್ತು ಹಡಗಿನ ಅಡಿಗೆ ಮನೆಗಳ ನಡುವಿದ್ದ ಇಕ್ಕಟ್ಟಾದ ದಾರಿಯಲ್ಲಿ ಒಂದು ಕ್ಷಣ ನಿಂತುಕೊಂಡ. ಅಡಿಗೆ ಮನೆಯಿಂದ ಹುಳಿಹಿಡಿದ ಹೊಗೆಯ ಕೆಂಟು ವಾಸನೆ ಹೊಡೆಯುತ್ತಿತ್ತು. ಚೆನ್ನಾಗಿ ಕಾದ ಹಬೆ, ಕಬ್ಬಿಣ, ನೀರು ಮತ್ತು ಎಣ್ಣೆಯ ಕಟುವಾಸನೆಯ ಬಿಸಿಗಾಳಿ ಯಂತ್ರದ ಕೋಣೆಯ ತೆರೆದ ಕಿಟಕಿಯಿಂದ ನುಗ್ಗಿತು. ಯಂತ್ರದ ಕೋಣೆಯ ಗವಾಕ್ಷದ ಬಾಗಿಲನ್ನು ಮೇಲಕ್ಕೆತ್ತಿದ್ದರಿಂದ ಅದರ ಮೂಲಕ ಪೇತ್ಯ ಬಗ್ಗಿ ನೋಡಿದ.

ಮೊದಲಿನಿಂದ ಕೊನೆಯವರೆಗೆ ಯಂತ್ರದ ಕೊಠಡಿಯ ಎಲ್ಲ ವಿವರಗಳೂ ಪೇತ್ಯನಿಗೆ ತಿಳಿದಿತ್ತಾದರೂ ಅದನ್ನು ನೋಡಿದ ಒಂದೊಂದು ಸಲವೂ ಅವನು ಪರವಶನಾಗುತ್ತಿದ್ದ. ಗಂಟೆಗಟ್ಟಲೆ ಅಲ್ಲಿ ನಿಂತು ನೋಡುವ ಚಪಲ ಅವನಿಗೆ.

ಆ ಯಂತ್ರ ಹಳೆಯ ಕಾಲದ್ದೆಂದು ಎಲ್ಲರಿಗೂ ಗೊತ್ತು. ಅದು ಏನೂ ಪ್ರಯೋಜನವಿಲ್ಲದ್ದು ಎಂದು ಎಲ್ಲರೂ ಹೇಳುವವರೇ. ಆದರೆ ಅದು ನಂಬಲಾರದಷ್ಟು ಬಲಯುತವೂ ಅದ್ಭುತವೂ ಆಗಿತ್ತೆಂಬುದರಲ್ಲಿ ಸಂಶಯವಿರಲಿಲ್ಲ. ಯಂತ್ರದ ಉಕ್ಕಿನ ದಂಡಗಳು ಸುಮಾರು ಒಂದು ಟನ್ನು ತೂಕದವು. ಅವುಗಳ ಮೇಲೆ ಮಂದವಾದ ಹಸಿರು ಗ್ರೀಸನ್ನು ಬಳಿದಿದ್ದುದರಿಂದ ಅದು ಬಹು ಸರಾಗವಾಗಿ ಹಿಂದಕ್ಕೂ ಮುಂದಕ್ಕೂ ಆಡುತ್ತಿತ್ತು. ಪಿಸ್ಟನ್ನುಗಳು ಬಹುರಭಸದಿಂದ ಚಲಿಸುತ್ತಿದ್ದುವು. ಅಡ್ಡಚಲನೆಯನ್ನು ಬಟ್ಟಚಲನೆಯಾಗಿ ಮಾರ್ಪಡಿಸುವ ವಕ್ರದಂಡವು (ಕ್ರ್ಯಾಂಕ್) ಸರಸರನೆ ಸುತ್ತುತ್ತಿತ್ತು. ಹಲ್ಲಿನ ಚಕ್ರಗಳ ಹಿತ್ತಾಳೆಯ ದುಂಡುಬಿಲ್ಲೆಗಳು ವೇಗದಿಂದ ಒಂದಕ್ಕೊಂದು ಬಿಗಿಯಾಗಿ ಉಜ್ಜುತ್ತಿದ್ದುವು. ಸಾಧಾರಣರೀತಿಯದಾದರೂ ಬಹು ಮುಖ್ಯವಾದ ಜಾರುಕವಾಟಗಳ (ಸ್ಲೈಡ್‌ವಾಲ್ವ್) ಕಷ್ಟಕರವಾದ ಕೆಲಸದ ಮೇಲೆ ಆ ಹಿತ್ತಾಳೆ ಬಿಲ್ಲೆಗಳು ತಮ್ಮ ಅದ್ಭುತ ಪ್ರಭಾವವನ್ನು ಬೀರುತ್ತಿದ್ದುವು.

ಯಂತ್ರದ ಚಲನೆ ಮತ್ತು ಶಬ್ದಗಳನ್ನು ಮೆಟ್ಟಿ ಒಂದು ದೊಡ್ಡ ಫ್ಲೈವ್ಹೀಲ್ ತನ್ನ ದೊಡ್ಡತನವನ್ನು ವ್ಯಕ್ತಪಡಿಸುತ್ತಿತ್ತು. ಮೇಲು ನೋಟಕ್ಕೆ ಅದು ನಿಧಾನವಾಗಿ ಸುತ್ತುತ್ತಿರುವಂತೆ ತೋರುತ್ತಿತ್ತು. ಆದರೆ ಸ್ವಲ್ಪ ದೃಷ್ಟಿಯಿಟ್ಟು ನೋಡಿದಾಗ ಅದು ಭಯಂಕರ ರಭಸದಿಂದ ಸುತ್ತುತ್ತಿರುವಂತೆ ಭಾಸವಾಗುತ್ತಿತ್ತು. ಅಲ್ಲದೆ ಆ ಚಕ್ರದಿಂದ ಮಹತ್ತರವಾದ ಬಿಸಿ ಗಾಳಿಯು ಏಕಪ್ರಕಾರವಾಗಿ ಏಳುತ್ತಿತ್ತು.

ಈ ರೀತಿಯಲ್ಲಿ ಭಯಂಕರವಾಗಿ ಚಲಿಸುತ್ತಿದ್ದ ಯಂತ್ರದ ನಡುವೆ ಯಂತ್ರ ಶಿಲ್ಪಿಯು ನಡೆದಾಡುತ್ತಿದ್ದನು. ಆಗ್ಗಾಗ್ಗೆ ಬಗ್ಗಿನಿಂತು ಎಣ್ಣೆಯ ಡಬ್ಬದ ಉದ್ದವಾದ ಮೂತಿಯನ್ನು ಯಂತ್ರದ ಭಾಗಗಳ ಮೇಲೆ ಎತ್ತಿ ಹಿಡಿದುಕೊಂಡು ಅವುಗಳಿಗೆ ಎಣ್ಣೆ ಹಾಕುತ್ತಿದ್ದನು. ಹಾಗೆ ಅವನು ಆ ಯಂತ್ರಗಳ ಬಳಿ ನಿಂತು ಬಗ್ಗಿದಾಗ ನೋಡುವವರ ಎದೆ ನಡುಗುತ್ತಿತ್ತು.

ಆ ಯಂತ್ರದ ಕೊಠಡಿಯಲ್ಲಿದ್ದವುಗಳಲ್ಲೆಲ್ಲ ಅತ್ಯಂತ ಬೆರಗುಗೊಳಿಸುತ್ತಿದ್ದ ಸೋಜಿಗದ ವಸ್ತುವೆಂದರೆ ಅಲ್ಲಿದ್ದ ಒಂದೇ ಒಂದು ವಿದ್ಯುದ್ದೀಪ. ಅದು ಒಂದು ತಂತಿಯ ಮೂತಿಯಿಂದ ಇಳಿಬಿದ್ದಿತ್ತು. ಅದರ ಹಿಂದುಗಡೆಗೆ ಒಂದು ತಗಡಿನ ಷೇಡ್ ಇದ್ದಿತು. (ಇಂದಿನ ಕಣ್ಣು ಕೋರೈಸುವ ವಿದ್ಯುದ್ದೀಪಗಳ ಮುಂದೆ ಅದು ಅಲ್ಪವೇ ಸರಿ!) ಅದರ ಕಪ್ಪುಗಟ್ಟಿದ ಗಾಜಿನ ಬುರುಡೆಯೊಳಗೆ ಕೆಂಪಗೆ ಕಾದ ಒಂದು ತಂತಿಯ ಕುಣಿಕೆ ನಿಗಿನಿಗಿಸುತ್ತಿತ್ತು. ಅದು ಹಡಗಿನ ಒಂದೊಂದು ಅದುರುವಿಕೆಗೂ ಕಂಪಿಸುತ್ತಿತ್ತು. ಆದರೂ ಅದೊಂದದ್ಭುತ ಪವಾಡವಾಗಿತ್ತು. ಅದರೊಡನೆ 'ಎಡಿಸನ್' ಎಂಬ ಐಂದ್ರಜಾಲಿಕ ಹೆಸರು ಸೇರಿಕೊಂಡು ಹೋಗಿತ್ತು. ಅದೊಂದು ವ್ಯಕ್ತಿಯ ಉಪನಾಮ ಎಂಬ ವಿಷಯ ಪೇತ್ಯನ ತಲೆಯಲ್ಲಿ ನಿಂತಿರಲಿಲ್ಲ. 'ಕಾಂತಶಕ್ತಿ,' 'ವಿದ್ಯುಚ್ಛಕ್ತಿ' ಎಂಬಂತೆ 'ಎಡಿಸನ್' ಎಂಬುದೂ ಕೂಡ ಪ್ರಕೃತಿಯ ರಹಸ್ಯವನ್ನು ತಿಳಿಸುವ ಒಂದು ಪದವಾಗಿ ಬಿಟ್ಟಿದ್ದಿತು.

ಆ ವಿಲಕ್ಷಣವ್ಯಕ್ತಿ ಆಮೇಲೆ ಹಡಗಿನ ಕೆಳಡೆಕ್ಕುಗಳಲ್ಲಿ ಸುತ್ತಾಡತೊಡಗಿದ. ಧ್ವಜ ಸ್ತಂಭದ

ಬಳಿ, ಕಂಬಿಗಳ ಹತ್ತಿರ, ಮತ್ತು ಸರಕುಗಳ ಪಕ್ಕದಲ್ಲಿ ತಮ್ಮ ಹೆಡಗೆ, ಬುಟ್ಟಿ ಮತ್ತು ಗಂಟುಗಳನ್ನು ಇಟ್ಟುಕೊಂಡು ಕುಳಿತಿದ್ದ ಪ್ರಯಾಣಿಕರನ್ನು ಬಹು ಗುಟ್ಟಾಗಿಯೂ ಸೂಕ್ಷ್ಮವಾಗಿಯೂ ಪರೀಕ್ಷಿಸುತ್ತಿದ್ದನೆಂಬುದನ್ನು ಪೇತ್ಯ ತಿಳಿದುಕೊಂಡ. ಆ ಮನುಷ್ಯ ಯಾರನ್ನೋ ಗುಟ್ಟಾಗಿ ಹುಡುಕುತ್ತಿದ್ದನೆಂಬ ವಿಷಯದಲ್ಲಿ ಪೇತ್ಯ ಬೇಕಾದರೆ ಪಂದ್ಯ ಕಟ್ಟುತ್ತಿದ್ದ. ಆದರೆ ಪಂದ್ಯಕಟ್ಟುವುದು ನಿಷೇಧ ಎನ್ನಿ.

ಔಪಚಾರಿಕವಾದ ವಿನಯವನ್ನು ಕೂಡ ತೋರಿಸದೆ ಈ ಮನುಷ್ಯ ಅಲ್ಲಿ ಮಲಗಿದ್ದ ಮಾಲ್ಡೀವಿಯನ್ನರನ್ನು ತುಳಿದುಕೊಂಡೇ ಹೋಗುತ್ತಿದ್ದ. ಟೊಮಾಟೋ ಹಣ್ಣುಗಳ ಕುಕ್ಕೆಗಳನ್ನು ಮುಚ್ಚಿದ್ದ ತಾಟಿನ ಒಂದು ಅಂಚನ್ನು ಹಿಡಿದು ಮೇಲಕ್ಕೆತ್ತಿ ಬಹು ಜಾಗರೂಕತೆಯಿಂದ ನೋಡಿದ.

ಡೆಕ್ಕಿನ ಬರಿಯ ನೆಲದ ಮೇಲೆ ಒಬ್ಬ ಮನುಷ್ಯ ಮಲಗಿದ್ದ. ಅವನ ಕೆನ್ನೆಯನ್ನು ಒಂದು ಟೋಪಿ ಮುಚ್ಚಿತ್ತು. ದಡದಿಂದ ಹಡಗಿಗೆ ಓಡಾಡಲನುಕೂಲಿಸುವಂತೆ ಹಾಕುವ ಹಲಗೆಯನ್ನು ತಗಲಿಸುವಾಗ ಆಗುವ ಬಡಿತವನ್ನು ಕಡಮೆ ಮಾಡಲೋಸುಗ ಹಗ್ಗದಿಂದ ಮಾಡಿದ ಸಿಂಬಿಯನ್ನು ಹಡಗಿನ ಪಕ್ಕಕ್ಕೆ ಬಿಡುತ್ತಾರೆ. ಅಂಥ ಒಂದು ಹಗ್ಗದ ಸಿಂಬಿಯನ್ನು ಡೆಕ್ಕಿನ ಮೇಲೆ ಇಡಲಾಗಿತ್ತು. ಆ ಹಗ್ಗದ ಸಿಂಬಿಯ ಮೇಲೆ ಇವನು ತಲೆಯಿಟ್ಟುಕೊಂಡಿದ್ದ. ಅವನ ಕೈಗಳು ಚಾಚಿಕೊಂಡಿದ್ದುವು. ಮಕ್ಕಳಂತೆ ಕಾಲು ಕೊಕ್ಕರಿಸಿಕೊಂಡು ಅವನು ಮಲಗಿದ್ದ. ಅವನ ಕಾಲುಗಳ ಕಡೆಗೆ ಒಂದು ಸಾಧಾರಣವಾದ ದೃಷ್ಟಿಯನ್ನು ಬೀರಿದನೋ ಇಲ್ಲವೋ ಪೇತ್ಯ ಕಲ್ಲಿನಂತೆ ನಿಂತುಬಿಟ್ಟ. ಮಲಗಿದ್ದ ಮನುಷ್ಯನ ಷರಾಯಿಗಳು ಮೇಲಕ್ಕೆ ಸರಿದಿದ್ದುದರಿಂದ ಅವನು ಕಾಲುಗಳಿಗೆ ಹಾಕಿಕೊಂಡಿದ್ದ ತುಕ್ಕಿನ ಬಣ್ಣದ ನಾವಿಕರ ಬೂಡ್ಸುಗಳು ಕಾಣಿಸಿದುವು. ಸಂಶಯಕ್ಕೆಡೆಯೇ ಇರಲಿಲ್ಲ. ಅಂದು ಬೆಳಗ್ಗೆ ಕುದುರೆ ಗಾಡಿಯ ಪೀಠದ ಕೆಳಗೆ ತಾನು ನೋಡಿದ್ದ ಪರಿಚಿತ ಬೂಡ್ಸುಗಳೇ ಆಗಿದ್ದುವು ಅವು. ಒಂದು ವೇಳೆ ಇದು ಅಕಸ್ಮಾತ್ ಸಂಘಟನೆಯೆಂದು ಭಾವಿಸಲು ಪ್ರಯತ್ನಿಸಿದರೂ ಇನ್ನೊಂದು ಸಂಗತಿ ಆ ಭಾವನೆಗೆ ಅವಕಾಶವಿಲ್ಲದಂತೆ ಮಾಡಿ ಮೊದಲಿನ ಭಾವನೆಯನ್ನೇ ದೃಢಪಡಿಸುತ್ತಿತ್ತು. ತಾನು ಅಂದು ಬೆಳಗ್ಗೆ ನೋಡಿದ್ದ ಅದೇ ಸ್ಥಳದಲ್ಲಿ—ಹೆಬ್ಬೆರಳು ಮತ್ತು ತೋರುಬೆರಳುಗಳ ಕೆಳಭಾಗದ ಮಾಂಸದಿಂದ ಕೊಬ್ಬಿದ ಸ್ಥಳದಲ್ಲಿ--ಬಹು ಸ್ಪಷ್ಟವಾಗಿ ಲಂಗರಿನ ನೀಲಿಯ ಚಿತ್ರವನ್ನು ಪೇತ್ಯ ಗುರುತಿಸಿದ. ಆಶ್ಚರ್ಯದಿಂದ ಕಿರಿಚಿಕೊಂಡು ಬಿಡಬೇಕು! ಆದರೆ ತಡೆದುಕೊಂಡ, ಏಕೆಂದರೆ ಮೀಸೆ ಮನುಷ್ಯನ ಗಮನವನ್ನು ಇವನು ಸೆಳೆದಿದ್ದನೆಂಬುದು ಪೇತ್ಯನಿಗಾಗಲೆ ಗೊತ್ತಾಗಿದ್ದಿತು.

ಮಲಗಿದ ವ್ಯಕ್ತಿಯ ಹತ್ತಿರ ಹತ್ತಿರವೇ ಮೀಸೆಮನುಷ್ಯ ಹಲವು ಬಾರಿ ಓಡಾಡಿದ. ಅವನ ಮುಖವನ್ನು ಮುಚ್ಚಿದ್ದ ಟೋಪಿಯ ಕೆಳಭಾಗವನ್ನು ಇಣಿಕಿ ನೋಡುವ ಪ್ರಯತ್ನ ಅವನಲ್ಲಿ ಕಂಡುಬರುತ್ತಿತ್ತು. ಆದರೆ ಅವನ ಪ್ರಯತ್ನ ಫಲಿಸಲಿಲ್ಲ. ಮೀಸೆಮನುಷ್ಯ ಹಾಗೆಯೇ ಒಂದು ಸಲ ಆ ಕಡೆಯಿಂದ ನಡೆದುಕೊಂಡು ಬಂದು ಅನಿರೀಕ್ಷಿತವಾಗಿ ತನಗೆ ತಿಳಿಯದೆ ಆಯಿತೋ ಎಂಬಂತೆ ಮಲಗಿದ್ದ ಮನುಷ್ಯನ ಕೈಯ ಮೇಲೆ ಹೆಜ್ಜೆಯನ್ನಿಟ್ಟ.

“ಕ್ಷಮಿಸಿ” ಎಂದು ಮೀಸೆಮನುಷ್ಯ ಹೇಳಿದ.

ಮಲಗಿದ್ದವನು ಬೆಚ್ಚಿ ಎದ್ದು ಕುಳಿತ. ನಿದ್ದೆಗಣ್ಣಿನಲ್ಲಿ ಹೆದರಿಕೆಯಿಂದ ಸುತ್ತ ದೃಷ್ಟಿಯನ್ನು ಬೀರಿದ.

"ಏ, ಯಾರು, ಏನು ?" ಎಂದು ಹಗ್ಗ ಒತ್ತಿ ಹವಳದ ಬಣ್ಣವಾಗಿದ್ದ ತನ್ನ ಕುತ್ತಿಗೆಯನ್ನು ಉಜ್ಜಿಕೊಳ್ಳುತ್ತ ತಡವರಿಸುತ್ತ ಗೊಣಗಿದ.

ಅವನೇ ಅದೇ ನಾವಿಕನೇ! ಸಂಶಯವೇ ಇರಲಿಲ್ಲ.

ಸಾಮಾನು ಇಳಿಸುವ ಬಾಗಿಲಿನ ಹಿಂದೆ ಮರೆಯಾಗಿ ನಿಂತುಕೊಂಡು ಪೇತ್ಯ ಮುಂದೆ ಏನಾಗುವುದೋ ಎಂದು ಉಸಿರು ಕೂಡ ಹುಯ್ಯದೆ ನೋಡುತ್ತಿದ್ದ. ಆದರೆ ಅಂಥ ವಿಶೇಷವೇನೂ ನಡೆಯಲಿಲ್ಲ. ಪುನಃ ಕ್ಷಮಾಪಣೆ ಕೇಳಿಕೊಂಡ ಮಿಾಸೆ ತನ್ನ ದಾರಿ ಹಿಡಿದು ಹೋದ. ನಾವಿಕ ಇನ್ನೊಂದು ಮಗ್ಗುಲಿಗೆ ಮಲಗಿದ. ಆದರೆ ಅವನಿಗೆ ಪುನಃ ನಿದ್ದೆ ಬರಲಿಲ್ಲ. ಹೆದರಿಕೆಯಿಂದ ಸುತ್ತ ನೋಡುತ್ತಿದ್ದ. ಏನಾದರೂ ಅಪಾಯಬರಬಹುವುದೆಂಬ ಹೆದರಿಕೆಯಿಂದ ಹಾಗೆ ನೋಡುತ್ತಿದ್ದನೆಂದು ಪೇತ್ಯ ಊಹಿಸಿದ.

ಪೇತ್ಯ ಈಗೇನು ಮಾಡಬೇಕು? ತಂದೆಯ ಹತ್ತಿರಕ್ಕೆ ಓಡಿಹೋಗಬೇಕೆ? ನೌಕಾಧಿಪತಿಯ ಸಹಾಯಕನಿಗೆ ಎಲ್ಲವನ್ನೂ ತಿಳಿಸಬೇಕೆ? ಕೂಡದು, ಕೂಡದು! ಕುದುರೆ ಗಾಡಿಯಲ್ಲಿ ತಂದೆ ನಡೆದುಕೊಂಡ ರೀತಿ ಪೇತ್ಯನ ನೆನಪಿಗೆ ಬಂದಿತು. ಈ ಸಂಬಂಧವಾಗಿ ತಾನು ಯಾರಿಗೂ ಏನನ್ನೂ ಹೇಳಕೂಡದು, ತತ್ಸಂಬಂಧವಾದ ಪ್ರಶ್ನೆಯನ್ನು ಯಾರಲ್ಲೂ ಮಾಡಕೂಡದು ಮತ್ತು ತನ್ನ ನಾಲಿಗೆಯನ್ನು ಬಿಗಿಹಿಡಿದುಕೊಂಡು ತನಗೆ ಏನೂ ತಿಳಿಯದು ಎಂಬಂತೆ ನಟಿಸಬೇಕು ಎಂದು ಪೇತ್ಯ ತಿಳಿದುಕೊಂಡ.

ಮಿಾಸೆಯನ್ನು ಹುಡುಕಿ ಅವನು ಏನು ಮಾಡುತ್ತಿದ್ದಾನೆಂಬುದನ್ನು ನೋಡಬೇಕೆಂಬ ಕುತೂಹಲ ಪೇತ್ಯನಿಗೆ ಉಂಟಾಯಿತು. ಮೊದಲನೆಯ ತರಗತಿಯ ಡೆಕ್ಕಿನ ನಿರ್ಜನವಾದ ಪ್ರದೇಶವೊಂದರಲ್ಲಿ ಮಿಾಸೆ ಇರುವುದನ್ನು ಪೇತ್ಯ ಕಂಡ. ಕ್ಯಾನ್‌ವಾಸ್ ಬಟ್ಟೆಯನ್ನು ಹೊದಿಸಿ ಬಿಗಿಯಾಗಿ ಹಗ್ಗಕಟ್ಟಿದ್ದ ಪ್ರಾಣ ರಕ್ಷಣೆಯ ದೋಣಿಯನ್ನು ಅವನು ಒರಗಿಕೊಂಡಿದ್ದ.

ಕೆಳಗಡೆ ಕಣ್ಣಿಗೆ ಕಾಣಿಸದ ಹಾಗಿದ್ದ ನೀರ್ಗಾಲಿಯು ಬಹುಮಟ್ಟಿಗೆ ಕಪ್ಪಗೆ ಕಾಣುತ್ತಿದ್ದ ಹಾಗೂ ನೊರೆಯ ಸಾಲಿನಿಂದ ಕೂಡಿದ್ದ ನೀರನ್ನು ಎಳೆಯುತ್ತಿತ್ತು. ಅದರ ಶಬ್ದ ಜಲಯಂತ್ರದಿಂದ ಕೇಳಿಬರುವ ಸದ್ದಿನಂತಿತ್ತು. ಹೊಳೆಯುತ್ತಿದ್ದ ಅಲೆಗಳ ಮೇಲೆ ಬಿದ್ದಿದ್ದ ಹಡಗಿನ ನೆರಳು ಈಗ ಬಹುಮಟ್ಟಿಗೆ ಉದ್ದವಾದುದಾಗಿತ್ತು. ಅಲೆಗಳು ದೂರವಾದಷ್ಟೂ ನೀಲಿಯಾಗಿ ಕಡುನೀಲಿಯಾಗಿ ಕಾಣಬರುತ್ತಿದ್ದುವು.

ಹಡಗಿನ ಮೇಲೆ ಬಿಸಿಲಿನಲ್ಲಿ ಹೊಳೆಯುತ್ತಿದ್ದ ಬಿಳಿ, ನೀಲಿ ಮತ್ತು ಕೆಂಪು ಬಣ್ಣಗಳ ವ್ಯಾಪಾರಿ ಧ್ವಜವು ಪಟಪಟನೆ ಎತ್ತರದಲ್ಲಿ ಹಾರಾಡುತ್ತಿತ್ತು.

ಮಂಜಿನ ಮೇಲೆ ಸ್ಲೆಡ್ಜ್ ಗಾಡಿಯು ಜಾರಿಕೊಂಡು ಹೋಗುವಾಗ ಜಾಡನ್ನು ಮಾಡಿಕೊಂಡು ಹೋಗುತ್ತದೆ. ಆ ಜಾಡು ಹಿಂದುಗಡೆಯಲ್ಲಿ ದೂರದೂರಕ್ಕೆ ಹೋದಂತೆ ಸಣ್ಣದಾಗುತ್ತ ಮಂಜಿನಲ್ಲಿ ಮಾಯವಾದಂತೆ ಕಂಡು ಬರುತ್ತದೆ. ಅದೇರೀತಿ ಹಡಗು ಮುಂದೆ ಹೋದಂತೆ ಅದರ ಹಿಂದೆ ನೀರಿನ ಅಗಲವಾದ ಜಾಡು ವಿಸ್ತಾರವಾಗುತ್ತ ಹೋಗಿ ಕೊನೆಗೆ ಕರಗಿ ಸಮುದ್ರದ ನೀರಿನಲ್ಲಿ ಸೇರಿ ಹೋಗುತ್ತಿತ್ತು. ನೊವಾರೊಸಿಯುದ ಎತ್ತರವಾದ ಮಣ್ಣಿನ ದಡ ಎಡಗಡೆಯಲ್ಲಿ ಹಿಂದು ಹಿಂದಕ್ಕೆ ಧಾವಿಸುತ್ತಿತ್ತು.

ಮಿಾಸೆ ತನ್ನ ಕೈಯಲ್ಲಿ ಹಿಡಿದಿದ್ದ ವಸ್ತುವೊಂದನ್ನು ವಿಶೇಷವಾಗಿ ಗಮನವಿಟ್ಟು

ಪರೀಕ್ಷಿಸುತ್ತಿದ್ದ.

ಪೇತ್ಯ ಬೆಕ್ಕಿನ ಹಾಗೆ ಅವನ ಹಿಂದುಗಡೆಯಿಂದ ಸದ್ದು ಮಾಡದೆ ಕದ್ದು ಹೋಗಿ ತುದಿಗಾಲಿನಲ್ಲಿ ನಿಂತು ನೋಡಿದ. ವಿದೇಶ ಪ್ರವಾಸ ಮಾಡುವವರು ತಮ್ಮ ರಹದಾರಿಯ ಜೊತೆಗೆ ಇಟ್ಟು ಕೊಂಡಿರುವಂಥ ಸಣ್ಣ ಆಕೃತಿಯ ಫೋಟೋವನ್ನು ಅವನು ಕೈಯಲ್ಲಿ ಹಿಡಿದಿದ್ದ. ಅದರಲ್ಲಿ ಸಂಪೂರ್ಣ ಸಮವಸ್ತ್ರವನ್ನು ಧರಿಸಿದ ನಾವಿಕನೊಬ್ಬನ ಚಿತ್ರವಿತ್ತು. ಕಿವಿಯಿಂದ ಪಕ್ಕಕ್ಕೆ ವಾಲಿದ ಟೋಪಿಯನ್ನು ಹಾಕಿಕೊಂಡಂತೆ ಚಿತ್ರದಲ್ಲಿ ಕಾಣಿಸಿತು. ಟೋಪಿಯ ಪಟ್ಟಿಯ ಮೇಲೆ ಹೀಗೆ ಬರೆದಿತ್ತು

ಕ್ನ್ಯಾಜ್ ಪೋಟೋಮ್ಕಿನ್ ತಾವರಿಚೆಸ್ಕಿ

ಕೈಮೇಲೆ ಲಂಗರಿನ ಹಚ್ಚೆಯಿದ್ದ ನಾವಿಕನ ಚಿತ್ರವದು.

ಮಿಾಸೆಮನುಷ್ಯನ ವಿಚಿತ್ರರೀತಿಗೆ ಕಾರಣ ಇದ್ದಕ್ಕಿದಂತೆ ಪೇತ್ಯನ ಮನಸ್ಸಿನಲ್ಲಿ ಮಿಂಚಿತು. ಲಂಗರಿನ ಹಚ್ಚೆಯಿದ್ದ ನಾವಿಕನಂತೆಯೇ ಮಿಾಸೆಯೂ ವೇಷಮರೆಸಿಕೊಂಡಿದ್ದ.

೮. "ಮನುಷ್ಯ ಸಮುದ್ರಕ್ಕೆ ಹಾರಿದ"

ಯಥೇಷ್ಟವಾಗಿ ಗಾಳಿ ಬೀಸುತ್ತಿತ್ತು. ಹಡಗಿನ ಯಂತ್ರಕ್ಕೆ ಸ್ವಲ್ಪ ಭಾರ ಕಡಿಮೆಯಾಗಿ ಹಗುರವಾಗಲೆಂದೂ ಸಾಮಾನನ್ನು ಹಡಗಿಗೆ ಭರ್ತಿ ಮಾಡುವುದರಲ್ಲಿ ಪೋಲಾದ ಸಮಯವನ್ನು ತುಂಬಿಕೊಳ್ಳುವುದಕ್ಕಾಗಿಯೂ ನೌಕಾಧಿಪತಿಯು ಹಡಗಿನ ಹಾಯಿಯನ್ನು ಮೇಲಕ್ಕೆ ಏರಿಸು ವಂತೆ ಅಪ್ಪಣೆ ಮಾಡಿದ. ಯಾವುದೇ ಒಂದು ಹಬ್ಬವಾಗಲಿ, ಯಾವುದೇ ಒಂದು ಮೆಚ್ಚಿನ ಬಹು ಮಾನವಾಗಲೀ ಈ ಒಂದು ಅಲ್ಪ ವಿಷಯದಷ್ಟು ಪೇತ್ಯನನ್ನು ಪರವಶನನ್ನಾಗಿ ಮಾಡುತ್ತಿರಲಿಲ್ಲ. ನಿಧಾನವಾಗಿ ಯೋಚನೆಮಾಡಿ ನೋಡಿದ್ದರೆ ಅದು ಅತ್ಯಲ್ಪವೆಂದೇ ಎನಿಸೀತು! ಒಂದೇ ಹಡಗಿನಲ್ಲಿ ಜತೆ ಜತೆಗೇ ಯಂತ್ರವೂ ಹಾಯಿಯೂ ಇರುವುದೆಂದರೆ! ಟಪಾಲು ಹಡಗು ಮತ್ತು ಕಾವಲು ಹಡಗು ಎರಡನ್ನೂ ಒಂದರಲ್ಲಿ ಸಮಾವೇಶ ಗೊಳಿಸಿದಂತೆ! ಸಂಗಾತಿಗಳೇ, ಹಟಾತ್ತಾಗಿ ಹಾಯಿ ಯನ್ನು ಏರಿಸಿಕೊಂಡು ಯಾನ ಮಾಡುವ ನಿಜವಾದ ಜಹಜಿನಲ್ಲಿ ಎಂದಾದರೂ ನೌಕಾಯಾನ ಮಾಡುವ ಅದೃಷ್ಟವನ್ನು ನೀವು ಪಡೆದಿದ್ದೀರಾ? ಹಾಗಿದ್ದರೆ ತಿಳಿಸಿ, ಆಗ ನೀವೂ ತಪ್ಪದೆ ಆನಂದ ಪರವಶರಾಗುತ್ತಿದ್ದಿರೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಅಂದಿನ ದಿನಗಳಲ್ಲೂ ಕೂಡ ಬಹು ಹಳೆಯ ಕಾಲದ ಜಹಜುಗಳ ಮೇಲೆ, ಅದೂ ಅತಿ ಅಪರೂಪ ಸಂದರ್ಭಗಳಲ್ಲಿ, ಹಾಯಿ ಯನ್ನು ಏರಿಸಿಕೊಂಡು ಪ್ರಯಾಣಮಾಡುತ್ತಿದ್ದರು. ಈಗ ಅದರ ತಂಟೆಯೇ ಇಲ್ಲವೆನ್ನಿ. ಜಹಜಿನ ಮೇಲೆ ಹಾಯಿಯನ್ನು ಏರಿಸಲು ನೌಕಾಧಿಪತಿ ಅಪ್ಪಣೆಮಾಡಿದಾಗ ಪೇತ್ಯನಿಗೆ ಎಷ್ಟೊಂದು ಸಂತೋಷವಾಗಿರಬೇಕೆಂದು ಈಗ ನಿಮಗೆ ಅರ್ಥವಾಗಿರಬೇಕಲ್ಲವೇ ?

ಈ ಅಮೃತಗಳಿಗೆಯಲ್ಲಿ ಮಿಾಸೆಯೂ, ತಪ್ಪಿಸಿಕೊಂಡು ಬಂದಿದ್ದ ನಾವಿಕನೂ ಪೇತ್ಯನ ಮನಸ್ಸಿನಿಂದ ಸ್ವಾಭಾವಿಕವಾಗಿ ಜಾರಿಹೋಗಿದ್ದರು. ಹಡಗಿನ ಸಾಮಾನು ಕುಳಿಯ ಬಾಗಿಲಿ ನಿಂದ ಹೊರಕ್ಕೆ ಅಚ್ಚುಕಟ್ಟಾಗಿ ಮಡಿಸಿದ್ದ ಹಾಯಿಯನ್ನು ಬರಿಗಾಲಿನಲ್ಲಿದ್ದ ಡೆಕ್ಕಿನ ನೌಕರನು

ನಿಧಾನವಾಗಿ ಎಳೆಯುತ್ತಿದ್ದುದನ್ನು ಹಡಗಿನ ತುದಿಯಲ್ಲಿ ನಿಂತು ಪೇತ್ಯ ಏಕಾಗ್ರಚಿತ್ತತೆಯಿಂದ ನೋಡುತ್ತಿದ್ದ. ಅದು ಹಡಗಿನ ಧ್ವಜಸ್ತಂಭದ ತುದಿಯಿಂದ ಇಳಿಬಿಟ್ಟು ಭದ್ರವಾಗಿ ಬಿಗಿಯಬಹುದಾದ ತ್ರಿಕೋನಾಕಾರದ ಹಾಯಿಯೆಂಬುದನ್ನೂ, ಅದನ್ನು 'ಜಿಬ್' ಎಂದು ಕರೆಯುತ್ತಾರೆ ಎಂಬುದನ್ನೂ ಪೇತ್ಯ ಚೆನ್ನಾಗಿ ಅರಿತಿದ್ದ. ಆದರೂ ಬೇರೆ ನಾವಿಕರಾರೂ ಇಲ್ಲದೇ ಇದ್ದುದರಿಂದ ತಾನೇ ಹಾಯಿಯನ್ನು ಏರಿಸುವ ಕೆಲಸವನ್ನು ನೋಡಿಕೊಳ್ಳುತ್ತಿದ್ದ ನೌಕಾಧಿಪತಿಯ ಸಹಾಯಕನ ಬಳಿಗೆ ಪೇತ್ಯ ಹೋದ.

"ರೀ, ಇದು 'ಜಿಬ್' ಅಲ್ಲವೆ, ದಯವಿಟ್ಟು ಹೇಳಿ."

"ಹೌದು".

ನೌಕಾಧಿಪತಿಯ ಸಹಾಯಕನ ಧ್ವನಿ ಒರಟಾಗಿದ್ದಿತು. ಆದರೆ ಪೇತ್ಯ ಅದನ್ನು ಅಪಚಾರವೆಂದು ತಿಳಿಯಲಿಲ್ಲ. ನುರಿತ ಖದೀಮನಾದ ನಾವಿಕ ಒರಟಾಗಿಲ್ಲದೆ ಇರುವುದು ಸಾಧ್ಯವೇ ಹೇಳಿ. ಹಾಗಿಲ್ಲದಿದ್ದರೆ ಅವನೆಂಥ ನಾವಿಕ ?

ಪೇತ್ಯ ಗಂಭೀರವಾದ ದೊಡ್ಡಸ್ತಿಕೆಯ ಮುಗುಳುನಗೆಯೊಂದನ್ನು ತನ್ನನ್ನು ನೋಡುತ್ತಿದ್ದ ಪ್ರಯಾಣಿಕರ ಕಡೆಗೆ ಬೀರಿ ನೌಕಾಧಿಪತಿಯ ಸಹಾಯಕನನ್ನು ಕುರಿತು ಮನುಷ್ಯ ಮನುಷ್ಯನನ್ನು ಕುರಿತು ಸಾಧಾರಣವಾಗಿ ಮಾತನಾಡಿಸುವಂತೆ "ರೀ, ಹಾಯಿಗಳಲ್ಲಿ ಇದಲ್ಲದೆ ಇನ್ನೆಷ್ಟು ವಿಧ ಇದೆ ಹೇಳಿ. ಪ್ರಧಾನ ಪಟ ಹೇಗಿರುತ್ತೆ? ಮೊಗಪಟ ಹೇಗಿರುತ್ತೆ ?" ಎಂದು ಪ್ರಶ್ನೆಮಾಡಿದ.

"ದಾರಿ ಬಿಟ್ಟು ಆಚೆ ನಡೆ" ಎಂದು ಆ ನೌಕಾಧಿಪತಿಯ ಸಹಾಯಕ ಹೇಳಿದ. ಇದ್ದಕ್ಕಿದ್ದಂತೆ ಹಲ್ಲು ನೋಯಲಾರಂಭಿಸಿದರೆ ಆಗ ಮನುಷ್ಯ ಹೇಗೆ ಮಾತಾಡುತ್ತಾನೋ ಆ ರೀತಿ ಇತ್ತು ಅವನ ಉತ್ತರ. "ಹೋಗು ನಿಮ್ಮಮ್ಮನ ಹತ್ತಿರಕ್ಕೆ, ಓಡು."

"ನನ್ನ ತಾಯಿ ಇಲ್ಲ, ಎಂದೋ ಸತ್ತುಹೋದರು. ನಾವು ನಮ್ಮ ತಂದೆ ಜೊತೇಲಿ ಪ್ರಯಾಣ ಮಾಡುತ್ತಾ ಇದ್ದೇವೆ." ಎಂದು ಪೇತ್ಯ ಕನಿಕರ ಉಕ್ಕಿಸುವ ಅಭಿಮಾನದಿಂದ ಆ ಒರಟನಿಗೆ ಉತ್ತರ ಕೊಟ್ಟ. ಅದಕ್ಕೆ ಅವನು ಪ್ರತ್ಯುತ್ತರ ಕೊಡಲಿಲ್ಲ. ಅಲ್ಲಿಗೆ ಅವರ ಸಂಭಾಷಣೆ ಮುಕ್ತಾಯವಾಯಿತು

ಕೊನೆಗೆ ಆ ಹಾಯಿಯನ್ನು ಏರಿಸಿದ್ದಾಯಿತು. ಮೊದಲಿಗಿಂತ ಹೆಚ್ಚು ಸರಾಗವಾಗಿಯೂ ವೇಗವಾಗಿಯೂ ಹಡಗು ಯಾನ ಮಾಡಲಾರಂಭಿಸಿತು. ಒಡೆಸ್ಸ ವಾಸ್ತವವಾಗಿ ಹತ್ತಿರವಾಗಿತ್ತು. ಸಮುದ್ರದೊಳಕ್ಕೆ ಚಾಚಿಕೊಂಡಿದ್ದ 'ಸುಖಾಯಿ ಲಿಮಾನ್' ಭೂಭಾಗ ದೂರದಲ್ಲಿ ಕಣ್ಣಿಗೆ ಬಿತ್ತು

ಅಳಿವೆಯ ಆಳವಿಲ್ಲದ ನೀರು ಎಷ್ಟು ಅಚ್ಚ ನೀಲಿಯಾಗಿ ಕಾಣುತ್ತಿತ್ತೆಂದರೆ ಅದರಿಂದ ಒಂದು ಕೆಂಪು ಕಾಂತಿ ಹೊರಹೊರಡುತ್ತಿತ್ತು.

ಜರ್ಮನರ ನಿವಾಸವಾದ ಲಸ್ಟ್‌ಡಾರ್ಫ್‌ನಲ್ಲಿದ್ದ ಮನೆಗಳ ಸ್ಲೇಟು ಹಲಗೆಯ ಛಾವಣಿಗಳೂ, ಎತ್ತರವಾದ ಚರ್ಚೂ, ಚರ್ಚಿನ ಶಿಖರದ ತುದಿಯಲ್ಲಿ ವಾಯುವಿನ ದಿಕ್ಕನ್ನು ಸೂಚಿಸುತ್ತಿದ್ದ ಗಾಳಿಹುಂಜನೂ ಕಾಣಿಸಿದುವು. ಅನಂತರ ಕ್ರಮವಾಗಿ ಬಿಡಿಬಿಡಿ ಮನೆಗಳೂ, ತರಕಾರಿ ಮತ್ತು ಹಣ್ಣಿನ ತೋಟಗಳೂ, ಸ್ನಾನಮಾಡಲು ಅಣಿಯಾದ ಸಮುದ್ರದ ದಡಗಳೂ, ಗೋಪುರಗಳೂ, ದೀಪಸ್ತಂಭಗಳೂ ದೃಷ್ಟಿಪಥಕ್ಕೆ ಬಂದುವು.

ಸುಪ್ರಸಿದ್ಧವಾದ ಕೊವಲೆವ್‌ಸ್ಕಿ ಗೋಪುರವು ಮೊದಲು ಕಣ್ಣಿಗೆ ಬಿದ್ದಿತು. ಅದರ ಹಿಂದೆ

ಒಂದು ದೊಡ್ಡ ಐತಿಹ್ಯವಿತ್ತು.

ಹಿಂದೆ ಅಲ್ಲಿ ಕೊವಲೆವ್‌ಸ್ಕಿ ಎಂಬ ಧನಿಕನೊಬ್ಬನಿದ್ದ. ಅವನು ತನ್ನ ಸ್ವಂತ ಜವಾಬ್ದಾರಿಯ ಮೇಲೆ ಒಡೆಸ್ಸ ನಗರಕ್ಕೆ ಒಂದು ನೀರು ಸರಬರಾಯಿ ವ್ಯವಸ್ಥೆಯನ್ನು ಕಟ್ಟಿಸಲು ನಿಶ್ಚಯಿಸಿದ. ಅದೇನಾದರೂ ಪೂರ್ಣವಾಗಿದ್ದಿದ್ದರೆ ಕಂಡು ಕೇಳದಷ್ಟು ಲಾಭ ಬಂದು ಸುರಿಯುತ್ತಿತ್ತು. ಒಂದು ಕೊಡ ನೀರು ತೆಗೆದುಕೊಳ್ಳಬೇಕಾದರೆ ಕೊವಲೆವ್‌ಸ್ಕಿ ಕೇಳಿದಷ್ಟು ಹಣವನ್ನು ಜನ ಕೊಡಬೇಕಾಗುತ್ತಿತ್ತು. ಒಡೆಸ್ಸಕ್ಕೆ ಸಮೀಪದಲ್ಲಿ ಕುಡಿಯುವ ನೀರಿನ ವಸತಿ ಇದ್ದುದು ಕೋವಲೆವ್‌ಸ್ಕಿ ಜಮೀನಿನಲ್ಲಿಯೇ. ಆದರೆ ನೀರು ತುಂಬ ಆಳದಲ್ಲಿತ್ತು. ಆ ನೀರನ್ನು ಮೇಲಕ್ಕೆತ್ತಲು ಬಹುದೊಡ್ಡ ನೀರಿನ ಗೋಪುರವನ್ನು ಕಟ್ಟಿ ಅದಕ್ಕೆ ತಕ್ಕ ಯಂತ್ರಗಳನ್ನು ಹೂಡಬೇಕಾಗಿತ್ತು. ಒಬ್ಬ ಮನುಷ್ಯನಿಂದ ಆಗತಕ್ಕ ಕೆಲಸ ಅದಾಗಿರಲಿಲ್ಲ. ತನ್ನ ಲಾಭದಲ್ಲಿ ಇತರರು ಪಾಲುಗೊಳ್ಳ ಕೂಡದೆಂಬುದು ಕೋವಲೆವ್‌ಸ್ಕಿ ಹಟ. ಆದ್ದರಿಂದ ತಾನೊಬ್ಬನೇ ಆ ನೀರಿನ ತೊಟ್ಟಿಯ ಗೋಪುರ ವನ್ನು ಕಟ್ಟಿಸಲು ಸಿದ್ಧವಾದ. ಅದಕ್ಕೆ ಅವನ ನಿರೀಕ್ಷೆ ಮೀರಿ ವಿಪುಲವಾಗಿ ಹಣ ಖರ್ಚಾಯಿತು. ಅವನ ಸಂಬಂಧಿಕರು ಈ ಹುಚ್ಚು ಕೆಲಸಕ್ಕೆ ಕೈ ಹಾಕಕೂಡದೆಂದು ಕೇಳಿಕೊಂಡುದೆಲ್ಲ ವ್ಯರ್ಥ ವಾಯಿತು. ಏಕೆಂದರೆ ಅವನು ಅಷ್ಟು ಹೊತ್ತಿಗಾಗಲೆ ವಿಪರೀತ ಹಣವನ್ನು ಅದರ ತಲೆಯ ಮೇಲೆ ಸುರಿದಿದ್ದ. ಗೋಪುರದ ಮುಕ್ಕಾಲು ಭಾಗ ಕೆಲಸ ಮುಗಿದಿತ್ತು. ಕೆಲಸ ಮುಂದುವರಿಸಿ ಕೊಂಡು ಹೋಗದೆ ವಿಧಿಯಿರಲಿಲ್ಲ. ತನ್ನ ಮನೆಮಠ ಭೂಮಿಕಾಣಿಗಳನ್ನೆಲ್ಲ ಒತ್ತೆಯಿಟ್ಟು ಹಣ ತಂದು ಗೋಪುರವನ್ನು ಕಟ್ಟಿ ಮುಗಿಸಿದ. ಅದೊಂದು ಬೃಹದಾಕಾರದ ಗೋಪುರ. ಜನರು ಗುಂಪು ಗುಂಪಾಗಿ ಒಡೆಸ್ಸ ನಗರದಿಂದ ಈ ಅದ್ಭುತವನ್ನು ನೋಡಲು ಭಾನುವಾರವೇ ಮೊದಲಾದ ರಜಾ ದಿನಗಳಲ್ಲಿ ಬರುತ್ತಿದ್ದರು. ಕೇವಲ ಗೋಪುರದಿಂದ ಏನಾಗುತ್ತದೆ. ಪರದೇಶಗಳಿಂದ ಯಂತ್ರ ಗಳನ್ನು ತರಿಸಬೇಕಾಗಿತ್ತು. ಯಂತ್ರಗಳಿಂದ ಸುರಂಗದ ಬಾವಿಯನ್ನು ಕೊರೆಯಬೇಕಾಗಿತ್ತು. ನೀರಿನ ಕೊಳವೆಗಳನ್ನು ಹಾಕಬೇಕಾಗಿತ್ತು. ಕೊವಲೆವ್‌ಸ್ಕಿ ಹತಾಶನಾದ. ಒಡೆಸ್ಸಾದ ವ್ಯಾಪಾರಿಗಳನ್ನೂ, ಬ್ಯಾಂಕಿನ ಧನಿಗಳನ್ನೂ ಸಾಲ ಕೇಳಿದ. ವಿಪರೀತ ಬಡ್ಡಿ ಕೊಡುತ್ತೇನೆಂದು ಮಾತು ಕೊಟ್ಟ. ಕನಸಿನಲ್ಲಿ ಕೂಡ ಕಾಣಲಾರದಷ್ಟು ಪ್ರಮಾಣದಲ್ಲಿ ಅವರ ಅಸಲಿನ ಮೇಲೆ ಲಾಭಾಂಶವನ್ನು ಹಂಚುತ್ತೇನೆಂದು ವಾಗ್ದಾನ ಮಾಡಿದ. ಬೇಡಿಕೊಂಡ, ಕಾಲು ಕಟ್ಟಿಕೊಂಡ, ಗೋಗರೆದ, ಅತ್ತ, ಕಣ್ಣೀರು ಕಾಲುವೆ ಹರಿಸಿದ. ಆದರೆ ಅವರ ಮನಸ್ಸು ಕರಗಲಿಲ್ಲ. ಮೊದಲಿ ನಿಂದ ತಮ್ಮನ್ನು ಪಾಲುದಾರರನ್ನಾಗಿ ಸೇರಿಸಿಕೊಳ್ಳಲಿಲ್ಲವೆಂಬ ಕೋಪದಿಂದ ಅವರು ಅವನನ್ನು ಕ್ಷಮಿಸಲು ಸಿದ್ಧರಿರಲಿಲ್ಲ. ಅವನ ಮಾತುಗಳನ್ನು ಕಿವಿಯ ಮೇಲೆಯೇ ಹಾಕಿಕೊಳ್ಳಲಿಲ್ಲ. ಅವನಿಗೆ ಒಂದು ಚಿಕ್ಕಾಸೂ ಹುಟ್ಟಲಿಲ್ಲ. ಕೊವಲೆವ್‌ಸ್ಕಿ ಪೂರ್ಣವಾಗಿ ನಾಶವಾದ, ಕುಸಿದು ಬಿದ್ದ, ತಲೆಯೆತ್ತಲಾರದಂತೆ ನುಚ್ಚುನೂರಾದ. ಪುಡಿಪುಡಿಯಾದ, ನೀರಿನ ಕೊಳವೆಗಳ ಗೀಳು ಹಿಡಿ ಯಿತು ಅವನಿಗೆ. ತನ್ನ ಹಣವನ್ನೆಲ್ಲ ನುಂಗಿ ನೊಣೆದಿದ್ದ ಆ ಗೋಪುರದ ಸುತ್ತ ಹುಚ್ಚು ಹುಚ್ಚಾಗಿ ಅಲೆದಾಡುತ್ತಿದ್ದ. ಏನಾದರೂ ಮಾಡಿ ಹಣವನ್ನೆತ್ತಬೇಕೆಂದು ಯೋಚಿಸಿ ಯೋಚಿಸಿ ತಲೆ ಕೆಡಿಸಿ ಕೊಂಡ. ಕ್ರಮೇಣ ಅವನ ಬುದ್ಧಿ ಹದಗೆಟ್ಟಿತು. ಒಂದಾನೊಂದು ದಿನ ಅವನು ಆ ಪಾಪಿ ಗೋಪುರದ ಮೇಲಕ್ಕೆ ಹತ್ತಿ ಅಲ್ಲಿಂದ ಕೆಳಗೆ ಬಿದ್ದು ಪ್ರಾಣಬಿಟ್ಟ. ಇದು ನಡೆದುದು ಐವತ್ತು ವರ್ಷಗಳ ಹಿಂದೆ. ಆದರೆ ಆ ಗೋಪುರ ಮಳೆ ಗಾಳಿ ಬಿಸಿಲುಗಳಿಗೆ ಮೈಯೊಡ್ಡಿ ಕಪ್ಪಾಗಿ,

ಸಂಪದ್ಭರಿತವಾದ ವ್ಯಾಪಾರ ವಾಣಿಜ್ಯಗಳಿಂದ ಸಮೃದ್ಧವಾದ ಒಡೆಸ್ಸ ನಗರಕ್ಕೆ ಅನತಿ ದೂರದಲ್ಲಿ, ಭೂತದಂತೆ ತಲೆಯೆತ್ತಿ ನಿಂತಿತ್ತು. ಮಾನವನ ಅತಿ ಆಸೆಗೆ ಎಚ್ಚರಿಕೆಯನ್ನು ನೀಡುತ್ತಿದ್ದ ಶಾಶ್ವತ ವಾದ ಘೋರ ಸ್ಮಾರಕವಾಗಿತ್ತು ಆ ಗೋಪುರ.

ಅನಂತರ ಹೊಸ ದೀಪಸ್ತಂಭವೂ, ಅದಾದ ಮೇಲೆ ಆಗ ಬಳಕೆಯಲ್ಲಿ ಇಲ್ಲದೇ ಇದ್ದ ಹಳೆಯ ದೀಪಸ್ತಂಭವೂ ಕಣ್ಣಿಗೆ ಬಿದ್ದುವು.

ಒಡೆಸ್ಸದ ಉಪನಗರದಲ್ಲಿ ಸಾಲು ಸಾಲಾಗಿ ಎದ್ದು ನಿಂತಿದ್ದ ಹೊಂಬಣ್ಣದ ಜಾಲಿಯ ಮರ ಗಳ ಹಿಂದಿನಿಂದ ಸೂರ್ಯನು ಮುಳುಗುತ್ತಿದ್ದ, ಸೂರ್ಯನ ಅರುಣ ಕಾಂತಿಯು ಅವುಗಳ ಮೇಲೆ ಚೆಲ್ಲಿದ್ದರಿಂದ ಅವು ಅಷ್ಟೂ ಅಷ್ಟು ಸ್ಪಷ್ಟವಾಗಿಯೂ, ಸಮೀಪವಾಗಿಯೂ, ಎಲ್ಲಕ್ಕಿಂತ ಮಿಗಿಲಾಗಿ ಅಷ್ಟೂ ಅಷ್ಟು ಪರಿಚಿತವಾಗಿಯೂ ತೋರುತ್ತ ಸಮುದ್ರದ ದಡದ ದಿಣ್ಣೆಯ ಮೇಲೆ ತಲೆಯೆತ್ತಿ ನಿಂತಿದ್ದುವು. ಹಾಯಿಯನ್ನು ಮೇಲಕ್ಕೆ ಉಫ್ ಎಂದು ಊದುವುದರ ಮೂಲಕ ಹಡಗು ಬೇಗ ದಡವನ್ನು ಸೇರುವುದಾಗಿದ್ದರೆ ಪೇತ್ಯ ಅದಕ್ಕೂ ಸಿದ್ಧನಿದ್ದ.

ಇಲ್ಲಿಂದ ಮುಂದಕ್ಕೆ ಪೇತ್ಯನಿಗೆ ಸಮುದ್ರ ತೀರದ ಒಂದೊಂದು ಅಂಗುಲವೂ ಸುಪರಿಚಿತ ವಾಗಿತ್ತು. ಬಾಲ್ಷಾಯಿ ಫೌಂಟನ್ನು, ಸ್ರೆಡ್ನಿ ಫೌಂಟನ್ನು, ಮಾಲು ಫೌಂಟನ್ನು—ಇವೇ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾದ ಚಿಲುಮೆಯಿರುವ ಸುಂದರ ಸ್ಥಲಗಳು, ಗಿಡಗಂಟೆಗಳು, ಮುಳ್ಳುಪೊದೆ ಗಳು, ಕಾಡು ರೋಜ ಹಾಗೂ ಲಿಲಾಕ್ ಹೂಗಿಡಗಳೇ ಮೊದಲಾದುವುಗಳಿಂದ ತುಂಬಿದ್ದ ಎತ್ತರವಾದ ಕಡಿದಾದ ದಡವು ಪೇತ್ಯನನ್ನು ಕಂಡು ಕೈಬೀಸಿ ಕರೆಯಿತು.

ದಡದ ದಿಣ್ಣೆಯ ನೆರಳು ಹರಡಿದ್ದ ನೀರು, ಆ ನೀರಿನಲ್ಲಿ ನಿಂತಿದ್ದ ದೊಡ್ಡ ದೊಡ್ಡ ಬಂಡೆ ಗಳು, ಹೊಳೆ ಹೊಳೆಯುವ ಪಾಚಿಗಳಿಂದ ಕೂಡಿದ್ದ ಬಂಡೆಗಳ ಪಕ್ಕಗಳು, ಆ ಬಂಡೆಗಳ ಮೇಲೆ ಕುಳಿತ ಈಜುಗಾರರು, ಮೀನು ಹಿಡಿಯಲು ಗಾಳ ಹಾಕಿ ಕುಳಿತವರು—ಯಾರೂ ಯಾವುದೂ ಪೇತ್ಯನಿಗೆ ಹೊಸದಲ್ಲ.

ದೂರದಲ್ಲಿ ಮರದ ದಿಮ್ಮಿಗಳ ಆಸರೆಯ ಮೇಲೆ ಕಟ್ಟಿದ್ದ ಆರ್ಕೇಡಿಯ ಉಪಾಹಾರಗೃಹ ಕಾಣಿಸಿತು. ಅಲ್ಲಿನ ವಾದ್ಯಗೋಷ್ಠಿಯ ರಂಗ ದೂರದಿಂದ ನೋಡಿದರೆ ನಾಟಕದ ನೆನಪುಗಾರನಿಗೆ ನಿಂತುಕೊಳ್ಳಲು ಕೊಡುವ ಪೀಠಕ್ಕಿಂತ ದೊಡ್ಡದೇನೂ ಅಲ್ಲ ಎಂಬಷ್ಟು ಚಿಕ್ಕದಾಗಿ ಕಾಣುತಿತ್ತು. ಉಪಾಹಾರ ಗೃಹದ ಮುಂದುಗಡೆ ಜನರು ನೆರಳಿನಲ್ಲಿ ಕೂಡುವಂತೆ ರಂಗುರಂಗು ಬಟ್ಟೆಗಳ ಛತ್ರಿ ಗಳನ್ನು ನಿಲ್ಲಿಸಿದ್ದರು. ಅವುಗಳ ನೆರಳಿನಲ್ಲಿದ್ದ ಮೇಜುಗಳಿಗೆ ಸುಂದರವಾದ ಹಾಗೂ ಮೋಹಕ ವಾದ ಬಣ್ಣದ ಬಟ್ಟೆಗಳನ್ನು ಹೊದಿಸಿದ್ದರು. ಆ ಮೇಜಿನ ಮೇಲೆ ಹೊದಿಸಿದ್ದ ಬಟ್ಟೆಗಳ ಅಂಚು ಗಳನ್ನು ತಂಪಾದ ಗಾಳಿಯು ಹಾರಾಡಿಸುತ್ತಿತ್ತು.

ಈ ಒಂದೊಂದೂ ಮೊದಲಿಗಿಂತ ಹೆಚ್ಚು ಸೊಗಸಾಗಿಯೂ ಆಕರ್ಷಕವಾಗಿಯೂ ತೋರಿ ಪೇತ್ಯನ ಮನಸ್ಸನ್ನು ಸೆಳೆಯುತ್ತಿತ್ತು. ಅವುಗಳನ್ನು ಪೇತ್ಯ ಮರೆತಿದ್ದನೇ? ಇಲ್ಲ. ತನ್ನ ಹೆಸರನ್ನು ಮರೆಯುವುದೆಷ್ಟು ಸುಲಭವಾಗಿರಲಿಲ್ಲವೊ ಅವುಗಳನ್ನು ಮರೆಯುವುದೂ ಅಷ್ಟೇ ಸುಲಭವಾಗಿರ ಲಿಲ್ಲ. ಎಲ್ಲೋ ಸ್ವಲ್ಪ ಕಾಲ ಅವುಗಳು ಪೇತ್ಯನ ಮನಸ್ಸಿನಿಂದ ಹೇಗೋ ನುಸುಳಿಕೊಂಡು ಹೋಗಿದ್ದುವಷ್ಟೆ! ಮನೆಯಲ್ಲಿ ಹಿರಿಯರಿಗೆ ಹೇಳದೆ ಹೊರಗಡೆ ಸುತ್ತಿಕೊಂಡು ಬರಲು ಹೋಗಿ ಹೊತ್ತಾಗಿ ಮನೆಗೆ ಬರುವ ಹುಡುಗ ಹೇಗೆ ಸರ್ರನೆ ಮನೆಯೊಳಕ್ಕೆ ನುಗ್ಗುತ್ತಾನೋ ಅದೇ ರೀತಿ

ಪೇತ್ಯನ ಮನಸ್ಸಿನೊಳಕ್ಕೆ ಅವುಗಳು ಎಡೆಬಿಡದೆ ನುಗ್ಗಿದುವು; ಒಂದರ ಹಿಂದೊಂದು, ಒಂದರ ಮೇಲೊಂದು ಪಂದ್ಯ ಕಟ್ಟಿದಂತೆ ನಾನು ಮುಂದು ತಾನು ಮುಂದು ಎಂದು ಓಡೋಡಿ ಬರುತ್ತಿದ್ದುವು. ಈಗ ಅವು ಅವನನ್ನು ಕೂಗಿ ಕರೆಯುತಿದ್ದುವು.

"ನಮಸ್ಕಾರ ಪೇತ್ಯ, ನಿನಗೆ ಸುಖಾಗಮನ. ಅಂತೂ ಬಂದೆಯಲ್ಲ. ನೀನಿಲ್ಲದೆ ಇದ್ದುದರಿಂದ ನಮಗೆ ಹೇಗೆ ಹೇಗೋ ಆಗುತ್ತಿತ್ತು. ಬಾರಯ್ಯ ಬೇಗ. ನನ್ನನ್ನು ಆಗಲೆ ಮರೆತು ಬಿಟ್ಟಿದ್ದಿಯೇನು? ಸರಿಯಾಗಿ ನೋಡಿ ಹೇಳು ನಾನ್ಯಾರು? ನಾನು ಮರಜ್ಞ ಉದ್ಯಾನ, ನಿನ್ನ ಅಚ್ಚುಮೆಚ್ಚಿನ ಬೇಸಗೆಯ ವಿಹಾರಸ್ಥಳ. ಈ ಪಚ್ಚೆ ಹಸುರಿನ ಹುಲ್ಲು ಹಸಲೆಯನ್ನು ನೋಡು, ಹೇಗೆ ಒಂದೇ ಸಮವಾಗಿ ಕತ್ತರಿಸಿದೆ! ಇದರ ಮೇಲೆ ನಡೆಯಕೂಡದೆಂಬ ನಿಷೇಧಾಜ್ಞೆಯಿದ್ದರೂ ಕೂಡ ನೀನು ಅದರ ಮೇಲೆ ನಡೆಯಲು ಇಷ್ಟಪಡುತ್ತಿರಲಿಲ್ಲವೇ ? ನನ್ನಲ್ಲಿ ಅಲ್ಲಲ್ಲಿ ನಿಲ್ಲಿಸಿರುವ ಅಮೃತಶಿಲೆಯ ಪ್ರತಿಮೆಗಳ ಮೇಲೆ ಕಚ್ಚಿಕೊಂಡಿರುತ್ತಿದ್ದ ಬಸವನ ಹುಳುಗಳನ್ನು ಎಷ್ಟು ಪರೀಕ್ಷಿಸಿದರೂ ನೀನು ದಣಿಯುತ್ತಿರಲಿಲ್ಲ ಅಲ್ಲವೇ? "ಬಸಪ್ಪ, ಬಸಪ್ಪ, ನಿನ್ನ ಕೋಡು ತೋರಿಸು" ಎಂದು ನೀನು ಅದಕ್ಕೆ ಹೇಳುತ್ತಿದ್ದೆ. ಆಗ ಅದು ತನ್ನ ನಾಲ್ಕು ಪುಟ್ಟ ಕೋಡುಗಳನ್ನು ಹೊರಕ್ಕೆ ಚಾಚಿಕೊಂಡು ಮುಂದಕ್ಕೆ ಹರಿಯುವಾಗ ಅದರ ಹಿಂದೆ ಆಗುತ್ತಿದ್ದ ಲೋಳೆಯ ಜಾಡನ್ನು ನೀನು ನೋಡಲು ಎಷ್ಟು ಪ್ರೀತಿಸುತಿದ್ದೆ ! ನೋಡು, ನಾನು ಈ ಬೇಸಗೆಯಲ್ಲಿ ಎಷ್ಟರಮಟ್ಟಿಗೆ ಬೆಳೆದುಬಿಟ್ಟಿದ್ದೇನೆ. ನನ್ನ ಚೆಸ್ಟ್‌ನಟ್ ಮರಗಳು ಎಷ್ಟು ದಪ್ಪವಾಗಿವೆ ನೋಡು. ನನ್ನ ಪಾತಿಗಳಲ್ಲಿ ಬೆಳೆದು ನಿಂತ ಹೂಗಿಡಗಳಲ್ಲಿ ಎಂಥ ಸೋಜಿಗದ ವಿವಿಧ ವರ್ಣದ ಡೇಲಿ ಹೂವುಗಳ ಮೊಗ್ಗು ಅರಳುತ್ತಿವೆ ಗೊತ್ತೆ! ನನ್ನ ತೋಟದ ಕಾಲು ಹಾದಿಯ ಮೇಲೆ ಚೆಲ್ಲಿದ ಗಿಡಗಳ ನೆರಳಿನಲ್ಲಿ ಅಂದವಾದ ಅಗಲವಾದ ಚಿಟ್ಟೆಗಳು ಹಾರಾಡುತ್ತಿವೆ ನೋಡುಬಾ!"

"ಇಗೋ, ಇಲ್ಲಿನೋಡು. ನಾನು ಆತ್ರಾಡ. ಇಲ್ಲಿಯೇ ಅಲ್ಲವೆ ಸ್ನಾನದ ಕಡವು, ಬಂದೂಕಿನಿಂದ ಗುರಿಯಿಟ್ಟು ಗುಂಡು ಹೊಡೆಯುವ ಅಚ್ಚು ಮೆಚ್ಚಿನ ಅಟದ ಕೈಸಾಲೆ, ಸ್ಕಿಟಲ್ ಆಟದ ಮನೆ-ಎಲ್ಲಾ ಇರುವುದು ? ಯಾಕೆ, ಮರೆತು ಬಿಟ್ಟಿದ್ದೀಯಾ ? ನನ್ನ ಕಡೆಗೆ ಒಂದು ಸಲ ದೃಷ್ಟಿಯನ್ನು ಬೀರು. ಒಂದು ಭರ್ಜರಿಯಾದ ವಿನೋದ ರಾಟಳವನ್ನು ನೀನಿಲ್ಲದೆ ಇದ್ದಾಗ ಇಲ್ಲಿ ಹಾಕಿಸಿದ್ದೇವೆ. ಏನು ಮಜ ಎನ್ನುತ್ತೀಯ! ಅದರಲ್ಲಿ ದೋಣಿಗಳಿವೆ, ಕುದುರೆಗಳಿವೆ. ನಿನಗೆ ಅವುಗಳಲ್ಲಿ ಕೂರಲು ತುಂಬ ಆಸೆಯಲ್ಲವೆ? ಇಲ್ಲಿಂದ ಒಂದು ಕಲ್ಲೆಸೆತದಷ್ಟು ದೂರದಲ್ಲಿ ನಿನ್ನ ಹಳೇಗೆಳೆಯ ಗಾವ್ರಿಕ್ ಇದ್ದಾನಲ್ಲವೇ ! ಗಂಟೆ ನಿಮಿಷಗಳನ್ನು ಎಣಿಸುತ್ತ ನಿನ್ನ ಆಗಮನದ ಸಮಯವನ್ನೇ ಎದುರು ನೋಡುತ್ತಿದ್ದಾನೆ. ಓಡು, ಬೇಗ ಓಡು."

"ಓ ಪೇತ್ಯ, ಆರೋಗ್ಯವೇನಯ್ಯ ? ನಾನು ಲಾಂಗರಾನ್ ಅಲ್ಲವೇ, ನನ್ನ ಮರೆತಿಲ್ಲ ತಾನೇ ? ನನ್ನ ದಡದ ಮೇಲೆ ಎಳೆದು ನಿಲ್ಲಿಸಿರುವ ಬೆಸ್ತರ ದೋಣಿಗಳನ್ನು ನೋಡು, ಅಡ್ಡಡ್ಡವಾಗಿಟ್ಟಿರುವ ಆ ಹುಟ್ಟುಗಳ ಮೇಲೆ ಹರಡಿರುವ ಮೀನು ಬಲೆಗಳನ್ನು ನೋಡು. ಇಲ್ಲೇ, ಇದೇ ಮರಳಿನಲ್ಲೇ ಅಲ್ಲವೇ ಕಳೆದ ವರ್ಷ ಎರಡು ಕೊಪೆಕ್ಕುಗಳು ನಿನಗೆ ಸಿಕ್ಕಿದ್ದು. ಆಗ ನೀನು ಆ ದುಡ್ಡಿನಿಂದ ನಾಲ್ಕು ಗ್ಲಾಸುಗಳಷ್ಟು ಹುಳಿ ಹುಳಿಯಾದ ಕ್ವಾಸ್ ಮದ್ಯವನ್ನು ಗಟಗಟನೆ ಒಂದೇ ಗುಟುಕಿಗೆ ಕುಡಿದು ಬಿಡಲಿಲ್ಲವೇ ? ಅದು ನಿನ್ನ ಮೂಗಿನಲ್ಲಿ ನೀರು ಬರಿಸಿತು, ಅದರಿಂದ ನಿನ್ನ ನಾಲಗೆ ಕಡಿಯಿತು. ಆ ಮದ್ಯದ ಅಂಗಡಿಯ ಮಳಿಗೆಯನ್ನು ಮರೆತೇ ಬಿಟ್ಟೆಯಾ ? ನೋಡು, ಇಲ್ಲೇ

ಇದೆಯಲ್ಲ. ಈ ಬೇಸಗೆಯಲ್ಲಿ ಎತ್ತರವಾಗಿ ಬೆಳೆದು ನಿಂತ ಕಳೆಗಳ ನಡುವೆ ದಿಣ್ಣೆಯ ತುದಿಯಲ್ಲಿ ಜೀವಂತವಾಗಿ ಅದು ಎದ್ದು ನಿಂತಿದೆ. ಅದನ್ನು ಗುರುತಿಸಲು ದೂರದರ್ಶಕದ ಆವಶ್ಯಕತೆ ಏನೂ ಬೇಕಿಲ್ಲ."

"ಅಲ್ಲವೋ ಪೇತ್ಯ, ನಾನಿಲ್ಲಿದೇನೋ, ನಾನು, ಕಣೊ, ನೋಡೋ, ನೀನು ಊರಲ್ಲಿಲ್ಲದೆ ಇದ್ದಾಗ ಏನೇನು ನಡೆದಿದೆ ಅನ್ನೋದು ನಿನಗೆ ಗೊತ್ತೇ ಇಲ್ಲ, ಪಾಪ."

ನಗರದ ಹತ್ತಿರ ಹತ್ತಿರಕ್ಕೆ ಬರುತ್ತಿದ್ದಂತೆ ನಿಶ್ಚಲವಾದ ಬಿಸಿಗಾಳಿಯ ಅನುಭವವಾಗುತ್ತ ಬಂದಿತು. ಸೂರ್ಯ ಆಗಲೇ ಕಣ್ಮರೆಯಾಗಿದ್ದ. ಅರುಣ ಪ್ರಭೆಯ ಆಕಾಶದ ಹಿನ್ನೆಲೆಯಲ್ಲಿ ಹಡಗಿನ ಮೇಲಿನ ಪಟಸ್ತಂಭದ ತುದಿಯೂ, ಗಾಳಿ ಹುಂಜನ ಕೆಂಪು ಕೊಕ್ಕೂ ಬೆಳಗುತ್ತಿದ್ದುವು.

ಜಬ್ಬನ್ನು ಕೆಳಕ್ಕಿಳಿಸಲಾಗಿತ್ತು. ಹಡಗಿನ ಯಂತ್ರದ ದಿಮಿದಿಮಿ ಶಬ್ದವು ದಡದ ದಿಣ್ಣೆ ಮತ್ತು ಕಡಿದಾಗ ಬಂಡೆಗಳ ಕಡೆಯಿಂದ ಪ್ರತಿಧ್ವನಿಸುತ್ತಿತ್ತು. ನಸುಹಳದಿ ಬಣ್ಣದ ಬೆಳಕಿನ ಲಾಂದ್ರವು ಪಟಸ್ತಂಭದ ತುದಿಗೆ ನಿಧಾನವಾಗಿ ಏರಿತು.

ಪೇತ್ಯ ತನ್ನ ಆಲೋಚನಾ ಪ್ರಪಂಚದಲ್ಲಿ ಒಡೆಸ್ಸನಗರದ ದಡವನ್ನು ಆಗಲೆ ಸೇರಿಯಾಗಿತ್ತು. ಕೆಲವು ಗಂಟೆಗಳ ಹಿಂದೆ, ಅಂದು ಬೆಳಗ್ಗೆ ತಾನೆ ತಮ್ಮ ಬೇಸಿಗೆ ನಿವಾಸವಾಗಿದ್ದ ಹೊಲಮನೆಯನ್ನು ಬೀಳ್ಕೊಡುವಾಗ ಅವನಿಗೆ ಅಳುವೇ ಬಂದಿತ್ತು ಎಂದು ಯಾರಾದರೂ ಹೇಳಿದ್ದರೆ ಅವನು ಈಗ ನಂಬುತ್ತಿರಲಿಲ್ಲ. ಹೊಲಮನೆ? ಯಾವ ಹೊಲಮನೆ? ಅದನ್ನಾಗಲೆ ಅವನು ಮರೆತಾಗಿತ್ತು. ಮುಂದಿನ ಬೇಸಗೆಯವರೆಗೂ ಪೇತ್ಯನ ಜಗತ್ತಿನಲ್ಲಿ ಅದಕ್ಕೆ ಸ್ಥಳವಿರಲಿಲ್ಲ.

'ಬೇಗ! ಕೊಣೆಗೆ ಓಡು. ಸಾಮಾನುಗಳನ್ನೆಲ್ಲ ಸರಿಯಾಗಿ ಕಟ್ಟಿಕೊಳ್ಳುವಂತೆ ತಂದೆಯನ್ನು ಅವಸರಪಡಿಸಬೇಕು.' ವಾಣಿಯೊಂದು ಕಿವಿಯಲ್ಲಿ ನುಡಿದಂತಾಯಿತು. ಪೇತ್ಯ ಓಡಲು ಸಿದ್ಧವಾದಂತೆ ತಾನು ನಿಂತಲ್ಲೇ ಒಂದುಸಲ ಬುಗುರಿಯಂತೆ ಗಿರ್ರನೆ ತಿರುಗಿದ. ಆಂ, ಏನದು? ಆ ಕ್ಷಣ ಭಯದಿಂದ ಮೈಯೆಲ್ಲ ತಣ್ಣಗಾಯಿತು. ಕೈಯ ಮೇಲೆ ಲಂಗರಿನ ಹಚ್ಚೆಯ ಚಿತ್ರವಿದ್ದ ನಾವಿಕ ಹಡಗಿನ ತುದಿಯ ಏಣಿಯ ಮೇಲೆ ಕುಳಿತಿದ್ದ. ಅಲ್ಲದೆ ಮೀಸೆ ಜೇಬಿನಲ್ಲಿ ಕೈತುರುಕಿಕೊಂಡು ಅವನ ಕಡೆಗೆ ನೇರವಾಗಿ ನಡೆದು ಕೊಂಡು ಹೋಗುತ್ತಿದ್ದ. ಅವನ ಮೂಗಿನ ಮೇಲೆ ಈಗ ಆ ಕನ್ನಡಕ ಇರಲಿಲ್ಲ. ಅವನ ಪಾದರಕ್ಷೆ ಅವನು ನಡೆದಂತೆಲ್ಲ ಗಿರಕ್ ಗಿರಕ್ಕೆನ್ನುತ್ತಿತ್ತು.

ಅವನು ನಾವಿಕನ ಬಳಿಗೆ ಬಂದ. ನಾವಿಕನ ಕಡೆಗೆ ಬಗ್ಗಿ ಅತಿಗಟ್ಟಿಯೂ ಅತಿ ಮೃದುವೂ ಅಲ್ಲದ ಧ್ವನಿಯಲ್ಲಿ "ಜುಕೋವ್!" ಎಂದ.

"ಜುಕೋವ್ ವಿಷಯ ಏನು?" ಎಂದು ನಾವಿಕ ಪ್ರಯಾಸದಿಂದ ಕುಗ್ಗಿದ ದನಿಯಲ್ಲಿ ಕೇಳಿದ. ನೋಡು ನೋಡುತ್ತಿರುವಂತೆ ಅವನ ಮುಖ ಬಿಳುಪೇರಿತು. ಅವನು ಎದ್ದುನಿಂತುಕೊಂಡ.

"ಕುಳಿತುಕೋ, ಕುಳಿತುಕೋ. ಶಾಂತವಾಗಿರು." ಮೀಸೆ ಹೇಳಿದ.

ಅದರೂ ನಾವಿಕ ನಿಂತೇ ಇದ್ದ. ಅವನ ನಿಸ್ತೇಜವಾದ ತುಟಿಗಳ ಮೇಲೆ ಒಂದು ಮುಗುಳು ನಗೆ ಕುಣಿಯುತ್ತಿದ್ದಂತೆ ಇತ್ತು.

ಮೀಸೆ ಹುಬ್ಬು ಗಂಟಿಕ್ಕಿದ. "ಪೊತ್ಯೆಮ್ಕಿನ್ ಹಡಗಿನಿಂದ ಬಂದೆ ಅಲ್ಲವೆ? ಕ್ಷೇಮವೇನಯ್ಯ ಪ್ರಿಯಮಿತ್ರ? ನಿನ್ನ ಬೂಡ್ಸುಗಳನ್ನಾದರೂ ಬದಲಾಯಿಸಿಕೊಳ್ಳಬಾರದಾಗಿತ್ತೆ. ನಮ್ಮನ್ನು ಇಷ್ಟು ದೀರ್ಘಕಾಲ ಕಾಯಿಸಿಬಿಟ್ಟೆಯಲ್ಲ? ಒಳ್ಳೆಯದು, ಏನಾದರೂ ಹೇಳುವುದು ಇದ್ದರೆ ಹೇಳಿ ಬಿಡು.

ರೋಡಿಯಾನ್ ಜುಕೋವ್, ನಿನ್ನ ಆಟ ಈಗ ಬಯಲಾಯಿತು. ಅಲ್ಲವೇ ?" ಮಾತಾಡುತ್ತಿದ್ದಂತೆ ಮಿಾಸೆ ನಾವಿಕನ ಅಂಗಿಯ ತೋಳನ್ನು ಬಿಗಿಯಾಗಿ ಹಿಡಿದುಕೊಂಡ.

ನಾವಿಕನ ಮುಖ ಗಂಟಿಕ್ಕಿತು.

"ತೆಗಿ ಆಚೆಗೆ ನಿನ್ನ ಕೈ. ಕಾಯಿಲೆ ಮನುಷ್ಯನಮೇಲೆ ಕೈ ಮಾಡ್ತೀಯಾ ?" ಜೋರಾಗಿ ನಾವಿಕ ಅರಚಿದ. ತನ್ನ ಶಕ್ತಿಯನ್ನೆಲ್ಲ ಬಿಟ್ಟು ಮುಷ್ಟಿಯಿಂದ ಮಿಾಸೆಯ ಎದೆಗೆ ಒಂದು ಬಿಟ್ಟ. ನಾವಿಕನ ಅಂಗಿಯ ತೋಳು ಹರಿದು ಮಿಾಸೆಯ ಕೈಗೆ ಬಂದಿತು.

"ನಿಲ್ಲು !"

ಆದರೆ ಅಷ್ಟು ಹೊತ್ತಿಗೆ ಕಾಲ ಮಿಂಚಿ ಹೋಗಿತ್ತು. ನಾವಿಕ ಮಿಾಸೆಯ ಕೈ ಹಿಡಿತದಿಂದ ತಪ್ಪಿಸಿಕೊಂಡವನು ಡೆಕ್ಕಿನಿಂದ ಕೆಳಕ್ಕೆ ಓಡುತ್ತಿದ್ದ. ಹಡಗೆಗಳು, ಬುಟ್ಟಿಗಳು ಮತ್ತು ಪ್ರಯಾಣಿಕರ ಗುಂಪಿನ ನಡುವೆ ಅಡ್ಡತಿಡ್ಡವಾಗಿ ನುಲಿದುಕೊಂಡು ಓಡುತ್ತಿದ್ದ. ಮಿಾಸೆ ಅವನನ್ನು ಬೆನ್ನಟ್ಟಿದ. ಮೇಲಿನಿಂದ ನೋಡುವವರಿಗೆ ಈ ಇಬ್ಬರು ದಾಣಾದಡಿಗಳು ಜೂಟಾಟ ಆಡುತ್ತಿದ್ದಂತೆ ಕಂಡು ಬರುತ್ತಿತ್ತು. ಅವರು ಯಂತ್ರದ ಕೋಣೆಯ ಪಕ್ಕದ ಇಕ್ಕಟ್ಟಾದ ಓಣಿಯೊಳಕ್ಕೆ ನುಗ್ಗಿದರು; ಅದರ ಇನ್ನೊಂದು ಕಡೆಯಿಂದ ಪುಟ ನೆಗೆದಂತೆ ಹೊರಕ್ಕೆ ಹಾರಿದರು. ಕಾಲಿನಿಂದ ದಬದಬ ಶಬ್ದ ಮಾಡುತ್ತ ಏಣಿ ಹತ್ತಿ ಬಂದರು. ಏಣಿಯ ನುಣುಪಾದ ಹಿತ್ತಾಳೆಯ ಮೆಟ್ಟಲು ಜಾರುತ್ತಿದ್ದರೂ ಅವರಿಗೆ ಲಕ್ಷ್ಯವೇ ಇರಲಿಲ್ಲ.

"ಹಿಡಿ, ಹಿಡಿ" ಎಂದು ಉಸಿರುಹುಯ್ಯುತ್ತ ಮಿಾಸೆ ಕೂಗಿಕೊಂಡ. ದಾರಿಯಲ್ಲೆಲ್ಲೋ ಎತ್ತಿಕೊಂಡಿದ್ದ ಮರದ ಪಟ್ಟಿಯೊಂದನ್ನು ನಾವಿಕ ಕೈಯಲ್ಲಿ ಹಿಡಿದಿದ್ದ.

"ಹಿಡೀರಿ! ಹಿಡೀರಿ ಅವನ್ನ !"

ಗಾಬರಿಯಿಂದ ದಂಗಾದ ಪ್ರಯಾಣಿಕರು ಡೆಕ್ಕಿನ ಮೇಲೆ ಗುಂಪುಗೂಡಿದರು. ಆಗ ಪೋಲೀಸಿನವರ ಶಿಳ್ಳಿಯು ಕಿವಿಯನ್ನು ಸೀಳಿಕೊಂಡು ಬಂದಿತು.

ನಾವಿಕ ಸಾಮಾನು ಕುಳಿಯ ಬಾಗಿಲನ್ನು ಒಂದೇ ನೆಗೆತದಿಂದ ದಾಟಿದ. ಸಾಮಾನು ಕುಳಿಯ ಬಾಗಿಲನ್ನು ಬಳಸಿಕೊಂಡು ಆಗಲೇ ಬಂದಿದ್ದ ಮಿಾಸೆಯ ಕೈಗೆ ಸಿಕ್ಕದಂತೆ ಹೊರಳಿಕೊಂಡು ನಾವಿಕ ಪುನಃ ಬಾಗಿಲಿನ ಹಿಂದಕ್ಕೆ ನೆಗೆದ. ಅಲ್ಲಿಂದ ಒಂದು ಬೆಂಚಿಗೆ ಕುಪ್ಪಳಿಸಿದ. ಬೆಂಚಿನ ಮೇಲಿನಿಂದ ಪುಟನೆಗೆದು ಹಡಗಿನ ಅಂಚಿನ ಕಟಕಟೆಯ ಬಳಿಗೆ ಬಂದು ಧ್ವಜಸ್ತಂಭವನ್ನು ಹಿಡಿದುಕೊಂಡು ನಿಂತ. ಅಲ್ಲಿಗೂ ಬಂದ ಮಿಾಸೆಯ ಮುಖಕ್ಕೆ ಮರದ ಪಟ್ಟಿಯಿಂದ ಗಟ್ಟಿಸಿದ. ಬಳಿಕ ಅಲ್ಲಿಂದ ನಾವಿಕ ಸಮುದ್ರಕ್ಕೆ ಹಾರಿದ. ನೀರಿನ ತುಂತುರುಗಳು ಹಡಗಿನ ಹಿಂಭಾಗಕ್ಕೆ ಎರಚಿದುವು.

"ಓ !"

ಎದುರುಗಡೆಯಿಂದ ತಮ್ಮ ಮೇಲೆ ಗಾಳಿ ರಭಸದಿಂದ ಬೀಸಿತೋ ಎಂಬಂತೆ ಪ್ರಯಾಣಿಕರು ಒಬ್ಬೊಬ್ಬರೂ ಒಟ್ಟಿಗೆ ಹಿಂದಕ್ಕೆ ಬಾಗಿದರು.

ಕಟಕಟೆಯ ಬಳಿ ಮಿಾಸೆ ರಭಸದಿಂದ ಗಸ್ತು ತಿರುಗಲಾರಂಭಿಸಿದ. "ಹಿಡೀರಿ ಅವನ್ನ ತಪ್ಪಿಸಿಕೊಂಡು ಹೋಗಿಬಿಡ್ತಾನೆ." ಎಂದು ಕೂಗಿದ.

ಪ್ರಾಣರಕ್ಷಣೆಯ ಪಟ್ಟಿಯನ್ನು ಕಟ್ಟಿಕೊಂಡ ನೌಕಾಧಿಪತಿಯ ಸಹಾಯಕ ಮೂರು ಮೂರು

ಮೆಟ್ಟಿಲುಗಳನ್ನು ಒಂದೊಂದು ಬಾರಿಗೆ ಹಾರುತ್ತ ಏಣಿಯ ಮೇಲೇರಿದ.

"ಮನುಷ್ಯ ಸಮುದ್ರಕ್ಕೆ ಹಾರಿದ"!

ಈ ಬಾರಿ ಹಿಂದುಗಡೆಯಿಂದ ಬಿರುಸಾದ ಗಾಳಿ ಬೀಸಿದಂತೆ ಪ್ರಯಾಣಿಕರು ಒಟ್ಟಿಗೆ ಮುಂದಕ್ಕೆ ಬಾಗಿದರು.

ಪೇತ್ಯ ಕಂಬಿಯ ಸಂದಿಯಲ್ಲಿ ತಲೆಯನ್ನು ತೂರಿಸಿದ. ಮೇಲಕ್ಕೆದ್ದ ಬಿಳಿ ನೊರೆಗಳ ನಡುವೆ ನಾವಿಕನ ತಲೆ ಕಾಣಿಸುತ್ತಿತ್ತು. ತೇಲುಬುರುಡೆಯಂತೆ ತಲೆ ಅಲೆಯ ಮೇಲೆ ಮೇಲಕ್ಕೂ ಕೆಳಕ್ಕೂ ತೂಗಾಡುತ್ತಿತ್ತು. ಅವನು ಹಡಗಿನಿಂದ ತಕ್ಕಮಟ್ಟಿನ ದೂರದಲ್ಲಿದ್ದ. ನಾವಿಕ ಈಜುತ್ತಿದ್ದುದು ನಿಜವಾಗಿತ್ತು. ಆದರೆ ಹಡಗಿನ ಬಳಿಗೆ ಅಲ್ಲ, ಹಡಗಿನಿಂದ ದೂರವಾಗಿ. ಅವನು ಕೈಕಾಲುಗಳನ್ನು ಬೇಗ ಬೇಗ ಬಡಿಯುತ್ತಿದ್ದ. ಎರಡು ಮೂರು ಸಲ ಕೈಕಾಲುಗಳನ್ನು ಬಡಿಡ ಕೂಡಲೆ ಕೋಪದಿಂದ ಗಂಟಿಕ್ಕಿದ್ದ ಮುಖವನ್ನು ಹಿಂದಕ್ಕೆ ತಿರುಗಿಸಿ ನೋಡುತ್ತಿದ್ದ. ನೀರಿಗೆ ಹಾರಿದ್ದ ಆ ಆಸಾಮಿ ತನ್ನನ್ನು ಯಾರಾದರೂ ರಕ್ಷಿಸಲಿ ಎಂಬ ಆಸೆಯನ್ನು ಸುತರಾಂ ಹೊಂದಿರಲಿಲ್ಲ. ಈ ವಿಷಯವನ್ನು ಅವನನ್ನು ರಕ್ಷಿಸಲು ನೀರಿಗೆ ಧುಮುಕಿದ ನೌಕಾದಿಪತಿಯ ಸಹಾಯಕ ಬಹು ಬೇಗ ಅರ್ಥಮಾಡಿಕೊಂಡ. ಆ ಮನುಷ್ಯ ತನ್ನ ರಕ್ಷಕರ ಬಳಿ ಸಾರುವುದಕ್ಕೆ ಬದಲಾಗಿ ಅವರಿಂದ ಆದಷ್ಟು ದೂರ ಹೋಗಲು ಪ್ರಯತ್ನಿಸುತ್ತಿದ್ದ. ಅವನು ಪಕ್ಕಾ ಈಜುಗಾರನಾಗಿದ್ದ. ದಡವೂ ಸಾಕಷ್ಟು ಸಮೀಪವಾಗಿತ್ತು. ಈ ರೀತಿ ಎಲ್ಲವೂ ಕ್ರಮವಾಗಿ ಸಾಗಿತ್ತು.

ಮೀಸೆ ನೌಕಾಧಿಪತಿಯ ಸಹಾಯಕನ ತೋಳನ್ನು ಜಗ್ಗಿ ಎಳೆದು ಕೆಂಗಣ್ಣುಗಳಿಂದ ದುರ ದುರನೆ ನೋಡಿದರೂ, ಹಡಗನ್ನು ನಿಲ್ಲಿಸಿ ದೋಣಿಯನ್ನು ಇಳಿಸಬೇಕೆಂದು ಬಲತ್ಕಾರಿಸಿದರೂ ಪ್ರಯೋಜನವಾಗಲಿಲ್ಲ. ಎಲ್ಲ ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಯಿತು.

"ಅವನು ರಾಜಕೀಯ ಅಪರಾಧಿ. ಇದಕ್ಕೆ ನೀನೇ ಮುಂದೆ ಜವಾಬ್ದಾರನಾಗಬೇಕಾಗುತ್ತದೆ." ಮೀಸೆ ಕೂಗಿದ.

ನೌಕಾದಿಪತಿಯ ಸಹಾಯಕ ಹೆಗಲನ್ನು ಕುಣಿಸುತ್ತ "ಅದು ನನ್ನ ಕೆಲಸವಲ್ಲ. ನನಗೆ ಅಪ್ಪಣೆಯಿಲ್ಲ. ನೌಕಾಧಿಪತಿಯನ್ನು ಕಂಡು ಮಾತನಾಡು" ಎಂದುಬಿಟ್ಟ.

ನೌಕಾಧಿಪತಿ ಸುಮ್ಮನೆ ಕೈಬೀಸಿ ಬಿಟ್ಟ. "ಆಗಲೆ ತಡವಾಗಿದೆ, ಅಣ್ಣಯ್ಯ! ಅದು ಈಗ ಸಾಧ್ಯವಿಲ್ಲ. ನಾವೇಕೆ ಹಾಗೆ ಮಾಡಬೇಕು? ಇನ್ನೊಂದು ಅರ್ಧಗಂಟೆ ಒಳಗಡೆ ದಡಸೇರಿ ಲಂಗರು ಹಾಕುತ್ತೇವೆ. ಆ ಮೇಲೆ ಹೋಗಿ ನಿನ್ನ ರಾಜಕೀಯ ಆಸಾಮಿಯನ್ನು ಹಿಡಿದುಕೊಳ ಬಹುದಲ್ಲ. ಇದು ಖಾಸಗಿ ಕಂಪನಿಗೆ ಸೇರಿದ್ದು. ನಾವು ರಾಜಕೀಯಕ್ಕೆ ಪ್ರವೇಶಿಸುವುದಿಲ್ಲ. ಆ ವಿಷಯದಲ್ಲಿ ನಮಗೆ ಯಾವ ಸೂಚನೆಗಳೂ ಬಂದಿಲ್ಲ." ಎಂದ ಅವನು.

ಮೀಸೆ ಆಣೆಯಿಡುತ್ತ ಮುಖ ಬಿಗಿದುಕೊಂಡು ಹಡಗಿನಿಂದ ಬಂದರಿಗೆ ಇಳಿಯುವ ನಡೆ ಹಲಗೆಯನ್ನು ಹಾಕುವ ಸ್ಥಳಕ್ಕೆ ಓಡಿದ. ಇಳಿಯಲು ಸಿದ್ಧಮಾಡಿಕೊಳ್ಳುತ್ತಿದ್ದ ಮೂರನೆಯ ತರಗತಿಯ ಪ್ರಯಾಣಿಕರ ಗುಂಪನ್ನು ದಬ್ಬಿಕೊಂಡು ದಾರಿಮಾಡಿಕೊಂಡು ಮುಂದೆ ನುಗ್ಗಿದ. ಹೆದರಿದ ಆ ಬಡಪಾಯಿಗಳನ್ನು ಬಲವಾಗಿ ಪಕ್ಕಕ್ಕೆ ತಳ್ಳಿದ; ಅವರ ಕಾಲುಗಳನ್ನು ತುಳಿದ; ಅವರ ಹೆಸಗೆಗಳನ್ನು ಒದ್ದ. ಕೊನೆಗೆ ಒಂದು ಸಲ ಕಟಕಟೆ ಬಳಿಗೆ ಬಂದ. ಹಡಗು ನಿಂತ ಕೂಡಲೆ ಇಳಿಯ ಬೇಕೆಂಬುದೇ ಅವನ ಈ ಸಾಹಸಕ್ಕೆ ಕಾರಣವಾಗಿತ್ತು.

ಇಷ್ಟು ಹೊತ್ತಿಗೆ ಮೀನು ಹಿಡಿಯಲು ಬಲೆ ಹರಡಿಕೊಂಡು ಒಬ್ಬರ ಮೇಲೊಬ್ಬರು ಆಣೆ ಪ್ರಮಾಣ ಮಾಡುತ್ತ ಗಟ್ಟಿಯಾಗಿ ಮಾತಾಡುತ್ತಿದ್ದ ದೋಣಿಗಳಲ್ಲಿದ್ದ ಜನಗಳ ಗುಂಪಿನ ನಡುವೆ ಅಲೆಗಳ ಮಧ್ಯೆ ನಾವಿಕನ ತಲೆ ಕಾಣುವುದೇ ಕಷ್ಟವಾಗಿತ್ತು.

೯. ಇರುಳಿನಲ್ಲಿ ಒಡೆಸ್ಸ

ಸಮುದ್ರ ತೀರವನ್ನು ಆಗಲೆ ಕತ್ತಲೆ ಆವರಿಸುತ್ತಿತ್ತು: ಮೊದಲು ತೆಳು ನೀಲಿ, ಬಳಿಕ ಅಚ್ಚ ನೀಲಿ, ಆ ಮೇಲೆ ಕಪ್ಪು ಕೆಂಪು ನೀಲಿ ಮಿಶ್ರವಾದ ಊದಾಬಣ್ಣಕ್ಕೆ ತಿರುಗಿತು. ನೆಲದ ಮೇಲೆ ಆಗಲೆ ಸಂಜೆಯಾಗಿತ್ತು. ಸಮುದ್ರದ ಮೇಲಾದರೋ ಇನ್ನೂ ಕೊಂಚ ಬೆಳಕು ಇತ್ತು. ಗಾಜಿನಂತೆ ಹೊಳೆಯುತ್ತಿದ್ದ ಕಡಲಿನ ಅಲೆಗಳಲ್ಲಿ ನಿರ್ಮಲಾಕಾಶವು ಪ್ರತಿಫಲಿಸಿತ್ತು. ಆದರೆ ಇಲ್ಲೂ ಕೂಡ ಸಂಜೆಯ ಆಗಮನದ ಅನುಭವ ಆಗದೆ ಇರಲಿಲ್ಲ.

ನೀರ್ಗಾಲಿಗಳ ಪೆಟ್ಟಿಗೆಗಳ ಮೇಲೆ ಕುರುಹುಲಾಂದ್ರಗಳನ್ನು ಪೇತ್ಯ ಇದುವರೆಗೆ ಗಮನಿಸುವುದು ಸಾಧ್ಯವಿರಲಿಲ್ಲ; ಹಿಂದೆ ಅವು ಮಂದವಾದ ಕಪ್ಪು ಗಾಜಿನಂತೆ ತೋರುತ್ತಿದ್ದುವು. ಆದರೆ ಈಗ ಅವು ಕೆಂಪು ಮತ್ತು ಹಸುರು ಬಣ್ಣಗಳಿಂದ ಬೆಳಗುತ್ತಿದ್ದುವು. ಲಾಂದ್ರಗಳ ಬೆಳಕು ಹೊರ ಚೆಲ್ಲಿ ಸುತ್ತಮುತ್ತ ಪ್ರಕಾಶವು ಬೀಳುವಷ್ಟು ಕತ್ತಲೆಯಾಗಿರಲಿಲ್ಲ. ಆದರೆ ಅವು ನಿಗಿನಿಗಿ ಎಂದು ಬೆಳಗುತ್ತಿದ್ದುದು ನಿಜ.

ಇದ್ದಕ್ಕಿದ್ದಂತೆ ಕಪ್ಪುನೀಲಿ ನಗರವು ಅವರ ಕಣ್ಣೆದರು ಎದ್ದು ನಿಂತಿತು. ಕ್ಷಿತಿಜದ ಅರ್ಧ ಭಾಗವನ್ನು ಮುಚ್ಚಿಕೊಂಡ ವರಂತ್ಸಾವ್ ಅರಮನೆಯ ಕಂಬಸಾಲೂ, ಗುಮ್ಮಟದ ಆಕಾರದ ರಂಗಮಂದಿರದ ಮೇಲ್ಛಾವಣಿಯೂ ಎದುರುಗಡೆಯಲ್ಲಿ ಮಸಕುಮಸಕಾಗಿ ಗೋಚರಿಸಿದುವು.

ಸಂಪೂರ್ಣವಾಗಿ ನಿಶ್ಚಲವಾಗಿದ್ದ ತೆಳುನೀಲಿಯ ಬಣ್ಣದ ಬಂದರಿನ ಸರೋವರದ ನೀರಿನಲ್ಲಿ ಬಂದರು ಕಟ್ಟೆಯ ದೀಪಗಳು ಜಲತಾರೆಗಳಂತೆ ಮಿನುಗುತ್ತಿದ್ದುವು. ತುರ್ಗನೀಫ್ ಜಹಜು ಬಂದರಿನೊಳಕ್ಕೆ ತಿರುಗಿತು. ಬಂದರಿನಲ್ಲಿ ಒಂದು ದೀಪಸ್ತಂಭವಿತ್ತು. ಅದಕ್ಕೆ ಒಂದು ಗಂಟೆಯನ್ನು ನೇತುಹಾಕಿದ್ದರು. ಅದರ ಮೇಲಕ್ಕೆ ಹತ್ತಿಹೋಗಲು ಅನುಕೂಲವಾಗುವಂತೆ ಒಂದು ಏಣಿಯನ್ನು ನಿಲ್ಲಿಸಲಾಗಿತ್ತು. ಆ ದೀಪಸ್ತಂಭದ ಅಂಚಿನಲ್ಲೇ ಹಡಗು ಮುಂದುವರಿಯಿತು.

ಹಡಗಿನ ಯಂತ್ರದ ಕೋಣೆಯಲ್ಲಿ ನೌಕಾಧಿಪತಿಯ ಗಂಟೆ ಟಿಂಗ್ ಟಿಂಗ್ ಎಂದು ಕೊನೆಯ ಬಾರಿಗೆ ಶಬ್ದ ಮಾಡಿತು.

"ನಿಧಾನವಾಗಿ!" ಎಂಬ ನೌಕಾಧಿಪತಿಯ ಆಜ್ಞೆ ಕೇಳಿಬಂದಿತು.

ದಬ್ರೊವೊಲ್ನಿ ವ್ಯಾಪಾರಿ ಸಂಸ್ಥೆಯ ಮೂರು ಜಹಜುಗಳು ಸಮುದ್ರದ ಅಲೆಗಳನ್ನು ತಡೆಯುವಂತೆ ಹಾಕಿದ್ದ ಒಡ್ಡಿಗೆ ಹಿಂದುಗಡೆ ಸಾಲಾಗಿ ನಿಂತಿದ್ದುವು. ಮೂರಂತಸ್ತಿನ ಆ ಜಹಜುಗಳ ಮೋತಿಯನ್ನು ಹಿಂದಕ್ಕೆ ಹಾಕಿ ಹೆಚ್ಚು ಅಗಲವಿಲ್ಲದ ಚಿಕ್ಕ ಜಹಜಾದ ತುರ್ಗನೀವ್ ಸದ್ದಿಲ್ಲದಂತೆ ಸರಸರನೆ ಮುಂದಕ್ಕೆ ಹೋಯಿತು. ಆ ಮೂರಂತಿಸ್ತಿನ ಜಹಜುಗಳ ರಾಕ್ಷಸಾಕಾರದ ಲಂಗರುಗಳನ್ನು ನೋಡುವುದಕ್ಕಾಗಿ ಪೇತ್ಯ ತನ್ನ ಕತ್ತನ್ನು ಕೊಕ್ಕರೆಯಂತೆ ನೀಡಿಕೊಳ್ಳಬೇಕಾಯಿತು, ನಿಜವಾದ ಹಡಗುಗಳೆಂದರೆ ಅವು!

"ನಿಲ್ಲಿಸು!" ನೌಕಾಧಿಪತಿಯ ಆಜ್ಞೆ ಧ್ವನಿಗೊಂಡಿತು.

ಹಡಗಿನ ಯಂತ್ರವನ್ನು ನಿಲ್ಲಿಸಿದ್ದರೂ ಕೂಡ ಆದುವರೆಗೆ ಹಡಗು ಗಳಿಸಿಕೊಂಡಿದ್ದ ವೇಗದ ಶಕ್ತಿಯಿಂದ ಲೇ ಬಂದರಿನ ನೀರನ್ನು ಸೀಳಿಕೊಂಡು ಮಗ್ಗುಲಾಗಿ ಹೋಯಿತು. ಹಾಗೆ ಸೊಯ್ಯನೆ ಹೋಗುತ್ತಿದ್ದುದನ್ನು ನೋಡಿದರೆ ಯಾವ ನಿಮಿಷವಾದರೂ ಜಹಜು ಬಂದರು ಕಟ್ಟೆಗೆ ಬಡಿಯ ಬಹುದು ಎಂಬಂತೆ ತೋರುತ್ತಿತ್ತು. ಹಡಗಿನ ಚೂಪಾದ ಮೂತಿಯು ನೀರನ್ನು ಸೀಳಿಕೊಂಡು ಹೋಗುತ್ತಿದ್ದುದರಿಂದ ಅದರ ಇಕ್ಕೆಲಗಳಲ್ಲಿಯೂ ನೀರಿನ ಎರಡು ಎಳೆಗಳು ಹಿಂದಕ್ಕೆ ಓಡುತ್ತಿವೆಯೋ ಎನ್ನಿಸುತ್ತಿತ್ತು. ಮ್ಯಾಕರೆಲ್ ಜಾತಿಯ ಮೀನುಗಳು ಈಜಿಕೊಂಡು ಹೋಗುತ್ತಿವೆಯೋ ಎಂಬ ಭ್ರಾಂತಿಯನ್ನು ಆ ನೀರಿನ ಎಳೆಗಳು ಹುಟ್ಟಿಸುತ್ತಿದ್ದುವು. ಜಹಜಿನ ಎರಡು ಪಕ್ಕಗಳಲ್ಲೂ ನೀರು ಮೃದವಾಗಿ ಗುಳುಗುಳು ಶಬ್ದ ಮಾಡುತ್ತಿತ್ತು.

ಒಲೆಯಿಂದ ಬಿಸಿಗಾಳಿ ಹೊರಕ್ಕೆ ಬರುವ ಹಾಗೆ ಪಟ್ಟಣದ ಮೇಲಿನ ಕಾದಗಾಳಿ ರಪ್ಪನೆ ಮುಖಕ್ಕೆ ಬಡಿಯಿತು.

ಕನ್ನಡಿಯಂತಿದ್ದ ಸಮುದ್ರದ ನೀರಿನ ಒಳಗಿನಿಂದ ಒಂದು ಹೊಗೆ ಕೊಳವೆ ಮತ್ತು ಎರಡು ಪಟಸ್ತಂಭಗಳು ಮೇಲಕ್ಕೆ ಎದ್ದು ಬಂದು ನಿಂತಿದ್ದಂತೆ ಪೇತ್ಯನಿಗೆ ಕಾಣಿಸಿತು. ನೀರಿನಲ್ಲಿ ಮುಳುಗಿದ್ದ ಜಹಜು ಕಣ್ಣಿಗೆ ಭಯಂಕರವಾಗಿ ತೆಪ್ಪನೆ ಹೆಣದಂತೆ ಬಿದ್ದಿತ್ತು. ಪೇತ್ಯನಿದ್ದ ಜಹಜು ಅವುಗಳ ಪಕ್ಕದಲ್ಲೇ ಹರಿದುಹೋಯಿತು. ಪ್ರಯಾಣಿಕರು ಹಡಗಿನ ಕಟಕಟೆಯ ಬಳಿ ಬಂದು ನಿಂತುಕೊಂಡು ಆ ಮುಳುಗಿದ್ದ ಜಹಜುಗಳನ್ನು ನೋಡುತ್ತ ಒಂದು ನಿಟ್ಟುಸಿರನ್ನು ಬಿಟ್ಟರು.

"ಜಹಜನ್ನು ತೂತು ಕೊರೆದು ಮುಳುಗಿಸಿಬಿಟ್ಟರು" ಎಂದು ಯಾರೋ ತಗ್ಗು ದನಿಯಲ್ಲಿ ಹೇಳಿದರು. "ಯಾರು ?" ಎಂದು ದಿಗಿಲುಗೊಂಡ ಪೇತ್ಯ ಕೇಳಬೇಕೆಂದುಕೊಂಡ. ಆದರೆ ಆ ನಿಮಿಷದಲ್ಲಿ ಅವನು ಇದಕ್ಕಿಂತ ಹೆಚ್ಚು ಭಯಂಕರವಾದ ಇನ್ನೊಂದು ದೃಶ್ಯವನ್ನು ಕಂಡ. ಬೆಂಕಿಯಿಂದ ಸುಟ್ಟು ಇದ್ದಲು ಮಸಿಯಾದ ಜಹಜಿನ ಕಬ್ಬಿಣದ ಪಂಜರವೊಂದು ಬಂದರು ಕಟ್ಟೆಗೆ ಒರಗಿಕೊಂಡು ಬಿದ್ದಿತ್ತು.

"ಅದನ್ನು ಸುಟ್ಟು ಭಸ್ಮಮಾಡಿದರು." ಅದೇ ಧ್ವನಿ ಮೊದಲಿಗಿಂತಲೂ ಹೆಚ್ಚು ಮೃದುವಾಗಿ ಹೇಳಿತು. ಬಂದರು ಕಟ್ಟೆಯು ಹತ್ತಿರಕ್ಕೆ ಬಂದೇ ಬಿಟ್ಟಿತು.

"ಹಿಂದಕ್ಕೆ!"

ನೀರ್ಗಾಲಿಗಳು ಗರಗರನೆ ಶಬ್ದಮಾಡುತ್ತ ಹಿಂದಕ್ಕೆ ತಿರುಗಲಾರಂಭಿಸಿದುವು. ಚಿಕ್ಕ ಚಿಕ್ಕ ಸುಳಿಗಳು ನೀರಿನಲ್ಲಿ ಆಚೀಚೆ ಸುಳಿಯಲಾರಂಭಿಸಿದುವು. ಮೊದಲು ಬಂದರುಕಟ್ಟೆ ಸ್ವಲ್ಪ ದೂರವಾದಂತಾಯಿತು, ಬಳಿಕ ದಿಕ್ಕು ಬದಲಾಯಿಸಿದಂತಾಗಿ ಹಡಗಿನ ಇನ್ನೊಂದು ಕಡೆಯಿಂದ ಹತ್ತಿರಕ್ಕೆ ಬರಲಾರಂಭಿಸಿತು.

ಪ್ರಯಾಣಿಕರ ತಲೆಗಳ ಮೇಲುಗಡೆಯಿಂದ ಒಂದು ಹಗ್ಗದ ಸುರುಳಿಯನ್ನು ಎಸೆಯಲಾಯಿತು. ಮುಂದೆ ಮುಂದೆ ಹೋದಂತೆ ಹಗ್ಗ ಸುರುಳಿ ಬಿಚ್ಚಿಕೊಳ್ಳುತ್ತಿತ್ತು. ಹಡಗು ಕೊಂಚ ಕುಲುಕಿದಂತೆ ಪೇತ್ಯನಿಗೆ ಭಾಸವಾಯಿತು. ಬಂದರು ಕಟ್ಟೆಗೆ ಹಡಗು ತಗುಲುವ ಸ್ಥಳದಲ್ಲಿ ನಡುವೆ ಹಗ್ಗದ ಸಿಂಬಿ ಇದ್ದುದರಿಂದ ದಡಕ್ಕೆ ಹಡಗಿನ ಬಡಿತ ಅಷ್ಟು ಜೋರಾಗಿ ಆಗಲಿಲ್ಲ. ನಡೆಹಲಗೆಯನ್ನು ಬಂದರು ಕಟ್ಟೆಯಿಂದ ಹಡಗಿಗೆ ತಳ್ಳಿಕೊಂಡು ಬಂದು ತಗುಲಿಸಿದರು. ಅದರ

ಮೇಲಿನಿಂದ ಓಡುತ್ತ ಮೊದಲು ದಡ ಸೇರಿದವನೆಂದರೆ ವಿಾಸೆಯೇ; ಅವನು ಕೂಡಲೆ ಬಂದರು ಕಟ್ಟೆಯ ಜನಗಳ ಗುಂಪಿನಲ್ಲಿ ಕಣ್ಮರೆಯಾದ.

ಉಳಿದ ಪ್ರಯಾಣಿಕರು ತಮ್ಮ ತಮ್ಮ ಸರದಿಯ ಪ್ರಕಾರ ಇಳಿದರು. ಅವರು ನಡೆಹಲಗೆಯ ಮೇಲೆ ನಿಧಾನವಾಗಿ ನಡೆದುಕೊಂಡು ಹೋಗಿ ಬಂದರು ಕಟ್ಟೆಯನ್ನು ಭಿಸಿದರು.ಸೇರಲಾರಂ

ನಡೆಹಲಗೆಯ ಬುಡದಲ್ಲಿ ಬಂದರು ಕಟ್ಟೆಯಮೇಲೆ ಒಬ್ಬ ಪೋಲೀಸಿನವನೂ, ಕೆಲವು ಜನ ನಾಗರಿಕ ವಸ್ತ್ರ ಧರಿಸಿದ್ದವರೂ ನಿಂತಿದ್ದುದನ್ನು ಕಂಡು ಪೇತ್ಯನಿಗೆ ಆಶ್ಚರ್ಯವಾಯಿತು. ಅವರು ಹಡಗಿನಿಂದ ಕೆಳಕ್ಕೆ ಇಳಿದು ಬರುತ್ತಿದ್ದ ಒಬ್ಬೊಬ್ಬರನ್ನೂ ಕಣ್ಣಲ್ಲಿ ಕಣ್ಣಿಟ್ಟು ಬಹು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದರು. ಅವರು ತಂದೆಯ ಕಡೆಗೂ ದೃಷ್ಟಿ ಬೀರಿದರು. ತಂದೆ ಅವರ ಹತ್ತಿರಕ್ಕೆ ಬಂದೊಡನೆ ಕಂಪಿಸುತ್ತಿದ್ದ ಗಡ್ಡವನ್ನು ಮುಂದೆ ಮಾಡಿಕೊಂಡು ಕೋಟಿನ ಗುಂಡಿಗಳನ್ನು ಸರ ಸರನೆ ಹಾಕಿಕೊಂಡರು. ಪಾವಲಿಕನ ತೋಳಿನ ಮೇಲೆ ಇಟ್ಟಿದ್ದ ಅವರ ಕೈಯಿನ ಹಿಡಿತ ಬಿಗಿ ಯಾಯಿತು. ಅಂದು ಬೆಳಗ್ಗೆ ಕುದುರೆಗಾಡಿಯಲ್ಲಿ ಕುಳಿತುಕೊಂಡು ಪೋಲೀಸಿನವನೊಡನೆ ಮಾತನಾಡುತ್ತಿದ್ದಾಗ ಯಾವ ಆಹಿತಕರವಾದ ಮುಖಭಾವವಿತ್ತೋ ಅದೇ ಈಗಲೂ ಅಚ್ಚೊತ್ತಿ ದ್ದಂತೆ ಕಾಣುತ್ತಿತ್ತು.

ತಂದೆಯವರು ಬಾಡಿಗೆಗೆ ಒಂದು ಕುದುರೆಗಾಡಿಯನ್ನು ಗೊತ್ತು ಮಾಡಿಕೊಂಡರು. ಎದುರು ಗಡೆಯ ಮಡಿಸುವ ಪೀಠದಲ್ಲಿ ಪಾವಲಿಕನನ್ನು ಕೂರಿಸಿದರು. ಪೇತ್ಯ ತಂದೆಯವರ ಜತೆಯಲ್ಲಿ ದೊಡ್ಡವನಂತೆ ಕುಳಿತುಕೊಂಡ.

ಅವರು ಗಾಡಿಯಲ್ಲಿ ಕುಳಿತು ಮುಂದುವರಿಯುತ್ತಿದ್ದಂತೆ ಹೆಬ್ಬಾಗಿಲಿನ ಬಳಿ ಒಬ್ಬ ಪಹರೆ ಸಿಪಾಯಿ ಬಂದೂಕು ಹಿಡಿದು ನಿಂತಿದ್ದುದು ಕಾಣಿಸಿತು. ಅವನ ನಡುಪಟ್ಟಿಗೆ ಸೇರಿದಂತೆ ಬಂದೂಕಿನ ಗುಂಡುಗಳನ್ನಿಡುವ ತೊಗಲು ಚೀಲಗಳು ಇದ್ದುವು. ಇದನ್ನೆಲ್ಲ ನೋಡಿದಾಗ ಏನೋ ಒಂದು ಹೊಸ ಬದಲಾವಣೆಯಾಗಿದ್ದಂತೆ ಕಂಡಿತು.

"ಅಲ್ಲಿ ಪಹರೆ ಸಿಪಾಯಿ ಯಾಕೆ ನಿಂತಿದ್ದಾನೆ ಅಪ್ಪ ?" ಪೇತ್ಯ ಪ್ರಶ್ನೆ ಹಾಕಿದ.

"ದೇವರೇ ಗತಿ ! ಯಾವಾಗ ನೋಡಿದರೂ ಪ್ರಶ್ನೆ ಪ್ರಶ್ನೆ! ಅದೆಲ್ಲ ನನಗೆ ಹೇಗೆ ಗೊತ್ತಾಗ ಬೇಕು ? ಅವನು ಅಲ್ಲಿ ಯಾಕೆ ನಿಂತಿದ್ದಾನೆ ಎಂದರೆ ? ನಿಂತುಕೊಂಡಿರಬೇಕು ನಿಂತಿದ್ದಾನೆ. ನೀನು ತೆಪ್ಪಗೆ ಕುಳಿತಿರಬೇಕು ಎಂದು ಇದರ ಅರ್ಥ." ಸಿಡುಕಿನಿಂದ ಥಟ್ಟನೆ ಕತ್ತನ್ನು ಕೊಂಕಿಸಿ ತಂದೆ ಹೇಳಿದರು. ಆಗ ತಂದೆಗೆ ಯಾವ ಪ್ರಶ್ನೆಗಳನ್ನೂ ಹಾಕಕೂಡದೆಂದು ಪೇತ್ಯ ಅರ್ಥಮಾಡಿಕೊಂಡ. ಅಲ್ಲದೆ ತಂದೆ ಸಿಡುಕಿನಿಂದ ಮಾತನಾಡಿದರೆ ಅದನ್ನು ತಪ್ಪು ತಿಳಿದುಕೊಳ್ಳಬಾರದೆಂಬುದೂ ಅವನಿಗೆ ಗೊತ್ತಿತ್ತು.

ರೈಲುಕಂಬಿಗಳನ್ನು ದಾಟುವಾಗ ಮರದ ಸೇತುವೆಯು ಸುಟ್ಟು ಹೋಗಿದ್ದುದನ್ನು ಪೇತ್ಯ ಕಂಡ. ಮರದ ದಿಮ್ಮಿಗಳು ಕರಿಗೊಳ್ಳಿಗಳಾಗಿ ಕೆಳಗೆ ಬಿದ್ದಿದ್ದುವು. ನುಲಿದ ರೈಲು ಕಂಬಿಗಳು ಮೇಲಕ್ಕೆ ಎದ್ದುಕೊಂಡಿದ್ದುವು. ರೈಲು ಬಂಡಿಗಳು ತಲೆ ಕೆಳಕಾಗಿ ಉರುಳಿದ್ದುವು. ಆ ಅಸ್ತ ವ್ಯಸ್ತವಾದ ಭಯಂಕರ ದೃಶ್ಯವನ್ನು ನೋಡಿ ಪೇತ್ಯ ಗಾಡಿಯುವನನ್ನು ಕುರಿತು "ಗಾಡಿಯಯ್ಯ ! ಅಲ್ಲಿ ನೋಡು. ಅದೇನು ಹೇಳು ?" ಎಂದು ಒಂದೇ ಉಸಿರಿಗೆ ಪ್ರಶ್ನಿಸಿದ.

"ಅವರು ಅದಕ್ಕೆ ಬೆಂಕಿ ಹಾಕಿ ಸುಟ್ಟು ಹಾಕಿದರು." ಬೀವರ್ ಪ್ರಾಣಿಯ ಕೂದಲ ಟೋಪಿ

ಧರಿಸಿದ್ದ ತಲೆಯನ್ನು ಅಲ್ಲಾಡಿಸುತ್ತ ಗಾಡಿ ಹೊಡೆಯುವವನು ಹೇಳಿದ. ಅವರ ಕೃತ್ಯವನ್ನು ಅವನು ಮೆಚ್ಚಿಕೊಳ್ಳುತ್ತಿದ್ದನೋ, ಇಲ್ಲ ದೂಷಿಸುತ್ತಿದ್ದನೋ ಬಲ್ಲವರಾರು!

ಅಲ್ಲಿಂದ ಅವರ ಗಾಡಿ ಪ್ರಸಿದ್ಧವಾದ ಒಡೆಸ್ಸ ಮೆಟ್ಟಿಲುದಾರಿಯನ್ನು ಕಳೆದು ಮುಂದೆ ಹೋಯಿತು. ಸೋಪಾನಗಳ ಮೇಲುಗಡೆ ಕುದುರೆ ಲಾಳದಾಕಾರದ ಖಾಲಿ ಸ್ಥಳವಿದ್ದಿತು. ಅಲ್ಲಿ ಕೈಯನ್ನು ಸಮುದ್ರದ ಕಡೆಗೆ ನೀಡಿಕೊಂಡು ನಿಂತ ಡ್ಯೂಕ್ ಡಿ ರಿಚಲ್ಲೂವಿನ ಪ್ರತಿಮೆಯು ಸಂಜೆ ಬಾನಿನ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದ್ದಿತು.

ಸಾಲುಮರಗಳ ಸುಂದರವಾದ ರಸ್ತೆಯುದ್ದಕ್ಕೂ ಮೂರುದೀಪಗಳ ಕಂಬಗಳಿಂದ ಬೀದಿಯ ಲಾಂದ್ರಗಳು ಪ್ರಕಾಶವನ್ನು ಬೀರುತ್ತಿದ್ದುವು. ಉಪಹಾರ ಗೃಹವೊಂದರ ತಾರಸಿಯ ಮೇಲಿನಿಂದ ಸಂಗೀತವು ಕೇಳಿಬರುತ್ತಿತ್ತು. ಆಗತಾನೆ ಆಕಾಶದಲ್ಲಿ ಮೂಡಿದ್ದ ನಕ್ಷತ್ರವೊಂದು ಚೆಸ್ಟ್‌ನಟ್ ಮರಗಳ ಮೇಲೂ ಸಾಲುಮರದ ರಸ್ತೆಯ ಗಚ್ಚು ನೆಲದ ಮೇಲೂ ಮಂದವಾಗಿ ಥಳಥಳಿಸುತ್ತಿದ್ದಿತ್ತು.

ನಿಕೋಲಾಯ್ ಸಾಲು ಮರಗಳ ಬೀದಿಯ ಆಚೆ ಕಡೆಯಲ್ಲಿ ಮೇಲುಗಡೆ ಜನಸಮೂಹದಿಂದ ಗಿಜಗಿಜ ಎನ್ನುತ್ತಿದ್ದ ಆಕರ್ಷಕವಾದ 'ಸೆಂಟರ್' ಎಂಬ ನಗರದ ಭಾಗವಿದ್ದಿತು. ಆದರೆ ಅದು ತಮ್ಮ ದರ್ಜೆಯವರಿಗೆ ಎಟುಕಲಾರದಂಥದು, ಅಲ್ಲಿ ತಮ್ಮಂಥವರಿಗೆ ಪ್ರವೇಶವಿಲ್ಲ ಎಂಬುದನ್ನು ಪೇತ್ಯ ಚೆನ್ನಾಗಿ ತಿಳಿದದ್ದ. ಅದು ಲಕ್ಷ್ಮೀಪುತ್ರರ ನಿವಾಸಸ್ಥಾನವಾಗಿತ್ತು. ಅವನ್ನು ಬಾಚಿ ಸಂಸಾರದವರು ಯಾವಾಗಲೂ ತಾತ್ಸಾರ ದೃಷ್ಟಿಯಿಂದ ಕಾಣುತ್ತಿದ್ದರು.

ಮೊದಲನೆಯ ತರಗತಿಯಲ್ಲಿ ಪ್ರಯಾಣ ಮಾಡುವ ಧನಿಕರು ಎನ್ನಿಸಿಕೊಳ್ಳುವವರೇ 'ಸೆಂಟರ್' ನಲ್ಲಿ ವಾಸಿಸುತ್ತಿದ್ದ ಜನ. ಅವರು ಪ್ರತಿದಿನವೂ ನಾಟಕಶಾಲೆಗೆ ಹೋಗುವ ಹವ್ಯಾಸವನ್ನು ಹೊಂದಿದ್ದರು. ಯಾವ ವಿಚಿತ್ರ ಕಾರಣವೋ ಏನೋ ಅವರು ರಾತ್ರಿ ಏಳು ಗಂಟೆಗೆ 'ಡಿನ್ನರ್' ಎಂಬ ಊಟವನ್ನು ತೆಗೆದುಕೊಳ್ಳುತ್ತಿದ್ದರು. ಫ್ರೆಂಚ್ ಆಚಾರ ವಿಚಾರವನ್ನು ಅನುಸರಿಸುವುದು ಆಗಿನ ಕಾಲದ ಈ ಧನಿಕರ ಫ್ಯಾಷನ್ ಆಗಿದ್ದಿತು. ಅವರು ಅಡಿಗೆಯವನಿಗೆ ಬದಲಾಗಿ 'ಷೆಫ್' ನನ್ನು ಇಟ್ಟುಕೊಳ್ಳುತ್ತಿದ್ದರು; ದಾದಿಗೆ ಬದಲಾಗಿ 'ಬಾನ್' ಳನ್ನು ನೇಮಿಸಿಕೊಳ್ಳುತ್ತಿದ್ದರು. 'ಷೆಫ್' ಮತ್ತು 'ಬಾನ್' ಎರಡೂ ಫ್ರೆಂಚ್ ಭಾಷೆಯ ಪದಗಳು. ಆ ಪದಗಳಿಗೆ ಫ್ರೆಚ್ ಭಾಷೆಯಲ್ಲಿ 'ಅಡಿಗೆಯವನು' ಮತ್ತು 'ದಾದಿ' ಎಂದೇ ಅರ್ಥ. ಫ್ರೆಂಚ್ ಅಡಿಗೆಯವರನ್ನೂ ದಾದಿಗಳನ್ನೂ ಇಟ್ಟುಕೊಳ್ಳುವುದು ಅಂದಿನ ಧನಿಕರಿಗೆ ಹೆಮ್ಮೆಯ ವಿಷಯವಾಗಿದ್ದಿತು. ನಿಜವಾಗಿ ಇವುಗಳೆಲ್ಲ ಸಾಮಾನ್ಯ ಮಾನವನ ಊಹೆಗೆ ನಿಲುಕದ ಯಾವುದೋ ಒಂದು ವಿಶೇಷವೆಂಬಂತೆ ಪೇತ್ಯನಿಗೆ ಭಾಸವಾಗುತ್ತಿತ್ತು. ಬಾಚಿ ಕುಟುಂಬದವರ ಮನೆ 'ಸೆಂಟರ್'ನಲ್ಲಿರಲಿಲ್ಲ.

ಕರಂತಿನ್ನಾಯ ರಸ್ತೆಯ ಜಲ್ಲಿಯ ಮೇಲೆ ಕುದುರೆಗಾಡಿಯು ಗಡಗಡನೆ ಸದ್ದು ಮಾಡಿಕೊಂಡು ಓಡುತ್ತಿದ್ದಿತು. ಅನಂತರ ಬಲಕ್ಕೆ ತಿರುಗಿ ಗುಡ್ಡವನ್ನು ಏರಿ ಪಟ್ಟಣದ ಬಹುಜನ ವಾಸಿಸುವ ನಗರದ ಭಾಗಕ್ಕೆ ಬಂದಿತು. ಬೇಸಿಗೆಯ ಇಷ್ಟು ದಿನಗಳೂ ಪೇತ್ಯ ನಗರದಿಂದ ಹೊರಗೆ ಇದ್ದು ಬಂದಿದ್ದರಿಂದ ಅವನಿಗೆ ಇಲ್ಲಿಯ ಅನೇಕ ವಿಷಯಗಳು ಅಪರಿಚಿತವೋ ಎಂಬಷ್ಟುಮಟ್ಟಿಗೆ ಹೊಸದಾಗಿ ಕಾಣುತ್ತಿದ್ದುವು.

ರಸ್ತೆಯ ಕಲ್ಲುಗಳಿಗೆ ತಗುಲಿ ಕಿಡಿ ಏಳುತ್ತಿದ್ದ ಕುದುರೆಗಳ ಕಾಲುಗೊರಸಿನ ಕಣಕಣಧ್ವನಿ, ಕುದುರೆಗಾಡಿಗಳ ಚಕ್ರದ ಕಟಕಟಧ್ವನಿ, ಕುದುರೆ ಟ್ರಾಮುಗಳ ಗಲಾಟೆ, ಪಾದಚಾರಿಗಳ ಬೂಡ್ಸು

ಗಳ ದಪದಪ ಸದ್ದು, ಕಾಲುಹಾದಿಯ ನೆಲಕ್ಕೆ ಹಾಸಿದ ಕಪ್ಪು ಕಲ್ಲು ಚಪ್ಪಡಿಗಳ ಮೇಲೆ ಕೈ ಬೆತ್ತವನ್ನು ಕುಟ್ಟುವ ಟಕಟಕ ಸಪ್ಪಳ—ಗದ್ದಲವೋಗದ್ದಲ.

ಅಲ್ಲಿ ಹಳ್ಳಿಯಲ್ಲಿ ಹೊಲಮನೆ, ಕೊಯ್ಲು ಮುಗಿದಿದ್ದ ಹೊಲಗಳು ಮತ್ತು ವಿಸ್ತಾರವಾದ ಸ್ಟೆಪ್ಪಿ ಮೈದಾನಗಳ ಮೇಲೆ ಶರತ್ಕಾಲವು ತನ್ನ ಬರವಿನ ಮುನ್ಸೂಚನೆಯೋ ಎಂಬಂತೆ ತನ್ನ ಕಾಂತಿಯನ್ನು ಬೀರಿತ್ತು. ಬೇಸಿಗೆಯ ನಿರ್ಗಮನದ ಸೂಚನೆಯನ್ನು ಶರತ್ತು ಕೊಟ್ಟಾಗಿತ್ತು. ಆದರೆ ಇಲ್ಲೋ? ನಗರದಲ್ಲಿ ಬೇಸಿಗೆಯು ತನ್ನ ವೈಭವಯುತವಾದ ಸಮೃದ್ಧವಾದ ಆಳ್ವಿಕೆಯನ್ನು ಇನ್ನೂ ತ್ಯಜಿಸಿರಲಿಲ್ಲ. ಸಾಲು ಸಾಲಾದ ಜಾಲಿಮರಗಳ ಮೇಲಿನ ನಿಶ್ಚಲವಾದ ಗಾಳಿಯಲ್ಲಿ ನೀರಸವಾದ ಸೆಕೆ ತುಂಬಿಕೊಂಡಿತ್ತು.

ಚಿಲ್ಲರೆ ಅಂಗಡಿಗಳ ಬಾಗಿಲುಗಳ ಮೂಲಕ ಎಣ್ಣೆಯ ದೀಪಗಳು ಹಳದಿಯಾಗಿ ಕಾಣುತ್ತಿದ್ದುವು. ಅಂಗಡಿಗಳಲ್ಲಿಟ್ಟಿದ್ದ ಕಲ್ಯಾಣಸೇವೆಯೇ ಮೊದಲಾದ ಮಿಠಾಯಿಗಳನ್ನು ತುಂಬಿಟ್ಟಿದ್ದ ಗಾಜಿನ ಜಾಡಿಗಳ ಮೇಲೆ ಆ ದೀಪಗಳು ತಮ್ಮ ಬೆಳಕನ್ನು ಚೆಲ್ಲುತ್ತಿದ್ದುವು.

ಅಗೋ ಅಲ್ಲಿ ನೋಡಿ. ಜಾಲಿ ಮರಗಳಡಿಯಲ್ಲಿ ಕಾಲುಹಾದಿಯ ಮೇಲೆ ಕಲ್ಲಂಗಡಿ ಹಣ್ಣಿನ ರಾಶಿ. ಹೊಳೆ ಹೊಳೆಯುವ ಹಸುರುಗಪ್ಪು ಪಟ್ಟೆಗಳು ಮತ್ತು ನಡುನಡುವೆ ಬಿಳಿ ಚುಕ್ಕೆಗಳು ಆ ಹಣ್ಣುಗಳ ಅಂದವನ್ನು ಹೆಚ್ಚಿಸಿವೆ. ಆಹಾ, ಎಷ್ಟು ಮೋಹಕವಾಗಿವೆ ಅವು!

ಗಾಡಿ ಮುಂದು ಮುಂದಕ್ಕೆ ಓಡುತ್ತಿದ್ದಂತೆ ರಸ್ತೆಗಳ ಚೌಕದ ಮೂಲೆಗಳಲ್ಲಿದ್ದ ಹಣ್ಣಿನ ಅಂಗಡಿಗಳು ಕಣ್ಣಿಗೆ ಮಿಂಚಿ ಮಾಯವಾಗುತ್ತಿದ್ದುವು. ಕಣ್ಣು ಕೋರೈಸುವ ದೀಪಗಳ ಪ್ರಕಾಶ ಚೆಲ್ಲಿತ್ತು. ಪರ್ಷಿಯ ದೇಶದವನೊಬ್ಬ ನಿರಿನಿರಿ ಶಬ್ದ ಮಾಡುತ್ತಿದ್ದ ಜಲ್ಲಿಕಾಗದದ ಬೀಸಣಿಗೆಯಿಂದ ಹಣ್ಣುಗಳಿಗೆ ಗಾಳಿ ಹಾಕುತ್ತ ಆ ಬೆಳಕಿನಲ್ಲಿ ಕುಳಿತಿದ್ದ. ವೈಡೂರ್ಯದ ಕಾಂತಿಯನ್ನು ಬೀರುತ್ತಿದ್ದ ದೊಡ್ಡ ದೊಡ್ಡ ಪ್ಲಮ್ ಹಣ್ಣುಗಳೂ, ಘಮ ಘಮಿಸುವ ಬಹಳ ಬೆಲೆಯ ಪಿಯರ್ಸ್ ಹಣ್ಣುಗಳೂ ಬಾಯಲ್ಲಿ ನೀರೂರಿಸುತ್ತಿದ್ದುವು.

ದೊಡ್ಡ ದೊಡ್ಡ ಬಂಗಲೆಗಳನ್ನು ಹಿಂದಕ್ಕೆ ಹಾಕುತ್ತ ಗಾಡಿ ಮುಂದುವರಿಯಿತು. ಕಬ್ಬಿಣದ ತಂತಿಗಳ ಚಪ್ಪರದ ಮೇಲೆ ಹೆಣೆದುಕೊಂಡು ಹಬ್ಬಿದ್ದ ದ್ರಾಕ್ಷಿಬಳ್ಳಿಗಳ ಮೂಲಕ ಮನೆಯ ಕಿಟಕಿಗಳೊಳಗಿಂದ ಹೊರ ಬರುತ್ತಿದ್ದ ದೀಪಗಳ ಪ್ರಕಾಶವು ಮನೆಯ ಮುಂದುಗಡೆಯ ತೋಟದಲ್ಲಿದ್ದ ಡಾಲಿ, ಬೆಗಾನಿಯ, ನಸ್ತೂರಿಯಂ ಮೊದಲಾದ ಹೂವಿನ ಗಿಡಗಳನ್ನೂ ಅವುಗಳ ಮೇಲೆ ಹಾರಾಡುತ್ತಿದ್ದ ದೊಡ್ಡ ದೊಡ್ಡ ಚಿಟ್ಟೆಗಳನ್ನೂ ಬೆಳಗುತ್ತಿದ್ದಿತು.

ರೈಲು ನಿಲ್ದಾಣದಿಂದ ರೈಲಿನ ಶಿಳ್ಳಿಯ ಶಬ್ದ ಆಗಾಗ್ಗೆ ಕೇಳಿ ಬರುತ್ತಿದ್ದಿತು.

ಪೇತ್ಯನಿಗೆ ಬಹಳ ಪರಿಚಿತವಾಗಿದ್ದ ಔಷಧಿ ಅಂಗಡಿಯನ್ನು ದಾಟಿ ಗಾಡಿ ಮುಂದಕ್ಕೆ ಹೋಯಿತು. ಚಿನ್ನದ ಬಣ್ಣದ ಅಕ್ಷರಗಳನ್ನು ಬರೆದಿದ್ದ ಗಾಜಿನ ಹಲಗೆಗಳ ಕಿಟಕಿಯ ಹಿಂದುಗಡೆ ಹೊಳೆಯುತ್ತಿದ್ದ ಎರಡು ಸೀಸೆಗಳಿದ್ದುವು. ಒಂದರಲ್ಲಿ ನೇರಳೆ ಬಣ್ಣದ ನೀರೂ, ಇನ್ನೊಂದರಲ್ಲಿ ಹಸುರು ಬಣ್ಣದ ನೀರೂ ಇದ್ದುವು. ಅದು ವಿಷವೇ ಇರಬೇಕೆಂದು ಪೇತ್ಯ ನಂಬಿದ್ದ. ಅವನ ತಾಯಿ ಮರಣಶಯ್ಯೆಯಲ್ಲಿದ್ದಾಗ ಇದೇ ಅಂಗಡಿಯಿಂದ ಭಯಂಕರವಾದ ಆಮ್ಲಜನಕದ ದಿಂಬುಗಳನ್ನು ತಂದಿದ್ದರು. ಔಷಧಿ ಕುಡಿದು ಕುಡಿದು ಕಪ್ಪಾಗಿದ್ದ ತಾಯಿಯ ತುಟಿಗಳ ಬಳಿ ಅದು ಎಷ್ಟು ಜೋರಾಗಿ ಗೊರಗೊರ ಶಬ್ದವನ್ನು ಮಾಡಿತ್ತು!

ಪಾವಲಿಕನಿಗೆ ಗಾಢನಿದ್ರೆ ಹತ್ತಿತ್ತು. ತಂದೆ ಅವನನ್ನು ಎತ್ತಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡರು. ಅವನ ತಲೆ ತಂದೆಯ ತೋಳುಗಳಲ್ಲಿ ಮೇಲಕ್ಕೂ ಕೆಳಕ್ಕೂ ತೂಗಾಡುತ್ತಿತ್ತು. ಅವನ ಭಾರವಾದ ಬರಿಗಾಲುಗಳು ತಂದೆಯ ತೊಡೆಯಿಂದ ಕೆಳಕ್ಕೆ ಸಲ ಸಲವೂ ಜಾರಿ ಹೋಗುತ್ತಿದ್ದುವು. ಆದರೆ ದುಡ್ಡಿನ ಡಬ್ಬಿಯಿದ್ದ ಕೈಚೀಲವನ್ನು ಮಾತ್ರ ಅವನು ಬಿಗಿಯಾಗಿ ಹಿಡಿದುಕೊಂಡಿದ್ದನು. ಮುಮ್ಮೂಲೆಯ ಲಾಂದ್ರವಿದ್ದ ಹೆಬ್ಬಾಗಿಲಿನ ಬಳಿಗೆ ಗಾಡಿ ಬಂದಿತು. ಅಡಿಗೆಯವಳಾದ ದುನ್ಯ ಅವರ ಬರುವಿಕೆಯನ್ನೇ ನಿರೀಕ್ಷಿಸುತ್ತ ಮನೆಯ ಬಳಿ ನಿಂತಿದ್ದಳು. ಲಾಂದ್ರದ ಬೆಳಕಿನಲ್ಲಿ ಮನೆಯ ನಂಬರು ಮಸಕು ಮಸಕಾಗಿ ಗೋಚರಿಸುತ್ತಿತ್ತು. ಗಾಡಿಯು ಮನೆಯ ಬಾಗಿಲಿಗೆ ಬಂದೊಡನೆ ತೂಕಡಿಸುತ್ತಿದ್ದ ಪಾವಲಿಕನನ್ನು ತಂದೆ ದುನ್ಯಳ ವಶಕ್ಕೆ ಕೊಟ್ಟರು. "ಬಂದಿರಾ, ಬನ್ನಿ, ಬನ್ನಿ," ಎಂದು ದುನ್ಯ ಉತ್ಸಾಹದಿಂದ ಅವರನ್ನು ಮನೆಗೆ ಸ್ವಾಗತಿಸಿದಳು.

ಇನ್ನೂ ತನ್ನ ಕಾಲ ಕೆಳಗೆ ಹಡಗಿನ ಅಟ್ಟವಿದೆ, ಹಡಗು ಮುಂದಕ್ಕೆ ಚಲಿಸುತ್ತಿದೆಯೆಂಬ ಗುಂಗಿನಲ್ಲಿಯೇ ಇದ್ದ ಪೇತ್ಯ ಗಾಡಿಯಿಂದ ಇಳಿದು ಮನೆಯ ಬಾಗಿಲಿಗೆ ಓಡಿದ. "ಓ, ಎಷ್ಟು ದೊಡ್ಡ ಮಹಡಿ ಮೆಟ್ಟಲುಗಳು ! ಎಷ್ಟೊಂದು ದೀಪಗಳು! ಎಷ್ಟೊಂದು ಬೆಳಕು !" ಪ್ರತಿಯೊಂದು ಬಾಗಿಲಿನಲ್ಲೂ ಒಂದೊಂದು ಪ್ಯಾರಾಫಿನ್ ಎಣ್ಣೆ ದೀಪವನ್ನು ಕಬ್ಬಿಣದ ಪೀಠದ ಮೇಲೆ ಇಡಲಾಗಿತ್ತು. ಅವುಗಳ ಮೇಲೆ ದುಂಡಾದ ಮರೆಗಳು ತೂಗಾಡುತ್ತಿದ್ದುವು.

ಬಾಗಿಲುಗಳ ಮೇಲೆ ಉಜ್ಜಿ ಹೊಳಪು ಮಾಡಿದ ಹಿತ್ತಾಳೆ ತಗಡಿನ ಫಲಕಗಳು ಹೊಳೆಯುತ್ತಿದ್ದುವು. ಪ್ರತಿಯೊಂದು ಬಾಗಿಲಿನ ಬಳಿಯಲ್ಲೂ ತೆಂಗಿನ ನಾರಿನ ಕಾಲು ಚಾಪೆಗಳು ಇದ್ದುವು. ಅಲ್ಲೇ ಒಂದು ಕಡೆ ನೂಕಿಕೊಂಡು ಹೋಗುವ ಮಕ್ಕಳ ಗಾಡಿಯು ನಿಂತಿತ್ತು.

ಇವೆಲ್ಲವನ್ನೂ ಪೇತ್ಯ ಪೂರ್ತಿಯಾಗಿ ಮರೆತಿದ್ದ. ಈಗ ಅವು ಪುನಃ ಅವನ ಕಣ್ಣುಗಳ ಮುಂದೆ ಬಂದು ನಿಂತುವು. ಪುನಃ ಮೊದಲಿನಂತೆ ಅವುಗಳಿಗೆ ಹೊಂದಿಕೊಂಡು ಹೋಗುವ ಅಭ್ಯಾಸ ಮಾಡಬೇಕು ಅವನು.

ಮೇಲುಗಡೆ ಎಲ್ಲಿಯೋ ಬೀಗದಕ್ಕೆ ತಿರುಗಿಸಿದ ಶಬ್ದ; ಬಾಗಿಲನ್ನು ಧಡಾರದೆ ನೂಕಿದ ಸದ್ದು; ಬೇಗಬೇಗ ಮಾತಾಡಿದ ಶಬ್ದ. ಒಂದೊಂದು ಸಲದ ಕೂಗು ಪಿಸ್ತೂಲಿನಿಂದ ಗುಂಡು ಹೊಡೆದಂತೆ ಕೇಳಿಸುತ್ತಿತ್ತು. ಗೋಡೆಯ ಆಚೆಯ ಕಡೆಯಲ್ಲಿ ಯಾರೋ ಪಿಯಾನೋ ಬಾರಿಸುತ್ತಿದ್ದರು, ಅವರ ಧ್ವನಿ ಕಿವಿಯ ಮೇಲೆ ಹೊಡೆದಂತೆ ಕೇಳಿಬರುತ್ತಿತ್ತು. ಆ ಧ್ವನಿ ಕಡ್ಡಾಯವಾಗಿ ಪೇತ್ಯನಿಗೆ ಸಂಗೀತದ ಇರುವಿಕೆಯನ್ನು ತಿಳಿಸಿಕೊಡುವಂತಿತ್ತು.

ಓ ಇದಾರು ? ಮರೆತಂತಿದ್ದರೂ ಅತಿ ಪರಿಚಿತಳಾದವಳಂತೆ ತೋರುತ್ತಾಳೆ. ಅಚ್ಚ ನೀಲಿಯ ರೇಷ್ಮೆ ಉಡುಪನ್ನು ಹಾಕಿದ್ದಾಳೆ. ಅದಕ್ಕೆ ಕಸೂತಿ ಹಾಕಿದ ಅಂಚಿನ ಕೊರಳು ಪಟ್ಟಿಯಿದೆ. ಮುಂಗೈ ಮೇಲೂ ಅದೇ ರೀತಿಯ ಕಸೂತಿ ಹಾಕಿದ ಕೈಪಟ್ಟಿಗಳಿವೆ. ಅವಳು ಬಾಗಿಲಿನ ಮೂಲಕ ಓಡಿಬರುತ್ತಿದ್ದಾಳೆ. ಉದ್ವೇಗ ಮತ್ತು ಅತಿಹರ್ಷಗಳ ದೆಸೆಯಿಂದ ಆಕೆಯ ಕಣ್ಣುಗಳಲ್ಲಿ ಸಂತೋಷದ ಕಣ್ಣೀರು ತುಂಬಿದೆ. ನಗುವಿನಲ್ಲಿ ಆಕೆಯ ತುಟಿಗಳು ತೇಲುತ್ತಿವೆ. ಅವಳ ಗದ್ದ ಕಂಪಿಸುತ್ತಿದೆ. ಆದರೆ ಅದು ಅಳಲು ಸಿದ್ಧತೆಯೋ ಅಥವಾ ನಗಲೋ ಎಂಬುದು ಪೇತ್ಯನಿಗೆ ಖಚಿತವಾಗಿರಲಿಲ್ಲ.

"ಪಾವಲಿಕ್ !"

ಅಡಿಗೆಯವಳ ಕೈಯಿಂದ ಪಾಲಿಕನನ್ನು ಆಕೆ ಕಿತ್ತುಕೊಂಡಳು.

"ಅಬ್ಬ, ಎಷ್ಟು ಭಾರವಾಗಿ ಬಿಟ್ಟಿದ್ದಾನೆ. !"

ನಿದ್ದೆಯಿಂದ ಭಾರವಾದ ಕಣ್ಣುಗಳನ್ನು ತೆರೆದು ಆಶ್ಚರ್ಯ ಮಿಶ್ರಿತವಾದ ಅಲಕ್ಷ್ಯದಿಂದ "ಓ ಚಿಕ್ಕಮ್ಮ? ನೀನೇ ?" ಎಂದ. ಪುನಃ ಮೊದಲಿನಂತೆಯೇ ನಿದ್ದೆಹೋದ.

ಈಕೆ ಯಾರು ! ಅಯ್ಯೋ, ಚಿಕ್ಕಮ್ಮ ತಾತ್ಯಾನ ! ಮೆಚ್ಚಿನ ಪ್ರೀತಿ ಪಾತ್ರಳಾದ ಚಿಕ್ಕಮ್ಮ ! ಅವನ ಸ್ಮರಣೆಯಿಂದ ಆಕೆ ಹೇಗೆ ನುಣುಚಿಕೊಂಡು ಹೋಗಿದ್ದಳು ! ಆಕೆಯನ್ನು ಗುರುತು ಹಿಡಿಯದೆ ಇದ್ದುದಾದರೂ ಹೇಗೆ ? ಇದಾವ ಮಾಯೆ ಇದು !

"ಪೇತ್ಯ, ಎಷ್ಟು ಬೆಳೆದು ಬಿಟ್ಟಿದ್ದೀಯೋ ?"

"ದಾರೀಲಿ ಏನಾಯಿತು ಗೊತ್ತೇ ಚಿಕ್ಕಮ್ಮ ?" ಪೇತ್ಯ ಒಡನೆ ಶುರು ಹಚ್ಚಿದ. "ನಿನಗೆ ಅದರ ವಿಚಾರ ಏನೇನೂ ಗೊತ್ತಿಲ್ಲ. ಸ್ವಲ್ಪ ಕೇಳು ಇಲ್ಲಿ ಚಿಕ್ಕಮ್ಮ ಓ. ನೀನುಕೇಳೋದೆ ಇಲ್ಲ. ಅದ್ಯಾಕೆ ಚಿಕ್ಕಮ್ಮ ಹಾಗೆ ಮಾಡ್ತೀಯಾ ? ನಾನು ಎಲ್ಲಾನೂ ಹೇಳಬೇಕು ನಿನಗೆ ಎಂದರೆ ?"

"ಆಗಲಿ ಹೇಳೂವಂತೆ ಸ್ವಲ್ಪ ಇರು. ಮೊದಲು ಒಳಕ್ಕೆ ಹೋಗು. ನಿಮ್ಮ ತಂದೆ ಎಲ್ಲಿ ?"

"ಇಲ್ಲೇ ಇದ್ದೀನಿ." ತಂದೆ ಮೆಟ್ಟಲು ಹತ್ತಿ ಬರುತ್ತಿದ್ದರು.

"ಕ್ಷೇಮವೇ, ತಾತ್ಯಾನ ಇವನೋವ ?"

"ಬನ್ನಿ ಬನ್ನಿ, ಒಳಗೆ ಬನ್ನಿ. ಆರೋಗ್ಯ ತಾನೆ ? ಹಡಗಿನ ಮೇಲೆ ನಿಮಗೆ ತಲೆ ಸುತ್ತು, ಜ್ವರ, ವಾಕರಿಕೆ ಏನೂ ಆಗಲಿಲ್ಲವಲ್ಲ ?"

"ಏನೂ ಆಗಲಿಲ್ಲ. ಪ್ರಯಾಣ ಸೊಗಸಾಗಿತ್ತು. ನಿನ್ನ ಹತ್ತಿರ ಚಿಲ್ಲರೆ ಏನಾದರೂ ಇದ್ದರೆ ಗಾಡಿಯವನಿಗೆ ಕೊಟ್ಟು ಕಳುಹಿಸು. ಅವನ ಹತ್ತಿರ ಮೂರು ರೂಬಲ್ ನೋಟಿಗೆ ಚಿಲ್ಲರೆ ಇಲ್ಲ ವಂತೆ."

"ಅದನ್ನೆಲ್ಲ ನಾನು ನೋಡಿಕೊಳ್ಳೀತ್ತೇನೆ. ಪೇತ್ಯ, ಕಾಲುಕಾಲಿಗೆ ತೊಡರಿಕೋಬೇಡ ಮಗೂ, ಆ ಮೇಲೆ ಎಲ್ಲಾನೂ ಹೇಳೀವಂತೆ. ದುನ್ಯ ಓಡು. ನನ್ನ ಕನ್ನಡಿಮೇಜಿನ ಮೇಲೆ ದುಡ್ಡು ಇಟ್ಟಿದ್ದೆ. ಆ ಗಾಡಿಯವನಿಗೆ ಕೊಟ್ಟು ಬಾ."

ಪೇತ್ಯ ಪ್ರವೇಶಿಸಿದ ಹಜಾರವು ತನಗೆ ಹಿಂದೆ ಪರಿಚಿತವಾಗಿರಲಿಲ್ಲವೋ ಎನ್ನುವಷ್ಟು ನೂತನ ವಾಗಿಯೂ ವಿಶಾಲವಾಗಿಯೂ ಇದ್ದ ಹಾಗೆ ಮಸಕುಮಸಕಾಗಿ ತೋರಿತು. ಅಲ್ಲಿ ಒಂದು ಅಕ್ರೋಟ ದಾರು ಮರದ ಚೌಕಟ್ಟಿನ ನಿಲುಗನ್ನಡಿಯಿತ್ತು. ತಕ್ಷಣದಲ್ಲಿ ಮರೆತಂತಿದ್ದರೂ ತನಗೆ ಪರಿಚಿತ ವಾಗಿಯೇ ಇದ್ದಂಥ ಶ್ಯಾಮಲ ವರ್ಣದ ಹುಡುಗನು ಆ ಕನ್ನಡಿಯಲ್ಲಿ ಕಾಣಿಸಿಕೊಂಡನು. ಆ ಹುಡುಗನ ತಲೆಯ ಮೇಲೆ ಹುಲ್ಲಿನ ಟೋಪಿ ರಂಜಿಸುತ್ತಿತ್ತು. ಹಜಾರವನ್ನು ಪ್ರವೇಶಿಸುತ್ತಲೇ ಎಲ್ಲಿಂದಲೋ ಇದ್ದಕ್ಕಿದ್ದಂತೆ ಬಂದು ನಿಂತಂತಿದ್ದ ಆ ಹುಡುಗನನ್ನು ಪೇತ್ಯ ತಕ್ಷಣ ಗುರುತು ಹಿಡಿಯಲಾರದೆ ಹೋದ.

ಎಲ್ಲರಿಗಿಂತ ಹೆಚ್ಚಾಗಿ ಪೇತ್ಯ ಅವನನ್ನು ಫಕ್ಕನೆ ಗುರುತು ಹಿಡಿಯಬೇಕಾಗಿತ್ತು ಏಕೆಂದರೆ ಅದು ಅವನದೇ ಪ್ರತಿಬಿಂಬವಾಗಿತ್ತು.

೧೦. ಮನೆಯಲ್ಲಿ

ಬೇಸಿಗೆಯ ರಜದಲ್ಲಿ ಕಾಲವನ್ನು ಕಳೆದ ಆ ಹೊಲಮನೆಯಲ್ಲಿ ಸುಣ್ಣ ಬಳಿದ ಗೋಡೆಗಳ ಒಂದು ಸಣ್ಣ ಕೊಠಡಿಯಿದ್ದಿತು. ಆ ಕೊಠಡಿಯಲ್ಲಿ ಮೂರು ಮಡಿಸುವ ಮಂಚಗಳನ್ನು ಇಡಲಾಗಿತ್ತು. ಅವುಗಳ ಮೇಲೆ ತೆಳುವಾದ ಹತ್ತಿ ಬಟ್ಟೆಯ ಮಗ್ಗಲು ಹಾಸುಗೆಯನ್ನು ಹಾಕಲಾಗಿತ್ತು. ಒಂದು ಕೈ ತೊಳೆಯುವ ಬೋಗಣಿಯನ್ನು ಕಬ್ಬಿಣದ ನಿಲುವಿನ ಮೇಲೆ ಇಟ್ಟಿದ್ದಿತು. ಒಂದು ಪೀತದಾರು ಮರದ ಮೇಜುವನ್ನೂ ಒಂದು ಕುರ್ಚಿಯನ್ನೂ ಇಡಲಾಗಿತ್ತು. ಗಾಜಿನ ಮರೆಯನ್ನು ಅಳವಡಿಸಿದ್ದ ಮೇಣದ ಬತ್ತಿಯ ದೀಪವೊಂದು ಅಲ್ಲಿತ್ತು. ಜಾಲಂದರವಿದ್ದ ಹಸುರು ಕಿಟಕಿ ಬಾಗಿಲುಗಳು ಇದ್ದುವು. ನೆಲಕ್ಕೆ ಮರದ ಹಲಗೆಯನ್ನು ಹಾಸಲಾಗಿತ್ತು. ಒಂದೇ ಸಮನಾಗಿ ನೆಲವನ್ನು ಉಜ್ಜಿದ್ದುದರಿಂದ ಅದರ ಬಣ್ಣ ಹೋಗಿತ್ತು. ಆ ಕೊಠಡಿಯಲ್ಲಿ ವಾಸಿಸುವುದೆಂದರೆ ಎಷ್ಟು ಹಾಯಾಗಿರುತ್ತಿತ್ತೊ! ಅದೂ ಒಳ್ಳೆಯ ಕೆನೆಹಾಲನ್ನು ಕುಡಿದು ಬೂದುಬಣ್ಣದ ತವುಡು ತೆಗೆಯದ ಗೋಧಿ ಹಿಟ್ಟಿನ ರೊಟ್ಟಿಯನ್ನು ತಿಂದು ಆ ಕೊಠಡಿಯಲ್ಲಿ ಹಿತಕರವಾದ ಸಮುದ್ರದ ಅಲೆಗಳ ಭೋರ್ಗರೆತವನ್ನು ಆಲಿಸುತ್ತ ಮಲಗುವುದೆಂದರೆ!

ಇಲ್ಲೋ ಎಲ್ಲವೂ ತದ್ವಿಪರೀತ.

ಇಲ್ಲಿ ಕಾಗದಗಳನ್ನು ಅಂಟಿಸಿದ ಗೋಡೆಗಳು. ಬ್ಬಟೆಯ ಅಳ್ಳಕವಾದ ಗವುಸುಗಳನ್ನು ಹೊದೆದುಕೊಂಡ ಸೋಫ, ಕುರ್ಚಿ ಮೊದಲಾದ ಮರದ ಸಾಮಾನುಗಳು ಕೊಠಡಿಗಳಲ್ಲಿ ತುಂಬಿದ್ದುವು. ಗೋಡೆಗಳಿಗೆ ಅಂಟಿಸಿದ್ದ ಕಾಗದ ಬಹಳ ಹಳೆಯದಾಗಿದ್ದಿತು. ಮತ್ತು ಒಂದೊಂದು ಕೊಠಡಿಯ ಗೋಡೆಗಳಿಗೂ ಬೇರೆ ಬೇರೆ ಚಿತ್ರ ರಚನೆ ಮತ್ತು ವಿನ್ಯಾಸಗಳ ಬಣ್ಣಬಣ್ಣದ ಕಾಗದಗಳನ್ನು ಅಂಟಿಸಲಾಗಿತ್ತು. ಒಂದೊಂದು ಕೊಠಡಿಯ ಮರದ ಸಾಮಾನುಗಳೂ ವಿವಿಧ ರೀತಿಯವು. ಕಾಗದವನ್ನು ಅಂಟಿಸಿದ್ದ ಗೋಡೆಗಳ ಮೇಲೆ ಹೂಗೊಂಚಲುಗಳು ಮತ್ತು ಚಿತ್ರಪಟಗಳು ತುಂಬಿ ಹೋಗಿದ್ದುದರಿಂದ ಕೊಠಡಿಯ ವಿಸ್ತಾರವು ಸಂಕುಚಿತವಾದಂತೆ ತೋರುತ್ತಿತ್ತು. ಕೊಠಡಿಗಳಲ್ಲಿ ಇಟ್ಟಿದ್ದ ಒಂದೇ ರೀತಿಯ ಮರದ ಸಾಮಾನುಗಳು ಜನರ ಮಾತುಗಳನ್ನೂ ಕಾಲು ಸಪ್ಪುಳಗಳನೂ ದನಿಗುಂದಿಸುತ್ತಿದ್ದುವು. ಇಲ್ಲಿಕೊಠಡಿಯಿಂದ ಕೊಠಡಿಗೆ ದೀಪವನ್ನುಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದರು. ಮೇಣದಂತೆ ಹೊಳೆಯುತ್ತಿದ್ದ ಗರಿಗರಿಯಾದ ಎಲೆಗಳ ರಬ್ಬರ್ ಗಿಡಗಳನ್ನು ನಡುಮನೆಯಲ್ಲಿ ಕಾಣಬಹುದಾಗಿತ್ತು; ಅವುಗಳ ಹೊಸ ಕುಡಿಗಳು ಮೆರಗು ಕೊಟ್ಟ ಚರ್ಮದ ಒರೆಯಲ್ಲಿನ ಚೂರಿಯಂತೆ ತಲೆಯೆತ್ತಿ ನಿಂತಿದ್ದುವು.

ದೀಪಗಳನ್ನು ಸ್ಥಳದಿಂದ ಸ್ಥಳಕ್ಕೆ ಒಯ್ದಾಗ ಬೆಳಕು ಒಂದು ಕನ್ನಡಿಯಿಂದ ಇನ್ನೊಂದು ಕನ್ನಡಿಗೆ ಹಾದುಹೋಗುತ್ತಿತ್ತು. ಕೆಳಗಡೆ ರಸ್ತೆಯಲ್ಲಿ ಗಾಡಿಗಳು ದಡದಡನೆ ಶಬ್ದ ಮಾಡಿಕೊಂಡು ಹೋದಾಗ ಪಿಯಾನೋ ಮೇಲಿನ ಪುಷ್ಪಕುಂಭವು ಅಲ್ಲಾಡುತ್ತಿತ್ತು. ಗಾಡಿಯ ಚಕ್ರಗಳ ದಡದಡ ಶಬ್ದದಿಂದಾಗಿ ನಗರಕ್ಕೂ ಮನೆಗೂ ಒಂದು ಸಂಬಂಧವು ಕಲ್ಪಿತವಾದಂತಿತ್ತು.

ಪೇತ್ಯ ಟೀಯನ್ನು ಆದಷ್ಟು ಜಾಗ್ರತೆ ಮುಗಿಸಲು ಬಯಸಿದ. ಒಂದು ನಿಮಿಷವಾದರೂ ಸರಿ ಅಂಗಳಕ್ಕೆ ಓಡಿಹೋಗಿ ಹುಡುಗರನ್ನು ಕಂಡು ಅಲ್ಲಿಯ ಸಮಾಚಾರವನ್ನು ತಿಳಿದುಕೊಳ್ಳಲು

ಅವನು ತುಂಬ ಕಾತುರನಾಗಿದ್ದ. ಆದರೆ ಆಗಲೆ ಸುಮಾರು ಒಂಬತ್ತು ಗಂಟೆಯ ಮೇಲಾಗಿತ್ತು. ಹುಡುಗರೆಲ್ಲ ಮಲಗಿ ಅವರಿಗೆ ನಿದ್ದೆ ಬಂದಿರಬೇಕು.

ಪರಾರಿಯಾದ ನಾವಿಕನ ವಿಷಯವನ್ನು ಚಿಕ್ಕಮ್ಮ ತಾತ್ಯಾನಳಿಗಾಗಲಿ, ಕೊನೆಯ ಪಕ್ಷ ದುನ್ಯಳಿಗಾಗಲಿ ಹೇಳಬೇಕೆಂದು ತುದಿಗಾಲಿನಲ್ಲಿ ನಿಂತಿದ್ದ ಪೇತ್ಯ. ಆದರೆ ಅವರಿಗೆ ಬಿಡುವಿಲ್ಲದಷ್ಟು ಕೆಲಸ. ಹಾಸಿಗೆ ಹಾಸುವುದು, ದಿಂಬುಗಳನ್ನು ಸಿದ್ಧಪಡಿಸುವುದು, ಬಟ್ಟೆಗಳನ್ನಿಡುವ ಮರದ ಬೀರುವಿನಿಂದ ನಯವಾದ ಮಂದವಾದ ದುಪ್ಪಟಿಗಳನ್ನು ತೆಗೆಯುವುದು, ಲ್ಯಾಂಪುಗಳನು ಕೊಠಡಿಯಿಂದ ಕೊಠಡಿಗೆ ಒಯ್ಯುವುದು ಒಂದೇ ಎರಡೇ ಕೆಲಸ.

ಪೇತ್ಯ ಚಿಕ್ಕಮ್ಮನ ಹಿಂದು ಹಿಂದೇ ಸುತ್ತಾಡುತ್ತಿದ್ದ. "ಚಿಕ್ಕಮ್ಮ, ನಾನು ಹೇಳುವುದನ್ನು ಕೇಳ್ತೋದಿಲ್ಲವೆ ? ನಿನ್ನದಮ್ಮಯ್ಯ, ಕೇಳು." ಎಂದು ಅವಳ ಎಳೆದಾಡುತ್ತಿದ್ದ ಬಟ್ಟೆಯ ಮೇಲೆ ಕಾಲಿಡುತ್ತ ಅಂಗಲಾಚಿದ.

"ನನಗೆ ಕೈತುಂಬ ಕೆಲಸ ಇರೋದು ಕಾಣಿಸೋದಿಲ್ಲವೆ ?"

"ಬೇಗ ಹೇಳಿ ಮುಗಿಸಿಬಿಡುತ್ತೇನೆ ಚಿಕ್ಕಮ್ಮ."

"ನಾಳೆ ಹೇಳೂವಂತೆ. ಈಗಲೇ ಏನು ಕೊಳ್ಳೇಹೋಗೋದು !"

"ನನ್ನ ಮಾತೂ ಅಂದರೆ ನೀನು ತೀರ ಅಲಕ್ಷ್ಯ ಮಾಡ್ತೀಯ, ಚಿಕ್ಕಮ್ಮ, ದಮ್ಮಯ್ಯ ಚಿಕ್ಕಮ್ಮ. ಬೇಗ ಹೇಳಿ ಮುಗಿಸಿ ಬಿಡ್ತೇನೆ, ನನ್ನಾಣೆಗೂ."

"ಕಾಲು ಕಾಲಿಗೆ ತೊಡರಿಕೋ ಬೇಡ. ದುನ್ಯಳ ಹತ್ತಿರ ಹೇಳು ಹೋಗು."

ಪೇತ್ಯ ಖಿನ್ನನಾಗಿ ಅಡಿಗೆ ಮನೆಗೆ ಕಾಲೆಳೆದುಕೊಂಡು ಹೋದ. ಅಲ್ಲಿ ಕಿಟಕಿಯ ಗೂಡಿನಲ್ಲಿಟ್ಟಿದ್ದ ಮರದ ಪೆಟ್ಟಿಗೆಯಲ್ಲಿ ಹಸಿರು ಈರುಳ್ಳಿ ಗಿಡಗಳು ಬೆಳೆಯುತ್ತಿದ್ದುವು.

ಸೈನಿಕರು ಹಾಕಿಕೊಳ್ಳುವ ಮಂದವಾದ ಉಣ್ಣೆಯ ನಿಲುವಂಗಿಯಿಂದ ಹರಿದ ಬಟ್ಟೆಯನ್ನು ಇಸ್ತ್ರಿಯ ಹಲಗೆಯ ಮೇಲೆ ಹಾಸಿ ಅದರ ಮೇಲೆ ಒಂದು ದಿಂಬಿನ ಚೀಲವನ್ನು ಇಟ್ಟು, ಕಾದ ಕಬ್ಬಿಣದಿಂದ ದುನ್ಯ ಒತ್ತಿ ಇಸ್ತ್ರಿಮಾಡುತ್ತಿದ್ದಳು. ಇಸ್ತ್ರಿಯ ಕಾದ ಕಬ್ಬಿಣದಿಂದ ಆವಿ ಮೇಲಕ್ಕೇಳುತ್ತಿತ್ತು.

"ದುನ್ಯ, ದಾರೀಲಿ ಏನು ನಡೆಯಿತು ಅಂತ ನಿನಗೆ ಗೊತ್ತೆ?" ದುನ್ಯಳ ಪುಷ್ಟವಾದ ಮಾಂಸದಿಂದ ಕೂಡಿ ಹೊಳೆಯುತ್ತಿದ್ದ ಬರಿದಾದ ಮುಂಗೈ ಚರ್ಮವನ್ನು ದಿಟ್ಟಿಸಿನೋಡುತ್ತ ಪೇತ್ಯ ಕೇಳಿದ.

"ಅಷ್ಟು ಹತ್ತಿರ ಬರಬೇಡ, ದೂರಇರು. ಅದೃಷ್ಟ ಕಮ್ಮಿಯಾಗಿ ಎಲ್ಲಾದರೂ ಕೈತಪ್ಪಿ ಇಸ್ತ್ರಿಯ ಕಾದ ಕಬ್ಬಿಣ ನಿನಗೆ ತಗುಲಿಬಿಟ್ಟೀತು, ಜೋಕೆ."

"ಇಲ್ಲ ಇಲ್ಲ, ದೂರದಲ್ಲೇ ಇರ್‍ತೀನಿ. ನಾನು ಹೇಳೋದನ್ನು ಕೇಳ್ತೀಯಾ ?"

"ನಿನ್ನ ಚಿಕ್ಕಮ್ಮನಿಗೆ ಹೇಳು ಹೋಗು. ನನಗೆ ಕೆಲಸ ಇದೆ."

"ಚಿಕ್ಕಮ್ಮನಿಗೆ ಈಗ ಕೇಳೋದಕ್ಕೆ ಆಗೋದಿಲ್ಲವಂತೆ. ನಿನಗೇ ಹೇಳು ಅಂದಳು. ನೀನೆ ಕೇಳು. ಅವಳಿಗೆ ಹೇಳೋದೇ ಇಲ್ಲ."

"ನಿಮ್ಮಪ್ಪನಿಗೆ ಹೇಳು ಹೋಗು."

"ಅಯ್ಯೋ, ನೀನೆಂಥ ದಡ್ಡಿ. ಅಪ್ಪನೂ ನನ್ನ ಜತೆಯಲ್ಲೆ ಪ್ರಯಾಣ ಮಾಡಲಿಲ್ಲವೇ? ಅವರಿ

ಗೊತ್ತಿಲ್ಲದೆ ಇರುತ್ಯೆ?"

"ಹಾಗಾದರೆ ನಾಳೇ ಹೇಳೊವಂತೆ, ಈಗ ಬೇಡ."

"ಈಗಲೇ ಹೇಳಿಬಿಡಬೇಕು ಅಂತ ನನಗೆ ಆಸೆ."

"ನನ್ನ ಮೊಣಕೈ ಮೇಲೆ ಬೀಳ್ತೀಯಲ್ಲ. ಸ್ವಲ್ಪ ಆಚೆ ಕಡೆಗೆ ನಿಂತುಕೋ. ನಿನಗೆ ಈ ಮನೇಲಿ ಬೇರೆ ಯಾವುದೂ ಜಾಗವೇ ಇಲ್ಲ ಅಂತಕಾಣುತ್ತೆ. ಇಲ್ಲೇ ಬಂದು ಗೋಳುಹುಯ್ದು ಕೋ ಬೇಕೇ ನನ್ನ !"

"ನಿನಗೆ ಬೇಗ ಬೇಗ ಹೇಳಿ ಬಿಟ್ಟುಹೊರಟುಹೋಗ್ತೀನೆ. ಆ ಮೇಲೆ ಪುನಃ ಬಂದರೆ ಕೇಳು. ಆಣೆ ಇಡ್ತೇನೆ ಬೇಕಾದರೆ, ದೇವರ ಸತ್ಯವಾಗಲೂ."

"ಏನು ಕಾಟವಪ್ಪ ನಿನ್ನದು? ನೀನು ಬರುವವರೆಗೆ ಮನೆಯೆಲ್ಲ ಶಾಂತವಾಗಿತ್ತು. ನೀನು ಬಂದೆ ಶುರು ಆಯ್ತು !"

ದುನ್ಯ ಒಲೆಯ ಮೇಲೆ ಇಸ್ತ್ರಿ ಮಾಡುತ್ತಿದ್ದ ಕಬ್ಬಿಣವನ್ನಿಟ್ಟು ಇಸ್ತ್ರಿ ಮಾಡಿದ ದಿಂಬು ಚೀಲ ವನ್ನು ತೆಗೆದುಕೊಂಡು ಪಕ್ಕದ ಕೊಠಡಿಗೆ ಬಿರ್ರನೆ ಓಡಿದಳು. ಅವಳು ಹಾಗೆ ಓಡಿದಾಗ ಅವಳ ಹಿಂದುಗಡೆ ಅಡಿಗೆ ಮನೆಯಿಂದ ಒಂದು ಗಾಳಿ ಬೀಸಿದ ಹಾಗೆ ಆಯಿತು.

ಪೇತ್ಯನಿಗೆ ದುಃಖವಾಯಿತು. ಮುಂಗೈಯಿಂದ ಕಣ್ಣು ಹೊಸಕುತ್ತ ನಿಂತ. ಇದ್ದಕ್ಕಿದ್ದ ಹಾಗೆ ಅವನಿಗೆ ಒಂದು ದೊಡ್ಡ ಆಕಳಿಕೆ ಬಂದಿತು. ಹೇಗೋ ಹಾಸಿಗೆಯ ಬಳಿಗೆ ಕಾಲೆಳೆಯುತ್ತ ಬಂದ. ಅವನು ತನ್ನ ಮುಚ್ಚಿದ್ದ ಕಣ್ಣೆವೆಗಳನ್ನು ಬಿಡಿಸಲಶಕ್ತನಾಗಿದ್ದ. ತಾನು ಹಾಕಿಕೊಂಡಿದ್ದ ನಾವಿಕ ಉಡುಪನ್ನು ಹಾಗೇ ಕಳಚಿ ಬಿಸಾಕಿ ಹಾಸಿಗೆಯ ಮೇಲೆ ಉರುಳಿದ. ಅವನ ಬೆಚ್ಚನೆಯ ಕೆನ್ನೆ ದಿಂಬನ್ನು ಸೋಕಿತೋ ಇಲ್ಲವೋ ಅವನಿಗೆ ನಿದ್ದೆ ಬಂದು ಬಿಟ್ಟಿತು. ಎಂದಿನಂತೆ ತಂದೆ ಸುರಾತ್ರಿಯನ್ನು ಬಯಸಿ ಮುದ್ದು ಕೊಟ್ಟು ಹೋಗಲು ಬಂದುದೂ ಅವನಿಗೆ ತಿಳಿಯಲಿಲ್ಲ.

ಆದರೆ ಪಾವಲಿಕ ಮಾತ್ರ ತುಂಬ ತಂಟೆ ಮಾಡಿದ. ಅವನು ಗಾಡಿಯಲ್ಲಿ ಚೆನ್ನಾಗಿ ಒಂದು ನಿದ್ದೆ ಹೊಡೆದಿದ್ದ. ಅವನ ಮೇಲಂಗಿಯನ್ನು ತೆಗೆದು ಅವನನ್ನು ಹಾಸಿಗೆಯಲ್ಲಿ ಮಲಗಿಸುವ ಹೊತ್ತಿಗೆ ತಂದೆ ಮತ್ತು ಚಿಕ್ಕಮ್ಮ ತಾತ್ಯಾನಗಳಿಗೆ ಸಾಕು ಸಾಕಾಯಿತು. ಅವರು ಅವನನ್ನು ಹಾಸಿಗೆಯಲ್ಲಿ ಮಲಗಿಸಿದರೋ ಇಲ್ಲವೋ ಪಿಳಪಿಳನೆ ಕಣ್ಣು ಬಿಟ್ಟುಕೊಂಡು ನೋಡಲಾರಂಭಿಸಿದ. ಆ ಕಣ್ಣುಗಳಿಂದ ನಿದ್ದೆಯ ಜಡರು ಮಾಯವಾಗಿತ್ತು. ಅವು ಶುಭ್ರವಾಗಿದ್ದುವು. ಅವನು ಸುತ್ತ ಮುತ್ತ ಆಶ್ಚರ್ಯದಿಂದ ನೋಡಿದ.

"ನಾವು ಇನ್ನೂ ಮನೆಗೆ ಬಂದು ತಲಪಿಲ್ಲವೊ ?"

ಚಿಕ್ಕಮ್ಮ ತಾತ್ಯಾನ ಅವನ ಬೆಚ್ಚನೆಯ ಕೆಂಪು ಕೆನ್ನೆಗೆ ಮುತ್ತು ಕೊಡುತ್ತ ಹೇಳಿದಳು: "ನಮ್ಮ ಮನೆಯಲ್ಲೇ ನೀನು ಮಲಗಿಕೊಂಡಿರೋದು. ನೋಡು ಇದು ನಿನ್ನ ಹಾಸಿಗೆ."

ಪಾವಲಿಕನಿಗೆ ನಿದ್ದೆ ಚೆನ್ನಾಗಿ ತಿಳಿದಿತ್ತು. ಈಗ ಅವನಿಗೆ ಮಾತಾಡುವ ಆಸೆಯಿದ್ದಂತೆ ತೋರುತ್ತಿತ್ತು.

"ಓ, ಚಿಕ್ಕಮ್ಮ, ನೀನೇ ?"

"ಹೌದು ಪುಟ್ಟ, ಮಲಗಿಕೊಂಡು ನಿದ್ದೆ ಮಾಡು ?"

ಪಾವಲಿಕ್ ಬಹು ಹೊತ್ತು ಬಿಟ್ಟ ಕಣ್ಣನ್ನು ಬಿಟ್ಟಹಾಗೆ ನೋಡುತ್ತ ಮಲಗಿದ್ದ. ಅವನ

ಕಣ್ಣುಗಳು ಕರಿಮಣಿಯಂತೆ ಸ್ವಚ್ಛವಾಗಿ ಹೊಳೆಯುತ್ತಿದ್ದುವು. ಪಟ್ಟಣದ ಹಲವು ಸಂಸಾರಗಳು ವಾಸಿಸುತ್ತಿದ್ದ ಆ ದೊಡ್ಡ ಕಟ್ಟಡದ ಅಪರಿಚಿತ ಶಬ್ದಗಳನ್ನು ಅವನು ಆಲಿಸುತ್ತ ಮಲಗಿದ್ದ.

"ಚಿಕ್ಕಮ್ಮ, ಅದೇನು ಸದ್ದು?" ಹೆದರಿದವನಂತೆ ಪಿಸುಮಾತಿನಲ್ಲಿ ಕೇಳಿದ.

"ಏನು ಕಂದ?"

"ಆ ಗೊರಕೆ ಸದ್ದು."

"ನಲ್ಲಿ ನೀರಿನ ಶಬ್ದ ಅದು."

"ಅದೂ ಗೊರಕೆ ಬಿಡುತ್ತದೆಯೇ?"

ಅದೇನಾದರೂ ಮಾಡಿಕೊಳ್ಳಲಿ. ಇನ್ನು ನೀನು ನಿದ್ದೆ ಮಾಡು."

"ಅದೇನು ಆ ಸಿಳ್ಳು?"

"ಅದು ರೈಲು ಇಂಜನ್ನಿನದು."

"ಎಲ್ಲಿದೆ ಅದು?"

"ಎಲ್ಲಾ ಮರೆತೇ ಬಿಟ್ಟೆಯಾ? ಇಲ್ಲೇ ಎದುರುಗಡೆ ರೈಲು ನಿಲ್ದಾಣ ಇಲ್ಲವೆ."

"ಅಲ್ಲೆಲ್ಲೋ ಸಂಗೀತ ಆಗ್ತಿದೆಯಲ್ಲ, ಅದು ಯಾಕೆ?"

"ಮಹಡಿ ಮೇಲೆ ಯಾರೋ ಪಿಯಾನೋ ನುಡಿಸುತ್ತಿದ್ದಾರೆ. ಪಟ್ಟಣದಲ್ಲಿ ಜನ ಹೇಗೆ ಪಿಯಾನೋ ನುಡಿಸುತ್ತಾರೆ ಅಂತ ಗೊತ್ತಿಲ್ಲವೇ ನಿನಗೆ?"

ಪಾವಲಿಕ್ ಸ್ವಲ್ಪ ಹೊತ್ತು ಮೌನವಾಗಿದ್ದ. ಅವನಿಗೆ ನಿದ್ದೆ ಬಂದಿರಬೇಕೆಂದು ಯಾರಾದರೂ ಊಹಿಸುವಂತಿತ್ತು. ಬಟ್ಟೆಯ ಬೀರುವಿನ ಮೇಲೆ ಇಟ್ಟಿದ್ದ ಹಸುರು ಲ್ಯಾಂಪಿನ ನಸು ಬೆಳಕಿನಲ್ಲಿ ಅವನ ಕಣ್ಣುಗಳು ಮಾತ್ರ ಸ್ಪಷ್ಟವಾಗಿ ಹೊಳೆಯುತ್ತಿದ್ದುವು. ಮೇಲುಗಡೆ ಸೂರಿನಲ್ಲಿ ಉದ್ದವಾದ ಬೆಳಕಿನ ಕಿರಣಗಳು ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿದ್ದುದನ್ನು ಅವನ ಕಣ್ಣುಗಳು ಹಿಂಬಾಲಿಸುತ್ತಿದ್ದುವು.

"ಅದೇನು ಚಿಕ್ಕಮ್ಮ ಅದು?"

"ಕುದುರೆಗಾಡಿಗಳ ಮುಂದುಗಡೆಯ ದೀಪಗಳ ಬೆಳಕು. ಕಣ್ಣು ಮುಚ್ಚಿಕೊಂಡು ಮಲಗಿಕೋ ಮುದ್ದೆ."

"ಮತ್ತೆ, ಅದೇನು?"

ದೊಡ್ಡ ತಲೆಯ ಪತಂಗದ ಹುಳು ಸೂರಿನ ಬಳಿ ಮೂಲೆಯೊಂದರಲ್ಲಿ ಪರಪರನೆ ಅಂಜಿಕೆ ಹುಟ್ಟಿಸುವಂತೆ ಒದರುತ್ತ ಶಬ್ದಮಾಡುತ್ತಿತ್ತು.

"ಅದು ಪತಂಗದ ಹುಳು." ಎಂದು ಚಿಕ್ಕಮ್ಮ ಹೇಳಿದಳು.

"ಅದು ಕಚ್ಚುತ್ತೋ?"

"ಅದು ಕಚ್ಚೋದಿಲ್ಲ. ಬಹಳ ಹೊತ್ತಾಯ್ತು. ಇನ್ನು ಮಲಗಿಕೋ ಕಂದ."

"ನನಗೆ ಭಯ ಚಿಕ್ಕಮ್ಮ. ನನಗೆ ನಿದ್ದೆ ಬರೋದಿಲ್ಲ."

"ಅದೆಂಥ ಭಯ ಇಲ್ಲಿ. ಏನೇನೋ ಯೋಚಿಸ್ತಾ ಇರಬೇಡ. ಎಷ್ಟು ದೊಡ್ಡವನು ಆಗಿದ್ದೀ. ಭಯಪಡಬಾರದು ನೀನು."

ಪಾವಲಿಕ್ ಒಂದು ದೀರ್ಘವಾದ ಉಸಿರನ್ನು ಮೂಗಿನ ತುಂಬ ಎಳೆದುಕೊಂಡ. ಚಿಕ್ಕಮ್ಮನ

ಕೈಗಳನ್ನು ತನ್ನ ಎರಡು ಪುಟ್ಟ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡ. "ನೀನು ಕಂದಾರಿ ಯೋರನ್ನ ನೋಡಿದ್ದೀಯಾ ಚಿಕ್ಕಮ್ಮ ?"

"ಇಲ್ಲ, ನಾನು ನೋಡಿಲ್ಲ."

"ತೋಳನನ್ನ ನೋಡಿದ್ದೀಯಾ ?"

"ಇಲ್ಲ."

"ಹೊಗೆ ಕೊಳವೆ ಗುಡಿಸೋರನ್ನ ನೋಡಿದ್ದೀಯಾ ?"

"ಇಲ್ಲ, ಇಲ್ಲ. ಸುಮ್ಮನೆ ಅದೂ ಇದೂ ಕಾಡುಹರಟೆ ಬೇಕು ನಿನಗೆ. ಸುಮ್ಮನೆ ಮಲಗಿಕೋ ಎಂದರೆ ಆಗೋದೇ ಇಲ್ಲ." ಪಾವಲಿಕ್ ಪುನಃ ಒಂದುಸಲ ನಿಡಿದಾದ ಉಸಿರನ್ನು ಎಳೆದು ಕೊಂಡು ಇನ್ನೊಂದು ಮಗ್ಗುಲಾದ. ಕೆನ್ನೆಯ ತಳಗಡೆಗೆ ತನ್ನ ಎರಡು ಕೈಗಳನ್ನೂ ಸೇರಿಸಿ ಬೊಗಸೆಯಂತೆ ಜೋಡಿಸಿ ಇಟ್ಟುಕೊಂಡ.

"ಚಿಕ್ಕಮ್ಮ .... ಬಾಯಿ ಚೀಪು...." ತಡೆತಡೆದು ಕಣ್ಣು ಮುಚ್ಚಿಕೊಂಡು ಕೇಳಿದ.

"ಈ ದುರಭ್ಯಾಸ ಬಿಟ್ಟಿದೀಯ ಅಂತ ಮಾಡಿಕೊಂಡಿದ್ದೆ. ಇನ್ನೂ ಕೇಳ್ತೀಯಲ್ಲ."

ರಬ್ಬರಿನ ಮೊಗ್ಗನ್ನು ಬಾಯಲ್ಲಿ ಇಟ್ಟುಕೊಂಡು ಚೀಪಲು ಮಕ್ಕಳಿಗೆ ಕೊಡುತ್ತಾರೆ. ಇಲ್ಲಿ ಅದಕ್ಕೆ ಬದಲಾಗಿ ಬಾಯಿಗೆ ಇಟ್ಟುಕೊಂಡು ಚೀಪಲು ಒಂದು ಮಡಿಯ ಕರವಸ್ತ್ರವನ್ನು ಕೊಡುವ ವಾಡಿಕೆಯಿತ್ತು. ಅದಕ್ಕೆ ಬಾಯಿಚೀಪು ಎಂದು ಹೆಸರಿಟ್ಟಿದ್ದರು. ಬಾಯಲ್ಲಿ ಅದನ್ನು ಇಟ್ಟು ಕೊಂಡು ಚೀಪುತ್ತ ನಿದ್ದೆ ಹೋಗುವುದು ಪಾವಲಿಕನಿಗೆ ಅಭ್ಯಾಸವಾಗಿ ಹೋಗಿತ್ತು. ಅದಿಲ್ಲದೆ ಅವನಿಗೆ ನಿದ್ದೆಯೇ ಬರುತ್ತಿರಲಿಲ್ಲ.

"ಬಾ....ಯಿ....ಚೀ....ಪು. ಚಿಕ್ಕಮ್ಮ!" ಹುಡುಗ ಚಾಪಲ್ಯವನ್ನು ಹತ್ತಿಕ್ಕಲಾರದೆ ಬಿಕ್ಕಿ ಬಿಕ್ಕಿ ಅಳುತ್ತ ಕೇಳಿದ.

ಪಾವಲಿಕ್ ದೊಡ್ಡ ಹುಡುಗನಾಗಿದ್ದ. ಅವನು ಆ ಅಭ್ಯಾಸವನ್ನು ನಿಲ್ಲಿಸುವ ಕಾಲ ಎಂದೋ ಮುಗಿದಿತ್ತು. ಆದ್ದರಿಂದ ತಾತ್ಯಾನ ಅವನಿಗೆ ಕರವಸ್ತ್ರವನ್ನು ಏನಾದರೂ ಕೊಡಲಿಲ್ಲ. ಪಾವಲಿಕ್ ಹಾಗೆಯೇ ಬಿಕ್ಕುತ್ತ ದಿಂಬಿನ ಒಂದು ಮೂಲೆಯನ್ನು ಬಾಯಿಗೆ ತುರುಕಿಕೊಂಡು ಅದನ್ನೆಲ್ಲ ಎಂಜಲಿನಲ್ಲಿ ನೆನೆಸಿಬಿಟ್ಟ. ಅವನ ಎವೆಗಳು ಮುಚ್ಚಿಕೊಳ್ಳಲಾರಂಭಿಸಿದಂತೆ ಮುಗುಳು ನಗೆಯ ರೇಖೆ ಅವನ ಮುಖದಲ್ಲಿ ಮೂಡಿತು. ಇದ್ದಕ್ಕಿದ್ದಂತೆ ಅವನಿಗೆ ತನ್ನ ದುಡ್ಡಿನ ಡಬ್ಬಿಯ ಜ್ಞಾಪಕ ಬಂದು ದಿಗಿಲಾಯಿತು. ಕಳ್ಳರು ಅದನ್ನು ಕದ್ದು ಬಿಟ್ಟರೋ ಏನೋ! ಆದರೆ ಯಾವುದನ್ನೂ ಯೋಚಿಸುವಷ್ಟು ಶಕ್ತಿ ಅವನಿಗೆ ಉಳಿದಿರಲಿಲ್ಲ.

ಪಾವಲಿಕ್ ಶಾಂತನಾಗಿ ನಿದ್ದೆಹೋದ.

೧೧. ಗಾವ್ರಿಕ್

ಒಡೆಸ್ಸದ ತೀರ ಪ್ರದೇಶವನ್ನು ವರ್ಣಿಸುವಾಗ ಗಾವ್ರಿಕ್ ಎಂಬ ಇನ್ನೊಬ್ಬ ಹುಡುಗನ ವಿಷಯವನ್ನು ತಿಳಿಸಿದ್ದುದು ನಿಮಗೆ ಜ್ಞಾಪಕವಿರಬಹುದು. ಪೇತ್ಯ ಹೊಲಮನೆಯಿಂದ ಹೊರಟ. ಅದೇ ದಿನ ಆ ಹುಡುಗ ಬೆಳಕು ಹರಿಯುತ್ತಿದ್ದಂತೆ ಚಳಿಯಲ್ಲಿ ಇನ್ನು ಮಲಗಿರಲಾರದೆ ಎದ್ದುಬಿಟ್ಟ.

ಸಮುದ್ರದ ನುಣುಪಾದ ಕಲ್ಲೊಂದನ್ನೇ ತಲೆದಿಂಬನ್ನಾಗಿ ಮಾಡಿಕೊಂಡು ಅಜ್ಜನ ಹಳೆಯದಾಗಿದ್ದ ತೋಳಿನ ಅಂಗಿಯನ್ನು ಮುಖದ ಮೇಲೆ ಎಳೆದುಕೊಂಡು ದೋಣಿಯ ಬಳಿ ಸಮುದ್ರದ ದಂಡೆಯಲ್ಲಿ ಮಲಗಿದ್ದ. ಅಂಗಿ ಅವನ ತಲೆಯನ್ನು ಮುಚ್ಚಿದರೆ ಕಾಲನ್ನು ಮುಚ್ಚುತ್ತಿರಲಿಲ್ಲ. ಕಾಲನ್ನು ಮುಚ್ಚಿದರೆ ತಲೆಯನ್ನು ಮುಚ್ಚುತ್ತಿರಲಿಲ್ಲ. ರಾತ್ರಿ ಮಲಗಿದಾಗ ಬೆಚ್ಚಗೆ ಇತ್ತು; ಆದರೆ ಬೆಳಗಾಗುತ್ತಿದ್ದಂತೆ ಚಳಿ ಹೊಡೆಯುತ್ತಿತ್ತು. ಗಾವ್ರಿಕನ ಬರಿಗಾಲುಗಳು ಚಳಿಯಿಂದ ಕೊರೆಯತೊಡಗಿದುವು. ನಿದ್ದೆಗಣ್ಣಿನಲ್ಲೇ ಅಂಗಿಯನ್ನು ಕೆಳಕ್ಕೆ ಎಳೆದುಕೊಂಡು ಕಾಲಿಗೆ ಸುತ್ತಿಕೊಂಡ. ಆಗ ಅವನ ತಲೆಗೆ ಚಳಿ ಹತ್ತಿತು. ನಡುಕವಾದರೂ ಗಾವ್ರಿಕ್ ಮಾತ್ರ ಸೋಲನ್ನೊಪ್ಪಿಕೊಳ್ಳಲಿಲ್ಲ. ಚಳಿಯನ್ನೇ ಹೊಡೆದೋಡಿಸಲು ಪ್ರಯತ್ನಿಸಿದ. ಆದರೆ ಅವನಿಗೆ ಪುನಃ ಇನ್ನು ನಿದ್ದೆ ಮಾಡಲಾಗಲಿಲ್ಲ, ಎದ್ದೇಳುವುದಕ್ಕಿಂತ ಹೆಚ್ಚಿನ ಉಪಾಯವಾವುದೂ ಇರಲಿಲ್ಲ.

ಮನಸ್ಸಿಲ್ಲದೇ ಇದ್ದರೂ ಗಾವ್ರಿಕ್ ಬಲವಂತದಿಂದ ಕಣ್ಣುಬಿಟ್ಟ. ನಿಂಬೆಯ ಬಣ್ಣದಂತೆ ಸಮುದ್ರ ಹೊಳೆಯುತ್ತಿತ್ತು. ಮೋಡವಿಲ್ಲದೆ ನಿರ್ಮಲವಾಗಿದ್ದ ಆಕಾಶದಲ್ಲಿ ಉಷಃಕಾಲದ ಅರುಣ ಕಾಂತಿಯು ಕಂಗೊಳಿಸುತ್ತಿತ್ತು. ಅಂದು ಬಿಸಿಲು ಚೆನ್ನಾಗಿ ಕಾಯುವುದರಲ್ಲಿ ಅನುಮಾನವಿರಲಿಲ್ಲ. ಆದರೆ ಆಕಾಶದಲ್ಲಿ ಸೂರ್ಯನು ಮೇಲಕ್ಕೇರುವವರೆಗೂ ಮೈ ಕಾಯಿಸಿಕೊಳ್ಳುವ ಯೋಚನೆಯನ್ನು ಮಾಡುವಂತಿರಲಿಲ್ಲ. ಹೌದು, ಅವನು ಅಜ್ಜನ ಜತೆಯಲ್ಲಿ ಗುಡಿಸಿಲಿನಲ್ಲಿ ಮಲಗಬಹುದಾಗಿತ್ತು. ಅಲ್ಲಿ ಮೆತ್ತಗೂ ಬೆಚ್ಚಗೂ ನಿದ್ದೆ ಮಾಡಬಹುದಾಗಿತ್ತು. ಆದರೆ ನಿರ್ಮಲಾಕಾಶದಡಿಯಲ್ಲಿ ಕಡಲ ದಂಡೆಯ ಮೇಲೆ ಮಲಗುವ ಉಲ್ಲಾಸಕರವಾದ ಸಂದರ್ಭವನ್ನು ಯಾವ ಹುಡುಗ ತಾನೆ ಕಳೆದುಕೊಂಡಾನು ಹೇಳಿ!

ಕಿವಿ ಕೇಳಿಸುತ್ತದೋ ಇಲ್ಲವೋ ಎನ್ನುವಷ್ಟು ಮೃದುವಾಗಿ ಆಗಿಂದಾಗ್ಗೆ ಒಂದೊಂದು ಅಲೆ ದಡವನ್ನು ಅಪ್ಪಳಿಸುವುದು. ಬಳಿಕ ಕಲ್ಲು ಮರಳುಗಳನ್ನು ತನ್ನೊಡನೆ ಎಳೆದುಕೊಂಡು ವಿರಾಮವಾಗಿ ಹಿಂದಕ್ಕೆ ಸರಿಯುವುದು. ಸ್ವಲ್ಪ ಕಾಲ ನಿರೀಕ್ಷಿಸುತ್ತಿದ್ದು ಇನ್ನೊಂದು ಅಲೆ ಬಂದು ದಡವನ್ನು ಮುಟ್ಟುವುದು; ಪುನಃ ಸಣ್ಣ ಪುಟ್ಟ ಕಲ್ಲುಗಳನ್ನು ತನ್ನೊಡನೆ ಕೊಂಡೊಯ್ಯುವುದು.

ರಜತ ಪ್ರಭೆಯನ್ನು ಎರಚಿದಂತಿದ್ದ ಇರುಳಿನ ಶ್ಯಾಮಲಾಕಾಶದಲ್ಲಿ ನಕ್ಷತ್ರಗಳು ಅಲ್ಲಲ್ಲಿ ಹರಡಿದಂತಿದ್ದುವು. ಅಂಗಿಯ ತೋಳನ್ನು ಸೀಳಿದಂತೆ ಇದ್ದ ಕ್ಷೀರ ಪಥವು ಆಕಾಶದಲ್ಲಿನ ನದಿಯಂತೆ ತಲೆಯ ಮೇಲುಗಡೆಯಲ್ಲಿ ಹೊಳೆಯುತ್ತಿತ್ತು. ಇಡೀ ಗಗನವು ಸಮುದ್ರದಲ್ಲಿ ಪರಿಷ್ಕಾರವಾಗಿ ಪ್ರತಿಫಲಿಸುತ್ತಿತ್ತು. ಆಗ ಕಡಲದಂಡೆಯಲ್ಲಿ ಕಲ್ಲು ಹರಳುಗಳ ಮೇಲೆ ಅಂಗತ್ತನಾಗಿ ಮಲಗಿದ್ದರೆ ಯಾವುದು ಮೇಲು ಯಾವುದು ಕೆಳಗು ಎಂಬುದನ್ನು ಯೋಚನೆ ಮಾಡದೆ ಹೇಳಲಾಗದೆ ಇರುವಂಥ ಭ್ರಮೆ ಹುಟ್ಟುತ್ತದೆ. ನಕ್ಷತ್ರ ಜಗತ್ತಿನ ಅಗಾಧ ಅವಕಾಶದ ನಡುವೆ ನೀವು ತೂಗುಯ್ಯಾಲಾಡುತ್ತಿರುವಂತೆ ಭಾವಿಸುತ್ತೀರಿ. ಸುತ್ತಮುತ್ತ ಎಲ್ಲ ದಿಕ್ಕುಗಳಲ್ಲಿಯೂ ನಕ್ಷತ್ರಾಕೃತಿಗಳ ಕಾಂತಿರೇಖೆಗಳೇ ಕಾಣಿಸುತ್ತವೆ.

ದಡದಲ್ಲಿ ಸಮೃದ್ಧವಾಗಿ ಬೆಳೆದ ಕಳೆಗಳ ನಡುವೆ ಚಿಮ್ಮಂಡೆಗಳು ಚಿರ್ರೆನ್ನುತ್ತಿರುತ್ತವೆ. ಕಡಲ ದಂಡೆಯ ದಿಣ್ಣೆಯ ಮೇಲೆ ದೂರ, ಬಹು ದೂರದಲ್ಲಿ ನಾಯಿಗಳು ಬೊಗಳುತ್ತಿರುತ್ತವೆ.

ಮೊದಲ ನೋಟಕ್ಕೆ ನಕ್ಷತ್ರಗಳು ನಿಶ್ಚಲವಾಗಿ ನಿಂತಿರುವಂತೆ ತೋರುತ್ತವೆ. ಆದರೆ ಖಂಡಿತ ಅವು ನಿಶ್ಚಲವಾಗಿ ನಿಂತಿರುವುದಿಲ್ಲ. ದೀರ್ಘಕಾಲ ಅವುಗಳನ್ನು ಅವಲೋಕಿಸಿದಾಗ

ಕಮಾನಿನಂತಿರುವ ಆಕಾಶವೇ ತಿರುಗುತ್ತಿದೆಯೆಂದು ನಿಮಗೆ ಕಾಣುತ್ತದೆ. ಕೆಲವು ನಕ್ಷತ್ರಗಳು ಬಹು ದೂರದಲ್ಲಿ ಕಾಣುವ ಮನೆಗಳ ಹಿಂದೆ ಮರೆಯಾಗಿ ಅದೃಶ್ಯವಾಗುತ್ತವೆ. ಬೇರೆ ಹೊಸ ನಕ್ಷತ್ರಗಳು ಸಮುದ್ರದೊಳಗಿನಿಂದಲೊ ಎಂಬಂತೆ ಹೊರಬರುತ್ತವೆ.

ಆಗ್ಗೆ ಮಂದಮಾರುತವು ಬಿಸುಪನ್ನು ಬಿಟ್ಟು ತಣ್ಣಗಾಗುತ್ತದೆ.

ಗಗನ ಮೊದಲಿಗಿಂತ ಹೆಚ್ಚು ಶುಭ್ರವಾಗುವುದು, ಸ್ಫಟಿಕ ಸದೃಶವಾಗುವುದು. ಕಡಲು ಕಪ್ಪಗಾಗಲಾರಂಭಿಸುವುದು. ಉದಯತಾರೆಯು ಕೃಷ್ಣ ವರ್ಣದ ಕಡಲಿನ ಕನ್ನಡಿಯಲ್ಲಿ ಪುಟ್ಟ ಚಂದ್ರಮನಂತೆ ಪ್ರತಿಫಲಿಸುವುದು.

ದೂರದ ಮನೆಗಳ ಅಂಗಳದಲ್ಲಿ ನಿದ್ದೆಗಣ್ಣಿನಲ್ಲೇ ಕೂಗಿದ ಕೋಳಿಗಳ ಮೂರನೇ ಕೂಗು ಕೇಳಬರುತ್ತದೆ. ಅಗೋ! ಬೆಳಕು ಹರಿಯುತ್ತಿದೆ!

ಅಂಥ ಇರುಳೊಂದರಲ್ಲಿ, ಅಂಥ ಅಲೌಕಿಕ ಮೇಲು ಛಾವಣಿಯ ಪ್ರತ್ಯಕ್ಷದರ್ಶನದಲ್ಲಿ ಯಾರು ತಾನೆ ಮಲಗಿರಲು ಸಾಧ್ಯ!

ಗಾವ್ರಿಕ್ ಮೇಲೆದ್ದು ಉಲ್ಲಾಸದಿಂದ ಮೈಮುರಿದ; ಷರಾಯಿಯನ್ನು ಕಾಲಿನ ಬಳಿ ಮೇಲಕ್ಕೆ ಮಡಿಸಿಕೊಂಡ. ಆ ಬಳಿಕ ಆಕಳಿಸುತ್ತ ಹೆಜ್ಜೆ ಮುಳುಗುವಷ್ಟು ನೀರಿಗೆ ಇಳಿದ.

ಅವನಿಗೇನು ಹುಚ್ಚೋ? ಚಳಿಯಲ್ಲಿ ನೀರನ್ನು ನೋಡಿದರೇನೇ ನಡುಕ ಉಂಟಾಗಬೇಕು. ಆದರೆ ಆ ಹುಡುಗನಿಗೆ ತಾನು ಏನು ಮಾಡುತ್ತಿರುವನೆಂಬುದು ಗೊತ್ತಿಲ್ಲದೆ ಇರಲಿಲ್ಲ. ನೀರು ಮೇಲೆ ನೋಡುವುದಕ್ಕೆ ಕೊರೆಯುತ್ತಿದೆ ಎನ್ನಿಸುವುದಷ್ಟೆ. ಆದರೆ ವಾಸ್ತವದಲ್ಲಿ ಅದು ಬೆಚ್ಚಗಿರುತ್ತದೆ. ಏನಿಲ್ಲದಿದ್ದರೂ ಹೊರಗಿನ ಗಾಳಿಗಿಂತ ಹೆಚ್ಚು ಬೆಚ್ಚಗಿರುತ್ತದೆ. ಆದುದರಿಂದ ಅವನು ತನ್ನ ಕಾಲುಗಳನ್ನು ಬೆಚ್ಚಗೆ ಮಾಡಿಕೊಳ್ಳುತ್ತಿದ್ದನಲ್ಲದೆ ಬೇರೆ ಅಲ್ಲ.

ಅನಂತರ ಅವನು ಮುಖ ತೊಳೆದುಕೊಂಡ. ನೀರಿನ ಬಳಿ ಮುಖ ಇಟ್ಟುಕೊಂಡು ಜೋರಾಗಿ ಒಂದು ಸಲ ಸಿಂಬಳವನ್ನು ಸೀತ. ಆಗ ದಡದ ಬಳಿ ಶಾಂತವಾಗಿ ನಿದ್ರಿಸುತ್ತಿದ್ದ ದಪ್ಪತಲೆಯ ಮರಿಮೀನುಗಳಲ್ಲಿ ಹಲವು ಆಚೀಚೆ ಕಡೆಗೆ ಚದುರಿ ಆಳವಾದ ನೀರಿನೊಳಕ್ಕೆ ಈಜಿಕೊಂಡು ಹೊರಟುಹೋದುವು.

ಆಕಳಿಸುತ್ತ ಅರೆಗಣ್ಣಿನಿಂದ ಸೂರ್ಯನನ್ನು ನೋಡುತ್ತ ನಿಂತಿದ್ದ ಹಾಗೆ ತನ್ನ ಷರಟಿನ ತುದಿಯಿಂದ ಮುಖವನ್ನು ಒರಸಿಕೊಂಡ. ನಸುನೀಲಿಗೆಂಪಿನ ಮೂಗಿನಿಂದ ಕೂಡಿ ಸಣ್ಣ ಚುಕ್ಕಿಗಳಿಂದ ಅಲಂಕೃತವಾಗಿದ್ದ ಆ ಚಿಕ್ಕ ಮುಖವು ಸಿಪ್ಪೆಸುಲಿದ ಹಸಿಯ ಆಲೂಗೆಡ್ಡೆಯಂತೆ ಶೋಭಿಸಿತು.

"ಉರ್, ಉರ್" ಎಂದು ಗಾವ್ರಿಕ್ ದೊಡ್ಡವರಂತೆ ಗೊಣಗುಟ್ಟಿದ. ತನ್ನ ಬಾಯಿಯ ಮುಂದುಗಡೆಯಲ್ಲಿ ನಿಧಾನವಾಗಿ ಶಿಲುಬೆಯ ಆಕಾರದಂತೆ ಕೈಯಿಂದ ಸನ್ನೆಮಾಡಿಕೊಂಡ. ಅವನ ಬಾಯಲ್ಲಿ ಮುಂದಿನ ಸಾಲಿನ ಎರಡು ಹಲ್ಲುಗಳು ಬಿದ್ದು ಹೋಗಿದ್ದುದರಿಂದ ಆ ಮುಖಕ್ಕೆ ಒಂದು ಲಕ್ಷಣ ಬಂದಿತ್ತು. ಅವನು ಅಂಗಿಯನ್ನು ಕೈಗೆ ತೆಗೆದುಕೊಂಡ. ಒಡೆಸ್ಸ ಮೀನುಗಾರರ ಕೇರಿಯಲ್ಲಿ ಒಲೆದಾಡಿಕೊಂಡು ಗುಡ್ಡದ ಮೇಲಕ್ಕೆ ಹೊರಟ. ಒತ್ತಾಗಿ ಬೆಳೆದಿದ್ದ ಕಳೆಗಳ ನಡುವೆ ದಾರಿಮಾಡಿಕೊಂಡು ನಡೆದ. ಅವನ ಒದ್ದೆಯಾದ ಕಾಲುಗಳ ಮೇಲೂ ಷರಾಯಿಯ ಮೇಲೂ ಹಳದಿಯ ಪುಷ್ಪ ಪರಾಗವು ಉದುರಿತು.

ಜೇಡಿಪದರಗಲ್ಲಿನ ಹಳುಕುಗಳಿಂದ ಚುಕ್ಕೆಗಳಂತೆ ಅಲ್ಲಲ್ಲಿ ಹೊಳೆಯುತ್ತಿದ್ದ ಕೆಂಪು ಮಣ್ಣಿನ

ಗುಡ್ಡವೊಂದರ ಮೇಲೆ ಸಮುದ್ರದ ದಡದಿಂದ ಸುಮಾರು ಮೂವತ್ತು ಹೆಜ್ಜೆಗಳಷ್ಟು ದೂರದಲ್ಲಿ ಹಳೆಯ ಸಾಮಾನುಗಳನ್ನು ಒಟ್ಟಿಗೆ ಸೇರಿಸಿ ಒಡ್ಡೊಡ್ಡಾಗಿ ರಾಶಿ ಹಾಕಿದಂತಿದ್ದ ಒಂದು ಹುಲ್ಲು ಜೋಪಡಿ ಇದ್ದಿತು. ಅದಕ್ಕೆ ಜೇಡಿಮಣ್ಣಿನ ಚಪ್ಪಟೆಯಾದ ಚಾವಣಿಯಿದ್ದಿತು. ಆ ಚಾವಣಿಯ ಮೇಲೆ ಕಳೆಗಳೂ ಟೊಮಾಟೋ ಗಿಡಗಳೂ ಬೆಳೆದಿದ್ದುವು.

ಅಜ್ಜ ಬದುಕಿದ್ದಾಗ ಈಸ್ಟರ್ ಹಬ್ಬ ಮತ್ತು ಯೇಸುಕ್ರಿಸ್ತನ ಪುಣ್ಯದಿನ—ಹೀಗೆ ವರ್ಷಕ್ಕೆ ಎರಡು ಬಾರಿ ತಪ್ಪದೆ ಅದಕ್ಕೆ ಸುಣ್ಣ ಬಳಿಯುತ್ತಿದ್ದಳು. ಗುಡಿಸಿಲಿನ ಬಡತನ ನೋಡುಪವರ ಕಣ್ಣಿಗೆ ಸ್ವಲ್ಪವಾದರೂ ಮರೆಯಾಗಿರಲಿ ಎಂದು ಅವಳು ಹಾಗೆ ಮಾಡುತ್ತಿದ್ದಂತಿತ್ತು. ಅಜ್ಜ ಸತ್ತು ಮೂರು ವರ್ಷಗಳು ಸಂದು ಹೋದುವು. ಅಂದಿನಿಂದ ಆ ಗುಡಿಸಲು ಸುಣ್ಣ ಬಣ್ಣವನ್ನು ಕಂಡಿರ ಲಿಲ್ಲ. ಹಚ್ಚಿದ್ದ ಸುಣ್ಣ ಅಳಿಸಿಹೋಗಿ ಗೋಡೆಗಳು ಕಪ್ಪು ತಿರುಗುತ್ತಿದ್ದುವು. ಆದರೂ ಹಳೆಯ ಮರದ ಹಲಗೆಗಳ ಮೇಲೆ ಅಲ್ಲಲ್ಲಿ ಸುಣ್ಣ ಅಲ್ಪಸ್ವಲ್ಪ ಅಂಟಿಕೊಂಡಿದ್ದು ಆ ಹಿಂದಿನ ವೈಭವದ ನೆನಪನ್ನು ಮರುಕಳಿಸುವಂತೆ ಮಾಡುತ್ತಿತ್ತು. ಇದು ಮೇಲಿಂದ ಮೇಲೆ ಅಜ್ಜಿಯನ್ನೂ ಅವಳ ಜೀವನದ ಸ್ಮೃತಿಯನ್ನೂ ಗಾವ್ರಿಕನಿಗೆ ಜ್ಞಾಪಿಸುತ್ತಿದ್ದುವು, ಗೋಡೆಯ ಸುಣ್ಣವೇ ಅಜ್ಜಿಯ ಆ ಜೀವನಕ್ಕಿಂತ ಹೆಚ್ಚು ಶಾಶ್ವತವೋ ಎನ್ನಿಸಿದ್ದರೆ ಆಶ್ಚರ್ಯವಲ್ಲ.

ಗಾವ್ರಿಕ್ ತಬ್ಬಲಿಯಾಗಿದ್ದ. ಅವನ ತಂದೆಯ ಜ್ಞಾಪಕವೇ ಅವನಿಗಿರಲ್ಲ. ಅವನ ತಾಯಿ ಯನ್ನು ಎಲ್ಲೋ ನೋಡಿದ್ದಂತೆ ಅಸ್ಪಷ್ಟ ನೆನಪು ಮಸಕು ಮಸಕಾಗಿ ಅವನ ಕಣ್ಣ ಮುಂದೆ ಸುಳಿಯುತ್ತಿತ್ತು. ಆವಿಯೇಳುತ್ತಿದ್ದ ನೀರಿನ ಪಾತ್ರೆಯನ್ನು ಹಿಡಿದ ಗುಲಾಬಿ ಬಣ್ಣದ ಕೈಗಳು, ನಯವಾದ ದುಂಡು ಬೆರಳಿನಲ್ಲಿ ಒಂದು ಮುದ್ರೆಯುಂಗುರ, ತಲೆಗೂದಲಿಗೆ ಸಿಕ್ಕಿಸಿದ್ದ ಲೋಹದ ಬಾಚಣಿಗೆಗಳ ಸುತ್ತ ಹಾರಾಡುತ್ತ ಕಾಮನ ಬಿಲ್ಲಿನ ಬಣ್ಣವನ್ನು ಚೆಲ್ಲುತ್ತಿದ್ದ ಸಾಬೂನಿನ ಗುಳ್ಳೆಗಳ ಸಮೂಹ—ಇವಿಷ್ಟೇ ಅವನ ಸ್ಮರಣೆಯಲ್ಲಿ ಉಳಿದಿದ್ದುವು.

ಅಜ್ಜ ಆಗಲೇ ಎದ್ದಿದ್ದ. ಕಳೆಗಳಿಂದ ತುಂಬಿ ಕಸ ಕಡ್ಡಿಗಳು ಹರಡಿದ್ದ ತರಕಾರಿ ಮಡಿಯ ನಡುವೆ ಅವನು ನಡೆದಾಡುತ್ತಿದ್ದ. ಅಲ್ಲಿ ಒಂದೆರಡು ಕುಂಬಳದ ಹೂವುಗಳು ಎದ್ದು ಕಾಣುತ್ತಿದ್ದುವು. ಅವು ಕಿತ್ತಲೆ ಬಣ್ಣದ ದೊಡ್ಡ ಹೂವುಗಳಾಗಿದ್ದುವು. ಆ ಹೂವುಗಳ ಮೇಲೆ ಕೂದಲಿನಂತೆ ಜುಂಗುಗಳು ಎದ್ದು ನಿಂತಿದ್ದುವು. ಆ ಹೂವುಗಳ ಬುಡದ ಬಟ್ಟಲಿನಾಕಾರದ ಭಾಗದಲ್ಲಿ ಮಧುರ ರಸವು ತುಂಬಿಕೊಂಡಿತ್ತು.

ಅಜ್ಜ ಟೊಮಾಟೋ ಹಣ್ಣುಗಳನ್ನು ಹುಡುಕಿ ಗಿಡದಿಂದ ಕಿತ್ತು ತನ್ನ ಷರಟಿನ ಮಡಲಿಗೆ ಹಾಕಿಕೊಳ್ಳುತ್ತಿದ್ದ. ಒಗೆದೂ ಒಗೆದೂ ಆ ಷರಟು ಅದರ ಮೊದಲಿನ ಬಣ್ಣವನ್ನು ಕಳೆದು ಕೊಂಡಿತ್ತು. ಈಗ ಬೆಳಗಿನ ಸೂರ್ಯನ ಹೊಂಬಿಸಿಲು ಅದರ ಮೇಲೆ ಬಿದ್ದು ಅದು ನಸುಗೆಂಪಾಗಿ ಕಾಣುತ್ತಿತ್ತು. ಮೇಲಕ್ಕೆ ಎತ್ತಿದ್ದ ಷರಟು ಮತ್ತು ಉಬ್ಬಿದ ಷರಾಯಿಗಳ ನಡುವೆ ಹೊಕ್ಕಳಿನ ಕಪ್ಪು ಕುಳಿಯನ್ನು ಮಧ್ಯದಲ್ಲಿ ಪ್ರದರ್ಶಿಸುತ್ತಿದ್ದ ಕೃಶವಾದ ಕಂದು ಬಣ್ಣದ ಹೊಟ್ಟೆಯು ಕಾಣಿಸುತ್ತಿತ್ತು.

ಗಿಡಗಳಲ್ಲಿ ಎಲ್ಲೋ ಕೆಲವು ಟೊಮಾಟೋ ಹಣ್ಣುಗಳು ಮಾತ್ರ ಇದ್ದುವು. ಅದುವರೆಗೆ ಬಿಟ್ಟಿದ್ದ ಹಣ್ಣುಗಳೆಲ್ಲವನ್ನೂ ಅವರೇ ಭಕ್ಷಿಸಿ ಮುಗಿಸಿಯಾಗಿತ್ತು. ಆದರೂ ಅಜ್ಜ ಎಂಟು ಹಣ್ಣು ಗಳನ್ನು ಹೇಗೋ ಹುಡುಕಿ ತೆಗೆದಿದ್ದ. ಅಲ್ಲಿದ್ದುದೇ ಅಷ್ಟು ಎನ್ನಿ.

ನರೆಯಿಂದ ತುಂಬಿದ ತಲೆಯನ್ನೂ ನುಣ್ಣಗೆ ಬೋಳಿಸಿದ ಗಡ್ಡವನ್ನೂ ತನ್ನ ಎದೆಯ ಕಡೆಗೆ ಬಗ್ಗಿಸಿಕೊಂಡು ಆ ಮುದುಕ ನಡೆದಾಡುತ್ತಿದ್ದ. ಪಕ್ಕದಲ್ಲಿದ್ದ ಗಿಡಗಂಟೆಗಳ ನಡುವೆ ಏನಾದರೂ ದೊರೆಯಬಹುದೆಂಬ ಬಡ ಆಸೆಯಿಂದ ತನ್ನ ಬರಿಗಾಲುಗಳನ್ನು ಆಕಡೆ ಈಕಡೆ ಇಡುತ್ತ ತಿರುಗಿ ತಿರುಗಿ ಕಣ್ಣಿಟ್ಟು ಬಗ್ಗಿ ನೋಡುತ್ತಿದ್ದ. ಆದರೆ ಅಲ್ಲೇನು ಸಿಗುತ್ತದೆ, ಮಣ್ಣು!

ಕಾಲಿಗೆ ಹಳೆಯ ಬಟ್ಟೆಯ ಚೂರನ್ನು ಕಟ್ಟಿದ್ದ ಕೋಳಿಮರಿಯೊಂದು ಅಜ್ಜನ ಹಿಂದೆ ಹಿಂದೆ ಓಡುತ್ತಿತ್ತು, ಅದು ನೆಲವನ್ನು ಕೊಕ್ಕಿನಿಂದ ಕುಕ್ಕುತ್ತ ಫೆನೆಲ್ ಚಟ್ನಿಸೊಪ್ಪಿನ ಗಿಡದ ಛತ್ರಿಯಾಕಾರದ ಮೇಲುಭಾಗವು ಅಲ್ಲಾಡುವಂತೆ ಮಾಡುತ್ತಿತ್ತು.

ಅಜ್ಜನಾಗಲಿ ಮೊಮ್ಮಗನಾಗಲಿ ಬೆಳಗಿನ ಮೊದಲದರ್ಶನದಲ್ಲಿ ನಡೆದುಕೊಳ್ಳುವ ಪದ್ಧತಿಯಂತೆ ಪರಸ್ಪರ ಶುಭವನ್ನು ಕೋರಲಿಲ್ಲ. ಹಾಗೆಯೆ ಅವರು ಹಿಂದೆ ಜಗಳವಾಡಿದ್ದಿರಬೇಕೆಂದು ಅರ್ಥಮಾಡಿಕೊಳ್ಳಬೇಡಿ. ಬದಲಾಗಿ ಅವರು ಪರಮಮಿತ್ರರಾಗಿದ್ದರು. ಅಂದು ಬೆಳಗಿನಿಂದಲೇ ತಮ್ಮ ದಿನದ ದುಡಿತವೂ ಚಿಂತೆಯೂ ಆರಂಭವಾಗುವುದೆಂಬುದನ್ನು ಅವರು ಮನಗಂಡಿದ್ದರು. ಬರಿಯ ಹಾರೈಕೆಗಳಿಂದ ಒಬ್ಬರನ್ನೊಬ್ಬರು ವಂಚಿಸುವುದರಿಂದ ಏನು ಪ್ರಯೋಜನ?

"ಎಲ್ಲಾನೂ ತಿಂದು ಮುಗಿಸಿಯಾಗಿದೆ, ಇನ್ನೇನು ಉಳಿದಿದೆ ಇಲ್ಲಿ? ಎಂಟೂ ಎಂಟೇ ಟೊಮಾಟೋ, ಇದು ಈ ಪಾಪಿ ಹೊಟ್ಟೆಗೆ ಸಾಕೇ. ನಗುಪಾಟಲು!" ಎಂದು ಗೊಣಗುತ್ತ ಅಜ್ಜ ಮಾತನ್ನಾರಂಭಿಸಿದ. ಮೊನ್ನೆ ತಾನೇ ಅರ್ಧಕ್ಕೆ ನಿಲ್ಲಿಸಿದ್ದ ಸಂಭಾಷಣೆಯನ್ನು ಪುನರಾರಂಭಿಸಿದಂತಿತ್ತು ಅವನ ಮಾತಿನ ರೀತಿ.

"ಇವತ್ತು ಮೀನಿಗೆ ಹೋಗೋದುಂಟು ತಾನೆ?" ಗಾವ್ರಿಕ್ ಕಣ್ಣುಗಳನ್ನುಜ್ಜುತ್ತ ಸೂರ್ಯನನ್ನು ದೃಷ್ಟಿಸಿ ನೋಡಿದ,.

"ಹೋಗದೆ ಇದ್ದರೆ ವಿಧಿಯಿಲ್ಲ" ಎಂದು ಅಜ್ಜ ಹೇಳುತ್ತ ತರಕಾರಿ ಮಡಿಯಿಂದ ಹೊರಬಂದ.

ಗುಡಿಸಿಲಿನೊಳಕ್ಕೆ ಹೋಗಿ ಹಲಗೆಯನ್ನು ಮುಚ್ಚಿದ್ದ ಬಕೆಟ್ಟಿನಿಂದ ಶುದ್ಧವಾದ ನೀರನ್ನು ತೆಗೆದುಕೊಂಡು ನಿಧಾನವಾಗಿ ಇಬ್ಬರೂ ಕುಡಿದರು. ಮುದುಕ ಅಸಮಾಧಾನದಿಂದ ಗೊಣಗುಟ್ಟಿದ; ಹುಡುಗನೂ ಅವನಂತೆಯೇ ಗೊಣಗುಟ್ಟಿದ. ಅಜ್ಜ ತನ್ನ ನಡುಪಟ್ಟಿಯನ್ನು ಅದರ ಕೊಕ್ಕೆಯನ್ನು ಇನ್ನೊಂದು ರಂಧ್ರಕ್ಕೆ ಸಿಕ್ಕಿಸಿ ಬಿಗಿಮಾಡಿಕೊಂಡ; ಮೊಮ್ಮಗನೂ ಹಾಗೆಯೇ ಮಾಡಿದ.

ಅಜ್ಜ ಹಿಂದಿನದಿನ ಉಳಿಸಿಟ್ಟಿದ್ದ ರೊಟ್ಟಿಯ ಚೂರನ್ನು ಗೂಡಿನಿಂದ ತೆಗೆದುಕೊಂಡು ಚುಕ್ಕೆಗಳಿದ್ದ ಒಂದು ಕರವಸ್ತ್ರದಲ್ಲಿ ಆ ಟೊಮಾಟೊ ಹಣ್ಣುಗಳೊಡನೆ ಸೇರಿಸಿ ಕಟ್ಟಿದ. ಬಳಿಕ ಒಂದು ಸಣ್ಣಮರದಬುರುಡೆಯಲ್ಲಿ ನೀರನ್ನು ತುಂಬಿಕೊಂಡು ಕಂಕುಳಿನಲ್ಲಿ ಸಿಕ್ಕಿಸಿಕೊಂಡ. ಗುಡಿಸಿಲಿನ ಹೊರಕ್ಕೆ ಬಂದು ಬಾಗಿಲಿಗೆ ಬೀಗ ತಗಲುಹಾಕಿದ. ಇದು ಅನಾವಶ್ಯಕವಾದ ಮುನ್ನೆಚ್ಚರಿಕೆ ಕ್ರಮವಾಗಿತ್ತು, ಆ ಗುಡಿಸಿಲಿನಲ್ಲಿ ಕದಿಯಲು ಯೋಗ್ಯವಾದ ವಸ್ತು ಇದ್ದದ್ದೂ ಅಷ್ಟರಲ್ಲೇ ಇದೆ. ಅಲ್ಲದೆ ತಿರುಕರನ್ನು ಸುಲಿಯುವಂಥ ನೀಚಕೃತ್ಯಮಾಡುವವರು ತಾನೆ ಯಾರಿದ್ದಾರೆ ಹೇಳಿ.

ಚಾವಣಿಯ ಮೇಲೆ ಇಟ್ಟಿದ್ದ ಹುಟ್ಟುಗಳನ್ನು ಗಾವ್ರಿಕ್ ಎತ್ತಿಕೊಂಡು ತನ್ನ ಪುಟ್ಟ

ದಾದರೂ ಬಲಿಷ್ಠವಾದ ಹೆಗಲುಗಳ ಮೇಲೆ ಏರಿಸಿಕೊಂಡ.

ಅಜ್ಜ ಮತ್ತು ಮೊಮ್ಮಗನಿಗೆ ಬಿಡುವಿಲ್ಲದಷ್ಟು ಕೆಲಸವಿದ್ದ ದಿನ ಅದು. ಎರಡು ದಿನಗಳ ಕೆಳಗೆ ಬಿರುಗಾಳಿ ಬೀಸಿತ್ತು. ಅಲೆಗಳು ಗಾಳಗಳ ಹುರಿಯನ್ನು ಕಿತ್ತುಹಾಕಿದ್ದುವು. ಮೀನು ಗಳು ಗಾಳಗಳ ಹತ್ತಿರ ಬರದೆ ದೂರದಲ್ಲೇ ಉಳಿದುಕೊಂಡಿದ್ದುವು. ಅವರಿಗೆ ಮೀನೇ ಸಿಕ್ಕಿರ ಲಿಲ್ಲ. ಕೈಯಲ್ಲಿ ಚಿಕ್ಕಾಸೂ ಉಳಿದಿರಲಿಲ್ಲ.

ಹಿಂದಿನ ದಿನ ಸಮುದ್ರ ಶಾಂತವಾಗಿತ್ತು, ಸಂಜೆ ಗಾಳದ ಸಾಲನ್ನು ಹಾಕಿಬಂದಿದ್ದರು. ಇಂದು ಅದನ್ನು ಎಳೆದು ಮೀನುಗಳನ್ನು ಬಿಡಿಸಿಕೊಂಡು ಪೇಟೆಗೆ ತೆಗೆದುಕೊಂಡು ಹೋಗಬೇಕು; ಪುನಃ ಗಾಳಗಳಿಗೆ ಸೀಗಡಿ ಮೊದಲಾದ ಆಕರ್ಷಕ ಎರೆಯನ್ನು ಸಿಕ್ಕಿಸಬೇಕು; ಸಾಯಂಕಾಲ ಪುನಃ ತಪ್ಪದೆ ಅವುಗಳನ್ನು ಸಮುದ್ರದಲ್ಲಿ ಹರಡಬೇಕು, ಇಲ್ಲದಿದ್ದರೆ ಈ ಒಳ್ಳೆ ಹವಾದ ಫಲ ಕೈತಪ್ಪಿಹೋಗುವುದು.

ಸಣ್ಣ ಕಲ್ಲುಗಳು ಹರಡಿದ್ದ ದಡದಮೇಲೆ ದೋಣಿಯನ್ನು ಎಳೆದುಕೊಂಡು ಹೋಗಿ ಅಜ್ಜ ಮೊಮ್ಮಗ ಇಬ್ಬರೂ ಎಚ್ಚರಿಕೆಯಿಂದ ಸಮುದ್ರಕ್ಕೆ ತಳ್ಳಿದರು.

ಗಾವ್ರಿಕ್ ಮೊಣಕಾಲುದ್ದ ನೀರಿನಲ್ಲಿ ನಿಂತುಕೊಂಡು ದೋಣಿಯಾಕಾರದ ಚಿಕ್ಕರಂಧ್ರ ಗಳಿದ್ದ ಮೀನುಶೇಖರಣೆಯ ಡಬ್ಬವನ್ನು ದೋಣಿಯ ಹಿಂದುಗಡೆ ಒಳಕ್ಕೆ ಇಟ್ಟು ದೋಣಿಯನ್ನು ಬಲವಾಗಿ ತಳ್ಳಿದ. ಮೂರು ನಾಲ್ಕು ಹೆಜ್ಜೆಗಳಷ್ಟು ದೂರ ಅದರ ಜತೆಯಲ್ಲೇ ಓಡಿ ಹೋಗಿ ದೋಣಿಯ ಮೇಲಕ್ಕೆ ನೆಗೆದು ಅದರ ಅಂಚಿನಮೇಲೆ ಮುಖವಡಿಯಾಗಿ ಮಲಗಿದ. ಅವನ ಕಾಲುಗಳು ದೋಣಿಯಿಂದ ಹಿಂದಕ್ಕೆ ಸರಿಯುತ್ತಿದ್ದ ನೀರಿನಮೇಲೆ ತೂಗಾಡುತ್ತಿದ್ದುವು. ಕಾಲು ಗಳಿಂದ ಥಳಥಳಿಸುತ್ತಿದ್ದ ನೀರಿನ ತೊಟ್ಟುಗಳು ಕೆಳಕ್ಕೆ ಉದುರುತ್ತಿದ್ದುವು. ಸುಮಾರು ಐದು ಗಜಗಳಷ್ಟುದೂರ ದೋಣಿ ಮುಂದಕ್ಕೆ ಹೋದಮೇಲೆ ಅವನು ತೆವಳಿಕೊಂಡು ಅಜ್ಜನ ಬಳಿಯ ಪೀಠಕ್ಕೆ ಹೋಗಿ ಹುಟ್ಟನ್ನು ಕೈಗೆ ತೆಗೆದುಕೊಂಡ.

ಇಬ್ಬರೂ ಒಂದೊಂದು ಹುಟ್ಟನ್ನು ಹಾಕುತ್ತಿದ್ದರು. ಹೀಗೆ ಒಬ್ಬೊಬ್ಬರು ಒಂದೊಂದು ಹುಟ್ಟು ಹಾಕುವುದು ಸರಾಗ. ಅಲ್ಲದೆ ಅದರಲ್ಲಿ ಯಾರು ಯಾರನ್ನು ಮೀರಿಸುತ್ತಾರೆ ಎಂಬುದೂ ಕೂಡ ತಮಾಷೆಯಾಗಿರುತ್ತದೆ. ಆದರೆ ಅವರಿಬ್ಬರೂ ಔದಾಸೀನ್ಯದಿಂದ ಮುಖ ಗಂಟು ಹಾಕಿ ಕೊಂಡಿದ್ದರು. ಅಲ್ಲದೆ ಮೇಲಿಂದ ಮೇಲೆ ಗೊಣಗಿಕೊಳ್ಳುತ್ತಿದ್ದರು.

ಗಾವ್ರಿಕನ ಅಂಗೈಗಳಲ್ಲಿ ಹಿತಕರವಾದ ಶಾಖ ಉತ್ಪತ್ತಿಯಾಯಿತು. ಅವನ ಹುಟ್ಟಿಯ ಅರ್ಧಭಾಗ ಸಮುದ್ರದ ತೆಳುಹಸುರು ನೀರಿನಲ್ಲಿ ಮುಳುಗಿದ್ದಾಗ ಅದು ಬಗ್ಗಿದಂತೆ ಕಂಡು ಬಂದು ಮುರಿದಿದೆಯೋ ಎಂಬ ಭ್ರಾಂತಿಯನ್ನುಂಟುಮಾಡಿತು. ಅಗಲ ಕಡಮೆಯಾಗಿ ಉದ್ದ ವಾಗಿದ್ದ ಹುಟ್ಟು ಹಿಂದಕ್ಕೆ ಸಣ್ಣ ಸಣ್ಣ ನೀರು ಸುಳಿಗಳನ್ನು ಕಳುಹಿಸುತ್ತ ಬಿಗಿಯಾಗಿ ಆಡು ತ್ತಿತ್ತು. ದೋಣಿಯು ಒಂದು ಸಲ ಬಲಗಡೆಗೆ, ಇನ್ನೊಂದು ಸಲ ಎಡಗಡೆಗೆ ಒಲೆಯುತ್ತ ಚಿಮ್ಮಿದಂತೆ ಮುಂದು ಮುಂದಕ್ಕೆ ಹೋಗುತ್ತಿತ್ತು. ಮೊದಲು ಅಜ್ಜ ಆ ಬಳಿಕ ಮೊಮ್ಮಗ ತಮ್ಮ ಹುಟ್ಟುಗಳನ್ನು ಶಕ್ತಿಬಿಟ್ಟು ಎಳೆಯುತ್ತ ಅದರ ಕಡೆಗೆ ವಾಲುತ್ತಿದ್ದರು.

'ಉಫ್' ಎಂದು ತನ್ನ ಶಕ್ತಿಯನ್ನೆಲ್ಲ ಬಿಟ್ಟು ಅಜ್ಜ ಹುಟ್ಟನ್ನು ಎಳೆದ. ಗರ್ರನೆ ದೋಣಿ ಎಡಗಡೆಗೆ ತಿರುಗಿತು. ಗಾವ್ರಿಕ್ ಇನ್ನೂ ಗಟ್ಟಿಯಾಗಿ 'ಊಫ್' ಎಂದವನೇ ಹುಟ್ಟನ್ನು ಎಳೆದ.

ದೋಣಿ ದಿಕ್ಕನ್ನು ಬದಲಾಯಿಸಿ ಬಲಗಡೆಗೆ ತಿರುಗಿತು. ಅಜ್ಜ ತನ್ನ ಕಾಲುಗಳನ್ನು ಬಿಗಿಯಾಗಿ ಅದುಮಿಟ್ಟುಕೊಂಡು ಜೋರಾಗಿ ಹುಟ್ಟನ್ನು ಎಳೆದ. ಮೊಮ್ಮಗ ಸೋಲುತ್ತಾನೆಯೇ! ತನ್ನ ಎರಡು ಕಾಲುಗಳನ್ನೂ ಪೀಠಕ್ಕೆ ಗಟ್ಟಿಯಾಗಿ ಒದೆಕೊಟ್ಟುಕೊಂಡು ತುಟಿ ಕಚ್ಚಿದ.

"ನನ್ನನ್ನು ಸೋಲಿಸುವುದಕ್ಕೆ ನಿನ್ನ ಕೈಲಾಗುವುದಿಲ್ಲ ಅಜ್ಜ" ಎಂದು ಹಲ್ಲುಕಚ್ಚಿಕೊಂಡು ಗಾವ್ರಿಕ್ ಹೇಳಿದ. ಅವನ ಹಣೆಯ ಮೇಲಿನಿಂದ ಬೆವರು ಸುರಿಯುತ್ತಿತ್ತು.

ಅಜ್ಜ ಗೊಣಗಿದ. ಅವನು ನಿಟ್ಟುಸಿರು ಬಿಡುತ್ತಿದ್ದ. "ನೋಡೋಣ ಯಾರು ಗೆಲ್ತಾರೆ ಅಂತ. ಹಟ."

"ನನ್ನಾಣೆಗೂ ನಿನ್ನ ಕೈಲಾಗೊದಿಲ್ಲ ಅಜ್ಜ."

"ನೋಡೋಣವಂತೆ."

"ನೋಡ್ತಾ ಇರು."

ಅಜ್ಜ ತನ್ನ ಶಕ್ತಿ ಮೀರಿ ಹುಟ್ಟಿನ ಮೇಲೆ ಭಾರವನ್ನೆಲ್ಲ ಬಿಟ್ಟು ಎಳೆದರೂ ಏನೂ ಪ್ರಯೋಜನವಾಗಲಿಲ್ಲ. ಅವನ ಹಿಂದಿನ ಶಕ್ತಿ ಎಲ್ಲಿ ಅಡಗಿ ಹೋಗಿತ್ತೋ! ಮೊಮ್ಮಗ ಈಗ ತಕ್ಕಮಟ್ಟಿಗೆ ಬೆಳೆದು ಬಿಟ್ಟಿದ್ದಾನೆ. ಅವನಿನ್ನೂ ಸಣ್ಣವನು ನಿಜ. ಆದರೆ ಹಿಡಿದ ಪಟ್ಟುಮಾತ್ರ ಬಿಡುವವನಲ್ಲ ಅವನು. ಅಜ್ಜನಿಗೇ ಸವಾಲು ಹಾಕುವಷ್ಟು ಧೈರ್ಯ ಅವನಿಗೀಗ!

ಅಜ್ಜ ಬಿಳಿಯ ಕೂದಲುಗಳಿಂದ ತುಂಬಿದ್ದ ಹುಬ್ಬಿನ ಕೆಳಗಡೆಯಿಂದ ಬಿರುಸಿನ ದೃಷ್ಟಿಯನ್ನು ಪಕ್ಕದಲ್ಲಿದ್ದ ಹುಡುಗನ ಕಡೆಗೆ ಬೀರಿದ. ಆದರೆ ಆ ಮುದುಕನ ನೀರು ತುಂಬಿದ್ದ ಕಣ್ಣುಗಳಲ್ಲಿ ಕೋಪಕ್ಕೆ ಬದಲು ಹರ್ಷಾಶ್ಚರ್ಯಗಳನ್ನು ಕಾಣಬಹುದಾಗಿತ್ತು.

ಯಾರೂ ಒಬ್ಬರನ್ನೊಬ್ಬರು ಮಾತಾಡಿಸಲಾರದೆ ಹೋದರು. ದಡಕ್ಕೆ ಸುಮಾರು ಒಂದು ಮೈಲಿ ದೂರದಲ್ಲಿ ತಾವು ಮೀನು ಹಿಡಿಯಲು ಗಾಳಗಳ ಹುರಿಯ ಸಾಲನ್ನು ಒಡ್ಡಿದ್ದ ಸ್ಥಳಕ್ಕೆ ದೋಣಿಯನ್ನು ನಡೆಸಿಕೊಂಡು ಬಂದರು. ಗಾಳಗಳ ಹುರಿಯ ಸಾಲನ್ನು ಸೂಚಿಸುವ ತೇಲು ಬೆಂಡಿಗೆ ಸಿಕ್ಕಿಸಿದ್ದ ಸಣ್ಣ ಸಣ್ಣ ಮಾಸಲು ಬಾವುಟಗಳು ನೀರಿನ ಅಲೆಗಳ ಮೇಲೆ ಕೆಳಕ್ಕೂ ಮೇಲಕ್ಕೂ ನರ್ತಿಸುತ್ತಿದ್ದುವು.

ಇಷ್ಟು ಹೊತ್ತಿಗೆ ಮೀನು ಬೇಟೆಗೆ ಹೊರಟ ಬೆಸ್ತರ ದೋಣಿಗಳಿಂದ ಸಮುದ್ರ ತುಂಬಿ ಹೋಗಿತ್ತು.

ಕಡಲ ಸುಂದರಿಯಾದ 'ನದ್ಯ ಮತ್ತು ವೀರ' ಎಂಬ ಹೊಸ ದೋಣಿಯು ಹಾಯಿಯನ್ನು ಪೂರ್ತಿ ಏರಿಸಿಕೊಂಡು ಇವರ ಪಕ್ಕದಲ್ಲೇ ಹೋಯಿತು. ಪರಿಷ್ಕಾರವಾಗಿಯೂ ಭವ್ಯವಾಗಿಯೂ ಹಲಗೆಗಳನ್ನು ಸೇರಿಸಿದ್ದ ಆ ದೋಣಿಯು ತಳದ ಮೂರನೇ ಒಂದು ಭಾಗದಷ್ಟು ನೀರಿನಿಂದ ಮೇಲಕ್ಕೆದ್ದು ಅಲೆಗಳಿಗೆ ಹೊಡೆಯುತ್ತ ಮುಂದೆ ಹೋಗುತ್ತಿದ್ದುದನ್ನು ಕಾಣಬಹುದಾಗಿತ್ತು.

'ಮಾಲಿ ಫಾಂಟಾನ್'ನ ಮೀನುಗಾರ ಫೇದ್ಯ ಸೂರ್ಯಪುಷ್ಪದ ಕಪ್ಪು ಬೀಜವನ್ನು ತುಟಿಯಲ್ಲಿ ಕಚ್ಚಿಕೊಂಡು ದೋಣಿಯ ಹಿಂಭಾಗದಲ್ಲಿ ಒಡ್ಡೊಡ್ಡಾಗಿ ಕೈಕಾಲು ಚಾಚಿಕೊಂಡು ಬಿದ್ದುಕೊಂಡಿದ್ದ. ಗಾವ್ರಿಕನಿಗೆ ಇವನ ಪರಿಚಯ ಚೆನ್ನಾಗಿತ್ತು. ಕಡಲುನೀಲಿ ಬಣ್ಣದ ಟೋಪಿಯನ್ನು ಅವನು ಧರಿಸಿದ್ದ. ಅದರ ಮೇಲೆ ಲಂಗರಿನ ಆಕಾರದ ಗುಂಡಿಗಳಿದ್ದುವು. ಆ ಟೋಪಿಯ ನೆಳಲಿನಲ್ಲಿ ಒಂದು ಜತೆ ನಿಸ್ತೇಜ ನಯನಗಳು ಹೊರಕ್ಕೆ ನೋಟವನ್ನು ಕಳುಹಿಸುತ್ತಿದ್ದುವು.

ಕಪ್ಪು ಮುಂಗುರುಳೊಂದು ಕಣ್ಣಿನ ಮೇಲೆ ಇಳಿಬಿದ್ದಿತ್ತು. ಫೇದ್ಯ ಚುಕ್ಕಾಣಿ ಹಿಡಿಕೆಯ ಮೇಲೆ ಬೆನ್ನನ್ನು ಆತುಕೊಂಡು ಮಲಗಿದ್ದ. ಶೋಚನೀಯ ಸ್ಥಿತಿಯಲ್ಲಿದ್ದ ಅಜ್ಜನ ದೋಣಿಯ ಕಡೆಗೆ ಒಂದು ದಯಾದೃಷ್ಟಿಯನ್ನು ಅನುಗ್ರಹಿಸುವಷ್ಟು ಕೂಡ ಅವನಲ್ಲಿ ಸಹಾನುಭೂತಿ ಇರಲಿಲ್ಲ.

ಫೇದ್ಯನ ತಮ್ಮನಾದ ವಾಸ್ಯ ಗೀರಿನ ಸಣ್ಣ ತೋಳಿನ ಅಂಗಿಯನ್ನು ಧರಿಸಿದ್ದ. ಗಾಳದ ಹುರಿಯನ್ನು ಸುತ್ತುತ್ತಿದ್ದ ವಾಸ್ಯ ಗಾವ್ರಿಕನನ್ನು ಕಂಡೊಡನೆ ಅದನ್ನು ನಿಲ್ಲಿಸಿದ; ಅಲ್ಲದೆ ಬಿಸಿಲು ಕಣ್ಣಿಗೆ ಬೀಳದಂತೆ ಸೂರ್ಯನ ಎದುರಿಗೆ ಹಣೆಯ ಮೇಲುಗಡೆ ತನ್ನ ಕೈಯನ್ನು ಮರೆ ಮಾಡಿಕೊಂಡು "ಲೋ ಗಾವ್ರಿಕ್ ತಾತ! ಸಡಿಲ ಬಿಡಬೇಡ. ಬಿಗಿಯಾಗಿ ನಿಲ್ಲು. ದೋಣಿ ಮುಳುಗೋದಿಲ್ಲ" ಎಂದು ಗಟ್ಟಿಯಾಗಿ ಕೂಗಿ ಹೇಳಿದ.

'ನದ್ಯ ಮತ್ತು ವೀರ' ದೋಣಿಯು ಅಜ್ಜ ಮತ್ತು ಮೊಮ್ಮಗ ಇಬ್ಬರ ಮೇಲೂ ತುಂತುರು ಮಳೆಯನ್ನು ಎರಚುತ್ತ ಮುಂದಕ್ಕೆ ಧಾವಿಸಿತು. ಹೀಗೆ ಇವರನ್ನು ರೇಗಿಸಬೇಕೆಂಬ ಭಾವನೆಯೇನೂ ಅವರಿಗಿರಲಿಲ್ಲ. ಅದು ಸ್ನೇಹಯುತವಾಗಿ ಪ್ರದರ್ಶಿಸಿದ ವಿನೋದವಾಗಿತ್ತು. ಆದರೂ ಅಜ್ಜ ಒಂದೇ ಒಂದು ಮಾತೂ ಕಿವಿಗೆ ಬೀಳದವನಂತೆ ನಟಿಸಿದ. ನಿಜವಾಗಿ ಅವನ ಮನಸ್ಸಿನಾಳದಲ್ಲಿ ನೋವಾಗಿತ್ತು.

ಇದಕ್ಕೆ ಕಾರಣವಿಲ್ಲದೆ ಇರಲಿಲ್ಲ. ಅಜ್ಜನೂ ಒಳ್ಳೆಯ ಸೊಗಸಾದ ದೋಣಿಯನ್ನು ಇಟ್ಟು ಕೊಂಡಿದ್ದ ದಿನವೊಂದಿತ್ತು. ಅದಕ್ಕೆ ಹೊಸದಾದ ಭರ್ಜರಿ ಹಾಯಿಯನ್ನೇ ಹೊಂದಿಸಿದ್ದ. ಆಗ ಅಜ್ಜ ಒಳ್ಳೆ ಜಾತಿಯ ಮಾಕರೆಲ್ ಮೀನುಗಳನ್ನೇ ಷಿಕಾರಿ ಮಾಡುತ್ತಿದ್ದ. ಆಗ ಅವನು ರಾಶಿರಾಶಿ ಮೀನುಗಳನ್ನು ಹಿಡಿಯುತ್ತಿದ್ದ. ಇನ್ನೂರು ಮುನ್ನೂರು ಮೀನುಗಳನ್ನು ಅಜ್ಜ ಪೇಟೆಗೆ ತೆಗೆದುಕೊಂಡು ಹೋಗಿದ್ದ ದಿನಗಳೆಷ್ಟೋ. ಆದರೆ ಈಗ ಅವನ ಬದುಕು ಬರಿದಾಗಿತ್ತು. ಈಗ ಅವನ ಪಾಲಿಗೆ ಉಳಿದಿರುವುದೆಲ್ಲ ಒಂದು ಭಿಕಾರಿಯ ಜೋಪಡಿ, ಮತ್ತು ಹಾಯಿಯಿಲ್ಲದ ಪುರಾತನ ದೋಣಿ. ಅಜ್ಜಿಗೆ ಕಾಯಿಲೆಯಾಗಿದ್ದಾಗ ವೈದ್ಯರಿಗೆ ಅವರ ರುಸುಮನ್ನು ಸಲ್ಲಿಸಲು ಆ ಹಾಯಿ ಹೊರಟುಹೋಗಿತ್ತು. ಆದರೆ ಎಲ್ಲ ವ್ಯರ್ಥವಾಯಿತು, ಅಜ್ಜಿ ಸಾಯುವುದನ್ನು ತಪ್ಪಿಸಲಾಗಲಿಲ್ಲ. ಇನ್ನು ಈಗ ಅಂಥ ಹಾಯಿಯನ್ನು ಪುನಃ ಪಡೆಯುವುದು ಸಾಧ್ಯವೇ ಇರಲಿಲ್ಲ. ಹಾಯಿಯಿಲ್ಲದೆ ಇದೆಂಥ ಮೀನು ಹಿಡಿಯಾಟ? ಇದೂ ಒಂದು ಪರಿಹಾಸ್ಯ. ಗಾಳಗಳನ್ನು ಹಾಕಿ ಸಣ್ಣ ಸಣ್ಣ ಮೀನುಗಳನ್ನು ಹಿಡಿಯುವುದು! ಥೂ!

ಅಜ್ಜನ ಮನಸ್ಸಿನಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಗಾವ್ರಿಕ್ ಊಹಿಸಿದರೂ ಕೂಡ ಹೊರಗಡೆ ಅದನ್ನು ತೋರಗೊಡಲಿಲ್ಲ. ಅದಕ್ಕೆ ಪ್ರತಿಯಾಗಿ ಮುದುಕನ ಆಲೋಚನೆಗಳನ್ನು ಬೇರೆ ದಿಕ್ಕಿಗೆ ತಿರುಗಿಸುವ ಸಲುವಾಗಿ ಗಾಳದ ಹುರಿಯ ಸಾಲನ್ನು ಎತ್ತುವ ಕೆಲಸದಲ್ಲಿ ಮಗ್ನನಾದ. ಮೊದಲನೆಯ ಬಾವುಟವನ್ನು ಎಳೆಯಲಾರಂಭಿಸಿದ. ಅಜ್ಜ ತಕ್ಷಣ ಪೀಠದ ಮೇಲಿನಿಂದ ತೆವಳಿಕೊಂಡು ಮೊಮ್ಮಗನಿದ್ದ ಬಳಿಗೆ ಬಂದ. ಇಬ್ಬರೂ ಒಟ್ಟಿಗೆ ಸೇರಿ ಗಾಳದ ಹುರಿಯ ಒದೆಯಾಗಿದ್ದ ಒಂದು ತುದಿಯನ್ನು ಹಿಡಿದು ಎಳೆಯಲು ಮೊದಲುಮಾಡಿದರು. ಬೇಗಬೇಗ ಕೊಕ್ಕೆಗಳು ಅವರ ಬಳಿಗೆ ಬಂದುವು. ಆದರೆ ಅವುಗಳಿಗೆಲ್ಲ ಮೀನುಗಳು ಸಿಕ್ಕಿಕೊಂಡೇ ಇರಲಿಲ್ಲ. ಸಿಕ್ಕಿಕೊಂಡಿದ್ದವೆಲ್ಲ ಸಣ್ಣಪುಟ್ಟ ಮೀನುಗಳು. ಜಾರುತ್ತಿದ್ದ ಅವುಗಳ ಕಿವಿರುಗಳನ್ನು ಭದ್ರವಾಗಿ ಹಿಡಿದು ಆ ಮೀನುಗಳನ್ನು ಎಳೆದುಕೊಂಡ, ಮಾಂಸಲೋಭದಿಂದ ತುಡಿಯುತ್ತಿದ

ಮೀನುಗಳ ದವಡೆಗಳಿಂದ ಕೊಕ್ಕೆಗಳನ್ನು ಬಿಡಿಸಿ ಎಳೆದ. ಆ ಮೇಲೆ ದೋಣಿಯಿಂದ ಇಳಿಬಿಡಲಾಗಿದ್ದ ಮೀನುಡಬ್ಬದೊಳಕ್ಕೆ ಅವುಗಳನ್ನು ಎಸೆದ. ಎಲ್ಲೋ ಹತ್ತಕ್ಕೆ ಮೂರು ಕೊಕ್ಕೆಗಳಿಗೆ ಮೀನುಗಳು ಸಿಕ್ಕಿಕೊಂಡಿದ್ದುವು. ಉಳಿದುವುಗಳಿಗೆ ಮೀನುಮರಿಗಳೂ ಏಡಿಗಳೂ ಸಿಕ್ಕಿಕೊಂಡಿದ್ದುವು.

"ಸೀಗಡಿಗಳನ್ನು ಕಂಡರೆ ಮೂಸೋದೂ ಇಲ್ಲ ಇವು" ಎಂದು ಅಜ್ಜ ತುಟಿಯಲ್ಲೇ ಪಿಸುಗುಟ್ಟಿಕೊಂಡ. "ಅಲ್ಲ, ನೋಡು ಅವುಗಳ ಏಟನ್ನು. ಇವುಗಳಿಗೆ ಸೀಗಡಿಗಳು ಬೇಕಿಲ್ಲ. ಮಾಂಸವನ್ನೇ ಎರೆಯಾಗಿ ಕಟ್ಟಬೇಕು. ಇಲ್ಲದೆ ಇದ್ದರೆ ಏನೇನೂ ಪ್ರಯೋಜನವೇ ಇಲ್ಲ. ಮಾಂಸ ಎಂದರೆ ಗಾಳಕ್ಕೆ ಬಂದು ಬೀಳುತ್ತೆನೆ. ಪೇಟೇಲಿ ಒಂದು ಪೌಂಡು ಮಾಂಸಕ್ಕೆ ಹನ್ನೊಂದು ಕೊಪೆಕ್ಕು ಬೆಲೆ ಇರುವಾಗ ಅದನ್ನು ಕೊಂಡುಕೊಳ್ಳುವುದಾದರೂ ಹೇಗೆ! ಎಲ್ಲ ಹುಡುಗಾಟವಾಗ್ಹೋಯ್ತು."

ಹಟಾತ್ತನೆ ಒಂದು ಭಾರಿ ಜಹಜು ಕಂದು ಬಣ್ಣದ ಹೊಗೆಯನ್ನು ಎರಚುತ್ತ ಅವರ ಮೇಲೆಯೇ ಎರಗಿ ಬರುವಂತೆ ಕಂಡಿತು. ವಾರೆಯಾಗಿ ಬಿದ್ದ ಅದರ ನೆಳಲು ಅಲೆಗಳ ಮೇಲೆ ಕಾಣಿಸಿತು. ಹಡಗಿನ ಯಂತ್ರದ ಶಬ್ದ ಜೋರಾಗಿ ಕೇಳಿಸಿತು. ಆ ಜಹಜಿನ ಕೆಂಪು ತೇಲುಹಲಗೆಗಳು ವೇಗವಾಗಿ ಕೆಲಸಮಾಡುತ್ತಿದ್ದುವು. ಅವು ಇವರಿಗೆ ತಗಲುವಂತೆಯೇ ಮುಂದಕ್ಕೆ ಹೋದುವು. ಇವರ ದೋಣಿ ಒಂದುಸಲ ಮೇಲಕ್ಕೆ ಎಸೆಯಲ್ಪಟ್ಟು ಕೆಳಕ್ಕೆ ಇಳಿಯಿತು; ಪುನಃ ಮೇಲಕ್ಕೆ ಏರಿತು.

ನೀರ್ಗಾಲಿಯ ಅಡಿಯಲ್ಲಿಯೇ ಬಂದುವೋ ಎಂಬಂತೆ ತೇಲುಬೆಂಡುಗಳು ಕಾಣಿಸಿದುವು. ಆ ತೇಲುಬೆಂಡುಗಳಿಗೆ ಸಿಕ್ಕಿಸಿದ್ದ ಬಾವುಟಗಳು ಹುಚ್ಚು ಹುಚ್ಚಾಗಿ ಕುಣಿದುವು. ಜಹಜು ಇನ್ನೊಂದು ಸ್ವಲ್ಪ ಹತ್ತಿರ ಬಂದಿದ್ದರೆ ಎಲ್ಲ ಚಕನಾ ಚೂರಾಗುತ್ತಿತ್ತು,

"ಅಗೋ, ಅಲ್ಲಿ ತುರ್ಗನೀವ್!" ಎಂದು ನಾಗಾಲೋಟದಿಂದ ಓಡುತ್ತಿರುವ ಕುದುರೆಯನ್ನು ನಿಲ್ಲಿಸಲು ಕೈಯೆತ್ತುವಂತೆ ತೋಳುಗಳನ್ನು ನೀಡಿಕೊಂಡು ವಿಲಕ್ಷಣ ಧ್ವನಿಯಲ್ಲಿ ಅಜ್ಜ ಗಟ್ಟಿಯಾಗಿ ಕೂಗಿದ. ಆದರೆ ಮರುಕ್ಷಣದಲ್ಲಿಯೇ "ಕಣ್ಣು ಕಾಣುವುದಿಲ್ಲವೋ ಅಂತೀನಿ. ಮೀನಿನ ಗಾಳಗಳನ್ನು ಒಡ್ಡಿರೋದು ಕಾಣಿಸೋದಿಲ್ಲ? ಎಲ್ಲೋ ಕೊಳಕು ಹಂದಿಗಳು" ಎಂದ.

ಆದರೆ ಅಷ್ಟು ಹೊತ್ತಿಗಾಗಲೆ ಆ ಜಹಜು ಮುಂದಕ್ಕೆ ಹೊರಟು ಹೋಗಿತ್ತು, ಶಬ್ದ ಮಾಡುತ್ತ ಅದು ಮುಂದಕ್ಕೆ ಓಡುತ್ತಿತ್ತು. ಹಡಗಿನ ಹಿಂಬಾಗದಲ್ಲಿ ಅದರ ತ್ರಿವರ್ಣಧ್ವಜ ಹಾರಾಡುತ್ತಿತ್ತು. ಪ್ರಾಣರಕ್ಷಣೆಯ ನಡುಪಟ್ಟಿಗಳು, ದೋಣಿಗಳು, ನಿಂತು ನೋಡುತ್ತಿದ್ದ ಪ್ರಯಾಣಿಕರು ಮತ್ತು ಯಂತ್ರ ಉಗಿಯುತ್ತಿದ್ದ ಕಲ್ಲಿದ್ದಲಿನ ಹೊಗೆ--ಎಲ್ಲವೂ ಆ ಜಹಜಿನಲ್ಲಿ ಕಾಣಬರುತ್ತಿದ್ದುವು. ಹಡಗು ಮುಂದೆ ಮುಂದೆ ಹೋದಂತೆಲ್ಲ ಅದರ ಹಿಂದುಗಡೆ ನೀರಿನ ಬಿಳಿಯ ಪಟ್ಟೆ ವಿಸ್ತರಿಸುತ್ತಿತ್ತು.

ಆಗ ಕರಾರುವಾಕ್ಕಾಗಿ ಬೆಳಗಿನ ಏಳುಗಂಟೆ.

'ತುರ್ಗನೀವ್' ಮೀನುಗಾರರಿಗೆ ಕಾಲ ತಿಳಿಸುವ ಗಡಿಯಾರವಾಗಿ ಪರಿಣಮಿಸಿತ್ತು. ಅದು ಬೆಳಗ್ಗೆ ಏಳು ಗಂಟೆಗೆ ಒಡೆಸ್ಸದಿಂದ ಹೊರಡುತ್ತಿತ್ತು. ಅದು ಪುನಃ ಅಕರ್‌ಮಾನ್‌ನಿಂದ ತನ್ನ ಮರುಪ್ರಯಾಣವನ್ನು ಆರಂಭಿಸಿ ಒಡೆಸ್ಸಕ್ಕೆ ಸಂಜೆ ಎಂಟು ಗಂಟೆಗೆ ಸರಿಯಾಗಿ ಹಿಂದಿರುಗಿ ಬರುತ್ತಿತ್ತು.

ತಾವು ಹಿಡಿದ ಮೀನುಗಳನ್ನು ಪೇಟೆಗೆ ತೆಗೆದುಕೊಂಡು ಹೋಗಲು ಇನ್ನು ಆತುರ ಮಾಡಬೇಕು. ಅಜ್ಜ ಮತ್ತು ಮೊಮ್ಮಗ ಇಬ್ಬರೂ ಬೇಗ ಬೇಗ ಟೊಮಾಟೋ ಮತ್ತು ರೊಟ್ಟಿಯ ಚೂರಿನ ತಮ್ಮ ಬೆಳಗಿನ ಉಪಾಹಾರವನ್ನು ಮುಗಿಸಿದರು. ತಾವು ತಂದಿದ್ದ ಮರದ ಬುರುಡೆಯಿಂದ ನೀರನ್ನು ಕುಡಿದು ತಮ್ಮ ಊಟವನ್ನು ಮುಕ್ತಾಯಗೊಳಿಸಿದರು. ಆ ನೀರು ಆಗಲೇ ಬೆಚ್ಚಗಾಗಿದ್ದುದಲ್ಲದೆ ಅದರಲ್ಲಿ ಮರದ ವಾಸನೆಯೂ ಕೂಡ ಸೇರಿಕೊಂಡಿತ್ತು. ಊಟ ವಾದ ಮೇಲೆ ಪುನಃ ಮೀನುಗಳನ್ನು ತೆಗೆಯುವ ತಮ್ಮ ಕೆಲಸವನ್ನು ಆರಂಭಿಸಿದರು.

೧೨. "ಅದನ್ನು ಕುದುರೆ ಎನ್ನುತ್ತಾರೆಯೆ?"

ಬೆಳಗಿನ ಸುಮಾರು ಒಂಭತ್ತು ಗಂಟೆಯ ಹೊತ್ತಿಗೆ ಮೀನುಗಳು ತುಂಬಿದ್ದ ಡಬ್ಬವನ್ನು ಹೆಗಲಮೇಲೆ ಹೊತ್ತುಕೊಂಡು ಗಾವ್ರಿಕ್ ಪಟ್ಟಣದ ಕಡೆಗೆ ಹೊರಟ. ಮೀನುಗಳನ್ನು ಬುಟ್ಟಿ ಯಲ್ಲಿ ತುಂಬಿಕೊಂಡು ತೆಗೆದುಕೊಂಡು ಹೋಗಬಹುದಾಗಿತ್ತು. ಆದರೆ ಡಬ್ಬವು ಕೊಳ್ಳುವವರ ಮೇಲೆ ಪ್ರಭಾವ ಬೀರುವುದಾಗಿತ್ತು. ಸಮುದ್ರದಿಂದ ನೇರವಾಗಿ ಜೀವವಿರುವ ಹೊಸ ಮೀನು ಗಳನ್ನು ತರುತ್ತಿದ್ದಾನೆಂದು ಆ ಡಬ್ಬವನ್ನು ನೋಡುವವರಿಗೆ ಅರ್ಥವಾಗುತ್ತಿತ್ತು.

ಗಾಳದ ಹುರಿಯನ್ನು ನೇರ್ಪುಮಾಡಲು ಅಜ್ಜ ಮನೆಯಲ್ಲೇ ಉಳಿದ. ಗಾವ್ರಿಕ್ ಇನ್ನೂ ಒಂಬತ್ತು ವರ್ಷದ ಹುಡುಗ. ಮೀನನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿಕೊಂಡು ಬರುವಂಥ ಮುಖ್ಯ ಕೆಲಸವನ್ನು ಈ ಬಾಲಕನಿಗೆ ಒಪ್ಪಿಸುವುದರಲ್ಲಿ ಅಜ್ಜನಿಗೆ ಮನಸ್ಸಿನಲ್ಲಿ ಯಾವ ಅಳುಕೂ ಇರಲಿಲ್ಲ. ತನ್ನ ಮೊಮ್ಮಗನ ಮೇಲೆ ಅವನಿಗೆ ಸಂಪೂರ್ಣ ನೆಚ್ಚಿಕೆ ಇತ್ತು. ಆ ಹುಡುಗನಿಗೆ ಸ್ವಲ್ಪ ತಲೆಯಿತ್ತು. ಅವನೇನೂ ಎಳೆಯ ಮಗುವಾಗಿರಲಿಲ್ಲ. ಆ ಮುದುಕ ತನ್ನ ಮೊಮ್ಮಗನ್ನಲ್ಲದೆ ಮತ್ತಾರನ್ನು ತಾನೆ ಅವಲಂಬಿಸಿಯಾನು?

ತನ್ನ ಕೆಲಸ ಎಷ್ಟು ಪ್ರಾಮುಖ್ಯವಾದುದು ಎಂಬುದರ ಅರಿವು ಗಾವ್ರಿಕನಿಗಿತ್ತು. ಅಲ್ಲದೆ ತನ್ನ ಹೊಣೆಯನ್ನೂ ಅವನು ಚೆನ್ನಾಗಿ ತಿಳಿದಿದ್ದ. ಆದುದರಿಂದಲೇ ಅವನು ವ್ಯವಹಾರಜ್ಞನಂತೆ ನಡೆದುಕೊಳ್ಳಲು ತಿಳಿದಿದ್ದ. ಅವನು ಅನ್ಯಮನಸ್ಕನಾಗಿರುವಂತೆ ನಟಿಸುತ್ತ ಧೂಳಿನಲ್ಲಿ ತನ್ನ ಪಾದ ಹಾಗೂ ಹತ್ತೂ ಕಾಲು ಬೆರಳುಗಳ ಗುರುತು ತನ್ನ ಹಿಂದೆ ಸ್ಪಷ್ಟವಾಗಿ ಮೂಡುವಂತೆ ಹೆಜ್ಜೆ ಹಾಕುತ್ತ ತೀಕ್ಷ್ಣಪರಿಮಳಗಳನ್ನು ಬೀರುತ್ತಿದ್ದ ಪೊದೆಗಳ ನಡುವಿನಿಂದ ಹಾದು ಹೋಗುತ್ತಿದ್ದ.

ಅವನಿಗಿರುವ ಪ್ರಾಮುಖ್ಯತೆಯೂ ಅವನ ಚಿತ್ತೈಕಾಗ್ರತೆಯ ಠೀವಿಯೂ ಹೀಗೆ ಹೇಳು ವಂತಿತ್ತು: ಸಮುದ್ರದಲ್ಲಿ ಈಜು ಹೊಡಿ, ಮರಳಿನ ಮೇಲೆ ಹಾಯಾಗಿ ಬಿದ್ದುಕೊಂಡು ಕಾಲ ಕಳೆ, ಬೈಸಿಕಲ್ ಸವಾರಿ ಮಾಡು, ಸೋಡಾ ಅಂಗಡಿಗೆ ಹೋಗಿ ಸೋಡಾ ಕುಡಿ—ನಿನ್ನ ಮನಸ್ಸಿಗೆ ಬಂದ ಹಾಗೆ ಮಾಡು. ನಾನೋ ಎಂದರೆ ಸಾಚಾ ಮೀನುಗಾರ. ನನ್ನ ಕೆಲಸ ಮೀನು ಹಿಡಿದು ಪೇಟೆಗೆ ತೆಗೆದುಕೊಂಡು ಹೋಗಿ ಮಾರುವುದು. ನನಗೆ ಇನ್ನಾವುದರ ಗೊಡವೆಯೂ ಇಲ್ಲ."

ಕಡಲಕರೆಯ ವಿಹಾರಮಂದಿರವನ್ನು ದಾಟಿ ಹೋಗುತ್ತಿದ್ದಾಗ ಅಲ್ಲಿ ಹಣ ಸ್ವೀಕರಿಸು ಗುಮಾಸ್ತನು ಕುಳಿತಿದ್ದುದು ಕಾಣಬಂತು. ಅವನು ಕುಳಿತಿದ್ದ ಕಿಟಕಿಯ ಮೇಲುಗಡೆ ಒಂ

ಕರಿ ಹಲಗೆಯ ಮೇಲೆ "೭೬೦" ಎಂದು ಅಂಕಿಗಳಲ್ಲಿ ಸೀಮೆ ಸುಣ್ಣದಲ್ಲಿ ಬರೆದು ತೂಗು ಹಾಕಿದ್ದುದನ್ನು ಗಾವ್ರಿಕ್ ಕಂಡ. ಮುಂದೆ ದುಂಡು ದುಂಡಾದ ಬಿಳಿಯ ದೇಹದ ಮನುಷ್ಯನೊಬ್ಬ ರಕ್ಷಣೆಗಾಗಿ ಸಮುದ್ರದ ದಡದಲ್ಲಿ ಕಟ್ಟಿದ್ದ ಹಗ್ಗದ ಹತ್ತಿರವೇ ನಿಂತುಕೊಂಡಿದ್ದ. ಎಲ್ಲಿಯಾದರೂ ಬಿದ್ದುಬಿಡುತ್ತೇನೆ ಎಂಬ ಭಯವೇನೋ! ಅವನು ತನ್ನ ಮೂಗು ಕಿವಿಗಳನ್ನು ಬಿಗಿಯಾಗಿ ಬೆರಳುಗಳಿಂದ ಅಮುಕಿ ಹಿಡಿದುಕೊಂಡು ಹಸುರಾಗಿ ಪಾಚಿ ಕಟ್ಟಿದೆಯೋ ಎಂಬಂತೆ ಕಾಣುತ್ತಿದ್ದ ನೀರಿನಲ್ಲಿ ಮುಖವನ್ನು ಅದ್ದುತ್ತಿದ್ದ. ಅವನ ಬಕ್ಕ ತಲೆಗೆ ಕರವಸ್ತ್ರವನ್ನು ಕಟ್ಟಿಕೊಂಡಿದ್ದ. ಈ ದೃಶ್ಯವನ್ನು ನೋಡಿದಾಗ ಗಾವ್ರಿಕನ ಮುಖದಲ್ಲಿ ತಿರಸ್ಕಾರಪೂರ್ಣವಾದ ಮುಗುಳು ನಗೆಯೊಂದು ಮಿಂಚಿತು.

ಕಡಲಿನ ದಡದ ದಿಣ್ಣೆಯನ್ನು ಏರಿ ಮೇಲಕ್ಕೆ ಹೋಗಲು ಎರಡು ದಾರಿಗಳಿದ್ದುವು. ಮೂರು ಜಾಗಗಳಲ್ಲಿ ನುಲಿದುಕೊಂಡು ಹೋಗಿದ್ದ ಇಳಿಜಾರಾದ ರಸ್ತೆ ಒಂದು; ಕಡಿದಾಗಿ ಬಹುಮಟ್ಟಿಗೆ ನೆಟ್ಟಗೆ ಇದ್ದ ಲೊಡ್ಡು ಮರದ ಮೆಟ್ಟಿಲುಗಳು ಇನ್ನೊಂದು. ಗಾವ್ರಿಕ್ ಮರದ ಮೆಟ್ಟಲುಗಳನ್ನೇ ಆರಿಸಿಕೊಂಡನೆಂದು ಬೇರೆ ಹೇಳಬೇಕಾಗಿಲ್ಲ. ತುಟಿ ಕಚ್ಚಿಕೊಂಡು ಒಂದೇ ಉಸುರಿಗೆ ಮೆಟ್ಟಲನ್ನು ಏರಿ ಓಡೋಡುತ್ತ ತುದಿಯನ್ನು ಸೇರಿದ. ನೆರಳು ಕವಿದ ಧೂಳಿನ ಗಲ್ಲಿಯೊಂದರ ಮೂಲಕ ಹೊರಟು "ಉಷ್ಣೋದಕ ಸಾಗರ ಸ್ನಾನ ಸಂಸ್ಥೆ" ಯನ್ನು ದಾಟಿ ಸೈನ್ಯ ತರಬೇತಿ ಶಾಲೆಯನ್ನು ಮುಟ್ಟಿದ. ಅಲ್ಲಿಗೆ ಅವನು ಪಟ್ಟಣವನ್ನು ಪ್ರವೇಶಿಸಿದಂತೆ ಆಗಿತ್ತು.

ತಾಳೆಗರಿಯಾಕಾರದ ಎಲೆಗಳಿಂದ ತುಂಬಿದ್ದ ಮರಗಳ ನೆರಳು ಮಚ್ಚೆ ಮಚ್ಚೆಯಾಗಿ ಸಾಲುಮರಗಳ ವಿಶಾಲವಾದ ರಸ್ತೆಯ ಮೇಲೆ ಬಿದ್ದಿತ್ತು. ಅಲ್ಲಿ ಕುದುರೆಗಳಿಂದ ಎಳೆಯಲ್ಪಡುತ್ತಿದ್ದ ಕಮಾನಿಲ್ಲದ ಟ್ರಾಮ್ ಗಾಡಿಯೊಂದು ಆರ್ಕೇಡಿಯ ಕಡೆಗೆ ನಿಧಾನವಾಗಿ ಹೋಗುತ್ತಿತ್ತು. ಬಿಸಿಲಿನಿಂದ ಟ್ರಾಮ್‌ನಲ್ಲಿದ್ದ ಜನಗಳಿಗೆ ಕೊಂಚ ರಕ್ಷಣೆಯನ್ನು ಕೊಡಲು ಮೇಲುಗಡೆ ಒಂದು ದಪ್ಪವಾದ ಬಟ್ಟೆಯನ್ನು ಕಟ್ಟಿದ್ದರು. ಕೆಂಪು ಮತ್ತು ಹಳದಿಯ ತೇಲುಬೆಂಡುಗಳಿದ್ದ ಗಾಳದ ಕಡ್ಡಿಗಳ ಕಟ್ಟೊಂದು ಟ್ರಾಮಿನ ಹಿಂಭಾಗದಿಂದ ಹೊರಕ್ಕೆ ಚಾಚಿಕೊಂಡಿತ್ತು. ವಯಸ್ಸಾಗಿದ್ದರೂ ಗಟ್ಟಿಮುಟ್ಟಾಗಿದ್ದ ಮೂರು ಕುದುರೆಗಳು ಜಲ್ಲಿಕಲ್ಲುಗಳ ರಸ್ತೆಯ ಮೇಲೆ ಗೊರಸುಗಳನ್ನು ಟಕ್ ಟಕ್ ಎಂದು ಇಡುತ್ತ ನಡೆಯುತ್ತಿದ್ದುವು. ರಸ್ತೆಯ ತಿರುವುಗಳಲ್ಲಿ ಟ್ರಾಮಿನ ಬ್ರೇಕುಗಳು ಕೊಂಯ್ಯೋ ಎಂದು ಕಿರುಗುಟ್ಟುತ್ತಿದ್ದುವು.

ದಾರಿಯ ದೃಶ್ಯಗಳಲ್ಲೆಲ್ಲ ಹುಡುಗನ ಗಮನವನ್ನು ನಿಜವಾಗಿ ಸೆಳೆದುದೆಂದರೆ 'ಕ್ವಾಸ್' ಪಾನೀಯದ ಅಂಗಡಿ. ಒಂದು ದೊಡ್ಡ ಪೆಟ್ಟಿಗೆಯಂತ್ತಿತ್ತು ಅದು. ಎರಡು ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಎರಡುಕಡೆಗೂ ಇಳಿಜಾರಾಗಿರುವಂತೆ ಚಾವಣಿಯನ್ನು ಹಾಕಲಾಗಿತ್ತು. ಹೊರಗಡೆಗೆ ಹಸುರು ಬಣ್ಣವನ್ನೂ ಒಳಗಡೆಗೆ ಬಿಳಿಯ ಬಣ್ಣವನ್ನೂ ಬಳಿಯಲಾಗಿತ್ತು. ಮಂದವಾದ ಬಣ್ಣ ಎಣ್ಣೆಯಂತೆ ಹೊಳೆಯುತ್ತಿತ್ತು.

ಪಾನೀಯದ ಅಂಗಡಿಯವನು ಒಳ್ಳೆ ವಿಲಾಸಿಯಾಗಿ ಕಾಣುತ್ತಿದ್ದನಲ್ಲದೆ ಬಹು ಸುಂದರನೂ ಆಗಿದ್ದ. ಗಾವ್ರಿಕ್ ರಸ್ತೆಯ ಆ ಮೂಲೆಗೆ ಬಂದಾಗಲೆಲ್ಲ ಅಲ್ಲಿ ಒಂದು ನಿಮಿಷ ನಿಂತು ಆ ಮನುಷ್ಯನನ್ನು ಆಶ್ಚರ್ಯದಿಂದಲೂ ಅಸೂಯೆಯಿಂದಲೂ ದೃಷ್ಟಿಸಿ ನೋಡದೆ ಮುಂದೆಹೋಗುತ್ತಿರಲಿಲ್ಲ. ತಾನು ದೊಡ್ಡವನಾದ ಮೇಲೆ ಏನಾಗಬೇಕು ಅಥವಾ ಯಾರಂತಾಗಬೇಕು ಎಂಬುದರ

ಕಡೆಗೆ ಗಾವ್ರಿಕ್ ಯೋಚನೆಯನ್ನು ಹರಿಸಿರಲಿಲ್ಲ. ತಾನು ಹೀಗೆ ಇಂಥವನೇ ಆಗಬೇಕೆಂಬ ನಿರ್ದಿಷ್ಟ ಅಭಿಲಾಷೆಯನ್ನು ಅವನು ಹೊಂದಿರಲಿಲ್ಲ. ಹಾಗೇನಾದರೂ ಅವನಿಗೆ ಆ ಸ್ವಾತಂತ್ರ್ಯವನ್ನು ಕೊಟ್ಟಿದ್ದೇ ಆದರೆ ಅವನು ಖಂಡಿತವಾಗಿ 'ಕ್ವಾಸ್' ಪಾನೀಯದ ಅಂಗಡಿಯ ಮನುಷ್ಯನಾಗಬೇಕೆಂದು ಬಯಸುತ್ತಿದ್ದುದರಲ್ಲಿ ಸಂದೇಹವಿರಲಿಲ್ಲ.

ಒಡೆಸ್ಸ ನಗರದ ಎಲ್ಲ 'ಕ್ವಾಸ್' ಪಾನೀಯಗಾರರೂ ಸುಂದರ ಚಿತ್ರದಂತೆ ಸೊಗಸುಗಾರರೂ ಸುರೂಪಿಗಳೂ ಆಗಿದ್ದರು. ಆದರೆ ಈ ಮನುಷ್ಯ ಎಲ್ಲರನ್ನೂ ಮೀರಿಸಿದ್ದ. ರಷ್ಯಾದ ಲಾವಣಿಯೊಂದರಲ್ಲಿ ಬರುದ ವಾನ್ಕಕ್ಲೂಚ್ನಿಕ್‌ನ ಸತ್ವವೇ ರೂಪಗೊಂಡು ಬಂದಂತೆ ಅವನು ಇದ್ದನೆಂದು ಹೇಳಬಹುದು.

ಹೌದೇ ಹೌದು. ಅದು ನಿಜ. ಒಳ್ಳೆಯ ನಯವಾದ ಕಡಲು ನೀಲಿಬಣ್ಣದ ಉಣ್ಣೆಬಟ್ಟೆಯಿಂದ ಮಾಡಿದ ವರ್ತಕ ಟೋಪಿ ಅವನ ತಲೆಯನ್ನು ಅಲಂಕರಿಸಿದ್ದಿತು. ಹೊಳೆಯುವ ಎತ್ತರವಾದ ಬೂಡ್ಸುಗಳು ಕಾಲುಗಳಲ್ಲಿ ಮಿರುಗುತ್ತಿದ್ದುವು. ಹೊಂಬಣ್ಣದ ಸುಂದರವಾದ ಗುಂಗುರು ಕೂದಲುಗಳು ಅವನ ಶೋಭೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದುವು. ಆಹಾ, ಅವನು ಧರಿಸಿದ್ದ ಷರಟೋ! ಕಡುಗೆಂಪುಬಣ್ಣದ್ದು! ತೋಳುಗಳು ಬೆಲೂನಿನಂತೆ ಉಬ್ಬಿದ್ದುವು. ಮೊಣಕಾಲಿನವರೆಗೆ ಬರುತ್ತಿದ್ದ ಆ ಷರಟಿನ ಮೇಲೆ ನೂರು ನೀಲಿಯ ಬಣ್ಣದ ಗಾಜಿನ ಗುಂಡಿಗಳು ಥಳಥಳನೆ ಹೊಳೆಯುತ್ತಿದ್ದುವು. ಈಸ್ಟರ್ ಭಾನುವಾರದ ಹಬ್ಬದ ದಿವಸ ಮಾತ್ರ ಹೊರಕ್ಕೆ ತೆಗೆದು ಧರಿಸಿಕೊಂಡು ಮೆರೆದಾಡಬೇಕಾದ ರಾಜಾ ಷರಟು ಅದು!

ಅವನು ಷರಟಿನ ಮೇಲೆ ಒಂದು ಕಪ್ಪು ವೆಸ್ಟ್‌ಕೋಟನ್ನು ಧರಿಸಿದ್ದ. ಅದರ ಗುಂಡಿಯ ಕಾಜಾ ಒಂದರಲ್ಲಿ ಬೆಳ್ಳಿಯ ಕಡ್ಡಿಯನ್ನು ಸಿಕ್ಕಿಸಿದ್ದ. ಅಲ್ಲಿಂದ ಹೊರಟು ಅಲಂಕಾರವಾಗಿ ವಕ್ರವಾಗಿ ಆ ಕರಿಯ ಕೋಟಿನ ಮೇಲೆ ನೇತಾಡುತ್ತಿದ್ದ ಗಡಿಯಾರದ ಸರಪಣಿ ನೋಡುವವರ ಗಮನವನ್ನು ಸೆಳೆಯುತ್ತಿತ್ತು.

ಆ ಉಜ್ವಲ ವರ್ಣದ ಷರಟಿನ ಕಡೆಗೆ ಒಂದೇ ಒಂದು ದೃಷ್ಟಿ ಹಾಯಿಸಿದರೆ ಸಾಕು. ಒಡನೆ ತಂಪು ಕ್ವಾಸ್ ಪಾನೀಯವನ್ನು ಕುಡಿಯಲು ಬಾಯಿ ಬಾಯಿ ಬಿಡುವಂತಾಗುತ್ತಿತ್ತು. ಅವನು ಕ್ವಾಸ್ ಪಾನೀಯವನ್ನು ಕೊಡುತ್ತಿದ್ದ ಶೈಲಿಯೋ? ಎಷ್ಟು ಚುರುಕು! ಏನು ನಯ! ಎಂಥ ಕೈ ಚಳಕ!

"ಒಂದು ಗ್ಲಾಸು ಕೊಡು, ರಾಜಾ" ಗಿರಾಕಿಯೊಬ್ಬ ಕೇಳುವನು.

"ಯಾವುದು ಬೇಕು ನಿಮಗೆ? ಸಿಹಿಯೋ, ಹುಳಿಯೋ? ಸಿಹಿ ಒಂದು ಗ್ಲಾಸಿಗೆ ಒಂದು ಕೊಪೆಕ್, ಹುಳಿ ಎರಡು ಕೊಪೆಕ್."

"ಹುಳೀದು ಕೊಡು."

"ಇಗೋ ಬಂದುಬಿಟ್ಟೆ."

ರೆಪ್ಪೆ ಹೊಡೆಯುವಷ್ಟರಲ್ಲಿ ಒಂದು ಕೈ ಗಾಜಿನ ಬೀರುವಿನ ಬಾಗಿಲನ್ನು ಸರಿಸಿ ಅಲ್ಲಿರುವ ನೂರಾರು ಶೀಸೆಗಳಲ್ಲಿ ಒಂದನ್ನು ತೆಗೆದುಕೊಳ್ಳುತ್ತದೆ. ಅದೇ ಸಮಯದಲ್ಲಿ ಇನ್ನೊಂದು ಕೈ ಮುಂದಿನ ಮರದ ಹಲಗೆಯನ್ನು ಬಟ್ಟೆಯಿಂದ ಒರಸಿರುತ್ತದೆ. ಹಲಗೆ ಒಣಗಿದ್ದರೂ ಕೈ ತನ್ನ ಕೆಲಸವನ್ನು ಮಾಡಿಯೇ ಮಾಡುತ್ತದೆ. ಮಿರುಗುವ ಲೋಹದ ಪಾತ್ರೆಯನ್ನು ಪಕ್ಕದಲ್ಲಿ

ರುವ ಬೇಸಿನ್ನಿನ ನೀರಿನಲ್ಲಿ ಅದ್ದಿ ಅದನ್ನು ನೀಟಾಗಿ ಎತ್ತಿ ಒಂದು ಸಲ ಅಡಿಮೇಲಾಗಿ ಮಾಡುತ್ತದೆ. ಅನಂತರ ಟಪ್ ಎಂದು ಸದ್ದಾಗುವಂತೆ ಅದನ್ನು ಹಲಗೆಯ ಮೇಲೆ ಗಿರಾಕಿಯ ಕಣ್ಣೆದುರಿಗೆ ಇಡುತ್ತದೆ. ಬಳಿಕ ಅವನು ಸೋಡಾ ಸೀಸೆಯ ಬಿರಡೆಯನ್ನು ಒಡೆಯುವ ಸಾಧನ ವನ್ನು ತೆಗೆದುಕೊಂಡು ಬೂಡ್ಸಿನ ನಡುವೆ ಸೀಸೆಯನ್ನು ಕಾಲಿಗೆ ಸಿಕ್ಕಿಸಿಕೊಳ್ಳುವನು. ಒಂದು ಕೈಯಲ್ಲಿ ಸೀಸೆ ಹಿಡಿದುಕೊಂಡು ಇನ್ನೊಂದು ಕೈಯ್ಯಲ್ಲಿರುವ ಸಾಧನದಿಂದ ಸೀಸೆಯ ಬಿರಡೆಯನ್ನು ಎಳೆಯುವನು. ತಕ್ಷಣ ಅದು ಫೈಡ್ ಎಂದು ಶಬ್ದವಾಗಿ ಸೀಸೆಯ ಬಾಯಿಂದ ನೊರೆ ಬುಸ್ಸೆಂದು ಮೇಲಕ್ಕೆ ಚಿಮ್ಮುವುದು. ಸೀಸೆಯನ್ನು ಎತ್ತಿ ಲೋಹದ ಪಾತ್ರೆಯೊಳಕ್ಕೆ ಸುರಿಯುವನು. ಅಡಿಯಲ್ಲಿ ನಿಂಬೆರಸ ಕಾಲುಭಾಗವಿದ್ದರೆ ಅದರಮೇಲೆ ನೊರೆ ಮುಕ್ಕಾಲುಭಾಗ ತುಂಬಿ ಕೊಳ್ಳುತ್ತದೆ. ಪಾನಾಸಕ್ತ ವ್ಯಕ್ತಿಯು ಗ್ಲಾಸನ್ನು ಎತ್ತಿಕೊಂಡು ಅಕ್ಕರೆಯಿಂದ ಆ ನೊರೆ ಯನ್ನು ಊದಿ ಹೊರ ಚೆಲ್ಲುವನು. ಬಳಿಕ ಪಾನಪಾತ್ರೆಯನ್ನು ಎತ್ತಿ ಬಾಯಿಗೆ ಬಿಟ್ಟನೆಂದರೆ ಗಟಗಟನೆ ಗಂಟಲಿನೊಳಕ್ಕೆ ಪಾನೀಯ ಇಳಿಯುತ್ತಿರುವುದು. ಅಷ್ಟರಲ್ಲಿ ವಾನ್ಕ ಭೂಟೆಯಿಂದ ಹಲಗೆಯನ್ನು ಒರಸಿ ಅದರಮೇಲೆ ಗಿರಾಕಿಯು ಇಟ್ಟಿದ್ದ ನೊರೆಯಿಂದ ನೆನೆದ ಕೊಪೆಕ್ ನಾಣ್ಯ ವನ್ನು-ಆ ನಾಣ್ಯದಮೇಲೆ ಗರುಡಪಕ್ಷಿಯ ಚಿತ್ರವಿರುವುದು- ಬಣ್ಣದ ತಗಡಿನ ಪೆಟ್ಟಿಗೆಯೊಳಕ್ಕೆ ತಳ್ಳುವನು.

ಅವನು ನಿಜವಾಗಿಯೂ ಮನುಷ್ಯ। ಅದು ನಿಜವಾಗಿ ಜೀವನ !

ಗಾವ್ರಿಕ್ ಒಂದು ಗ್ಲಾಸ್ ಕ್ವಾಸ್ ಪಾನೀಯವನ್ನಾದರೂ ಕುಡಿಯಬೇಕೆಂದು ಹಾತೊರೆ ಯುವುದು ಸ್ವಾಭಾವಿಕವಾಗಿತ್ತು. ಆದರೆ ಅವನಿಗೆ ಹಣವೆಲ್ಲಿಂದ ಬರಬೇಕು? ಪೇಟೆಯಿಂದ ಹಿಂದಿ ರುಗಿ ಬರುವಾಗ? .... ಅದು ಅನುಮಾನ. ವಾಸ್ತವವಾಗಿ ಅವನ ಡಬ್ಬದಲ್ಲಿ ಇನ್ನೂರು ಮೀನು ಗಳಿದ್ದವು ನಿಜ. ಮೀನಿನ ಅಂಗಡಿಯವಳಿಗೆ ಅಜ್ಜ ಭಾರಿ ಸಾಲ ಕೊಡಬೇಕಾಗಿತ್ತೆಂಬುದೂ ಅಷ್ಟೇ ನಿಜವಾಗಿತ್ತು. ಕಳೆದ ವಾರ ಗಾಳದ ಹುರಿಗೆ ಬೇಕಾಗುವ ತೇಲು ಬೆಂಡುಗಳಿಗಾಗಿಯೂ ಕೊಕ್ಕೆಗಳಿಗಾಗಿಯೂ ಮೂರು ರೂಬಲ್‌ಗಳನ್ನು ಸಾಲಮಾಡಿದ್ದ. ಅವಳಿಗೆ ಒಂದು ರೂಬಲ್ ಮತ್ತು ನಲವತ್ತೈದು ಕೊಪೆಕ್ಕುಗಳನ್ನು ಮಾತ್ರ ಕೊಟ್ಟಿದ್ದ. ಇನ್ನೂ ಒಂದೂವರೆ ರೂಬಲ್ ಗಿಂತ ಹೆಚ್ಚು ಬಾಕಿ ಉಳಿದಿತ್ತು. ಇದೇನು ಅಲ್ಪವೇ? ಮೀನಿನ ಅಂಗಡಿಯವಳು ಬಾಕಿ ಯನ್ನೆಲ್ಲ ಒಂದೇಸಲ ಹಿಡಿದುಕೊಳ್ಳದೆ ಹೋದರೆ ಎಷ್ಟು ಚೆನ್ನಾಗಿರುತ್ತದೆ. ಆದರೆ, ಆದರೆ ಅವಳು ಎಲ್ಲವನ್ನೂ ಹಿಡಿದುಕೊಂಡು ಬಿಟ್ಟರೋ? ಆಗ ಪ್ರಾಯಃ ಗಾಳಕ್ಕೆ ಕಟ್ಟುವ ಎರೆಯನ್ನೂ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಲು ಸ್ವಲ್ಪ ರೊಟ್ಟಿಯನ್ನೂ ಕೊಂಡುಕೊಳ್ಳಲು ಹಣ ಉಳಿದರೆ ಅದೇ ಅದೃಷ್ಟ.

ವಯಸ್ಸಾದ ಬೆಸ್ತರು ಚಿಂತಾಭಾರದಿಂದ ಕುಸಿದಾಗ ಉಗಿಯುವಂತೆ ಗಾವ್ರಿಕ್ ಪಿಚಕ್ಕನೆ ಉಗುಳಿದ.

ಮೀನಿನ ಡಬ್ಬವನ್ನು ಇನ್ನೊಂದು ಹೆಗಲಿಗೆ ಬದಲಾಯಿಸಿಕೊಂಡು ಗಾವ್ರಿಕ್‌ವಾನ್ಕ ಕ್ಲುಚ್ನಿ ಕ್ಕನ ಸುಂದರ ಚಿತ್ರವನ್ನೂ, ತಾನು ಅದುವರೆಗೆ ರುಚಿ ನೋಡದೆ ಇದ್ದ ಹುಳಿ ಕ್ವಾಸ್ ಪಾನೀಯದ ಕಂಪನ್ನೂ ತಂಪನ್ನೂ ಮನಸ್ಸಿನಲ್ಲಿಯೇ ಚಿತ್ರಿಸಿಕೊಳ್ಳುತ್ತ ನಡೆದ.

ಇಲ್ಲಿಂದ ಮುಂದಕ್ಕೆ ನಿಜವಾದ ನಗರದ ರಸ್ತೆಗಳು ವಿಸ್ತರಿಸಿದ್ದುವು. ಎತ್ತರವಾದ ಮನೆ

ಗಳು, ಅಂಗಡಿಗಳು, ಮಳಿಗೆಗಳು, ಹೆಬ್ಬಾಗಿಲುಗಳು ರಸ್ತೆಯ ಎರಡು ಪಕ್ಕಗಳಲ್ಲಿಯೂ ಶೋಭಿ
ಸುತ್ತಿದ್ದುವು. ರಸ್ತೆಯ ಎರಡು ಪಕ್ಕಗಳಲ್ಲಿಯೂ ಉದ್ದವಾದ ಹಸಿರು ದ್ರಾಕ್ಷಿ ಹಣ್ಣುಗಳಂತೆ
ಹೊಳೆಯುತ್ತಿದ್ದ ಎಲೆಗಳ ಜಾಲಿಮರಗಳಿದ್ದುವು. ಪೆಟ್ಟಿಗೆಯಂತಿದ್ದ ಒಂದು ಸಾಮಾನುಗಳ
ಬಂಡಿಯು ದಡಬಡ ಶಬ್ದಮಾಡಿಕೊಂಡು ಹೋಗುತ್ತಿತ್ತು. ಚರ್ಮದ ಕೊರಳು ಪಟ್ಟಿಗಳಿದ್ದ
ಕುದುರೆಗಳ ಮೇಲೂ, ಗಾಡಿ ಹೊಡೆಯುವವನ ಮೇಲೂ, 'ಕೃತಕ ಮಂಜಿನಗೆಡ್ಡೆ ಕಾರ್ಖಾನೆ'
ಎಂದು ಬರೆದಿದ್ದ ಗಾಡಿಯ ಪಕ್ಕದ ಮೇಲೂ ಜಾಲಿಯ ಮರಗಳ ನೆರಳು ತೇಪೆತೇಪೆಯಾಗಿ
ಬಿದ್ದಿತ್ತು. ರಸೆಯಲ್ಲಿ ಅಡಿಗೆಯವರು ಕುಕ್ಕೆಗಳನ್ನು ಹೊತ್ತುಕೊಂಡು ನಡೆದುಕೊಂಡು ಹೋಗು
ತ್ತಿದ್ದರು. ಮರಗಳ ನೆರಳು ಅವರ ಮೇಲೂ ಬೀಳುತ್ತಿತ್ತು.

ಬಾಯಿಂದ ಹೊರಕ್ಕೆ ನಾಲಿಗೆಯನ್ನು ನೇತಾಡಿಸಿಕೊಂಡು ನಾಯಿಗಳು ಮರಗಳ ಬುಡಗಳಿಗೆ
ತಗುಲಿಸಿದ್ದ ನೀರಿನ ಡಬ್ಬಗಳ ಬಳಿಗೆ ಓಡಿಹೋಗುತ್ತಿದ್ದುವು. ಬಾಲವನ್ನು ಮೇಲಕ್ಕೆ ಎತ್ತಿಕೊಂಡು
ಕೋಡುಬಳೆಯಂತೆ ಡೊಂಕಾಗಿ ಮಾಡಿಕೊಂಡು ಬಿಸಿಯಾಗಿದ್ದ ಡಬ್ಬದಲ್ಲಿನ ನೀರನ್ನು ನೆಕ್ಕ
ಲಾರಂಭಿಸಿದುವು. ಒಡೆಸ್ಸ ನಗರಸಭೆಯವರು ಬಾಯಾರಿಕೆಯಿಂದ ತಮಗೆ ಹುಚ್ಚು ಹಿಡಿಯ
ದಂತೆ ತಮ್ಮ ಮೇಲೆ ಕರುಣೆಯಿಟ್ಟು ನೀರಿನ ಏರ್ಪಾಡನ್ನು ಮಾಡಿದ್ದುದಕ್ಕಾಗಿ ನಾಯಿಗಳು ಅವ
ರನ್ನು ಮನಸಾರ ವಂದಿಸುತ್ತಿದ್ದುವೆನ್ನಲಡ್ಡಿಯಿಲ್ಲ.

ಇದೆಲ್ಲ ಒಡೆಸ್ಸ ನಗರದ ಮಾರ್ಗಗಳಲ್ಲಿ ನಿತ್ಯ ಕಾಣಬಹುದಾಗಿದ್ದ ನೀರಸ ಜೀವನ
ವ್ಯಾಪಾರವಾಗಿತ್ತು.

ಆದರೆ ಇಗೋ ಇಲ್ಲಿ ಒಂದು ಸೋಜಿಗ! ಚಿಕ್ಕ ಗಾಡಿ ಮತ್ತು ಅದಕ್ಕೆ ಸಣ್ಣ ತಟ್ಟನ್ನು
ಹೂಡಿದೆ. ಅಷ್ಟೊಂದು ಪುಟ್ಟ ಕುದುರೆಯನ್ನು ಗಾವ್ರಿಕ್ ಅದುವರೆಗೆ ಕಂಡಿರಲಿಲ್ಲ. ಅದು
ಕರುವಿಗಿಂತ ದೊಡ್ಡದೇನೂ ಆಗಿರಲಿಲ್ಲ, ಆದರೆ ಉಳಿದೆಲ್ಲ ವಿಷಯಗಳಲ್ಲೂ ಕುದುರೆಯನ್ನೇ
ಹೋಲುತ್ತಿತ್ತು.

ಅದು ಒಂದು ಕಂದು ಬಣ್ಣದ ಕುದುರೆ, ಕೊಬ್ಬಿದ ಹೊಟ್ಟೆ, ಚಾಕಲೇಟ್ ಬಣ್ಣದ ಆಯಾಲು,
ಚಿಕ್ಕದಾದರೂ ಕೂದಲು ತುಂಬಿ ಪೊದೆಯಂತೆ ತೋರುವ ಬಾಲ, ಒರಟಾದ ರೆಪ್ಪೆಗೂದಲು.
ಕಿವಿಗಳಿಗೆ ಜಾಗವಿರುವಂತೆ ಒಂದು ಹುಲ್ಲಿನ ಟೋಪಿಯನ್ನು ಅದರ ತಲೆಗೆ ತೊಡಿಸಲಾಗಿತ್ತು.
ಅದು ಒಂದು ಮನೆಯ ಪ್ರವೇಶದ್ವಾರದ ಬಳಿ ಜಾಲಿಮರದ ನೆರಳಿನಲ್ಲಿ ಒಳ್ಳೆ ಸಂಭಾವಿತ ಹುಡುಗಿ
ಯಂತೆ ಮೌನವಾಗಿ ವಿನಯವನ್ನು ಪ್ರಕಟಿಸುತ್ತ ನಿಂತಿತ್ತು. ಅದರ ಸುತ್ತ ಹುಡುಗಿಯರ
ಗುಂಪು ನೆರೆದಿತ್ತು.

ಗಾವ್ರಿಕ್ ಅದರ ಬಳಿಗೆ ನಿಧಾನವಾಗಿ ನಡೆದುಕೊಂಡು ಹೋಗಿ ಅದನ್ನೇ ನೋಡುತ್ತಾ
ದೀರ್ಘಕಾಲ ಮೌನವಾಗಿ ನಿಂತಿದ್ದ. ಈ ಪ್ರಕೃತಿ ಸಹಜ ಸ್ವಾಭಾವಿಕ ಸ್ಥಿತಿಯ ಬಗ್ಗೆ ಏನು
ಪ್ರತಿಕ್ರಿಯೆ ತೋರಬೇಕೆಂದು ಅವನಿಗೆ ತಿಳಿಯಲಿಲ್ಲ. ಅವನು ಆ ಪುಟ್ಟ ಕುದುರೆಯನ್ನು ಪ್ರೀತಿ
ಸಿದ್ದ; ಅದರಲ್ಲಿ ಅವನಿಗೆ ಅನುಮಾನವೇ ಇರಲಿಲ್ಲ. ಆದರೆ ಅದೇಕೋ ಏನೋ ಮನಸ್ಸಿಗೆ ಒಂದು
ತರಹ ಕಿರುಕುಳವಾಗುತ್ತಿತ್ತು.

ಅದನ್ನು ಎಲ್ಲ ಕಡೆಗಳಿಂದಲೂ ಪರೀಕ್ಷಿಸಿದ. ಗೊರಸುಗಳು, ತಲೆಯಮೇಲಿನ ಮುಂಜುಟ್ಟು,
ಹಲ್ಲು—ಎಲ್ಲ ಅದೇ. ಕುದುರೆ ಎಂಬುದರಲ್ಲಿ ಅನುಮಾನವೇ ಇರಲಿಲ್ಲ. ಆದರೆ ಅದೆಷ್ಟು

ಪುಟ್ಟದು! ಅದರ ಸಣ್ಣತನವನ್ನು ಕಂಡು ಗಾವ್ರಿಕನಿಗೆ ಏನೋ ಅಸಹನೆ.

"ಅದನ್ನು ಕುದುರೆ ಎನ್ನುತ್ತಾರೆಯೆ? ಮೂಗನ್ನು ಮುರಿಯುತ್ತ ತಿರಸ್ಕಾರಭಾವನೆಯಿಂದ ಗಾವ್ರಿಕ್ ಗಟ್ಟಿಯಾಗಿ ಕೇಳಿಕೊಂಡ.

"ಅದು ಕುದುರೆಯಲ್ಲ, ಅದು ಕುದುರೆಯಲ್ಲ," ಎಂದು ಅಲ್ಲಿದ್ದ ಎರಡು ಜಡೆಯ ಹುಡುಗಿಯೊಬ್ಬಳು ಹಿಗ್ಗಿನಿಂದ ಕುಣಿಯುತ್ತ ಚಪ್ಪಾಳೆ ತಟ್ಟುತ್ತ 'ಮಂತ್ರಹೇಳುವಂತೆ ರಾಗರಾಗವಾಗಿ ಹೇಳಿದಳು. ಗಾವ್ರಿಕನು ಹೇಳಿದ ಮಾತು ಅವಳ ಕಿವಿಯಮೇಲೆ ಬಿದ್ದಿತ್ತು. "ಅದು ಕುದುರೆಯಲ್ಲವೆ ಅಲ್ಲ. ಅದು **ತಟ್ಟು**."

"ಅದು ಕುದುರೆಯೇ!" ಗಾವ್ರಿಕ್ ಖಿನ್ನನಾಗಿ ನುಡಿದ. ರಿಬ್ಬನ್‌ಕಟ್ಟಿಕೊಂಡ ಆ ಚಿಕ್ಕ ಪ್ರಾಣಿಯೊಡನೆ ನಿಷ್ಕಾರಣವಾಗಿ ಮಾತಿಗೆ ಅವಕಾಶಕೊಟ್ಟೆನಲ್ಲ ಎಂದು ಮರುಕ್ಷಣವೇ ಅವನಿಗೆ ನಾಚಿಕೆ ಮತ್ತು ಒಳನೋವು ಉಂಟಾದುವು.

"ಅದು ತಟ್ಟು! ಅದು ತಟ್ಟು!"

"ಸರ್ಕಸ್ಸಿನಿಂದ ಅದನ್ನು ತಂದಿದ್ದಾರೆ. ಅದು ಬರೀ ಕುದುರೆ, ಅಷ್ಟೆ." ಯಾರೊಬ್ಬರನ್ನೂ ದೃಷ್ಟಿಯಲ್ಲಿಟ್ಟುಕೊಂಡು ನುಡಿಯಲಿಲ್ಲವೋ ಎಂಬಂತೆ ಗಾವ್ರಿಕ್ ಒಡಕಲು ಸ್ವರದಲ್ಲಿ ಹೇಳಿದ.

"ಸರ್ಕಸ್ಸಿನಿಂದ ಅದನ್ನು ತಂದಿಲ್ಲ. ಸರ್ಕಸ್ಸಿನಿಂದ ತಂದೇ ಇಲ್ಲ. ಅದು ತಟ್ಟು. ಪ್ಯಾರಾಫಿನ್ ಎಣ್ಣೆ ಗಾಡಿಯನ್ನು ಎಳೆದುಕೊಂಡು ಬಂದಿದೆ. ಇಲ್ಲಿ ನೋಡು ಎಣ್ಣೆ ಟಿನ್ನುಗಳನ್ನು." ಹುಡುಗಿ ಹೇಳಿದಳು.

ಹೌದು, ನಿಜ. ಗಾಡಿಯಲ್ಲಿ ಪ್ಯಾರಾಫಿನ್ ಟಿನ್ನುಗಳು ತುಂಬಿವೆ. ಈ ಆಶ್ಚರ್ಯ ಅಕಸ್ಮಾತ್ತಾಗಿ ಗಾವ್ರಿಕನ ಮೇಲೆರಗಿತು. ಕಾಲು ಗ್ಯಾಲನ್ನಿಗೆ ಒಂದು ಕೊಪೆಕ್‌ನಂತೆ ತಮ್ಮದೇ ಸೀಸೆಯಲ್ಲಿ ಪ್ಯಾರಫಿನ್ನನ್ನು ಅಂಗಡಿಯಲ್ಲಿ ತುಂಬಿಸಿಕೊಂಡು ತರುವುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಆದರೆ ಅದನ್ನು ಗಾಡಿಯಲ್ಲಿ ಮನೆಮನೆಗೂ ತೆಗೆದುಕೊಂಡುಹೋಗಿ ಹಂಚುವುದು ಮತ್ತು ಆ ಗಾಡಿಗೆ ಒಂದು ವಿಚಿತ್ರ ಕುದುರೆಯನ್ನು ಕಟ್ಟುವುದು ಗಾವ್ರಿಕನಿಗೆ ಹೊಸದಾಗಿತ್ತು. ಅವನಿಗೆ ಅದನ್ನು ನಂಬಲು ಕಷ್ಟವಾಗಿತ್ತು.

"ಅದು ಸಾಮಾನ್ಯವಾದ ಕುದುರೆ." ಗಾವ್ರಿಕ್ ಅಲ್ಲಿಂದ ಕಾಲ್ತೆಗೆಯುತ್ತ ಸಿಡುಕಿನಿಂದ ಎದುರುತ್ತರ ಕೊಟ್ಟ.

"ಅದು **ತಟ್ಟು!** ಅದು **ತಟ್ಟು!** ಅದು **ತಟ್ಟು!**" ಕುಣಿದು ಕುಪ್ಪಳಿಸುತ್ತ ಕೈಚಪ್ಪಾಳೆ ತಟ್ಟುತ್ತ ಆ ಹುಡುಗಿ ಗಿಣಿಯಂತೆ ಒಂದೇ ಸಮನೆ ಗಳಹಿದಳು.

"ತಟ್ಟು ನೀನೇ" ಎಂದು ಗಾವ್ರಿಕ್ ಮನಸ್ಸಿನಲ್ಲಿ ಎಂದುಕೊಂಡ. ನಿಂತುಕೊಂಡು ವಾದಿಸಲು ಅವನಿಗೆ ಅವಕಾಶವಿರಲಿಲ್ಲ.

ಗಾವ್ರಿಕ್ ಸಾರ್ವಜನಿಕ ಉದ್ಯಾನವನ್ನು ದಾಟಿ ಮುಂದೆ ಹೋದ. ಉದ್ಯಾನವನದ ಅಂಚನ್ನು ಅಲಂಕರಿಸಿದ್ದ ಕಬ್ಬಿಣದ ಬೇಲಿಯ ಮೂಲಕ ಪನ್ನೇರಳೆ ಹಣ್ಣಿನ ಪರಿಮಳ ಇವನ ಮೂಗಿಗೆ ಹೊಡೆಯಿತು. ಮುಂದೆ ರೈಲುನಿಲ್ದಾಣದ ಗಡಿಯಾರ ಅವನ ಕಣ್ಣಿಗೆ ಬಿತ್ತು. ಅದರ ಕಡೆಗೆ ಮುಖಮಾಡಿ ನಿಂತುಕೊಂಡು ದೀರ್ಘಕಾಲ ಗಡಿಯಾರವನ್ನು ದೃಷ್ಟಿಸುತ್ತ ನಿಂತ. ಆಗ ತಾನೆ ಗಡಿಯಾರ ನೋಡಿ ಗಂಟೆ ಹೇಳುವುದನ್ನು ಗಾವ್ರಿಕ್ ಹೊಸದಾಗಿ ಕಲಿತಿದ್ದ. ಆದುದ

ಶಿಂದ ಯಾವ ಗಡಿಯಾರ ಕಣ್ಣಿಗೆ ಬೀಳಲಿ ಗಂಟೆಯನ್ನು ಎಣಿಸದೆ ಮುಂದಕ್ಕೆ ಹೆಜ್ಜೆ ಇಡುತ್ತಿರಲಿಲ್ಲ ಗಣಿತದ ಪುಸ್ತಕದಲ್ಲಿ ಬರದೆ ಇರುವಂಥ ರೋಮನ್ ಅಂಕಿಗಳ ಉದ್ದುದ್ದವಾದ ಗೀಟುಗಳನ್ನು ತನ್ನ ಬೆರಳುಗಳನ್ನು ಮಡಿಸಿಕೊಂಡು ಎಣಿಸುತ್ತ ಇದ್ದ. ಎಲ್ಲದಕ್ಕೂ ಮೇಲೆ ಇರುವ ಸಂಖ್ಯೆ ಹನ್ನೆರಡು ಎಂದು ಅವನಿಗೆ ಗೊತ್ತಿತ್ತು. ಆದುದರಿಂದ ಆ ಸ್ಥಳದಿಂದ ಅವನು ಎಣಿಕೆಯನ್ನು ಆರಂಭಿಸಬೇಕಾಗಿತ್ತು.

ತನ್ನ ಕಾಲಬಳಿ ಮಿಾನಿನ ಡಬ್ಬವನ್ನು ಇಳಿಸಿದ. ಅವನ ತುಟಿಗಳು ಚಲಿಸಲಾರಂಭಿಸಿದುವು. "ಒಂದು, ಎರಡು, ಮೂರು, ನಾಲ್ಕು, . ." ತನ್ನ ಬೆರಳುಗಳನ್ನು ಒಂದೊಂದಾಗಿ ಬಿಗಿಯಾಗಿ ಮಡಿಸಿಕೊಳ್ಳುತ್ತ ಮೆತ್ತಗೆ ಹೇಳಿಕೊಳ್ಳಲಾರಂಭಿಸಿದ. ಆಗ ಅವನ ಹಣೆಯಮೇಲೆ ಸುಕ್ಕುಗಳು ಉಂಟಾದುವು. ಚಿಕ್ಕಮುಳ್ಳು ಒಂಬತ್ತರ ಮೇಲಿತ್ತು, ದೊಡ್ಡದು ಆರರ ಮೇಲಿತ್ತು. "ಒಂಬತ್ತೂವರೆ" ಎಂದು ಹೇಳಿಕೊಂಡು ಮೂಗಿನ ಮೇಲಿನ ಬೆವರನ್ನು ಷರಟಿನ ತುದಿಯಿಂದ ಒರಸಿಕೊಳ್ಳುತ್ತ ತೃಪ್ತಿಪಟ್ಟುಕೊಂಡ. ಅವನಿಗೆ ತಿಳಿದುದೇನೋ ಅಷ್ಟು. ಆದರೆ ಗಂಟೆಯನ್ನು ಇತರರಿಂದ ಕೇಳಿ ತಿಳಿದು ತನ್ನ ಎಣಿಕೆ ಸರಿಯೋ ಅಲ್ಲವೋ ಎಂದು ನೋಡುವುದರಲ್ಲಿ ತಪ್ಪೇನು.

"ಗಂಟೆ ಎಷ್ಟು?"

ಚೀನಾರೇಷ್ಮೆ ಅಂಗಿಯನ್ನೂ ಉಷ್ಣಪ್ರದೇಶದಲ್ಲಿ ಉಪಯೋಗಿಸುವಂಥ ಟೋಪಿಯನ್ನೂ ಧರಿಸಿದ ಒಬ್ಬ ಸಭ್ಯನನ್ನು ಕುರಿತು ಗಾವ್ರಿಕ್ ಕೇಳಿದುದಾಗಿತ್ತು. ಆ ಸಭ್ಯ ತನ್ನ ಗಿಣಿ ಮೂಗಿನ ಮೇಲೆ ಚಿನ್ನದ ಬಣ್ಣದ ಮೂಗುಕನ್ನಡಕವನ್ನು ಹಾಕಿಕೊಂಡಿದ್ದ. ಗಾವ್ರಿಕನ ಪ್ರಶ್ನೆಯನ್ನು ಕೇಳಿ ತನ್ನ ಚಿಕ್ಕ ಬೂದುಬಣ್ಣದ ಗಡ್ಡವನ್ನು ಅಲುಗಿಸಿ ಗಡಿಯಾರದ ಕಡೆಗೆ ಒಂದು ಕಿರುನೋಟವನ್ನು ಬೀರಿದ, ತಕ್ಷಣ "ಒಂಬತ್ತೂಮೂವತ್ತು" ಎಂದು ಹೇಳಿದ.

ಗಾವ್ರಿಕ್ ನಿರುತ್ತರನಾದ. "ಅದು ಒಂಬತ್ತೂವರೆ ಗಂಟೆ ತೋರಿಸುವುದಿಲ್ಲವೆ?" ಎಂದು ಪುನಃ ಕೇಳಿದ.

"ಅಂದರೆ ಒಂಬತ್ತೂಮೂವತ್ತು ಎಂದರ್ಥ." ಆ ವ್ಯಕ್ತಿ ಹುಡುಗನ ಕಡೆಗೆ ದೃಷ್ಟಿಯನ್ನು ತಿರುಗಿಸದೆ ನಿರ್ದಾಕ್ಷಿಣ್ಯವಾಗಿ ಉತ್ತರಕೊಟ್ಟ. ಆ ಬಳಿಕ ಒಂದು ಬಾಡಿಗೆ ಕುದುರೆಗಾಡಿಯನ್ನು ಏರಿ ಮೊಣಕಾಲುಗಳ ನಡುವೆ ದಂತದ ಹಿಡಿಯಿದ್ದ ಬೆತ್ತವನ್ನು ಹಿಡಿದುಕೊಂಡು ಕುಳಿತ. ಗಾಡಿ ಮುಂದಕ್ಕೆ ಹೋಯಿತು.

ಹಲ್ಲುಬಿದ್ದು ಖಾಲಿಬಿದ್ದಿದ್ದ ಜಾಗವನ್ನು ಪ್ರದರ್ಶಿಸುತ್ತ ಬಾಯಿಬಿಟ್ಟುಕೊಂಡು ಗಾವ್ರಿಕ್ ಒಂದು ಕ್ಷಣಕಾಲ ತಾನು ನಿಂತಲ್ಲಿಯೇ ನಿಂತುಕೊಂಡಿದ್ದ. ಆ ಶ್ರೀಮಂತ ತನ್ನನ್ನು ಹಾಸ್ಯಮಾಡಿದನೋ, ಇಲ್ಲ ಅವನು ಹೇಳಿದುದು ಸತ್ಯವೋ ಎಂಬುದನ್ನು ನಿಶ್ಚಯಿಸಲು ಯತ್ನಿಸುತ್ತಿದ್ದಂತೆ ಇದ್ದಿತು ಅವನ ರೀತಿ. ಕೊನೆಗೆ ಮಿಾನಿನ ಡಬ್ಬವನ್ನು ಹೆಗಲಿಗೇರಿಸಿದ. ಷರಾಯಿಯನ್ನು ಒಂದು ಸಲ ಮೇಲಕ್ಕೆಳೆದುಕೊಂಡು ಆಕಡೆ ಈಕಡೆ ತಿರುಗಿ ನೋಡುತ್ತ ತುಂಟತನದ ಮುಗುಳುನಗೆಯನ್ನು ಬೀರುತ್ತ ತನ್ನ ದಾರಿ ಹಿಡಿದು ಹೊರಟ.

ಅಂದಮೇಲೆ ಒಂಬತ್ತೂವರೆ ಮತ್ತು ಒಂಬತ್ತೂಮೂವತ್ತು ಎರಡಕ್ಕೂ ಒಂದೇ ಅರ್ಥವೇ! ವಿಚಿತ್ರ, ಬಹಳ ವಿಚಿತ್ರ, ಇರಲಿ. ಇನ್ನೂ ಯಾರನ್ನಾದರೂ ತಿಳಿದವರನ್ನು ಕೇಳುವುದು, ಬಾಯಿ ಕುರುಡೇ.

೧೩. ಮದ್ರಾಂಸ್ರ್ರೋರೋಷೆಂಕೋ

"ಏಡಿ! ಏಡಿ! ಏಡೀ! ಏಡೀ!"

"ಚಪ್ಪಟೆ ಮೀನು! ಚಪ್ಪಟೆ ಮೀನು! ಚಪ್ಪಟೆ ಮೀನೂ!"

"ಜೀವದ ರಾಣಿ ಮೀನು! ರಾಣಿ ಮೀನೂ!"

"ಕೆಂಪುಮೀನು! ಕೆಂಪುಮೀನೂ!"

"ಮಿಡಿಮೀನು! ಮಿಡಿಮೀನೂ!

"ಕಪ್ಪೆಮೀನು! ಕಪ್ಪೆಮೀನೂ!"

ಮಾರುಕಟ್ಟೆಯಲ್ಲಿ ಎಲ್ಲವನ್ನೂ ಮೀರಿಸಿ ನಮ್ಮ ಕಿವಿಯನ್ನು ಅಪ್ಪಳಿಸುವ ಜೋರಾದ ಕೀರಲುಧ್ವನಿಯ ಗಲಾಟೆ ಯಾರದು ಎಂದರೆ ಮೀನುಮಾರುವ ಹೆಂಗಸರದು ಎಂದು ಬೇರೆ ಹೇಳಬೇಕಾಗಿಲ್ಲ. ಮೀನುಮಾರುಕಟ್ಟೆಯ ಗಲಾಟೆ ಬಹು ಪ್ರಸಿದ್ಧವಾದುದಲ್ಲವೆ?

ಮೇಜುಗಳ ಮೇಲೂ, ಕುಕ್ಕೆಗಳಲ್ಲೂ, ಮರದ ತೊಟ್ಟಿಗಳಲ್ಲೂ ಏಡಿಗಳನ್ನೂ ವಿವಿಧ ರೀತಿಯ ಮೀನುಗಳನ್ನೂ ಚಿಪ್ಪುಮೀನುಗಳನ್ನೂ ರಾಶಿಹಾಕಿಕೊಂಡು ಸಾಲಾಗಿ ಮೀನುಮಾರುವ ಹೆಂಗಸರು ಕುಳಿತಿರುತ್ತಾರೆ. ಮೀನು ಅಂಗಡಿಗಳ ಓಣಿಯಲ್ಲಿ ವಿರಾಮವಾಗಿ ಹೆಜ್ಜೆಹಾಕುತ್ತ ಹೋಗಬೇಕಾದರೆ ಒಡೆಸ್ಸ ನಗರದ ಗೃಹಿಣಿಯರ ಮತ್ತು ಅಡಿಗೆಯವರ ಪ್ರಶಾಂತ ಧೈರ್ಯ ಬೇಕಾಗುತ್ತದೆ. ಕೆಲವರು ಗೂಡಾರಗಳ ಅಡಿಯಲ್ಲಿ ಅಂಗಡಿ ಹಾಕಿಕೊಂಡು ಕುಳಿತಿರುತ್ತಾರೆ. ಇನ್ನು ಕೆಲವರು ಮೇಲುಗಡೆ ಬಿಸಿಲಿಗೆ ಮರೆಯಾಗಿ ಕಟ್ಟಿದ ಕ್ಯಾನ್‌ವಾಸ್ ಬಟ್ಟೆಗಳ ನೆರಳಿನಲ್ಲಿ ಕುಳಿತಿರುತ್ತಾರೆ. ಗೂಡಾರಗಳ ಮತ್ತು ಕ್ಯಾನ್‌ವಾಸ್ ಬಟ್ಟೆಗಳ ನೆರಳಿನಲ್ಲಿ ಒದ್ದಾಡುತ್ತ ಹೊಳೆಹೊಳೆಯುತ್ತ ಬಿದ್ದಿರುವ ಮೀನಸಂಪತ್ತು ನೋಡುವುದಕ್ಕೇ ಒಂದು ಚೆನ್ನ.

ರೂಪ, ಗಾತ್ರ, ಬಣ್ಣಗಳಲ್ಲಿ ಏನು ವೈವಿಧ್ಯ!

ತನ್ನ ಸುಂದರ ಸೃಷ್ಟಿಯನ್ನು ರಕ್ಷಿಸಲೂ, ವಿನಾಶದಿಂದ ಕಾಪಾಡಲೂ ಮತ್ತು ಮನುಷ್ಯನ ಕಣ್ಣಿಗೆ ಸಾಧ್ಯವಾದಷ್ಟು ಮಟ್ಟಿಗೆ ಗೋಚರಿಸದೆ ಇರುವಂತೆ ಮಾಡಲೂ ಪ್ರಕೃತಿ ತನ್ನ ಕೈಲಾದದ್ದನ್ನೆಲ್ಲ ಮಾಡಿತ್ತು. ಸಮುದ್ರದ ವಿವಿಧ ವರ್ಣಛಾಯೆಗಳನ್ನು ಮೀನುಗಳಲ್ಲಿಟ್ಟು ಅವುಗಳನ್ನು ದೂರದಿಂದ ಕಣ್ಣಿಗೆ ಕಾಣದಂತೆ ಮರೆಮಾಡಲು ಪ್ರಯತ್ನಿಸಿದ್ದಿತು.

ಕಪ್ಪು ಸಮುದ್ರದ ರಾಣಿಯಾದ ಶ್ರಿಮಂತಿಕೆಯ ಮಾಕರೆಲ್ ಮೀನನ್ನು ನೋಡಿ. ಅದನ್ನು ನಾವು ರಾಣಿಮೀನು ಎಂದು ಕರೆಯಬಹುದು. ಆಹಾರದ ದೃಷ್ಟಿಯಿಂದ ಬಾಯಿಸವಿಯ ದೃಷ್ಟಿಯಿಂದ ಮೀನುಗಳಲ್ಲೆಲ್ಲ ಅದಕ್ಕೆ ಬೆಲೆ ಹೆಚ್ಚು. ಅದರ ದುಂಡು ದುಂಡಾದ ದೇಹವು ಕದರಿನಂತೆ ನೇರವಾಗಿ ನಯವಾಗಿರುವುದು. ಆಕಾಶನೀಲಿಯಿಂದ ಹಿಡಿದು ಗಟ್ಟಿ ನೀಲಿಯವರೆಗಿನ ಎಲ್ಲ ವರ್ಣಛಾಯೆಗಳನ್ನೂ ರಾಣಿಮೀನುಗಳಲ್ಲಿ ಕಾಣಬಹುದು. ಅವು ರೇಷ್ಮೆಯಂತೆ ನುಣುಪಾಗಿ ತೆರೆತೆರೆಯಾಗಿ ಹೊಳೆಯುವುವು. ಈ ಬಣ್ಣಗಳನ್ನು ದಡದಿಂದ ದೂರದ ಸಮುದ್ರಭಾಗದಲ್ಲಿ ನಾವು ನೋಡುತ್ತೇವೆ. ಅಲ್ಲಿ ರಾಣಿಮೀನುಗಳು ಹಿಂಡು ಹಿಂಡಾಗಿ ಈಜುತ್ತಿರುತ್ತವೆ. ರಾಣಿಮೀನು ಒಳ್ಳೆ ತಂತ್ರಿ!

ಗಾವ್ರಿಕ್ ರಾಣಿಮೀನುಗಳನ್ನು ದಿನದಿನವೂ ತಪ್ಪದೆ ನೋಡುತ್ತಿದ್ದ; ಅಲ್ಲದೆ ಅವುಗಳ ಗುಂಪನ್ನು ಅರ್ಧಮೈಲಿ ದೂರದಿಂದಲೇ ಗುರುತಿಸುತ್ತಿದ್ದ. ಆದರೂ ಅವುಗಳನ್ನು ಕಂಡಾಗ ಲೆಲ್ಲ ಅವು ಎಷ್ಟು ಸುಂದರ ಮತ್ತು ಎಷ್ಟು ಚತುರ ಎಂದು ಬೆರಗಾಗುತ್ತಿದ್ದ.

ಇಗೊ ಈ ಕಪ್ಪೆಮೀನುಗಳನ್ನು ನೋಡಿ. ದಡದ ಹತ್ತಿರದ ಬಂಡೆಗಳ ಬಳಿಯಲ್ಲೂ ನೀರಿನ ಅಡಿಯ ಮರಳಿನ ಮೇಲೂ ಇವು ಸಾಮಾನ್ಯವಾಗಿ ಸಂಚರಿಸುತ್ತವೆ. ಆದುದರಿಂದಲೇ ಅವು ಬಂಡೆಗಳ ಕಂದು ಬಣ್ಣವನ್ನೂ, ಮರಳಿನ ಹಳದಿಯ ಬಣ್ಣವನ್ನೂ ಹೋಲುವುವು. ಈ ವಿಷಯವನ್ನು ನೀವು ಎಂದಾದರೂ ಯೋಚಿಸಿದ್ದೀರಾ?

ಹಾಗೇ ನೋಡುತ್ತ ಬನ್ನಿ. ಇಲ್ಲಿ ದೊಡ್ಡ ದೊಡ್ಡ ಚಪ್ಪಟೆ ಮೀನುಗಳಿವೆ. ಪ್ರಶಾಂತವಾದ ಚಿಕ್ಕ ಕೊಲ್ಲಿಗಳಲ್ಲಿರಲು ಅವಕ್ಕೆ ಇಷ್ಟ. ಮಂದವಾದ ಚರ್ಮದ ಹಸಿರುಗಪ್ಪು ಬಣ್ಣ, ಮತ್ತು ಚರ್ಮದ ಮೇಲೆ ಕಡಲಚಿಪ್ಪಿನಂತೆ ಎದ್ದುಕೊಂಡ ಚಪ್ಪಟೆಯಾದ ಎಲುಬಿನ ಗಂಟುಗಳು ಈ ಮೀನುಗಳಲ್ಲಿ ಎದ್ದು ಕಾಣುವ ವಿಷಯ. ಚಪ್ಪಟೆ ಮೀನುಗಳಲ್ಲಿ ಎರಡು ಕಣ್ಣುಗಳೂ ಮೇಲುಭಾಗದಲ್ಲಿರುತ್ತವೆ. ಮಕ್ಕಳು ಗೋಡೆಗಳ ಮೇಲೆ ಇದ್ದಿಲುಮಸಿಯಲ್ಲಿ ಮೀನಿನ ಆಕಾರವನ್ನು ಬರೆದು ಮೇಲುಗಡೆ ಅದರ ಮೂತಿಯ ಹತ್ತಿರ ಕಣ್ಣುಗಳೆಂದು ಎರಡು ಚುಕ್ಕೆಗಳನ್ನಿಡುವುದನ್ನು ನೋಡಿದ್ದೀರಲ್ಲವೆ. ಚಪ್ಪಟೆ ಮೀನುಗಳನ್ನು ನೋಡಿದಾಗಲೆಲ್ಲ ಆ ಚಿತ್ರ ಜ್ಞಾಪಕಕ್ಕೆ ಬರುತ್ತದೆ. ಚಪ್ಪಟೆ ಮೀನುಗಳ ಹೊಟ್ಟೆ ಜೇನು ಮೇಣದ ಬಣ್ಣಕ್ಕಿರುವುದು ನಿಜ. ಇನ್ನೂ ಹಾಲು ಕುಡಿಯುತ್ತಿರುವ ಹಂದಿ ಮರಿಯನ್ನು ನೋಡಿದಂತಾಗುತ್ತದೆ ಅದರ ಹೊಟ್ಟೆಯನ್ನು ಕಂಡಾಗ. ಚಪ್ಪಟೆ ಮೀನುಗಳು ತಮ್ಮ ಹೊಟ್ಟೆಯನ್ನು ಮಾತ್ರ ಮೇಲಕ್ಕೆ ತೋರಿಸುವುದಿಲ್ಲ. ಅವು ಯಾವಾಗಲೂ ನೀರಿನ ತಳದಲ್ಲಿ ಮರಳನ್ನು ಅಪ್ಪಿಕೊಂಡು ಬಿದ್ದಿರುತ್ತವೆ.

ಈ ಕೆಂಪು ಮೀನುಗಳನ್ನು ನೋಡಿ. ಗೂನು ಬೆನ್ನು, ಕೆಂಪು-ಕಪ್ಪು ಬಣ್ಣ, ದೊಡ್ಡ ದೊಡ್ಡ ಹುರುಪೆಗಳು. ನೋಡಿದರೆ ರಕ್ತದ ಕಲೆ ಅಂಟಿಕೊಂಡಿರುವಂತೆ ಕಾಣುತ್ತದೆ. ಸ್ವಚ್ಛವಾದ ಕೊಲ್ಲಿಗಳ ನೀರಿನ ತಳದಲ್ಲಿ ಪಾಟಲವರ್ಣದ ಕಡಲಚಿಪ್ಪುಗಳು ಅಕ್ಕಪಕ್ಕದಲ್ಲೇ ಹೊಳೆಯುತ್ತಿರುತ್ತವೆ. ಕೆಂಪು ಮೀನುಗಳಿಗೂ ಪಾಟಲವರ್ಣದ ಈ ಚಿಪ್ಪುಗಳಿಗೂ ಹೆಚ್ಚು ವ್ಯತ್ಯಾಸವಿದೆಯೋ ನೋಡಿ.

ಇತ್ತ ಬನ್ನಿ, ಇವು ಬೆಳ್ಳಿ ಮೀನುಗಳು. ಇವು ದಡದಲ್ಲಿ ಮೇಲಕ್ಕೆ ಬರುತ್ತ ಹೋಗುತ್ತ ಥಳಕ್‌ಪಳಕ್ ಎಂದು ಹೊಳೆಯುತ್ತಿರುತ್ತವೆ. ಬೆಳಗಿನ ಸೂರ್ಯನ ಬೆಳಕು ನೀರಿನ ಮೇಲೆ ಬಿದ್ದಾಗ ಅಲ್ಲಿ ಮೀನುಗಳಿವೆ ಎಂಬುದೇ ಗೊತ್ತಾಗುವುದಿಲ್ಲ.

ಪ್ರಕೃತಿ ಕುಶಲ ತಂತ್ರಗಾರನಹುದು, ಆದರೆ ಮನುಷ್ಯನೇನು ಕಡಮೆ ಇಲ್ಲ. ಮನುಷ್ಯ ಬಲೆಗಳನ್ನು ಬೀಸುತ್ತಾನೆ, ಮೀನುಗಳ ಕಣ್ಣುಗಳಿಗೆ ಮಣ್ಣೆರಚುವಂಥ ಗಾಳಗಳನ್ನು ಬಿಡುತ್ತಾನೆ, ಅವುಗಳ ಎದುರಿಗೆ ಲೋಹದ ಚಮಚದಾಕಾರದ ವಸ್ತುವನ್ನು ತಿರುಗಿಸುತ್ತಾನೆ. ತಮಗೆ ತಿಳಿಯುವುದಕ್ಕೆ ಮೊದಲೇ ಮೀನುಗಳು ಮನುಷ್ಯನು ಬೀಸಿದ ಆಕರ್ಷಕ ಬಲೆಗೆ ಬಿದ್ದುಬಿಟ್ಟಿರುತ್ತವೆ. ಸಮುದ್ರದಲ್ಲಿದ್ದಾಗ ಮಾನವನ ಕಣ್ಣುಗಳಿಗೆ ಗೋಚರವಾಗುವುದೋ ಇಲ್ಲವೋ ಎನ್ನುವಷ್ಟು ಮಟ್ಟಿನ ಪ್ರಕೃತಿದತ್ತ ರಕ್ಷಣೋಪಾಯಗಳನ್ನು ಹೊಂದಿದ್ದರೂ ಈ ಮೀನುಗಳು ಹೀಗೆ ಮೀನುಗಾರರ ಕೈಗೆ ಸಿಕ್ಕಿಬೀಳುವುದರ ಪರಿಣಾಮವಾಗಿ ಮಾರುಕಟ್ಟೆಯ ಕುಕ್ಕೆಗಳಲ್ಲಿ ತಮ್ಮ ಐಂದ

ಜಾಲಿಕ ವರ್ಣಗಳ ವೈಭವವನ್ನು ಪ್ರದರ್ಶಿಸುತ್ತ ಬಿದ್ದಿರುತ್ತವೆ.

ಮನುಷ್ಯಪ್ರಯತ್ನದ ಮುಖ್ಯ ಉದ್ದೇಶ ಹಣ!

ತಮ್ಮ ಮೀನುಗಳನ್ನು ಮಾಮೂಲಾಗಿ ಕೊಂಡುಕೊಳ್ಳುತ್ತಿದ್ದ ಮೀನುಮಾರುವ ಹೆಂಗಸನ್ನು ಮಡುಕುತ್ತ ಎಳೆಹಸುರು ಏಡಿಗಳಿಂದ ತುಂಬಿದ್ದ ಕುಕ್ಕೆಗಳನ್ನು ದಾಟುತ್ತ ಹುಡುಗ ಹೆಜ್ಜೆ ಹಾಕುತ್ತಿದ್ದ. ಕತ್ತರಿಯಂತಿದ್ದ ಮುಳ್ಳುಗಳನ್ನು ಅಗಲಿಸಿಕೊಂಡು ಸೆಳವು ಬಂದಂತೆ ಅದುರುತ್ತ ಮೇಲಕ್ಕೆ ನೆಗೆಯಲು ಪ್ರಯತ್ನಿಸುತ್ತಿದ್ದ ಆ ಏಡಿಗಳಿಂದ ಸರಸರ ಶಬ್ದವಾಗುತ್ತಿತ್ತು.

ಬೆಳ್ಳಿಯ ನಾಣ್ಯಗಳ ರಾಶಿಯಂತೆ ಬೆಳ್ಳಿಮೀನುಗಳು ಥಳಥಳಿಸುತ್ತಿದ್ದುವು.

ಒದ್ದೆಯಾದ ಬಲೆಗಳ ಅಡಿಯಲ್ಲಿ ನೆಗೆದಾಡುತ್ತಿದ್ದ ಇಂಚಾಕ, ಸೀಗಡಿ ಮೊದಲಾದುವುಗಳು ಕ್ಲಿಕ್ ಕ್ಲಿಕ್ ಎಂದು ಶಬ್ದ ಮಾಡುತ್ತ ಎಲ್ಲ ಕಡೆಗೂ ಉಪ್ಪನ್ನು ಸಿಡಿಸುತ್ತಿದ್ದುವು.

ನೆಲದ ಮೇಲೆ ಹರಡಿದ್ದ ಮೀನಿನ ಹುರುಪೆಗಳು ಹುಡುಗನ ಬರಿಗಾಲಿಗೆ ಅಂಟಿಕೊಳ್ಳುತ್ತಿದ್ದುವು. ದಾರಿಯಲ್ಲಿ ಅಲ್ಲಲ್ಲಿ ಬಿದ್ದಿದ್ದ ಮೀನಿನ ಹೊಲಸು ಚೂರುಗಳ ಮೇಲೆ ಕಾಲಿಟ್ಟಾಗ ಹುಡುಗನ ಕಾಲು ಜಾರುತ್ತಿತ್ತು.

ಮಾರುಕಟ್ಟೆಯ ಸೆಣಕಲಾದ ಬೆಕ್ಕುಗಳು ಹುಚ್ಚು ಕೆರಳುವ ಕಣ್ಣುಗಳಿಂದ ನೋಡುತ್ತ ಎಲ್ಲಾದರೂ ಆಹಾರವನ್ನು ಗಿಟ್ಟಿಸಿಕೊಳ್ಳಬೇಕೆಂದು ಜುಣುಗಿಕೊಂಡು ಹೋಗುತ್ತಿದ್ದುವು. ಹಾಗೆ ನಡೆಯುತ್ತಿದ್ದಾಗ ಅವುಗಳ ಕಿವಿಗಳು ಹಿಂದಕ್ಕೆ ಬಾಗಿರುತ್ತಿದ್ದುವು; ಹೆಗಲಿನ ಮೂಳೆ ಮೇಲಕ್ಕೆ ಎದ್ದಿರುತ್ತಿತ್ತು.

ಯಜಮಾನಿಯರು ಬಲೆಚೀಲಗಳಲ್ಲಿ ಕ್ಯಾರಟ್‌ಗಳನ್ನು ತುಂಬಿಕೊಂಡು ಚಪ್ಪಟೆ ಮೀನುಗಳ ದಪ್ಪದಪ್ಪ ಚೂರುಗಳನ್ನು ಕೈಯ್ಯಲ್ಲಿ ತೂಗಿನೋಡುತ್ತ ಮೀನಂಗಡಿಗಳ ಬಳಿ ನಿಂತಿದ್ದರು.

ಬಿಸಿಲು ಆಗಲೆ ಸುಡುತ್ತಿತ್ತು. ಕುಕ್ಕೆಗಳಲ್ಲಿನ ಮೀನುಗಳು ಸಾಯುತ್ತಿದ್ದುವು.

ಗಾವ್ರಿಕನ ಮೀನುಮಾರುವ ಹೆಂಗಸು ಒಂದು ಕಾಲುಮಣೆಯಮೇಲೆ ಕುಳಿತಿದ್ದಳು. ತಲೆಯ ಮೇಲುಗಡೆ ಬಿಸಿಲಿಗೆ ಮರೆಯಾಗಿ ಅಗಲವಾದ ಕ್ಯಾನ್‌ವಾಸ್ ಬಟ್ಟೆಯನ್ನು ಕಟ್ಟಲಾಗಿತ್ತು. ಅವಳ ಸುತ್ತ ಮೀನುತುಂಬಿದ ಕುಕ್ಕೆಗಳಿದ್ದುವು. ಸೆಕೆಯಾಗುತ್ತಿದ್ದರೂ ಕೂಡ ಆ ದಡೂತಿ ಹೆಂಗಸು ನಿರಿಗಳಿಂದ ಉಬ್ಬಿಕೊಂಡ ತೋಳುಗಳ ಚಳಿಗಾಲದ ಜಾಕೆಟ್ಟನ್ನು ತೊಟ್ಟಿದ್ದಳು. ಅಷ್ಟು ಸಾಲದೆ ಅದರಮೇಲೆ ಅಡ್ಡಲಾಗಿ ಮರಳಿನ ಬಣ್ಣದ ಶಾಲನ್ನು ಸುತ್ತಿಕೊಂಡಿದ್ದಳು. ಒಂದು ಹೆಗಲಿಗೆ ಭಾರವಾದ ದುಡ್ಡಿನ ಚೀಲವನ್ನು ನೇತುಹಾಕಿಕೊಂಡಿದ್ದಳು.

ಅವಳೊಡನೆ ಚೌಕಾಸಿ ಮಾಡುತ್ತಿದ್ದ ಗಿರಾಕಿಯೊಬ್ಬಳ ವ್ಯಾಪಾರ ಮುಗಿಯುವವರೆಗೆ ಗಾವ್ರಿಕ್ ಮರ್ಯಾದೆ ತೋರಿಸುವುದಕ್ಕಾಗಿ ಅವಳಿಗೆ ಸ್ವಲ್ಪದೂರದಲ್ಲಿ ಬಹು ವಿನಯದಿಂದ ನಿಂತುಕೊಂಡ. ತಾನು ಮತ್ತು ಅಜ್ಜ ಇಬ್ಬರೂ ಆ ಹೆಂಗಸನ್ನು ಆಶ್ರಯಿಸದೆ ವಿಧಿಯಿಲ್ಲವೆಂದು ಆ ಹುಡುಗ ಚೆನ್ನಾಗಿ ತಿಳಿದುಕೊಂಡಿದ್ದ. ಆದಕಾರಣ ಅವನು ಆದಷ್ಟು ವಿನಯದಿಂದ ಸ್ವಾಭಿಮಾನವನ್ನು ಅಡಗಿಸಿಕೊಂಡಿರಬೇಕೆಂದು ಅರ್ಥಮಾಡಿಕೊಂಡಿದ್ದ. ಅವನು ತಲೆಗೆ ಹ್ಯಾಟನ್ನು ಹಾಕಿಕೊಂಡಿದ್ದಿದ್ದರೆ ಅವಳ ಬಳಿಗೆ ಬಂದೊಡನೆ ಹ್ಯಾಟನ್ನು ತಲೆಯಿಂದ ತೆಗೆದು ಕೈಯ್ಯಲ್ಲಿ ಹಿಡಿದುಕೊಂಡು ಗೌರವ ತೋರಿಸುತ್ತಿದ್ದ. ಆದರೆ ಅವನು ಬರಿ ತಲೆಯಲ್ಲಿ ಬಂದಿದ್ದ. ಆದುದರಿಂದ ತಾನು ಆ ಸಂದರ್ಭದಲ್ಲಿ ಎಷ್ಟುಮಟ್ಟಿನ ವಿನಯದಿಂದ ವರ್ತಿಸಬೇಕೋ ಹಾಗೆ ಮಾಡಿದ.

ಮೀನಿನ ಡಬ್ಬವನ್ನು ಬಹು ಮೆತ್ತಗೆ ನೆಲದ ಮೇಲೆ ಇಟ್ಟ. ಕೈಗಳನ್ನು ಪಕ್ಕಕ್ಕೆ ಇಳಿಬಿಟ್ಟು ಕೊಂಡು ಕಾಲುಚೀಲದೋಪಾದಿಯಲ್ಲಿ ಧೂಳು ತುಂಬಿಕೊಂಡಿದ್ದ ತನ್ನ ಬರಿಗಾಲಿನ ಕಡೆಗೆ ದೃಷ್ಟಿಯನ್ನು ಬೀರುತ್ತ ನಿಂತುಕೊಂಡ.

ಆ ಗಿರಾಕಿ ಎರಡು ಡಜನ್ ಕಪ್ಪೆಮೀನುಗಳನ್ನು ಮಾತ್ರ ಕೊಂಡುಕೊಳ್ಳುವವಳಿದ್ದಳು ಆದರೆ ಚೌಕಾಸಿ ಮಾತ್ರ ಬಹು ಜೋರಾಗಿ ದೀರ್ಘಕಾಲ ನಡೆಯಿತು. ಅವಳು ಹತ್ತುಸಲ ಅಂಗಡಿಯ ಹತ್ತಿರಕ್ಕೆ ಬಂದು ಹತ್ತುಸಲ ಹಿಂದಕ್ಕೆ ಹೋದಳು. ಮೀನಂಗಡಿಯವಳು ಮೀನಿನ ಹುರುಪೆಗಳು ಅಂಟಿಕೊಂಡಿದ್ದ ತಕ್ಕಡಿಯನ್ನು ಹತ್ತುಸಲ ಕೈಗೆ ತೆಗೆದುಕೊಂಡು ಹತ್ತುಸಲ ಚಪ್ಪಟೆಮೀನಿನ ಕುಕ್ಕೆಯೊಳಕ್ಕೆ ಎಸೆದಳು. ಮೀನಂಗಡಿಯವಳು ಮುಖವನ್ನು ಮೇಲಕ್ಕೂ ಕೆಳಕ್ಕೂ ಬೇಗಬೇಗ ಚಲಿಸುತ್ತ ಚೆನ್ನಾಗಿ ಅಭಿನಯಿಸುತ್ತಿದ್ದಳು. ಮುಂಗೈವರೆಗೆ ಹೆಣಿಗೆ ಕೈಚೀಲ ವನ್ನು ತೊಟ್ಟಿದ್ದ ದುಂಡುಕೈಯನ್ನು ಅಲ್ಲಾಡಿಸುತ್ತ ತನ್ನ ತುಂಡು ಬೆರಳನ್ನು ಬಹು ಸ್ವಾರಸ್ಯವಾದ ರೀತಿಯಲ್ಲಿ ಎತ್ತಿ ಬೊಟ್ಟಿಟ್ಟು ತೋರಿಸುತ್ತಿದ್ದಳು. ತನ್ನ ಕೆಂಪು ಮುಖವನ್ನು ಒರೆಸಿಕೊಳ್ಳುವಂತೆ ಆಗಾಗ್ಗೆ ತೋಳಿನಿಂದ ಮುಖವನ್ನು ಸವರಿಕೊಳ್ಳುತ್ತಿದ್ದಳು. ಅವಳ ಗದ್ದದ ಮೇಲೆ ಬೂದು ಬಣ್ಣದ ಕೂದಲಿನ ಸುಳಿಗಳಿದ್ದುವು. ಅವಳಿಗೆ ಕಪ್ಪು ಮೀಸೆಗೂದಲುಗಳೂ ಇದ್ದುವು.

"ಇಲ್ಲಿ ನೋಡಿ ತಾಯಿ, ಇಂಥ ಕಪ್ಪೆಮೀನು ನಿಮಗೆಲ್ಲೂ ಸಿಕ್ಕೋದಿಲ್ಲ. ಚಿನ್ನ ತೂಗೋದೂ ಒಂದೇ, ಇದನ್ನು ತೂಗೋದೂ ಒಂದೇ." ಎಂದು ಮೀನಂಗಡಿಯವಳು ಹೇಳಿದಳು.

"ಏನು ಚೆನ್ನಾಗಿವೆ? ಎಲ್ಲಾ ಚೀಕಲು. ಹುರಿಯೋದಕ್ಕೂ ಬರೋದಿಲ್ಲ ಇವು." ಎಂದು ಗಿರಾಕಿ ಅಲಕ್ಷ್ಯವನ್ನು ನಟಿಸುತ್ತ ನಾಲ್ಕು ಹೆಜ್ಜೆ ಇಟ್ಟಳು.

"ಹೋಗಬೇಡಿ ಬನ್ನೀಮ್ಮ. ಹುರಿಯೋದಕ್ಕೂ ಆಗೋದಿಲ್ಲ ಅಂತೀರಲ್ಲ. ಇದಕ್ಕಿಂತ ದೊಡ್ಡದು ಈ ಮಾರುಕಟ್ಟೆಯಲ್ಲಿ ಹುಡುಕಿದರೂ ಸಿಕ್ಕೋದಿಲ್ಲ. ಯಾರ ಹತ್ತಿರ ಬೇಕಾದರೂ ತಗೊಳ್ಳಿ ನನಗೇನು. ಅದಕ್ಕಲ್ಲ ನಾನು ಹೇಳಿದ್ದು. ಮಾಮೂಲು ಗಿರಾಕಿಗಳಿಗೆ ಮೋಸ ಮಾಡಿ ಚೆನ್ನಾಗಿಲ್ಲದೇ ಇರೋದನ್ನೆಲ್ಲ ತಮ್ಮ ತಲೆಗೆ ಕಟ್ಟೋಳಲ್ಲ ನಾನು. ಚೆನ್ನಾಗಿ ತಿಳಿದುಕೊಂಡಿರಿ."

"ಈ ಕಪ್ಪೆ ಮೀನಿಗೆ ಡಜನ್ನಿಗೆ ಹತ್ತು ಕೊಪೈಕ್ಕು ಅಂದರೇನು? ಕಂಡು ಕೇಳಿದ್ದೇ ಇಲ್ಲ. ಎಂಟು ಕೊಪೆಕ್ಕಿಗಿಂತ ಒಂದು ಬಿಡಿಗಾಸೂ ಹೆಚ್ಚಾಗಿ ಬೆಲೆ ಬಾಳೋದಿಲ್ಲ."

"ಹೋಕ್ಕೊಳ್ಳಿ, ತಗೋಳ್ಳೀಮ್ಮ. ಹತ್ತೊಂಬತ್ತು ಕೊಪೆಕ್ಕಿಗೆ ಎರಡು ಡಜನ್ನು."

"ಆ ದುಡ್ಡಿಗೆ ಇನ್ನು ಯಾವುದಾದರೂ ಅಂಗಡೀಲಿ ದಪ್ಪ ಮೀನನ್ನೇ ತಗೋಬಹುದು."

"ನನ್ನ ಕೊನೇ ಬೆಲೆ ಹದಿನೆಂಟು ಕೊಪೆಕ್ಕು. ತಕ್ಕೊಳ್ಳೋದಿದ್ದರೆ ತಕ್ಕೊಳ್ಳಿ; ಇಲ್ಲದೇ ಇದ್ದರೆ ಬಿಟ್ಟುಬಿಡಿ. ಯಾಕೆ ಸುಮ್ಮಸುಮ್ಮನೆ ಬೇರೆ ಕಡೇಗೆ ಹೋಗ್ತೀರಿ. ಇಷ್ಟು ಅಗ್ಗವಾಗಿ ಯಾರೂ ಕೊಡೋದಿಲ್ಲ."

ಕೊನೆಗೆ ವ್ಯಾಪಾರ ಮುಗಿಯಿತು. ಅವಳು ಗಿರಾಕಿಗೆ ಮೀನುಗಳನ್ನು ಎಣಿಸಿಕೊಟ್ಟು ನಾಣ್ಯ ಗಳನ್ನು ತನ್ನ ಚೀಲದೊಳಕ್ಕೆ ಹಾಕಿಕೊಂಡಳು.

ಅಂಗಡಿಯವಳು ತನ್ನನ್ನು ನೋಡುವವರೆಗೂ ಗಾವ್ರಿಕ್ ತಾಳ್ಮೆಯಿಂದ ನಿರೀಕ್ಷಿಸುತ್ತ ನಿಂತು ಕೊಂಡಿದ್ದ. ಹುಡುಗ ತನಗಾಗಿ ಕಾಯುತ್ತಿದ್ದಾನೆಂಬುದು ಅವಳಿಗೆ ತಿಳಿಯದೆ ಇರಲಿಲ್ಲ. ಆದರೆ ಬಹುಹೊತ್ತು ಅವನನ್ನು ನೋಡದವಳಂತೆ ತನ್ನ ವ್ಯಾಪಾರದಲ್ಲಿ ಅವಳು ಮಗ್ನಳಾಗಿದ್ದಳು

ಮಾರುಕಟ್ಟೆಯ ಅಂಗಡಿಯವರ ನಡೆವಳಿಕೆಯೇ ಹೀಗೆ. ನಿಮಗೆ ದುಡ್ಡಿನ ಆವಶ್ಯಕತೆ ಇದ್ದರೆ ನೀವು ಕಾದುಕೊಂಡು ಬಿದ್ದಿರಬೇಕು. ಅದರಲ್ಲಿ ಕೆಟ್ಟು ಹೋಗುವುದೇನೂ ಇಲ್ಲ. ಸ್ವಲ್ಪ ಹೊತ್ತು ನಿಂತು ಕೊಂಡಿದ್ದರೆ ಕಾಲುಬಿದ್ದು ಹೋಗುತ್ತದೆಯೆ ?

"ಹೊಸ ಮೀನು! ಚಪ್ಪಟೆ ಮೀನು! ಕಪ್ಪೆ ಮೀನು!" ಉಸಿರೆಳೆದುಕೊಳ್ಳುವುದಕ್ಕೋಸ್ಕರ ನಡುವೆ ತಡೆದಳು. ಇದ್ದಕ್ಕಿದ್ದಂತೆ ಗಾವ್ರಿಕನ ಕಡೆಗೆ ತಿರುಗಿಯೂ ನೋಡದೆ " ತಗೊಂಡು ಬಾ ನೋಡೋಣ." ಎಂದಳು.

ಹುಡುಗ ಮೀನುಡಬ್ಬದ ಬಾಯಿ ತೆರೆದು ಅವಳ ಎದುರಿಗೆ ಹಿಡಿದ. "ಕಪ್ಪೆ ಮೀನು" ಎಂದು ಮರ್ಯಾದೆಯಿಂದ ನುಡಿದ. ಅವಳು ತನ್ನ ಕೈಯನ್ನು ಡಬ್ಬದೊಳಕ್ಕೆ ಹಾಕಿ ಕೆಲವು ಮೀನು ಗಳನ್ನು ಕುಶಲ ಹಸ್ತದಿಂದ ಹೊರಕ್ಕೆ ತೆಗೆದಳು. ತೀಕ್ಷ್ಣದೃಷ್ಟಿಯನ್ನು ಅವುಗಳ ಕಡೆಗೆ ಬೀರಿ ಇಸಾಬೆಲ ದ್ರಾಕ್ಷಿ ಹಣ್ಣುಗಳಂತೆ ಇದ್ದ ನೀಲಿಗಪ್ಪಿನ ದುಂಡು ಕಣ್ಣುಗಳಿಂದ ಗಾವ್ರಿಕನನ್ನು ದೃಷ್ಟಿಸಿ ನೋಡುತ್ತ ಹೇಳಿದಳು:

"ಕಪ್ಪೆ ಮೀನೆಲ್ಲಿ ?"

ಗಾವ್ರಿಕ್ ಮೌನವಾಗಿದ್ದ.

"ಕಪ್ಪೆ ಮೀನೆಲ್ಲಿ ಅಂತ ಕೇಳ್ತೀನಿ."

ಹುಡುಗ ಖಿನ್ನನಾಗಿ ತನ್ನ ಪಾದವನ್ನು ಒಂದು ಸಲ ಎತ್ತಿಟ್ಟು ಬಹಳ ವಿನಯಪೂರ್ವಕ ವಾಗಿ ಮುಗುಳುನಗುತ್ತ ಅಹಿತಕರವಾದ ಸಂಭಾಷಣೆಯನ್ನು ವಿನೋದಕ್ಕೆ ತಿರುಗಿಸಬೇಕೆಂದು ಪ್ರಯತ್ನಮಾಡಿದ. "ಇಲ್ಲೇ ಇದೆಯಲ್ಲ. ನಿಮ್ಮ ಕೈಯಲ್ಲೇ ಇವೆ ನೋಡಿ" ಎಂದ.

"ಎಲ್ಲಿ ಕಪ್ಪೆಮೀನು?" ಮೀನಂಗಡಿಯವಳು ಕೋಪದಿಂದ ಕೆಂಡವಾಗುತ್ತ ಹಟಾತ್ತನೆ ಕಿರುಚಿದಳು. "ಎಲ್ಲೀಂತ? ಎಲ್ಲಿ ತೋರಿಸು, ಕಾಣಿಸೋದೇ ಇಲ್ಲ. ನನ್ನ ಕೈಲಿರೋದನ್ನ ಕಪ್ಪೆ ಮೀನು ಅಂತೀಯಾ? ಮೀನಲ್ಲ ಮೀನಿನ ಮೈಮೇಲಿನ ಹೇನು. ಥೂ ಈ ಚೇಕಲನ್ನ ತರೋಕೆ ಬಂದೆಯಾ. ತಗೊಂಡು ಹೋಗಿ ಚೆರಂಡಿಗೆ ಬಿಸಾಡು."

ಗಾವ್ರಿಕ್ ಮಾತಾಡಲಿಲ್ಲ. ಅವನು ತಂದ ಕಪ್ಪೆಮೀನುಗಳನ್ನು ದಪ್ಪವು ಎಂದು ಹೇಳು ವಂತಿರಲಿಲ್ಲವೆಂಬುದೇನೋ ನಿಜ. ಆದರೆ ಆ ಮೀನಂಗಡಿಯವಳು ಕಿರುಚಿಕೊಂಡಷ್ಟು ಸಣ್ಣ ದಾಗಿರಲಿಲ್ಲ. ಆದರೆ ಅವನು ಎದುರುವಾದಿಸುವ ಸ್ಥಿತಿಯಲ್ಲಿರಲಿಲ್ಲ.

ಕಿರುಚಿ ಮುಗಿದಮೇಲೆ ಮೀನಂಗಡಿಯವಳು ಬಹು ಚುರುಕಾಗಿ ಹತ್ತು ಹತ್ತರಂತೆ ಕೈಗೆ ತೆಗೆದುಕೊಂಡು ಎಣಿಸುತ್ತ ತನ್ನ ಕುಕ್ಕೆಗೆ ಹಾಕುತ್ತ ಬಂದಳು. ಅವಳ ಕೈ ಎಷ್ಟು ಚುರುಕಾಗಿ ಆಡುತ್ತಿತ್ತೆಂದರೆ ಗಾವ್ರಿಕನಿಗೆ ಅವಳ ಎಣಿಕೆಯನ್ನು ಅನುಸರಿಸಲಾಗಲಿಲ್ಲ. ಅವಳು ಮೋಸ ಮಾಡುತ್ತಿರುವಂತೆ ಅವನಿಗೆ ಕಂಡಿತು. ಆದರೆ ಅವಳು ಎಣಿಸಿ ಹಾಕಿದ ಕುಕ್ಕೆಯಲ್ಲಿ ಬೇರೆ ಮೀನುಗಳು ಇದ್ದುದರಿಂದ ಪುನಃ ಎಣಿಸಿ ಸರಿಯಾಗಿದೆಯೋ ಇಲ್ಲವೋ ಎಂದು ನೋಡಲವಕಾಶ ವಿರಲಿಲ್ಲ. ಕುಕ್ಕೆಯಲ್ಲಿನ ಮೀನುಗಳಲ್ಲಿ ತಾನು ತಂದಿದ್ದು ಯಾವುದು, ಮೊದಲು ಅದರಲ್ಲಿದ್ದುದು ಯಾವುದು ಎಂಬುದನ್ನು ಹೇಳುವುದು ಹೇಗೆ? ಗಾವ್ರಿಕ್ ದಿಗಿಲುಬಿದ್ದ. ಉದ್ವೇಗದಿಂದ ಅವನ ಮುಖದಲ್ಲಿ ಬೆವರು ಹೊರಟಿತು.

"ಚಿಲ್ಲರೆ ಬಿಟ್ಟು ಹೇಳೋದಾದರೆ ಒಟ್ಟು ಇನ್ನೂರ ಐವತ್ತು ಮೀನುಗಳಿವೆ", ಮೀನಿನ

ಕುಕ್ಕೆಯನ್ನು ಗೋಣಿತಾಟಿನಿಂದ ಮುಚ್ಚುತ್ತ ಮೀನಂಗಡಿಯವಳು ಹೇಳಿದಳು. "ನಿನ್ನ ಡಬ್ಬ ತಗೋ. ಹೋಗಿ ಬಾ. ನಿಮ್ಮ ತಾತನಿಗೆ ಹೇಳು ಇನ್ನೂ ಎಂಬತ್ತು ಕೊಪೆಕ್ಕು ಬಾಕಿ ಇದೆ ಅಂತ. ಮರೆತು ಬಿಟ್ಟೀಯೆ, ಸರಿಯಾಗಿ ಜ್ಞಾಪಕ ಇಟ್ಟುಕೊಂಡು ಹೇಳು. ಇನ್ನುಮೇಲೆ ಇಷ್ಟು ಸಣ್ಣ ಮೀನುಗಳನ್ನು ಕಳಿಸಬಾರದು ಅಂತ ನಾನು ಹೇಳಿದೆ ಅಂತ ಹೇಳು. ಸಣ್ಣ ಮೀನುಗಳನ್ನು ಕಳಿಸಿದರೆ ಇನ್ನುಮೇಲೆ ನಾನು ಅವುಗಳನ್ನು ಕಣ್ಣೆತ್ತಿಯೂ ನೊಡೋದಿಲ್ಲ."

ಹುಡುಗನ ಬಾಯಿಕಟ್ಟಿತು. ಏನನ್ನೋ ಹೇಳಬೇಕೆಂದು ಪ್ರಯತ್ನಿಸಿದ. ಆದರೆ ಗಂಟಲು ಕಟ್ಟಿತು. ಮೀನಂಗಡಿಯವಳು ಅವನ ಕಡೆಗೆ ಎಳ್ಳಷ್ಟೂ ಗಮನ ಕೊಡಲಿಲ್ಲ. ಮಾಮೂಲಿನಂತೆ "ಮೀನು! ಚಪ್ಪಟೆ ಮೀನು! ಕಪ್ಪೆ ಮೀನೂ!" ಎಂದು ಸಾರಿ ಹೇಳಲಾರಂಭಿಸಿದಳು.

"ಅಮ್ಮ; ಅಮ್ಮ . . ."ಎಂದು ಕೊನೆಗೆ ಹೇಗೋ ಅವನ ಬಾಯಿಂದ ಎರಡು ಮಾತುಗಳು ಹೊರಟವು.

ಅವಳು ಅಸಹನೆಯಿಂದ ಹುಡುಗನ ಕಡೆಗೆ ತಿರುಗಿ "ಇಲ್ಲೇ ಇದ್ದೀಯಾ? ಇನ್ನೇನಾಗ ಬೇಕಾಗಿತ್ತು?" ಎಂದು ಕೇಳಿದಳು.

"ನೂರಕ್ಕೆ ಬೆಲೆ ಹ್ಯಾಗೆ ಹಾಕ್ಕೊಂಡಿರಿ ಅಂತ ಕೇಳೋಣ ಅಂತ ನಿಂತೆ".

"ನೂರಕ್ಕೆ ಮೂವತ್ತು ಕೊಪೆಕ್ಕು. ಅಷ್ಟಕ್ಕೂ ಒಟ್ಟು ಎಪ್ಪತ್ತೈದು. ನೀವು ನನಗೆ ಒಂದು ರೂಬಲ್ಲು ಮತ್ತು ಐವತ್ತೈದು ಕೊಪೆಕ್ಕು ಕೊಡಬೇಕಾಗಿತ್ತು. ಈಗಿನ ಎಪ್ಪತ್ತೈದು ವಜಾ ಜಾತ ನನಗೆ ಇನ್ನೂ ಎಂಬತ್ತು ಕೊಪೆಕ್ಕು ಕೊಡಬೇಕು. ನಿಮ್ಮ ತಾತನಿಗೆ ಹೇಳಿಬಿಡು. ಹೋಗಿ ಬಾ."

"ನೂರಕ್ಕೆ ಮೂವತ್ತು ಕೊಪೆಕ್ಕು!" ಕೋಪದಿಂದ ಕಿರುಚಿಕೊಂಡು ಬಿಡಬೇಕು ರಕ್ತ ಸುರಿಯುವ ಹಾಗೆ ಅವಳ ಮೂಗನ್ನು ಚಿವುಟಿಬಿಡಬೇಕು ಎನ್ನುವಷ್ಟು ನೋವಾಯಿತು ಗಾವ್ರಿಕನಿಗೆ ಹೌದು, ಅವಳನ್ನು ಕಚ್ಚಿ ಕಚ್ಚಿ ರಂಪಮಾಡಿಬಿಡಬೇಕು ಎನ್ನುವಷ್ಟು ಕೋಪ. ಆದರೆ ಹೇಗೋ ಬಿಗಿ ಹಿಡಿದುಕೊಂಡ. ಹಲ್ಲು ತೋರಿಸುತ್ತ ಅತಿ ದೈನ್ಯದಿಂದ ಒಂದು ಮುಗುಳ್ನಗೆಯನ್ನು ಬೀರಿದ. "ನಮಗೆ ಯಾವಾಗಲೂ ನೂರಕ್ಕೆ ನಲವತ್ತೈದು ಕೊಪೆಕ್ ಕೊಡ್ತಾ ಇದ್ದಿರಲ್ಲ?" ಎಂದು ಕೇಳಿದ. ಇನ್ನೇನು ಕಣ್ಣಿನಲ್ಲಿ ನೀರು ತೊಟ್ಟಿಕ್ಕಬೇಕು.

"ಈ ಕಚಡಾಕ್ಕೆ ಮೂವತ್ತು ಸಿಕ್ಕಿತಲ್ಲ, ನಿನ್ನ ಅದೃಷ್ಟ. ಹೂಂ, ಇನ್ನು ಗಾಡಿಬಿಡು."

"ನೀವು ನೂರಕ್ಕೆ ಎಂಬತ್ತು ಸಂಪಾದಿಸ್ತೀರಿ...."

ಹೋಗ್ತೀಯೋ ಇಲ್ಲವೋ, ಪೀಡಿಸ್ತಾ ನಿಂತ ಇಲ್ಲಿ. ನನ್ನ ಮೀನಿಗೆ ನಾನು ಹಾಕಿದ ಬೆಲೆ. ನಿನ್ನಿಂದ ಅಪ್ಪಣೆ ತಗೋಬೇಕಾಗಿಲ್ಲ." ಎಂದು ಹೇಳಿ ಪುನಃ ಮೊದಲಿನಂತೆ ಎತ್ತರದ ಕೀರಲು ದನಿಯಲ್ಲಿ "ಚಪ್ಪಟೆ ಮೀನು! ಚಪ್ಪಟೆ ಮೀನು! ಚಪ್ಪಟೆ ಮೀನು!" ಎಂದು ಕೂಗಲಾರಂಭಿಸಿ ದಳು.

ಗಾವ್ರಿಕ್ ಮಡಾಂಸ್ಟೊರೋಷೆಂಕೋ ಕಡೆಗೆ ನೋಡಿದ. ಆ ದಡೂತಿ ಹೆಂಗಸು ಕಲ್ಲಿನ ಹಾಗೆ ಕಾಲುಮಣೆ ಮೇಲೆ ಕುಳಿತಿದ್ದಳು. ಅವಳನ್ನು ನೋಡಿದರೆ ಅವಳ ಹತ್ತಿರ ಮಾತಾಡುವುದ ಹ್ಯಾಗೆ ಎಂದು ಹೆದರಿಕೆ ಆಗುವ ಹಾಗಿತ್ತು.

ತಮ್ಮ ಹತ್ತಿರ ಒಂದೇ ಒಂದು ಕೊಪೆಕ್ಕೂ ಇಲ್ಲ. ತಮ್ಮ ಹೊಟ್ಟೆಗೆ ಒಂದಿಷ್ಟು ಬ್ರೆಡ್ಡನ್ನೂ

ಎರೆಯಾಗಿ ಕಟ್ಟೋದಕ್ಕೆ ಒಂದಿಷ್ಟು ಮಾಂಸವನ್ನೂ ಕೊಳ್ಳದೆ ವಿಧಿಯಿಲ್ಲ. ಕೊನೇಪಕ್ಷ ಒಂದು ಹದಿನೈದು ಕೊಪೆಕ್ಕಾದರೂ ಕೊಟ್ಟಿದ್ದರೆ ಸಾಕಾಗಿತ್ತು ಎಂದು ಅವನು ಅವಳಿಗೆ ಹೇಳಬಹುದಾಗಿತ್ತು. ಆದರೆ ಅವಳೆದುರಿಗೆ ತಾನು ಅಷ್ಟು ಅಲ್ಪನಾಗಿ ಹುಲ್ಲುಕಡ್ಡಿಯಂತೆ ಪ್ರದರ್ಶಿಸಿಕೊಳ್ಳುವುದು ಯೋಗ್ಯವೇ ಎನ್ನಿಸಿತು. ಬೆಸ್ತರಲ್ಲಿ ಸ್ವಾಭಾವಿಕವಾಗಿ ಹುದುಗಿರುವ ಅಭಿಮಾನ ಗಾವ್ರಿಕನಲ್ಲಿ ಜಾಗ್ರತಗೊಂಡಿತು. ಷರಟಿನ ತೋಳಿನಿಂದ ಮೂಗನ್ನು ನೆನೆಸುತ್ತಿದ್ದ ಕಣ್ಣೀರನ್ನು ಒರಸಿಕೊಂಡ. ಎರಡು ಬೆರಳುಗಳಿಂದಲೂ ಮೂಗನ್ನು ಹಿಡಿದುಕೊಂಡು ಸಿಂಬಳವನ್ನು ಧೂಳಿಗೆ ಬೀಳುವಂತೆ ತೆಗೆದುಹಾಕಿದ. ಹಗುರವಾಗಿದ್ದ ಮೀನಿನ ಡಬ್ಬವನ್ನು ಹೆಗಲಿನ ಮೇಲಕ್ಕೆ ಇಟ್ಟುಕೊಂಡು ಕಪ್ಪುಸಮುದ್ರದ ಬೆಸ್ತರಂತೆ ಒಲೆದಾಡುತ್ತ ನಡೆದ.

ಅವನು ನಡೆದು ಹೋಗುತ್ತ ಹೋಗುತ್ತ ಸ್ವಲ್ಪ ಮಾಂಸ ಮತ್ತು ಬ್ರೆಡ್ಡು ಎಲ್ಲಿ ಸಿಕ್ಕೀತು ಎಂದು ಚಿಂತಿಸುತ್ತಿದ್ದ.

೧೪. "ಕೆಳದರ್ಜೆಯವರು"

ಸಂಸಾರದ ಕಷ್ಟಗಳಿಗೆ ಸಿಕ್ಕಿಕೊಂಡ ದೊಡ್ಡವರಂತೆ ಗಾವ್ರಿಕನನ್ನೂ ಕೂಡ ದುಡಿತ ಮತ್ತು ಚಿಂತೆಗಳು ಮುತ್ತಿಕೊಂಡಿದ್ದವೆಂಬುದನ್ನು ನಾವು ಆಗಲೇ ನೋಡಿದ್ದೇವೆ. ಎಷ್ಟಾದರೂ ಅವನು ಕೇವಲ ಒಂಬತ್ತು ವರ್ಷದ ಬಾಲಕನೆಂಬುದನ್ನು ಮರೆಯಬಾರದು.

ಅವನಿಗೂ ಗೆಳೆಯರಿದ್ದರು. ಎಲ್ಲ ಒಡೆಸ್ಸ ಹುಡುಗರಂತೆ ಅವನೂ ಬೀದಿಯ ಗೆಳೆಯರೊಡನೆ ಆಟವಾಡುತ್ತಿದ್ದ, ಓಡುತ್ತಿದ್ದ, ಜಗಳವಾಡುತ್ತಿದ್ದ, ಗುಬ್ಬಚ್ಚಿಗಳನ್ನು ಹಿಡಿಯುತ್ತಿದ್ದ, ಕವಣೆಕಲ್ಲಿನಿಂದ ಗುರಿಕಟ್ಟಿ ಹೊಡೆಯುತ್ತಿದ್ದ.

"ಬೀದಿಪೋರರು" ಎಂದು ಹೇಳುವ ಗುಂಪಿಗೆ ಗಾವ್ರಿಕ್ ಸೇರಿದ್ದ ಮತ್ತು ಇದರ ಫಲವಾಗಿ ಅವನಿಗೆ ಎಲ್ಲೆಲ್ಲೂ ಪರಿಚಿತರಿದ್ದರು. ಅವನು ಯಾವ ಮನೆ ಅಂಗಳಕ್ಕಾದರೂ ಹೋಗಿಯಾನು, ಯಾವ ಬೀದಿಗಾದರೂ ಆಟಕ್ಕೆ ಹೋಗಿಯಾನು. ಅವನನ್ನು ತಡೆಯುವವರು ಯಾರೂ ಇರಲಿಲ್ಲ. ಅವನು ಪಕ್ಕಿಯಂತೆ ಸ್ವತಂತ್ರನಾಗಿದ್ದ. ಇಡೀ ನಗರವೇ ಅವನದಾಗಿದ್ದಿತು. ಕಾಡಿನ ಹಕ್ಕಿಗೂ ತನ್ನ ಒಲವಿನ ಸಂಚಾರಸ್ಥಾನವಿರುತ್ತದೆ ಗಾವ್ರಿಕನಿಗೂ ಹಾಗೆಯೇ ಅವನ ಮೆಚ್ಚಿನ ಸಂಚಾರ ಸ್ಥಾನಗಳಿದ್ದುವು. ಆತ್ರಿನ ಮತ್ತು ಮಾಲಿ ಫಾಂಟಾನ್ ಮೊಹಲ್ಲಗಳಲ್ಲಿ ಸಮುದ್ರತೀರಕ್ಕೆ ಹತ್ತಿರವಾಗಿದ್ದ ಬೀದಿಗಳು ಗಾವ್ರಿಕನ ಮೆಚ್ಚಿನ ಸ್ಥಳಗಳು. ಅಲ್ಲಿನ ಹುಡುಗರ ನಡುವೆ ಅವನು ಅನಭಿಷಿಕ್ತ ರಾಜ. ಅವನ ಸ್ವತಂತ್ರ ಜೀವನವನ್ನು ಕಂಡು ಇತರ ಹುಡುಗರು ತಮಗೆ ಆ ಸ್ವಾತಂತ್ರ್ಯವಿಲ್ಲವಲ್ಲ ಎಂದು ಕರುಬುತ್ತಿದ್ದರು ಮತ್ತು ಅವನನ್ನು ಅದಕ್ಕಾಗಿ ಮೆಚ್ಚುತ್ತಿದ್ದರು.

ಗಾವ್ರಿಕನಿಗೆ ಅನೇಕ ಜನ ಗೆಳೆಯರಿದ್ದರು. ಆದರೆ ಅವನ ನಿಜವಾದ ಆಪ್ತನೆಂದರೆ ಪೇತ್ಯ. ಎಲ್ಲಕ್ಕಿಂತ ಸುಲಭವಾದ ಕೆಲಸವೆಂದರೆ ಪೇತ್ಯನನ್ನು ಹೋಗಿ ಕಾಣುವುದು. ಅವನ ಜತೆ ಸೇರಿ ತನಗೆ ಬೇಕಾದ ಬ್ರೆಡ್ಡು ಮಾಂಸಗಳಿಗಾಗಿ ಏನಾದರೊಂದು ಉಪಾಯ ಹೂಡಬಹುದಾಗಿತ್ತು. ಸ್ವಾಭಾವಿಕವಾಗಿ ಪೇತ್ಯನ ಹತ್ತಿರ ಹಣವಿರುತ್ತಿರಲಿಲ್ಲ, ಅದರಲ್ಲೂ ಹದಿನೈದು ಕೊಪೆಕ್ಕುಗಳಷ್ಟು ಹೆಚ್ಚು ಹಣ ಎಂದೂ ಇಲ್ಲ. ಹಣವನ್ನು ಅವನಿಂದ ಪಡೆಯುವ ಯೋಚನೆಯನ್ನು ಮಾಡ

ಬೇಕಾಗಿರಲಿಲ್ಲ. ಪೇತ್ಯ ತಮ್ಮ ಅಡಿಗೆ ಮನೆಯ ಗೂಡಿನಿಂದ ಸ್ವಲ್ಪ ಬ್ರೆಡ್ಡನ್ನೂ ಮಾಂಸದ ತುಕಡಿಯೊಂದನ್ನೂ ತಂದು ಕೊಡುವುದು ಅಷ್ಟೇನೂ ಕಷ್ಟವಾಗಿರಲಿಲ್ಲ. ಕಳೆದ ಕ್ರಿಸ್‌ಮಸ್ ಹಬ್ಬದ ದಿನ ಪೇತ್ಯನ ಮನೆಗೆ ಗಾವ್ರಿಕ್ ಅವನ ಅತಿಥಿಯಾಗಿ ಹೋಗಿದ್ದ. ಅವರ ಮನೆಯ ಗೂಡಿನಲ್ಲಿ ಬ್ರೆಡ್ಡನ್ನು ಒಂದರಮೇಲೊಂದರಂತೆ ಪೇರಿಸಿಟ್ಟಿದ್ದುದನ್ನು ತಾನು ಸ್ವತಃ ಕಂಡಿದ್ದ. ಅದರ ಕಡೆಗೆ ಯಾರ ಗಮನವೂ ಇರುತ್ತಿರಲಿಲ್ಲ. ಒಂದರ್ಧ ಬ್ರೆಡ್ಡನ್ನು ತಂದಿದ್ದರೆ ಅವರೇನೂ ಅದನ್ನು ಕಾಣುತ್ತಿರಲಿಲ್ಲ. ಈ ಜನ ಬ್ರೆಡ್ಡಿನಂಥ ವಿಷಯಗಳಿಗೆ ಅಷ್ಟೇನೂ ಹೆಚ್ಚಿನ ಗಮನ ಕೊಡುತ್ತಿರಲಿಲ್ಲ.

ಆದರೆ ಪೇತ್ಯ ಬೇಸಿಗೆ ರಜಕ್ಕಾಗಿ ಹಳ್ಳಿಯ ಕಡೆಗೆ ಹೋಗಿದ್ದವನು ಹಿಂದಿರುಗಿ ಬಂದಿದ್ದನೋ ಇಲ್ಲವೋ ಗೊತ್ತಿರಲಿಲ್ಲ. ಅವನು ಇಷ್ಟು ಹೊತ್ತಿಗೆ ಬಂದುಬಿಟ್ಟಿರಬೇಕಾಗಿತ್ತು. ಪೇತ್ಯನ ಮನೆ ಅಂಗಳಕ್ಕೆ ಈ ಬೇಸಿಗೆಯಲ್ಲಿ ಅನೇಕ ಬಾರಿ ಹೋಗಿ ಗಾವ್ರಿಕ್ ವಿಚಾರಿಸಿಕೊಂಡು ಬಂದಿದ್ದ. ಆದರೆ ಅವನಿನ್ನೂ ಬಂದಿರಲಿಲ್ಲ. ಹಿಂದಿನ ಸಲ ಅವರ ಮನೆ ಅಡಿಗೆಯವಳಾದ ದುನ್ಯ ಅವರು ಇಷ್ಟರಲ್ಲೇ ಬರುವರೆಂದು ಹೇಳಿದ್ದಳು. ಆ ಉತ್ತರ ಪಡೆದು ಸುಮಾರು ಐದು ದಿವಸಗಳಾಗಿದ್ದುವು. ಪ್ರಾಯಶಃ ಅವನು ಇಷ್ಟು ಹೊತ್ತಿಗೆ ಬಂದಾಗಿತ್ತೋ ಏನೋ.

ಮಾರುಕಟ್ಟೆಯಿಂದ ಗಾವ್ರಿಕ್ ಪೇತ್ಯನ ಮನೆಗೆ ಹೊರಟ. ಅವನ ಮನೆ ಅಷ್ಟೇನೂ ದೂರವಾಗಿರಲಿಲ್ಲ. ಕುಲಿಕೋವೋ ಮೈದಾನ ಮತ್ತು ಕನತ್ನಾಯ ಬೀದಿಯ ಮೂಲೆಯಲ್ಲಿ ರೈಲು ನಿಲ್ದಾಣದ ಎದುರಿಗೆ ಸೈನ್ಯಾಧಿಕಾರಿಗಳ ನಿವಾಸದ ಕಟ್ಟಡದ ಮುಂದಿನದೇ ಅವರ ಮನೆ. ಎಷ್ಟು ಸೊಗಸಾದ ಮನೆ ಅದು. ರಾಜನ ಹಾಗೆ ವಾಸಮಾಡಬೇಕಾದರೆ ಅದಕ್ಕಿಂತ ಇನ್ನು ಒಳ್ಳೆಯ ಮನೆ ಸಿಗುವುದಿಲ್ಲ.

ಹುಡುಗರ ಬೀದಿ ಜಗಳಕ್ಕೆ ಅದು ಪ್ರಶಸ್ತವಾದ ಸ್ಥಳ. ಅದಕ್ಕೆ ಎರಡು ಹೆಬ್ಬಾಗಿಲುಗಳಿದ್ದುವು. ಒಂದು ಕುಲಿಕೋವೋ ಮೈದಾನದ ಕಡೆಗೆ ಇತ್ತು; ಇನ್ನೊಂದು ಪೊದೆಗಳು, ಬಿಲಗಳು ಕಸಕುಪ್ಪೆಗಳು ಇದ್ದ ಖಾಲಿ ಸ್ಥಳದ ಕಡೆಗೆ. ಕಸದ ರಾಶಿ ಅದು ಆಗಿರಬಾರದೇಕೆ. ಆದರೆ ಎಷ್ಟೊಂದು ತಮಾಷೆ ಸಾಮಾನುಗಳು ಅದರಲ್ಲಿ ಹುದುಗಿದ್ದುವೋ. ಅದರಲ್ಲಿ ಔಷಧಿ ಬುಡ್ಡಿಗಳಿಂದ ಹಿಡಿದು ಸತ್ತ ಇಲಿಗಳವರೆಗೆ ದೊರೆಯದೆ ಇದ್ದ ವಸ್ತುವಿರಲಿಲ್ಲ. ಪೇತ್ಯ ಅದೃಷ್ಟಶಾಲಿ. ಮನೆಯ ಪಕ್ಕದಲ್ಲೇ ನಿಧಿ ತುಂಬಿದ್ದ ಕಸಕುಪ್ಪೆ ಎಷ್ಟು ಹುಡುಗರಿಗಿರುತ್ತದೆ!

ಎರಡನೆಯದಾಗಿ ನಗರದ ಹೊರ ವಲಯಗಳಿಗೆ ಹೋಗಿ ಬರುತ್ತಿದ್ದ ಪುಟ್ಟ ರೈಲು ಅವರ ಮನೆಯ ಹತ್ತಿರವೇ ಹೋಗುತ್ತಿತ್ತು. ಒಂದು ಟೋಪಿಯನ್ನೋ ಒಂದು ಕಲ್ಲನ್ನೋ ಕಂಬಿಯ ಮೇಲಿಟ್ಟು ರೈಲು ಹೋದ ಮೇಲೆ ಅದು ಹೇಗಾಗುತ್ತದೆಂದು ತಮಾಷೆ ನೋಡಲು ಹೆಚ್ಚು ದೂರ ಹೋಗಬೇಕಾಗಿರಲಿಲ್ಲ.

ಮೂರನೆಯದಾಗಿ ಸೇನಾಧಿಕಾರಿಗಳ ನಿವಾಸದ ಕಟ್ಟಡ ಅವರ ಮನೆಯ ಪಕ್ಕದಲ್ಲಿತ್ತು. ಮೈದಾನದ ಕಡೆಗಿದ್ದ ಎತ್ತರವಾದ ಅದರ ಕಲ್ಲುಗೋಡೆಯ ಹಿಂದೆ ಒಂದು ನಿಗೂಢ ಪ್ರಪಂಚವಿತ್ತು. ಅದರ ಹೆಬ್ಬಾಗಿಲನ್ನು ಪಹರೆಯ ಸೈನಿಕರು ಹಗಲು ರಾತ್ರಿ ಕಾವಲು ಕಾಯುತ್ತಿದ್ದರು. ಗೋಡೆಯ ಹಿಂದೆ ದಡದಡ ಎಂದು ಶಬ್ದ ಮಾಡುತ್ತಿದ್ದ ಮುದ್ರಣ ಯಂತ್ರವಿತ್ತು. ಗೋಡೆ ಮೇಲಿನಿಂದ ವಿಧವಿಧವಾದ ಕಾಗದದ ಚೂರುಗಳು ಹಾರಿಬರುತ್ತಿದ್ದುವು. ಅವು ರಿಬ್ಬನ್ನುಗಳಂತೆ ಶಾವಿಗೆಯಂತೆ ವಿವಿಧಾಕಾರವಾಗಿರುತ್ತಿದ್ದುವು.

ಮೈದಾನಕ್ಕೆ ಎದುರಾಗಿ ಸೈನ್ಯಾಧಿಕಾರಿಗಳ ಶಾಖೆಗೆ ಸೇರಿದ ಗುಮಾಸ್ತರುಗಳ ನಿವಾಸದ ಕಿಟಕಿಗಳಿದ್ದುವು. ಅಲ್ಲಿದ್ದ ಒಂದು ಬಂಡೆಯ ಮೇಲೆ ನಿಂತುಕೊಂಡು ಕಿಟಕಿಯ ಕಂಬಿಗಳ ಮೂಲಕ ನೋಡಿದರೆ ಆ ಸ್ಫುರದ್ರೂಪಿಗಳಾದ ಧೈರ್ಯಶಾಲಿಗಳಾದ ಯುವಕ ಗುಮಾಸ್ತರುಗಳ ಜೀವನವನ್ನು ಕಾಣಬಹುದಾಗಿತ್ತು. ಅಧಿಕಾರಿಗಳು ಧರಿಸುವಂಥ ಉದ್ದವಾದ ಷರಾಯಿಗಳನ್ನೂ ಸಾಮಾನ್ಯ ಸಿಪಾಯಿಗಳು ಧರಿಸುವಂತೆ ಹೆಗಲು ಪಟ್ಟಿಗಳನ್ನೂ ಅವರು ಹಾಕಿಕೊಂಡಿರುತ್ತಿದ್ದರು. ಈ ಗುಮಾಸ್ತರು ಸಾಮಾನ್ಯವಾದ 'ಕೆಳದರ್ಜೆ'ಗೆ ಸೇರಿದವರೆಂದು ಸಂಬಲರ್ಹವಾದ ಕಡೆಯಿಂದ ಗಾವ್ರಿಕ್ ತಿಳಿದುಕೊಂಡಿದ್ದ. ಅಂದರೆ ಅವರೂ ಸಾಮಾನ್ಯ ಸೈನಿಕರ ದರ್ಜೆಯವರೇ. ಆದರೆ ಈ ಗುಮಾಸ್ತರಿಗೂ ಆ ಸೈನಿಕರಿಗೂ ಎಷ್ಟೊಂದು ಅಂತರ!

ಪಕ್ಕದ ಮನೆಗಳ ಪರಿಚಾರಿಕೆಯರೇನಾದರೂ ಇಂಥ ಗುಮಾಸ್ತನನೊಬ್ಬನನ್ನು ಕಂಡರೆ ಸಾಕು ಬಿಳಿಚಿಕೊಂಡು ಕಂಪಿಸುತ್ತ ಆಗಲೋ ಈಗಲೋ ಮೂರ್ಛೆ ಹೋಗುವವರಂತಾಗಿ ಬಿಡುತ್ತಿದ್ದರು. ಪರಿಚಾರಿಕೆಯರು ಗುಮಾಸ್ತರ ಆಕರ್ಷಣೆಗೆ ಸಿಕ್ಕಿ ಅಷ್ಟೊಂದು ಉತ್ತೇಜಿತರಾಗುತ್ತಿದ್ದರು. ಸ್ವಲ್ಪವೂ ನಿಷ್ಕರುಣೆಯಿಲ್ಲದೆ ತಲೆಗೂದಲುಗಳನ್ನು ಗುಂಗುರುಗುಂಗುರಾಗಿ ಮಾಡಿಕೊಳ್ಳುವುದೇನು, ಕಪೋಲದ ಮೇಲೆ ಇಳಿಬಿದ್ದ ಕೂದಲುಗಳನ್ನು ಕೊಂಡಿಯಂತೆ ಅಲಂಕರಿಸುವುದೇನು, ಕೆಂಪು ಹಲ್ಲು ಪುಡಿಯನ್ನು ನೀರಿನಲ್ಲಿ ಕಲಸಿ ಬಟ್ಟೆಯನ್ನು ಅದರಲ್ಲಿ ನೆನೆಸಿ ಮೂಗಿಗೆ ಒತ್ತಿಕೊಳ್ಳುವುದೇನು, ಕೆನ್ನೆಗೆ ಕೆಂಪು ಕಾಗದವನ್ನು ಉಜ್ಜಿಕೊಳ್ಳುವುದೇನು! ಇಷ್ಟಾದರೂ ಆ ಗುಮಾಸ್ತರು ಮಾತ್ರ ತಮ್ಮ ಕೃಪಾ ಕಟಾಕ್ಷವನ್ನು ಇವರ ಕಡೆಗೆ ಬೀರುತ್ತಿರಲಿಲ್ಲ.

ಒಡೆಸ್ಸದ ಯಾವ ಸೈನಿಕನಾಗಲಿ ಪರಿಚಾರಿಕೆಯೆಂದರೆ ಬಹಳ ಉತ್ತಮ ದರ್ಜೆಯ ಹೆಂಗಸು, ತನಗೆ ಅವರ ಬಳಿ ಪ್ರವೇಶ ದೊರಕುವುದು ಸಾಧ್ಯವಿಲ್ಲ ಎಂಬ ಭಾವನೆಯನ್ನು ಹೊಂದಿರುತ್ತಿದ್ದ. ಆದರೆ ಸೈನ್ಯಶಾಖೆಯ ಗುಮಾಸ್ತನಿಗೆ ಅವಳು 'ಹಳ್ಳಿ ಗುಗ್ಗು.' ದೃಷ್ಟಿ ಬೀರುವುದಕ್ಕೂ ಅವಳು ಯೋಗ್ಯಳಲ್ಲ.

ಈ ಗುಮಾಸ್ತರುಗಳು ತಮ್ಮ ಕೊಠಡಿಗಳಲ್ಲಿ ಗಿಟಾರ್ ವಾದ್ಯದ ತಂತಿಯನ್ನು ಟೊಯ್ ಟೊಯ್ ಎನ್ನಿಸುತ್ತ ಕಿಟಕಿಗಳ ಬಳಿ ಕಬ್ಬಿಣದ ಮಂಚದಮೇಲೆ ಕುಳಿತುಕೊಂಡು ಇರುತ್ತಿದ್ದರು. ಅವರು ಏಕಾಂಗಿಗಳಾಗಿರುತ್ತಿದ್ದರು. ಅವರ ಮುಖದಲ್ಲಿ ವಿಷಣ್ಣಭಾವ ಎದ್ದು ತೋರುತ್ತಿತ್ತು. ಅವರು ತಮ್ಮ ಮೇಲಂಗಿಗಳನ್ನು ತೆಗೆದಿಟ್ಟು ಕುಳಿತಿರುತ್ತಿದ್ದರು. ಸೊಂಟಕ್ಕೆ ಕೆಂಪು ಬಟ್ಟೆಯ ಪಟ್ಟಿಯನ್ನು ಹೊಲಿದ ಉದ್ದವಾದ ಷರಾಯಿಗಳನ್ನು ಹಾಕಿಕೊಂಡು ಬಿಳಿಯ ಷರಟುಗಳನ್ನು ಧರಿಸಿರುತ್ತಿದ್ದರು. ಅಧಿಕಾರಿಗಳು ಧರಿಸುವಂಥ ನೆಕ್‌ಟೈಗಳನ್ನು ಕಟ್ಟಿಕೊಂಡಿರುತ್ತಿದ್ದರು.

ಅವರು ಭಾನುವಾರದ ದಿನಗಳಲ್ಲಿ ಸಂಜೆ ಹೊರಕ್ಕೆ ಹೊರಟರೆ ನಗರದ ರಸ್ತೆಗಳಲ್ಲಿ ಅವರನ್ನು ಒಬ್ಬೊಬ್ಬರನ್ನೇ ನೋಡುವುದು ಸಾಧ್ಯವೇ ಇರಲಿಲ್ಲ. ಮುಂದುಗಡೆ ಮೇಲಕ್ಕೆ ಕೂದಲನ್ನು ಬಾಚಿ ಎತ್ತಿ ಕಟ್ಟಿಕೊಂಡ ಹೆಂಗಸರವಳು ಒಬ್ಬಳಲ್ಲ ಇಬ್ಬಿಬ್ಬರ ತೋಳುಗಳಲ್ಲಿ ತೋಳುಗಳನ್ನು ಹಾಕಿಕೊಂಡು ಈ ಗುಮಾಸ್ತರುಗಳು ಹೋಗುವುದನ್ನು ಕಾಣಬಹುದಾಗಿತ್ತು.

ಸೈನ್ಯಶಾಖೆಯ ಈ ಗುಮಾಸ್ತರುಗಳು ಸಂಬಲಸಾಧ್ಯವಾದಷ್ಟು ಹಣವಂತರಾಗಿ ಕಾಣುತ್ತಿದ್ದರು. ಒಬ್ಬ ಗುಮಾಸ್ತ ಶ್ರೀಮಂತರ ಕುದುರೆ ಸಾರೋಟಿನಲ್ಲಿ ಕುಳಿತುಕೊಂಡು ಹೋಗುತ್ತಿದ್ದುದನ್ನು ಗಾವ್ರಿಕ್ ಒಮ್ಮೆ ತನ್ನ ಸ್ವಂತ ಕಣ್ಣುಗಳಿಂದ ನೋಡಿದ್ದ. ಇಷ್ಟಾದರೂ ಈ

ಗುಮಾಸ್ತರುಗಳು "ಕೆಳದರ್ಜೆಯವ"ರಾಗಿದ್ದುದು ಬಹಳ ವಿಚಿತ್ರವೆನಿಸುತ್ತಿತ್ತು. ಓರೋಗೆ ಸ್ಕಾಯ ಮತ್ತು ಕುಲಿಕೋವೋ ಮೈದಾನದ ತಿರುವಿನಲ್ಲಿ ಒಂದು ಸಲ ನಡೆದ ಸಂಗತಿ. ಬೆಳ್ಳಿ ಹೆಗಲುಪಟ್ಟಿಗಳನ್ನು ಧರಿಸಿದ್ದ ಅಧಿಕಾರಿಯೊಬ್ಬನು ಗುಮಾಸ್ತನೊಬ್ಬನ ಮುಖದ ಮೇ ಹೊಡೆಯುತ್ತ "ಕತ್ತೆ, ಹಾಗೇ ನಿಂತುಕೊಳ್ಳುವುದು? ನಿಂತುಕೊಳ್ಳುವುದಕ್ಕೆ ಬರೋದಿ ಮತ್ತೇನು ಬರುತ್ತೆ ಇನ್ನು?" ಎಂದು ಗರ್ಜಿಸುತ್ತಿದ್ದುದನ್ನು ಗಾವ್ರಿಕ್ ನೋಡಿದ್ದ. ಆ ಕಾರಿಯ ಗರ್ಜನೆಯನ್ನು ಕೇಳಿ ಗಾವ್ರಿಕನಿಗೇ ನಡುಕ ಉಂಟಾಗಿತ್ತು. ಆ ಗುಮಾಸ್ತ ಕಾ ಗಳನ್ನು ಜೋಡಿಸಿಕೊಂಡು ಸೈನಿಕರೀತಿಯಲ್ಲಿ ನಿಂತಿದ್ದ. ಹಳ್ಳಿಯವನಂತೆ ತನ್ನ ಎಳೆನೀಲಿ ಬಣ್ಣದ ಕಣ್ಣುಗಳಿಂದ ದೈನ್ಯವನ್ನು ಪ್ರದರ್ಶಿಸುತ್ತ ತಲೆಯನ್ನು ಒಲೆದಾಡಿಸುತ್ತ "ಕ್ಷಮಿ ಮಹಾಸ್ವಾಮಿ. ಪುನಃ ಹಾಗೆ ಮಾಡುವುದಿಲ್ಲ" ಎಂದು ಗೊಣಗಿದ.

ಸೈನ್ಯಶಾಖೆಯ ಗುಮಾಸ್ತರದು ಈ ಇಬ್ಬಂದಿ ಸ್ಥಿತಿಯಾಗಿತ್ತು. ಶಿಕ್ಷೆ ವಿಧಿಸಿ ಭೂಮಿ ತಳ್ಳಲ್ಪಟ್ಟ ದೇವಲೋಕದ ದಿವ್ಯಪುರುಷರಂತೆ ಸುಂದರಾಕಾರರಾಗಿಯೂ ಕರುಣಾಜನಕರಾ ವಿಚಿತ್ರವ್ಯಕ್ತಿಗಳಾಗಿಯೂ ಇವರು ತೋರುತ್ತಿದ್ದರು.

ಅವರ ಪಕ್ಕದಲ್ಲಿಯೇ ಇದ್ದ ಸಾಮಾನ್ಯ ಪಹರೆ ಸೈನಿಕರ ಬದುಕೂ ಕೂಡ ಕುತೂಹಲ ವಾಗಿತ್ತು. ಇವರಲ್ಲೂ ಎರಡು ಸ್ವಭಾವಗಳನ್ನು ಗುರುತಿಸಬಹುದಾಗಿತ್ತು.

ಸೈನ್ಯದ ಅಧಿಕಾರಿಗಳ ಭವನದ ಮಹಾದ್ವಾರವು ಹಾಲುಗಲ್ಲಿನದಾಗಿತ್ತು. ತೋ ನಡುಕಟ್ಟನ್ನು ಬಿಗಿದುಕೊಂಡು ಪೂರ್ಣ ಸಮವಸ್ತ್ರವನ್ನು ಧರಿಸಿ ಭವ್ಯವಾದ ಮಹಾದ್ವಾರದಲ್ಲಿ ಶಿ ನಿಂದ ನಿಂತಾಗ ಅವರ ಸ್ವಭಾವದ ಒಂದು ಮುಖವನ್ನು ಕಾಣಬಹುದಾಗಿತ್ತು. ಯಾರಾದ ಅಧಿಕಾರಿಗಳು ಬಂದರೆ ಹೋದರೆ ತಕ್ಷಣ ಚಕ್ಕನೆ ಕಾಲು ಜೋಡಿಸಿಕೊಂಡು ಠೀವಿಯಿಂದ ನಿಂ ಹೊಳೆಯುವ ಸಣ್ಣ ಕತ್ತಿಯನ್ನು ತುದಿಯಲ್ಲಿ ಸಿಕ್ಕಿಸಿದ ಬಂದೂಕನ್ನು ಎತ್ತಿ ಒಂದು ಪಕ್ಕ ಸ್ವಲ್ಪವೇ ಬಗ್ಗಿಸಿ ಹಿಡಿದುಕೊಂಡು ಸೇನಾಸಲಾಮನ್ನು ಕೊಡುತ್ತಿದ್ದ ರೀತಿ ಬಹು ಆಕರ್ಷ ವಾಗಿರುತ್ತಿತ್ತು.

ಉಳಿದ ಕಾಲಗಳಲ್ಲಿ ಸರಳವಾದ ಹಳ್ಳಿಯ ರೈತರ ಸ್ವಭಾವವನ್ನು ಅವರು ತೋರ್ಪಡಿ ತ್ತಿದ್ದರು. ತಮ್ಮ ಕೋಣೆಗಳಲ್ಲಿ ಕುಳಿತು ಗುಂಡಿಗಳನ್ನು ಹೊಲೆದುಕೊಳ್ಳುತ್ತಲೋ, ಬೂ ಗಳಿಗೆ ಬಣ್ಣವನ್ನು ಹಾಕುತ್ತಲೋ, ಡ್ರಾಟ್ಸ್ ಆಟವನ್ನು ಆಡುತ್ತಲೋ ಕಾಲ ಕಳೆಯುತ್ತಿದ್ದ ಆಗ ಅವರ ಸ್ವಭಾವದ ಬೇರೊಂದು ಮುಖವನ್ನು ಕಾಣಬಹುದಾಗಿತ್ತು.

ಬೋಗುಣಿಗಳನ್ನೂ, ಮರದ ಚಮಚಗಳನ್ನೂ ಅವರ ಕಿಟಕಿಗಳಲ್ಲಿ ಕಾಣಬಹು ದ್ದಿತು. ಅವುಗಳ ಬಳಿ ಸೈನ್ಯದಲ್ಲಿ ಕೊಡುವ ತಿಂದು ಮಿಕ್ಕ ಕಪ್ಪು ಬ್ರೆಡ್ಡಿನ ಚೂರು ಇರುತ್ತಿದ್ದುವು. ಅದನ್ನು ಅವರು ಸರಾಗವಾಗಿ ಭಿಕ್ಷುಕರಿಗೆ ಕೊಟ್ಟುಬಿಡುತ್ತಿದ್ದರು.

ಅವರು ಹುಡುಗರೊಡನೆ ಸರಸವಾಗಿ ಮಾತನಾಡುತ್ತಿದ್ದರು. ಆದರೆ ಅವರು ಕೇಳು ಪ್ರಶ್ನೆಗಳು ಮತ್ತು ಅವರು ಉಪಯೋಗಿಸುತ್ತಿದ್ದ ಪದಗಳು ಹುಡುಗರನ್ನು ನಾಚಿಕೆಯಿಂದ ಕೆಂಪು ಮಾಡಿಕೊಂಡು ಓಡಿಹೋಗುವಂತೆ ಮಾಡುತ್ತಿದ್ದುವು.

ಪೇತ್ಯ ವಾಸಿಸುತ್ತಿದ್ದ ಮನೆಯ ಎರಡು ಒಳಾಂಗಣಗಳಿಗೂ ಟಾರು ಹಾಕಿದ್ದಿತು. ಸ್ಥಳ ಕುಂಟೆಬಿಲ್ಲೆ ಆಟ ಆಡಲು ಸೊಗಸಾಗಿತ್ತು ಸೀಮೆಸುಣ್ಣದಿಂದ ಅದರ ಮೇಲೆ ಮನೆಗ

ಬರೆದರೆ ಒಳ್ಳೆ ಥಾಕಾಗಿ ಕಾಣುವುದು. ಅಲ್ಲದೆ ಕಡಲಿನ ನುಣುಪಾದ ಕಲ್ಲುಗಳು ಅದರಮೇಲೆ ಚೆನ್ನಾಗಿ ಜಾರುತ್ತಿದ್ದುವು. ಮಕ್ಕಳ ಆಟದ ಗಲಭೆಯಿಂದ ಬಾಗಿಲು ಕಾಯುವವನಿಗೆ ಕೋಪ ಬಂದಾಗ ಅವನು ಪೊರಕೆಯನ್ನು ಕೈಯಲ್ಲಿ ಹಿಡಿದುಕೊಂಡೇ ಹುಡುಗರನ್ನು ಅಟ್ಟಿಸಿಕೊಂಡು ಹೋಗುತ್ತಾನೆನ್ನಿ. ಆಗ ಸುಲಭವಾಗಿ ಹುಡುಗರು ಪಕ್ಕದ ಅಂಗಳಕ್ಕೆ ತಪ್ಪಿಸಿಕೊಂಡು ಓಡಿ ಹೋಗಬಹುದಾಗಿತ್ತು. ಅಲ್ಲದೆ ಅಲ್ಲಿ ಅಡಗಿಕೊಳ್ಳಲು ಅನುಕೂಲವಾದಂಥ ಉಗ್ರಾಣದ ಕೋಣೆಗಳೂ ಮಳಿಗೆಗಳೂ ಇದ್ದುವು. ಹೊರಗಡೆ ಸೂರ್ಯನ ಬೆಳಕು ಹರಡಿದ್ದರೆ ಒಳಗೆ ಕತ್ತಲೆ ದಟ್ಟೈಸಿರುತ್ತಿತ್ತು. ಮರದ ಪೀಪಾಯಿಗಳು, ಸೌದೆರಾಶಿ, ಹಳೆಯ ಸಾಮಾನುಗಳು ಆ ಉಗ್ರಾಣಗಳಲ್ಲಿ ತುಂಬಿರುತ್ತಿದ್ದುವು. ಅವುಗಳ ನಡುವೆ ಮುಚ್ಚಿಟ್ಟುಕೊಂಡರೆ ಎಷ್ಟು ರೋಮಾಂಚ ವಾಗುತ್ತಿತ್ತು.!

ಗಾವ್ರಿಕ್ ಅಂಗಳವನ್ನು ಪ್ರವೇಶಿಸಿ ಪೇತ್ಯ ಇದ್ದ ಎರಡನೆ ಮಹಡಿಯ ಕಿಟಕಿಯ ಕೆಳಗಡೆ ನಿಂತುಕೊಂಡ. ಅಂಗಳದಲ್ಲಿ ಓರೆಯಾಗಿ ಮಧ್ಯಾಹ್ನದ ನೆರಳು ಹರಡಿತ್ತು. ಅಂಗಳದಲ್ಲಿ ಯಾರೂ ಇರಲಿಲ್ಲ, ಅದು ಶುದ್ಧಾಂಗವಾಗಿ ಬರಿದಾಗಿತ್ತು. ಒಬ್ಬನೇ ಒಬ್ಬ ಹುಡುಗನೂ ಅಲ್ಲಿ ಕಣ್ಣಿಗೆ ಬೀಳಲಿಲ್ಲ. ಅವರೆಲ್ಲ ರಜಕ್ಕಾಗಿ ಹಳ್ಳಿಕಡೆಗೆ ಹೋಗಿದ್ದರು, ಇಲ್ಲವೇ ಸಮುದ್ರದ ಕಡೆಗೆ ಹೊರಟುಹೋಗಿದ್ದರು. ಕಿಟಕಿಗಳೆಲ್ಲ ಮುಚ್ಚಿದ್ದುವು. ಸುಡುವ ಬಿಸಿಲಿನ ಮಧ್ಯಾಹ್ನದ ಮೌನ ನಿಶ್ಚಲವಾಗಿತ್ತು. ಒಂದು ಶಬ್ದವಾದರೂ ಕೇಳುತ್ತಿರಬೇಕಲ್ಲ. ಆದರೆ ಎಲ್ಲೋ ದೂರ ದಿಂದ—ಪ್ರಾಯಃ ಬಾಟನಿಚೆಸ್ಕಾಯ ರಸ್ತೆಯಿಂದ ಇದ್ದರೂ ಇರಬಹುದು—ಒಲೆಯ ಮೇಲೆ ಬಾಣಲೆಯಲ್ಲಿ ಹುರಿಯುತ್ತಿದ್ದ ಚಟಚಟ ಶಬ್ದ ಬರುತ್ತಿತ್ತು. ವಾಸನೆ ನೋಡಿದ್ದರಲ್ಲಿ ಎಣ್ಣೆಯಲ್ಲಿ ಕೆಂಪು ಮೀನನ್ನು ಹುರಿಯುತ್ತಿದ್ದಿರಬೇಕೆಂದು ಊಹಿಸಬಹುದಾಗಿತ್ತು.

"ಪೇತ್ಯ!" ಬಾಯಿಗೆ ಬಟ್ಟಲಿನಂತೆ ಎರಡು ಕೈಗಳನ್ನೂ ಇಟ್ಟುಕೊಂಡು ಗಾವ್ರಿಕ್ ಕೂಗಿದ.

ನಿಶ್ಶಬ್ದ.

"ಪೇ....ತ್ಯ!"

ಕಿಟಕಿಬಾಗಿಲು ಮುಚ್ಚಿದಂತೆಯೇ ಇತ್ತು.

"ಪೇ....ೕ....ೕ....ತ್ಯ ಆ ಆ!"

ಅಡಿಗೆ ಮನೆಯ ಕಿಟಕಿ ತೆರೆಯಿತು. ಬಿಳಿ ಕರವಸ್ತ್ರ ಕಟ್ಟಿದ್ದ ಅಡಿಗೆಯವಳಾದ ದುನ್ಯಳ ತಲೆ ಹೊರಕ್ಕೆ ನೀಡಿತು.

"ಅವನಿನ್ನೂ ಬಂದಿಲ್ಲ" ತಟಕ್ಕನೆ ಹೇಳಿದ ಮಾಮೂಲು ಉತ್ತರ.

"ಯಾವಾಗ ಬರುತ್ತಾರೆ?"

"ಅವರು ಇವತ್ತು ಸಂಜೆಗೆ ಬರಬಹುದು."

ಗಾವ್ರಿಕ್ ನೆಲದ ಮೇಲಕ್ಕೆ ಒಂದುಸಲ ಉಗುಳಿ ಆ ಎಂಜಲನ್ನು ಕಾಲಿನಿಂದ ಒರೆಸಿದ. ಕ್ಷಣ ಸುಮ್ಮನೆ ಇದ್ದ.

"ಪೇತ್ಯ ಬಂದ ತಕ್ಷಣ ಗಾವ್ರಿಕ್ ಬಂದಿದ್ದ ಅಂತ ದಯವಿಟ್ಟು ಹೇಳೀಮ್ಮ."

"ಆಗಬಹುದು ಮಹಾಸ್ವಾಮಿ." ಅಣಕದ ದನಿಯಲ್ಲಿ ದುನ್ಯ ನುಡಿದಳು.

"ನಾನು ನಾಳೆ ಬೆಳಗ್ಗೆ ಬರ್ತೀನಿ ಅಂತ ಹೇಳಿ."

"ನೀನು ಬರದೇ ಇದ್ದರೆ ಏನೂ ಮುಳುಗಿ ಹೋಗೋದಿಲ್ಲ. ನಮ್ಮ ಪೇತ್ಯ ಈ ವರ್ಷ ಸ್ಕೂಲಿಗೆ ಹೋಗ್ತಾನೆ. ನಿನ್ನ ಕಪಿ ಚೇಷ್ಟೆಗೆ ಮುಕ್ತಾಯಹಾಡಿಕೊಂಡು ಹೋಗು."

"ಆಗಲಿ." ನಾನು ಹೇಳಿದ್ದನ್ನು ಮರೀದೆ ಹೇಳಿಬಿಡಿ. ಹೇಳ್ತೀರಾ?

"ದಯವಿಟ್ಟು ಹೇಳಿಬಿಡಿ. ನಮಸ್ಕಾರ ಬರ್ತೀನಿ."

"ಆಗಲಿ ಹೇಳ್ತೀನಿ, ಅಳಬೇಡ."

"ನಮಸ್ಕಾರ. ನಮ್ಮ ದುನ್ಯಮ್ಮ ಬಹಳ ಒಳ್ಳೆಯೋಳು. ಬರ್ತೀನಿ ರಾಣಿಯಮ್ಮ." ಸ್ತೋತ್ರ ಪಾಠಕನಂತೆ ಹೇಳಿದ. ದುನ್ಯಳಿಗೆ ಆ ಬೇಸಗೆಯಲ್ಲಿ ಬೇರೆ ಏನೂ ಕೆಲಸ ಇಲ್ಲದೆ ಬಹಳ ಬೇಜಾರಾಗಿತ್ತಂತೆ. ಒಬ್ಬ ಹೊಲಸು ಮನುಷ್ಯನನ್ನು ಗೇಲಿಮಾಡುವುದಕ್ಕೆ ಹೋಗಿದ್ದಳಂತೆ.

ಗಾವ್ರಿಕ್ ಷರಾಯಿಯನ್ನು ಮೇಲಕ್ಕೆಳೆದುಕೊಂಡು ಅಂಗಳದಿಂದ ಹೊರಬಂದ. "ಇದರ ಮನೆ ಹಾಳಾಗ, ಬಂದ ಕೆಲಸ ಆಗಲಿಲ್ಲ. ಇನ್ನೇನು ಮಾಡಲಿ ಈಗ?"

ಕಾರ್ಖಾನೆ ಹತ್ತಿರ ವಾಸಿಸುತ್ತಿದ್ದ ಅಣ್ಣನ ಮನೆಗೆ ಅವನು ಹೋಗಬಹುದಾಗಿತ್ತು. ಆದರೆ ಕಾರ್ಖಾನೆ ಬಹಳ ದೂರ. ಮೊದಲನೆಯದಾಗಿ ಅಲ್ಲಿಗೆ ನಡೆದುಕೊಂಡು ಹೋಗಿ ಬರುವುದೆಂದರೆ ಪೂರ್ತಿ ನಾಲ್ಕು ಗಂಟೆಗಳಾದರೂ ಹಿಡಿಯುವುದು. ಎರಡನೆಯದಾಗಿ ಚಳುವಳಿ ಆರಂಭವಾದ ಮೇಲೆ ಟೆರೆಂಟಿ ಮನೆಯಲ್ಲಿ ಇರುತ್ತಾನೆ ಎಂಬ ಖಾತರಿಯೇನು. ಅವನು ಪೋಲೀಸರ ಕಣ್ಣುಮರೆಸಿಕೊಂಡು ಮುಚ್ಚಿಟ್ಟುಕೊಂಡಿರಲಿಕ್ಕೂ ಸಾಕು. ಅಲ್ಲದೆ ಅವನಿಗೆ ತಿನ್ನುವುದಕ್ಕೆ ಇರುವುದೂ ಅಷ್ಟಕ್ಕಷ್ಟೆ. ನಿಷ್ಪ್ರಯೋಜಕವಾಗಿ ಅಲ್ಲಿಯವರೆಗೆ ಕಾಲುಸವೆಸಿಕೊಂಡು ಹೋಗಿ ಬರುವುದು ದಡ್ಡತನವೇ ಆದೀತು. ನಡೆಯುವುವು ತನ್ನ ಕಾಲುಗಳೇ ಹೊರತು, ಬೇರೆ ಯಾರವು ಅಲ್ಲವಲ್ಲ.

ಗಾವ್ರಿಕ್ ಹಾಗೆಯೆ ಮೈದಾನದಲ್ಲಿ ನಡೆದುಕೊಂಡು ಮುಂದೆ ಹೋಗುತ್ತಿದ್ದಂತೆ ಸೈನಿಕ ಪಾಳೆಯದ ಕಿಟಕಿಗಳ ಮೂಲಕ ಒಳಗೆ ಏನು ನಡೆಯುತ್ತಿದೆ ಎಂಬುದು ಅವನಿಗೆ ಕಾಣಿಸುತ್ತಿತ್ತು. ಸೈನಿಕರು ಆಗ ತಾನೆ ತಮ್ಮ ಮಧ್ಯಾಹ್ನದ ಊಟವನ್ನು ಮಾಡಿ ಮುಗಿಸಿದ್ದರು. ಅವರು ಕಿಟಕಿಯ ಹತ್ತಿರ ನಿಂತುಕೊಂಡು ನೀರಿನಲ್ಲಿ ಚಮಚಗಳನ್ನು ಅದ್ದಿ ತೊಳೆಯುತ್ತಿದ್ದರು. ಅವರು ತಿಂದು ಮಿಕ್ಕ ಬ್ರೆಡ್ಡಿನ ಚೂರುಗಳ ರಾಶಿ ಬಿಸಿಲಿನಲ್ಲಿ ಒಣಗುತ್ತಿತ್ತು. ಆ ಬ್ರೆಡ್ಡು ಕಪ್ಪಗೆ ಇತ್ತಲ್ಲದೆ ಸ್ಪಂಜಿನಂತೆ ಮೃದುವಾಗಿತ್ತು. ಮೇಲೆ ನೋಡುವುದಕ್ಕೆ ಅದು ಕೆಂಗಂದು ಬಣ್ಣವಾಗಿತ್ತು. ಆ ಬಣ್ಣದಿಂದಲೇ ಅದರ ಹುಳಿಸವಿಯನ್ನು ಊಹಿಸಿಕೊಳ್ಳಬಹುದಾಗಿತ್ತು. ಬ್ರೆಡ್ಡುಗಳ ಮೇಲೆ ನೊಣಗಳು ಹಾರಾಡುತ್ತಿದ್ದುವು. ಅಲ್ಲಿದ್ದ ಆಹಾರದ ಸಮೃದ್ಧಿಯನ್ನು ಕಂಡು ಪರವಶನಾದ ಗಾವ್ರಿಕ್ ಒಂದು ಕಿಟಕಿಯ ಬಳಿಗೆ ಬಂದು ನಿಂತ. ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದವನು ಥಟ್ಟನೆ "ಸ್ವಲ್ಪ ಬ್ರೆಡ್ಡು ಕೊಡಿ" ಎಂದು ಒರಟಾಗಿ ಕೇಳಿಬಿಟ್ಟ. ಈ ಮಾತುಗಳು ಅವನ ಅರಿವಿಲ್ಲದೇ ಬಾಯಿಂದ ಹೊರಬಿದ್ದಾಗ ಅವನಿಗೇ ಆಶ್ಚರ್ಯವಾಯಿತು. ತಕ್ಷಣ ಅವನಿಗೆ ತನ್ನತನದ ಅರಿವಾಯಿತು. ಮಿಾನಿನ ಡಬ್ಬವನ್ನು ಎತ್ತಿಕೊಂಡು "ನನ್ನ ನಾಲಗೆ ಏನೋ ಹಾಗೆ ನುಡಿದು ಬಿಟ್ಟಿತು. ನನ್ನ ಮನಸ್ಸಿನಲ್ಲಿ ಆ ಭಾವನೆ ಇರಲಿಲ್ಲ. ನನಗೇನೂ ಬ್ರೆಡ್ಡು ಬೇಕಿಲ್ಲ" ಎಂದು ಹೇಳುತ್ತ ಹಲ್ಲುಬಿದ್ದು ಆದ ಖಾಲಿಜಾಗವನ್ನು ಬಾಯಲ್ಲಿ ಪ್ರದರ್ಶಿಸುತ್ತ ಅಲ್ಲಿಂದ ಹೊರಟುಹೋಗಲಾರಂಭಿಸಿದ.

ಸೈನಿಕರು ಕಿಟಕಿಯ ಬಳಿ ನೆರೆದುಬಿಟ್ಟರು. ಶಿಳ್ಳೆ ಹೊಡೆಯುತ್ತ "ಏ ಹುಡುಗ, ಯಾಕೆ ಓಡಿ ಹೋಗ್ತಿ? ಬಾ ಇಲ್ಲಿ" ಎಂದು ಅವನನ್ನು ಕೂಗಿ ಕರೆದರು. ಬ್ರೆಡ್ಡಿನ ಚೂರುಗಳನ್ನು ಕಿಟಕಿಯ ಮೂಲಕ ಹೊರಕ್ಕೆ ಕೈಚಾಚಿ ನೀಡುತ್ತ "ತಗೋ, ಹೆದರಬೇಡ. ತಗೋ!" ಎಂದು ಆಹ್ವಾನಿಸಿದರು. ಗಾವ್ರಿಕ್ ಏನು ಮಾಡಬೇಕೆಂದು ತಿಳಿಯದೆ ಹಾಗೆಯೇ ನಿಂತುಬಿಟ್ಟ. "ನಿನ್ನ ಷರಟನ್ನು ಮಡಲು ಮಾಡಿಕೋ, ಹಿಡಿ" ಎಂದು ಧಾರಾಳವಾಗಿ ಬ್ರೆಡ್ಡನ್ನು ಕೊಡಲು ಮುಂದೆ ಬಂದ ಆ ಸೈನಿಕರಲ್ಲಿ ಒಳ್ಳೆಯ ಸ್ವಭಾವದ ಉಲ್ಲಾಸಗೆಲವುಗಳು ಕಂಡುಬರುತ್ತಿದ್ದವು. ಆ ಸೈನಿಕರ ಕೋಲಾಹಲದ ನಡುವೆ ತಾನು ಬ್ರೆಡ್ಡನ್ನು ತೆಗೆದುಕೊಂಡರೆ ತನಗೇನೂ ಹೀನಾಯವಿಲ್ಲ ಎಂದು ಕೊಂಡ ಗಾವ್ರಿಕ್. ಪುನಃ ಹಿಂದಕ್ಕೆ ಹೋಗಿ ಅವರೆದುರಿಗೆ ಷರಟನ್ನು ಒಡ್ಡಿದ. ಬ್ರೆಡ್ಡಿನ ಚೂರುಗಳು ಮಡಿಲಿಗೆ ಹಾರಿದುವು. "ಸೈನ್ಯದ ಬ್ರೆಡ್ಡನ್ನು ಊಟಮಾಡಿ ನೋಡು. ಒಗ್ಗುತ್ತೋ ಇಲ್ಲವೋ ನಿನಗೇ ಗೊತ್ತಾಗುತ್ತದೆ. ದೇಹಕ್ಕೇನೂ ಕೆಡಕು ಮಾಡುವುದಿಲ್ಲ" ಎಂದರು ಅವರು.

ಸುಮಾರು ಐದು ಪೌಂಡುಗಳಷ್ಟು ಬ್ರೆಡ್ಡಿನ ಚೂರುಗಳಲ್ಲದೆ ಹಿಂದಿನ ದಿನದ ಅಂಬಲಿಯನ್ನು ಕೂಡ ಆ ಹುಡುಗನ ಡಬ್ಬಕ್ಕೆ ಸೈನಿಕರು ಸುರಿದುಕೊಟ್ಟರು. ಬ್ರೆಡ್ಡಿನ ಚೂರುಗಳನ್ನೂ ಮೀನಿನ ಡಬ್ಬದೊಳಕ್ಕೆ ಒಂದು ಸಮನಾಗಿ ತುರುಕಿ ಇಟ್ಟುಕೊಂಡ. ಸೈನ್ಯದ ಪಡಿತರದಿಂದ ಜೀರ್ಣಾಂಗಗಳ ಮೇಲಾಗುವ ಪರಿಣಾಮವನ್ನು ಕುರಿತು ಸೈನಿಕರು ಹಾರಿಸುತ್ತಿದ್ದ ಹಾಸ್ಯದ ಚಟಾಕಿಗಳನ್ನು ಸವಿಯುತ್ತ ಗಾವ್ರಿಕ್ ಅಲ್ಲಿಂದ ಮನೆಯ ಕಡೆಗೆ ಹೊರಟ. ಮನೆಯಲ್ಲಿ ಗಾನುಗಾಳಗಳ ಹುರಿಯನ್ನು ಸರಿಮಾಡಿಕೊಡುವ ಕೆಲಸದಲ್ಲಿ ಅಜ್ಜನಿಗೆ ನೆರವಾಗಬೇಕಿತ್ತು.

ಅಜ್ಜ ಮತ್ತು ಮೊಮ್ಮಗ ಇಬ್ಬರೂ ಅಂದು ಮಧ್ಯಾಹ್ನ ಬಹು ಹೊತ್ತಿನಮೇಲೆ ಕಡಲಿನ ಮೇಲೆ ದೋಣಿಯನ್ನು ಬಿಟ್ಟುಕೊಂಡು ಹೋದರು.

೧೫. ಸಮುದ್ರದ ಮೇಲೆ ದೋಣಿ

ತನ್ನನ್ನು ಹಿಡಿಯುವುದಕ್ಕಾಗಿ ಜಹಜನ್ನು ನಿಲ್ಲಿಸಲೂ ಇಲ್ಲ ಮತ್ತು ದೋಣಿಯನ್ನು ನೀರಿಗೆ ಇಳಿಸಲೂ ಇಲ್ಲ ಎಂಬುದನ್ನು ನೋಡಿ ನಾವಿಕ ಮನಸ್ಸಿಗೆ ಕೊಂಚ ಸಮಾಧಾನವನ್ನು ತಂದುಕೊಂಡು ಶಾಂತನಾಗಿ ಆಲೋಚಿಸಲಾರಂಭಿಸಿದ. ತನ್ನ ಮೈಮೇಲಿದ್ದ ಕೆಲವು ಬಟ್ಟೆಗಳನ್ನು ಕಳಚಿ ಹಾಕಬೇಕೆಂಬುದು ಅವನ ಮೊದಲನೆಯ ಆಲೋಚನೆಯಾಗಿತ್ತು. ಏಕೆಂದರೆ ಆ ಬಟ್ಟೆಗಳು ನೀರಿನಲ್ಲಿ ಈಜಲಾಗದಂತೆ ತೊಡರಿಕೊಳ್ಳುತ್ತಿದ್ದುವು. ಅವನು ಸೊಂಟದ ಬಳಿ ಬಿಗಿಯಾಗಿದ್ದ ಜಾಕೆಟ್ಟನ್ನು ಮೇಲುಗಡೆ ಧರಿಸಿದ್ದ. ಅದರೊಳಕ್ಕೆ ನೀರು ತುಂಬಿಕೊಂಡು ಅದು ಕಬ್ಬಿಣದ ಗುಂಡಿನಂತೆ ಭಾರವಾಗಿತ್ತು. ಅದನ್ನು ಸರಾಗವಾಗಿ ತೆಗೆದುಹಾಕಿದ. ಹಲವು ಸಲ ನೀರಿನಲ್ಲಿ ಗಿರ್ರನೆ ಸುತ್ತಿ ಸಮುದ್ರದ ಉಪ್ಪುನೀರು ಬಾಯಿಗೆ ತುಂಬಿಕೊಂಡಂತೆ ಅದನ್ನು ಉಗಿಯುತ್ತ ಮೂರು ಚಲನೆಗಳಲ್ಲಿ ಅದನ್ನು ಕಳಚಿದ. ಆ ಮೇಲೆ ಅದು ಮನುಷ್ಯನಂತೆ ತೋಳುಗಳನ್ನು ನೀಡಿಕೊಂಡು ಸ್ವಲ್ಪ ಹೊತ್ತು ಅವನ ಹಿಂದು ಹಿಂದೆಯೆ ತೇಲಿಕೊಂಡು ಬರಲಾರಂಭಿಸಿತು. ಅದು ತನ್ನ ಯಜಮಾನನನ್ನು ಬಿಟ್ಟು ಅಗಲಿ ಹೋಗಲಿಚ್ಛಿಸದೆ ನಾವಿಕನ ಕಾಲುಗಳಿಗೆ ಸುತ್ತಿಕೊಳ್ಳಲು ಪ್ರಯತ್ನಿಸುತ್ತಿತ್ತು. ನಾವಿಕ ನಾಲ್ಕಾರು ಸಲ ಅದನ್ನು ಕಾಲಿನಿಂದ ಒದೆದ

ಮೇಲೆ ಅದು ನಿಧಾನವಾಗಿ ನೀರಿನಲ್ಲಿ ಮುಳುಗಲಾರಂಭಿಸಿತು. ಒಲೆದಾಡುತ್ತ ನೀರಿನ ಪದರದಿ ಪದರಕ್ಕೆ ಇಳಿಯುತ್ತ ಇಳಿಮುಖವಾದ ಸೂರ್ಯನ ಕಿರಣಗಳು ಮಂದವಾಗಿ ಒಳಹೋ ತ್ತಿದ್ದ ನೀರಿನ ಆಳದಲ್ಲಿ ಮಾಯವಾಯಿತು.

ಎಲ್ಲಕ್ಕಿಂತ ಹೆಚ್ಚಿನ ತೊಂದರೆ ಕೊಟ್ಟಿದ್ದು ಎಂದರೆ ಅವನ ಬೂಡ್ಸುಗಳು. ಒಳಕ್ಕೆ ನೀ ಸೇರಿ ಗೋಂದು ಹಾಕಿ ಅಂಟಿಸಿದಂತೆ ಅವು ಕಾಲುಗಳಿಗೆ ಕಚ್ಚಿಕೊಂಡಿದ್ದುವು. ತನ್ನ ಕಾ ಗಳಲ್ಲಿದ್ದ ಆ ಬೂಡ್ಸುಗಳನ್ನು ಕಿತ್ತೆಸೆಯಬೇಕೆಂದು ಒಂದರ ಮೇಲೆ ಇನ್ನೊಂದನ್ನು ಇಟ್ಟು ರ ದಿಂದ ಉಜ್ಜಿದ. ತುಕ್ಕಿನ ಬಣ್ಣದ ಆ ನಾವಿಕಬೂಡ್ಸುಗಳೇ ಅಲ್ಲವೇ ಅವನನ್ನು ಹಿಡಿ ಕೊಟ್ಟಿದ್ದು. ನೆಟ್ಟಗೆ ನೀರಿನಲ್ಲಿ ನಿಂತುಕೊಂಡು ಕೈಗಳಿಂದ ನೀರನ್ನು ಬಗೆಯು ಕಾಲುಗಳನ್ನು ಒದೆಯುತ್ತ ಇದ್ದುದನ್ನು ನೋಡಿದಾಗ ಅವನು ನರ್ತಿಸುವಂತೆ ಕಾಣುತ್ತಿದ್ದ ಬಳಿಕ ತಲೆಮುಂದಾಗಿ ನೀರಿನೊಳಕ್ಕೆ ಮುಳುಗಿದ; ಮರು ನಿಮಿಷದಲ್ಲಿ ಅವನ ಹೆಗಲುಗ ಮೇಲೆದ್ದು ತೋರಿದುವು. ಏನೇನು ಮಾಡಿದರೂ ಬೂಡ್ಸು ಇವನ ಮಾತನ್ನು ಕೇಳಲಿಲ್ಲ. ಒಂ ಸಲ ದೀರ್ಘವಾಗಿ ಉಸಿರನ್ನು ಎಳೆದುಕೊಂಡು ಶ್ವಾಸಕೋಶಗಳನ್ನು ತುಂಬಿಕೊಂಡ. ಬಳಿಕ ನೀ ನೊಳಕ್ಕೆ ಮುಳುಗಿ ಜೋರಾಗಿ ಜಗ್ಗಿ ಒಂದು ಕಾಲಿನ ಬೂಡ್ಸನ್ನು ಎಳೆದ. ಆಗ ಅವನು ಎ ತುಚ್ಛವಾದ ಬೈಗಳ ಬಿರುಮಳೆಯನ್ನು ಸುರಿಸಿದನೋ ಎಷ್ಟು ಭಯಂಕರವಾದ ಶಾಪಗಳ ಹಾಕಿದನೋ ಅವನಿಗೇ ಗೊತ್ತು. ಕೊನೆಗೊಂದು ಸಲ ಆ ಮನೆಹಾಳು ಬೂಡ್ಸು ಕೈಗೆ ಬಂದಿ ಇನ್ನೊಂದು ಕಾಲಿನದು ಹೆಚ್ಚು ಕಷ್ಟವನ್ನು ಕೊಡದೆ ಸುಲಭವಾಗಿ ಹೊರಬಂದಿತು.

ಆ ಬೂಡ್ಸುಗಳನ್ನೂ ಷರಾಯಿಗಳನ್ನೂ ಕಳಚಿಹಾಕಿದಾಗ ರೋಡಿಯಾನನಿಗೆ ಹಗುರ ಸಿತು. ಆದರೆ ಅದರ ಹಿಂದೆಯೇ ಬಳಲಿಕೆ ನಾನಿದ್ದೇನೆ ಎಂದು ಬಂದು ಅವನನ್ನು ಹಿಡಿಯಿ ಎಷ್ಟೇ ಜಾಗರೂಕನಾಗಿದ್ದರೂ ಸಮುದ್ರದ ಉಪ್ಪುನೀರನ್ನು ಬಹುಮಟ್ಟಿಗೆ ಕುಡಿದು ಬಿಟ್ಟಿ ಅದರಿಂದ ಬೆಂಕಿಯಂತೆ ಅವನ ಗಂಟಲು ಈಗ ಉರಿಯುತ್ತಿತ್ತು. ಅಲ್ಲದೆ ಅವನು ಹಡಗಿನಿ ಸಮುದ್ರಕ್ಕೆ ಹಾರಿದಾಗ ಅವನ ದೇಹ ನೀರಿಗೆ ಅಪ್ಪಳಿಸಿ ಛಟೀರೆಂದು ದೇಹಕ್ಕೆ ಭಾರಿ ಏಟ ಕೊಟ್ಟಂತಾಗಿತ್ತು. ಅದು ಬೇರೆ ನೋಯುತ್ತಿತ್ತು.

ಕಳೆದ ಎರಡು ದಿನಗಳಿಂದ ಅವನ ಕಣ್ಣಿಗೆ ನಿದ್ದೆಯೇ ಇರಲಿಲ್ಲವೆನ್ನಬಹುದು. ಜ ಸುಮಾರು ನಲವತ್ತು ಐವತ್ತು ಮೈಲಿಗಳಷ್ಟು ನಡೆದಿದ್ದ. ಎಲ್ಲಕ್ಕಿಂತ ವಿಶೇಷವಾಗಿ ಅ ತುಂಬಾ ದೇಹಶ್ರಮವಾಗಿತ್ತು. ಈಗ ಅವನಿಗೆ ಕಣ್ಣು ಕತ್ತಲೆ ಹಿಡಿಯುವಂತಾಗುತ್ತಿತ್ತು. ಅ ಸಂಜೆಯಾಗುತ್ತಿದ್ದುದರಿಂದ ಹಾಗಾಗುತ್ತಿತ್ತೋ ಏನೋ!

ಹಗಲಿನಲ್ಲಿ ಕಾಣುವ ತನ್ನ ಬಣ್ಣವನ್ನುನೀರು ಈಗ ಕಳೆದುಕೊಂಡಿತ್ತು. ಒಂದು ರೀ ಥಾಳಥಳ್ಯವಿರುವ ಧೂಮ್ರ ವರ್ಣವನ್ನು ಈಗ ನೀರಿನ ಮೇಲ್ಮೈ ಪಡೆದುಕೊಂಡಿತ್ತು. ನೀ ಆಳದಲ್ಲಿ ಬಹು ಮಟ್ಟಿನ ಕಪ್ಪು ಬಣ್ಣ ಹೆದರಿಕೆ ಹುಟ್ಟಿಸುವಂತಿತ್ತು.

ಅವನು ಇದ್ದಲ್ಲಿಂದ ದಡ ಅವನಿಗೆ ಕಾಣಿಸುತ್ತಲೇ ಇರಲಿಲ್ಲ. ಕ್ಷಿತಿಜ ಕಣ್ಣಿಗೆ ಕ ದಂತಾಗಿತ್ತು. ಮೇಘಶೂನ್ಯವಾದ ಆಕಾಶದ ಅಂಚು ಸೂರ್ಯನು ಮುಳುಗಿದ ಅನಂ ಹೊಳಪಿನಂತೆ ಪಾರದರ್ಶಕವಾದ ಹಸಿರು ಬಣ್ಣದಿಂದ ಆವೃತವಾಗಿತ್ತು. ಕಣ್ಣಿಗೆ ಕಾ ವುದೋ ಇಲ್ಲವೋ ಎಂಬಂತೆ ಒಂದು ನಕ್ಷತ್ರ ಮಿರುಗುತ್ತಿತ್ತು. ಈ ಎರಡರಿಂದ ದಡ

ಕಡೆಗೆ ಇದೆ ಯಾವ ದಿಕ್ಕಿಗೆ ಈಜಬೇಕು ಎಂಬುದನ್ನು ತಿಳಿಯಬಹುದಾಗಿತ್ತು.

ಅವನ ಮೈಮೇಲೆ ಈಗ ಇದ್ದುದೆಲ್ಲ ಒಂದು ಷರಟು ಮತ್ತು ಒಳಚಡ್ಡಿ. ಇವು ಅವನಿಗೆ ಈಜುವುದಕ್ಕೆ ತೊಂದರೆಯನ್ನೇನೂ ಮಾಡುತ್ತಿರಲಿಲ್ಲ. ಆದರೆ ಈಗ ಅವನ ತಲೆ ತಿರುಗಲಾರಂಭಿಸಿತ್ತು. ಅವನ ಕೈ ಕಾಲುಗಳ ಕೀಲುಗಳು ನೋಯಲಾರಂಭಿಸಿದ್ದುವು. ನಿಮಿಷ ನಿಮಿಷಕ್ಕೂ ಈಜುವುದು ಅವನಿಗೆ ದುಸ್ತರವೆನ್ನಿಸತೊಡಗಿತು. ಒಂದೊಂದುಸಲ ಪ್ರಜ್ಞೆತಪ್ಪುವಂತೆ ತೋರುತ್ತಿತ್ತು. ಒಂದೊಂದುಸಲ ವಾಂತಿಯಾಗುವಂತೆ ಗಂಟಲಿನ ವರೆಗೆ ಒತ್ತಿಕೊಂಡು ಬರುತ್ತಿತ್ತು. ಒಂದೊಂದುಸಲ ಅವನು ಇದ್ದಕ್ಕಿದ್ದಹಾಗೆ ಕ್ಷಣಿಕವಾದ ಭಯದ ಹಿಡಿತಕ್ಕೆ ಸಿಕ್ಕಿ ತತ್ತರಿಸಿ ಹೋಗುತ್ತಿದ್ದ. ಅವನ ಏಕಾಂಗಿತನವೂ ಸಾಗರದ ಗಭೀರತೆಯೂ ಅವನನ್ನು ಹೆದರಿಸುತ್ತಿದ್ದುವು. ಹಿಂದೆ ಯಾವಾಗಲೂ ಅವನಿಗೆ ಇಂಥ ಅನುಭವವಾಗಿರಲಿಲ್ಲ. ಈ ಎಲ್ಲ ಸೂಚನೆಗಳಿಂದ ತನಗೆ ಹುಷಾರು ತಪ್ಪಿರಬೇಕು ಎಂದುಕೊಂಡ ನಾವಿಕ.

ಅವನ ತಲೆಯಲ್ಲಿದ್ದ ಒದ್ದೆಯಾದ ತುಂಡು ಕೂದಲುಗಳು ಒಣಗಿ ಕೆಂಡದಹಾಗೆ ಸುಡುತ್ತಿದ್ದಂತೆಯೂ ತನ್ನ ತಲೆಯನ್ನು ಚುಚ್ಚುವಷ್ಟು ಒರಟಾಗಿರುವಂತೆಯೂ ಅವನಿಗೆ ತೋರಿದುವು.

ಸಮುದ್ರದಲ್ಲಿ ಒಂದು ನರಪಿಳ್ಳೆಯಾದರೂ ಕಣ್ಣಿಗೆ ಬೀಳಬೇಕಲ್ಲ. ತಲೆಯಮೇಲೆ ದಟ್ಟವಾಗುತ್ತಿದ್ದ ಕತ್ತಲೆಯಲ್ಲಿ ಧಷ್ಟಪುಷ್ಟವಾದ ಬೆಕ್ಕಿನಂತೆ ತೋರಿದ ಸಮುದ್ರ ಪಕ್ಷಿಯೊಂದು ತನ್ನ ಬಲವಾದ ರೆಕ್ಕೆಗಳನ್ನು ಬಡಿಯುತ್ತ ಹಾರಿಹೋಯಿತು. ಅದರ ಉದ್ದವಾದ ಬಾಗಿದ ಕೊಕ್ಕಿನಲ್ಲಿ ಚಿಕ್ಕ ಮೀನೊಂದು ಸಿಕ್ಕಿಕೊಂಡಿತ್ತು.

ನಾವಿಕನನ್ನು ಪುನಃ ಒಂದು ಹೊಸ ಭಯವು ಅಡರಿತು. ಯಾವ ನಿಮಿಷದಲ್ಲಿಯಾದರೂ ತನ್ನ ಎದೆ ಒಡೆದು ಹೋಗಿ ತಾನು ಸಮುದ್ರದ ತಳವನ್ನು ಕಚ್ಚಬಹುದು ಎನ್ನಿಸಿತವನಿಗೆ. ಕಿರುಚಿಕೊಳ್ಳಬೇಕೆಂಬ ಮನಸ್ಸು; ಆದರೆ ಕಚ್ಚಿದ ಹಲ್ಲುಗಳ ಬಿಗಿತವನ್ನು ಸಡಿಲಿಸಲಾಗಲಿಲ್ಲ.

ಇದ್ದಕ್ಕಿದ್ದಂತೆ ಹುಟ್ಟುಗಳ ಮೃದುವಾದ ಶಬ್ದ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿಯೇ ನೀರಿನಮೇಲೆ ದೋಣಿಯೊಂದರ ಆಕಾರ ಕಣ್ಣಿಗೆ ಬಿದ್ದಿತು. ತನ್ನ ಶಕ್ತಿಯನ್ನೆಲ್ಲ ಸಂಗ್ರಹಿಸಿಕೊಂಡು ಜೋರಾಗಿ ಕಾಲುಗಳನ್ನು ಬಡಿಯುತ್ತ ದೋಣಿಯ ಕಡೆಗೆ ಹೊರಟ. ಹೇಗೋ ದೋಣಿಯ ಬಳಿಗೆ ಬಂದು ಅದರ ಹಿಂಬಾಗದ ಎತ್ತರವಾದ ಅಂಚನ್ನು ಭದ್ರವಾಗಿ ಹಿಡಿದುಕೊಂಡ. ಅಂಚಿನಮೇಲೆ ಕೈಯನ್ನು ಒಂದಾದರ ಮೇಲೊಂದರಂತೆ ಹಾಕುತ್ತ ಹಾಗೂ ಹೀಗೂ ದೋಣಿಯ ಪಕ್ಕಕ್ಕೆ ಬಂದ. ದೋಣಿಯ ಪಕ್ಕವು ಅಷ್ಟು ಎತ್ತರವಾಗಿಲ್ಲದೆ ಇದ್ದುದರಿಂದ ಬಹಳ ಪ್ರಯಾಸದಿಂದ ಅದರ ಒಳಭಾಗವನ್ನು ಬಗ್ಗಿನೋಡಿದ. ದೋಣಿ ಒಂದು ಸಲ ಅಲ್ಲಾಡಿತು.

"ಸುಮ್ಮನೆ ಹೋಗು. ನಿನ್ನ ಉಪಾಯವೆಲ್ಲ ಸಾಕು." ದೋಣಿಯ ಅಂಚಿನ ಮೇಲಿನಿಂದ ತಲೆಯೊಂದು ಕಣ್ಣಿಗೆ ಬಿದ್ದಾಗ ಹೆದರಿಸುವ ದಪ್ಪ ಧ್ವನಿಯಲ್ಲಿ ಗಾವ್ರಿಕ್ ಕೂಗಿದ. ಮನುಷ್ಯನ ತಲೆಯನ್ನು ದೋಣಿಯ ಅಂಚಿನ ಮೇಲೆ ಕಂಡಾಗ ಆ ಹುಡುಗನಿಗೆ ಆಶ್ಚರ್ಯವೇನೂ ಆಗಲಿಲ್ಲ. ಒಡೆಸ್ಸದಲ್ಲಿ ಈಜುಗಾರರಿಗೇನೂ ಕಡಮೆಯಿರಲಿಲ್ಲ. ದಡದಿಂದ ಎರಡು ಮೂರು ಮೈಲಿಗಳಷ್ಟು ದೂರ ಸಮುದ್ರದಲ್ಲಿ ಈಜಿಕೊಂಡು ಹೋಗಿ ಸಂಜೆಯಾದಮೇಲೆ ಹಿಂದಿರುಗಿ ಬರುತ್ತಿದ್ದ ಜನ ಇದ್ದರು. ಅಂಥವರಲ್ಲಿ ಇವನಾವನೋ ಒಬ್ಬನಿರಬೇಕು. ಇವನೂ ಅಂಥ ಶೂರನಾಗಿದ್ದಿದ್ದರೆ ಪ್ರಯಾಸಪರಿಹಾರಕ್ಕಾಗಿ ಕಂಡಕಂಡವರ ದೋಣಿಗಳನ್ನು ಹಿಡಿದುಕೊಳ್ಳಬೇಕೆ. ನೆಟ್ಟಗೆ

ಸುಮ್ಮನೆ ಈಜಿಕೊಂಡು ಹೋಗಬೇಕು. ದಿನವೆಲ್ಲ ದುಡಿದು ಸಾಕಾಗಿರುವಾಗ ಈ ಮನುಷ್ಯನನ್ನು ಬೇರೆ ಎಳೆದುಕೊಂಡು ಹೋಗುವ ಫಜೀತಿ!

"ಹುಡುಗಾಟ ಸಾಕು. ಕೈಬಿಟ್ಟು ಆಚೆ ನಡಿ. ಇಲ್ಲದೇ ಇದ್ದರೆ ನೋಡು ಈ ಹುಟ್ಟು ತೆಗೆದುಕೊಂಡು ನಿನ್ನ ಹುಟ್ಟಿದಹಬ್ಬ ಮಾಡ್ತೀನಿ."

ತನ್ನ ಮಾತಿಗೆ ಹೆಚ್ಚಿಗೆ ಬೆಲೆಯಿದೆಯೆಂಬುದನ್ನು ತೋರಿಸುವ ಸಲುವಾಗಿ ಹುಟ್ಟನು ದೋಣಿಗೆ ಸಿಕ್ಕಿಸಿದ್ದ ಕೊಂಡಿಯಿಂದ ಹೊರಕ್ಕೆಳೆದುಕೊಳ್ಳಲು ಬಗ್ಗಿದ. ತನ್ನ ತಾತ ಅಂ ಸಂದರ್ಭಗಳಲ್ಲಿ ಮಾಡುತ್ತಿದ್ದಂತೆಯೇ ಅವನೂ ಮಾಡುತ್ತಿದ್ದನೆಂಬುದರಲ್ಲಿ ಸಂಶಯವಿಲ್ಲ.

"ನನಗೆ....ಹುಷಾರಿಲ್ಲ..." ಏದುತ್ತ ಆ ತಲೆ ಹೇಳಿತು.

ಕಸೂತಿಹಾಕಿದ್ದ ಷರಟು ಅಂಟಿಕೊಂಡಿದ್ದ ತೋಳೊಂದು ನಡುಗುತ್ತ ನೀಡಿದ್ದುದನು ಗಾವ್ರಿಕ್ ಕಂಡ. ಇವನು ಈಜುಗಾರನಲ್ಲವೆಂಬುದನ್ನು ಗಾವ್ರಿಕ್ ತಕ್ಷಣ ಕಂಡುಕೊಂಡ ಕಸೂತಿಹಾಕಿದ ಷರಟನ್ನು ಹಾಕಿಕೊಂಡು ಸಮುದ್ರದಲ್ಲಿ ಈಜಲು ಯಾರೂ ಹೋಗುವುದಿಲ್ಲ.

"ಏನು ವಿಷಯ, ದೋಣಿಗೀಣಿ ಮುಳುಗಿತೋ ಹ್ಯಾಗೆ ?"

ನಾವಿಕ ಮೌನವಾಗಿದ್ದ. ಅವನ ತಲೆ ಮತ್ತು ತೋಳುಗಳು ನಿರ್ಜೀವವಾದಂತೆ ದೋಣಿ ಯೊಳಗಡೆಗೆ ಜೋತುಬಿದ್ದಿದ್ದುವು; ಅವನ ಕಾಲುಗಳು ನೀರಿನಲ್ಲಿ ಎಳೆದುಕೊಂಡುಬರುತ್ತಿದ್ದುವು ನಾವಿಕ ಮೂರ್ಛೆಹೋಗಿದ್ದ. ಗಾವ್ರಿಕ್ ಮತ್ತು ಅಜ್ಜ ಇಬ್ಬರೂ ಹುಟ್ಟು ಹಾಕುವುದನು ನಿಲ್ಲಿಸಿ ಬಹಳ ಕಷ್ಟದಿಂದ ಅವನ ಸತ್ವವುಡುಗಿದ ಭಾರವಾದ ದೇಹವನ್ನು ದೋಣಿಯೊಳಕ್ ಎಳೆದುಹಾಕಿದರು,

"ಓ, ಇವನ ಮೈ ಬೆಂಕಿ !"ಎಂದು ಹೇಳಿದಾಗ ತಾತಾನ ಉಸಿರುಕಟ್ಟಿತು.

ನಾವಿಕ ನೀರಿನಲ್ಲಿ ಚೆನ್ನಾಗಿ ನೆಸೆದಿದ್ದುದರಿಂದ ನಡುಗುತ್ತಿದ್ದರೂ ಕೂಡ ಅವನ ಸರ್ವಾಂ ಗವೂ ಒಂದು ರೀತಿಯ ಅನಾರೋಗ್ಯಕರವಾದ ಶಾಖದಿಂದ ಸುಡುತ್ತಿತ್ತು.

"ಕುಡಿಯುವುದಕ್ಕೆ ನೀರು ಬೇಕೇ ?" ಗಾವ್ರಿಕ್ ಕೇಳಿದ.

ನಾವಿಕ ಉತ್ತರವೀಯಲಿಲ್ಲ. ಸುಮ್ಮನೆ ಅರೆತೆರೆದ ಕಣ್ಣುಗಳನ್ನು ತೊಳಸಿ ಉಬ್ಬಿ ತುಟಿಗಳನ್ನು ಅಲುಗಿಸಿದ. ಹುಡುಗ ನೀರು ತುಂಬಿದ ಮರದ ಪಾತ್ರೆಯನ್ನು ನಾವಿಕನಿ ಕೊಟ್ಟ. ಅವನು ಬಹು ಮೆತ್ತಗೆ ಪಕ್ಕಕ್ಕೆ ಅದನ್ನು ಸರಿಸಿದ. ಹೆದರಿಕೆಯಿಂದ ತನ್ನ ಜೊಲ್ಲನ್ ನುಂಗಿದ. ಮರುಕ್ಷಣದಲ್ಲಿ ವಾಂತಿಮಾಡಿದ. ಚೇತನವುಡುಗಿ ಅವನ ತಲೆ ಹಿಂದಕ್ಕೆ ಬಿದ್ ದೋಣಿಯ ಅಡ್ಡಹಲಗೆಗೆ ಬಡಿಯಿತು. ಬಳಿಕ ಕುರುಡನಂತೆ ನೀರಿನ ಪಾತ್ರೆಯನ್ನು ತಡಕಾ ಅದನ್ನು ತೆಗೆದುಕೊಂಡು ಎತ್ತಿ ಬಾಯಿಗೆ ಇಟ್ಟುಕೊಂಡ. ಹಲ್ಲುಗಳು ಕಟಕಟನೆ ಕಡಿಯು ದ್ದುವು. ಹೇಗೋ ಸ್ವಲ್ಪ ನೀರನ್ನು ಗುಟುಕರಿಸಿದ.

ಅಜ್ಜ ತಲೆಯಲ್ಲಾಡಿಸಿ " ಪರಿಸ್ಥಿತಿ ಕೈಮೀರಿದೆ " ಎಂದ.

" ಯಾವೂರು ? ಎಲ್ಲಿಂದ ಬಂದೆ ?" ಎಂದು ಹುಡುಗ ಕೇಳಿದ.

ಪುನಃ ನಾವಿಕ ಜೊಲ್ಲನ್ನು ನುಂಗಿದ. ಏನನ್ನೋ ಹೇಳಬೇಕೆಂದು ಪ್ರಯತ್ನಪಟ್ಟ. ಅ ಕೈ ಮುಂದಕೆ ನೀಡಿತು. ಅಷ್ಟರಲ್ಲೇ ದುರ್ಬಲವಾದ ಆ ಕೈ ಕೆಳಕ್ಕೆ ಬಿದ್ದಿತು. " ಅವನ ವ ಹಾಳಾಗ" ಎಂದು ಅಸ್ಪಷ್ಟವಾದ ದನಿಯಲ್ಲಿ ಗೊಣಗಿದ. ಬಳಿಕ ತಡೆತಡೆದು ನಿಧಾನವ

ಉಚ್ಚರಿಸಿದ: "ಯಾರ ಕಣ್ಣಿಗೂ ನಾನು ಬೀಳದ ಹಾಗೆ ನನ್ನನ್ನು ನೋಡಿಕೊಳ್ಳಿ. ನಾನೊಬ್ಬ ನಾವಿಕ. ನನ್ನನ್ನೆಲ್ಲಾದರೂ ಅಡಗಿಸಿಡಿ. ಇಲ್ಲದೇ ಇದ್ದರೆ ಅವರು—ಅವರು ನನ್ನನ್ನು ಗಲ್ಲಿಗೆ ಏರಿಸಿ ಬಿಡುತ್ತಾರೆ. ದೇವರಾಣೆ ಇದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲ. ಆ ಘನ ಪವಿತ್ರ್ಯೇಸು . . ." ಅವನು ಶಿಲುಬೆಯ ಸಂಜ್ಞೆಯನ್ನು ಮಾಡಬೇಕೆಂದು ಪ್ರಯತ್ನಿಸಿದಂತೆ ಕಂಡಿತು. ಆದರೆ ತೋಳನ್ನು ಮೇಲಕ್ಕೆ ಎತ್ತಲಾರದೆಹೋದ. ತನ್ನ ನಿಶ್ಶಕ್ತಿಯನ್ನು ಕಂಡು ಒಂದು ಮುಗುಳುನಗೆ ಅವನ ಮುಖದಲ್ಲಿ ಪ್ರಯತ್ನಪೂರ್ವಕವಾಗಿ ಮೂಡಿದಂತೆ ಕಂಡುಬಂದಿತು. ಅಷ್ಟರಲ್ಲಿ ಕಣ್ಣು ಕತ್ತಲೆ ಹಿಡಿದು ಅವನು ಮೂರ್ಛೆ ಹೋದ.

ಅಜ್ಜ ಮತ್ತು ಮೊಮ್ಮಗ ಇಬ್ಬರೂ ಪರಸ್ಪರ ದೃಷ್ಟಿಸಿ ನೋಡುವುದರಿಂದಲೇ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇಬ್ಬರಲ್ಲಿ ಯಾರೂ ಒಂದು ಮಾತನ್ನೂ ಆಡಲಿಲ್ಲ. ಮೌನವೇ ಆಗ್ಗೆ ಉತ್ತಮವಾಗಿತ್ತು. ಕಾಲ ಅಂಥದು.

ಅಜ್ಜ ಮೊಮ್ಮಗ ಇಬ್ಬರೂ ಸೇರಿ ನಾವಿಕನನ್ನು ಎತ್ತಿ ದೋಣಿಯ ತಳದ ಹಲಗೆಯಮೇಲೆ ಮಲಗಿಸಿದರು. ಮೊಗೆದು ಆಚೆಗೆ ಎತ್ತಿಹಾಕದೆ ದೋಣಿಯಡಿಯಲ್ಲಿ ನಿಂತಿದ್ದ ನೀರು ಅವನಿಗೆ ಎರಚುತ್ತಿದ್ದಿತು. ಮರದ ನೀರಿನ ಅಂಡೆಯನ್ನೇ ತಲೆದಿಂಬಾಗಿ ಇಟ್ಟರು. ಬಳಿಕ ತಮ್ಮ ಸ್ಥಳ ಗಳಿಗೆ ಹೋಗಿ ಕುಳಿತು ಕೈಗೆ ಹುಟ್ಟುಗಳನ್ನು ತೆಗೆದುಕೊಂಡರು. ಪೂರ್ತಿ ಕತ್ತಲಾದ ಮೇಲೆ ದಡವನ್ನು ಸೇರಬೇಕೆಂಬ ಉದ್ದೇಶವಿದ್ದುದರಿಂದ ನಿಧಾನವಾಗಿ ಹುಟ್ಟುಹಾಕುತ್ತ ಕಾಲ ಕಳೆ ಯುತ್ತಿದ್ದರು. ಕತ್ತಲೆಯಾದಷ್ಟೂ ಅವರಿಗೆ ಅನುಕೂಲ. ದೋಣಿಯನ್ನು ದಡಕ್ಕೆ ಒಯ್ಯುವು ದಕ್ಕೆ ಮುಂಚೆ ಚಿರಪರಿಚಿತವಾದ ಬಂಡೆಗಳ ಬಳಿಯಲ್ಲಿಯೇ ಒಂದು ಸುತ್ತು ಹೊಡೆದರು. ಅದೃಷ್ಟವಶಾತ್ ದಡದಲ್ಲಿ ಯಾರೂ ಇರಲಿಲ್ಲ. ಆ ರಾತ್ರಿ ಬೆಚ್ಚಗಿತ್ತು, ಕತ್ತಲೆ ಪೂರ್ತಿ ಕವಿ ದಿತ್ತು, ಆಕಾಶದಲ್ಲಿ ನಕ್ಷತ್ರಗಳು ಹೊಳೆಯುತ್ತಿದ್ದುವು. ಮಿಡಚೆಗಳ ಶಬ್ದ ಮಾತ್ರ ಕೇಳಿಬರು ತ್ತಿತ್ತು. ಅಜ್ಜ ಮತ್ತು ಮೊಮ್ಮಗ ಇಬ್ಬರೂ ಸೇರಿ ದೋಣಿಯನ್ನು ದಡದ ಮೇಲಕ್ಕೆ ಎಳೆದರು. ದಡದ ಮೇಲಿದ್ದ ಕಲ್ಲು ಹರಳುಗಳು ಸರಸರ ಶಬ್ದ ಮಾಡಿದುವು. ಅಜ್ಜ ಆ ಕಾಹಿಲೆ ಮನುಷ್ಯ ನನ್ನು ನೋಡಿಕೊಳ್ಳುವ ಸಲುವಾಗಿ ದೋಣಿಯಹತ್ತಿರವೇ ಉಳಿದುಕೊಂಡ. ಮೇಲುಗಡೆ ಯಾರೂ ಇಲ್ಲವೆಂಬುದನ್ನು ದೃಢಪಡಿಸಿಕೊಂಡು ಬರಲು ಗಾವ್ರಿಕ್ ದಡವನ್ನು ಏರಿ ಮೇಲೆ ಹೋದ. ಬೇಗನೆ ಹಿಂದಿರುಗಿ ಬಂದ. ಗಾವ್ರಿಕನ ಸಪ್ಪುಳವಿಲ್ಲದ ಹೆಜ್ಜೆಗಳಿಂದಲೇ ಎಲ್ಲವೂ ಸುಗಮವಾಗಿರು ವುದೆಂದು ಅಜ್ಜ ತಿಳಿದುಕೊಂಡ. ಇಬ್ಬರೂ ಸೇರಿ ಬಹಳ ಕಷ್ಟಪಟ್ಟು ನಿಧಾನವಾಗಿ ನಾವಿಕನನ್ನು ದೋಣಿಯಿಂದ ಹೊರಕ್ಕೆ ಎತ್ತಿಕೊಂಡರು. ನಾವಿಕನನ್ನು ಅವನ ಕಾಲುಗಳ ಮೇಲೆ ನಿಲ್ಲಿಸಿ ಎರಡು ಕಡೆಗಳಿಂದ ಇಬ್ಬರೂ ಹೆಗಲುಕೊಟ್ಟು ಅವನಿಗೆ ಊರೆಯಾದರು. ನಾವಿಕ ಗಾವ್ರಿಕನ ಕತ್ತಿಗೆ ತನ್ನ ತೋಳುಗಳನ್ನು ಸುತ್ತಿಕೊಂಡ. ತನ್ನ ಸುಡುತ್ತಿದ್ದ ದೇಹಕ್ಕೆ ಅವನನ್ನು ಒತ್ತಿ ಹಿಡಿದುಕೊಂಡ. ಅವನ ಮೇಲೆ ತನ್ನ ಭಾರವನ್ನು ಹೇರುತ್ತಿದ್ದೇನೆ, ಆ ಹುಡುಗ ತಡೆಯಬಲ್ಲನೇ ಎಂದು ತಿಳಿಯು ವಷ್ಟು ಕೂಡ ಅವನಿಗೆ ಜ್ಞಾನವಿರಲಿಲ್ಲ. ಗಾವ್ರಿಕ್ ಭಾರವನ್ನು ಸಹಿಸಲು ಆಗುವಂತೆ ಬಿಗಿಯಾಗಿ ಕಾಲುಗಳನ್ನು ನೆಲದ ಮೇಲೆ ಇಡುತ್ತಿದ್ದ. "ನಡೆಯುವುದಕ್ಕಾಗುತ್ತದೆಯೆ?" ಎಂದು ಕಿವಿ ಯಲ್ಲಿ ಪಿಸುಮಾತಿನಿಂದ ಕೇಳಿದ. ನಾವಿಕ ಉತ್ತರ ಕೊಡಲಿಲ್ಲ. ಸ್ವಾಧೀನವಿಲ್ಲದ ಕಾಲು ಗಳನ್ನು ಹೇಗೋ ಮುಂದಕ್ಕೆ ಎಳೆದು ಇಡುತ್ತ ಇದ್ದ. ಅವನನ್ನು ಯಾರಾದರೂ ನೋಡಿದ್ದರೆ

ಇವನೇನು ನಿದ್ದೆಗಣ್ಣಿನಲ್ಲಿ ನಡೆಯುತ್ತಿದ್ದಾನೋ ಎಂದುಕೊಳ್ಳುತ್ತಿದ್ದರು. "ಮೆತ್ತಗೆ, ನಿಧಾ ವಾಗಿ" ಎಂದು ಅಜ್ಜ ಹಿಂಭಾಗದಿಂದ ನಾವಿಕನ ಭಾರವನ್ನು ತನ್ನ ಮೇಲಕ್ಕೆ ಬಿಟ್ಟುಕೊಳ್ಳು ಪ್ರಯತ್ನ ಮಾಡುತ್ತ ಮೃದುವಾಗಿ ಹೇಳಿದ. "ದೂರವೇನಿಲ್ಲ. ಇಲ್ಲೇ, ನಾಲ್ಕೆ ನಾಲ್ಕು ಹೆ ಅಷ್ಟೆ." ಎಂದ ಪುನಃ.

ಅವರು ಗುಡ್ಡವನ್ನು ಏರಿ ಮೇಲೆ ಹೋದರು. ಯಾರ ಕಣ್ಣಿಗೂ ಅವರು ಬೀಳಲಿ ಒಂದುವೇಳೆ ಯಾರಾದರೂ ನೋಡಿದ್ದರೂ ಕೂಡ ಅನುಮಾನ ಬರುತ್ತಿರಲಿಲ್ಲ. ಆ ಮುದು ಮತ್ತು ಹುಡುಗನ ಆಸರೆಯಿಂದ ಒಲೆದಾಡುತ್ತ ಹೋಗುತ್ತಿದ್ದ ಆ ಬಿಳಿಯ ವ್ಯಕ್ತಿಯ ಕಡೆ ಸಹಜವಾಗಿ ಗಮನಕೊಡುತ್ತಿರಲಿಲ್ಲ. ಆ ಸುತ್ತಮುತ್ತಿನಲ್ಲಿ ಆ ಹೊತ್ತಿನಲ್ಲಿ ಅದು ಎಲ್ಲರಿಗ ಪರಿಚಿತವಾದ ನಿತ್ಯ ದೃಶ್ಯವಾಗಿತ್ತು. ಎಲ್ಲೋ ಕುಡಿದು ಬಿದ್ದಿದ್ದ ಬೆಸ್ತನನ್ನು ಅವನ ಕಡೆ ವರು ಮನೆಗೆ ಕರೆದುಕೊಂಡುಹೋಗುತ್ತಿದ್ದಾರೆ ಎಂದುಕೊಳ್ಳುತ್ತಿದ್ದರವರು. ಹಾಗಿದ್ದ ಅವನೇಕೆ ಆಣೆಪ್ರತಿಜ್ಞೆಗಳನ್ನು ಮಾಡುತ್ತಿಲ್ಲ, ಭಯಂಕರವಾಗಿ ಬೈಯ್ಯುತ್ತಿಲ್ಲ, ಕಿರುಚಿಕೊಂ ಗದ್ದಲಮಾಡುತ್ತಿಲ್ಲ ಎಂದರೆ ಅವನು ಕಂಠಪೂರ್ತಿ ಕುಡಿದಿದ್ದಾನೆ ಎಂದು ಸುಲಭವಾಗಿ ಅರ್ಥ ವಾಗುತ್ತಿತ್ತು.

ಬಿಸಿಗಾಳಿ ತುಂಬಿ ಕುಮಟು ವಾಸನೆ ಹೊಡೆಯುತ್ತಿದ್ದ ಕೊಠಡಿಯೊಳಕ್ಕೆ ಆ ಕತ್ತ ಯಲ್ಲೇ ನಾವಿಕನನ್ನು ಕರೆದುಕೊಂಡು ಹೋದರು. ಹಲಗೆಯಮೇಲಿನ ಹಾಸಿಗೆಯ ಬಳಿ ಕರೆದೊಯ್ಯುತ್ತಿದ್ದಂತೆಯೇ ಆ ನಾವಿಕ ಅದರಮೇಲೆ ಕುಸಿದುಬಿದ್ದ.

ಅಜ್ಜ ಆ ಗುಡಿಸಲಿಗಿದ್ದ ಪುಟ್ಟ ಕಿಟಕಿಯನ್ನು ಒಂದು ಪ್ಲೈವುಡ್ಡಿನ ಹಲಗೆಯಿಂದ ಮುಚ್ಚಿದ ಬಾಗಿಲನ್ನು ಭದ್ರವಾಗಿ ಹಾಕಿದ. ಇಷ್ಟೆಲ್ಲ ಸಿದ್ಧತೆಯಾದ ಬಳಿಕವೇ ಅಜ್ಜ ಚಿಮಣಿಯಿಲ್ಲ ಇದ್ದ ಪ್ಯಾರಾಫಿನ್ ಎಣ್ಣೆ ದೀಪವನ್ನು ಹಚ್ಚಿದ್ದು. ಕುಡಿಯನ್ನು ಚಿವುಟಿ ದೀಪವನ್ನು ಆದಷ ಚಿಕ್ಕದುಮಾಡಿದ. ಹಳೆಯ ವರ್ತಮಾನ ಪತ್ರಿಕೆಯ ಹಾಳೆಗಳನ್ನು ಹಾಸಿದ್ದ ಬಡುವಿನ ಮೇ ಒಂದು ಮೂಲೆಯಲ್ಲಿ ದೀಪವನ್ನು ಇಡಲಾಗಿತ್ತು.

ಅದೇ ಬಡುವಿನ ಮೇಲೆ ಹಿಂದಿನ ದಿನ ಗಾವ್ರಿಕ್ ತಂದಿದ್ದ ಸೈನ್ಯದ ಬ್ರೆಡ್ಡನ್ನು ಒದ್ದೆ ಬಟ ಯಲ್ಲಿ ಸುತ್ತಿಡಲಾಗಿತ್ತು. ತಗಡಿನ ಒಂದು ಸಣ್ಣ ಬಟ್ಟಲೂ ಅದರ ಬಳಿಯಲ್ಲಿತ್ತು. ತಗಡಿ ಪಾತ್ರೆಯೊಂದರಲ್ಲಿ ಸೈನಿಕರು ಬ್ರೆಡ್ಡಿನ ಜತೆಯಲ್ಲಿ ಧಾರಾಳವಾಗಿ ಸುರಿದುಕೊಟ್ಟಿದ್ದ ಅಂಬ ಇದ್ದಿತು. ಎರಡು ಮರದ ಚಮಚಗಳು ಮತ್ತು ಉಪ್ಪನ್ನು ಹಾಕಿಟ್ಟಿದ್ದ ಒಂದು ದೊ ಸಮುದ್ರದ ಚಿಪ್ಪು ಅಲ್ಲೇ ವಿರಾಜಿಸುತ್ತಿದ್ದುವು. ಇವೇ ಅಲ್ಲಿದ್ದ ಆ ಅಜ್ಜ ಮೊಮ್ಮಗ ಇ ಸಂಸಾರದ ಸಾಮಾನುಗಳು.

ಎರಡು ಗೋಡೆಗಳು ಸೇರುವ ಮೂಲೆಯೊಂದರಲ್ಲಿ ಬಡುವಿನ ಮೇಲುಗಡೆಗೆ ಹೊಗೆಯಿ ಕಪ್ಪುಹಿಡಿದ ಉದ್ದನೆಯ ಪ್ರತಿಮೆಯೊಂದನ್ನು ಮೊಳೆಗೆ ತಗಲು ಹಾಕಲಾಗಿತ್ತು. ಪವಾಡ ಕ ಸಂತನಿಕೋಲಾಸನ ಮೂರ್ತಿ ಅದು. ಸಂತನಿಕೋಲಾಸ್ ಮೀನುಗಾರರ ರಕ್ಷಕನೆ ಪ್ರಸಿದ್ಧನಾಗಿದ್ದ. ಸಂತನಿಕೋಲಾಸ್‌ನ ಹೊಳೆಯುವ ಕಣ್ಣುಗಳೆರಡೂ ಕೆಳಗಡೆಗೆ ದ ಯನ್ನು ಬೀರುತ್ತಿದ್ದುವು. ಕೀವ್ ಚಿತ್ರಗಾರರ ರೀತಿಯಲ್ಲಿ ಕಣ್ಣುಗಳನ್ನು ಬಿಡಿಸಲಾಗಿತ್ತು.

ದೀಪದಿಂದ ಹೊರಟ ಹೊಗೆಯ ಸಾಲು ಆ ಸಂತನ ಮುಖದ ಮುಂದುಗಡೆಯ

ಮೇಲಕ್ಕೆ ಹಾದುಹೋಗುತ್ತಿದ್ದಿತು. ಆಗ ಆ ಮುಖ ಜೀವಂತವಾಗಿರುವಂತೆಯೂ ನಿಜವಾಗಿ ಉಸಿರಾಡುತ್ತಿರುವಂತೆಯೂ ತೋರುತ್ತಿತ್ತು. ಅಜ್ಜ ಇದುವರೆಗೆ ಯಾವದೇ ದೇವರಲ್ಲಿಯಾಗಲಿ ಭೂತದಲ್ಲಿಯಾಗಲಿ ನಂಬಿಕೆಯಿಟ್ಟಿರಲಿಲ್ಲ, ಆ ದೇವರುಗಳಲ್ಲಿ ಯಾರೂ ಒಳ್ಳೆಯದನ್ನಾಗಲಿ ಕೆಟ್ಟದ್ದನ್ನಾಗಲಿ ತನಗೆ ತನ್ನ ಜೀವನದಲ್ಲಿ ಉಂಟುಮಾಡಿದ್ದನ್ನು ಅಜ್ಜ ಕಂಡಿರಲಿಲ್ಲ. ಆದರೆ ಅದೇನೋ ಸಂತ ನಿಕೋಲಾಸನಲ್ಲಿ ಅವನು ನಂಬಿಕೆಯಿಟ್ಟಿದ್ದ. ತನ್ನ ಕಷ್ಟಕರವಾದ ಹಾಗೂ ಅಪಾಯಕರವಾದ ಕಸುಬಿನಲ್ಲಿ ತನಗೆ ಸಹಾಯ ಮಾಡುತ್ತಿದ್ದ ಸಂತನಲ್ಲಿ ಅವನು ನಂಬಿಕೆ ಇಡದೆ ಇರುವುದು ಹೇಗೆ ಸಾಧ್ಯ. ಅದರಲ್ಲೂ ಈ ಮೀನು ಹಿಡಿಯುವ ವೃತ್ತಿ ಅಜ್ಜನ ಜೀವನದಲ್ಲಿ ಬಹು ಪ್ರಮುಖ ಪಾತ್ರವನ್ನು ವಹಿಸಿತ್ತು. ಆದುದರಿಂದ ತನ್ನ ರಕ್ಷಕನಾದ ಸಂತನಲ್ಲಿ ನಂಬಿಕೆ ಅವನಿಗೆ ಅನಿವಾರ್ಯವಾಗಿತ್ತು. ನಿಜ ಹೇಳುವುದಾದರೆ ಈಚೀಚೆಗೆ ಪವಾಡಕರ್ತನು ತನ್ನ ಭಕ್ತನ ವಿಷಯದಲ್ಲಿ ಏಕೋ ಅಜಾಗರೂಕನಾಗಿದ್ದಂತೆ ಕಂಡುಬರುತ್ತಿತ್ತು. ಅಜ್ಜ ತರುಣ ವಯಸ್ಸಿನಲ್ಲಿ ಒಳ್ಳೆ ಶಕ್ತನಾಗಿದ್ದಾಗ ಪವಾಡಕರ್ತನಿಂದ ಸ್ವಲ್ಪವಾದರೂ ಪ್ರಯೋಜನವಿರುತ್ತಿತ್ತು. ಅಜ್ಜನ ವಯಸ್ಸು ಎಷ್ಟೆಷ್ಟು ಮೀರುತ್ತಿತ್ತೋ ಅಷ್ಟೂ ಅಷ್ಟು ಅವನ ರಕ್ಷಕ ಸಂತನು ನೀಡುತ್ತಿದ್ದ ಸಹಾಯವು ಕಡಮೆಯಾಗುತ್ತಿತ್ತು.

ದೋಣಿಗೆ ಹಾಯಿಯಿಲ್ಲದೆ ಇದ್ದಾಗ, ಅಜ್ಜನ ಬಲ ದಿನದಿನಕ್ಕೆ ಕುಂದುತ್ತ ಹೋದಾಗ, ಮೀನಿನ ಗಾಳಗಳಿಗೆ ಎರೆಯಾಗಿ ಕಟ್ಟಲು ಮಾಂಸವನ್ನು ಕೊಂಡುಕೊಳ್ಳುವುದಕ್ಕೆ ಹಣವಿಲ್ಲದೆ ಹೋದಾಗ ಅವನಿಗೆ ದೊರಕುತ್ತಿದ್ದ ಮೀನುಗಳ ಗಾತ್ರವು ಸಣ್ಣದಾಗಿರುತ್ತಿದ್ದು ಅವುಗಳ ಸಂಖ್ಯೆಯೂ ಕಡಮೆಯಾಗಿರುತ್ತಿತ್ತು. ಸನ್ನಿವೇಶ ಹೀಗಿರುವಾಗ ಅವನು ಪವಾಡಕರ್ತರ ಸಾರ್ವಭೌಮನಾಗಿದ್ದರೆ ತಾನೆ ಏನುಮಾಡಬಲ್ಲ! ಆದುದರಿಂದ ಅವನಿಂದ ಹೆಚ್ಚಿಗೆ ಫಲವನ್ನು ಅಪೇಕ್ಷಿಸುವುದರಲ್ಲೂ ಅರ್ಥವಿರಲಿಲ್ಲ. ಬಡತನ ಮತ್ತು ಮುಪ್ಪು ಬಂದಡಸಿ ಭಕ್ತನು ಕೆಳಕ್ಕೆ ಬಿದ್ದಾಗ ಅವನನ್ನು ಮೇಲಕ್ಕೆತ್ತುವ ಕಾಲದಲ್ಲಿ ರಕ್ಷಕ ಸಂತನ ಕಾಲುಕೂಡ ಕುಂಟುತ್ತದೆ.

ಆ ನಿಷ್ಠುರ ಹಾಗೂ ಅಪ್ರಯೋಜಕ ಸಂತನ ಕಡೆಗೆ ದೃಷ್ಟಿ ಬೀರಿದಾಗ ಅವನ ಮನಸ್ಸಿಗೆ ನೋವಾಗಿ ಕಹಿ ಅನುಭವಗಳು ಅವನನ್ನು ಕಾಡಿಸಿದ್ದ ಎಷ್ಟೋ ಸಂದರ್ಭಗಳು ಅವನ ಜೀವನದಲ್ಲಿ ಜರುಗಿದ್ದವು. ನಿಜ, ಆ ಸಂತ ಗೋಡೆಯ ಮೇಲಿರುವುದರಿಂದ ಯಾರಿಗೇನು ನಷ್ಟ, ಯಾರಿಗೇನು ತೊಂದರೆ. ಆ ಮೂಲೆಯಲ್ಲಿ ತನ್ನಷ್ಟಕ್ಕೆ ತಾನು ಇರುತ್ತಾನೆ. ಅವನುಅಲ್ಲೇ ಮೊಳೆಗೆ ನೇತು ಬಿದ್ದಿರಲಿ. ಎಂದಾದರೊಂದು ದಿನ ಅವನ ದೆಸೆಯಿಂದ ಒಳ್ಳೆಯದಾಗಬಾರದೇಕೆ. ಹೀಗೆ ಕಾಲಾನುಕ್ರಮದಲ್ಲಿ ಆ ಮುದುಕನು ಪವಾಡಕರ್ತನ ಪ್ರತಿಮೆಯ ವಿಷಯದಲ್ಲಿ ಒಂದು ರೀತಿಯ ವ್ಯಂಗ್ಯಬೆರೆತ ಅನುಗ್ರಹವನ್ನು ತೋರಿಸುವ ಸ್ಥಿತಿಗೆ ಬಂದಿದ್ದ.

ಮೀನುಗಳನ್ನು ಬೇಟೆಯಾಡಿ ತೆಗೆದುಕೊಂಡು ಮನೆಗೆ ಬರುವುದು ಅಜ್ಜನ ನಿತ್ಯದ ಕೆಲಸ. ಅವನಿಗೇನು ಧಂಡಿಯಾಗಿ ಮೀನುಗಳು ದೊರಕುತ್ತಿದ್ದುವೇ? ಅವು ಯಾವಾಗಲೂ ಅಜ್ಜನಮೇಲೆ ಕನಿಕರ ತೋರುವಷ್ಟು ಅಲ್ಪವಾಗಿರುತ್ತಿದ್ದುವು. ಅಂಥ ದಿನಗಳಲ್ಲೆಲ್ಲ ಅಜ್ಜ ಕ್ಲೇಶಕ್ಕೆ ಸಿಲುಕಿದಂತೆ ತೋರುತ್ತಿದ್ದ. ಪವಾಡಕರ್ತನನ್ನು ತನ್ನ ಕಡೆಗಣ್ಣಿನಿಂದ ನೋಡುತ್ತ ಗೊಣಗುತ್ತಲೇ 'ಏ ಮುದಿಗೊಡ್ಡೇ, ನೋಡು ಪುನಃ ಕೈ ಬರಿದು ಮಾಡಿಕೊಂಡು ಬಂದಿದ್ದೇನೆ. ಈ ಕೆಲಸಕ್ಕೆ ಬಾರದ ಮೀನುಗಳಿಂದ ಏನುಪ್ರಯೋಜನ! ಇವುಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು

ಹೋಗಲು ನನಗೇ ನಾಚಿಕೆಯಾಗುತ್ತದೆ. ಇವು ಮೀನುಗಳೇ, ಮೀನಿನ ಮೈಮೇಲಿನ ಹೇ
ಗಳು." ಎನ್ನುವನು.

ಬಳಿಕ ಸಂತನ ಮನಸ್ಸಿಗೆ ತುಂಬ ನೋವುಂಟುಮಾಡಬಾರದೆಂದು ಅಜ್ಜ "ಇದು ಸಹಜವೆ ಸೀಗಡಿ ಜಂಗಿಗಳಿಗೆ ಒಳ್ಳೆ ಕಪ್ಪೆ ಮೀನುಗಳು ಯಾಕೆ ಓಡಿಬರಬಾರದು? ನಿಜವಾದ ದ ವಾದ ಕಪ್ಪೆಮೀನು ಸೀಗಡೀನ ನೋಡಿ ಉಗಿಯುತ್ತೆ. ಒಳ್ಳೆ ದಪ್ಪ ಕಪ್ಪೆಮೀನಿಗೆ ಮಾಂ ಬೇಕು, ಮಾಂಸ. ಆದರೆ ಮಾಂಸ ನಮಗೆಲ್ಲಿಂದ ಬರಬೇಕು. ಪವಾಡದಿಂದ ಮಾಂಸ ಬ ಸುವುದಕ್ಕಾಗುವುದಿಲ್ಲ. ನೀನು ತಾನೆ ಏನು ಮಾಡಬಲ್ಲೆ ?" ಎನ್ನುವನು.

ಹೇಗೂ ಈಗ ಆ ಮುದುಕನ ಆಲೋಚನೆಗಳಿಂದ ಪವಾಡಕರ್ತ ದೂರನಾಗಿದ್ದ. ಅಜ್ಜ ತಲೆಯೆಲ್ಲ ನಾವಿಕನಿಂದ ತುಂಬಿಹೋಗಿತ್ತು. ನಾವಿಕ ಜ್ವರದಿಂದ ಮೈಮೇಲೆ ಎಚ್ಚರವಿಲ್ಲ ಮಲಗಿದ್ದಾನಲ್ಲ ಎಂಬುದು ಅಜ್ಜನ ಚಿಂತೆಗೆ ಕಾರಣವಾಗಿರಲಿಲ್ಲ. ಅನಾಮಧೇಯ ದಿಕ್ಕಿನಿಂ ಮಾರಕವಾದ ಅಪಾಯವು ಏರಿಬರುವುದೆಂದು ಅವನ ಮನಸ್ಸಿನಲ್ಲಿ ಯಾವುದೋ ಮಿಡಿಯುತ್ತಿತ್ತು ಅದು ಆವನ ಚಿಂತೆಗೆ ಕಾರಣವಾಗಿತ್ತು.

ನಾವಿಕ ಯಾವ ರೀತಿಯ ಭಯದಲ್ಲಿ ಸಿಕ್ಕಿದ್ದನೆಂಬುದನ್ನು ಅಜ್ಜ ಸರಿಸುಮಾರಾಗಿ ಊಹಿ ದ್ದನಾದರೂ ಅವನಿಗೆ ಸಹಾಯ ಮಾಡಬೇಕಾಗಿದ್ದರೆ ಇನ್ನೂ ಹೆಚ್ಚಿನ ವಿವರಗಳು ತಿಳಿಯ ಬೇಕಾದದ್ದು ಅಗತ್ಯವಾಗಿತ್ತು. ನಾವಿಕ ಪ್ರಜ್ಞಾಶೂನ್ಯನಾಗಿ ಬಿದ್ದುಕೊಂಡು ಜ್ವರದಿಂದ ನರಳ ತ್ತಿದ್ದ. ತೇಪೆಹಾಕಿದ್ದ ತೆಳುಹಾಸಿಗೆಯ ಮೇಲೆ ಹೊರಳಾಡುತ್ತಿದ್ದ. ತೆರೆದ ಅವನ ದೃಷ್ಟಿಶೂನ ವಾದ ಕಣ್ಣುಗಳು ನೇರವಾಗಿ ಎದುರುಗಡೆಯಲ್ಲಿ ಏನನ್ನೋ ನೋಡುವಂತಿದ್ದುವು. ಅವನ ಒಂದ ಕೈ ಹಾಸಿಗೆಯಿಂದ ಹೊರಕ್ಕೆ ನೀಡಿಕೊಂಡು ಬಿದ್ದಿತ್ತು. ಇನ್ನೊಂದು ಕೈ ಅವನ ಎದೆಯ ಮೇಲಿತ್ತು. ಆ ಕೈಮೇಲೆ ನೀಲಿಯ ಲಂಗರಿನ ಚಿತ್ರವಿದ್ದುದನ್ನು ಅಜ್ಜ ನೋಡಿದ.

ಮೇಲಿಂದ ಮೇಲೆ ನಾವಿಕ ಎದ್ದೇಳುವುದಕ್ಕೆ ಪ್ರಯತ್ನಿಸುತ್ತಿದ್ದ. ನರಳುತ್ತ ಪ್ರಜ್ಞಾ ಶೂನ್ಯನಾಗಿದ್ದ ಅವನಿಂದ ಬಿಸಿ ಬೆವರು ಹರಿಯುತ್ತಿತ್ತು. ಕೈನಲ್ಲಿದ್ದ ಲಂಗರನ್ನು ಕಚ್ಚಿ ಉಗಿದ ಬಿಸಾಡಬೇಕು ಎಂಬಂತೆ ಕೈಯನ್ನು ಕಚ್ಚಿಕೊಳ್ಳುತ್ತಿದ್ದ. ಲಂಗರು ಕೈಮೇಲಿನಿಂದ ಮಾಯ ವಾದರೆ ತನಗೆ ಅನುಕೂಲವಾಗುವುದೆಂಬಂತೆ ಅವನು ಭಾವಿಸಿದಂತಿತ್ತು.

ಅಜ್ಜ ಅವನನ್ನು ಬಲವಂತವಾಗಿ ಮಲಗಿಸಿರುತ್ತಿದ್ದ. ಅವನ ಹಣೆಯ ಬೆವರನ್ನು ಒರೆ "ಮಲಗಿಕೋ, ಸುಮ್ಮನೆ ಮಲಗಿಕೋ, ನಿದ್ದೆಹೋಗು. ಹೆದರಬೇಡ, ನಿದ್ದೆಮಾಡು." ಎಂದ ಒತ್ತಿ ಹೇಳುತ್ತಿದ್ದ.

ಹೊರಗೆ ತರಕಾರಿ ತೋಟದಲ್ಲಿ ಗಾವ್ರಿಕ್ ಕಾಹಿಲೆಯವನಿಗೆ ಟೀಮಾಡಿಕೊಡಲು ನೀರನ ಕುದಿಸುತ್ತಿದ್ದ. ಅದು ನಿಜವಾದ ಟೀ ಆಗಿರಲಿಲ್ಲ. ಅಜ್ಜ ಹತ್ತಿರದ ಗುಡ್ಡಗಳಲ್ಲಿ ಮೇ ತಿಂಗ ನಲ್ಲಿ ಹುಡುಕಾಡಿ ತಂದು ಒಣಗಿಸಿಟ್ಟ ಸುವಾಸನೆಯ ಒಂದು ಜಾತಿಯ ಬೇರಿನ ಕಷಾಯಮಾ ವಾಗಿತ್ತು. ಅಜ್ಜ ಮತ್ತು ಮೊಮ್ಮಗ ಟೀಗೆ ಬದಲಾಗಿ ಅದನ್ನೇ ಉಪಯೋಗಿಸುತ್ತಿದ್ದರು.

೧೬. ತಿರುಗು ಗೋಪುರದ ಫಿರಂಗಿ ಬಾರಿಸು!

ಅವರು ಬಹಳ ಆತಂಕದಿಂದ ಆ ರಾತ್ರಿಯನ್ನು ಕಳೆದರು. ನಾವಿಕ ಎದೆಯನ್ನು ಮುಚ್ಚಿದ್ದ ಷರಟನ್ನು ಹರಿದುಕೊಂಡ. ಅವನಿಗೆ ಶ್ವಾಸ ಸಿಕ್ಕಿಕೊಂಡಂತಾಗಿತ್ತು. ಅಜ್ಜ ದೀಪವನ್ನು ಆರಿಸಿ ಹೊಸ ಗಾಳಿ ಒಳಕ್ಕೆ ಬರಲೆಂದು ಬಾಗಿಲನ್ನು ತೆರೆದಿಟ್ಟ. ನಾವಿಕನ ಕಣ್ಣಿಗೆ ನಕ್ಷತ್ರನಿಬಿಡವಾದ ಆಕಾಶ ಕಾಣಿಸಿತು. ಆದರೆ ಅದು ಏನು ಎಂದು ತಿಳಿಯಲು ಅವನು ಅಸಮರ್ಥನಾಗಿದ್ದ. ರಾತ್ರಿಯ ಶುದ್ಧವಾದ ಗಾಳಿಯು ಒಳಕ್ಕೆ ಬೀಸಿ ಅವನ ತಲೆಯನ್ನು ತಂಪಿಸಿತು.

ರಾತ್ರಿಯೆಲ್ಲ ಗಾವ್ರಿಕ್ ಬಾಗಿಲಿನ ಬಳಿಯ ಗಿಡಗಳ ನಡುವೆ ಅಡಗಿಕೊಂಡು ಮಲಗಿದ್ದ. ಗಾಳಿ ಗಿರಕೆಂದರೂ ಆಲಿಸುವಷ್ಟುಮಟ್ಟಿಗೆ ಅವನ ಶ್ರವಣೇಂದ್ರಿಯವು ಸೂಕ್ಷ್ಮವಾಗಿತ್ತು. ಅವನು ರಾತ್ರಿ ಒಂದು ನಿಮಿಷವೂ ಕಣ್ಣು ಮುಚ್ಚಲಿಲ್ಲ. ಬೆಳಗಾಗುವುದನ್ನೇ ಇದಿರುನೋಡು ತ್ತಿದ್ದ. ಮೊಣಕೈಯ್ಯನ್ನೇ ದಿಂಬಾಗಿ ಮಾಡಿಕೊಂಡು ಮಲಗಿದ್ದುದರಿಂದ ಅವನ ಕೈಯ್ಯೆಲ್ಲ ಜೋಮು ಹಿಡಿದಿತ್ತು.

ಅಜ್ಜ ಗುಡಿಸಲಿನ ಒಳಗೆ ನೆಲದ ಮೇಲೆ ಹಾಸಿಗೆಯನ್ನು ಮಾಡಿಕೊಂಡು ಮಲಗಿದ. ಆದರೆ ಅವನು ತಾನೆ ನಿದ್ದೆಮಾಡಿದನೇನು. ಕ್ರಿಕೆಟ್‌ಗಳ ಕೂಗು, ಸಮುದ್ರದ ಅಲೆಗಳ ಭೋರ್ಗ ರೆತ ಮತ್ತು ಕಾಹಿಲೆ ಮನುಷ್ಯನ ನರಳುವಿಕೆ-ಇವೇ ಅವನ ಕಿವಿಯನ್ನು ತುಂಬುತ್ತಿದ್ದ ಶಬ್ದಗಳು. ಕಾಹಿಲೆಯಿಂದ ನರಳುತ್ತಿದ್ದ ನಾವಿಕ ಉದ್ವೇಗದಿಂದ ಆಗಾಗ್ಗೆ ಹಾಸಿಗೆಯಿಂದ ನೆಗೆದೆದ್ದು ಕುಳಿತುಕೊಂಡು ದುರ್ಬಲವಾದ ಸತ್ವಹೀನಸ್ವರದಲ್ಲಿ "ತಿರುಗು ಗೋಪುರದ ಫಿರಂಗಿ ಬಾರಿಸು,! ಕೊಷೂಬ, ಫಿರಂಗಿಗುಂಡನ್ನು ಅವರಿಗೆ ಕೊಡು!" ಎಂದೋ, ಅಥವಾ ಇದೇ ರೀತಿಯ ಅರ್ಥ ವಾಗದಂಥ ಮಾತುಗಳನ್ನೋ ಹೇಳುತ್ತ ಕೂಗಿಕೊಳ್ಳುತ್ತಿದ್ದ. ಅಜ್ಜ ಅವನ ಹೆಗಲನ್ನು ಬಿಗಿಯಾಗಿ ಹಿಡಿದುಕೊಂಡು ಅವನನ್ನು ಮೆದುವಾಗಿ ಅಲ್ಲಾಡಿಸುತ್ತ ಜ್ವರದಿಂದ ಸುಡುತ್ತ ಬಿಸಿ ಯುಸಿರು ಬರುತ್ತಿದ್ದ ಬಾಯಿಯ ಹತ್ತಿರಕ್ಕೆ ತನ್ನ ಬಾಯಿಯನ್ನು ತೆಗೆದುಕೊಂಡುಹೋಗಿ ಪಿಸು ಮಾತಿನಲ್ಲಿ "ದೇವರೇ ದಿಕ್ಕು, ಸುಮ್ಮನೆ ಮಲಗಿಕೋ, ಗಲಾಟೆ ಎಬ್ಬಿಸಬೇಡ. ಸುಮ್ಮನೆ ಮಲ ಗಿಕೋ. ಏನು ಪರೀಕ್ಷೆಯಪ್ಪ ಇದು, ದೇವರೇ?" ಎಂದು ಹೇಳುತ್ತಿದ್ದ. ನಾವಿಕ ಹಲ್ಲನ್ನು ಕಚ್ಚುತ್ತ ಸ್ವಲ್ಪ ಸ್ವಲ್ಪವಾಗಿ ಶಾಂತನಾಗುತ್ತಿದ್ದ.

ಈ ವಿಚಿತ್ರ ರೋಗಿ ಯಾರು?

ರುಮೇನಿಯಾ ದೇಶದ ದಡವನ್ನು ಸೇರಿದ ಪೊತ್ಯೆಮ್ಕಿನ್ ಯುದ್ಧ ನೌಕೆಯ ಏಳುನೂರು ಜನ ನಾವಿಕರಲ್ಲಿ ರೊಡಿಯಾನ್ ಜುಕೋವ್ ಒಬ್ಬ. ಆ ಬಂಡಾಯದ ಹಡಗಿನ ಇತರ ಜನರಿ ಗಿಂತ ಯಾವ ರೀತಿಯಲ್ಲೂ ರೊಡಿಯಾನ್ ಹೆಚ್ಚಿನವನಾಗಿರಲಿಲ್ಲ. ಬಂಡಾಯವೆದ್ದ ಮೊದಲ ನಿಮಿಷದಿಂದ ಯುದ್ಧ ನೌಕೆಯ ಸೇನಾಧಿಪತಿಯು ಭೀತಿಯಿಂದ ಎದೆಗುಂದಿ ನಾವಿಕರೆಲ್ಲರೆದುರಿಗೆ ಮೊಣಕಾಲೂರಿ ಬಗ್ಗಿ ಕುಳಿತು ಶರಣಾಗತನಾದ ಕ್ಷಣದಿಂದ, ಬಂದೂಕಗಳಿಂದ ಮೊದಲ ಗುಂಡು ಹಾರಿದ ಸಮಯದಿಂದ, ಕೆಲವು ಜನ ಅಧಿಕಾರಿಗಳ ಸತ್ತ ದೇಹಗಳನ್ನು ಸಮುದ್ರಕ್ಕೆ ಎಸೆದ ಕಾಲ ದಿಂದ, ತಾವು ಭಯದ ಭಾವನೆಯಿಲ್ಲದೆ ಒಂದು ಸಲವಾದರೂ ಅವನ ಕೋಣೆಯ ಬಾಗಿಲನು

ಹಾಯ್ದು ಹೋಗಲಾಗದೆ ಇದ್ದಂಥ ನೌಕಾಬಲದಧಿಪತಿಯ ಕೊಠಡಿಯ ಬಾಗಿಲನ್ನು ಕಡಿದು ಬೀಳಿಸಿದಾಗಿನಿಂದ, ರುಮೇನಿಯದ ಸೈನಿಕರಿಗೆ ಶರಣಾಗತರಾಗಿ ಕಾನ್ಸ್ಟಂಟ್ಸದಲ್ಲಿ ಹಡಗಿನಿಂದ ಇಳಿಯುವವರೆಗೆ ಇತರ ಎಲ್ಲ ನಾವಿಕರಂತೆ ರೊಡಿಯಾನ್ ಜುಕೋವನೂ ಕೂಡ ಆವೇಶ ಮತ್ತು ಉದ್ವೇಗಗಳಿಂದ ಆಲೋಚಿಸಿದ್ದ, ನಡೆದುಕೊಂಡಿದ್ದ ಮತ್ತು ಬದುಕಿದ್ದ.

ರೊಡಿಯಾನ್ ಅದುವರೆಗೆ ಪರದೇಶದ ಮಣ್ಣಿನ ಮೇಲೆ ಕಾಲಿಟ್ಟಿರಲಿಲ್ಲ. ಪರದೇಶವು ನಿಷ್ಪ್ರಯೋಜಕವಾದ ಸ್ವಾತಂತ್ರ್ಯದ ಹಾಗೆ ಕಹಿ ಅನುಭವಗಳಿಂದ ಕೂಡಿದ್ದಾಗಿರುತ್ತದೆ.

ಪೋತ್ಯೆಮ್ಕಿನ್ ಜಹಜು ಹಡಗಿನ ಇಳಿದಾರಿಗೆ ಅತಿ ಸಮೀಪದಲ್ಲಿ ನಿಂತಿತ್ತು. ಆ ಬಂದರಿನಲ್ಲಿ ತೀರಪ್ರಯಾಣದ ಹಡಗುಗಳು, ಸಾಮಾನುಹಡಗುಗಳು, ವಿಹಾರ ನೌಕೆಗಳು, ಯುದ್ಧದ ಹಡಗಿನ ದೋಣಿಗಳು ಲಂಗರು ಹಾಕಿದ್ದುವು. ಇವುಗಳ ಪಕ್ಕದಲ್ಲಿ ಕೃಶವಾಗಿ ಕಾಣುತ್ತಿದ್ದ ಒಂದು ರುಮೇನಿಯದ ಕಾವಲು ಹಡಗೂ ಇದ್ದಿತು. ಇವುಗಳ ನಡುವೆ ಮೂರು ಹೊಗೆ ಕೊಳವಿಗಳನ್ನು ಹೊಂದಿದ್ದ ಬೂದು ಬಣ್ಣದ ಬಂಡಾಯಗಾರರ ಯುದ್ಧನೌಕೆಯು ತನ್ನ ಬೃಹತ್ ಪ್ರಮಾಣದಿಂದ ಎದ್ದು ಕಾಣುತ್ತಿದ್ದಿತಾದರೂ ಅದರಲ್ಲಿ ಏನೋ ಒಂದು ರೀತಿಯ ಅಸಾಮಂಜ್ಯಸವು ಗೋಚರ ವಾಗುತ್ತಿದ್ದಿತು.

ಪೊತ್ಯೆಮ್ಕಿನ್ ಯುದ್ಧನೌಕೆಯ ತಿರುಗು ಗೋಪುರದ ಮೇಲುಗಡೆಯಲ್ಲಿ ಎಲ್ಲಕ್ಕಿಂತ ಎತ್ತರ ದಲ್ಲಿ ನೀಲಿಯ ಗೀರುಗಳಿಂದಲಂಕೃತವಾದ ಬಿಳಿಯ ಲಕ್ಕೋಟೆಯಂತಿದ್ದ ಸಂತ ಆಂಡ್ರೂಸನ ಬಾವುಟವು ಇನ್ನೂ ನೇತಾಡುತ್ತಿತ್ತು. ಆದರೆ ಅದು ಇದ್ದಕ್ಕಿದ್ದಂತೆ ಕಂಪಿಸಿ ಕುಂಟುತ್ತ ಜಾರುತ್ತ ಕೆಳಕ್ಕೆ ಇಳಿಯಿತು. ಆಗ ರೊಡಿಯಾನ್ ತನ್ನ ನಾವಿಕ ಟೋಪಿಯನ್ನು ಎರಡು ಕೈ ಗಳಿಂದಲೂ ಹಿಡಿದುಕೊಂಡು ಬಗ್ಗಿ ನಮಸ್ಕರಿಸಿ ಧ್ವಜಕ್ಕೆ ತನ್ನ ಗೌರವವನ್ನು ಸೂಚಿಸಿದ. ಅವನ ಹಾಗೆ ಎಷ್ಟು ಕೆಳಕ್ಕೆ ಬಗ್ಗಿದನೆಂದರೆ ಎದೆಯ ಮೇಲೆ ಧರಿಸಿದ್ದ ಸಂತಜಾರ್ಜನ ಆಕೃತಿಯಿಂದ ಇಳಿಬಿದ್ದ ರಿಬ್ಬನ್ನುಗಳ ತುದಿಯು ನೆಲದ ಧೂಳಿಗೆ ತಗುಲಿ ಕಿತ್ತಲೆ ಮತ್ತು ಕಪ್ಪು ಬಣ್ಣದ ಕಾಡು ಹೂವುಗಳಂತೆ ಕಂಡಿತು.

"ಇದು ಶುದ್ಧ ಅವಮಾನ! ಹನ್ನೆರಡು ಅಂಗುಲದ ಬಂದೂಕುಗಳು, ಒಂದು ತಿಂಗಳಿಗೆ ಸಾಕಾಗುವಷ್ಟು ಮದ್ದುಗುಂಡುಗಳು, ಅಲ್ಲದೆ ಬಂದೂಕು ಹಾರಿಸುವ ಒಬ್ಬೊಬ್ಬನೂ ತನ್ನ ತಾಯಿಯ ಮಗ. ಇಷ್ಟೆಲ್ಲ ಇದ್ದೂ ಶರಣಾಗುವುದೆಂದರೆ. ದೋರೋಫಿ ಕೊಷೂಬನ ಮಾತನ್ನು ನಾವು ಕೇಳದೆ ಇದ್ದುದು ತಪ್ಪು. ಹೇನು ಕೂರಿಗೆಗಳಂಥ ನೀಚ ಸಣ್ಣಪುಟ್ಟ ಅಧಿಕಾರಿಗಳನ್ನು ಮೊದಲು ಸಮುದ್ರಕ್ಕೆ ಎಸೆಯಬೇಕು, 'ಜಾರ್ಜ ಪೊಬೇದನಾಸೆಟ್ಸ್' ಹಡಗನ್ನು ಮುಳುಗಿ ಬೇಕು ಮತ್ತು ಒಡೆಸ್ಸ ರೇವಿನಲ್ಲಿ ಸೈನ್ಯವನ್ನು ಇಳಿಸಬೇಕು ಎಂದು ಅವನು ಹೇಳಿದುದು ಸತ್ಯ ವಾದುದು. ಆಗ ಒಡೆಸ್ಸದ ಇಡೀ ಸೈನ್ಯವನ್ನೆಲ್ಲ ದಂಗೆ ಏಳಿಸಬಹುದಾಗಿತ್ತು. ಅಲ್ಲಿಯ ಎಲ್ಲ ಕೂಲಿಗಾರರೂ ನಮಗೆ ಸಹಾಯಮಾಡುತ್ತಿದ್ದರು. ಅಲ್ಲದೆ ಇಡೀ ಕಪ್ಪು ಸಮುದ್ರ ಪ್ರದೇಶವೇ ನಮ್ಮ ಕಡೆಗಿರುತ್ತಿತ್ತು. ಅಯ್ಯೊ ಕೊಷೂಬ, ಕೊಷೂಬ, ನಿನ್ನ ಮಾತುಗಳನ್ನು ಕೇಳಿದ್ದರೆ ಈಗ ಇದೆಂಥ ನರಕದಲ್ಲಿ ಸಿಕ್ಕಿಬಿದ್ದೆವು ನಾವು, ನೋಡು."

ರೊಡಿಯಾನ್ ಕೊನೆಯ ಬಾರಿ ತನ್ನ ಪ್ರೀತಿಪಾತ್ರ ಹಡಗಿಗೆ ನಮಸ್ಕರಿಸಿದ. "ಆದದ್ದಾಯಿತು ನಾವು ಬಗ್ಗುವುದಿಲ್ಲ. ನಾವು ಇಡಿ ರಷ್ಯಾವನ್ನು ಬಡಿದೆಬ್ಬಿಸುತ್ತೇವೆ." ಎಂದು ಹಲ್ಲು ಕಚ್ಚಿಕೊಂ

ಆಗ ಅವನು ಹೇಳಿದ್ದ.

ರೊಡಿಯಾನ್ ತನ್ನ ಬಳಿ ಉಳಿದಿದ್ದ ಹಣದಿಂದ ಸಾಮಾನ್ಯಜನರ ಉಡುಪನ್ನು ಕೊಂಡು ಕೊಂಡ. ನಾವಿಕನ ಸಮವಸ್ತ್ರವನ್ನು ತ್ಯಜಿಸಿ ನಾಗರಿಕ ಉಡುಪನ್ನು ಧರಿಸಿದ. ಕೆಲವು ದಿನಗಳ ಬಳಿಕ ಇರುಳಿನಲ್ಲಿ ವಿಲ್ಕೋವೊ ಬಳಿ ಡಾನ್ಯೂಬ್ ನದಿಯ ಅಳಿವೆಯನ್ನು ದಾಟಿ ರಷ್ಯದ ಗಡಿಯನ್ನು ಸೇರಿದ. ಸ್ಟೆಪ್ಪಿ ಮೈದಾನವನ್ನು ದಾಟಿ ಅಕರ್‌ಮಾನ್‌ಗೆ ಬಂದು ಅಲ್ಲಿಂದ ದೋಣಿಯನ್ನೋ ಅಥವಾ ಓಡನ್ನೋ ತೆಗೆದುಕೊಂಡು ಒಡೆಸ್ಸ ನಗರವನ್ನು ಸೇರಬೇಕೆಂದು ಅವನು ಹಂಚಿಕೆ ಹಾಕಿ ಕೊಂಡ. ಒಡೆಸ್ಸದಿಂದ ತನ್ನ ಹುಟ್ಟಿದ ಹಳ್ಳಿಯಾದ ನೆರೂಬಾಯ್ಸ್‌ಕೋಯೆಗೆ ಹೋಗುವುದು ಸುಲಭವಾಗಿತ್ತು. ಅಲ್ಲಿಗೆ ಹೋದಮೇಲೆ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸ ಬಹುದು. ಇದು ಅವನು ಹಾಕಿಕೊಂಡ ಕಾರ್ಯಕ್ರಮ.

ಅವನಿಗೆ ಒಂದು ವಿಷಯ ಖಚಿತವಾಗಿತ್ತು. ಅವನ ಹಿಂದಿನ ದಾರಿಗಳೆಲ್ಲ ಅವನ ಪಾಲಿಗೆ ಮುಚ್ಚಿದ್ದುವು. ಜಾರ್ ಚಕ್ರವರ್ತಿಯ ಯುದ್ಧನೌಕೆಗಳಲ್ಲಿ ನಾವಿಕನ ಗುಲಾಮಗಿರಿಯ ಜೀವನ ಅವನ ಪಾಲಿಗೆ ಇನ್ನು ಇರಲಿಲ್ಲ. ಅಂತೆಯೇ ಅಚ್ಚನೀಲಿ ಬಣ್ಣದ ಗೋಡೆಗಳಿಂದಲೂ ತೆಳು ನೀಲಿ ಕಿಟಕಿಗಳಿಂದಲೂ ಕೂಡಿದ್ದ ಸುತ್ತಮುತ್ತ ದೊಡ್ಡ ಬಿಂದಿಗೆಗಿಡಗಳ ಸೌಂದರ್ಯದಿಂದ ಸುತ್ತುವರೆದಿದ್ದ ಜೇಡಿಮಣ್ಣಿನ ಗುಡಿಸಿಲಾದ ತನ್ನ ಸ್ವಂತ ಮನೆಯಲ್ಲಿದ್ದುಕೊಂಡು ರೈತಜೀವನ ವನ್ನು ನಡೆಸುವುದೂ ಅವನ ಪಾಲಿಗಿರಲಿಲ್ಲ.

ಈಗ ಅವನ ಮುಂದೆ ಇದ್ದುದು ಎರಡೇ ದಾರಿ. ಫಾಸಿ ಶಿಕ್ಷೆಯನ್ನು ಅನುಭವಿಸುವುದು, ಇಲ್ಲವೇ ಸರಕಾರದ ಕಣ್ಣಿಗೆ ಕಾಣಂತೆ ಅಡಗಿಕೊಂಡಿದ್ದು ಚಳುವಳಿಯನ್ನು ಆರಂಭಿಸುವುದು, ಜಮಿನುದಾರರ ಜಹಗೀರುಗಳಿಗೆ ಬೆಂಕಿ ಹಾಕುವುದು, ಮತ್ತು ನಗರವನ್ನು ಸೇರಿ ಕ್ರಾಂತಿಕಾರ ಕೇಂದ್ರ ಕಚೇರಿಯನ್ನು ಸೇರುವುದು.

ದಾರಿಯಲ್ಲೇ ಅವನಿಗೆ ಹುಷಾರು ತಪ್ಪಿತು. ಆದರೆ ನಡುದಾರಿಯಲ್ಲಿ ನಿಲ್ಲುವ ಮಾತೇ ಇರಲಿಲ್ಲ. ಆದುದರಿಂದ ಮುಂದುವರಿದ.

ಆದರೆ . . . . ಅವನಿಗೇನಾಗಿದೆ? ಅವನು ಎಲ್ಲಿದ್ದಾನೆ? ಬಾಗಿಲಿನಲ್ಲಿ ಯಾಕೆ ತಾರೆಗಳು ಉಯ್ಯಾಲೆಯಾಡುತ್ತಿವೆ? ಅವು ನಿಜವಾಗಿ ನಕ್ಷತ್ರಗಳೋ ಅಥವಾ...,?

ಕಪ್ಪುಕಡಲಿನಂತೆ ಕತ್ತಲೆ ರೋಡಿಯಾನನನ್ನು ಆವರಿಸಿತ್ತು. ಕಪ್ಪುನಕ್ಷತ್ರಗಳು ಗೊಂಚಲು ಗೊಂಚಲಾಗಿ ಭಗ್ಗನೆ ಹೊತ್ತಿಕೊಂಡು ಉರಿಯುವಂತೆ ಕಾಣುತ್ತವೆ. ಹತ್ತಿರ ಬರಕೂಡದೆಂದು ಸೂಚಿಸುವ ನಿಷೇಧಸೂಚಕ ದೀಪಮಾಲೆಗಳಂತೆ ತೋರುತ್ತವೆ. ನಗರದಲ್ಲಿ ಗಲಭೆಯೆದ್ದಂತೆ ತೋರುತ್ತದೆ. ಬಂದರಿನ ಬಳಿಯ ಮರದ ಸೇತುವೆ ಹತ್ತಿಕೊಳ್ಳುತ್ತದೆ. ಉಗ್ರವಾದ ಅಗ್ನಿಯ ಜ್ವಾಲೆಗಳಿಗೆ ಹೆದರಿ ಓಡಾಡುವ ಜನರಿಗೆ ದಿಕ್ಕು ಕಾಣುತ್ತಿಲ್ಲ. ಬಂದೂಕಿನ ಗುಂಡುಗಳು ಉಕ್ಕಿನ ಸಲಾಕಿಗಳಂತೆ ರಸ್ತೆಯ ಮೇಲುಗಡೆಯಲ್ಲಿ ಫಟೀರನೆ ಬಂದು ಬೀಳುತ್ತವೆ.

ಇರುಳಿನಲ್ಲಿ ಹಡಗಿನ ಮೇಲುಭಾಗವು ಉಯ್ಯಾಲಾಡುತ್ತಿದೆ. ಡೊಂಕುಡೊಂಕಾದ ತೀರ ಪ್ರದೇಶದುದ್ದಕ್ಕೂ ಹುಡುಕು ದೀಪದ (ಸರ್ಚ್‌ಲೈಟ್) ಪ್ರಕಾಶಮಾನವಾದ ವೃತ್ತಾಕಾರವಾದ ಬೆಳಕು ಪ್ರಸರಿಸುತ್ತಿದೆ. ಪ್ರಕಾಶ ಚಲಿಸುತ್ತಿದ್ದಂತೆ ಅದರ ಪಥವನ್ನು ಪ್ರವೇಶಿಸಿದ ಮನೆಗಳ ಮೂಲೆಗಳು ಬೆಳ್ಳಂಬೆಳಕಾಗುತ್ತಿವೆ. ಮನೆಗಳ ಕಿಟಕಿಗಾಜುಗಳ ಮೂಲಕ ಕಣ್ಣುಕೋರೈಸು

ವಂಥ ಬೆಳಕಿನ ಕಿರಣಗಳು ಪ್ರತಿಫಲಿಸುತ್ತವೆ. ಬೆಳಕು ಬೀಳುವವರೆಗೆ ಕತ್ತಲಿನಲ್ಲಿ ಅದೃ
ವಾದಂತಿದ್ದ ಚಲನವಲನಗಳು ಈಗ ಸುಸ್ಪಷ್ಟವಾಗಿ ಕಣ್ಣಿಗೆ ಬೀಳುತ್ತಿವೆ. ಓಡುತ್ತಿರುವ ಸೈನಿಕ
ಆಕಾರಗಳನ್ನೂ, ಮದ್ದುಗುಂಡಿನ ಗಾಡಿಗಳನ್ನೂ, ತಲೆಕೆಳಗಾಗಿ ಉರುಳಿಬಿದ್ದ ಕುದು
ಟ್ರಾಮ್‌ಗಾಡಿಗಳನ್ನು ಆ ಹಾಲುಬೆಳಕು ಹೊರಕ್ಕೆ ಎಳೆದು ತಂದು ನೋಟಕರ ಕಣ್ಣೆದುರಿ
ನಿಲ್ಲಿಸುತ್ತದೆ.

ಓ ಈಗ ಅವನು ತಾನು ತಿರುಗು ಗೋಪುರದ ಫಿರಂಗಿಯ ಬಳಿ ಇರುವುದನ್ನು ಕಂಡ
ಕೊಳ್ಳುತ್ತಾನೆ. ಬಂದೂಕ ಹೊಡೆಯುವವನು ದೂರವನ್ನು ಅಂದಾಜುಮಾಡುವ ಗಾಜಿ
ಗುರಿಗಣ್ಣಿಗೆ ತನ್ನ ಕಣ್ಣನ್ನು ಅಂಟಿಸುತ್ತಾನೆ. ತಿರುಗುಗೋಪುರ ತಿರುಗುತ್ತದೆ. ಕನ್ನಡಿಯಂ
ಹೊಳೆಯುವ ಫಿರಂಗಿಯ ಟೊಳ್ಳಾದ ಕೊಳವೆಯ ಬಾಯಿ ಪಟ್ಟಣದ ಕಡೆಗೆ ತಿರುಗಿಕೊಳ
ತ್ತದೆ. ಸಾಕು, ಅದು ಈಗ ನೀಲಿಯ ಗುಮ್ಮಟದಾಕಾರದ ಛಾವಣಿಯ ನಾಟಕಮಂದಿರದ ಕಡ
ಸರಿಯಾಗಿದೆ. ಅಲ್ಲಿ ಒಬ್ಬ ಪ್ರಭಾವಶಾಲಿಯಾದ ಸೈನ್ಯಾಧಿಕಾರಿ ಬಂಡಾಯಗಾರರ ಮೇ
ಯಾವ ರೀತಿಯ ಕ್ರಮ ಕೈಗೊಳ್ಳಬೇಕೆಂಬುದನ್ನು ಚರ್ಚಿಸಲು ಒಂದು ಸಭೆಯನ
ಏರ್ಪಡಿಸಿದ್ದಾನೆ.

ತಿರುಗುಗೋಪುರದ ಟೆಲಿಫೋನು ಒಂದೇ ಸಮನೆ ಮೃದುವಾಗಿ ಶಬ್ದಮಾಡುತ್ತದೆ. ಅಥವ
ಇದು ಸ್ಟೆಪ್ಪಿಬಯಲಿನ ಕ್ರಿಕೆಟ್‌ಗಳ ಶಬ್ದವೋ? ಅಲ್ಲ, ಅಲ್ಲ, ಅದು ಟೆಲಿಫೋನೇ. ನಿಧಾನವಾ
ಖಣ್ ಎಂದು ಶಬ್ದಮಾಡಿ ವಿದ್ಯುತ್ತಿನ ಎತ್ತಿಗೆಯು (ಹಾಯಿಸ್ಟ್) ಸ್ಫೋಟಕ ವಸ್ತುಗಳ ಉಗ್ರಾ
ದಿಂದ ಒಂದು ಸಿಡಿಗುಂಡನ್ನು ಎತ್ತಿ ತರುತ್ತದೆ. ಅದು ಸರಪಣಿಗಳ ಮೇಲೆ ತೂಗಾಡುತ್ತ ನೇ
ವಾಗಿ ರೊಡಿಯಾನನ ಕೈಗಳಿಗೇ ಬರುತ್ತದೆ.

ಅದು ಸಿಡಿಗುಂಡೋ ಇಲ್ಲ ತಣ್ಣಗಿರುವ ಕಲ್ಲಂಗಡಿ ಹಣ್ಣೋ? ರಸ ತುಂಬಿದ ಕಲ್ಲಂಗ
ಹಣ್ಣನ್ನು ಹಲ್ಲುಗಳಿಂದ ಕಚ್ಚಿ ತಿನ್ನಲು ಏನು ಆನಂದವೋ! ಇಲ್ಲ ಇಲ್ಲ ಇದು ಸಿಡಿಗುಂಡೇ ಸರಿ.

“ಫಿರಂಗಿ ಬಾರಿಸು!”

ತಕ್ಷಣ ಭೋರ್ಗರೆವ ಶಬ್ದ ಕಿವಿಯನ್ನು ತುಂಬುತ್ತದೆ. ಯಾವುದಾದರೂ ರಾಕ್ಷಸ
ತಿರುಗುಗೋಪುರದ ಲೋಹದ ಕವಚವನ್ನು ಮದ್ದಲೆ ಎಂದು ಭ್ರಮಿಸಿ ಹೊಡೆಯಿತೋ! ಬೆಂಕಿ
ಜ್ವಾಲೆ ಭಗ್ಗನೆ ಹೊರಕ್ಕೆ ಹೊರಡುತ್ತದೆ. ಹಡಗು ನಿಂತ ಸಮುದ್ರದ ನೀರು ಅಲ್ಲೋ
ಕಲ್ಲೋಲವಾಗುತ್ತದೆ. ನೀರಿನ ಮೇಲಿನ ದೋಣಿಗಳು ಉಯ್ಯಾಲಾಡುತ್ತವೆ. ಹಡಗನ್ನು
ನಗರವನ್ನೂ ಒಂದು ಕಬ್ಬಿಣದ ಪಟ್ಟಿ ಸೇರಿಸಿದಂತೆ ಒಂದು ಕ್ಷಣ ಭಾಸವಾಗುತ್ತದೆ.

ಇಲ್ಲಿಗೆ “ಒಂದು ಸರದಿ” ಮುಗಿಯುತ್ತದೆ.

ರೊಡಿಯಾನನ ಕೈಗಳು ಕೆಂಡದಂತೆ ಉರಿಯುತ್ತಿವೆ. ಪುನಃ ಹತ್ತಿರದ ದ
ಮೇಲಿನ ಗಿಡಗಳ ನಡುವಿನಿಂದ ಕ್ರಿಕೆಟ್‌ಗಳ ಶಬ್ದ ಪ್ರವಾಹದಹಾಗೆ ಹರಿದು ಬಂದಂತೆ ಭಾ
ವಾಗುತ್ತದೆ. ಅಥವಾ ಅದು ಟೆಲಿಫೋನಿನ ಶಬ್ದವೇ ಇರಬೇಕು.

ಎರಡನೆಯ ಸಿಡಿಗುಂಡು ಎತ್ತಿಗೆಯ ಮೇಲಿನಿಂದ ರೊಡಿಯಾನನ ಕೈಗಳಿಗೆ ಬಂದು ನಿ
ತ್ತದೆ. ಈಗ ಆ ಸೇನಾಧಿಪತಿಯನ್ನು ಮುಗಿಸಿಬಿಡೋಣ!

"ಫಿರಂಗಿ ಬಾರಿಸು!"

* * *

"ಕೂಗಿಕೊಳ್ಳಬೇಡ, ಬಿದ್ದುಕೋ. ಕುಡಿಯುವುದಕ್ಕೆ ನೀರು ಬೇಕೆ? ಸುಮ್ಮನೆ ಮಲಗಿಕೊಳ್ಳಪ್ಪ." ಎಂದು ಅಜ್ಜ ರೊಡಿಯಾನನನ್ನು ಮುಟ್ಟುತ್ತ ಹೇಳಿದ.

* * *

ಇನ್ನೊಂದು ಸಿಡಿಗುಂಡು ಕೊಲ್ಲಿಯನ್ನು ದಾಟಿಕೊಂಡು ಹೋಗುತ್ತದೆ. ಇನ್ನೊಂದು "ಸರದಿ" ಮುಗಿಯುತ್ತದೆ. ಆದರೇನು ಯೋಚನೆ ಬೇಡ. ಮೂರನೆಯದರ ಗುರಿ ತಪ್ಪುವುದಿಲ್ಲ. ಸಿಡಿಗುಂಡುಗಳಿಗೇನು ಬೇಕಾದಷ್ಟಿವೆ. ಉಗ್ರಾಣದ ಭರ್ತಿ ತುಂಬಿವೆ! ಸಂಕೋಚ ಬೇಡ. ರೊಡಿಯಾನನ ಕೈಗಳಿಗೆ ಮೂರನೆಯ ಸಿಡಿಗುಂಡು ಬರುತ್ತದೆ. ಇದು ಅವನ ಕೈಗಳಲ್ಲಿ ಒಂದು ಗರಿಗಿಂತ ಹಗುರವಾಗಿದ್ದರೂ ಒಂದು ಮನೆಗಿಂತ ಭಾರವಾಗಿ ತೋರುತ್ತಿದೆ. ಅದನ್ನು ಆದಷ್ಟು ಬೇಗ ಹಾರಿಸು. ಆ ನೀಲಿಗುಮ್ಮಟವಿರುವ ನಾಟ್ಯಮಂದಿರ ಹೊಗೆಯಿಂದ ಮುಚ್ಚುವಂತೆ ಮಾಡು. ಅಲ್ಲಿಂದ ಮುಂದಕ್ಕೆ ಎಲ್ಲ ಸರಿಹೋಗುತ್ತದೆ.

ಅದೇಕೆ ಟೆಲಿಫೋನಿನ ಕೊರಕೊರಶಬ್ದ ಇದ್ದಕ್ಕಿದ್ದಂತೆ ನಿಂತಿತು? ಕ್ರಿಕೆಟ್‌ಗಳು ಶಬ್ದ ಮಾಡುವುದನ್ನೇಕೆ ನಿಲ್ಲಿಸಿದುವು? ಇದೇನು ಸ್ಮಶಾನಶಾಂತಿ! ಅಥವಾ ಉಷಃಕಾಲದ ಅರುಣ ಕಾಂತಿಯ ಶಾಂತಿಯೋ!

ಶಬ್ದಮಾಡದೆ ತಿರುಗುಗೋಪುರ ಸುತ್ತುತ್ತದೆ. "ಗುಂಡು ಹಾರಿಸುವುದನ್ನು ನಿಲ್ಲಿಸಿ!" ರೊಡಿಯಾನನ ಕೈಗಳಿಂದ ಸಿಡಿಗುಂಡು ಜಾರುತ್ತದೆ. ಅದನ್ನು ಎತ್ತಿಗೆಯು ಪುನಃ ಸ್ಫೋಟಕಗಳ ಉಗ್ರಾಣಕ್ಕೆ ಸರಪಣಿ ಶಬ್ದ ಮಾಡುತ್ತ ಕೊಂಡೊಯ್ಯುತ್ತದೆ.

* * *

ಜ್ವರದಿಂದ ತಪ್ತನಾಗಿ ಮಲಗಿದ್ದ ರೊಡಿಯಾನನ ಕೈಗಳಿಂದ ನೀರಿನ ಬಟ್ಟಲು ಜಾರಿ ನೀರು ಧಾನವಾಗಿ ಹಾಸಿಗೆಯಿಂದ ನೆಲಕ್ಕೆ ಹರಿಯುತ್ತಿತ್ತು.

* * *

ಬಳಿಕ ಎಲ್ಲವೂ ಶಾಂತ ಪ್ರಶಾಂತ.

"ಇದೇನು? ಸ್ವಾತಂತ್ರ್ಯ ದ್ರೋಹವೇ? ಥೂ ಹಾಳು ಕುರಿಗಳು, ಹೇಡಿಗಳು. ಯುದ್ಧ ಆರಂಭಿಸಿದಮೇಲೆ ಕೊನೆ ಮುಟ್ಟಿಸದೆ ಮಧ್ಯೆ ನಿಲ್ಲಿಸೋಣ ಎಂದರೇನು? ಕೈಲಾದದ್ದನ್ನೆಲ್ಲ ಮಾಡಿ ಕೊನೆ ಸಾಧಿಸಬೇಡವೆ!"

"ಗುಂಡು ಹಾರಿಸಿ, ತಿರುಗುಗೋಪುರದಿಂದ ಗುಂಡುಹಾರಿಸಿ!"

* * *

"ಓ ದೇವರೇ, ಸಂತ ನಿಕೋಲಾಸ್, ಪವಾಡಕರ್ತನೇ! ಏನು ಮಾಡಲಿ ಈಗ ನಾನು. ಸುಮ್ಮನೆ ಮಲಗಿಕೊಳ್ಳಪ್ಪ. ಇಗೋ ಸ್ವಲ್ಪ ನೀರು ಕುಡಿ. ಇದೆಂಥ ದೌರ್ಭಾಗ್ಯ!"

ರೊಡಿಯಾನನ ಕೆಂಪೇರಿದ ಕೆನ್ನೆಗಳ ಮೇಲೆ ಉಷಃಕಾಲದ ಅರುಣಕಾಂತಿಯು ಮೃದು ಕಿರಣಗಳು ತಮ್ಮ ಕೋಮಲವಾದ ಆಪ್ಯಾಯಮಾನವಾದ ಹಸ್ತವನ್ನಾಡಿಸಿದುವು. ದೂರದಲ್ಲಿ ಚಿಣ್ಣೆಯ ಮೇಲಿನಿಂದ ಕೋಳಿಕೂಗಿದ ಶಬ್ದ ಕೇಳಿ ಬಂದಿತು.

೧೭. ಬಂದೂಕು ಹೊಡೆಯುವ ಕ್ರೀಡಾಂಗಣದ ಯಜಮಾನ

ತಮ್ಮ ತಮ್ಮಲ್ಲಿ ವಿಚಾರವಿನಿಮಯ ಮಾಡಿಕೊಂಡ ಅನಂತರ ಅಜ್ಜ ಮೊಮ್ಮಗ ಇಬ್ಬರೂ ಸಧ್ಯಕ್ಕೆ ಈ ಕಾಹಿಲೆ ಮನುಷ್ಯನನ್ನು ಯಾರಿಗೂ ತೋರಿಸಕೂಡದೆಂದು ನಿರ್ಧರಿಸಿದರು. ಅವನನ್ನು ಆಸ್ಪತ್ರೆಗೆ ಕಳಿಸುವುದಂತೂ ಹಾಗೆಯೇ ಉಳಿಯಿತು. ಏಕೆಂದರೆ ಅವನು ಯಾರು ಎತ್ತ ಎಂಬುದನ್ನು ಅಲ್ಲಿ ಪ್ರಶ್ನಿಸಿಯೇ ಪ್ರಶ್ನಿಸುತ್ತಾರೆ.

ನಾವಿಕನಿಗೆ ಸಾಧಾರಣವಾದ ಜ್ವರ ಬಂದಿದೆ, ಅದು ಬೇಗ ಗುಣವಾಗುವುದು ಎಂಬುದು ಅಜ್ಜನ ಅಭಿಪ್ರಾಯವಾಗಿತ್ತು. ನಾವಿಕ ಗುಣಮುಖನಾದಮೇಲೆ ಮುಂದೇನು ಮಾಡಬೇಕೆಂಬುದನ್ನು ಅವನೇ ನೋಡಿಕೊಳ್ಳುವನು. ಆ ವಿಷಯ ಕುರಿತು ಈಗ ಆಲೋಚಿಸಬೇಕಾಗಿಲ್ಲವೆಂದು ಅಜ್ಜ ತಿಳಿದ.

ಇಷ್ಟು ಹೊತ್ತಿಗೆ ಬೆಳಕಾಗಿತ್ತು. ಅಜ್ಜ ಮೊಮ್ಮಗ ಇಬ್ಬರೂ ಪುನಃ ದೋಣಿಯನ್ನು ತೆಗೆದುಕೊಂಡು ಹೋಗುವ ಸಮಯವಾಗಿತ್ತು.

ಕಾಹಿಲೆ ಮನುಷ್ಯನಿಗೆ ಇನ್ನು ನಿದ್ದೆ ಬರಲಿಲ್ಲ. ರಾತ್ರಿಯೆಲ್ಲ ಬೆವರಿದ್ದರ ಪರಿಣಾಮವಾಗಿ ಬಳಲಿಕೆಯಿಂದ ಅವನು ಅಂಗತ್ತನಾಗಿ ನಿಶ್ಚಲನಾಗಿ ಮಲಗಿದ್ದ. ಅವನು ಮೇಲುಗಡೆ ತೂಗು ಹಾಕಿದ್ದ ಪವಾಡಕರ್ತನ ಮೂರ್ತಿಯನ್ನೂ, ಆ ಮೂರ್ತಿಯ ಹಿಂದುಗಡೆಗೆ ಹಾಕಿದ್ದ ಡೊಂಕಾದ ಹಳೆಯ ಮರದ ಹಲಗೆಗೆ ಸಿಕ್ಕಿಸಿದ್ದ ಹೂಗೊಂಚಲನ್ನೂ ಲಕ್ಷ್ಯವಿಟ್ಟು ಸಜೀವನಯನಗಳಿಂದ ವೀಕ್ಷಿಸುತ್ತಿದ್ದ.

"ಈಗ ಜ್ಞಾನವಾಗಿದ್ದೀಯಾ?" ಹಾಸಿಗೆಯ ಹತ್ತಿರಕ್ಕೆ ಬರುತ್ತ ಅಜ್ಜ ಕೇಳಿದ. "ಹಾದು" ಎಂದು ಹೇಳುವ ಪ್ರಯತ್ನದಲ್ಲಿ ರೋಗಿ ತನ್ನ ತುಟಿಗಳನ್ನು ಅಲ್ಲಾಡಿಸಿದ.

"ಈಗ ಸ್ವಲ್ಪ ವಾಸಿಯೋ?" ಅಜ್ಜ ಕೇಳಿದ. ಹೌದು ಎಂಬಂತೆ ರೋಗಿ ತನ್ನ ಕಣ್ಣೆವೆಗಳನ್ನು ತಗ್ಗಿಸಿದ.

ಅಜ್ಜ ಬಡುವಿನ ಮೇಲಿದ್ದ ಬ್ರೆಡ್ಡು ಮತ್ತು ಅಂಬಲಿಗಳನ್ನು ನೋಡುತ್ತ "ಏನಾದರೂ ತಿನ್ನುತ್ತೀಯೋ?" ಎಂದು ಕೇಳಿದ ನಾವಿಕ ಮೆತ್ತಗೆ ತಲೆಯಲ್ಲಾಡಿಸಿದ.

"ಆಗಲಣ್ಣ, ನಿನ್ನ ಇಷ್ಟ. ನಾನು ಹೇಳುವುದನ್ನು ಸ್ವಲ್ಪ ಕೇಳು. ನಾವು ಮಾನು ಶಿಕಾರಿಗಾಗಿ ದೋಣಿ ತೆಗೆದುಕೊಂಡು ಹೋಗಬೇಕು. ತಿಳಿಯಿತೆ? ನಿನ್ನನ್ನು ಒಬ್ಬನನ್ನೇ ಇಲ್ಲಿ ಬಿಟ್ಟು ಬಾಗಿಲನ್ನು ಹೊರಗಡೆಯಿಂದ ಬೀಗಹಾಕಿಕೊಂಡು ಹೋಗುತ್ತೇವೆ. ನೀನು ನಮ್ಮಲ್ಲಿ ನಂಬಿಕೆಯಿಡು. ಮಗು, ನಾವು ಕಪ್ಪುಸಮುದ್ರದ ನಿವಾಸಿಗಳು; ನಿನ್ನವನೇ ನಾವೂ. ತಿಳಿಯಿತೆ? ಇಲ್ಲಿಯೇ ಸುಖವಾಗಿ ಮಲಗಿರು. ಯಾರಾದರೂ ಬಾಗಿಲು ತಟ್ಟಿದರೆ ತುಟಿ ಅಲುಗಿಸೀಯೆ. ನಮ್ಮ ಕೆಲಸ ಮುಗಿಸಿಕೊಂಡು ನಾವಿಬ್ಬರೂ ಬೇಗ ಬಂದು ಬಿಡುತ್ತೇವೆ. ಇಗೋ ಇಲ್ಲಿ ಬಟ್ಟಲಿನಲ್ಲಿ ನೀರಿದೆ. ಬಾಯಾರಿಕೆಯಾದರೆ ತೆಗೆದುಕೊಂಡು ಕುಡಿ. ಅದರಿಂದ ವಿರೋಧವೇನೂ ಆಗುವುದಿಲ್ಲ

ಯಾವುದಕ್ಕೂ ಚಿಂತೆ ಮಾಡಬೇಡ ಕಂದ. ನಮ್ಮ ಮೇಲೆ ಭರವಸೆಯಿಡು, ತಿಳಿಯಿತೆ?" ವಾಕ್ಯ ಬಿಟ್ಟು ವಾಕ್ಯದ ಕೊನೆಯಲ್ಲಿ "ತಿಳಿಯಿತೆ?" ಎಂದು ಅಜ್ಜ ಮಾತನಾಡುವುದು ವಾಡಿಕೆ. ರೋಗಿಯನ್ನು ಕರುಣೆಯಿಂದ ಮಗುವನ್ನು ಮಾತನಾಡಿಸುವಂತೆ ಮಾತನಾಡಿಸಿದ.

ನಾವಿಕ ಪ್ರಯತ್ನಪೂರ್ವಕವಾಗಿ ತನ್ನ ಕಣ್ಣುಗಳಲ್ಲಿ ಮುಗುಳುನಗೆಯ ಮಿಂಚೊಂದನ್ನು ಬೆಳಗಿದ. ಆಗಿಂದಾಗ್ಗೆ ರೆಪ್ಪೆಯನ್ನು ಕೆಳಕ್ಕೆ ಹಾಕುವುದರ ಮೂಲಕ "ಯೋಚನೆ ಮಾಡಬೇಡಿ. ನನಗೆಲ್ಲ ತಿಳಿಯಿತು. ನಾನು ನಿಮಗೆ ಕೃತಜ್ಞ" ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ.

ಆ ಮೀನುಗಾರರು ನಾವಿಕನನ್ನು ಮನೆಯಲ್ಲೇ ಬಿಟ್ಟು ಹೊರಗಡೆಯಿಂದ ಬಾಗಿಲಿಗೆ ಬೀಗ ಹಾಕಿಕೊಂಡು ಮೀನು ಬೇಟೆಗಾಗಿ ದೋಣಿಯನ್ನು ತೆಗೆದುಕೊಂಡು ಹೋದರು. ನಾಲ್ಕುಗಂಟೆಗಳ ಬಳಿಕ ಪುನಃ ಮನೆಗೆ ಹಿಂದಿರುಗಿ ಬಂದು ನೋಡಿದಾಗ ಎಲ್ಲವೂ ಮೊದಲಿನಂತೆಯೆ ಇತ್ತು. ರೋಗಿ ಸಮಾಧಾನದಿಂದ ಮಲಗಿದ್ದ.

ಅವರ ಅದೃಷ್ಟ ಚೆನ್ನಾಗಿತ್ತು. ಸುಮಾರು ಮುನ್ನೂರೈವತ್ತು ಸೊಗಸಾದ ಗಾತ್ರವಾದ ಮೀನುಗಳು ಸಿಕ್ಕಿದ್ದುವು. ಅಜ್ಜ ಪವಾಡಕರ್ತನಕಡೆಗೆ ತೃಪ್ತಿಯ ನೋಟವನ್ನು ಬೀರಿದ. ಒಂದೆರಡುಸಲ ತುಟಿ ಕಚ್ಚಿದ. "ಪರವಾ ಇಲ್ಲ ಇವತ್ತು. ಎರೆಗೆ ಮಾಂಸ ಕಟ್ಟದೆ ಇದ್ದರೂ ದೊಡ್ಡ ಮೀನುಗಳು ಬಂದು ಬಿದ್ದಿವೆ. ದೇವರು ದೊಡ್ಡವನು" ಎಂದುಕೊಂಡ. ಆದರೆ ಪವಾಡಕರ್ತ ತನ್ನ ಮಹಿಮೆಯನ್ನು ಪೂರ್ಣವಾಗಿ ಅರಿತವನಂತೆ ಬಿಗುಮಾನದಿಂದ ಗಂಭೀರವಾಗಿ ಅಜ್ಜನ ಕಡೆಗೆ ನೋಡುತ್ತಿದ್ದ. "ನಿನಗೆ ನನ್ನ ಮೇಲೆ ಸಂದೇಹ ಹುಟ್ಟಿತ್ತಲ್ಲವೆ? ನನ್ನನ್ನು ಮುದಿಗೊಡ್ಡು ಅಂದೆಯಲ್ಲವೆ? ನೀನೇ ಮುದಿಗೊಡ್ಡು, ತಿಳಿದುಕೋ" ಎಂದು ಹೇಳುತ್ತಿರುವಂತೆ ಪವಾಡಕರ್ತನ ಮೂರ್ತಿಯು ನಿಲುವಿನಿಂದ ತೋರಿಬರುತ್ತಿತ್ತು.

ಅಜ್ಜ ತಾನೇ ಮಾರುಕಟ್ಟೆಗೆ ಮೀನುಗಳನ್ನು ತೆಗೆದುಕೊಂಡು ಹೋಗಲು ನಿಶ್ಚಯಿಸಿದ. ಮದಾಂಸೊರೋಷೆಂಕೋ ಒಡನೆ ಬೆಳೆದು ಬಂದಿದ್ದ ವ್ಯವಹಾರವನ್ನು ಕೈದುಮಾಡಿಕೊಳ್ಳಲು ಇದು ತಕ್ಕ ಸಮಯವಾಗಿತ್ತು. ಎಷ್ಟೊಂದು ಮೀನುಗಳನ್ನು ಅವಳ ಮಡಲಿಗೆ ತುಂಬುತ್ತಿದ್ದರೂ ಸಾಲ ಎನ್ನುವುದು ಎಂದೂ ತೀರುತ್ತಿರಲಿಲ್ಲ; ಕೈಯಲ್ಲಿ ಒಂದು ಕಾಸನ್ನೂ ನೋಡುವಂತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಮೀನು ಹಿಡಿದಾದರೂ ಪ್ರಯೋಜನವೇನು? ಇಂದು ಅವಳೊಡನೆ ನೇರವಾಗಿ ಮಾತಾಡಲು ತಕ್ಕ ದಿವಸವಾಗಿತ್ತು. ಆರಿಸಿದ ಆ ಒಳ್ಳೆಯ ಮೀನುಗಳನ್ನು ಅವಳೆದುರಿಗೆ ಹಿಡಿದು ತಾನೂ ಮನುಷ್ಯ ಎಂದು ನಿಲ್ಲಬಹುದು.

ಗಾವ್ರಿಕನೂ ಅಜ್ಜನೊಡನೆ ಮಾರುಕಟ್ಟೆಗೆ ಹೋಗಬೇಕೆಂದು ಇಚ್ಛಿಸುವುದು ಸ್ವಾಭಾವಿಕವಾಗಿತ್ತು. ಹಾಗೆಯೇ ಹಿಂದಿರುಗುವಾಗ ದಾರಿಯಲ್ಲಿ ಪೇತ್ಯನನ್ನು ಕಾಣುವ ಸಂಭವವೂ ಇತ್ತು. ಅಲ್ಲದೆ ಮೂಲೆ ಅಂಗಡಿಯಲ್ಲಿ ಕ್ವಾಸ್ ಪಾನೀಯವನ್ನು ಇಂದಾದರೂ ಕುಡಿದು ತನ್ನ ಬಹುದಿನಗಳ ಆಸೆಯನ್ನು ತೀರಿಸಿಕೊಳ್ಳಬಹುದಾಗಿತ್ತು. ಆದರೆ ಕಾಹಿಲೆಯವನನ್ನು ಒಬ್ಬನನ್ನೇ ಗುಡಿಸಿಲಿನಲ್ಲಿ ಬಿಟ್ಟು ಹೋಗುವುದು ಅಪಾಯಕರವಾಗಿತ್ತು.

ಅಜ್ಜ ಒದ್ದೆಯಾದ ಮೀನಿನ ಡಬ್ಬವನ್ನು ಹೆಗಲಿಗೆ ಏರಿಸಿಕೊಂಡು ಕಾಲೆಳೆದುಕೊಂಡು ಮಾರುಕಟ್ಟೆಯ ಕಡೆಗೆ ಹೊರಟ. ಗಾವ್ರಿಕ್ ಬಟ್ಟಲಿಗೆ ಶುದ್ಧವಾದ ಕುಡಿಯುವ ನೀರನ್ನು ಹಾಕಿಟ್ಟ. ನಾವಿಕನ ಕಾಲುಗಳನ್ನು ನೊಣಗಳು ಮುತ್ತದಂತೆ ಹೊದಿಕೆಯನ್ನು ಕಾಲು ಮುಚ್ಚು

ವಂತೆ ಹೊದಿಸಿದ. ಹೊರಕ್ಕೆ ಬಂದು ಬಾಗಿಲನ್ನು ಹಾಕಿಕೊಂಡು ಬೀಗವನ್ನು ಕೊಂಡಿಗೆ ನೇತ
ಹಾಕಿದ. ಹಾಗೆಯೇ ಅಡ್ಡಾಡಿಕೊಂಡು ಬರೋಣವೆಂದು ಹೊರ ಹೊರಟ. ಸಮುದ್ರ ತೀ
ದಲ್ಲಿ ಅನೇಕ ಮನರಂಜನೆಯ ಸ್ಥಳಗಳಿದ್ದುವು. ಸುತ್ತ ಹೂವಿನ ತೋಟವಿದ್ದ ಒಂದು ಸಣ್ಣ
ಫಲಾಹಾರಮಂದಿರ ಮತ್ತು ಸ್ಕಿಟಲ್ ಆಟದ ಕೊಠಡಿ, ಒಂದು ಬಂದೂಕು ಹಾರಿಸುವ
ಕ್ರೀಡಾಂಗಣ, ವಿನೋದರಾಟಳ (ಮೆರಿಗೋರೌಂಡ್), ಸೋಡಾ ಅಂಗಡಿಗಳು—ಇನ್ನೂ ಹ
ವಾರು ರೀತಿಯ ವಿನೋದಗಳು ಇದ್ದ ಒಂದು ಸಣ್ಣ ಜಾತ್ರೆಯೇ ಅಲ್ಲಿ ನೆರೆದಿತ್ತೆನ್ನಬಹುದು
ಹುಡುಗರ ಕಣ್ಣಿಗೆ ನಿಜವಾಗಿ ಹಬ್ಬವನ್ನುಂಟುಮಾಡುವ ಸ್ಥಳ ಅದಾಗಿತ್ತು.

ಚರ್ಚುಗಳಲ್ಲಿ ಭಾನುವಾರದ ಬೆಳಗಿನ ಪ್ರಾರ್ಥನಾಸಭೆಯು ಇನ್ನೂ ಮುಗಿದಿರಲಿಲ್ಲ. ಚರ್ಚಿನ
ಗಂಟೆಗಳ ನಾದವು ಸಮುದ್ರದ ದಡದ ದಿಣ್ಣೆಯ ಮೇಲಿನಿಂದ ಕೇಳಿಬರುತ್ತಿತ್ತು. ಆಗ ಈ
ಮಂಜಿನಂತೆ ಬೆಳ್ಳಗಿದ್ದ ಒಂದೊಂದು ಮೋಡದ ತುಂಡು ಘಂಟಾನಾದವು ಗಾಳಿಯಲ್ಲಿ ತೇಲಿಬರ
ವಂತೆ ಬರುತ್ತಿತ್ತು. ಕೆಳಗೆ ಸಮುದ್ರ ತೀರದಲ್ಲಿ ಗಾಳಿಯ ಸೋಂಕೂ ಇರಲಿಲ್ಲ.

ಸಮುದ್ರದ ದಡದಲ್ಲಿ ನಿಜವಾದ ತಮಾಷೆ ಆರಂಭವಾಗುವಷ್ಟು ಇನ್ನೂ ಹೊತ್ತಾಗಿರಲಿಲ್ಲ
ಆದರೆ ಅಷ್ಟು ಬೇಗನೆ ಚೆನ್ನಾಗಿ ಉಡುಪುಗಳನ್ನು ಧರಿಸಿದ ನಗರದ ಕೆಲಜನರು ಬಂದಿದ್ದರು
ವಿನೋದ ರಾಟಳದ ಮೇಲಕ್ಕೆ ಹೊದಿಸಿದ್ದ ಕ್ಯಾನ್‌ವಾಸ್ ಬಟ್ಟೆಯನ್ನು ತೆಗೆಯುವುದನ್ನ
ಕಾಯುತ್ತ ಅವರು ಅದರ ಬಳಿಯೇ ಅಡ್ಡಾಡುತ್ತಿದ್ದರು.

ಸ್ಕಿಟಲ್ ಆಟದ ಮನೆಯಿಂದ ಗಟ್ಟಿ ಕಬ್ಬಿಣದ ಭಾರವಾದ ಗುಂಡು ನಿಧಾನವಾಗಿ ಹಲಗೆಯ
ಮೇಲೆ ಉರುಳಿಹೋಗುತ್ತಿದ್ದ ಸದ್ದು ಕೇಳುತ್ತಿತ್ತು. ಗುಂಡು ಬಹುದೂರ ಉರುಳುತ್ತಿತ್ತು
ಮೊದಲಿನ ಶಬ್ದ ಕಡಮೆಯಾಗುತ್ತ ಆಗುತ್ತ ಬಂದು ಕೊನೆಗೆ ಇದ್ದಕ್ಕಿದ್ದ ಹಾಗೆ ನಿಂತು ಹೋಗ
ತ್ತಿತ್ತು. ಅತ್ಯಲ್ಪ ಕಾಲದ ಬಳಿಕ ಸಂಗೀತದ ಸ್ವರಗಳನ್ನು ಹೊರಡಿಸುವ ಮೊಳೆಗಳಿಂದ ಮೃದು
ವಾದ ಸಂಗೀತ ಕೇಳಿಬರುತ್ತಿತ್ತು.

ಬಂದೂಕ ಹಾರಿಸುವ ಕ್ರೀಡಾಂಗಣದಿಂದ ಒಂದೊಂದು ಸಲ ಬಂದೂಕನ್ನು ಹಾರಿಸಿ
ಶಬ್ದ ಕೇಳಿಬರುತ್ತಿತ್ತು. ಯಾವಾಗಲಾದರೊಂದು ಸಲ ಒಡೆದ ಸೀಸೆಯ ಶಬ್ದ ಅಥವಾ ಗುರಿ
ಏಟು ಬಿದ್ದು ಅದರಿಂದ ಹೊರಬರುವ ಭರ್‍ರೆಂಬ ಶಬ್ದವೂ ಕೇಳಿ ಬರುತ್ತಿತ್ತು.

ಬಂದೂಕನ್ನು ಗುರಿಕಟ್ಟಿ ಹೊಡೆಯುವ ಕ್ರೀಡೆಯೆಂದರೆ ಗಾವ್ರಿಕನಿಗೆ ತುಂಬ ಆಸೆ. ಅವನ
ಆ ಕ್ರೀಡಾಂಗಣದ ಬಾಗಿಲಿಗೆ ಹೋಗಿ ನಿಂತುಕೊಂಡ. ಬಂದೂಕಿಗೆ ಹಾಕುವ ಮದ್ದಿನ ವಾಸ
ಯನ್ನು ತೃಪ್ತಿಯಿಂದ ಆಘ್ರಾಣಿಸಿದ. ಅದರ ವಾಸನೆಯೇ ಒಂದು ತರಹ. ಆ ರೀತಿಯ ವಾಸ
ಭೂಮಿಯಲ್ಲಿ ಇನ್ನಾವುದಕ್ಕೂ ಇಲ್ಲ. ವಿಲಕ್ಷಣವಾದ ಅದರ ಉಸಿರುಕಟ್ಟಿಸುವ ಹುಳಿವಾಸ
ಯಿಂದಲೇ ಅದನ್ನು ನಾಲಗೆಯ ಮೇಲಿಟ್ಟುಕೊಂಡರೆ ಎಂಥ ರುಚಿಯು ಅನುಭವವಾಗಬಹುದೆಂಬ
ದನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳಬಹುದಾಗಿತ್ತು.

ಬಂದೂಕುಗಳಿಗಾಗಿಯೇ ಒಂದು ರೀತಿಯ ಚೌಕಟ್ಟನ್ನು ಮಾಡಿಸಿ ಅದಕ್ಕೆ ಬಂದೂಕ
ಗಳನ್ನು ತಗುಲಿಸಿ ಸಾಲಾಗಿ ನಿಲ್ಲಿಸಲಾಗಿತ್ತು. ಆಹಾ ಬಂದೂಕುಗಳ ಮರದ ಬುಡವನ್ನು ಎಂ
ಕುಶಲ ಬಡಗಿ ತಯಾರು ಮಾಡಿದ್ದನೋ! ಅದು ಕಬ್ಬಿಣದಂತೆ ಭಾರವಾಗಿತ್ತು
ಬಂದೂಕನ್ನು ಕೈಯಿಂದ ಹಿಡಿದುಕೊಳ್ಳುವ ಜಾಗದಲ್ಲಿ ಸಣ್ಣ ಸಣ್ಣ ಗೀರುಗಳಿದ್ದುದರಿಂದ

ಜಾರುತ್ತಿರಲಿಲ್ಲ. ನೀಲಿಯ ಬಣ್ಣದ ಉಕ್ಕಿನ ನಳಿಗೆಯೋ! ಮೆರಗುಕೊಟ್ಟಂತೆ ಥಳ ಥಳನೆ ಹೊಳೆಯುತ್ತಿತ್ತು. ನಳಿಗೆಯ ಬಾಯಿಯಬಳಿ ಬಟಾಣಿ ಕಾಳಿನಷ್ಟು ಅಗಲದ ಸಣ್ಣ ರಂಧ್ರ ವಿದ್ದಿತು. ಗುರಿನೋಡಲು ಇಟ್ಟಿದ್ದ ದೃಷ್ಟಿಯ ಚುಕ್ಕಿ, ಮೇಲಕ್ಕೆ ಕೆಳಕ್ಕೆ ಆಡುವ ಬಂದೂಕಿನ ಕುದುರೆ ಎಷ್ಟು ನಯವಾಗಿದ್ದುವು!

ಹುಡುಗನೆಷ್ಟೇ ಧನಿಕನಾಗಿರಲಿ ಅವನೂ ಕೂಡ ಇಂಥದೊಂದು 'ಮಾಂಟೆಕ್ರಿಸ್ಟೋ' ಬಂದೂಕನ್ನು ಪಡೆಯಲು ಕನಸು ಕಾಣಬೇಕು. 'ಮಾಂಟೆಕ್ರಿಸ್ಟೋ' ಎಂದರೆ ಸಾಕು ಹುಡುಗರ ಹೃದಯದ ಬಡಿತ ನಿಲ್ಲುವುದು. ಅಷ್ಟು ಪರಿಣಾಮಕಾರಿಯಾಗಿತ್ತು ಆ ಬಂದೂಕದ ಹೆಸರು ಆ ಒಂದು ಮಾತಿನಲ್ಲಿ ಎಷ್ಟೊಂದು ಅರ್ಥ ಹುದುಗಿತ್ತು. ಮಿತಿಮೀರಿದ ಐಶ್ವರ್ಯ, ಸುಖ, ಕೀರ್ತಿ, ಪೌರುಷ; ಒಂದೇ ಎರಡೇ! ಸ್ವಂತ ಬೈಸಿಕಲ್ಲನ್ನು ಹೊಂದಿರುವುದಕ್ಕಿಂತ ಬೆಲೆಯಾ ದುದು ಒಂದು 'ಮಾಂಟೆಕ್ರಿಸ್ಟೋ'ವನ್ನು ಪಡೆದಿರುವುದು. ಒಬ್ಬ ಹುಡುಗನ ಬಳಿ ಒಂದು 'ಮಾಂಟೆಕ್ರಿಸ್ಟೋ' ಇದ್ದು ಬಿಟ್ಟರೆ ಅವನ ಹೆಸರು ತನ್ನ ಬೀದಿಯಲ್ಲೇ ಅಲ್ಲದೆ ದೂರದೂರದ ಬೀದಿಗಳಲ್ಲೂ ಕೂಡ ಕೇಳಿಬರುತ್ತಿತ್ತು. "ನಿನಗೆ ಗೊತ್ತಿಲ್ಲವೆ, ರಿಚ್ಲೂರಸ್ತೆಯಲ್ಲಿ ವಾಸಿಸುವ ವಾಲೋದ್ಯ. ಅದೇ ಮಾಂಟೆಕ್ರಿಸ್ಟೋ ಇಟ್ಟುಕೊಂಡಿದಾನಲ್ಲ ಅವನು." ಎಂದು ಅವನ ಕೀರ್ತಿ ಯನ್ನು ಕೊಂಡಾಡುವುದು ವಾಡಿಕೆಯಾಗಿತ್ತು.

'ಮಾಂಟೆಕ್ರಿಸ್ಟೋ' ಹೊಂದುವ ಕನಸನ್ನು ಗಾವ್ರಿಕ್ ಎಂದೂ ಕಾಣುವಂತಿರಲಿಲ್ಲ. 'ಮಾಂಟೆಕ್ರಿಸ್ಟೋವನ್ನು' ತನ್ನ ಸ್ವಂತ ಕೈಗಳಲ್ಲಿ ಹಿಡಿದುಕೊಂಡು ಗುಂಡು ಹಾರಿಸುವುದೂ ಅವನಿಗೆ ದುಸ್ಸಾಧ್ಯವಾಗಿತ್ತು. ಏಕೆಂದರೆ ಅದಕ್ಕೆ ದುಡ್ಡು ಜಾಸ್ತಿಕೊಡಬೇಕು. ಒಂದು ಏಟಿಗೆ ಐದು ಕೊಪೆಕ್ಕುಗಳೇನು ಬಿಟ್ಟಿ ಆಯಿತೆ? ತುಂಬ ಹಣವಂತರಿಗೆ ಮಾತ್ರ ಅದು ಸಾಧ್ಯ. ಆ ಸೊಗಸಾದ ಬಂದೂಕಿನಿಂದ ಕೇವಲ ಗುರಿ ಹಿಡಿಯುವ ಸುಖವನ್ನು ಮಾತ್ರ ಅವನು ಕನಸು ಕಾಣಬಹುದಾಗಿತ್ತು. ಯಾವಾಗಲಾದರೊಂದು ಸಲ ಅಲ್ಲಿಯ ಯಜಮಾನ ಗಾವ್ರಿಕನಿಗೆ ಆ ಸ್ವರ್ಗಸುಖವನ್ನು ಒದಗಿಸಿಕೊಡುತ್ತಿದ್ದ.

ಗಾವ್ರಿಕ್ ಆ ಕ್ರೀಡಾಂಗಣದ ಬಾಗಿಲಿಗೆ ಹೋದಾಗ ಒಳಗೆ ಒಬ್ಬ ಆಗಂತುಕನಿದ್ದುದನ್ನು ಕಂಡ. ಆದುದರಿಂದ ಈಗ ಯಜಮಾನನ ಪ್ರೀತಿಯನ್ನು ಸಂಪಾದಿಸಿ ತನ್ನ ಕನಸಿನ ಸುಖವನ್ನು ಅನುಭವಿಸುವ ಸಂದರ್ಭವೂ ದೂರವಾದಂತಾಗಿತ್ತು. ಪ್ರಾಯಃ ಆ ಮನುಷ್ಯ ಹೊರಟುಹೋದ ಮೇಲೆ ಯಜಮಾನನನ್ನು ಕೇಳಬಹುದು. ಆ ಮೇಲೆ......ಆದರೆ ಆ ಆಗಂತುಕ ಹೋಗುವ ಆತುರದಲ್ಲಿದ್ದಂತೆ ತೋರಲಿಲ್ಲ. ಪಾದರಕ್ಷೆ ಹಾಕಿದ ಕಾಲುಗಳನ್ನು ಅಗಲಿಸಿಕೊಂಡು ಅವನು ನಿಂತಿದ್ದ. ಬಂದೂಕ ಹಿಡಿದುಕೊಂಡು ಗುರಿ ಹೊಡೆಯುವುದರ ಬದಲು ಯಜಮಾನನೊಡನೆ ಮಾತನಾಡುತ್ತ ನಿಂತಿದ್ದ. ಯಜಮಾನ ಹುಡುಗನ ಕಡೆ ತಿರುಗಿದಾಗ ಗಾವ್ರಿಕ್ ಅವನಿಗೆ ಶುಭ ದಿನವನ್ನು ಕೋರಿದ; ಅಂಥ ಅಸಾಮಾನ್ಯವಾದ ಮನೋರಂಜನಾಗಾರದ ಯಜಮಾನನಿಗೆ ಯೋಗ್ಯ ವಾದ ರೀತಿಯಲ್ಲಿ ಗಂಭೀರವಾಗಿ ತಲೆಯನ್ನು ಅಲ್ಲಾಡಿಸುವುದರ ಮೂಲಕ ಹುಡುಗನ ವಂದನೆ ಯನ್ನು ಅವನು ಸ್ವೀಕರಿಸಿದ. ಅದನ್ನು ತನ್ನ ಅದೃಷ್ಟದ ಸೂಚನೆಯೆಂದು ಹುಡುಗ ಭಾವಿಸಿದ. ಯಜಮಾನ ಒಳ್ಳೆಯ ಮನೋಭಾವದಿಂದಿರುವನೆಂದೂ, ಆದುದರಿಂದ ಒಂದು 'ಮಾಂಟೆಕ್ರಿಸ್ಟೋ' ವನ್ನು ಕೈಯಲ್ಲಿ ಹಿಡಿಯಲು ತನಗೆ ಅವನು ಅವಕಾಶ ಕೊಡಬಹುದೆಂದೂ ಗಾವ್ರಿಕ್ ಆಸೆಯಿಂದಿ

ರಲು ಸಾಧ್ಯವಾಯಿತು. ಉತ್ತೇಜನ ದೊರಕಿದಂತಾಗಿ ನೇರವಾಗಿ ಗಾವ್ರಿಕ್ ಪ್ರವೇಶದ್ವಾರ ಬಂದು ನಿಂತುಕೊಂಡ. ಯಜಮಾನನು ಕುಳಿತುಕೊಳ್ಳುವ ಸ್ಥಳದ ಮೇಲುಗಡೆ ಇಟ್ಟ ಪಿಸ್ತೂಲುಗಳನ್ನು ಮತ್ತು ಬಂದೂಕಿನಿಂದ ಗುರಿಯಿಟ್ಟು ಹೊಡೆಯಲು ಅಲ್ಲಿ ಸಿದ್ಧಮಾಡಿ ಇಟ್ಟ ಲಕ್ಷ್ಯಗಳನ್ನು ಗಾವ್ರಿಕ್ ಮೆಚ್ಚುಗೆಯಿಂದಲೂ ಕುತೂಹಲಭರಿತ ನಯನಗಳಿಂದಲೂ ನೋಡು ನಿಂತ.

ಅಲ್ಲಿದ್ದ ಲಕ್ಷ್ಯಗಳಲ್ಲಿ ಒಂದನ್ನು ಗಾವ್ರಿಕ್ ವಿಶೇಷವಾಗಿ ಮೆಚ್ಚಿದ್ದ. ಫಿರಂಗಿ ಮ ಧ್ವಜಗಳಿಂದ ಕೂಡಿದ್ದ ಒಂದು ಜಪಾನೀ ಯುದ್ಧನೌಕೆಯೇ ಅದು. ನೀಲಿಬಣ್ಣದ ಸಮು ಅದರ ಉಜ್ವಲ ಹಸಿರು ಬಣ್ಣದ ಅಲೆಗಳಮೇಲೆ ತೇಲುತ್ತಿರುವಂತೆ ಇದ್ದ ಹಡಗು ನೋ ವುದಕ್ಕೆ ಮನೋಹರವಾಗಿತ್ತು. ಸಮುದ್ರದಿಂದ ಒಂದು ಕಂಬಿ ಮೇಲಕ್ಕೆ ಎದ್ದಿತ್ತು. ಅ ತುದಿಗೆ ಚಿಕ್ಕ ಲೋಹದ ವೃತ್ತವನ್ನು ತಗುಲಿಸಲಾಗಿತ್ತು. ಆ ವೃತ್ತಕ್ಕೆ ಗುರಿಯಿಟ್ಟು ಬಂ ಕನ್ನು ಹೊಡೆದರೆ ಆಗ ಹಡಗು ಇಬ್ಭಾಗವಾಗಿ ಢಂ ಎಂದು ಶಬ್ದಮಾಡುತ್ತ ಸಮುದ್ರದ ವನ್ನು ಸೇರುತ್ತಿತ್ತು. ಆ ಸ್ಥಳದಲ್ಲಿ ಒಂದು ತಗಡಿನ ಚಿಲುಮೆಯಾಕಾರವು ಮೇಲಕ್ಕೇಳುತ್ತಿ

ಅಲ್ಲಿ ಇನ್ನೂ ಕೆಲವು ಲಕ್ಷ್ಯಗಳಿದ್ದುವು. ನಗಾರಿ ಹಿಡಿದ ಮೊಲ, ನರ್ತಕಿಯರು, ತು ಲಾಳವನ್ನು ಕಟ್ಟಿದ ಗಾಳವನ್ನು ಹಿಡಿದ ಬೆಸ್ತರು, ಒಂದರ ಹಿಂದೆ ಒಂದರಂತೆ ಒಂದು ಪಟ್ಟಿ ಮೇಲೆ ಒಂದೇ ಸಮನಾಗಿ ತಿರುಗುವ ಸೀಸೆಗಳು—ಇವೆಲ್ಲ ಅಲ್ಲಿದ್ದುವು. ಆದರೆ ಇವೆಲ್ಲವು ಗಿಂತ ಜಪಾನೀ ಯುದ್ಧ ನೌಕೆಯು ಭವ್ಯ ಕಲ್ಪನೆ ಮತ್ತು ಶ್ರೇಷ್ಠ ಕೌಶಲಗಳಲ್ಲಿ ಪ್ರಥಮ ಸ್ಥಾ ವನ್ನು ಪಡೆಯುತ್ತಿತ್ತು.

ಸ್ವಲ್ಪ ಕಾಲದ ಹಿಂದೆ ಜಪಾನಿಯರು ತುಷೀಮ ಎಂಬಲ್ಲಿ ರಷ್ಯದ ನೌಕೆಗಳನ್ನು ಮುಳ ಸಿದ್ದರೆಂಬ ವಿಚಾರ ಸರ್ವರಿಗೂ ತಿಳಿದಿತ್ತು. ಆದುದರಿಂದ ಜನ ತಮ್ಮ ಮನಸ್ಸಿನಲ್ಲಿ ಹುದುಗಿ ತ್ತಿದ್ದ ಜಪಾನೀಯರ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಕಾತುರರಾಗಿರುವುದು ಸ್ವಾಭಾ ವಾಗಿತ್ತು. ಅಂಥವರಿಗೆ ಮನಸ್ತೃಪ್ತಿಯನ್ನು ಈ ಜಪಾನಿ ಯುದ್ಧ ನೌಕೆ ಒದಗಿಸಿಕೊಡುತ್ತಿದ್ದಿ

ಅಲ್ಲಿ ಒಂದು ನಿಜವಾದ ಚಿಲುಮೆಯಿತ್ತು. ಯಾರಾದರೂ ಕೇಳಿದರೆ ಮಾತ್ರ ಅದ ಯಜಮಾನ ನಡೆಸುತ್ತಿದ್ದ. ಆ ಚಿಲುಮೆಯ ನೀರಿನ ಧಾರೆಯ ಮೇಲೆ ಒಂದು ಸೆಲುಲಾಯಿ ಚೆಂಡನ್ನು ಇಡಲಾಗುತ್ತಿತ್ತು. ಚಿಲುಮೆಯ ನೀರಿನ ಧಾರೆಯು ಆ ಚೆಂಡನ್ನು ಮೇಲಕ್ಕೆಸೆ ತ್ತಿತ್ತು. ಚೆಂಡು ತಿರುಗುತ್ತ ಮೇಲಕ್ಕೆ ಹೋಗಿ ಪುನಃ ನೀರಿನ ಧಾರೆಯ ಮೇಲಕ್ಕೆ ಬ ತ್ತಿತ್ತು. ಪುನಃ ಮೇಲಕ್ಕೆ ನೆಗೆಯುತ್ತಿತ್ತು. ಇದೊಂದದ್ಭುತ, ಪ್ರಕೃತಿಯ ಪವಾಡ.

ಆ ಚೆಂಡನ್ನು ಬಂದೂಕಿನಿಂದ ಹೊಡೆಯುವುದು ಎಲ್ಲಕ್ಕಿಂತ ಬಹು ಕಷ್ಟವಾದ ವಿ ವಾಗಿತ್ತು. ಸೋಲು ಇಲ್ಲಿ ಸಾಧಾರಣವಾದುದಾಗಿತ್ತು. ಒಂದೊಂದು ಸಲ ತಮ್ಮ ಸೋ ನಿಂದ ಜನ ಎಷ್ಟೊಂದು ಮಟ್ಟಿಗೆ ಉತ್ತೇಜಿತರಾಗುತ್ತಿದ್ದರೆಂದರೆ ಅವರು ಮೈಮೇಲೆ ಪ್ರಜ್ಞೆ ದವರಂತೆ ಹತ್ತು ಹದಿನೈದುಸಲ ಬಂದೂಕು ಹಾರಿಸುವರು. ಆದರೂ ಅವರ ಗುರಿತಪ್ಪುವ ಸ ವವೇ ಹೆಚ್ಚು. ಆ ಚೆಂಡನ್ನು ಯಶಸ್ವಿಯಾಗಿ ಗುರಿಕಟ್ಟಿ ಹೊಡೆದವರಿಗೆ ಇನ್ನೊಂದು ಸಲ ಹೊಡೆಯುವ ಅವಕಾಶ ಸಿಕ್ಕುತ್ತಿತ್ತು.

"ನಿನ್ನೆ ಸಾಯಂಕಾಲ ಇಲ್ಲಿ ಯಾವ ವಿಶೇಷ ಘಟನೆಯೂ ನಡೆಯಲಿಲ್ಲ ಎನ್ನು." ಸಂಭಾ

ಯನ್ನು ಮುಂದುವರಿಸುತ್ತ ಆಗಂತುಕ ಕ್ರೀಡಾಂಗಣದ ಯಜಮಾನನ್ನು ಕೇಳಿದ. ಆಗಂತುಕ ಒಂದು ಸುಂದರವಾದ ಬಂದೂಕನ್ನು ಕೈಯಲ್ಲಿ ಹಿಡಿದುಕೊಂಡು ಅದನ್ನು ಆಟದ ಸಾಮಾನಿನಂತೆ ಆಡಿಸುತ್ತಿದ್ದ. ಅವನ ದೊಡ್ಡ ಹಸ್ತದಲ್ಲಿ ಆ ಬಂದೂಕು ಪುಟ್ಟದಾಗಿ ತೋರುತ್ತಿತ್ತು.

"ನನಗೆ ತಿಳಿದಮಟ್ಟಿಗೆ ಏನೂ ಕಾಣೆ" ಯಜಮಾನ ಉತ್ತರಕೊಟ್ಟ.

"ಹೂ" ಆ ಮನುಷ್ಯ ಅಲ್ಲಿದ್ದ ಲಕ್ಷ್ಯಗಳ ಕಡೆಗೆ ದೃಷ್ಟಿಬೀರಿದ. ಮೂಗಿಗೆ ಸಿಕ್ಕಿಸಿಕೊಳ್ಳುವ ನೀಲಿಯ ಕನ್ನಡಕವನ್ನು ಕೈಗೆ ತೆಗೆದುಕೊಂಡ. ಪುಷ್ಟವಾಗಿ ತುಂಬಿಕೊಂಡಿದ್ದ ಅವನ ಮೂಗಿನ ಮೇಲೆ ಕನ್ನಡಕ ಒತ್ತಿ ಹವಳದಂತೆ ಎರಡು ಕಡೆಯೂ ಗುರುತಾಗಿತ್ತು. ಕೈಲಿದ್ದ ಬಂದೂಕಿನಿಂದ ನಗಾರಿಯನ್ನು ಹಿಡಿದಿದ್ದ ಮೊಲದ ಕಡೆಗೆ ಗುರಿಯಿಟ್ಟ. ಆ ಮೇಲೆ ತನ್ನ ಮನಸ್ಸನ್ನು ಬದಲಾಯಿಸಿ ಬಂದೂಕನ್ನು ಕೆಳಗಿಳಿಸಿದ.

"ಇಲ್ಲಿಯ ಬೆಸ್ತರು ಏನಾದರೂ ಮಾತನಾಡಿದುದು ನಿನ್ನ ಕಿವಿಗೆ ಬಿತ್ತೆ ?"

"ಏನೂ ಇಲ್ಲ."

"ಹೂಂ" ಆಗಂತುಕ ಅಲ್ಲಿದ್ದ ಒಂದು ಮಾಂಟೆಕ್ರಿಸ್ಟೋವನ್ನು ಕೈಗೆ ಎತ್ತಿಕೊಂಡ. ಅದನ್ನು ಒಂದು ಸಲ ಮೇಲಕ್ಕೆತ್ತಿ ಪುನಃ ಕೆಳಗಿಳಿಸಿದ.

"ನಿನ್ನೆಯ ದಿವಸ ಸಂಜೆ 'ತುರ್ಗನೀವ್' ಹಡಗಿನಿಂದ ಒಬ್ಬ ಮನುಷ್ಯ ಎದುರಿಗೆ ಕಾಣಿಸುವ ದಡದ ಬಳಿಯಲ್ಲಿ ಸಮುದ್ರಕ್ಕೆ ಧುಮುಕಿದನಂತೆ. ಆ ವಿಷಯ ನಿನಗೆ ಏನಾದರೂ ಗೊತ್ತೆ ?"

"ಏನೂ ಕಾಣೆ"

ಗಾವ್ರಿಕ್ ನಿಂತಲ್ಲಿಯೇ ಉಸಿರನ್ನು ಬಿಗಿಯಾಗಿ ಹಿಡಿದುಕೊಂಡ. ಮಂಜಿನಂತೆ ತಣ್ಣಗೆ ಕೊರೆಯುವ ಒಂದು ಕೊಡ ನೀರನ್ನು ತನ್ನ ಮೇಲೆ ಸುರಿದಂತಾಯಿತು ಅವನಿಗೆ. ಹೃದಯದ ಬಡಿತ ಕೇಳಿಸುತ್ತದೊ ಇಲ್ಲವೋ ಎನ್ನುವಷ್ಟರಮಟ್ಟಿಗೆ ಅವನ ಎದೆಯನ್ನು ಅದುಮಿದಂತಾಯಿತು. ಅವನ ಕಾಲುಗಳು ನಡುಗಿದುವು. ಆಚೆ ಈಚೆ ಹೆಜ್ಜೆ ಇಡಲೂ ಆಗದಷ್ಟು ಭೀತಿ ಉಂಟಾಯಿತು ಅವನಿಗೆ.

"ಒಬ್ಬ ಮನುಷ್ಯ ಜಹಜಿನಿಂದ ನೀರಿಗೆ ಧುಮುಕಿದನಂತೆ. ಅವನು ಪೋಲೀಸಿನವರಿಗೆ ಬೇಕಾದವನಂತೆ. ಇಲ್ಲಿಗೆ ಕಾಣುವ ಎದುರಿನ ದಡದ ಹತ್ತಿರವೇ ಅವನು ನೀರಿಗೆ ಬಿದ್ದನಂತೆ. ನಿನಗೆ ಈ ವಿಷಯ ಏನೂ ಗೊತ್ತಿಲ್ಲವೆ ?"

"ಇದೇ ಮೊದಲು ಇದನ್ನು ನಾನು ಕೇಳುತ್ತಿರುವುದು."

ಅವನ ಹರಟೆಯಿಂದ ಕ್ರೀಡಾಂಗಣದ ಯಜಮಾನನಿಗೆ ತುಂಬ ತಲೆಚಿಟ್ಟು ಹಿಡಿದು ಹೋಗಿತ್ತು. ಆದರೂ ಅವನ ಮುಖದಲ್ಲಿ ದಾಕ್ಷಿಣ್ಯ ಬೆರೆತ ಮರ್ಯಾದೆಯೂ, ಘನತೆಯೂ ತುಂಬಿದ್ದುವು. ಅವನಿಗೆ ಆಕಳಿಕೆ ಬರುವಂತಾಗಿತ್ತು. ತೋಟಾಗಳು ತುಂಬಿದ್ದ ಹಸಿರು ಪೆಟ್ಟಿಗೆಯನ್ನು ಬೆರಳುಗಳಲ್ಲಿ ತಿರುಗಿಸಲಾರಂಭಿಸಿದ. ಯಾರಾದರೂ ತನ್ನ ಕ್ರೀಡಾಂಗಣಕ್ಕೆ ಬಂದರೆ ಅವರು ಗುರಿಹೊಡೆಯಬೇಕು. ಒಂದು ಸಲ ಬಂದೂಕ ಹಾರಿಸಿ ಇನ್ನೊಂದನ್ನು ಹಾರಿಸಲು ಸಿದ್ಧತೆಮಾಡಿಕೊಳ್ಳುತ್ತಿರುವಾಗ ತನ್ನ ಗಿರಾಕಿಗಳೊಡನೆ ಕೊಂಚ ಹರಟೆ ಹೊಡೆಯಲು ಅವನಿಗೆ ಅಡ್ಡಿಯಿರಲಿಲ್ಲ. ಅದೂ ತನಗೆ ಆಸಕ್ತಿದಾಯಕವಾದ ಮಾತಾದರೆ ಸರಿ. ರೇಸುಗಳ ವಿಷಯವೊ, ರಷ್ಯಾ ಜಪಾನ್‌ಗಳ ನಡುವಿನ ಯುದ್ಧದ ವಿಷಯವೊ ಆದರೆ ಪರವಾಯಿಲ್ಲ. ಆದರೆ

ಇದಾವುದೋ ಅನಿಷ್ಟ ವಿಷಯವನ್ನು ಲಾಭವಿಲ್ಲದೆ ಸುಮ್ಮನೆ ಮಾತಾಡುತ್ತ ಕಾಲ ಕಳೆಯುವ
ದೆಂದರೆ? ಹೀಗೆ ಅವನು ಯೋಚಿಸುವುದು ನ್ಯಾಯವಾಗಿಯೇ ಇತ್ತು. ಆಂತರಿಕ ಯೋಚನಾ
ಂಗ ಗಳಿಂದಲೂ, ಜೀವನದ ಸೋಲಿನಿಂದಲೂ ಮುದ್ರಿತವಾಗಿದ್ದ ಅವನ ಮುಖದಿಂದ ಬೇಸ
ತೊಟ್ಟಿಕ್ಕುತ್ತಿತ್ತು.

ಹೃದಯದ ಆಳದಿಂದ ಗಾವ್ರಿಕ್ ಕ್ರೀಡಾಂಗಣದ ಯಜಮಾನನ ವಿಷಯದಲ್ಲಿ ಸಹಾನ
ಭೂತಿ ತೋರಿಸಲು ಬಯಸುತ್ತಿದ್ದ. ಆ ಪರಿಸ್ಥಿತಿಯಲ್ಲಿದ್ದ ಯಜಮಾನನನ್ನು ಕಂಡು ವಿಷಾ
ಸಿದ. ಬಾಗಿದ ಪಕ್ಕಮಿಾಸೆ, ಮೋಟುಕಾಲಿನ ನಾಯಿಯಂಥ ಡೊಂಕಾದ ಕಾಲುಗಳು, ಷರಟಿ
ಅಡಿಯಿಂದ ಕಾಣುತ್ತಿದ್ದ ಕೂದಲು ತುಂಬಿದ ಅಷ್ಟಗಲಕ್ಕೂ ಚುಚ್ಚಿಸಿಕೊಂಡ ಹಚ್ಚೆಯಿದ್ದ ಎದ
ಇಂಥ ಮನುಷ್ಯನನ್ನು ಇತರ ಎಲ್ಲ ಹುಡುಗರಂತೆ ಗಾವ್ರಿಕನೂ ಕೂಡ ಯಾವ ಕಾರಣದಿಂದಲೋ
ಏನೋ ಪ್ರೀತಿಸುತ್ತಿದ್ದ.

ಆ ಕ್ರೀಡಾಂಗಣದ ಯಜಮಾನ ತನ್ನ ಮಟ್ಟಿಗೆ ಒಳ್ಳೆಯ ಸಂಪಾದನೆಯನ್ನು ಮಾಡ
ತ್ತಿದ್ದರೂ ಅವನ ಹೆಸರಿನಲ್ಲಿ ಒಂದೇ ಒಂದು ಕೊಪೆಕ್ಕೂ ಇರಲಿಲ್ಲ. ಯಾವಾಗಲೂ ಸಂಕಟದ
ಸಿಕ್ಕಿ ಪೇಚಾಡುತ್ತಿರುವಂತೆ ತೋರುತ್ತಿದ್ದ. ಯಾವಾಗಲೂ ಸಾಲದಲ್ಲಿರುತ್ತಿದ್ದ. ಅವನು ಮೊ
ಲಿಗೆ ಸರ್ಕಸ್ಸಿನಲ್ಲಿ ಕುದುರೆ ಸವಾರನಾಗಿದ್ದನಂತೆ. ಸರ್ಕಸ್ಸಿನ ಯಜಮಾನನು ಮಾಡಿ
ಯಾವುದೋ ಒಂದು ನೀಚ ಕೆಲಸದಿಂದ ಕೋಪಗೊಂಡು ಚಾವಟಿಯಿಂದ ಅವನ ಮುಖದಮೇ
ಹೊಡೆದು ಹೊರಟು ಬಂದಿದ್ದನೆಂದು ವದಂತಿ. ಅಲ್ಲಿಂದಾಚೆಗೆ ಅವನನ್ನು ಬಹಿಷ್ಕೃತರ ಪಟ್ಟಿ
ಸೇರಿಸಲಾಗಿತ್ತಂತೆ. ತನ್ನ ಜೀವನದ ಮಾರ್ಗವು ಹೀಗೆ ತಪ್ಪಿಹೋಗಲಾಗಿ ಕುದುರೆ ಜೂ
ಗಳಲ್ಲಿ ಬಾಜಿ ಕಟ್ಟಲಾರಂಭಿಸಿದ. ಇದೇ ಅವನನ್ನು ಅವನತಿಗೆ ತಳ್ಳಲು ಕಾರಣವಾದದ್ದು
ಈಗ ಅವನು ಅದೂ ಇದೂ ಎನ್ನದೆ ಎಲ್ಲ ರೀತಿಯ ಅದೃಷ್ಟ ಪರೀಕ್ಷೆಯ ಆಟಗಳನ್ನೂ ಆಡುತ್ತಿದ
ಎಲ್ಲಿಯವರೆಗೆಂದರೆ, ಚಿಕ್ಕ ಹುಡುಗರೊಡನೆ ನಾಣ್ಯವನ್ನು ಮೆಲಕ್ಕೆ ಎಸೆದು ಇಸವಿಯೋ ತಲೆಯೊ
ಎನ್ನುವವರೆಗೂ ಅವನು ಇಳಿದಿದ್ದ.

ಅವನು ಸದಾ ಜೂಜು ಎಂಬ ಭಯಂಕರವಾದ ಜ್ವರದ ಹಿಡಿತಕ್ಕೆ ಸಿಕ್ಕಿಬಿದ್ದಿದ್ದ. ತ
ಮೈಮೇಲಿನ ಬಟ್ಟೆಗಳನ್ನೂ ಕೂಡ ಪಣವಾಗಿಟ್ಟು ಜೂಜಾಡಿಬಿಡುತ್ತಿದ್ದನೆಂಬುದು ಎಲ್ಲರಿಗ
ತಿಳಿದ ವಿಷಯವಾಗಿತ್ತು. ಉದಾಹರಣೆಗೆ ಅವನು ಕಾಲಿಗೆ ಹಾಕಿಕೊಂಡಿದ್ದ ಬೂಡ್ಸುಗ
ಅವನವಾಗಿರಲಿಲ್ಲ. ಬೇಸಗೆಯ ಆರಂಭದಲ್ಲೇ ಇಪ್ಪತ್ತೊಂದರ ಆಟದಲ್ಲಿ ಅವನು ಅವುಗಳ
ಕಳೆದುಕೊಂಡಿದ್ದ. ತನ್ನ ಕ್ರೀಡಾಂಗಣವನ್ನು ಮುಚ್ಚಿಕೊಂಡು ಮನೆಗೆ ಹೋಗಬೇಕಾದ ಹೊ
ನಲ್ಲಿ ಬಂದೂಕು ಮತ್ತು ಪಿಸ್ತೂಲುಗಳ ಪೆಟ್ಟಿಗೆಯನ್ನು ಕಂಕುಳಲ್ಲಿಟ್ಟುಕೊಂಡು ಬರಿಗಾಲಿನ
ಹೋಗುತ್ತಿದ್ದ. ಆದರೆ ಅವುಗಳನ್ನು ಮನೆಗೆ ತೆಗೆದುಕೊಂಡುಹೋಗುತ್ತಿರಲಿಲ್ಲ. ಅವುಗಳ
ಎಲ್ಲಿಯಾದರೂ ಜೂಜಿನಲ್ಲಿ ಕಳೆದುಕೊಂಡೇನೆಂಬ ಭಯ ಅವನಿಗೆ. ಮಲಯ ಅರ್ನೌತ್ಸ್ಕಾ
ಬೀದಿಯ ಒಬ್ಬ ಪರಿಚಿತನಲ್ಲಿ ಬೆಳಗಿನವರೆಗೂ ಸುರಕ್ಷಿತವಾಗಿ ಇಟ್ಟುಬಿಡುತ್ತಿದ್ದ.

ಇದೇ ಸಮುದ್ರ ತೀರದಲ್ಲಿ ಗಾವ್ರಿಕನೇ ಒಂದು ಸಲ ಕಣ್ಣಾರ ಕಂಡ ವಿಷಯ. ಒ
ಸಭ್ಯ ಮನುಷ್ಯನೊಡನೆ ಹಾರುತ್ತಿರುವ ಗುಬ್ಬಚ್ಚಿಯನ್ನು ಹೊಡೆದು ಕೆಡವುತ್ತೇನೆಂದು
ತೊಟ್ಟ. ಐವತ್ತು ಕೊಪೆಕ್ಕುಗಳನ್ನು ಬಾಜಿಕಟ್ಟಿದ. ಗುರಿಕಟ್ಟಿ ಬಂದೂಕು ಹಾರಿಸಿದ. ಅ

ಗುರಿ ತಪ್ಪಿತು. ಆ ಬಳಿಕ ನಡೆದುದನ್ನು ವರ್ಣಿಸಲಸದಳ. ಗಾವ್ರಿಕನಿಗೇ ಅಳು ಬರುವಂತೆ ಆಗಿತ್ತು. ಅಕಸ್ಮಾತ್ತಾಗಿ ಗುರಿ ತಪ್ಪಿಹೋಗಿತ್ತು. ಆಶ್ಚರ್ಯಪಡುತ್ತ ಬಂದೂಕನ್ನು ಕೈಯಲ್ಲಿ ಹಿಡಿದು ಹೊರಳಿಸಿ ಹೊರಳಿಸಿ ನೋಡಿ ಪರೀಕ್ಷಿಸುವವನಂತೆ ನಟಿಸಿದ. ಆದರೆ ಅವನ ಮುಖದಲ್ಲಿ ನಾಚಿಕೆ ಕಾಣದೆ ಇರಲಿಲ್ಲ. ಒಂದು ಸಲ ಹೆಗಲನ್ನು ಕುಣಿಸಿ ತೇಪೆ ಹಾಕಿದ ಜೇಬಿನೊಳಕ್ಕೆ ಕೈಹಾಕಿದ. ಐವತ್ತು ಕೊಪೆಕ್ಕಿನ ನಾಣ್ಯವನ್ನು ಜೇಬಿನಿಂದ ಹೊರತೆಗೆದು ಆ ಸಭ್ಯನಿಗೆ ಕೊಟ್ಟ. ಆತ ನಗುತ್ತ ಇದೆಲ್ಲ ತಮಾಷೆಯೆಂದು ಹೇಳಿ ದುಡ್ಡನ್ನು ತೆಗೆದುಕೊಳ್ಳಲು ನಿರಾಕರಿಸಿದ. ಆದರೆ ಬಂದೂಕು ಹಾರಿಸುವ ಕ್ರೀಡಾಂಗಣದ ಯಜಮಾನ ಕರುಣೆ ಹಾಗೂ ಹುಚ್ಚು ಕೆರಳುವ ಕೆಂಡಗಣ್ಣುಗಳಿಂದ ಅವನನ್ನು ತಿಂದು ಬಿಡುವಂತೆ ನೋಡಿದ. ಆ ನೋಟದ ತೀಕ್ಷ್ಣತೆಯನ್ನು ಸಹಿಸಲಾರದೆ ಆ ಸಭ್ಯ ಒಲ್ಲದ ಮನಸ್ಸಿನಿಂದ ನಾಣ್ಯವನ್ನು ಜೇಬಿಗೆ ಹಾಕಿಕೊಂಡು ಅಲ್ಲಿಂದ ಕಾಲ್ತೆಗೆದ. ಆ ದಿನ ಕ್ರೀಡಾಂಗಣವನ್ನು ಊಟಕ್ಕೆಂದು ಮಧ್ಯಾಹ್ನ ಮುಚ್ಚಲಿಲ್ಲ.

"ಸ್ವಾಮಿ ನಾನಾಗಿದ್ದರೆ ನರ್ತಕಿಗೆ ಗುರಿಯಿಟ್ಟು ಹೊಡೆದು ಹೇಗೆ ಅವಳು ಧಾರ್ಷ್ಟ್ಯದಿಂದ ತನ್ನ ಕಾಲುಗಳನ್ನು ಎತ್ತಿ ಹಾಕುತ್ತಾಳೆಂಬುದನ್ನು ನೋಡುತ್ತಿದ್ದೆ" ಎಂದು ಆ ಕ್ರೀಡಾಂಗಣದ ಯಜಮಾನನು ಆಗಂತುಕನಿಗೆ ಹೇಳಿದ. ಈ ತಲೆ ಚಿಟ್ಟು ಹಿಡಿಸುವ ಸಂಭಾಷಣೆ ಹೇಗಾದರೂ ಮುಗಿದರೆ ಸಾಕೆಂದೂ, ಅವನು ಒಂದು ಸಲವಾದರೂ ದುಡ್ಡು ಕೊಟ್ಟು ಬಂದೂಕ ಹೊಡೆಯಲೆಂದೂ ಅವನ ಮನಸ್ಸಿನಲ್ಲಿದ್ದುದನ್ನು ಈ ಮಾತು ಸ್ಪಷ್ಟಪಡಿಸಿತ್ತು.

"ಈ ವಿಷಯ ಒಬ್ಬರಿಗಾದರೂ ಗೊತ್ತಿಲ್ಲದೆ ಇರುವುದು ಆಶ್ಚರ್ಯ." ಎಂದ ಆಗಂತುಕ. ಅದೇ ಸಮಯಕ್ಕೆ ಗಾವ್ರಿಕ್ ಅವನ ಕಣ್ಣಿಗೆ ಬಿದ್ದ. ಆ ಹುಡುಗನ ಕಡೆಗೆ ಚುರುಕಾದ ತನ್ನ ದೃಷ್ಟಿಯನ್ನು ಬೀರಿ ತಲೆಯಿಂದ ಕಾಲಿನವರೆಗೂ ನೋಡಿದ.

"ನೀನು ಇಲ್ಲೇ ವಾಸಿಸುತ್ತಿಯಾ, ಮಗೂ!"

"ಹೌದು" ಎಂದ ಹುಡುಗ. ಅವನ ಧ್ವನಿ ಇಳಿದು ಹೋಗಿತ್ತು.

"ನೀನೇನು ಮೀನು ಹಿಡಿಯುವ ಕಸಬಿನವನೋ?"

"ಹೌದು"

"ಅಷ್ಟು ನಾಚಿಕೆ ಯಾಕೆ? ಹತ್ತಿರಕ್ಕೆ ಬಾ. ಹೆದರಬೇಡ."

ಗಾವ್ರಿಕ್ ಅವನ ಒರಟು ಮೀಸೆಯನ್ನು ನೋಡಿದ. ಅದು ಕಾಗೆ ಹಾಗೆ ಕಪ್ಪಗೆ ಇತ್ತು. ಅವನ ಕೆನ್ನೆಗೆ ಅಂಟುಲೇಪ ಹಾಕಿದ್ದಂತೆ ಕಾಣಿಸುತ್ತಿತ್ತು. ಹೆದರಿಕೆಯಿಂದ ಯಾಂತ್ರಿಕವಾಗಿ ಒಂದು ಹೆಜ್ಜೆ ಇಡುತ್ತ ಗಾವ್ರಿಕ್ ಮೀಸೆಯನ್ನು ಸವಿಾಪಿಸಿದ.

೧೮. ಪ್ರಶ್ನೆ ಉತ್ತರ

"ನಿನಗೆ ತಂದೆತಾಯಿ ಇದ್ದಾರೊ?"

"ಇಲ್ಲ."

"ಹಾಗಿದ್ದರೆ ಯಾರ ಜತೆ ಇದ್ದೀಯೆ?"

"ಅಜ್ಜನ ಜತೆಯಲ್ಲಿ."

"ಯಾರು ಆತ?"

"ಒಬ್ಬ ಮುದುಕ."

"ಅದು ಗೊತ್ತಾಗುತ್ತೆ. ಅವನ ಕಸುಬೇನು?"

"ಮಿಾನು ಹಿಡಿಯುವುದು."

"ಹಾಗಿದ್ದರೆ ನೀವು ಬೆಸ್ತರು ಎನ್ನಿ."

"ಹೌದು."

"ನೀನು ಯಾರು?"

"ಒಬ್ಬ ಹುಡುಗ."

"ನೀನು ಹುಡುಗಿ ಅಲ್ಲ, ಹುಡುಗ ಎನ್ನುವುದು ನೋಡಿದರೆ ಕಾಣುತ್ತೆ. ನಾನು ಕೇಳ್ತಾ ಇರೋದು ನೀನು ಏನು ಕೆಲಸ ಮಾಡ್ತೀ ಅಂತ."

"ನಾನು ಅಜ್ಜನಿಗೆ ನೆರವಾಗಿದ್ದೀನಿ."

"ಅಂದರೆ ನೀವಿಬ್ಬರೂ ಜತೇಲಿ ಮಿಾನು ಹಿಡಿಯುವುದಕ್ಕೆ ಹೋಗ್ತೀರಿ, ಅಲ್ಲವೆ?"

"ಹೂ."

"ಸರಿ. ನೀವು ಯಾವರೀತಿ ಮಿಾನು ಹಿಡೀತೀರಿ?"

"ಗಾಳದ ಹುರಿಯ ಸಾಲನ್ನು ಸಂಜೆ ಹಾಕಿಬಿಟ್ಟು ಹೋಗ್ತೀವಿ. ಮಾರನೆ ಬೆಳಗ್ಗೆ ಹೋ ಮಿಾನುಗಳನ್ನು ಎತ್ತಿಕೊಳ್ತೀವಿ."

"ಅಂದರೆ ನೀವು ದಿನಾ ಸಮುದ್ರಕ್ಕೆ ದೋಣೀಲಿ ಹೋಗಬೇಕು, ಅಲ್ಲವೆ?"

"ಹೂಂ."

"ದಿನ ಹೋಗ್ತೀರೋ?"

"ಅಂದರೆ?"

"ನೀನು ಎಂಥ ಮಡ್ಡಿ. ನಾನು ಕೇಳುವುದು ನೀವು ಪ್ರತಿನಿತ್ಯ ಮಿಾನಿನ ಬೇಟೆಗೆ ದೋ ತೆಗೆದುಕೊಂಡು ಸಮುದ್ರಕ್ಕೆ ಹೊಗ್ತೀರಾ ಅಂತ."

"ಹೌದು, ಇನ್ನೇನು ಮತ್ತೆ?"

"ಬೆಳಗ್ಗೆ ಸಂಜೆ ಎರಡು ಹೊತ್ತೂ ಹೋಗ್ತೀರಿ?"

"ಇಲ್ಲ."

"ಅಂದರೆ?"

"ಬೆಳಗ್ಗೆ ಮಾತ್ರ ಹೋಗ್ತೀವಿ."

"ಸಾಯಂಕಾಲವೋ?"

"ಹೂಂ. ಸಾಯಂಕಾಲವೂವೆ."

"ಸಾಯಂಕಾಲವೂ ಹೋಗುವಾಗ ಬೆಳಗ್ಗೆ ಮಾತ್ರ ಎಂತ ಯಾಕೆ ಹೇಳಿದೆ?"

"ಸಾಯುಂಕಾಲ ಗಾಳದ ಹುರಿಯ ಸಾಲನ್ನು ಹಾಕಿಬಿಟ್ಟು ಬರ್ತೇವೆ, ಅಷ್ಟೆ."

"ದೇವರೇ ಗತಿ! ಅಲ್ಲವೋ ನೀನು ಹೇಳಿದಂತೆ ಗಾಳದ ಹುರಿಯನ್ನು ಹಾಕುವುದ ಸಾಯಂಕಾಲವೂ ಹೋಗ್ತೀರಲ್ಲವೆ?"

" ಇಲ್ಲ, ನಾವು ಸಾಯಂಕಾಲ ಮೀನುಗಳನ್ನು ಹಿಡಿಯುವುದಿಲ್ಲ. ಬೆಳಗ್ಗೆ ಮಾತ್ರ ಮೀನುಗಳನ್ನು ಗಾಳದಿಂದ ಎತ್ತಿಕೊಳ್ಳೋದು."

" ಸಾಯಂಕಾಲ ಸಮುದ್ರದಲ್ಲಿ ಗಾಳದಹುರಿಯನ್ನು ಬಿಡುವುದಕ್ಕೆ ಹೋಗ್ತೀರಿ, ಹೌದೋ?"

" ಹೌದು ಮತ್ತೆ."

" ಅಂದಮೇಲೆ ಸಾಯಂಕಾಲ ಸಮುದ್ರಕ್ಕೆ ಹೋಗಿಯೇ ಹೋಗ್ತೀರಿ ಅಂತ ಆಯಿತಲ್ಲ."

" ಹೂಂ ಊಂ."

" ನಿನ್ನ ಬುರುಡೇಲಿ ಜೇಡಿಮಣ್ಣು ತುಂಬಿದೆಯೋ ಅಂತೀನಿ. ನಿನ್ನ ಕೈಲಿ ಮಾತಾಡೋನಿಗೆ ನಾಲಗೆ ಬುಡ ಭದ್ರವಾಗಿರಬೇಕು. ನೀನು ಯಾಕೆ ಹೀಗೆ ಗುಗ್ಗುಹಾಗೆ ಆಡ್ತೀ ಅಂತೀನಿ ?"

" ನಾನಿನ್ನೂ ಮಗು."

ಆ ಮೀಸೆಯ ಮನುಷ್ಯ ವ್ಯಂಗ್ಯವಾಗಿ ಮುಗುಳು ನಕ್ಕ. ಅದನ್ನು ಗಾವ್ರಿಕನಿಂದ ಮುಚ್ಚಿಡುವ ಪ್ರಯತ್ನವನ್ನು ಅವನು ಮಾಡಲಿಲ್ಲ. ಗಾವ್ರಿಕನನ್ನು ತಲೆಯಿಂದ ಕಾಲಿನವರೆಗೆ ಪರೀಕ್ಷಿಸಿದ, ಬಳಿಕ ಗಾವ್ರಿಕನ ತಲೆಯ ಮೇಲೆ ಭೇಷ್ ಎನ್ನುವಂತೆ ಸ್ವಲ್ಪ ಜೋರಾಗಿಯೇ ತನ್ನ ಕೈಯಿಂದ ತಟ್ಟಿದ.

" ನೀನು ಒಳ್ಳೇ ಮೀನುಗಾರ !" ಎಂದ.

ಆದರೆ ಆ ಹುಡುಗ ಗುಗ್ಗುವೇನೂ ಆಗಿರಲಿಲ್ಲ. ಈ ಮೀಸೆಯ ಮನುಷ್ಯನು ಕಪಟೋಪಾಯ ನಿಪುಣನಾದ ತಂತ್ರಿ ಹಾಗೂ ಅಪಾಯಕರನಾದ ಶತ್ರು ಎಂಬುದನ್ನು ಅವನು ಆಗಲೇ ಗ್ರಹಿಸಿದ್ದ. ಈ ಮೀಸೆಯ ಮನುಷ್ಯ ಸಮುದ್ರ ತೀರದಲ್ಲಿ ಅಡ್ಡಾಡುತ್ತ ಅವರಿವರೊಡನೆ ನಾವಿಕನು ಸಮುದ್ರಕ್ಕೆ ಧುಮುಕಿದ ವಿಷಯವನ್ನು ಪ್ರಸ್ತಾಪಿಸುತ್ತಿದ್ದ. ಅವನು ಆ ಕ್ರೀಡಾಂಗಣಕ್ಕೆ ಬಂದೂಕದಿಂದ ಗುರಿಹೊಡೆಯುವ ವಿನೋದಕ್ಕಾಗಿ ಬಂದಿರುವವನಂತೆ ನಟಿಸುತ್ತಿದ್ದ. ಅವನು ನಿಜವಾಗಿ ಯಾರು ಎಂಬುದನ್ನು ಹೇಳುವವರಾರು ? ಅವನು ಪ್ರಾಯಃ ಪತ್ತೇದಾರನಿರಬಹುದು. ತಮ್ಮ ಗುಡಿಸಿಲಿನಲ್ಲಿ ತಪ್ಪಿಸಿಕೊಂಡ ನಾವಿಕ ಅಡಗಿಕೊಂಡಿದ್ದಾನೆಂಬುದನ್ನು ಆಗಲೇ ಕಂಡುಹಿಡಿದು ಬಿಟ್ಟಿದ್ದಾನೋ ಏನೋ ! ಅವನಿಗೆ ಗೊತ್ತಾಗಿಬಿಟ್ಟಿದ್ದರೆ ಏನು ಗತಿ ! ದೇವರೇ ದಿಕ್ಕು. ಈ ಕಾರಣಗಳಿಂದ ತಕ್ಷಣ ಗಾವ್ರಿಕ್ ಅಸಮಂಜಸನಂತೆ ನಟಿಸಲು ನಿಶ್ಚಯಿಸಿದ್ದ. ಅಸಮಂಜಸನಿಂದ ನಿಜವಾದ ವಿಷಯವನ್ನು ತಿಳಿದುಕೊಳ್ಳುವುದು ಕಷ್ಟ.

ಅಸಮಂಜಸನ ಮುಖ ಹೀಗೆ ಪೆದ್ದು ಪೆದ್ದಾಗಿರಬಹುದು ಎಂದು ಕಲ್ಪಿಸಿಕೊಂಡು ಸ್ವಲ್ಪ ಮಟ್ಟಿಗೆ ತನ್ನ ಮುಖವನ್ನು ಸೊಟ್ಟಗೆ ಮಾಡಿಕೊಂಡ. ಒಂದೊಂದು ಸಲ ಕಣ್ಣುಗಳನ್ನು ಗರಗರನೆ ತಿರುಗಿಸುವುದು, ಮರುಳನಂತೆ ಕಾಲನ್ನು ಎತ್ತಿ ಎತ್ತಿ ಇಡುವುದು, ತುಟಿಯಲ್ಲಿ ಹುಣ್ಣಾಗಿರುವಂತೆ ತುಟಿ ಕಚ್ಚಿಕೊಂಡು ತೋರಿಸುವುದು—ಹೀಗೆ ತನ್ನ ಚರ್ಯೆಯನ್ನು ಬದಲಾಯಿಸಿ ತೋರಿಸಿದ. ತಾನು ಒಬ್ಬ ಅಸಮಂಜಸನೊಡನೆ ವ್ಯವಹರಿಸಬೇಕಾಗಿದೆಯೆಂಬುದನ್ನು ಮೀಸೆ ಅರಿತುಕೊಂಡ! ಆದುದರಿಂದ ಮೊದಲು ಅವನ ಸ್ನೇಹವನ್ನು ಬೆಳೆಸಿಕೊಳ್ಳುವುದು ಉತ್ತಮವೆಂದು ಭಾವಿಸಿದ. ಕ್ರಮೇಣ ಅವನ ಬಾಯಿಯಿಂದ ಇದ್ದ ವಿಚಾರವನ್ನು ಹೊರಡಿಸಬಹುದು ಎಂದು ಯೋಚಿಸಿದ.

ಮಕ್ಕಳು ವಿಚಾರಶೀಲರೂ ಅವಲೋಕನ ಚತುರರೂ ಆಗಿರುತ್ತಾರೆ. ಅವರು ತಮ್ಮ ಸುತ್ತಮುತ್ತ ಏನು ನಡೆಯುತ್ತದೆ ಎಂಬುದನ್ನು ದೊಡ್ಡವರಿಗಿಂತ ಅತಿಶಯವಾಗಿ ತಿಳಿದುಕೊಳ್ಳು

ತ್ತಾರೆ. ಹೀಗೆಂದು ಮಾಸೆ ತರ್ಕಿಸಿದ. ಅದಕ್ಕೆ ತಕ್ಕ ಆಧಾರವಿಲ್ಲದೆ ಇರಲಿಲ್ಲ.

"ನಿನ್ನ ಹೆಸರೇನು ಮಗು ?"

"ಗಾವ್ರಿಕ್."

"ಒಳ್ಳೆಯದು ಗಾವ್ರಿಕ್, ಇಲ್ಲಿ ನೋಡು. ಬಂದೂಕು ಹೊಡೆಯಬೇಕೆಂದು ನಿನಗೆ ಆಸೆ ಇಲ್ಲವೆ?" ಹುಡುಗನ ಮುಖ ಕೆನ್ನೆ ಕಿವಿಗಳು ಕೆಂಪೇರಿದುವು. ಆದರೆ ತಕ್ಷಣ ತನ್ನ ಉದ್ವೇಗವನ್ನು ಹತೋಟಿಗೆ ತಂದುಕೊಂಡು " ನನ್ನ ಹತ್ತಿರ ದುಡ್ಡಿಲ್ಲವಲ್ಲ." ಎಂದು ಬಹು ಸಣ್ಣ ದನಿಯಲ್ಲಿ ಪೆದ್ದನಂತೆ ರಾಗವಾಗಿ ಹೇಳಿದ.

"ನನಗೆ ಗೊತ್ತಿದೆ. ನಾನು ದುಡ್ಡು ಕೊಡ್ತೇನೆ. ನೀನು ಹೊಡಿ ನೋಡೋಣ."

"ತಮಾಷಿ ಮಾಡ್ತೀರಿ ನೀವು."

" ನನ್ನಲ್ಲಿ ನಂಬಿಕೆ ಇಲ್ಲವೊ? ಇಲ್ಲಿ ನೋಡು" ಎಂದು ಮಾಸೆ ಐದು ಕೋಪೆಕ್ಕುಗಳ ಹೊಚ್ಚ ಹೊಸ ನಾಣ್ಯವನ್ನು ಯಜಮಾನನ ಎದುರಿಗೆ ಹಲಗೆಯ ಮೇಲೆ ಇಟ್ಟ. "ಢಂ ಎನ್ನಿಸಿ ಬಿಡು. ಬಾ!" ಎಂದು ಪೂಸಿ ಮಾತಿನಲ್ಲಿ ಹೇಳಿದ.

ಗಾವ್ರಿಕನಿಗೆ ಎಲ್ಲಿಲ್ಲದ ಸ್ವರ್ಗಸುಖ ಹತ್ತಿರ ಬಂದು ಕೈನೀಡಿ ಆಸೆ ತೋರಿಸಿದಂತಾಯಿತು. ಈಗ ಇದನ್ನು ನಂಬಬೇಕೋ ಬೇಡವೋ ಎಂಬ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಸಂಕೋಚದಿಂದ ಯಜಮಾನನ ಕಡೆಗೆ ನೋಡಿದ. ಆದರೆ ಯಜಮಾನ ವ್ಯವಹಾರಜ್ಞನಂತೆ ಬಿಗುಮಾನದ ಮುಖ ವನ್ನು ಮಾಡಿಕೊಂಡಿದ್ದರಿಂದ ಕಣ್ಣುಸನ್ನೆಯಿಂದ ಅವನೊಡನೆ ಸ್ನೇಹಪೂರ್ವಕವಾದ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶವಿರಲಿಲ್ಲ. ಆ ಹುಡುಗನನ್ನು ತಾನು ಮೊದಲು ನೋಡಿಲ್ಲವೋ ಎಂಬಂತೆ ಅವನ ಕಡೆಗೆ ನೋಡಿ ಹಲಗೆಯ ಮೇಲೆ ಬಗ್ಗಿಕೊಂಡು "ನಿನಗೆ ಯಾವುದು ಬೇಕು ? ಪಿಸ್ತೂಲೋ, ರೈಫಲ್ಲೋ ?" ಎಂದು ಕೇಳಿದ. ಈ ಅನಿರೀಕ್ಷಿತ ಆನಂದದ ಆಗಮನ ಗಾವ್ರಿಕನನ್ನು ಗೆದ್ದುಬಿಟ್ಟಿತು. ಇಗ ಅವನು ನಿಜವಾಗಿ ಅಸಮಂಜಸನಂತೆ ನಟಿಸುವುದನ್ನು ಮರೆತುಬಿಟ್ಟ. "ಮಾಂಟೆ ಕ್ರಿಸ್ಟೋ ಬೇಕು" ಎಂದು ಹಿಗ್ಗುತ್ತ ಉಗ್ಗುತ್ತ ಹಲ್ಲು ಕಿರಿದುಕೊಂಡು ಹೇಳಿದ.

ಝಳಪಿನಿಂದ ಯಜಮಾನ ಆ ಬಂದೂಕಿಗೆ ಮದ್ದನ್ನು ತುಂಬಿ ಹುಡುಗನ ಕೈಗೆ ಕೊಟ್ಟ. ಭಾರವಾಗಿ ಉಸಿರು ಬಿಡುತ್ತ ಗಾವ್ರಿಕ್ ಬಂದೂಕವನ್ನು ಕೈಗೆ ತೆಗೆದುಕೊಂಡು ಒಂದು ಸೀಸೆಗೆ ಗುರಿಯಿಟ್ಟ; ಜಪಾನಿ ಯುದ್ಧ ನೌಕೆಗೆ ಗುರಿಯಿಡಬೇಕೆಂದು ಅವನ ಅಭಿಲಾಷೆ. ಆದರೆ ಎಲ್ಲಿ ಗುರಿ ತಪ್ಪುವುದೋ ಎಂಬ ಭೀತಿ. ಸೀಸೆ ದೊಡ್ಡದಾಗಿದ್ದುದರಿಂದ ಗುರಿ ತಪ್ಪಲಾರದೆಂದು ಕೊಂಚ ಧೈರ್ಯ.

ಗುರಿ ಹಿಡಿಯುವುದರಿಂದ ಉಂಟಾಗುವ ಸಂತೋಷವನ್ನು ಆದಷ್ಟು ಕಾಲ ಉಳಿಸಿ ಕೊಳ್ಳಬೇಕೆಂದು ಗಾವ್ರಿಕ್ ಪ್ರಯತ್ನಿಸಿದ. ಮೊದಲು ಸ್ವಲ್ಪ ಹೊತ್ತು ಸೀಸೆಗೆ ಗುರಿ ಹಿಡಿದ. ಬಳಿಕ ಗುರಿಯನ್ನು ಮೇಲಕ್ಕೆ ಎತ್ತಿ ಹಿಡಿದ. ಈಗ ಯುದ್ಧ ನೌಕೆಯ ಕಡೆಗೆ ತಿರುಗಿಸಿದ. ಪುನಃ ಸೀಸೆಯ ಕಡೆಗೆ ತಿರುಗಿಸಿದ. ಬಂದೂಕದ ಒಂದು ಗುರಿಗಣ್ಣಿನಿಂದ ಇನ್ನೊಂದು ಗುರಿಗಣ್ಣಿಗೆ ಬದಲಾಯಿಸುತ್ತ ಬಾಯಿಂದ ಹೊರಬರಲು ಹವಣಿಸುತ್ತಿದ್ದ ಜೊಲ್ಲನ್ನು ನಾಲಿಗೆಯಿಂದ ಸವರಿ ಕೊಂಡು ನುಂಗುತ್ತ ಇದ್ದ. ಬಂದೂಕವನ್ನು ಹಾರಿಸಿದ ಒಡನೆ ತನ್ನ ಸ್ವರ್ಗಸುಖಕ್ಕೆ ಚ್ಯುತಿ ಬರುವುದೆಂದು ನಡುಗಿದ.

ಕೊನೆಗೆ ಗಾವ್ರಿಕ್ ದೀರ್ಘವಾಗಿ ಉಸಿರೆಳೆದುಕೊಂಡು ಬಂದೂಕನ್ನು ಕೆಳಗೆ ಇಟ್ಟ. ತಪ್ಪಿತಸ್ಥನಂತೆ ಗಾವ್ರಿಕ್ ಕ್ರೀಡಾಂಗಣದ ಯಜಮಾನನ ಕಡೆಗೆ ದೃಷ್ಟಿಯನ್ನು ಬೀರಿ ಮಿಾಸೆಗೆ ಹೇಳಿದ: "ನೋಡಿ, ನನ್ನ ಕೈಲಿ ಗುರಿ ಸಾಧಿಸುವುದಕ್ಕಾಗುವುದಿಲ್ಲ ಅಂತ ಕಾಣುತ್ತೆ. ಗುರಿ ಹಿಡಿದು ನೋಡಿದ್ದಷ್ಟೇ ಸಾಕು. ಇದಕ್ಕೆ ಬದಲಾಗಿ ಸೋಡಾ ಅಂಗಡಿಯಲ್ಲಿ ಸೋಡಾಬೆರೆತ ಷರಬತ್ತನ್ನು ಕೊಡಿಸಿಕೊಡಿ. ನಿಮಗೆ ಹೆಚ್ಚು ಖರ್ಚು ಆಗುವುದಿಲ್ಲ."

ಮಿಾಸೆ ಇದಕ್ಕೆ ಅಡ್ಡಿ ಬರಲಿಲ್ಲ. ತಿರಸ್ಕಾರ ಮತ್ತು ಔದಾಸೀನ್ಯವನ್ನು ಪ್ರದರ್ಶಿಸುತ್ತಿದ್ದ ಯಜಮಾನನ ಕಡೆಗೆ ನೋಡುವ ಪ್ರಯತ್ನ ಮಾಡದೆ ಅವರಿಬ್ಬರೂ ಅಲ್ಲಿಂದ ಸೋಡಾ ಅಂಗಡಿಯ ಕಡೆಗೆ ಹೊರಟರು.

ಸೋಡಾ ಅಂಗಡಿಯಲ್ಲಿ ಮಿಾಸೆ ತೋರಿಸಿದ ಔದಾರ್ಯವನ್ನು ಕಂಡು ಗಾವ್ರಿಕನಿಗೆ ಉಸಿರು ಕಟ್ಟಿಹೋಯಿತು. ಎರಡು ಕೊಪೆಕ್ಕಿನ ಸೋಡಾಕ್ಕೆ ಬದಲಾಗಿ ಒಂದು ಇಡೀ ದೊಡ್ಡ ಸೀಸೆ ನೇರಳೆ ಸೋಡ ತರಲು ಹೇಳಿದ. ಅದರ ಬೆಲೆ ಎಂಟು ಕೊಪೆಕ್ಕುಗಳು. ಅಂಗಡಿಯವನು ನೇರಳೆ ಬಣ್ಣದ ಚೀಟಿಯನ್ನು ಅಂಟಿಸಿದ್ದ ಬಿಳಿಸೀಸೆಯನ್ನು ತಂದು ಅದರ ಬಿರಡೆಯ ತುದಿಗೆ ಸಿಕ್ಕಿಸಿದ್ದ ಸಣ್ಣತಂತಿಯನ್ನು ತೆಗೆದುಹಾಕಿದಾಗ ಗಾವ್ರಿಕ್ ತನ್ನ ಕಣ್ಣುಗಳನ್ನು ತಾನೇ ನಂಬದಾದ.

ಸೀಸೆಯ ಬಿರಡೆಯನ್ನು ಕಿತ್ತಾಗ ಠಪ್ ಎಂದು ಶಬ್ದವಾಯಿತು. ಕ್ವಾಸ್ ಸೀಸೆಗಳ ಬಿರಡೆಯನ್ನು ತೆಗೆದಾಗ ಆಗುವಂತೆ ಒರಟು ಶಬ್ದವಾಗಲಿಲ್ಲ. ಸೀಸೆಯಲ್ಲಿದ್ದ ಸ್ವಚ್ಛವಾದ ನೀರು ನೊರೆಯಿಂದ ತುಂಬಿಕೊಂಡು ಗಳಗಳನೆ ಮೇಲಕ್ಕೆ ಉಕ್ಕಿ ಬಂದಿತು. ಸೀಸೆಯ ಬಾಯಿಂದ ಗ್ಯಾಸ್ ಹೊರಬಿದ್ದು ನಿಜವಾದ ನೇರಳೆ ಸೋಡದ ಹಿತಕರವಾದ ಸುಮಧುರ ಪರಿಮಳವನ್ನು ಬೀರಿತು.

ಗಾವ್ರಿಕ್ ಬಹಳ ಜಾಗರೂಕತೆಯಿಂದ ಗುಳ್ಳೆಗಳು ಏಳುತ್ತಿದ್ದ ಸೋಡದ ಸೀಸೆಯನ್ನು ಅದೊಂದು ನಿಧಿಯೋ ಎಂಬಂತೆ ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದುಕೊಂಡ. ಸೂರ್ಯನ ಕಡೆಗೆ ಮುಖಮಾಡಿಕೊಂಡು ಕಣ್ಣನ್ನು ಅರ್ಧಮುಚ್ಚಿ ಸೋಡ ಕುಡಿಯಲಾರಂಭಿಸಿದ. ಸೋಡದ ಸುಮಧುರ ಪರಿಮಳದ ಗ್ಯಾಸ್ ಗಂಟಲಿನಿಂದ ಮೂಗಿಗೆ ಬರಲಾರಂಭವಾಯಿತು.

ಈ ಧನಿಕರ ಮನಮೋಹಕ ಅಮೃತವನ್ನು ಗಾವ್ರಿಕ್ ಕುಡಿಯುತ್ತಿದ್ದಾಗ ಇಡೀ ವಿಶ್ವವೇ ಅವನ ವಿಜಯದ ಈ ಸುಮುಹೂರ್ತವನ್ನು ಅವಲೋಕಿಸುತ್ತಿದ್ದಂತೆ ಕಂಡಿತು. ಸೂರ್ಯ, ಮೇಘಮಂಡಲ, ಸಮುದ್ರ, ಜನಗಳು, ನಾಯಿಗಳು, ಬೈಸಿಕಲ್ ಸವಾರರು, ವಿನೋದರಾಟಳಕ್ಕೆ ಸುತ್ತ ತೂಗುಹಾಕಿದ್ದ ಮರದ ಕುದುರೆಗಳು, ನಗರಸಭೆಯ ಸ್ನಾನಘಟ್ಟಕ್ಕೆ ಹೋಗಲು ಅಲ್ಲಿ ಟಿಕೆಟ್ ಮಾರುತ್ತಿದ್ದ ಹುಡುಗಿ—ಎಲ್ಲರೂ ಅವನನ್ನೇ ನೋಡುತ್ತ "ನೋಡಿ, ನೋಡಿ. ಆ ಹುಡುಗ ನೇರಳೆಸೋಡ ಕುಡಿಯುತ್ತಿದ್ದಾನೆ!" ಎಂದು ಕೂಗಿ ಹೇಳುತ್ತಿರುವಂತೆ ಗಾವ್ರಿಕನಿಗೆ ಭಾಸವಾಗುತ್ತಿತ್ತು.

ಹತ್ತಿರದ ಕಳೆಗಳೊಳಗಿನಿಂದ ಒಂದು ವೈಡೂರ್ಯ ಬಣ್ಣದ ಓತಿ ಬೆನ್ನು ಕಾಯಿಸಿಕೊಳ್ಳಲು ಹೊರಕ್ಕೆ ಬಂದಿತ್ತು. ಅದು ತನ್ನ ಮುಂಗಾಲಿನಿಂದ ಬಂಡೆಯನ್ನು ಊರಿಕೊಂಡು ನಿಂತಿತ್ತು. ಅದು ಗಾವ್ರಿಕ್‌ನ ಕಡೆಗೆ ಕಣ್ಣನ್ನು ಚೂಪುಮಾಡಿಕೊಂಡು ನೋಡುತ್ತ "ನೋಡಿ, ನೇರಳೆಸೋಡ ಕುಡಿಯುತ್ತಿರುವ ಇವನು ಭಾಗ್ಯಶಾಲಿಯಲ್ಲವೇ?" ಎಂದು ಹೇಳುವಂತಿತ್ತು.

ಸೋಡ ಕುಡಿಯುತ್ತ ಇರುವ ಹಾಗೆ ವಿಾಸೆಯು ಹಾಕಬಹುದಾದ ಹಾಳು ಪ್ರಶ್ನೆಗಳಿಂ ಹೇಗೆ ಜಾರಿಕೊಳ್ಳಬೇಕೆಂದು ಗಾವ್ರಿಕ್ ಯೋಚನೆ ಮಾಡುತ್ತ ಹೋದ. ಅವನು ತ ಮನಸ್ಸಿನಲ್ಲಿಯೇ ಒಂದು ಹಂಚಿಕೆ ಹಾಕಿದ.

"ಏನು ಗಾವ್ರಿಕ್, ಸೋಡ ಚೆನ್ನಾಗಿತ್ತೋ?" ಎಂದು ವಿಾಸೆ ಕೇಳಿದ.

"ನಿಮಗೆ ನಾನು ಕೃತಜ್ಞ. ಇದು ನನ್ನ ಜೀವನದಲ್ಲಿ ಅಮೃತಗಳಿಗೆ. ಇಂಥದನ್ನು ನಾ ಇದುವರೆಗೆ ರುಚಿ ನೋಡಿರಲಿಲ್ಲ."

"ಸರಿ, ಈಗ ಹೇಳು. ನೀನು ನಿನ್ನೆ ಸಂಜೆ ದೋಣಿಯಲ್ಲಿ ಸಮುದ್ರಕ್ಕೆ ಹೋಗಿದ್ದೆಯಾ

"ಹೂ."

"ನೀನು ಆಗ ತುರ್ಗನೀವ್ ಹಡಗನ್ನು ನೋಡಿದೆಯಾ ?"

"ಹೌದು. ಅದು ನಮ್ಮ ಗಾಳದ ಹುರಿ ಸಾಲನ್ನು ನೂಕಿಕೊಂಡೇ ಹೋಯಿತು."

"ಆ ಹಡಗಿನಿಂದ ಒಬ್ಬ ಮನುಷ್ಯ ಧುಮುಕಿದನಲ್ಲವೇ ?" ವಿಾಸೆ ತನ್ನ ಪೊದೆಯಂಥ ಕ ಕಣ್ಣುಗಳನ್ನು ಹುಡುಗನ ಮೇಲೆ ನೆಟ್ಟ. ಗಾವ್ರಿಕ್ ಹಲ್ಲುಕಿರಿಯುತ್ತ ಬಲಾತ್ಕಾರವಾ ಬಾಯನ್ನು ಸೊಟ್ಟಗೆ ಮಾಡಿಕೊಂಡ. "ಅಬ್ಬ. ಅದ್ಯಾವನೋ ಒಬ್ಬ ಹ್ಯಾಗೆ ಸಮುದ್ರ ಹಾರಿದ ಅಂತ. ಫಳೀರ್ ಅಂತ ನೀರಿನ ಶಬ್ದವಾಯಿತು. ನೀರಿನೊಳಕ್ಕೆ ಹಡಗಿನ ಮೇಲಿನಿಂ ಧುಮುಕಿಬಿಟ್ಟನಲ್ಲ ! ನಾನು ಹೇಳುವುದು ಸುಳ್ಳಾದರೆ ನನ್ನ ತಲೆ ಸಾವಿರ ಹೋಳಾಗಲಿ. ಆಮೇ ಅವನು ಈಜುವುದಕ್ಕೆ ಶುರು ಮಾಡಿದ. ಅವನು ಎಷ್ಟೊಂದು ಸೊಗಸಾಗಿ ಈಜಿದ ಅಂತ" ಎಂ ಗಾವ್ರಿಕ್ .

"ನಿಲ್ಲು, ನಿಲ್ಲು. ನೀನು ಬುರುಡೆ ಬಿಡ್ತಾ ಇಲ್ಲವಲ್ಲ. ಇದ್ದದ್ದನ್ನು ಒಂದಕ್ಕೆರಡು ಮಾ ಉಪ್ಪುಕಾರ ಹಚ್ಚಿ ಹೇಳ್ತಾ ಇಲ್ಲ ತಾನೆ? ಅವನು ಯಾವ ಕಡೆಗೆ ಈಜಿಕೊಂಡು ಹೋದ ಹೇಳು

"ದೇವರಾಣೆ, ನಾನು ಸುಳ್ಳು ಹೇಳುವುದಿಲ್ಲ." ದೇವರ ಮೇಲೆ ಆಣೆಯಿಡುವುದು ಪಾ ವೆಂದು ಗಾವ್ರಿಕ್ ತಿಳಿದಿದ್ದನಾದರೂ ಆ ಸಮಯದಲ್ಲಿ ಅವನು ಹಾಗೆ ಹೇಳಿದ.

"ಆಮೇಲೆ ಈಜಿದ....ಈಜಿದ....ಒಂದೇ ಸಮನೆ ಈಜಿದ." ನಾವಿಕ ಹೇಗೆ ಈಜಿದನೆಂ ದನ್ನು ತೋಳು ಬೀಸಿ ತೋರಿಸಿದ.

"ಅವನು ಯಾವ ಕಡೆಗೆ ಹೋದ ?"

"ಆ ಕಡೆಗೆ" ಸಮುದ್ರದ ಕಡೆಗೆ ಗಾವ್ರಿಕ್ ಕೈನೀಡಿ ತೋರಿಸಿದ.

"ಆಮೇಲೆ ಏನಾದ ಅವನು ?"

"ಆಮೇಲೆ ಒಂದು ದೋಣಿಯವರು ಅವನನ್ನು ಒಳಕ್ಕೆ ಎಳೆದುಕೊಂಡರು."

"ದೋಣಿಯೆ ? ಎಂಥ ದೋಣಿ."

"ದೊಡ್ಡದು. ಹಾಯಿ ಇರೋ ಅಂಥ ದೊಡ್ಡ ದೋಣಿ, ನಿಮಗೆ ಗೊತ್ತಿಲ್ಲವೆ ?"

"ಈ ನಗರಕ್ಕೆ ಸೇರಿದ ದೋಣಿಯೇ ಅದು ?"

"ಅಲ್ಲ."

"ಹಾಗಿದ್ದರೆ ಎಲ್ಲಿಯದು ?

"ಬಾಲ್ಷಾಯ್ ಫಾಂಟಾನಿನದು.. ಅಥವಾ ಲಸ್ಟ್ಡಾರ್ಫ್‌ನದಿರಬಹುದು. ಅದರ ಬ

ಅರ್ಧ ನೀಲಿ, ಅರ್ಧ ಕೆಂಪು. ದೊಡ್ಡದು. ಆ ದೋಣಿ ಅವನನ್ನು ಕರೆದುಕೊಂಡು ಲಸ್ಟ್‌ಡಾರ್ಫ್ ಕಡೆಗೆ ಹೊರಟಿತು. ಇದು ಸತ್ಯ. ದೇವರ ಮೇಲೆ ಪ್ರಮಾಣ ಮಾಡ್ತೀನಿ ಬೇಕಾದರೆ."

"ಅದರ ಹೆಸರೇನಾದರೂ ಕಾಣಿಸಿತೆ ನಿನಗೆ?"

"ಹೌದು, ನೋಡಿದೆ. ಸೋನ್ಯ."

"ಸೋನ್ಯವೇ ? ಸುಳ್ಳು ಹೇಳ್ತಾ ಇಲ್ಲ ತಾನೆ ನೀನು ?"

"ಥೆ, ಥೆ. ಸುಳ್ಳು ಹೇಳಿದರೆ ಮೇಲೆ ಉರಿಯೋ ದೇವರು ಸುಮ್ಮನೆ ಇರ್ತಾನೋ! ಆ ದೋಣಿ ಸೋನ್ಯ ಅನ್ನೋದು ಖಂಡಿತ. ಒಂದು ವೇಳೆ ಅದು ಅಲ್ಲದೆ ಇದ್ದರೆ ವೀರಾ ಅನ್ನೋದರಲ್ಲಿ ಸಂಶಯವೇ ಇಲ್ಲ."

"ಸೋನ್ಯ ಅಥವಾ ವೀರ ?"

"ಹೌದ್ಹೌದು. ಸೋನ್ಯಾ ಅಥವಾ ವೀರಾ—ಅದೂ ಅಲ್ಲ ಅಂದರೆ ನದ್ಯ ಅದು."

"ಸುಳ್ಳು ಹೇಳಿದ್ದೇ ಆದರೆ ನಿನ್ನ....?"

ಸೋಡಾಕ್ಕೆ ದುಡ್ಡು ಕೊಡುವುದಕ್ಕೆ ಬದಲಾಗಿ ಸೋಡ ಅಂಗಡಿಯವನ ಕಿವಿಯಲ್ಲಿ ವಿಾಸೆ ಏನನ್ನೋ ಗುಟ್ಟಾಗಿ ಹೇಳಿದ. ಅವನ ಮಾತುಗಳನ್ನು ಕೇಳಿದೊಡನೆ ಅಂಗಡಿಯವನ ಮುಖ ಹುಳಿ ಹಿಡಿಯಿತು. ಆಮೇಲೆ ವಿಾಸೆ ಹುಡುಗನ ಕಡೆಗೆ ನೋಡಿ ತಲೆ ಅಲ್ಲಾಡಿಸಿ ಅಲ್ಲಿಂದ ಆತುರ ಆತುರವಾಗಿ ಗುಡ್ಡದ ಕಡೆಗೆ ಓಡಿದ. ನಗರಕ್ಕೆ ಹೋಗುವ ಸ್ಥಳೀಯ ರೈಲನ್ನು ಹಿಡಿಯುವ ಉದ್ದೇಶ ಅವನದು ಎಂಬುದನ್ನು ಬೇರೆ ಹೇಳಬೇಕಾಗಿರಲಿಲ್ಲ.

ಅವನು ಹೀಗೆ ಮಾಡುವನೆಂದೇ ಗಾವ್ರಿಕ್ ಎಣಿಸಿದುದು.

೧೯. ಒಂದೂವರೆ ಪೌಂಡು ರೈ ರೊಟ್ಟಿ

ನಾವಿಕನಿಗೆ ತಕ್ಷಣವೇ ಅಪಾಯದ ಮುನ್ಸೂಚನೆಯನ್ನು ಕೊಡಬೇಕಾಗಿತ್ತು. ಗಾವ್ರಿಕ್ ಸುಟಿಯಾದ ಹುಡುಗ ಮತ್ತು ಬಹಳ ಜಾಗರೂಕನೂ ಅಹುದು. ಮೆತ್ತಗೆ ದೂರದಿಂದಲೇ ಹಿಂಬಾಲಿಸುತ್ತ ಹೋಗಿ ವಿಾಸೆ ಎಲ್ಲಿಗೆ ಹೋಗುತ್ತಾನೆಂಬುದನ್ನು ನೋಡಿ ತಿಳಿದುಕೊಂಡ ಮೇಲೆಯೇ ಮನೆಗೆ ಹೋಗುವ ಯೊಚನೆಯನ್ನು ಗಾವ್ರಿಕ್ ಮಾಡಿದ್ದು. ವಿಾಸೆ ಗುಡ್ಡವನ್ನೇರಿ ಗಲ್ಲಿಯಲ್ಲಿ ತಿರುಗಿ ನಿಲ್ದಾಣಕ್ಕೆ ಹೋದಮೇಲೆ ಗಾವ್ರಿಕ್ ಮನೆಯ ಕಡೆಗೆ ತಿರುಗಿದ.

ಮನೆಯಲ್ಲಿ ನಾವಿಕ ನಿದ್ದೆ ಮಾಡುತ್ತಿದ್ದ. ಬಾಗಿಲಿನ ಬೀಗ ಟಿಕ್ ಎಂದು ಶಬ್ದವಾಯಿತೋ ಇಲ್ಲವೋ ಥಕ್ಕನೆ ಹಾಸಿಗೆಯಿಂದ ನೆಗೆದು ನಿಂತ. ಬಾಗಿಲಿನ ಕಡೆಗೆ ಹೆದರಿದ ಕಣ್ಣುಗಳಿಂದ ನೋಡುತ್ತ ಪುನಃ ಹಾಸಿಗೆಯ ಮೇಲೆ ಕುಳಿತುಕೊಂಡ "ಭಯಪಡಬೇಡ, ನಾನೇ, ಮಲಗಿಕೋ" ಎಂದು ಗಾವ್ರಿಕ್ ನುಡಿದುದನ್ನು ಕೇಳಿ ಕಾಹಿಲೆಯ ಮನುಷ್ಯ ಪುನಃ ಮಲಗಿಕೊಂಡ.

ಗುಡಿಸಲಿನ ಒಂದು ಮೂಲೆಯ ಹತ್ತಿರ ಹೆಣಿಕೆ ಕಡ್ಡಿಯ ಕುಕ್ಕೆಯಲ್ಲಿ ಗಾಳಗಳನ್ನು ಮಡಿಸಿಡಲಾಗಿತ್ತು. ಅವುಗಳನ್ನು ಪರೀಕ್ಷಿಸುವವನಂತೆ ನಟಿಸುತ್ತ ಸ್ವಲ್ಪ ಹೊತ್ತನ್ನು ಕಳೆದ. ಮೊದಲೇ ಜ್ವರದಿಂದ ನರಳುತ್ತ ಭಯ ಭೀತನಾದ ವ್ಯಕ್ತಿಗೆ ಉದ್ವೇಗಕ್ಕೆ ಅವಕಾಶವಿಲ್ಲದಂತೆ ವಿಾಸೆಯ

ವಿಷಯವನ್ನು ತಿಳಿಸುವ ಒಳ್ಳೆಯ ರೀತಿ ಯಾವುದು, ಹೇಗೆ ಮಾತನ್ನು ಪ್ರಾರಂಭಿಸಬೇಕ ಎಂಬುದನ್ನು ಅವನು ಯೋಚಿಸುತ್ತಿದ್ದುದು ಸ್ಪಷ್ಟವಾಗಿತ್ತು. ಯಾವುದೋ ಒಂದು ನಿರ್ಣಯಕ ಬಂದವನಂತೆ ಕೊನೆಗೊಂದು ಸಲ ಹಾಸಿಗೆಯ ಬಳಿಗೆ ಬಂದು ನಿಂತುಕೊಂಡ. ಒಂದು ಕಾ ನಿಂದ ಇನ್ನೊಂದು ಕಾಲನ್ನು ಕೆರೆಯುತ್ತ ಒಂದು ಕ್ಷಣಕಾಲ ಹಾಗೆಯೇ ನಿಂತಿದ್ದ. ಒಳಿಕ

"ಈಗ ಸ್ವಲ್ಪ ಉತ್ತಮವೊ ?" ಎಂದು ಕೇಳಿದ.

"ಹೌದು"

"ಜ್ವರ ಬಿಟ್ಟಿದೆಯೋ ?"

"ಹೌದು."

"ಹಸಿವೆಯಾಗುತ್ತೋ ?"

ಈ ಸಂಭಾಷಣೆ ಬಹಳ ಸಂಕ್ಷೇಪವಾಗಿದ್ದರೂ ಕೂಡ ನಾವಿಕನಿಗೆ ಇದರಿಂದ ಆಯಾ ವಾಯಿತು. ಅವನು ಒಂದು ಸಲ ತಲೆಯಲ್ಲಾಡಿಸಿ ಕಣ್ಣುಗಳನ್ನು ಮುಚ್ಚಿಕೊಂಡ. ಸ್ವ ವಿಶ್ರಾಂತಿ ತೆಗೆದುಕೊಳ್ಳಲೆಂದು ಗಾವ್ರಿಕ್ ಕೊಂಚ ಹೊತ್ತು ಸುಮ್ಮನಿದ್ದ. ಆ ಮೇಲೆ ಪು ಮಾತನ್ನು ಆರಂಭಿಸಿದ. ತುಂಬ ಅಕ್ಕರೆಯಿಂದ "ಇಲ್ಲಿ ನೋಡು. ನಿನ್ನೆ ತುರ್ಗನೀವ್ ಹಡ ನಿಂದ ಸಮುದ್ರಕ್ಕೆ ಹಾರಿದವನು ನೀನೇನೋ ?" ಎಂದು ಕೇಳಿದ. ಹುಡುಗನ ಧ್ವನಿ ಮೃದುವಾ ದ್ದರೂ ದೃಢವಾಗಿತ್ತು. ರೋಗಿ ಕಣ್ಣುಗಳನ್ನು ತೆರೆದು ಲಕ್ಷ್ಯಪೂರ್ವಕವಾಗಿ ಹುಡುಗನ ಕಡೆ ನೋಡಿದ. ಆದರೆ ಉತ್ತರವನ್ನೇನೂ ಕೊಡಲಿಲ್ಲ.

"ನಾನು ಹೇಳುವುದನ್ನು ಕೇಳು. ಉದ್ರೇಕಗೊಳ್ಳಬೇಡ, ಸಮಾಧಾನ ಚಿತ್ತದಿಂದ ಮ ಗಿರು." ಗಾವ್ರಿಕ್ ರೋಗಿಯ ಹಾಸಿಗೆಯ ಅಂಚಿನಲ್ಲಿ ಕುಳಿತುಕೊಳ್ಳುತ್ತ ಪಿಸುಮಾತಿನಲ್ಲಿ ಹೇಳಿದ ತನಗೆ ಮಾಸೆಯ ಪರಿಚಯವಾದ ವಿಷಯವನ್ನು ಮೊದಲಿನಿಂದ ಕೊನೆಯವರೆಗೆ ಆದಷ್ಟು ಎಚ್ಚರಿ ಯಿಂದ ತಿಳಿಸಿದ. ನಾವಿಕ ಹಾಸಿಗೆಯಿಂದ ಥಟ್ಟನೆದ್ದು ಕುಳಿತುಕೊಂಡ. ಸ್ವತಂತ್ರವಾ ನೆಟ್ಟಗೆ ಕುಳಿತುಕೊಳ್ಳಲು ಶಕ್ತಿಯಿರದೆ ಇದ್ದುದರಿಂದ ಹಾಸಿಗೆಯ ಅಂಚುಗಳನ್ನು ಬಿಗಿಯಾ ಹಿಡಿದುಕೊಂಡ. ತನ್ನ ದುಂಡನೆಯ ನಿಶ್ಚಲವಾದ ನಯನಗಳಿಂದ ಗಾವ್ರಿಕನನ್ನು ದೃಷ್ಟಿ ನೋಡಲಾರಂಭಿಸಿದ. ಅವನ ಹಣೆಯಮೇಲೆ ಬೆವರು ಹನಿಗಳು ಕಾಣಿಸಿಕೊಂಡುವು. ಒಂದ ಮಾತನ್ನೂ ಆಡದೆ ಮೌನವಾಗಿದ್ದ. ಗಾವ್ರಿಕ್ ಮಾಸೆಯ ಮನುಷ್ಯನ ಕೆನ್ನೆಗಳ ಮೇಲಿ ಅಂಟನ್ನು ಪ್ರಸ್ತಾಪಿಸಿದಾಗ ಮಾತ್ರ ಅವನು ಮೌನವನ್ನು ಮುರಿದ. ಗಂಡೆದೆಯ ಉಕ್ರೇನಿ ದವರಿಗೆ ಸ್ವಾಭಾವಿಕವಾದ ತುಂಟತನದ ಹೊಳಪೊಂದು ನಾವಿಕನ ಕಣ್ಣುಗಳಲ್ಲಿ ಮಿಂಚಿತ ಹಲ್ಲು ಕಚ್ಚಿಕೊಂಡು ಗಡುಸುದನಿಯಲ್ಲಿ "ಬೆಕ್ಕು ಅವನ ಕೆನ್ನೆಯನ ಗಬರಿರಬೇಕು" ಎಂದ. ಇ ಕ್ಕಿದ್ದಂತೆ ಚಡಪಡಿಸಹತ್ತಿದ. ಬಳಿಕ ದೇಹವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪ್ರ ತ್ನಿಸಿ ನಡುಗುವ ಕಾಲುಗಳ ಮೇಲೆ ಗೋಡೆಯನ್ನು ಒರಗಿಕೊಂಡು ಎದ್ದು ನಿಂತ. "ಬಾ, ಬ ಇಲ್ಲಿಂದ ಎಲ್ಲಾದರೂ ಹೊರಟುಹೋಗೋಣ. ದೇವರು ದಿಕ್ಕು." ಎಂದು ಗೊಣಗುಟ್ಟಿದ.

"ಮಲಗಿಕೋ ನಾವ, ನಿನಗೆ ಹುಷಾರಿಲ್ಲ." ಎಂದ ಹುಡುಗ.

"ನನ್ನ ಬಟ್ಟೆಗಳನ್ನು ಕೊಡು. ಎಲ್ಲಿ ಅದು?"

ಸಮುದ್ರದಲ್ಲಿ ಬಟ್ಟೆಗಳನ್ನು ಕಳಚಿ ಎಸೆದಿದ್ದನೆಂಬುದನ್ನು ನಾವಿಕ ಮರೆತಿದ್ದ. ಅವ

ದುರ್ಬಲ ಕೈಗಳಿಂದ ಹಾಸಿಗೆಯ ಅಚೀಚೆ ನಿಸ್ಸಹಾಯಕವಾಗಿ ತಡಕಾಡಲಾರಂಭಿಸಿದ. ಮುಖದ ತುಂಬ ಗಡ್ಡ ಬೆಳೆದಿತ್ತು. ಕೇವಲ ಒಂದು ಚಡ್ಡಿ ಮತ್ತು ಒಳ ಬನೀನು ಧರಿಸಿದ್ದ. ಈ ಸ್ಥಿತಿಯಲ್ಲಿ ಅವನನ್ನು ಯಾರಾದರೂ ನೋಡಿದ್ದರೆ ಖಂಡಿತವಾಗಿ ಹುಚ್ಚನೆಂದು ತಿಳಿದುಕೊಂಡುಬಿಡುತ್ತಿದ್ದರು. ಅವನ ಸ್ವರೂಪವನ್ನು ನೋಡಿದ್ದರಲ್ಲಿ ನಿಜವಾಗಿ ಮರುಕ ಹುಟ್ಟುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಆದರೂ ಅದೇನೋ ಗಾವ್ರಿಕನಿಗೆ ರೋಗಿಯನ್ನು ಆ ಅನಿಷ್ಟದೆಸೆಯಲ್ಲಿ ನೋಡಿ ಇಲ್ಲಿಂದ ಓಡಿಹೋಗಬೇಕೆನ್ನುವಷ್ಟು ಭಯವಾಯಿತು. ಪ್ರಯತ್ನಪೂರ್ವಕವಾಗಿ ಒಳಗಿನ ಭಯವನ್ನು ಗೆದ್ದು ತನ್ನ ತೋಳುಗಳಿಂದ ಅವನ ಸೊಂಟವನ್ನು ಬಳಸಿ ಹಿಡಿದುಕೊಂಡು ರೋಗಿಯನ್ನು ಬಲವಂತದಿಂದ ಮಲಗಿಸಲು ಪ್ರಯತ್ನಿಸಿದ. "ಸುಮ್ಮನೆ ಮಲಗಿಕೋ. ಏಳಬೇಡ. ನಿನ್ನ ಒಳ್ಳೆಯದಕ್ಕೋಸ್ಕರ ಹೇಳ್ತಿದೀನಿ." ಈ ಮಾತುಗಳನ್ನು ಹೇಳುತ್ತಿರುವಾಗ ಹುಡುಗನಿಗೆ ಅಳು ಬರುವಂತಾಗಿತ್ತು.

"ಕೈ ಆಚೆ ತೆಗಿ. ನಾನು ಇನ್ನು ಇಲ್ಲಿಂದ ಹೊರಟುಹೋಗಬೇಕು."

"ಬರೀ ಚಡ್ಡಿಯಲಿದ್ದೀ. ಹೀಗೆ ಎಲ್ಲಿಗೆ ಹೋಗ್ತೀ?"

"ನನ್ನ ಗಂಟು ಕೊಡು?"

"ಯಾವ ಗಂಟು? ನೀನು ಹೇಳುವುದೇನು? ನಿನ್ನ ಹತ್ತಿರ ಏನೂ ಇರಲಿಲ್ಲವಲ್ಲ. ಈಗ ಸುಮ್ಮನೆ ಮಲಗಿಕೋ."

"ನನ್ನನ್ನು ಬಿಟ್ಟುಬಿಡು. ನಾನು ಹೋಗ್ತೀನಿ."

"ನಿನ್ನಿಂದ ಎಷ್ಟೊಂದು ತೊಂದರೆ ಎನ್ನುವುದನ್ನು ನೀನು ತಿಳಿದಿದ್ದರೆ ಚೆನ್ನಾಗಿತ್ತು. ಒಳ್ಳೆ ಮಗೂ ಹಾಗೆ ತಂಟೆ ಮಾಡ್ತೀಯಲ್ಲ, ಸುಮ್ಮನೆ ಮಲಗಿಕೋ. ನಾನು ಹೇಳಿದ ಹಾಗೆ ಕೇಳು." ತಾಳ್ಮೆ ತಪ್ಪಿ ಕೋಪದಿಂದಲೇ ಹುಡುಗ ಗಟ್ಟಿಯಾಗಿ ಹೇಳಿದ, "ನೀನೇನು ಎಳೇ ಮಗುವೇ?"

ನಾವಿಕ ವಿಧೇಯತೆಯಿಂದ ಮಲಗಿದ ಅವನ ಕಣ್ಣುಗಳಲ್ಲಿ ಜ್ವರದ ತಾಪ ಗಾವ್ರಿಕನಿಗೆ ಕಾಣಿಸಿಕೊಂಡಿತು. ನಾವಿಕ ಮುಖ ಬಿಗಿದುಕೊಂಡು ಬೆನ್ನು ಬಗ್ಗಿಸಿಕೊಂಡು ನೋವಿನಿಂದ ನರಳಲಾರಂಭಿಸಿದ.

"ದೇವರ ದಯದಿಂದ ಯಾರಾದರೂ ನನ್ನನ್ನು ಅಡಗಿಸಿಡಿ. ಸಮಿತಿಯವರ ಹತ್ತಿರಕ್ಕೆ ನನ್ನನ್ನು ಕಳಿಸಿಬಿಡಿ. ಒಡೆಸ್ಸ ಸಮಿತಿ ಎಲ್ಲಿದೆ ಅಂತ ನಿನಗೆ ಗೊತ್ತೆ?....ಥೂ ಅಲ್ಲಿಗೆ ಯಾಕೆ ಬಂಡುಹಾರಿಸುತ್ತೀ. ದ್ರಾಕ್ಷಿಬಳ್ಳಿಗಳೆಲ್ಲ ನಿನ್ನಿಂದ ಹಾಳಾಗುತ್ತೆ...." ನಾವಿಕ ಸನ್ನಿ ಹಿಡಿದವರಂತೆ ಪುನಃ ಬಡಬಡಿಸಲಾರಂಭಿಸಿದ.

"ಎಲ್ಲ ಅಡ್ಡದಾರಿ ಹಿಡಿದಿದೆ. ಯಾವುದೂ ಸುಮುಖವಾಗಿಲ್ಲ." ಎಂದು ಗಾವ್ರಿಕ್ ಯೋಚಿಸಿದ. ಆಗ ಹೊರಗಡೆಯಿಂದ ಹೆಜ್ಜೆಯ ಸಪ್ಪಳ ಅವನಿಗೆ ಕೇಳಿಸಿತು. ಗಿಡಗಳ ನಡುವಿನಿಂದ ಸರಸರ ಶಬ್ದಮಾಡುತ್ತ ಯಾರೋ ನೇರವಾಗಿ ಗುಡಿಸಲಿನ ಕಡೆಗೆ ಬರುತ್ತಿರುವಂತಿತ್ತು. ಉಸಿರಾಡಲೂ ಧೈರ್ಯವಿಲ್ಲದೆ ಹುಡುಗ ಹೆಗಲನ್ನು ಏರಿಸಿಕೊಂಡು ಮೈಯೆಲ್ಲ ಕಣ್ಣಾಗಿ ಕುಳಿತ. ಆ ಹಿಂದು ನಿಮಿಷದಲ್ಲಿ ಅತ್ಯಂತ ಭಯಂಕರ ಆಲೋಚನೆಗಳು ತಂಡತಂಡವಾಗಿ ಅವನನ್ನು ಮುತ್ತಿದುವು. ಆದರೆ ಮರುನಿಮಿಷದಲ್ಲಿ ಸುಪರಿಚಿತವಾದ ಕೆಮ್ಮಿನ ಶಬ್ದ ಕಿವಿಗೆ ಬಿದ್ದು ಸಮಾಧಾನವಾಯಿತು. ಅಜ್ಜ ಗುಡಿಸಲಿನೊಳಕ್ಕೆ ಬಾಗಿಲು ತೆಗೆದುಕೊಂಡು ಬಂದ.

ಅಜ್ಜ ಖಾಲಿಯಾದ ಮೀನಿನ ಡಬ್ಬವನ್ನು ಬಾಗಿಲಿನಬಳಿ ಎತ್ತಿಹಾಕಿದ ರೀತಿಯನ್ನು ಸಿಂಬಳ ಸೀತ ಬಗೆಯನ್ನೂ, ಹೀರೇಕಾಯಿ ಮುಖ ಮಾಡಿಕೊಂಡು ಬಹು ಹೊತ್ತು ಶಿಲುಬೆ ಆಕಾರದ ಸಂಜ್ಞೆಯನ್ನು ಮಾಡಿಕೊಂಡ ಶೈಲಿಯನ್ನೂ, ಪವಾಡಕರ್ತನ ಮೂರ್ತಿಯ ಕ ನೋಡುತ್ತಿದ್ದ ಕ್ರಮವನ್ನೂ ನೋಡಿದ ಗಾವ್ರಿಕ್ ಅಜ ಕುಡಿದುಬಂದಿದ್ದಾನೆಂದು ಊಹಿಸಿದು ತಪ್ಪಾಗಿರಲಿಲ್ಲ.

ಅಪರೂಪವಾಗಿ ಅಮಾವಾಸ್ಯೆಗೊಂದುಸಲ ಒಳ್ಳೆಯದೋ ಕೆಟ್ಟದ್ದೋ ಅಸಾಧಾ ವಾದುದು ಯಾವುದಾದರೂ ನಡೆದಾಗ ಅಜ್ಜ ಹೀಗೆ ಮಾಡುತ್ತಿದ್ದ. ಸಂತ ನಿಕೊಲಾ ವಿಷಯದಲ್ಲಿ ಅಜ್ಜ ತೋರಿಸಿದ ಆಗಿನ ಅವನ ಭಾವವನ್ನು ನೋಡಿ ಏನೋ ಒಂದು ಅ ಸಂಗತಿ ನಡೆದಿದೆಯೆಂದು ಗಾವ್ರಿಕ್ ತಿಳಿದುಕೊಂಡ.

"ಅಜ್ಜ, ಎರೆಗಾಗಿ ಮಾಂಸ ಕೊಂಡುಕೊಂಡು ಬಂದೆಯಾ?"

"ಎರೆಗಾಗಿ ಮಾಂಸವೇ?" ಹುಡುಗನ ಕಡೆಗೆ ಒಂದು ನಿಷ್ಕಪಟವಾದ ನೋಟವನ್ನು ಬ ಹೆಬ್ಬೆರಳಿನಿಂದ ಮೂಗನ್ನು ಹಿಡಿದುಕೊಂಡು ಹೇಳಿದ: "ಇಲ್ಲಿದೆ ಮಾಂಸ. ತೆಗೆದುಕೋ ಬ ಎರೆಗೆ ಕಟ್ಟು ತೆಗೆದುಕೊಂಡುಹೋಗಿ. ಆ ಮುದಿಗೊಡ್ಡು ಪವಾಡಕರ್ತನಿಗೆ ನಿನ್ನ ವಂ ಯನ್ನು ಸಲ್ಲಿಸು. ಅವನಿಗೆ ದಿನಾ ಪ್ರಾರ್ಥನೆಯನ್ನು ಸಲ್ಲಿಸಿ ಪೂಜೆಮಾಡಿದ ಫಲ ಇದು. ಹಿಡಿ ಹೋಗ ಅವನು. ಒಳ್ಳೆ ದಪ್ಪ ಮೀನುಗಳನ್ನು ಹಿಡಿಯುವಾಗ ಅವನ ಸಹಾಯವಿತ್ತು. ಆ ಅದಕ್ಕೆ ಪೇಟೆಯಲ್ಲಿ ಒಳ್ಳೆ ಬೆಲೆ ದೊರೆಯಬೇಕಾದಾಗ ಅವನೆಲ್ಲೋ! ಯೋಚನೆ ಮಾಡುವುದ ಸಾಧ್ಯವೆ ಸ್ವಾಮಿ. ಆಲೋಚಿಸಿನೋಡಿ, ನೀವು ದೊಡ್ಡವರು. ಅಂಥ ತೋರವಾದ ಮೀ ನೂರಕ್ಕೆ ಮೂವತ್ತು ಕೊಪೆಕ್ಕಂತೆ! ಎಂದಾದರೂ ಕಂಡು ಕೇಳಿದ್ದೀರಾ?"

"ನೂರಕ್ಕೆ ಮೂವತ್ತು ಕೊಪೆಕ್ಕೆ?" ಚಕಿತನಾಗಿ ಗಾವ್ರಿಕ್ ಕೇಳಿದ.

"ಮೂವತ್ತು ಕೊಪೆಕ್ಕು, ಸುಳ್ಳಾಡಿದರೆ ನನ್ನ ನಾಲಿಗೆ ಬಿದ್ದು ಹೋಗಲಿ. 'ಇಂಥ ಮೀನಿಗೆ ಮುವತ್ತು ಕೊಪೆಕ್ಕೆ? ದೇವರ ಭಯವೂ ಇಲ್ಲವೇ ನಿನಗೆ?' ಅಂತ ಅವಳನ್ನು ಕೇಳ 'ದೇವರಿಗೂ ಮಾರುಕಟ್ಟೆಯ ಬೆಲೆಗೂ ಏನು ಸಂಬಂಧ' ಅಂತ ಹೇಳ್ತಾಳಲ್ಲ ಅವಳು! 'ನ ಬೆಲೆ ನಮಗೆ, ಅವನ ಬೆಲೆ ಅವನಿಗೆ. ನನ್ನ ಬೆಲೆ ನಿನಗೆ ಒಪ್ಪಿಗೆಯಾಗದೆ ಹೋದರೆ ಯೆಹ ಗಳಿಗೆ ಕೊಡು ಹೋಗು. ಅವರು ಕೊಂಡುಕೊಳ್ಳುತ್ತಾರೆ. ನಿನಗೆ ಅವರು ಇನ್ನೂ ಒ ಕೊಪೆಕ್ಕು ಜಾಸ್ತಿ ಕೊಟ್ಟಾರು. ಮೊದಲು ನನಗೆ ಬರಬೇಕಾದ ಎಂಬತ್ತು ಕೊಪೆಕ್ಕುಗಳ ಇಲ್ಲಿ ಮಡಗಿಬಿಟ್ಟು ಮುಂದೆ ಹೋಗು.' ಎಂದಳಲ್ಲ ಅವಳು ನಿಷ್ಠುರವಾಗಿ! ಹೀಗೆ ಆಗುವುದ ಎಲ್ಲಾದರೂ ನೋಡಿದ್ದೀಯಾ ಗಾವ್ರಿಕ್? ಅವಳ ಅನಿಷ್ಟ ಮುಖಕ್ಕೆ ಉಗಿಯುವುದು ತಪ್ಪೆ ಹೇ ಮಹಾಸ್ವಾಮಿಗಳೆ, ನಾನು ಮಾಡಿದ್ದೂ ಅಷ್ಟೇ. ಕೇಳಿ ಸ್ವಾಮಿ. ಮಾರುಕಟ್ಟೆಯವರೆಲ್ಲ ನೋ ಇದ್ದರು. ಎಲ್ಲರ ಕಣ್ಣೆದುರಿಗೂ ಥೂ ಅಂತ ಕ್ಯಾಕರಿಸಿ ಉಗಿದೆ. ಬಿಡ್ತೇನೆಯೆ? ಭಯ ಹೇಳಿ? ಇದರ ಮೇಲೆ ದೇವರಿಲ್ಲವೆ! ನನ್ನ ಕೈ ಬಿಡ್ತಾನೆಯೆ ಅವನು?" ಆತುರ ಆತುರ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡ.

ಆದರೆ ಅಜ್ಜ ನಿಜವನ್ನು ಹೇಳುತ್ತಿರಲಿಲ್ಲ. ಅವನು ಯಾರ ಮುಖಕ್ಕೂ ಉಗುಳಿರ ಮದಾಂಸ್ತೊರೊಷೆಂಕೋಳ ಮಾತುಗಳನ್ನು ಕೇಳಿ ಅಜ್ಜ ಕಾಲಿನಿಂದ ತಲೆಯವರೆಗೂ ಥರ

ನಡುಗಿದ್ದ. ಆ ಮೇಲೆ ಮಿಾನಿನ ಡಬ್ಬದಿಂದ ಮಿಾನುಗಳನ್ನು ತೆಗೆದು ಮದಾಮಳ ಕುಕ್ಕೆ ಯೊಳಕ್ಕೆ ಸುರಿದು "ತಗೋ, ತುಂಬಿಕೋ. ನಿನಗೆ ಕಟರೆಯಾಯಿತೋ, ಇಲ್ಲ ಇನ್ನೂ ಏನಾದರೂ ಬಾಕಿ ಇದೆಯೊ?" ಎಂದು ಅಸ್ಪಷ್ಟವಾದ ಮಾತುಗಳಲ್ಲಿ ಕೇಳಿದ್ದ.

ಆದರೆ ಸ್ತ್ರೊರೊಷೆಂಕೊ ಮಾತ್ರ ಸಾವಧಾನವಾಗಿ ಮಿಾನುಗಳನ್ನು ಎಣಿಸಿ ಕಿಮಟಕಟ್ಟಿದ್ದ. ಹನ್ನೆರಡು ಕೊಪೆಕ್ಕುಗಳ ತಾಮ್ರದ ನಾಣ್ಯಗಳನ್ನು ಅಜ್ಜನ ಕೈಯಲ್ಲಿ ಇಟ್ಟು "ಇಲ್ಲಿಗೆ ಲೆಖ್ಖ ಸಮನಾಯಿತು" ಎಂದು ಸಂಗ್ರಹವಾಗಿ ಹೇಳಿದಳು.

ನಿಷ್ಪ್ರಯೋಜಕವಾದ ಕೋಪದಿಂದ ಉರಿಯುತ್ತ ಅಜ್ಜ ಆ ನಾಣ್ಯಗಳನ್ನು ತೆಗೆದುಕೊಂಡು ಅಲ್ಲಿಂದ ನೇರವಾಗಿ ಮದ್ಯದ ಅಂಗಡಿಗೆ ಹೋದ. ಅಲ್ಲಿ ಅವನು ಒಂದು ಸೀಸೆ ವೋಡ್ಕ ಕೊಂಡು ಕೊಂಡ. ಸೀಸೆಯ ಬಿರಡೆಗೆ ಹಾಕಿದ್ದ ಮೇಣವನ್ನು ಅಲ್ಲಿಯೇ ಇದ್ದ ಜಾಲಿ ಮರಕ್ಕೆ ಮೊಳೆ ಹೊಡೆದ ತುರಿಯುವ ಮಣೆಗೆ ಉಜ್ಜಿದ. ನಡುಗುತ್ತಿದ್ದ ಕೈಗಳಿಂದ ಕಾಗದ ಅಂಟಿಸಿದ್ದ ಬಿರಡೆ ಯನ್ನು ಕಿತ್ತೆಸೆದ. ಒಂದೇ ಗುಟುಕಿಗೆ ಮದ್ಯವನ್ನು ಗಂಟಲಿಗೆ ಸುರಿದುಕೊಂಡ. ಸೀಸೆಯನ್ನು ಹಿಂದಕ್ಕೆ ಕೊಟ್ಟಿದ್ದರೆ ಒಂದು ಕೊಪೆಕ್ಕು ಸಿಗುತ್ತಿದ್ದಿತಾದರೂ ಅದನ್ನು ನೆಲಕ್ಕೆ ಅಪ್ಪಳಿಸಿ ಎಸೆದು ಒಡೆದು ಹಾಕಿದ.

ಅನಂತರ ಅಜ್ಜ ಮನೆಯ ಕಡೆಗೆ ತಿರುಗಿದ. ದಾರಿಯಲ್ಲಿ ಒಂದು ಕೊಪೆಕ್ ಕೊಟ್ಟು ಕುಂಜದ ಆಕಾರದ ಸಕ್ಕರೆ ಮಿಠಾಯಿಯನ್ನು ತನ್ನ ಮೊಮ್ಮಗನ ಸಲುವಾಗಿ ಕೊಂಡುಕೊಂಡ. ಅವನು ಗಾವ್ರಿಕನನ್ನು ಇನ್ನೂ ಚಿಕ್ಕ ಹುಡುಗನೆಂದೇ ಭಾವಿಸಿದ್ದ. ಜ್ವರದಿಂದ ನರಳುತ್ತಿದ್ದ ನಾವಿಕನಿಗಾಗಿ ಎರಡು ಸುರುಳಿ ಫರಂಗಿ ರೊಟ್ಟಿಯನ್ನು ಕೊಂಡುಕೊಂಡ.

ದಾರಿಯುದ್ದಕ್ಕೂ ಅವನ ಕೋಪ ಪುನಃ ಪುನಃ ಕೆರಳುತ್ತಿತ್ತು. ಅಲ್ಲಲ್ಲಿ ಆರೇಳು ಸಲ ನಿಂತು ನಿಂತು ಜೋರಾಗಿ ಉಗಿಯುತ್ತಿದ್ದ. ಪಾಪಿಷ್ಠೆ ಮದಾಂ ಸ್ತ್ರೊರೊಷೆಂಕೋಳ ಮುಖದ ಮೇಲೆ ಉಗಿಯುತ್ತಿದ್ದೆನೆಂದೇ ಅವನ ನಂಬಿಕೆಯಾಗಿತ್ತು.

ಮನೆಗೆ ಬಂದಬಳಿಕ "ದೇವರೇ ಕಾಪಾಡಪ್ಪ!" ಎಂದು ಅಜ್ಜ ಹೇಳಿದಾಗ ವೋಡ್ಕದ ಸಿಹಿ ವಾಸನೆಯಿಂದ ಕೂಡಿದ ಬಾಯುಸಿರು ಗಾವ್ರಿಕನ ಮುಖಕ್ಕೆ ಬಡಿಯಿತು. ಅಜ್ಜ ಗಾವ್ರಿಕನ ಕೈಗೆ ಮಿಠಾಯಿಯನ್ನು ಕೊಡುತ್ತ "ಮಾರುಕಟ್ಟೆಯಲ್ಲಿ ಯಾರನ್ನು ಬೇಕಾದರೂ ಕೇಳು. ಎಲ್ಲರೂ ನೋಡುತ್ತಿದ್ದ ಹಾಗೇ ಆ ದೂತಿಯ ಮುಖದ ಮೇಲೆ ಉಗಿದೆ. ಈ ಮಿಠಾಯಿ ತಿನ್ನು, ಎಷ್ಟು ರುಚಿಯಾಗಿದೆಯೋ!" ಎಂದು ನುಡಿದ.

ಆಗ ಆ ಮುದುಕನಿಗೆ ನಾವಿಕನ ಜ್ಞಾಪಕವಾಯಿತು. ತಾನು ತಂದಿದ್ದ ಫರಂಗಿ ರೊಟ್ಟಿ ಯನ್ನು ಅವನ ಕೈಗೆ ಕೊಡಲು ತವಕಗೊಂಡ. "ಅದು ಹಾಗಿರಲಿ ಅಜ್ಜ, ಅವನಿಗೆ ನಿದ್ದೆ ಬಂದಿದೆ. ಎಚ್ಚರವಾದಮೇಲೆ ಕೊಡೋಣ" ಎಂದ ಗಾವ್ರಿಕ್.

ಅಜ್ಜ ಪರಂಗಿ ರೊಟ್ಟಿಯನ್ನು ನಾವಿಕನ ತಲೆದಿಂಬಿನ ಹತ್ತಿರ ಎಚ್ಚರಿಕೆಯಿಂದ ಇಟ್ಟ. ಆ ಮೇಲೆ ಪಿಸುಮಾತಿನಲ್ಲಿ "ಶ್‌ಷ್, ಶ್‌ಷ್! ಅವನು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಲಿ. ಎದ್ದಮೇಲೆ ತಿನ್ನುತ್ತಾನೆ. ರೈಹಿಟ್ಟಿನ ರೊಟ್ಟಿಯನ್ನು ಆವನು ತಿನ್ನಲಾರ. ಅವನಿಗೆ ಈಗ ಜೀರ್ಣ ಶಕ್ತಿ ಅಷ್ಟಾಗಿ ಇರುವುದಿಲ್ಲ. ಫರಂಗಿ ರೊಟ್ಟಿ ಅವನಿಗೆ ತಿನ್ನುವುದಕ್ಕೆ ಮೆತ್ತಗಿರುತ್ತೆ." ಎಂದು ಹೇಳಿದ.

ಮುದುಕ ಅಕ್ಕರೆಯಿಂದ ಫರಂಗಿ ರೊಟ್ಟಿಯ ಕಡೆಗೆ ಒಂದು ಬಾರಿಯೂ, ಕಾಹಿಲೆಯ ಕಡೆಗೆ ಒಂದು ಬಾರಿಯೂ ದೃಷ್ಟಿಯನ್ನು ಬೀರಿ ತಲೆಯನ್ನು ಅಲ್ಲಾಡಿಸಿದ. ಬಳಿಕ ಮೃದು ಧ್ವನಿಯಲ್ಲಿ ಹೇಳಿದ: "ಆಹಾ ಎಷ್ಟು ಶಾಂತವಾಗಿ ನಿದ್ದೆ ಮಾಡುತ್ತಿದ್ದಾನೆ! ಅಯ್ಯೋ ಪ ನೀನು ಒಳ್ಳೆ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದೀಯಲ್ಲ ನಾವಿಕ !" ಅನಂತರ ಗುಡಿಸಿಲಿನ ಮೂಲೆ ತನ್ನ ಅಂಗಿಯನ್ನೇ ನೆಲದ ಮೇಲೆ ಹಾಸಿಕೊಂಡು ಅದರ ಮೇಲೆ ಮಲಗಿದ. ಗಾವ್ರಿಕ್ ಹೊ ಹೋಗಿ ಸುತ್ತ ನೋಡಿದ. ಬಾಗಿಲನ್ನು ಭದ್ರವಾಗಿ ಹಾಕಿಕೊಂಡ. ಒಂದು ನಿಮಿಷವ ವ್ಯರ್ಥಮಾಡದೆ ಕಾರ್ಖಾನೆ ಬಳಿಯ ಉಪನಗರದಲ್ಲಿ ವಾಸಿಸುತ್ತಿದ್ದ ತನ್ನ ಅಣ್ಣ ಟೆರೆಂಟಿಯ ನೋಡಲು ಹೋಗಬೇಕೆಂದು ನಿಶ್ಚಯಿಸಿದ. ನಾವಿಕ ಬಡಬಡಿಸುತ್ತಿದ್ದಾಗ 'ಸಮಿತಿ' ಎ ಪದ ಅವನ ಬಾಯಿಂದ ಹೊರಬಿದ್ದಿತ್ತು. ಅದನ್ನು ಕೇಳಿದಾಗಿನಿಂದ ಆತನ ಮನಸ್ಸಿನ ಆಲೋಚನೆಯು ದೃಢ ನಿರ್ಧಾರದ ಸ್ವರೂಪವನ್ನು ಪಡೆಯುತ್ತ ಬಂದಿತ್ತು. ಈ ಪದದ ಅ ವೇನೆಂದು ಗಾವ್ರಿಕನಿಗೆ ಸರಿಯಾಗಿ ಗೊತ್ತಿರಲಿಲ್ಲ. ಆದರೆ ಟೆರೆಂಟಿ ಮಾತಾಡುವ ಸಮಯ ಒಂದು ಸಲ ಆ ಪದವನ್ನುಪಯೋಗಿಸಿದ್ದನ್ನು ಗಾವ್ರಿಕ್ ಕೇಳಿದ್ದ.

೨೦. ಬೆಳಗ್ಗೆ

ಪೇತ್ಯ ಬೆಳಗ್ಗೆ ಎದ್ದು ನೋಡುತ್ತಾನೆ ಸುತ್ತ ಮೇಜು ಕುರ್ಚಿ ಮೊದಲಾದ ಮರದ ಸಾಮ ಗಳು ತುಂಬಿವೆ, ಗೋಡೆಗಳಿಗೆ ಕಾಗದವನ್ನು ಅಂಟಿಸಿದೆ. ಅದೊಂದು ಪಟ್ಟಣದ ಮನೆಯ ಕೋ ಬೇಸಗೆಯ ರಜದಲ್ಲಿ ಇದೆಲ್ಲ ಅವನ ಮನಸ್ಸಿನಿಂದ ಜಾರಿಹೋಗಿದ್ದಿತು. ಕಿಟಕಿಯ ಬಾಗಿ ಸಂದಿಯೊಂದರಿಂದ ಬಿಸಿಲು ಕೋಲೊಂದು ಕೊಠಡಿಯೊಳಕ್ಕೆ ಹಾದು ಬಂದಿದ್ದಿತು. ಮೇಲಿ ಕೆಳಕ್ಕೆ ಇಳಿಜಾರಾಗಿ ಕಂಬಿಯಂತೆ ಬಿಸಿಲುಕೋಲು ಹೊಳೆಯುತ್ತಿದ್ದಿತು. ಬಿಸಿಲುಕೋಲಿ ಧೂಳಿನ ಕಣಗಳು, ಸಣ್ಣಪುಟ್ಟ ಕೂದಲಿನ ತುಂಡುಗಳು, ದಾರದ ಸಣ್ಣಚೂರುಗಳು ಚಲಿಸು ವಂತೆ ಕಾಣುತ್ತಿದ್ದುವು. ಆಗ ಅದು ಪಾರದರ್ಶಕವಾದ ಗಾಜಿನ ಒಂದು ಗೋಡೆಯಂತೆ ಸುತ್ತಿತ್ತು.

ಶರತ್ಕಾಲದ ದೊಡ್ಡ ನೊಣವೊಂದು ಬಿಸಿಲುಕೋಲಿನ ಮೂಲಕ ಹಾದುಹೋಯಿತು. ಅದು ದೀಪದಿಂದ ಬೆಳಗಿದಂತೆ ಕಂಡಿತು; ಆ ಬಳಿಕ ಪುನಃ ತನ್ನ ಮೊದಲಿನ ರೂಪದಿಂದ ಸ್ಸಿಗೆ ಬೇಸರವನ್ನುಂಟು ಮಾಡಿತು.

ಬೇಸಗೆಯ ನಿವಾಸದಲ್ಲಿ ಮಲಗಿದ್ದಾಗ ಬಾತುಗಳ ಕ್ವಾಕ್ ಕ್ವಾಕ್ ಶಬ್ದ, ಮನೆಯ ಕ ಆಗತಾನೆ ಮೊಟ್ಟೆಯಿಟ್ಟ ಕೋಳಿಯ ಅರಚುವಿಕೆ, ತುರ್ಕಿ ಕೋಳಿಗಳ ಕೂಗುವಿಕೆ ಚಿರಪರಿಚಿತವಾಗಿದ್ದಂತೆ ಕೇಳಿಬರುತ್ತಿತ್ತು. ಅದೊಂದೂ ಇಲ್ಲಿ ಇಲ್ಲ. ಬೇಸಗೆಯ ನಿವಾ ಮಲಗುವ ಕೊಠಡಿಯ ಕಿಟಕಿಯೊಳಗಡೆಗೆ ಉಪ್ಪುನೇರಳೆ ಗಿಡದ ರೆಂಬೆ ಬಗ್ಗಿತ್ತು. ಮೇಲೆ ಒಂದು ಗುಬ್ಬಿ ಕುಳಿತು ತೂಗಾಡುತ್ತ ಕಿಚುಗುಟ್ಟುತ್ತಿತ್ತು. ಇಲ್ಲಿ ಅದರ ರಮ್ಯವಾ ದನಿಯನ್ನು ಕೇಳುವಂತೆಯೂ ಇರಲಿಲ್ಲ, ಅದನ್ನು ನೋಡುವಂತೆಯೂ ಇರಲಿಲ್ಲ.

ಒಳಹೊರಗುಗಳಿಂದ ಕೇಳಿಬರುತ್ತಿದ್ದ ಶಬ್ದಗಳು ನಗರದಲ್ಲಿ ಸುಪರಿಚಿತವಾದಂಥ

ಗದ್ದಲಗಳಾಗಿದ್ದವು. ಕುರ್ಚಿಗಳನ್ನು ಎತ್ತಿಡುತ್ತಿದ್ದ ಶಬ್ದ ಅಡಿಗೆ ಮನೆಯಿಂದ ಕೇಳಿಬರುತ್ತಿತ್ತು. ನೀರಿನಲ್ಲಿ ಗಾಜಿನ ತಟ್ಟೆಗಳನ್ನು ತೊಳೆಯುತ್ತಿದ್ದಾಗ ಗಾಜಿನ ಪಾತ್ರೆ ಹಾಡುತ್ತಿದೆಯೋ ಎನ್ನಿಸುತ್ತಿತ್ತು. ನಗರ ನಿವಾಸಿಗಳಿಗೆ ಸ್ವಾಭಾವಿಕವಾದ ಗಡಸುದನಿಯ ಮಾತುಗಳು ಕಿವಿಯಮೇಲೆ ಹೊಡೆದಂತೆ ಕೇಳಿಬರುತ್ತಿದ್ದುವು. ಅದು ಅವನ ತಂದೆಯ ಧ್ವನಿಯೇ ಆಗಿತ್ತೆಂಬುದರಲ್ಲಿ ಸಂಶಯ ಇರಲಿಲ್ಲ. ವಿದ್ಯುತ್ ಘಂಟೆಯ ಶಬ್ದವು ಹಜಾರವನ್ನು ತುಂಬುತ್ತಿದ್ದಿತು. ಒಂದುಸಲ ಮುಂದಿನ ಬಾಗಿಲು, ಇನ್ನೊಂದುಸಲ ಅಡಿಗೆಮನೆಯ ಬಾಗಿಲು ಹೀಗೆ ಒಂದಾದಮೇಲೊಂದರಂತೆ ಬಾಗಿಲುಗಳನ್ನು ಬಡಿದ ಶಬ್ದ ಕಿವಿಯ ಮೇಲೆ ಬೀಳುತ್ತಿತ್ತು. ಆಯಾ ಶಬ್ದದಿಂದ ಅದು ಯಾವ ಬಾಗಿಲು ಎನ್ನುವುದು ಈಗ ಪೇತ್ಯನ ಸ್ಮರಣೆಗೆ ಬರಲಾರಂಭಿಸಿತ್ತು.

ಬೀದಿಯಲ್ಲಿ ಸಂಚಾರಿವ್ಯಾಪಾರಿಗಳು ರಾಗರಾಗವಾಗಿ ತಮ್ಮ ಸರಕುಗಳ ಗುಣಗಾನ ಮಾಡುತ್ತ ಸಾರಿಕೊಂಡು ಹೋಗುತ್ತಿದ್ದರು. ಅವರ ಆ ನಾದ ಅಂಗಳದ ಕಡೆಗಿದ್ದ ಕೊಠಡಿಯ ಕಿಟಕಿಯ ಮೂಲಕ ಮನೆಯೊಳಕ್ಕೆ ಧಾವಿಸಿ ಬಂದು ತಮ್ಮ ಪರಿಚಯವನ್ನು ಮಾಡಿಕೊಡುತ್ತಿದ್ದಿತು. 'ಅದು ಯಾರ ಕೊಠಡಿ? ಚಿಕ್ಕಮ್ಮ ತಾತ್ಯಾನಳ ಕೊಠಡಿಯಲ್ಲವೆ!' ಎಂದು ಆ ಕೊಠಡಿಯ ಇರುವಿಕೆಯನ್ನು ಜ್ಞಾಪಕಮಾಡಿಕೊಂಡ ಗಾವ್ರಿಕ್. ಒಂದುಕ್ಷಣವಾದರೂ ಆ ನೂರಿಗೆಯವರ ರಾಗಾಲಾಪನೆ ನಿಲ್ಲಬೇಕಲ್ಲ! ಅಂಗಳದ ರಂಗವನ್ನಲಂಕರಿಸುತ್ತಿದ್ದ ಈ ಸಂಚಾರಿ ಕಲೆಗಾರರು ತಮ್ಮ ಪಲ್ಲವಿಯನ್ನು ಹಾಡುತ್ತ ಹಾಡುತ್ತ ಒಬ್ಬರ ಹಿಂದೆ ಒಬ್ಬರು ಬರುತ್ತಲೇ ಇದ್ದರು.

"ಇದ್ದಿಲೋ.......ಇದ್ದಿಲೋ......" ಬಹು ಹಿಂದಿನ ತಮ್ಮ ನಿಶ್ಚಿಂತ ಜೀವನದ ವಿಜಯೋತ್ಸಾಹದ ದಿನಗಳನ್ನು ಜ್ಞಾಪಿಸಿಕೊಂಡು ಅಳುವವರಂತೆ ದುಃಖಪೂರಿತವಾದ ಕಂಠದಿಂದ ಒಬ್ಬ ಹಾಡಿಕೊಂಡು ಬಂದ.

"ಇದ್ದಿಲೋ.....ಇದ್ದಿಲೋ...."

ಇದ್ದಿಲಿನವನ ಸ್ಥಾನವನ್ನು ಸಾಣೆಹಿಡಿಯುವವನು ಆಕ್ರಮಿಸಿಕೊಂಡ.

"ಕತ್ತರಿ ಚಾಕೂ ಸಾಣೆ ಹಿಡಿಯೋದೂ! ಕತ್ತರಿ ಚಾಕೂ ಸಾಣೆ ಹಿಡಿಯೋದೂ!" ಮಂದ್ರ ಸ್ವರದಲ್ಲಿ ಕೂಗು ಹಾಕಿದ ಸಾಣೆ ಹಿಡಿಯುವವನು.

ಸಾಣೆಯವನಾದ ಮೇಲೆ ಹಳೆಪಾತ್ರೆ ಸರಿಮಾಡುವವನು ಮುಖಮಲ್ಲಿನಂಥ ಮಧ್ಯಮ ಸ್ವರದಲ್ಲಿ ತನ್ನ ಗಂಡಸುತನವನ್ನು ಮೆರೆಯುತ್ತ ಬಂದ.

"ಕೊಳದಪ್ಪಲೆ, ಚೊಂಬು, ಬಿಂದಿಗೆ ಸರಿಮಾಡೋದು!"

ಇದಾದ ಬಳಿಕ ಹಣ್ಣುಮಾರುವವಳು ಆ ರಂಗಸ್ಥಲವನ್ನು ಪ್ರವೇಶಿಸಿದಳು. ಅವಳ ಕಂಠ ಗಾಗೆ ಕಂಠ. ನಗರದ ಬೆಳಗಿನ ಬಿಸಿಯುಗಾಳಿ ಅವಳ ಬುರ್ರಿಸ್ಸುತ್ತಿದ್ದ ರಾಗರಾಗವಾದ ಮಾತುಗಳನ್ನು ಪ್ರತಿಧ್ವನಿಸಿದುವು.

"ಸೇಬಿನಹಣ್ಣು, ಟೊಮಾಟೋ ಹಣ್ಣು, ಪೇರುಹಣ್ಣೂ!"

ಹಳೆ ನೀರಾಜಿಯವನೊಬ್ಬನು ಅಳುಬುರುಕಲು ದ್ವಿಪದಿಯನ್ನು ಎಳೆಯುತ್ತ ತನ್ನ ಪಾತ್ರವನ್ನು ನಿರ್ವಹಿಸಿದ.

"ಹಳೇ ನೀರಾಜಿ ಕಂಬೀಯೇ!"

ಈ ಗಾನಗೋಷ್ಠಿಗೆ ತಿಲಕಪ್ರಾಯವಾಗಿ ನೇಪಲ್ಸ್‌ನ ಲಘುಗೀತವೊಂದನ್ನು ಹಾಡ
ಕೀರಲುದನಿಯ ಬೀದಿಯ ಗಾಯಕನೊಬ್ಬ ಬಂದು ಸೇರಿದ, ಅವನು ತನ್ನ ಹಾಡಿಗೆ ಹಿಮ್ಮೆ
ವಾಗಿ ಆರ್ಗನ್ ವಾದ್ಯವನ್ನು ಬಾರಿಸುತ್ತಿದ್ದ:

ಗಾಳಿಯೊಳು ಉಸಿರಿಡುತ ಸುಯ್ಯುತಿವೆ ಪರ್ಣಗಳು
ಶೋಕವನು ದನಿಗೈಯುತಿದೆ ಕೋಗಿಲೆಯ ಕೊರಳು!
ಎನ್ನೆದೆಯೊಳುದಿಸಿದ್ದಾ ಒಲುಮೆ ನಾಚಿತ್ತಂದು,
ಆದುವೆ ಬೆಡಗಿನ ಬಲೆಯ ಬೀಸಿ ನಿಂದಿತ್ತಂದು.
ಹಾಡು ಹಾಡೆಲೆ ಕಪೋತವೆ
ತೆರಳಿದೆನ್ನೊಲವಿನ ಕಥೆಯ . . .

"ಇದ್ದಿಲೋ . . . ಇದ್ದಿಲೋ . . ." ಬೀದಿ ಗಾಯಕನು ಹೊರಟು ಹೋದಮೇಲೆ ಪು
ಇದ್ದಿಲು ಮಾರುವವನು ಬಂದ. ಪುನಃ ಆ ಪಾತ್ರಧಾರಿಗಳೆಲ್ಲ ತಮ್ಮ ತಮ್ಮ ಹಾಡನ್ನು ಹಾಡ
ಬಂದರು.

ಈ ನಡುವೆ ಕುದುರೆಗಾಡಿಗಳ ಚಕ್ರದ ಕಟಕಟ ಶಬ್ದ, ರೈಲುಗಳ ಭರ ಭರ ಸದ
ಸೈನ್ಯದ ತುತ್ತೂರಿಯ ಮೊಳಗು ಬೀದಿಯ ಕಡೆಯಿಂದ ಕೇಳಬಂದಿತು.

ಈ ಎಡಬಿಡದ ಕಿವಿಯಿಡಿಯುವ ಗದ್ದಲದೊಳಕ್ಕೆ ಹೊಸದೊಂದು ಶಬ್ದ ಬಂದು ಸೆ
ಕೊಂಡಿತು. ಅದು ಮೊದಲು ಅಸ್ಪಷ್ಟವಾಗಿದ್ದುದು ಕ್ರಮೇಣ ಟಿಕ್ ಟಿಕ್ ಎಂದು ಸ್ಪಷ್ಟವ
ಕೇಳಿಸಲಾರಂಭಿಸಿತು. ಆ ಶಬ್ದ ಒಂದಾದಮೇಲೆ ಒಂದರಂತೆ ಬಹು ಕ್ರಮವಾಗಿ ಏನನ್ನೋ ಎಣಿ
ವಂತೆ ಇದ್ದಿತು. ಅದೇನಿದ್ದಿರಬಹುದು? ಏಕೆ, ಅದು ಗಡಿಯಾರವಲ್ಲವೇ. ತಮ್ಮ ಊ
ಮನೆಯ ಗಡಿಯಾರ. ಮದುವೆಯಾಗುವುದಕ್ಕೆ ಮೊದಲು ಅಜ್ಜ ಅಜ್ಜಿಯನ್ನು ಪ್ರೀತಿಸುತ್ತಿದಾ
ಅಜ್ಜನಿಗೆ ಲಾಟರಿಯಲ್ಲಿ ಬಂದಿತ್ತಂತೆ ಅದು. ಗಡಿಯಾರದ ಪೂರ್ವ ಚರಿತ್ರೆ ಇದು.

ಇಂಥವುಗಳನ್ನೆಲ್ಲ ಮರೆಯುವುದೆಂದರೆ ಹೇಗೆ! ಅಗೊ ಗಂಟೆ ಹೊಡೆಯುತ್ತಿದೆ. ಅದು
ಯಾರವೆಂಬುದರಲ್ಲಿ ಇನ್ನು ಸಂಶಯವೇ ಇಲ್ಲ. ಗಂಟೆಯನ್ನು ಎಣಿಸಬೇಕೆಂದು ಪೇತ್ಯ ಪ್ರಯ
ಪಿದ. ಆದರೆ ಲೆಕ್ಕ ತಪ್ಪಿಹೋಯಿತು. ಹತ್ತೊ ಹನ್ನೊಂದೋ ಹೊಡೆದಿರಬೇಕೆಂದು ಊಹಿ
ಎಷ್ಟು ಹೊತ್ತಾಗಿಹೋಗಿದೆ ಎಂದುಕೊಂಡ ಅವನು.

ರಾಮರಾಮ! ಹಳ್ಳಿಯಲ್ಲಿದ್ದಾಗ ಬೆಳಗ್ಗೆ ಏಳು ಗಂಟೆಗೆ ಪೇತ್ಯ ಏಳುತ್ತಿದ್ದ. ಪೆ
ಹಾಸಿಗೆಯಿಂದ ನೆಗೆದುನಿಂತ. ಬಟ್ಟೆಯನ್ನು ಹಾಕಿಕೊಂಡು ಸರಸರನೆ ಬಚ್ಚಲುಮನೆಗೆ
ಹೋಗಿ ಮುಖ ತೊಳೆದುಕೊಂಡು ಬಂದ. ಅಲ್ಲಿಂದ ನೇರವಾಗಿ ಊಟದ ಮನೆಗೆ ಹೊ
ಕಿಟಕಿಯ ಕಂಬಿಗಳ ಮೂಲಕ ಹಾದು ಬಂದು ನೆಲದ ಮೇಲೆ ಬಿದ್ದಿದ್ದ ಬಿಸಿಲನ್ನು ನೋ
ಲಾರದೆ ಅರ್ಧ ಕಣ್ಣು ಮುಚ್ಚಿಕೊಂಡ.

ಪೇತ್ಯನನ್ನು ಕಂಡು ಚಿಕ್ಕಮ್ಮ ತಲೆಯಲ್ಲಾಡಿಸುತ್ತ ಆಶ್ಚರ್ಯದಿಂದ ಕೂಗಿದಳು: "ನಿ
ನಾಚಿಕೆ ಇಲ್ಲ! ಎಷ್ಟು ಹೊತ್ತಿಗೆ ಏಳೋದು?" ಬಳಿಕ ತನ್ನ ಸೋದರಳಿಯ ಎಷ್ಟು ಎತ್ತರವ
ಬೆಳೆದುಬಿಟ್ಟಿದ್ದಾನೆ ಎಂಬ ಸಂತೋಷದಿಂದ ಅವಳು ಮುಗುಳು ನಗುತ್ತಿದ್ದಳು. "ಆ
ಹನ್ನೊಂದು ಗಂಟೆ. ಬೇಕೂ ಎಂತಲೇ ಏಳಿಸಲಿಲ್ಲ. ನೀನು ಎಷ್ಟು ಹೊತ್ತಿಗೆ ಏಳುತ್ತೀ

ನೋಡೋಣ ಅಂತ ಇದ್ದೆ. ಒಳ್ಳೆ ಪೋರನಾಗಿದ್ದಿ. ಏನೋ ದೀರ್ಘಪ್ರಯಾಣದ ಆಯಾಸ ದಿಂದ ಎದ್ದಿಲ್ಲ ಎಂದು ಸುಮ್ಮನೆ ಇದ್ದೆ; ಇವತ್ತೊಂದು ದಿವಸ. ನಾಳೆಯಿಂದ ಸೋಮಾರಿಯಾಗ ಬೇಡ ಕಂಡೆಯಾ. ಕೂತುಕೋ. ಹಾಲು ಬೆರೆಸಿ ಕೊಡಲೋ, ಹಾಗೇ ಕೊಡಲೋ. ಯಾವು ದಾದರೂ ಲೋಟ ಆದರೂ ಆಗುತ್ತದೆಯೋ, ಇಲ್ಲ ನಿನ್ನ ಬಟ್ಟಲಲ್ಲೇ ಕೊಡಲೊ! ಬೇಗ ಹೇಳು." ಎಂದು ಕೇಳಿದಳು ಚಿಕ್ಕಮ್ಮ.

ನಿಜ, ಇದನ್ನೆಲ್ಲ ಅವನು ಹೇಗೆ ಮರೆತಿದ್ದ! ಅವನ ಬಟ್ಟಲು! ಪೇತ್ಯ ಪ್ರತಿದಿನ ಕುಡಿಯಲು ಉಪಯೋಗಿಸುತ್ತಿದ್ದ ಪಿಂಗಾಣಿ ಬಟ್ಟಲು. ಅದರ ಮೇಲೆ 'ಮರೆಯ ಬೇಡವೆನ್ನ' ಎಂಬ ಹೂವಿನ ಗಿಡದ ಚಿತ್ರವಿತ್ತು ಮತ್ತು ಚಿನ್ನದ ಅಕ್ಷರದಲ್ಲಿ "ಸಂತೋಷದ ಹುಟ್ಟಿದ ಹಬ್ಬ" ಎಂದು ಅದರ ಮೇಲೆ ಬರೆದಿತ್ತು, ಅದನ್ನು ದುನ್ಯ ಕಳೆದ ವರ್ಷದ ಹುಟ್ಟಿದ ಹಬ್ಬದಲ್ಲಿ ಪೇತ್ಯನಿಗೆ ಬಹುಮಾನವಾಗಿ ಕೊಟ್ಟಿದ್ದಳು.

ಅಗೋ ಅಲ್ಲಿ ನೋಡು, ಅದು ಸಮೋವರ್, ಟೀ ನೀರನ್ನು ಕಾಯಿಸುವ ಪಾತ್ರೆ. ಅದರ ಹಿಡಿಯ ಮೇಲೆ ಸೀ ರೊಟ್ಟಿಗಳನ್ನು ಬಿಸಿಮಾಡಲು ಇಡಲಾಗಿತ್ತು. ಪೇರುಹಣ್ಣಿನ ಆಕಾರದ ಬಿಳಿಯ ಲೋಹದ ಬಟ್ಟಲಿನಲ್ಲಿ ಸಕ್ಕರೆಯನ್ನು ತುಂಬಿಟ್ಟಿತ್ತು. ಕೊಕ್ಕರೆಯಾಕಾರದ ಸಕ್ಕರೆ ಚಮಚ ಅದರಲ್ಲಿ ತಲೆಯೆತ್ತಿ ನಿಂತಿತ್ತು.

ನೇತಾಡುತ್ತಿದ್ದ ಲ್ಯಾಂಪಿನ ಕೆಳಭಾಗದಲ್ಲಿ ಒಂದು ಮರದ ಗಂಟೆಯನ್ನು ದಾರಕ್ಕೆ ಕಟ್ಟಿತ್ತು ಬೇಕಾದ ಎತ್ತರಕ್ಕೆ ಲ್ಯಾಂಪನ್ನು ಏರಿಸಿ ಇಳಿಸಲನುಕೂಲಿಸುವಂತೆ ಕಟ್ಟಿದ್ದ ಸಮತೂಕವು ಲ್ಯಾಂಪಿನ ಷೇಡಿನ ಮೇಲುಭಾಗದಲ್ಲಿ ಇಳಿಬಿದ್ದಿತ್ತು.

ಅಗೋ ತಂದೆಯ ಕೈಯ್ಯಲ್ಲಿ ಅದೇನು? ವರ್ತಮಾನ ಪತ್ರಿಕೆ! ಅಲ್ಲ, ತಂದೆ ರಜಾಕಾಲದಲ್ಲಿ ಇದನ್ನು ಹೇಗೆ ಮರೆತುಬಿಟ್ಟಿದ್ದರು! ಅದು **'ಒಡೆಸ್ಕಿ ಲಿಸ್ತಾಕ್'** ಎಂಬ ಒಡೆಸ್ಸ ನಗರ ಪತ್ರಿಕೆಯಾಗಿತ್ತು. ಅದರ ಮೇಲುಗಡೆ ಹೊಗೆಯಾಡುವ ರೈಲುಯಂತ್ರದ ಚಿತ್ರವನ್ನು ಮುದ್ರಿಸ ಲಾಗಿತ್ತು. ಅದರಡಿಯಲ್ಲಿ ರೈಲುಗಳ ವೇಳಾಪಟ್ಟಿಯನ್ನು ಕೊಡಲಾಗಿತ್ತು. ಹಡಗಿನ ವೇಳಾ ಪಟ್ಟಿಯ ಮೇಲುಗಡೆಯಲ್ಲಿ ಒಂದು ಹಡಗಿನ ಚಿತ್ರವಿತ್ತು. (ಅಲ್ಲೇ ಜಾಹಿರಾತುಗಳ ನಡುವೆ ಕೇವಲ ನಡುಚಡ್ಡಿ ಧರಿಸಿದ ತರುಣಿಯ ಚಿತ್ರ ಬೇರೆ.) ಇಗೋ ಇಲ್ಲಿ 'ನೀವ' ಮತ್ತು 'ಜದುಶೆವ್ನೋಯೆ ಸ್ಲೋವೋ' ಗಳ ಚಿತ್ರ. ಒಂದು ಬೇಸಿಗೆಯಲ್ಲಿ ಎಷ್ಟೊಂದು ಪತ್ರಿಕೆಗಳ ರಾಶಿ ಬಿದ್ದಿತ್ತು.

ಒಂದು ಮಾತಿನಲ್ಲಿ ಹೇಳುವುದಾದರೆ ಯಾವುದನ್ನು ಮೊದಲು ಗಮನಿಸಬೇಕು, ಯಾವುದನ್ನು ಬಿಡಬೇಕು ಎಂಬ ತಾರತಮ್ಯ ಜ್ಞಾನಕ್ಕೆ ಅವಕಾಶವಿಲ್ಲದಷ್ಟು ಅಪೂರ್ವ ವಿಚಿತ್ರ ವಸ್ತುಗಳು ಅವನ ಸುತ್ತ ನಿಂತು ಅವನ ಗಮನವನ್ನು ಸೆಳೆದಿದ್ದುವು.

ಪಾವಲಿಕ್ ಮುಂಜಾನೆಯೇ ಎದ್ದಿದ್ದನಾದುದರಿಂದ ಇಷ್ಟು ಹೊತ್ತಿಗಾಗಲೆ ಅವನು ನಗರದ ಹೊಸ ಆವರಣದ ಪರಿಚಯ ಮಾಡಿಕೊಂಡು ಅದಕ್ಕೆ ಹೊಂದಿಕೊಂಡಿದ್ದ. ಇಷ್ಟೋ ಹೊತ್ತಿಗೆ ಮುಂಚೆ ಅವನು ತನ್ನ ಬೆಳಗಿನ ಹಾಲನ್ನು ಕುಡಿದಿದ್ದ. ಕುರ್ಚಿಗಳನ್ನು ಎಳೆದು ತಂದು ನಿಲ್ಲಿಸಿ ಅದನ್ನೇ ಒಂದು ಗಾಡಿಯೆಂದು ಕರೆಯುತ್ತ ಅದಕ್ಕೆ ಕುಡ್ಲಾಲ್ಟಕನನ್ನು ಕಟ್ಟಿದ್ದ. ಆ ಆಟದ ಕುದುರೆ ಕುರ್ಚಿಗಳ ಗಾಡಿಯನ್ನು ಎಳೆಯಬೇಕಾಗಿತ್ತು. ಆಗಿಂದಾಗ್ಗೆ ಯಾವುದಕ್ಕಾಗಿಯೋ ಪರದಾಡು

ತ್ತಿರುವವನಂತೆ ಪಾವಲಿಕ್ ಕೊಠಡಿಯಿಂದ ಕೊಠಡಿಗೆ ಓಡುತ್ತಿದ್ದ. ಕಾಲ್ಪನಿಕ ಪ್ರಯಾಣಿಕರನ್ನು ತನ್ನ ಆಟದ ಗಾಡಿಗೆ ಆಹ್ವಾನಿಸಲು ಕಹಳೆಯನ್ನು ಊದುತ್ತಿದ್ದ.

ಪೇತ್ಯ ತಕ್ಷಣ ನೆಗೆದು ನಿಂತ. ಅವನಿಗೆ ಹಿಂದಿನದೆಲ್ಲ ಜ್ಞಾಪಕಕ್ಕೆ ಬಂದಿತ್ತು.

"ಚಿಕ್ಕಮ್ಮ, ಓಹ್, ನಿನ್ನೆ ನಿನಗೆ ಹೇಳುವುದಕ್ಕೇ ಆಗಲಿಲ್ಲ ನೋಡು. ಏನಾಯಿತು ಅಂತ? ನಾನು ಮನಸ್ಸಿನಲ್ಲಿ ಯೋಚನೆ ಕೂಡ ಮಾಡಲಾರೆ. ಆ ಕಥೇನ ಚಾಚೂ ಬಿಡದೆ ನಿನಗೆ ಹೇಳ್ತೀನಿ. ಲೋ ಪಾವಲಿಕ್ ಮಧ್ಯೆ ಏನಾದರೂ ತಂಟೆ ಮಾಡಿ ನೋಡು, ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ."

"ನನಗೆಲ್ಲ ತಿಳಿಯಿತು." ಚಿಕ್ಕಮ್ಮ ಹೇಳಿದಳು.

ಆಗ ಪೇತ್ಯನ ಮುಖ ಪೆಚ್ಚಾಯಿತು. ಆದರೂ ಬಿಡದೆ "ಕುದುರೆ ಗಾಡಿ ವಿಷಯ ನಿನಗೆ ಗೊತ್ತೋ?" ಎಂದು ಕೇಳಿದ.

"ಗೊತ್ತು."

"ಹಡಗಿನ ಮೇಲೆ ನಡೆದದ್ದು."

"ಅದೂ ಗೊತ್ತು."

"ಅವನು ಸಮುದ್ರಕ್ಕೆ ಹೇಗೆ ಹಾರಿದ ಅನ್ನೋದು ಗೊತ್ತಿಲ್ಲ ನಿನಗೆ."

"ಎಲ್ಲ ನನಗೆ ಗೊತ್ತಾಗಿದೆ."

"ಯಾರು ಹೇಳಿದ್ದು ನಿನಗೆ?"

"ನಿಮ್ಮ ತಂದೆ."

"ಥೂ, ಈ ಅಪ್ಪ ಎಲ್ಲವನ್ನೂ ಹೇಳ್ಬಿಟ್ಟಿದ್ದಾರೆ. ಅಪ್ಪ, ಅಪ್ಪ, ನಾನು ನಿನಗಿಂತ ಎಲ್ಲವನ್ನೂ ಚೆನ್ನಾಗಿ ಹೇಳುತ್ತೇನೆಂದು ಗೊತ್ತಿದ್ದರೂ ನೀನು ಯಾಕೆ ಹೇಳಿದೆ ಅಪ್ಪ? ಎಲ್ಲ ಹಾಳು ಮಾಡಿಬಟ್ಟೆ....." ಎಂದಾಗ ಪೇತ್ಯನಿಗೆ ಅಳುವೇ ಬಂದಿತ್ತು. ತಾನಾಗಲೇ ದೊಡ್ಡ ಹುಡುಗನೆಂಬುದನ್ನೂ ಮಾರನೆಯ ದಿವಸದಿಂದ ತಾನು ಸ್ಕೂಲಿಗೆ ಹೋಗಬೇಕಾಗಿರುವುದನ್ನೂ ಅವನು ಆ ಸಮಯದಲ್ಲಿ ಮರೆತುಬಿಟ್ಟಿದ್ದ.

"ಚಿಕ್ಕಮ್ಮ, ನಾನು ನಿನಗೆ ಎಲ್ಲವನ್ನೂ ಮೊದಲಿನಿಂದ ಕೊನೆಯವರೆಗೂ ಬಹಳ ಚೆನ್ನಾಗಿ ಹೇಳ್ತೀನಿ, ಕೇಳಿಬಿಡು" ಎಂದು ಪೇತ್ಯ ಚಿಕ್ಕಮ್ಮನನ್ನು ಅಂಗಲಾಚಿದ. ಆದರೆ ಚಿಕ್ಕಮ್ಮನ ಮೂಗು ಇದ್ದಕ್ಕಿದ್ದಂತೆ ಕೆಂಪಾಯಿತು. ಅವಳ ಕಣ್ಣುಗಳಲ್ಲಿ ನೀರು ತುಂಬಿತು. ಬೆರಳುಗಳಿಂದ ತನ್ನ ಕೆನ್ನೆಯನ್ನು ಒತ್ತಿಹಿಡಿದುಕೊಂಡಳು. "ದಮ್ಮಯ್ಯ ಬೇಡವಪ್ಪ" ಎಂದು ಗದ್ಗದಿತಳಾಗಿ ಹೇಳಿದಳು. "ಪುನಃ ನಾನು ಅದನ್ನು ಕೇಳಿ ಸಹಿಸಲಾರೆ. ಕ್ರಿಶ್ಚಿಯನರು ಎಂದು ಕರೆಸಿಕೊಳ್ಳುವ ಯಾರು ತಾನೆ ಒಬ್ಬರು ಇನ್ನೊಬ್ಬರಿಗೆ ಹಾಗೆ ಚಿತ್ರಹಿಂಸೆಯನ್ನು ಕೊಡಬಲ್ಲರು!" ದುಃಖವನ್ನು ತಡೆಯಲಾರದೆ ಪುಟ್ಟ ಕರವಸ್ತ್ರವನ್ನು ಕಣ್ಣಿಗೆ ಒತ್ತಿಕೊಳ್ಳುತ್ತ ಚಿಕ್ಕಮ್ಮ ಅಲ್ಲಿಂದ ಹೊರಟು ಹೋದಳು.

ಪೇತ್ಯ ಭಯಗೊಂಡವನಂತೆ ತಂದೆಯ ಕಡೆಗೆ ನೋಡಿದ. ತಂದೆ ಬಹು ಗಂಭೀರವಾಗಿ ಕಿಟಕಿಯಿಂದಾಚೆಗೆ ನೋಡುತ್ತಿದ್ದರು. ಅವರ ಕಣ್ಣುಗಳಲ್ಲಿಯೂ ಹನಿಯೂರಿದ್ದಂತೆ ಕಂಡು ಬಂದಿತು. ಪೇತ್ಯನಿಗೆ ಇದೇನೆಂಬುದರ ಅರಿವಾಗಲಿಲ್ಲ. ಆದರೆ ಹಿಂದಿನ ದಿವಸದ ನಾವಿಕನ

ಸಾಹಸದ ಕಥೆಯನ್ನು ಹೇಳಲು ಈ ಮನೆಯಲ್ಲಿ ತನಗೆ ಅವಕಾಶವಿಲ್ಲವೆಂಬುದನ್ನು ಪೇತ್ಯ ಸ್ಪಷ್ಟವಾಗಿ ಕಂಡುಕೊಂಡ.

ಟೀಯನ್ನು ಗಂಟಲಿಗೆ ಸುರಿದುಕೊಂಡು ತನ್ನ ಕಥೆ ಕೇಳುವ ಶ್ರೋತೃಗಳು ಯಾರಾದರೂ ಸಿಕ್ಕಾರೆ ಎಂದು ಅಂಗಳಕ್ಕೆ ಓಡಿದ.

ಮನೆಯ ಕಾವಲುಗಾರ ಈ ಕಥೆಯನ್ನು ಅಸಡ್ಡೆಯಿಂದ ನಿರ್ಲಕ್ಷಿಸಿದ. "ಏನದರಲ್ಲಿ ಆಶ್ಚರ್ಯ ?.ಇದಕ್ಕಿಂತ ಭಯಂಕರವಾದುದು ಎಷ್ಟೋ ನಡೆಯುತ್ತೆ." ಎಂದು ಅವನು ಟೀಕಿಸಿದ.

ಇನ್ನಾರಿಗಾದರೂ ಕಥೆ ಹೇಳೋಣವೆಂದರೆ ಅಲ್ಲಿ ಅಂಥ ಒಂದು ಪಿಳ್ಳೆಯೂ ಇರಲಿಲ್ಲ. ಅದೇ ಕಟ್ಟಡದ ಒಂದು ಕಡೆಯಲ್ಲಿ ವಾಸಿಸುತ್ತಿದ್ದ ಅಂಗಡಿಯವನ ಮಗ ನುಸ್ಯಕೊಗಾನ್ ತನ್ನ ಚಿಕ್ಕಪ್ಪನ್ನು ನೋಡಲು ಕುಯಾಲ್‌ನಿಟ್ಸ್ಕಿಬೇಗೆ ಹೋಗಿದ್ದ. ಪೊಲೋದ್ಯ ಡಿಬ್ನಿಕ ಕೂಡ ಅಲ್ಲಿರಲಿಲ್ಲ. ಉಳಿದ ಜತೆಯ ಹುಡುಗರು ಯಾರೂ ಹಳ್ಳಿಗಳಿಂದ ಹಿಂದಿರುಗಿರಲಿಲ್ಲ.

ಅದೇ ದಿವಸ ಬರುವೆನೆಂದು ದುನ್ಯಳೊಡನೆ ಗಾವ್ರಿಕ್ ಹೇಳಿ ಹೋಗಿದ್ದ. ಅವನ ಸುಳಿವೂ ಕೂಡ ಇರಲಿಲ್ಲ. ಹೌದು, ಕಥೆ ಹೇಳಿದರೆ ಗಾವ್ರಿಕನಿಗೆ ಹೇಳಬೇಕು. ಸಮುದ್ರದ ತೀರಕ್ಕೆ ಹೋದರೋ ? ಅಲ್ಲಿ ಗಾವ್ರಿಕ್ ಸಿಕ್ಕಿದರೂ ಸಿಕ್ಕಬಹುದು.

ಸಮುದ್ರ ತೀರಕ್ಕೆ ಪೇತ್ಯ ಒಬ್ಬನನ್ನೇ ಹೋಗಲು ಮನೆಯವರು ಬಿಡುತ್ತಿರಲಿಲ್ಲ. ಆದರೆ ಪೇತ್ಯನ ಮನಸ್ಸಿನ ಆಸೆ ಉತ್ಕಟವಾಯಿತು, ಅದನ್ನು ಮೀರುವುದು ಕಷ್ಟವಾಗಿತ್ತು.

ಜೇಬಿಗೆ ಕೈಗಳನ್ನು ತುರುಕಿಕೊಂಡು ಅಲ್ಲೇ ಅಂಗಳದಲ್ಲಿ ಕಿಟಕಿಯ ಎದುರಿಗೆ ಕಾಣುವಂತೆ ಉದಾಸೀನನಾಗಿ ನಡೆದಾಡಲಾರಂಭಿಸಿದ. ಯಾರಿಗೂ ಸಂಶಯ ಬರದಿರಲೆಂದು ಹಾಗೇ ಬೀದಿಗೆ ತಳ್ಳಾಯಿಸಿಕೊಂಡು ಹೋದ ಮನೆಯ ಮುಂದುಗಡೆ ಸ್ವಲ್ಪ ಹೊತ್ತು ಅಡ್ಡಾಡುತ್ತಿದ್ದು ರಸ್ತೆಯ ಮೂಲೆಗೆ ಹೋದೊಡನೆ ಕಾಲಿಗೆ ಬುದ್ಧಿ ಹೇಳಿದ.

ಬಿಸಿನೀರಿನ ಸ್ನಾನಗೃಹಗಳಿದ್ದ ಬೀದಿಯಲ್ಲಿ ಪೇತ್ಯ ಅರ್ಧ ದೂರ ಹೋಗಿರುವಷ್ಟರಲ್ಲಿ ಬರಿಗಾಲಿನಲ್ಲಿ ಎದುರುಗಡೆಯಿಂದ ಬರುತ್ತಿದ್ದ ಹುಡುಗನೊಬ್ಬನಿಗೆ ಡಿಕ್ಕಿ ಹೊಡೆದ. ಎಲಾ, ಇವನನ್ನು ಎಲ್ಲೋ ನೋಡಿದಂತಿದೆಯಲ್ಲ ಎಂದುಕೊಂಡ ಪೇತ್ಯ. ಯಾರಿವನು ?

ಓಹೋ, ಇವನೇ ಗಾವ್ರಿಕ್!

೨೧. ವಾಗ್ದಾನ

"ಗಾವ್ರಿಕ್!"

"ಪೇತ್ಯ! "

ಆಶ್ಚರ್ಯಭರಿತ ಸಂತೋಷದ ಒಂದೊಂದೇ ಮಾತುಗಳಿಂದ ಆ ನೆಚ್ಚಿನ ಗೆಳೆಯರು ಪರಸ್ಪರ ಸ್ವಾಗತಿಸಿದುದು ಹೀಗೆ. ಕುಶಲಪ್ರಶ್ನೆ ಮುಗಿಯಿತು. ಇಂಥ ಸಂದರ್ಭಗಳಲ್ಲಿ ಸ್ವಾಭಾವಿಕವಾಗಿ ಹುಡುಗಿಯರು ನಡೆದುಕೊಳ್ಳುವಂತೆ ಅವರು ಪರಸ್ಪರ ಬಿಗಿಯಪ್ಪಲಿಲ್ಲ, ಒಬ್ಬರ ಕೈಯ್ಯನ್ನೊಬ್ಬರು ಹಿಸುಕಲಿಲ್ಲ, ಒಬ್ಬರ ಕಣ್ಣಲ್ಲಿ ಮತ್ತೊಬ್ಬರು ಕಣ್ಣಿಟ್ಟು ನೋಡಲಿಲ್ಲ, ಆರೋಗ್ಯವನ್ನು ಕುರಿತು ಪ್ರಸ್ತಾಪಮಾಡಲಿಲ್ಲ, ಹರ್ಷೋದ್ಗಾರ ಮಾಡಲಿಲ್ಲ, ಸಡಗರ ಸಂಭ್ರಮಗಳನ್ನು

ಪ್ರದರ್ಶಿಸಲಿಲ್ಲ. ದೊಡ್ಡವರು ನಡೆಯುವಂತೆ, ಅದರಲ್ಲೂ ಕಪ್ಪುಸಮುದ್ರತೀರವಾಸಿಗಳಾದ ಜನರು ನಡೆಯುವಂತೆ, ಸ್ವಾಭಾವಿಕವಾಗಿ ವರ್ತಿಸಿದರು. ತಮ್ಮ ಮನಸ್ಸಿನ ಆನಂದಾಶ್ಚರ್ಯಗಳನ್ನು ಒಬ್ಬರು ಇನ್ನೊಬ್ಬರ ಹೆಸರುಗಳನ್ನು ಮಾತ್ರ ಉಚ್ಚರಿಸುವುದರ ಮೂಲಕ ಅಡಕವಾಗಿ ವ್ಯಕ್ತಪಡಿಸಿದರು. ಅನಂತರ ಹಿಂದಿನ ದಿನ ಕಂಡಿದ್ದ ಪರಿಚಿತರಂತೆ ಪ್ರಕೃತ ವಿಷಯಗಳ ಬಗ್ಗೆ ಸಂಭಾಷಣೆಗೆ ತೊಡಗಿದರು.

"ಎಲ್ಲಿಗೆ ಹೊರಟೆ ?"

"ಮರಳುದಂಡೆಗೆ. ನೀನೆಲ್ಲಿಗೆ ?"

"ಕಾರ್ಖಾನೆಯ ಬಳಿಯ ಉಪನಗರಕ್ಕೆ. ನಮ್ಮಣ್ಣನನ್ನು ನೋಡಬೇಕಾಗಿತ್ತು."

"ಯಾಕೆ ?"

"ಸ್ವಲ್ಪ ಕೆಲಸ ಇದೆ. ಜತೆಯಲ್ಲಿ ನೀನೂ ಬರುತ್ತೀಯಾ ?"

"ಕಾರ್ಖಾನೆ ಬಳಿಯ ಉಪನಗರಕ್ಕೋ ?"

"ಏನೀಗ, ಬರಬಾರದೇನು ?"

"ಕಾರ್ಖಾನೆ ಬಳಿ. . . ." ಅನುಮಾನಿಸುತ್ತ ಪೇತ್ಯ ಹೇಳಿದ.

ಪೇತ್ಯ ಕಾರ್ಖಾನೆಯ ಬಳಿಯ ಕೇರಿಗೆ ಯಾವತ್ತೂ ಹೋಗಿರಲಿಲ್ಲ. ಅದು ಬಹಳ ದೂರ, "ಪ್ರಪಂಚದ ಇನ್ನೊಂದು ಕೊನೆ" ಎಂದು ತಿಳಿದಿದ್ದನವನು. ಅದು ವಿಧವೆಯರು, ತಬ್ಬಲಿಗಳು, ಬಡ ಕಪೋತಿಗಳು ವಾಸಿಸುತ್ತಿದ್ದ ದುಃಖದ ನೆಲವಾಗಿತ್ತು ಎಂಬುದು ಅವನ ಕಲ್ಪನೆ. ಯಾವುದಾದರೊಂದು ದುರದೃಷ್ಟಕರ ಸಂಗತಿ ಸಂಭವಿಸಿದಾಗ ಕಾರ್ಖಾನೆ ಬಳಿಯ ಕೇರಿಯ ಹೆಸರು ಜನರ ಬಾಯಲ್ಲಿ ಬರುತ್ತಿತ್ತು. ಕಾರ್ಖಾನೆಯ ಉಪನಗರವೆಂದರೆ ತಕ್ಷಣ ಆಕಸ್ಮಿಕ ಮರಣಕ್ಕೆ ಸಂಬಂಧವನ್ನು ಕಲ್ಪಿಸುವುದು ವಾಡಿಕೆಯಾಗಿತ್ತು. 'ನಿನಗೆ ಆ ದುಃಖದ ಸಂಗತಿ ತಿಳಿಯಿತೆ? ಏಂಜಲಿಕ ಇವಾನೋವ್ನಳ ಗಂಡ ಇದ್ದಕ್ಕಿದ್ದ ಹಾಗೆ ಸತ್ತುಹೋದನಂತೆ. ಅವನು ಹೆಂಡತಿಯನ್ನು ಬೀದಿಗೆ ನಿಲ್ಲಿಸಿ ಹಳೆಯ ರಾಗಿ ಬೀಸಲು ಹೊರಟುಹೋದನಂತೆ. ಒಂದು ಕಾಸೂ ಬಿಟ್ಟಿಲ್ಲವಂತೆ. ಮರಜ್ಲಿವ್‌ಸ್ಕಾಯ ಬೀದಿಯ ಮನೆಯನ್ನು ಖಾಲಿಮಾಡಿ ಅವಳು ಕಾರ್ಖಾನೆಯ ಉಪನಗರದಲ್ಲಿನ ಒಂದು ಮನೆಗೆ ಹೋದಳಂತೆ' ಎಂದು ಜನ ಮಾತಾಡಿಕೊಳ್ಳುವುದು ವಾಡಿಕೆಯಾಗಿತ್ತು.

ಕಾರ್ಖಾನೆಯ ಉಪನಗರಕ್ಕೆ ಒಂದು ಸಲ ಹೋದವರು ಇನ್ನು ಹಿಂದಿರುಗಿ ಬರುತ್ತಿರಲಿಲ್ಲ. ಅಕಸ್ಮಾತ್ತಾಗಿ ಯಾರಾದರೂ ವಾಪಸ್ಸು ಬಂದರು ಎನ್ನಿ ಅದು ಅವರ ನೆರಳು ಇರಬೇಕು, ಅಷ್ಟೆ. ಅದೂ ಎಷ್ಟು ಕಾಲ? ಒಂದು ಗಂಟೆ, ಅದಕ್ಕಿಂತ ಹೆಚ್ಚಿಗೆ ಇರಲಾರದು.

"ನಿನಗೆ ಗೊತ್ತಿಲ್ಲ, ಏಂಜಲಿಕ ಇವಾನೋವ್ನ. ಕಳೆದವರ್ಷ ಇದ್ದಕ್ಕಿದ್ದ ಹಾಗೆ ಅವಳ ಗಂಡ ಅವಳನ್ನು ನಿರ್ಗತಿಕಳನ್ನಾಗಿ ಮಾಡಿ ಠೊಕ್ ಅಂದು ಬಿಡಲಿಲ್ಲವೇ, ಅವಳು ನಮ್ಮ ಮನೆಗೆ ಬಂದಿದ್ದಳು. ಒಂದು ಗಂಟೆ ಇದ್ದಳು, ಅಷ್ಟೆ. ಆಮೇಲೆ ಒಂದು ನಿಮಿಷಾನೂ ಇರಲಿಲ್ಲ. ಪಾಪ ಹ್ಯಾಗಾಗಿಬಿಟ್ಟಿದ್ದಾಳೆ ಅಂತ. ಅವಳನ್ನು ಗುರುತು ಹಿಡಿಯುವುದಕ್ಕೇ ಆಗುವುದಿಲ್ಲ. ಅದು ಅವಳ ನೆರಳು ಎನ್ನಿಸಿತು ನನಗೆ . . . ." ಎಂದು ಮೊದಲಾಗಿ ಜನ ಮಾತಾಡುವುದುಂಟು.

ಒಂದು ಸಲ ಪೇತ್ಯ ತಂದೆಯೊಡನೆ ಅಲ್ಲಿಗೆ ಹೋಗಿದ್ದ. ಗತಿಸಿದ ಒಬ್ಬ ಉಪಾಧ್ಯಾಯನ ಶವಸಂಸ್ಕಾರದ ಸಮಯದಲ್ಲಿ ಸಮಾಧಿಯ ಬಳಿ ಪಾದ್ರಿ ಹೇಳಿದ ಮಾತುಗಳ

ಅವನಲ್ಲಿ ಭಯಭಕ್ತಿಯನ್ನು ಹುಟ್ಟಿಸಿದ್ದುವು. "ಧರ್ಮಪುರುಷರ ಬೀಡು ಅದು. ಮರಣದ ಬಳಿಕ ಅಲ್ಲಿ ಅವರು ವಿಶ್ರಾಂತಿ ಹೊಂದುವರು" ಎಂದು ಇನ್ನೂ ಮುಂತಾಗಿ ಅದೇ ರೀತಿಯ ಮಾತುಗಳನ್ನು ಪೇತ್ಯ ಕೇಳಿದ್ದ. 'ಕಾರ್ಬಾನೆಯ ಉಪನಗರ ಧಾರ್ಮಿಕಪುರುಷರ ಬೀಡು. ಅಲ್ಲಿಗೆ ಮರಣ ಹೊಂದಿದವರ ಬಂಧುಗಳು ವಿಶ್ರಾಂತಿಗಾಗಿ ಹೋಗುವರು' ಎಂಬರ್ಥ ಬರುವಂಥ ಭಾವನೆಗಳನ್ನು ಪೇತ್ಯ ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದ.

ಕಪ್ಪುಬಣ್ಣದ ಶಾಲುಗಳನ್ನು ಹೊದೆದ ವಿಧವೆಯರ ಮತ್ತು ತೇಪೆ ಹಾಕಿದ ಫ್ರಾಕುಗಳನ್ನು ಧರಿಸಿದ ತಬ್ಬಲಿಗಳ ನೆರಳುಗಳು ಅಸಂಖ್ಯಾತವಾದ ವಾಯುಯಂತ್ರಗಳಿಂದ ತುಂಬಿದ್ದ ಆ ದುಃಖಿಗಳ ನಿವಾಸಸ್ಥಾನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಚಿತ್ರ ಪೇತ್ಯನ ಮನಃಪಟಲದಲ್ಲಿ ಬಹು ಸ್ಪಷ್ಟವಾಗಿ ಮೂಡಿತ್ತು.

ತಂದೆಯ ಅಪ್ಪಣೆಯಿಲ್ಲದೆ ಕಾರ್ಬಾನೆಯ ಉಪನಗರಕ್ಕೆ ಹೋಗುವುದು ಭಯಂಕರವಾದ ವಿಷಯವಾಗಿತ್ತು. ತಿಂಡಿಯ ಅಲಮಾರುವಿನಿಂದ ಫಲರಸಾಯನ (ಜಾಮ್)ವನ್ನು ಕದಿಯುವುದಕ್ಕಿಂತಲೂ ಅದು ಹೆಚ್ಚು ಕೆಟ್ಟದೆಂದು ಅವನ ಭಾವನೆ; ಷರಟಿನೊಳಗಡೆ ಸತ್ತ ಇಲಿಯನ್ನು ಮುಚ್ಚಿಕೊಂಡು ಮನೆಗೆ ತರುವುದಕ್ಕಿಂತಲೂ ಹೆಚ್ಚು ನೀಚ ಕೆಲಸವಾಗಿತ್ತು. ಕಾರ್ಬಾನೆಯ ಉಪನಗರಕ್ಕೆ ಅನುಮತಿಯಿಲ್ಲದೆ ಹೋಗುವುದು ಒಂದು ಅಪರಾಧವೆಂದು ಪೇತ್ಯ ನಂಬಿದ್ದ.

ಆ ಅಲೌಕಿಕವಾದ ವಾಯುಯಂತ್ರಗಳಿಂದ ತುಂಬಿದ ದುಃಖಿಗಳ ಭೂಮಿಗೆ ಗಾವ್ರಿಕನೊಡನೆ ಹೋಗಬೇಕೆಂಬ ಉತ್ಕಟ ಆಸೆ ಪೇತ್ಯನಿಗೆ. ಅಲ್ಲಿ ತನ್ನ ಸ್ವಂತ ಕಣ್ಣುಗಳಿಂದ ವಿಧವೆಯರ ನೆರಳನ್ನು ಕಾಣಬೇಕೆಂಬ ಹಂಬಲ. ಆದರೆ ನಿಂತ ಪಟ್ಟಿಯಲ್ಲೇ ಒಂದು ನಿರ್ಧಾರಕ್ಕೆ ಬರುವುದು ಪೇತ್ಯನಿಗೆ ಕಷ್ಟವಾಗಿತ್ತು. ಅವನ ಮನಸ್ಸಿನ ತುಯ್ದಾಟ ಹತ್ತು ನಿಮಿಷಗಳ ಕಾಲ ನಡೆಯಿತು. ಆದರೆ ಪೇತ್ಯ ಗಾವ್ರಿಕನ ಜೊತೆಯಲ್ಲಿ ಮುಂದುವರಿಯುವುದಕ್ಕೂ, ಹಾಗೆ ಜತೆಯಲ್ಲಿ ನಡೆದು ಹೋಗುತ್ತಿದ್ದಾಗ ಉಸಿರುಮುಗುಚದೆ ಒಂದೇ ಸಮನೆ ಹಿಂದಿನ ದಿನದ ಸಾಹಸದ ಕಥೆಯನ್ನು ವರ್ಣಿಸುವುದಕ್ಕೂ ಅವನ ಒಳತೋಟಿ ಅಡ್ಡಿ ಬರಲಿಲ್ಲ. ಪೇತ್ಯ ತನ್ನ ಅಂತರ್ಯುದ್ಧದಲ್ಲಿ ವಿಜಯಿಯಾಗಿ ಒಂದು ನಿರ್ಧಾರಕ್ಕೆ ಬರುವ ಹೊತ್ತಿಗೆ ಅವರಿಬ್ಬರೂ ಬಹುಮಟ್ಟಿನ ದಾರಿಯನ್ನು ಸವೆಸಿದ್ದರು.

ಈ ಭೂಮಿಯ ಮೇಲಿನ ವಿಷಯುಗಳ ಬಗೆಗೆ ಅಲಕ್ಷ್ಯ ತೋರುವುದೇ ಹಿರಿತನವೆಂದು ಕಪ್ಪು ಸಮುದ್ರದ ತೀರವಾಸಿಗಳಾದ ಬಾಲಕರು ತಿಳಿದಿದ್ದರು. ಆದುದರಿಂದಲೇ ತನ್ನ ಕಥೆ ಗಾವ್ರಿಕನ ಮನಸ್ಸಿನ ಮೇಲೆ ಅಗಾಧವಾದ ಪ್ರಭಾವ ಬೀರಿದುದನ್ನು ಕಂಡಾಗ ಪೇತ್ಯನಿಗೆ ಅತೀವ ಆಶ್ಚರ್ಯವಾಯಿತು. ಒಂದೇ ಒಂದು ಸಲವಾದರೂ ಗಾವ್ರಿಕ್ ತಾತ್ಸಾರ ತೋರಿಸುತ್ತ ತನ್ನ ಹೆಗಲಿನ ಮೇಲಿನಿಂದ ಹಿಂದುಗಡೆಗೆ ಪಿಚಕ್ಕನೆ ಉಗುಳಿರಲಿಲ್ಲ. "ನಿಮ್ಮಜ್ಜಿಗೆ ಹೇಳು ಹೋಗೋ ಈ ಕಂತೆ ಪುರಾಣವ" ಎಂದು ಒಂದು ಸಲವಾದರೂ ಟೀಕಿಸಿರಲಿಲ್ಲ. ಎಲ್ಲಕ್ಕಿಂತ ಮೇಲಾಗಿ ಗಾವ್ರಿಕ್ ಸ್ವಲ್ಪ ಮಟ್ಟಿಗೆ ಭಯಾಕ್ರಾಂತನಾಗಿದ್ದಂತೆ ಪೇತ್ಯನಿಗೆ ತೋರಿತು. ಇದು ತನ್ನ ಕಥನ ಕೌಶಲದ ಪರಿಣಾಮವೆಂದು ಪೇತ್ಯ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡನೇ ವಿನಾ ಅವನಿಗೆ ಗಾವ್ರಿಕನ ಮನಸ್ಸಿನಲ್ಲಿ ಏನು ನಡೆಯುತ್ತಿತ್ತು ಎಂಬುದು ತಿಳಿಯಲಿಲ್ಲ.

ಆ ಘಟನೆ ಹೀಗೆ ಹೀಗೆ ನಡೆಯಿತೆಂದು ಪೇತ್ಯ ಅನುಕರಿಸಿ ತೋರಿಸುತ್ತಿದ್ದಾಗ ಅವನ ಮುಖ

ಕೆಂಪೇರುತ್ತಿತ್ತು.

"ಆಗ ಇವನು ಎಳೆಕೊಂಡಿದ್ದೆ ಮೊಳೆ ಇದ್ದ ಕೋಲಿನಿಂದ ನೇರವಾಗಿ ಬಿಟ್ಟು, ನೋಡು!" ತನ್ನ ಶಕ್ತಿಯನ್ನೆಲ್ಲ ಬಿಟ್ಟು ಗಟ್ಟಿಯಾಗಿ ಕೂಗಿದ ಪೇತ್ಯ. "ಇದು ಸತ್ಯ ಅಂದರೆ ಸತ್ಯ. ಆ ಮೇಲೆ ಅವನು 'ನಿಲ್ಲು, ನಿಲ್ಲು' ಅಂತ ಕಿರಿಚಿದ. ಅವನ ಕೂಗು ಹಡಗಿನಲ್ಲೆಲ್ಲ ಕೇಳ್ತಾ ಇತ್ತು. ನಾನು ಸುಳ್ಳು ಹೇಳಿದರೆ ಥೂ ಅಂತ ಮುಖಕ್ಕೆ ಉಗಿ. ಆ ಮೇಲೆ ಇವನು ಕಂಬಿ ಮೇಲಿನಿಂದ ನೆಗೆದಿದ್ದೆ ಸಮುದ್ರಕ್ಕೆ ಹಾರಿದ. ಆಗ ಫಳೀರ್ ಅಂತ ಅವನ ದೇಹ ನೀರಿಗೆ ಅಪ್ಪಳಿಸಿತು. ಆಗ ನೀರಿನ ತುಂತುರು ಹಡಗಿನ ನಾಲ್ಕನೇ ಅಂತಸ್ತಿನವರೆಗೂ ಹಾರಿತು. ನೀರು ಅಷ್ಟೆತ್ತರ ಹಾರುತ್ತದೆಯೇ ಅಂತ ಕೇಳಬೇಡ. ಇಲ್ಲದೆ ಇದ್ದರೆ ನನ್ನ ತಲೆ ಬಿದ್ದುಹೋಗಲಿ. ದೇವರ ಸತ್ಯವಾಗಲೂ!"

ನಾವಿಕ ಸಮುದ್ರಕ್ಕೆ ಹಾರಿದುದನ್ನು ಪ್ರತ್ಯಕ್ಷವಾಗಿ ತೋರಿಸುವಂತೆ ತೋಳನ್ನು ಬೀಸುತ್ತ ಪೇತ್ಯ ಒಂದು ಸಲ ನೆಗೆದ. ಆಗ ಒಂದು ಚಿಲ್ಲರೆ ಅಂಗಡಿ ಮುಂದುಗಡೆ ಇಟ್ಟಿದ್ದ ಕುಕ್ಕೆಯನ್ನು ಎಡವಿ ಅದನ್ನು ಬೀಳಿಸಿದ. ಅಂಗಡಿಯವನ ಏಟಿನಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಅವರಿಬ್ಬರೂ ಎರಡು ಬೀದಿಗಳು ಕಳೆಯುವವರೆಗೂ ನಿಲ್ಲದೆ ಬಿದ್ದಾ ಬೀಳಾ ಓಡಿದರು.

"ಮೊದಲನೆಯವನು ಹ್ಯಾಗಿದ್ದ? ಅವನ ಕೈಮೇಲೆ ಲಂಗರಿನ ಗುರುತು ಇತ್ತೋ?" ಗಾವ್ರಿಕ್ ಕೇಳಿದ.

"ಹೌದು, ಹೌದು!" ಎಂದು ಉದ್ರೇಕದಿಂದ ಪೇತ್ಯ ಹೇಳಿದಾಗ ಅವನಿಗೆ ಮೇಲುಸಿರು ಬಂದಿತ್ತು.

"ಇಲ್ಲೋ?" ಎನ್ನುತ್ತ ಗಾವ್ರಿಕ್ ತನ್ನ ಕೈಯಿಂದ ಆ ಸ್ಥಳವನ್ನು ತೋರಿಸಿದ.

"ಹೌದು. ನಿನಗೆ ಹ್ಯಾಗೆ ಗೊತ್ತು?"

"ನಾನು ಇವತ್ತು ಹೊಸದಾಗಿ ನಾವಿಕರನ್ನು ನೋಡಬೇಕೇ?" ಗಾವ್ರಿಕ್ ದೊಡ್ಡವನಂತೆ ಪಿಚಕ್ಕನೆ ಉಗುಳುತ್ತ ಹೇಳಿದ.

ಅಸೂಯಾಪರನಾಗಿ ಪೇತ್ಯ ತನ್ನ ಗೆಳೆಯನ ಕಡೆಗೆ ನೋಡಿದ. ಅನಂತರ ತಾನೂ ಅವನಂತೆಯೇ ಪಿಚಕ್ಕನೆ ಉಗುಳಿದ. ಗಾವ್ರಿಕ್ ಉಗುಳನ್ನು ಚಮತ್ಕಾರವಾಗಿ ಬಾಣದಂತೆ ಚಿಮ್ಮಿಸಿದ್ದ. ಪೇತ್ಯನಿಂದ ಹಾಗೆ ಉಗುಳಲು ಆಗಲಿಲ್ಲ. ಅದು ದೂರ ಚಿಮ್ಮುವುದಕ್ಕೆ ಬದಲಾಗಿ ಅವನ ಮಂಡಿಯ ಮೇಲೆ ಬಿದ್ದಿತು. ಅವನು ತನ್ನ ಷರಟಿನ ತೋಳಿನಿಂದ ಉಗುಳನ್ನು ಒರೆಸಿಕೊಳ್ಳಬೇಕಾಯಿತು. ಪೇತ್ಯ ತನ್ನ ಉಗಿತವನ್ನು ಉತ್ತಮಪಡಿಸಿಕೊಳ್ಳಬೇಕೆಂದು ಅಲ್ಲೇ ಮನಸ್ಸು ಮಾಡಿದ. ಬಹಳ ಶ್ರದ್ಧೆಯಿಂದ ಪಿಚಕ್ಕನೆ ಉಗುಳುವ ಪಾಂಡಿತ್ಯವನ್ನು ಪಡೆಯಲು ಪ್ರಯತ್ನಿಸಿದ. ಉಗುಳಿ ಉಗುಳಿ ಅವನ ತುಟಿ ಮಾರನೆಯ ದಿನ ಬೆಳಗ್ಗೆಗೆ ಬಿರುತುಕೊಂಡಿತು. ಕಲ್ಲಂಗಡಿ ಹಣ್ಣನ್ನು ಕೂಡ ತಿನ್ನುವುದಕ್ಕೆ ಆಗುತ್ತಿರಲಿಲ್ಲ.

"ಆ ಇನ್ನೊಬ್ಬ ಹೇಗಿದ್ದ? ಕಾಲಿಗೆ ಪಾದರಕ್ಷೆ ತೊಟ್ಟಿದ್ದನೋ, ಕಣ್ಣಿಗೆ ಕನ್ನಡಕ ಏರಿಸಿದ್ದನೋ?"

"ಮೂಗು ಕನ್ನಡಕ ಅದು."

"ನೀನು ಏನು ಬೇಕಾದರೂ ಹೆಸರು ಹೇಳಿಕೋ ಅದಕ್ಕೆ."

"ಅದು ನಿನಗೆ ಹ್ಯಾಗೆ ಗೊತ್ತಾಯಿತು?"

"ನಾನು ಪ್ರಪಂಚದಲ್ಲಿ ಯಾರನ್ನೂ ನೋಡಿಯೇ ಇಲ್ಲ; ನನಗೆ ಏನೂ ಗೊತ್ತೇ ಇಲ್ಲ ಅನ್ನ."

ಕಥೆಯನ್ನು ಮುಗಿಸಿದ ಬಳಿಕ ಪೇತ್ರ ನಾಲಿಗೆಯಿಂದ ತುಟಿಯನ್ನು ಸವರಿಕೊಂಡು ಪುನ ಮೊದಲಿನಿಂದ ಕೊನೆಯವರೆಗೂ ಆ ಕಥೆಯನ್ನು ಒಂದೇ ಉಸಿರಿಗೆ ಹೇಳಲಾರಂಭಿಸಿದ.

ಊಹಿಸಲಸದಳವಾದಂಥ ಮಾನಸಿಕ ಹಿಂಸೆ ಗಾವ್ರಿಕನನ್ನು ಒಳಗೊಳಗೇ ಕೊರೆಯುತ್ತಿತ್ತು. ತನಗೆ ಗೊತ್ತಿರುವ ವಿಷಯವನ್ನು ಪೇತ್ಯನ ಸಾಹಸದ ಕಥೆಯೊಡನೆ ಹೋಲಿಸಿ ನೋಡಿದರೆ ಪೇತ್ಯನದು ತೃಣಸಮಾನವಾಗಿತ್ತು. ಆ ಕ್ಷಣದಲ್ಲೂ ಪೇತ್ಯನ ಸಾಹಸದ ಕಥೆಯ ನಾಯಕ ತಮ್ಮ ಗುಡಿಸಿಲಿನಲ್ಲಿ ಮಲಗಿದ್ದಾನೆಂಬುದನ್ನು ತಿಳಿಸಿ ಪೇತ್ಯನ ಮುಖ ಹೇಗಾಗುತ್ತದೆ ಎಂಬುದನ್ನು ನೋಡಬೇಕು ಎಂಬ ಉತ್ಕಟ ಆಕಾಂಕ್ಷೆ ಅವನಿಗೆ. ಆದರೆ ಎರಡನೆಯ ಸಲ ಪೇತ್ಯನ ಕೋಪಿತವನ್ನು ಅನುಭವಿಸುತ್ತ ಗಾವ್ರಿಕ್ ಮೌನದಿಂದಿರಬೇಕಾಯಿತು. ಮಾನವ ಸಹನೆಗೂ ಮೀರಿದ್ದಾಗಿತ್ತು ಗಾವ್ರಿಕನ ಮೂಕ ಸಂಕಟ.

ತನ್ನಲ್ಲಡಗಿದ್ದ ಗುಟ್ಟನ್ನು ಸೂಕ್ಷ್ಮವಾಗಿ ಸೂಚಿಸಿದರೆ ಹೇಗೆ? ಹೊರಕ್ಕೆ ಸ್ಪಷ್ಟವಾಗಿ ತಿಳಿದೂ ತಿಳಿಯದಂತೆ ಇರಬಹುದಾದ ಸೂಚನೆಯಾದರೋ? ಕೂಡದು, ಖಂಡಿತ ಕೂಡದು. ಪೇತ್ಯ ಆ ಗುಟ್ಟನ್ನು ತನ್ನಲ್ಲಿ ಅಡಗಿಸಿಟ್ಟುಕೊಳ್ಳಲಾರ. ಯಾರಿಗೂ ಹೇಳುವುದಿಲ್ಲವೆಂದು ಪೇತ್ಯನಿಂದ ಆಣೆ ಪ್ರಮಾಣ ಮಾಡಿಸಿದರೋ? ಊಹೂ, ಅದೂ ಆಗದು. ಅವನು ಹೇಗಾದರೂ ಗುಟ್ಟನ್ನು ರಟ್ಟು ಮಾಡಿಬಿಡುತ್ತಾನೆ. ಚರ್ಚಿನ ಎದುರಿನಲ್ಲಿ ಶಿಲುಬೆಯ ಆಕಾರವನ್ನು ತೋರಿಸಿಕೊಂಡು ಪ್ರತಿಜ್ಞೆ ಮಾಡು ಎಂದರೋ? ಹೌದು, ಆಗ ಪ್ರಾಯಃ ಅವನು' ಯಾರಿಗೂ ಗುಟ್ಟನ್ನು ಬಿಟ್ಟುಕೊಡಲಾರ ಇಷ್ಟೆಲ್ಲ ಆಲೋಚಿಸಿ ಒಂದು ನಿರ್ಧಾರಕ್ಕೆ ಬರಲು ಪ್ರಯತ್ನಿಸಿದರೂ ಗಾವ್ರಿಕನನ್ನು ಸಂದೇಹಪಿಶಾಚಿ ಪೀಡಿಸುತ್ತಲೇ ಇತ್ತು. ಒಳಗೆ ಬಚ್ಚಿಟ್ಟುಕೊಂಡಿದ್ದ ರಹಸ್ಯ ಹೊರಗೆ ಬರಬೇಕೆಂದು ಒಳಗಿನಿಂದ ಇರಿಯುತ್ತಿತ್ತು. ಆದರೆ ಯಾರಿಗಾದರೂ ತಿಳಿದುಬಿಟ್ಟರೆ ಏನು ಗತಿ ಎಂಬ ಸಂದೇಹ ಅದನ್ನು ಒಳಕ್ಕೆ ಅದುಮುತ್ತಿತ್ತು. ಈ ಹೋರಾಟದಲ್ಲಿ ಗುಟ್ಟನ್ನು ಹೊರಗೆಡಹಿಬಿಡುವ ಪ್ರಲೋಭನದ ಶಕ್ತಿಯೇ ಹೆಚ್ಚಾಗಿ ಬಿಟ್ಟರೋ ಎಂದು ಹೆದರುತ್ತಿದ್ದ. ತುಟಿ ಬಿಚ್ಚಿದರೆ ತಾನೆ ಮಾತು ಹೊರ ಬರುವುದು ಎಂದು ಎರಡು ತುಟಿಗಳನ್ನೂ ಭದ್ರವಾಗಿ ಕೀಲಿಸಿದ್ದ.

ಆದರೆ ತನ್ನ ಯಾವ ಪ್ರಯತ್ನವೂ ಸಫಲವಾಗುವಂತೆ ಕಾಣಲಿಲ್ಲ ಗಾವ್ರಿಕನಿಗೆ. ರಹಸ್ಯವನ್ನು ಹೇಳಿಬಿಡಬೇಕೆಂಬ ಆಸೆ ಮೊದಲಿಗಿಂತಲೂ ಪ್ರಬಲವಾಯಿತು. ಹೀಗೆ ಗಾವ್ರಿಕ್ ಪ್ರಲೋಭನದ ಶಕ್ತಿಗೆ ಸಿಕ್ಕಿಕೊಂಡು ಪರದಾಡುತ್ತಿದ್ದಾಗ ಅತ್ತ ಪೇತ್ರ ಆ ಕುದುರೆ ಗಾಡಿ ಹೇಗೆ ದಾರಿಯಲ್ಲಿ ಸಾಗುತ್ತಿತ್ತು, ಹೇಗೆ ಆ ಭಯಂಕರ ನಾವಿಕ ದ್ರಾಕ್ಷಿ ತೋಟದಿಂದ ನೆಗೆದು ಬಂದ, ಮತ್ತು ಹೇಗೆ ಕುದುರೆ ಹೊಡೆಯುವವನನ್ನು ಎದುರಿಸಿದ, ಆಗ ತಾನು ಹೇಗೆ ಕೂಗಿಕೊಂಡ, ಬಳಿಕ ಹೇಗೆ ಅವನು ಗಾಡಿಯ ಒಳಕ್ಕೆ ಬಂದು ಪೀಠದಡಿಯಲ್ಲಿ ಅಡಗಿಕೊಂಡ—ಎಂಬಿವೆಲ್ಲವನ್ನೂ ಹರಟುತ್ತ ಬರುತ್ತಿದ್ದ. ಇಲ್ಲಿಗೆ ಗಾವ್ರಿಕನ ತಾಳ್ಮೆ ಮೀರಿತ್ತು.

"ನೀನು ಯಾರಿಗೂ ಹೇಳುವುದಿಲ್ಲವೆಂದು ವಾಗ್ದಾನ ಮಾಡುತ್ತೀಯಾ ?"

"ವಾಗ್ದಾನ!" ಒಡನೆಯೇ ರೆಪ್ಪೆ ಹೊಡೆಯದೆ ಪೇತ್ಯ ಕೇಳಿದ.

"ಹೂ, ಆಣೆ ಮಾಡ್ತೀಯೋ ಹೇಳು ?"

"ದೇವರೇ ಕಾಪಾಡು. ಘನ ಏಸುವೇ ನನ್ನ ಸಹಾಯಕ್ಕೆ ಬರಲಿ. ಏನದು ಗಾವ್ರಿಕ್ ?"

"ಅದೊಂದು ಗುಟ್ಟು."

"ಆಗಲಿ."

"ನೀನು ಯಾರಿಗಾದರೂ ಹೇಳಿಬಿಟ್ಟರೆ?"

"ನಾನು ಯಾರಿಗಾದರೂ ಹೇಳಿದರೆ ಭೂಪಿತಾಯಿ ನನ್ನ ಕಾಲು ಹಿಡಿದು ನಿಲ್ಲಿಸಿಬಿಡಲಿ."

"ನಿನ್ನ ಜೀವದ ಮೇಲೆ ಆಣೆಯಿಡು."

"ನನ್ನ ನಾಲಿಗೆ ಬಿದ್ದುಹೋಗಲಿ, ನಾನು ಯಾರಿಗಾದರೂ ಹೇಳಿದರೆ." ಪೇತ್ಯ ಮನಸ್ಸಿನ ಆಳದಿಂದ ಪ್ರಾಮಾಣಿಕವಾಗಿ ಹೇಳಿದ. ಅವನ ಕುತೂಹಲ ಎಷ್ಟರಮಟ್ಟಿಗೆ ಕೆರಳಿತೆಂದರೆ ಜೊಲ್ಲನ್ನು ಗುಟುಕರಿಸುತ್ತ "ನಾನು ಯಾರಿಗಾದರೂ ಬಾಯಿಬಿಟ್ಟರೆ ನನ್ನ ಕಣ್ಣುಗುಡ್ಡೆ ಕಳಚಿ ಬಿದ್ದುಹೋಗಲಿ" ಎಂದು ತನ್ನದೂ ಒಂದು ಆಣೆಯನ್ನು ಜತೆಗೆ ಸೇರಿಸಿದ. ಆಮೇಲೆ "ಆಯಿತೋ?" ಎಂದ.

ಗಾವ್ರಿಕ್ ದೀರ್ಘವಾಗಿ ಉಸಿರನ್ನು ಬಿಡುತ್ತ ನೆಲದ ಮೇಲೆ ಆಗಾಗ ಪಿಚಕ್ಕನೆ ಉಗುಳುತ್ತ ಮೌನವಾಗಿ ನಡೆದು ಬರುತ್ತಿದ್ದ. ಪ್ರಲೋಭನದೊಡನೆ ಸೆಣಸಾಟ ಇನ್ನೂ ಅವನಲ್ಲಿ ನಡೆಯುತ್ತಲೇ ಇತ್ತು. ಈಗ ಪ್ರಲೋಭನದ್ದೇ ಮೇಲುಗೈಯಾಗುವುದರಲ್ಲಿತ್ತು.

"ಪೇತ್ಯ, ಚರ್ಚಿನ ಎದುರಿಗೆ ಶಿಲುಬೆಯ ಸನ್ನೆಯನ್ನು ಮಾಡಿಕೊಂಡು ಮಾತುಕೊಡು, ನಡೆ." ಎಂದು ಗಾವ್ರಿಕ್ ಒರಟಾಗಿ ನುಡಿದ. ಪೇತ್ಯ ತವಕದಿಂದ ಕುದಿಯುತ್ತ ಹತ್ತಿರದಲ್ಲಿ ಯಾವುದಾದರೂ ಚರ್ಚು ಕಣ್ಣಿಗೆ ಬೀಳುವುದೋ ಎಂದು ಸುತ್ತ ತಿರುಗಿ ನೋಡಿದ. ಆಗ ಆ ಇಬ್ಬರು ಬಾಲಕರೂ ಒಂದು ಹಳೆಯ ಕ್ರಿಶ್ಚಿಯನ್ನರ ಸಮಾಧಿಭೂಮಿಯನ್ನು ಬಳಸಿದ್ದ ಸುಣ್ಣಕಲ್ಲು ಗೋಡೆಯ ಬಳಿ ಹೋಗುತ್ತಿದ್ದರು. ಗೋಡೆಯ ಬಳಿ ಉದ್ದಕ್ಕೂ ಹೂವಿನದಂಡೆಗಳನ್ನೂ ಸ್ಮಾರಕವಸ್ತುಗಳನ್ನೂ ಮಾರುತ್ತ ಕೆಲವರು ಕುಳಿತಿದ್ದರು. ಗೋಡೆಯ ಮೇಲುಗಡೆ ಹಳೆಯ ಜಾಲಿಮರಗಳ ಕೊಂಬೆಯ ತುದಿಗಳೂ, ವ್ಯಸನಾಕ್ರಾಂತರಾದಂತೆ ರಚಿತವಾಗಿದ್ದ ದೇವದೂತರ ರೆಕ್ಕೆಗಳ ತುದಿಗಳೂ ಕಾಣಿಸುತ್ತಿದ್ದುವು.

(ಸ್ಮಶಾನದ ಬಳಿಯಿಂದ ಕಾರ್ಬಾನೆಯ ಉಪನಗರಕ್ಕೆ ಹೋಗುವ ದಾರಿಯಿರುವುದಾದರೆ ಆ ಉಪನಗರವು ಮೃತ್ಯುವಿಗೆ ನೆರೆಯ ಬಾಗಿಲೇ ಆಗಿರಬೇಕಲ್ಲ?)

ಜಾಲಿಮರಗಳ ಮತ್ತು ದೇವದೂತರ ರೆಕ್ಕೆಗಳ ಹಿಂಬದಿಯಲ್ಲಿ ಧೂಳಿನಿಂದಾವೃತವಾದ ನಸು ಊದಾ ಬಣ್ಣದ ಆಕಾಶವನ್ನು ಹಿನ್ನೆಲೆಯಾಗುಳ್ಳ ಸಮಾಧಿ ಭೂಮಿಯಲ್ಲಿದ್ದ ಚರ್ಚಿನ ಗೋಪುರವು ಕಂಗೊಳಿಸುತ್ತಿತ್ತು. ಆ ಚರ್ಚಿನ ಮೇಲುಗಡೆ ತುದಿಯಲ್ಲಿ ಚಿನ್ನದ ಬಣ್ಣದ ಶಿಲುಬೆ ಪ್ರಕಾಶಿಸುತ್ತಿತ್ತು. ಪೇತ್ಯ ಆ ಚರ್ಚಿನ ಕಡೆಗೆ ಮುಖಮಾಡಿಕೊಂಡು ನಿಂತು ಉದ್ವೇಗದಿಂದಲೂ ಶ್ರದ್ಧೆಯಿಂದಲೂ ತನ್ನ ಹಣೆಯ ಎದುರಿಗೆ ಶಿಲುಬೆಯಾಕಾರವನ್ನು ಸಂಜ್ಞೆಮಾಡಿಕೊಂಡ.

"ಸತ್ಯವಾದ, ಪವಿತ್ರವಾದ ಶಿಲುಬೆಯ ಮೇಲೆ ಆಣೆಯಿಟ್ಟು ಹೇಳುತ್ತೇನೆ: ನಾನು ಈ ಗುಟ್ಟನ್ನು ಯಾರಿಗೂ ಹೇಳುವುದಿಲ್ಲ, ಯಾರಲ್ಲಿಯೂ ಉಸಿರುಬಿಡುವುದಿಲ್ಲ." ಪೇತ್ಯ ಪ್ರತಿಜ್ಞೆ ಮಾಡಿದ ಬಳಿಕ ದೃಢ ನಂಬಿಕೆಯಿಂದ "ಈಗ ಹೇಳು" ಎಂದು ಗಾವ್ರಿಕನನ್ನು ಕೇಳಿದ.

"ಇಲ್ಲಿ ಕೇಳು ಪೇತ್ಯ...."

ಗಾವ್ರಿಕ್ ತುಟಿಕಚ್ಚಿಕೊಂಡು ತನ್ನ ಮುಂಗೈಯನ್ನು ಕಡಿಯಲಾರಂಭಿಸಿದ. ಕಣ್ಣುಗಳಲ್ಲಿ

ನೀರು ತುಂಬಿಕೊಂಡಿತು.

" ಭೂಮಿತಾಯಿಯ ಸತ್ಯವಾಗಿ ಹೇಳು ಪೇತ್ಯ, ಯಾರಿಗೂ ಹೇಳುವುದಿಲ್ಲವೋ? ಹಾಗಿದ್ದರೆ ಈ ಮಟ್ಟಿಯನ್ನು ಸ್ವಲ್ಪ ಬಾಯಿಗೆ ಹಾಕಿಕೊಂಡು ಪ್ರಮಾಣಮಾಡು!"

ಪೇತ್ಯ ನೆಲವನ್ನು ಪರೀಕ್ಷಿಸಿದ. ಗೋಡೆಯಪಕ್ಕದಲ್ಲಿ ಬಹುಮಟ್ಟಿಗೆ ಶುದ್ಧವಾದ ಬಾಯಿಗೆ ಹಾಕಲು ಯೋಗ್ಯವೆಂದು ಕಂಡುಬಂದ ಮಣ್ಣಿತ್ತು. ತನ್ನ ಉಗುರುಗಳಿಂದ ಸ್ವಲ್ಪ ಮಣ್ಣನ್ನು ನಾಲಗೆಯ ಮೇಲಿಟ್ಟುಕೊಂಡ. ಪ್ರಶ್ನಾರ್ಥಕವಾಗಿ ಗಾವ್ರಿಕನ ಕಡೆ ನೋಡಿದ.

" ತಿನ್ನು!" ಗಾವ್ರಿಕ್ ಕಠೋರ ದೃಢವಾಣಿಯಿಂದ ಹೇಳಿದ.

ಪೇತ್ಯ ಬಿಗಿಯಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಅಂತರಾತ್ಮ ಸಾಕ್ಷಿಯಾಗಿ ಮಣ್ಣನ್ನು ನುಂಗಿದ.

ಆ ಸಮಯಕ್ಕೆ ಸರಿಯಾಗಿ ಸರಪಣಿಯ ಖಣ ಖಣ ಶಬ್ದವು ಕೇಳಬಂದಿತು. ಬಿಚ್ಚುಕತ್ತಿಯನ್ನು ಕೈಯಲ್ಲಿ ಹಿಡಿದ, ಕಪ್ಪು ಹೆಗಲು ಪಟ್ಟಿಯನ್ನು ಧರಿಸಿದ ಸೈನಿಕರು ಕೈದಿಗಳನ್ನು ಕರೆದುಕೊಂಡು ಬರುತ್ತಿದ್ದರು. ಒಬ್ಬೊಬ್ಬ ಕೈದಿಯನ್ನು ಇಬ್ಬಿಬ್ಬರು ಸೈನಿಕರು ಹಿಡಿದುಕೊಂಡಿದ್ದರು. ಕೈದಿಗಳ ಮೈಗಾವಲಿನ ತಂಡಕ್ಕೆ ಸೇರಿದ ಮೂರನೆಯ ಸಿಪಾಯಿ ಒಂದು ಪಿಸ್ತೂಲನ್ನು ಇಟ್ಟುಕೊಂಡಿದ್ದನಲ್ಲದೆ ಹೊಳೆಯುವ ಕಾಗದದ ರಟ್ಟಿನ ದಪ್ಪ ಪುಸ್ತಕವೊಂದನ್ನು ಹಿಡಿದುಕೊಂಡು ಹೋಗುತ್ತಿದ್ದ. ಕೈದಿಯು ತಲೆಗೆ ಬಿಗಿಯಾಗಿ ಕೂರುವ ಬಟ್ಟೆಯ ಸೈನಿಕ ಟೋಪಿಯನ್ನು ಹಾಕಿಕೊಂಡಿದ್ದ. ಅದೇ ಬಟ್ಟೆಯ ಅಂಗಿಯನ್ನು ಧರಿಸಿದ್ದ. ಅದರ ಅಡಿಯಿಂದ ಬೂದುಬಣ್ಣದ ಷರಾಯಿ ಕಾಣುತ್ತಿತ್ತು. ತಲೆ ತಗ್ಗಿಸಿಕೊಂಡು ಕೈದಿ ನಡೆಯುತ್ತಿದ್ದ. ಕಾಲಿಗೆ ಕೀಲಿಸಿದ್ದ ಸರಪಣಿಯನ್ನು ಷರಾಯಿಯು ಮೇಲಿನಿಂದ ಮುಚ್ಚಿತ್ತು. ಆದರೆ ಕೈಗೆ ತೊಡಿಸಿದ್ದ ಬೇಡಿಯಿಂದ ನೇತಾಡುತ್ತಿದ್ದ ಸರಪಣಿ ಮುಂದಿಗೆ ತಗುಲಿದಂತೆಲ್ಲ ಖಣ ಖಣ ಎಂದು ಶಬ್ದವಾಗುತ್ತಿತ್ತು. ಆಗಾಗ್ಗೆ ಕೈದಿ ಸರಪಣಿಯನ್ನು ಮೇಲಕ್ಕೆತ್ತಿ ಹಿಡಿದುಕೊಳ್ಳುತ್ತಿದ್ದ. ಕೆಸರನ್ನು ದಾಟುವಾಗ ಪಾದ್ರಿಯೊಬ್ಬ ತನ್ನ ನಿಲುವಂಗಿಯ ಅಂಚನ್ನು ಮೇಲಕ್ಕೆತ್ತಿ ಹಿಡಿದುಕೊಳ್ಳುವಂತೆ ಸರಪಣಿಯನ್ನು ಎತ್ತಿ ಹಿಡಿದುಕೊಂಡು ಹೋಗುತ್ತಿದ್ದ. ಅವನು ನುಣ್ಣಗೆ ಕ್ಷೌರಮಾಡಿಸಿಕೊಂಡಿದ್ದರಿಂದಲೂ ಅವನದು ಬೂದು ಬಣ್ಣದ ಮುಖವಾಗಿದ್ದುದರಿಂದಲೂ ಅವನು ಸೈನಿಕನೋ ನಾವಿಕನೋ ಆಗಿದ್ದಿರಬೇಕೆಂದು ಊಹಿಸಲು ಬರುತ್ತಿತ್ತು.

ಆ ದುಃಸ್ಥಿತಿಯಲ್ಲಿ ಹಾಡುಹಗಲಿನಲ್ಲೇ ಎಲ್ಲರೆದುರಿಗೆ ಆ ರೀತಿ ತಾನು ನಡೆದುಕೊಂಡು ಹೋಗಬೇಕಾಗಿ ಬಂದಿತಲ್ಲಾ ಎಂದು ಕೈದಿಗೆ ನಾಚಿಕೆಯಾಗಿತ್ತೆಂಬುದನ್ನು ಅವನ ರೀತಿಯಿಂದ ತಿಳಿಯಬಹುದಾಗಿತ್ತು. ಅವನ ದೃಷ್ಟಿ ಯಾವಾಗಲೂ ನೆಲದಲ್ಲೇ ನೆಟ್ಟಿರುತ್ತಿತ್ತು.

ಕೈದಿಯನ್ನು ನಡೆಸಿಕೊಂಡುಹೋಗುತ್ತಿದ್ದ ಆ ಸೈನಿಕರಿಗೂ ನಾಚಿಕೆಯಾಗಿತ್ತೆನ್ನಬಹುದು. ಆದರೆ ಅವರು ನೆಲವನ್ನು ನೋಡುವುದಕ್ಕೆ ಬದಲಾಗಿ ಕೋಪದಿಂದ ಮೇಲುಗಡೆಗೆ ನೋಡುತ್ತಿದ್ದರು. ರಸ್ತೆಯಲ್ಲಿ ಓಡಾಡುವ ಜನರ ದೃಷ್ಟಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುವುದೇ ಆ ಸೈನಿಕರ ಉದ್ದೇಶವಾಗಿತ್ತು.

ಕೈದಿಗಳನ್ನೂ ಸೈನಿಕರನ್ನೂ ನೋಡಿದ ಈ ಹುಡುಗರಿಬ್ಬರೂ ಪಕ್ಕದಲ್ಲಿಯೇ ನಿಂತುಕೊಂಡರು. ಒಂದು ಕಡೆಗೆ ವಾಲುವಂತೆ ಸೈನಿಕರು ತಲೆಗೆ ಧರಿಸಿದ್ದ ಟೋಪಿಯನ್ನೂ, ಪಿಸ್ತೂ

ಲಿಗೆ ಕಟ್ಟಿದ್ದ ನೀಲಿಯ ದಾರವನ್ನೂ, ಬೀಸಿಕೊಂಡು ಹೋಗುತ್ತಿದ್ದ ಕೈಗಳಲ್ಲಿದ್ದ ಹೊಳೆ ಹೊಳೆಯುವ ಕತ್ತಿಗಳನ್ನೂ ಬಾಯಿಬಿಟ್ಟುಕೊಂಡು ಆಶ್ಚರ್ಯದಿಂದ ಅವರು ನೋಡುತ್ತ ನಿಂತುಬಿಟ್ಟರು. ಕತ್ತಿಯ ಹೊಳೆಯುವ ಅಲಗಿನಲ್ಲಿ ಸೂರ್ಯ ಪ್ರತಿಫಲಿಸಿ ಆ ಕಿರಣಗಳು ಕಣ್ಣಿಗೆ ಬಿದ್ದೊಡನೆ ಕಣ್ಣು ಮಂಜು ಹಿಡಿದಂತಾಗುತ್ತಿತ್ತು.

"ಹೋಗಿ, ಹೋಗಿ. ನಿಂತುಕೊಂಡು ನೋಡಕೂಡದು." ಎಂದು ಪುಸ್ತಕವನ್ನು ಹಿಡಿದುಕೊಂಡು ಹೋಗುತ್ತಿದ್ದ ಸಿಪಾಯಿ ಹುಡುಗರ ಕಡೆಗೆ ದೃಷ್ಟಿ ಬೀರದೆಯೆ ಒರಟು ದನಿಯಲ್ಲಿ ಗರ್ಜಿಸಿದ. ಸೈನಿಕರು ಕೈದಿಗಳನ್ನು ನಡೆಸಿಕೊಂಡು ಮುಂದಕ್ಕೆ ಹೊರಟುಹೋದರು. ಪೇತ್ಯ ಷರಟಿನ ತೋಳಿನಿಂದ ನಾಲಗೆಯನ್ನು ಸವರಿಕೊಂಡು 'ಸರಿ' ಎಂದ.

"ಏನು ಸರಿ!" ಗಾವ್ರಿಕ್ ಕೇಳಿದ.

"ಆಯಿತು, ಈಗ ಹೇಳು."

ಇದ್ದಕ್ಕಿದ್ದಂತೆ ಗಾವ್ರಿಕ್ ಪೇತ್ಯನನ್ನು ದುರುಗುಟ್ಟಿಕೊಂಡು ನೋಡಿದ. ಉಗ್ರಭಾವದಿಂದ ತೋಳನ್ನು ಬಗ್ಗಿಸಿ ತೇಪೆಹಾಕಿದ್ದ ಮೊಣಕೈಯ್ಯನ್ನು ತನ್ನ ಗೆಳೆಯನ ಮೂಗಿನ ಕೆಳಕ್ಕೆ ಹಿಡಿದುಕೊಂಡು "ನೆಕ್ಕು ಇದನ್ನು!" ಎಂದ. ಪೇತ್ಯ ತನ್ನ ಕಣ್ಣುಗಳನ್ನೇ ತಾನು ನಂಬದಾದ. "ನಾನು ಮಣ್ಣುತಿಂದು ಪ್ರಮಾಣ ಮಾಡಲಿಲ್ಲವೆ?" ಎಂದು ಕೇಳಿದಾಗ ತುಟಿ ನಡುಗುತ್ತಿತ್ತು ಇನ್ನೇನು ಅಳುವಸ್ಥಿತಿ.

ಆಗ ಒಂದು ದುಷ್ಟ ತಂತ್ರ ಗಾವ್ರಿಕನ ಕಣ್ಣುಗಳಲ್ಲಿ ಮಿನುಗಿತು. ಅಲ್ಲಿಯೇ ಪದ್ಮಾಸನ ಹಾಕಿ ಕುಳಿತುಬಿಟ್ಟ. ಕುಳಿತಲ್ಲಿಂದಲೇ ಒಂದುಸಲ ಬುಗುರಿಯಂತೆ ತಿರುಗಿದ. ಆಮೇಲೆ ಅಣಕಿಸುವ ಧ್ವನಿಯಲ್ಲ ರಾಗರಾಗವಾಗಿ ಹೇಳಿದ

ಆಡಿದ್ದಂಗಾಡ್ದ ಅಂಗಾಲು ಕೆರೆದ
ಮಾಡಿದ್ದಂಗ್ಮಾಡ್ದ ಮಂಗನ್ಹಾಗಾಡ್ದ.
ಹೇಳಿದ್ದಂಗ್ಹೇಳಿದ ಹಲ್ಲುಲ್ ಕಿರಿದ
ಬಗ್ಗಿ ಬಗ್ಗಿ ನೋಡ್ದ ಬೀದಿಮಣ್ ಮುಕ್ದ.

ತನ್ನ ಗೆಳೆಯ ತನ್ನನ್ನು ಗೇಲಿಮಾಡಿದ ಎಂಬುದು ಪೇತ್ಯನಿಗೆ ಅರ್ಥವಾಯಿತು, ವಾಸ್ತವವಾಗಿ ಅಂಥ ರಹಸ್ಯವೇನೂ ಗಾವ್ರಿಕನಲ್ಲಿರಲಿಲ್ಲವೆಂದು ಪೇತ್ಯ ಊಹಿಸಿದ. ತನ್ನ ಕೈಲಿ ಮಣ್ಣು ಮುಕ್ಕಿಸಿ ತನ್ನನ್ನು ನೋಡಿ ನಗಬೇಕೆಂಬುದೇ ತನ್ನ ಗೆಳೆಯನ ಉದ್ದೇಶ, ಆದುದರಿಂದಲೇ ಈ ತಂತ್ರ ಹೂಡಿದ್ದು ಎಂದು ಅವನು ಭಾವಿಸಿದ. ಈಗೇನೋ ತನಗೆ ಅವಮಾನವಾದದ್ದು ನಿಜ. ಆದರೆ ಅದನ್ನು ಸದ್ಯಕ್ಕೆ ಸಹಿಸಿಕೊಳ್ಳಬೇಕು; ಮುಂದೆ ಸಮಯ ಬಂದಾಗ ಒಂದು ಕೈ ತೋರಿಸಲೇ ಬೇಕು; ಆಗ ಅದರ ರುಚಿ ಗಾವ್ರಿಕನಿಗೆ ಗೊತ್ತಾಗುವುದು ಎಂದು ಮನಸ್ಸಿನಲ್ಲಿಯೆ ಆಲೋಚಿಸಿ ಒಂದು ತೀರ್ಮಾನಕ್ಕೆ ಬಂದ.

"ಶುದ್ಧ ಹಲ್ಕ ಕಣೋ ನೀನು. ಇರಲಿ ನನಗೂ ಸಮಯ ಬರುತ್ತೆ. ಆಗ ನಾನೂ ತೋರಿಸುತ್ತೇನೆ." ಎಂದು ಗಂಭೀರವಾಗಿ ಪೇತ್ಯ ಹೇಳಿದ. ಆದರೇನು! ಗಾವ್ರಿಕ್ ನಡುನಡುವೆ ಒಂದೊಂದು ಸಲ ಇದ್ದಕ್ಕಿದ್ದ ಹಾಗೆ ಖುಷಿಯಿಂದ ಕಾಲುಗಳನ್ನು ಎತ್ತಿ ಹಾಕುತ್ತ ಕುಣಿಯುತ್ತ ಚಪ್ಪಾಳೆ ತಟ್ಟಿಕೊಂಡು ಹಾಡಲಾರಂಭಿಸುತ್ತಿದ್ದ:

ಆಡಿದ್ದಂಗಾಡ್ದ ಅಂಗಾಲು ಕೆರೆದ
ಮಾಡಿದ್ದಂಗ್ಮಾಡ್ದ ಮಂಗನ್ನಾಗಾಡ್ದ:
ಹೇಳಿದ್ದಂಗ್ಹೇಳಿದ ಹಲ್ಲುಲ್ಕಿರಿದ
ಬಗ್ಗಿ ಬಗ್ಗಿ ನೋಡ್ದ ಬೀದಿ ಮಣ್ಮುಕ್ದ.

೨೨. ಕಾರ್ಖಾನೆಯ ಉಪನಗರ.

ಕಾರ್ಖಾನೆಯ ಉಪನಗರಕ್ಕೆ ಹೋಗುವ ದಾರಿ ಅವರಿಗೆ ವಿನೋದಕರವಾಗಿತ್ತು, ದಾರಿಯಲ್ಲಿ ಅವರು ಅನೇಕ ಕುತೂಹಲದಾಯಕವಾದ ವಿಷಯಗಳನ್ನು ಕಂಡರು.

ತಮ್ಮ ನಗರ ಅಷ್ಟೊಂದು ವಿಸ್ತಾರವಾಗಿದೆಯೆಂದು ಪೇತ್ಯ ಯೋಚಿಸಿರಲಿಲ್ಲ. ಅಪರಿಚಿತವಾಗಿದ್ದ ಆ ಬೀದಿಗಳು ಕ್ರಮಕ್ರಮವಾಗಿ ಬಡತನದ ಚಿಹ್ನೆಗಳನ್ನು ಪಡೆದಿದ್ದುದು ಕಂಡು ಬಂದಿತು. ರಸ್ತೆ ಮಗ್ಗುಲಲ್ಲೇ ಜಾಲಿ ಮರಗಳ ನೆರಳಿನಲ್ಲಿ ಮಾರಾಟಗಾರರು ತಮ್ಮ ಸರಕುಗಳನ್ನು ಹರಡಿಕೊಂಡಿದ್ದರು. ಅಗ್ಗವಾದ ಕಬ್ಬಿಣದ ಮಂಚಗಳು, ಪಟಪಟಿ ಚಾಪೆಗಳು, ಅಡಿಗೆ ಮನೆಗೆ ಅಗತ್ಯವಾದ ಉಪಕರಣಗಳು, ದಪ್ಪ ಕೆಂಪು ಬಣ್ಣದ ದಿಂಬುಗಳು, ಬರಲುಗಳು, ಧೂಳು ಹೊಡೆಯುವ ತೊಡಪಗಳು, ಮೆತ್ತೆಗೆ ಹಾಕುವ ಸ್ಪ್ರಿಂಗುಗಳು—ಹೀಗೆ ಎಷ್ಟೊಂದು ಸಾಮಾನುಗಳು ರಾಶಿ ರಾಶಿಯಾಗಿ ಬಿದ್ದಿದ್ದುವೋ! ಅವುಗಳೆಲ್ಲ ಹೊಸ ವಸ್ತುಗಳು, ಆದರೆ ಅಷ್ಟೇ ಅಗ್ಗವೂ ಆಗಿದ್ದುವು,

ಹೂಳು ಭೂಮಿಯಿಂದ ಆಚೆ ಕಡೆಯಲ್ಲಿ ಸೌದೆ ಅಂಗಡಿಗಳು ಸಾಲಾಗಿದ್ದುವು. ಸೌದೆಗಳಿಂದ ಹೊರಟ ಮರದ ಹುಳಿವಾಸನೆ ಹೊಡೆಯುತ್ತಿತ್ತು. ಅದು ಮೂಗಿಗೆ ಹಿತವಾಗಿತ್ತು. ಅದಾದ ಬಳಿಕ ಹುಲ್ಲಿನ ಅಂಗಡಿಗಳಿದ್ದುವು. ಒಣ ಹುಲ್ಲು, ಹೊಟ್ಟು, ತೋಕೆಗೋಧಿ ಮೊದಲಾಮವುಗಳು ಆ ಅಂಗಡಿಗಳಲ್ಲಿ ಧಂಡಿಯಾಗಿ ಬಿದ್ದಿದ್ದುವು. ಅವುಗಳನ್ನು ತೂಕಮಾಡುವ ಸಲುವಾಗಿ ಸರಪಣಿಯಿಂದ ನೇತು ಹಾಕಿದ ದೊಡ್ಡ ತ್ರಾಸುಗಳೂ, ಭಾರಿ ಭಾರಿ ತೂಕದ ಬಟ್ಟುಗಳೂ ಅಲ್ಲಿ ಕಂಗೊಳಿಸುತ್ತಿದ್ದುವು.

ಹುಲ್ಲಿನ ಅಂಗಡಿಗಳ ಮುಂದಕ್ಕೆ ಚೌಬೀನೆ ಅಂಗಡಿಗಳಿದ್ದುವು. ಅಲ್ಲಿ ಹಲಗೆಗಳನ್ನು ಹದಗೊಳಿಸುತ್ತಿದ್ದರು. ಗರಗಸದಿಂದ ಬಿದ್ದ ಮರದ ಪುಡಿಯ ಕಟುವಾಸನೆ ಮೂಗಿಗೆ ಹೊಡೆಯುತ್ತಿತ್ತು. ಇಲ್ಲಿ ಹುಳಿ ವಾಸನೆಗೆ ಬದಲಾಗಿ ಬಿಸಿ ಪರಿಮಳವನ್ನು ಆಘ್ರಾಣಿಸಬಹುದಾಗಿತ್ತು. ಅಲ್ಲದೆ ಸ್ವಲ್ಪ ಮಟ್ಟಿಗೆ ಅದರಲ್ಲಿ ಕರ್ಪೂರ ತೈಲದ ವಾಸನೆ ಬೆರೆತಿದ್ದಂತೆ ತೋರುತ್ತಿತ್ತು.

ಕಾರ್ಖಾನೆಯ ಉಪನಗರವನ್ನು ಹತ್ತಿರ ಸೇರುತ್ತಿದ್ದಂತೆ ಆ ಸನ್ನಿವೇಶ ಒಡ್ಡೊಡ್ಡಾಗಿಯೂ ವಿಕಾರವಾಗಿಯೂ ಕಾಣುವುದಕ್ಕೆ ಆರಂಭಿಸಿತ್ತೆಂಬುದನ್ನು ನೋಡಿದವರು ಸುಲಭವಾಗಿ ಹೇಳಬಹುದಾಗಿತ್ತು. ನಗರದ ಶ್ರೀಮಂತ ಭಾಗದಲ್ಲಿದ್ದಂಥ 'ಪಾನೀಯದ ಅಂಗಡಿ'ಗಳು ಇಲ್ಲಿ ನೋಡಲೂ ಸಿಕ್ಕುತ್ತಿರಲಿಲ್ಲ. ಆ ಅಂಗಡಿಗಳಲ್ಲಿದ್ದ ಥಳಥಳಿಸುವ ಸುಂದರವಾದ ಸುತ್ತು ಸೀಸೆಗಳೂ ಸಾಲುಸಾಲಾಗಿ ಜೋಡಿಸಿಟ್ಟಿದ್ದ ಬಣ್ಣಬಣ್ಣದ ಶರಬತ್ತಿನ ಗಾಜಿನ ಜಾಡಿಗಳೂ ಇಲ್ಲೆಲ್ಲಿ ಬರಬೇಕು. ಮುಳ್ಳು ಚಮಚಗಳ ಮೇಲೆ ನಿಂತ ವಿಮಾನುಗಳ ನೀಲಿ ಚಿತ್ರದ ಹಲಗೆಯನ್ನುಳ್ಳ ಭೋಜನಮಂದಿರಗಳೂ, ಬಾಗಿಲುಗಳ ಮೂಲಕ ಕಾಣುತ್ತಿದ್ದ ಬಿಳಿಯ ಅಂಡಾಕಾರದ ಚಹಾ ಪಾತ್ರೆಗಳನ್ನಿಟ್ಟಿದ್ದ

ಉಪಹಾರಗೃಹಗಳೂ ಅವುಗಳ ಸ್ಥಳವನ್ನು ಆಕ್ರಮಿಸಿದ್ದುವು. ಆ ಚಹಾ ಪಾತ್ರೆಗಳ ಮೇಲೆ ಒಡ್ಡೊಡ್ಡಾಗಿ ಹೂವುಗಳ ಚಿತ್ರವನ್ನು ಚಿತ್ರಿಸಲಾಗಿತ್ತು. ಅವು ಚಿತ್ರಗಳು ಎನ್ನುವುದಕ್ಕೆ ಬದಲಾಗಿ ವಾಸ್ತವಿಕವಾಗಿ ಒರಟೊರಟಾಗಿ ಬೆಳೆದ ಗಿಡಬಳ್ಳಿಗಳು ಎನ್ನಿಸುತ್ತಿದ್ದುವು. ಅಂದವಾದ ಕುದುರೆಸಾರೋಟುಗಳಿಗೆ ಬದಲಾಗಿ ಸಾಮಾನಿನ ತಗ್ಗು ಬಂಡಿಗಳು ಹುಲ್ಲು ಹೊಟ್ಟು ಮೊದಲಾದುವು ಚೆಲ್ಲಿದ್ದ ಹಳ್ಳತಿಟ್ಟುಗಳಿದ್ದ ಅಸಮವಾದ ರಸ್ತೆಯ ಮೇಲೆ ಗಡಗಡ ಶಬ್ದ ಮಾಡುತ್ತ ಚಲಿಸುತ್ತಿದ್ದುವು.

ಆದರೆ ಈ ರಸ್ತೆಗಳು ಹುಡುಗರ ಆಟದ ವಸ್ತುಗಳು ದೊರಕುವ ಕಣಜದಂತೆ ಇದ್ದುವು. ಹೆಜ್ಜೆಗೊಂದು ಸಲ ಆ ಹುಡುಗರು ಬಗ್ಗಿ ಒಂದು ಕುದುರೆ ಲಾಳವನ್ನೋ, ಒಂದು ತಿರುಪು ಮೊಳೆಯನ್ನೋ, ಒಂದು ಖಾಲಿ ಸಿಗರೇಟ್ ಪೊಟ್ಟಣವನ್ನೊ ಕೈಗೆ ತೆಗೆದುಕೊಳ್ಳುತ್ತಿದ್ದರು. ಯಾವುದಾದರೂ ಒಂದು ವಸ್ತು ಕಣ್ಣಿಗೆ ಬಿದ್ದೊಡನೆ ಒಬ್ಬರನ್ನೊಬ್ಬರು ತಳ್ಳುತ್ತಾ ಆ ಸ್ಥಳಕ್ಕೆ ಓಡುತ್ತಿದ್ದರು.

"ಇಬ್ಬರಿಗೂ ಸಮ" ಅಥವಾ "ಸಿಕ್ಕಿದ್ದು ಇಬ್ಬರಿಗೂ ಸೇರಿದ್ದು" ಎಂದು ಅವರು ಕಿರಿಚಿಕೊಳ್ಳುವರು. ಮೊದಲು ಬಾಯಿಂದ ಹೊರಟ ಮಾತು ವೇದವಾಕ್ಯದಂತೆ ಪರಿಗಣಿಸಲ್ಪಡುತ್ತಿತ್ತು. ಅದು ಅಲಂಘ್ಯ. ಆ ವೇದವಾಕ್ಯದ ಪ್ರಕಾರ ಸಿಕ್ಕಿದ ನಿಧಿ ವೈಯಕ್ತಿಕ ಆಸ್ತಿಯೋ, ಇಲ್ಲವೆ ಇಬ್ಬರೊಟ್ಟಿನ ವಸ್ತುವೋ ಆಗಿಬಿಡುತ್ತಿತ್ತು.

ಮೊದಮೊದಲು ಕಂಡದ್ದನ್ನೆಲ್ಲ ಎತ್ತಿಕೊಳ್ಳುತ್ತಿದ್ದವರು ಈಗ ತಮ್ಮ ನಿಧಿ ಸಂಗ್ರಹ ಅಧಿಕವಾದುದರಿಂದ ಅಲ್ಲೊಂದು ಇಲ್ಲೊಂದು ವಿಶೇಷ ವಸ್ತುಗಳನ್ನು ಮಾತ್ರ ಆರಿಸಿಕೊಳ್ಳಲಾರಂಭಿಸಿದರು, ಅದರಲ್ಲೂ ಸಿಗರೇಟ್ ಪೊಟ್ಟಣಗಳನ್ನು ಕಂಡಷ್ಟೆ ಬಿಡುತ್ತಿರಲಿಲ್ಲ. ಸಿಗರೇಟಿನ ಆ ಪೊಟ್ಟಣಗಳು ಹುಡುಗರಿಗೆ "ಟಿಕ್ಕಿ" ಆಟಕ್ಕೆ ಅಗತ್ಯವಾದುವುಗಳಾಗಿದ್ದುವು. ರಟ್ಟಿನ ಮೇಲಿನ ಚಿತ್ರಕ್ಕನುಸಾರವಾದ ಬೆಲೆಯಿದ್ದಿತು ಅವುಗಳಿಗೆ. ರಟ್ಟಿನ ಮೇಲೆ ಹೆಂಗಸಿನ ಅಥವಾ ಗಂಡಸಿನ ಚಿತ್ರವಿದ್ದರೆ ಅದರ ಬೆಲೆ ಐದು, ಮನೆಯ ಚಿತ್ರವಿದ್ದರೆ ಐವತ್ತು. ಪ್ರತಿಯೊಬ್ಬ ಒಡೆಸ್ಸ ಬಾಲಕನೂ ಇಂಥ ಸಿಗರೇಟಿನ ರಟ್ಟುಗಳ ಚಿತ್ರದ ಕಟ್ಟನ್ನು ತನ್ನ ಜೇಬಿನಲ್ಲಿಟ್ಟೇ ಇರುತ್ತಿದ್ದನು. ಪೆಪ್ಪರ್‌ಮೆಂಟು ಮತ್ತು ಚಾಕಲೇಟಿನ ಮೇಲಿನ ಬಣ್ಣ ಬಣ್ಣದ ಕಾಗದಗಳಿಂದಲೂ ಒಂದು ರೀತಿಯ ಆಟವನ್ನು ಆಡುವ ಪದ್ಧತಿಯಿದ್ದಿತು. ಆದರೆ ಇದು ಹುಡುಗಿಯರ ಆಟವಾಗಿದ್ದಿತು. ಐದು ವರ್ಷಗಳೊಳಗಿನ ಮಕ್ಕಳು ಇದನ್ನು ಆಡಲು ಅಭ್ಯಂತರವಿರಲಿಲ್ಲ. ಗಾವ್ರಿಕ್ ಮತ್ತು ಪೇತ್ಯ ಆಗಲೆ ದೊಡ್ಡ ಹುಡುಗರಾಗಿದ್ದರು. ಪೆಪ್ಪರಮೆಂಟ್ ಮತ್ತು ಚಾಕಲೇಟುಗಳ ಮೇಲಿನ ಕಾಗದಗಳನ್ನು ಅವರು ತುಚ್ಛವಾಗಿ ಕಾಣುತ್ತಿದ್ದರು, ಅವರು ಕೇವಲ ಸಿಗರೇಟ್ ರಟ್ಟಿನ ಚಿತ್ರಗಳಿಂದಲೇ ಆಟ ಆಡುತ್ತಿದ್ದರು. ಸಮುದ್ರ ತೀರದ ಜಿಲ್ಲೆಗಳಲ್ಲಿ ಕೊರವರ (ಜಿಪ್ಸಿ) ಮತ್ತು ಸ್ವಾಲೋ ಹಕ್ಕಿಗಳ ಚಿತ್ರವಿದ್ದ ಸಿಗರೇಟುಗಳಲ್ಲಿ ಏನು ಸುಖವಿತ್ತೋ ದೇವರಿಗೇ ಗೊತ್ತು. ಅದನ್ನು ಬಳಸುತ್ತಿದ್ದ ಜನಕ್ಕೆ ಕೂಡ ಅದು ತಿಳಿದಿರಲಿಲ್ಲವೇನೋ! ಅವು ಅತ್ಯಂತ ಕಡಿಮೆ ದರ್ಜೆಯ ಸಿಗರೇಟುಗಳಾಗಿದ್ದುವು. ನೀಲಲೋಚನೆಯಾದ ಕೊರವರ ಹುಡುಗಿಯೊಬ್ಬಳು ತನ್ನ ಮುಡಿಯಲ್ಲಿ ಗುಲಾಬಿಯೊಂದನ್ನು ಸಿಕ್ಕಿಸಿಕೊಂಡು ತನ್ನ ಕೆಂದುಟಿಗಳ ನಡುವೆ ಸಿಗರೇಟನ್ನು ಕಚ್ಚಿ ಧೂಮಪಾನ ಮಾಡುತ್ತಿರುವಂತೆ ಇದ್ದ ಒಂದು ಚಿತ್ರ ರಟ್ಟಿನ ಮೇಲೆ ಇರುತ್ತಿತ್ತು. ಇವಕ್ಕೆ ಬಹಳ ಹೆಚ್ಚು ಎಂದರೆ ಬೆಲೆ ಐದು, ಕಾರಣ ಆ ಚಿತ್ರ ಸೊಂಟದಿಂದ ಮೇಲಕ್ಕೆ ಮಾತ್ರ ಇತ್ತು.

ಇನ್ನೊಂದು ರೀತಿಯ ಸಿಗರೇಟಿನ ಪೊಟ್ಟಣದ ಮೇಲೆ ದುಃಖ ಕವಿದ ಮೂರ್ತಿಯುಳ್ಳ ಸ್ವಾಲೋ ಹಕ್ಕಿಗಳ ಮೂರು ಚಿತ್ರಗಳಿರುತ್ತಿದ್ದುವು. ಇವುಗಳ ಬೆಲೆ ಮೂರು. ಯಾವ ಚಿತ್ರವೂ ಇಲ್ಲದ ಜೆಫಿರ್ ಸಿಗರೇಟುಗಳನ್ನು ಕೆಲವರು ಸೇದುತ್ತಿದ್ದರು. ಇವರು ಮಂಕರೇ ಇರಬೇಕೆಂದು ಆ ಹುಡುಗರ ಅಭಿಪ್ರಾಯ. ಜೆಫಿರ್ ಸಿಗರೇಟ್ ರಟ್ಟುಗಳನ್ನು ಟಿಕ್ಕಿ ಆಟದಲ್ಲಿ ಯಾರೂ ತೆಗೆದುಕೊಳ್ಳುತ್ತಿರಲಿಲ್ಲ. ಇದರಲ್ಲಿ ಒಂದು ವಿಚಿತ್ರವೇನೆಂದರೆ ಆ ಸಿಗರೇಟುಗಳಿಗೆ ಉಳಿದೆಲ್ಲವುಗಳಿಗಿಂತ ಬೆಲೆ ಹೆಚ್ಚು. ಅಂಥ ಕಚಡವನ್ನು ಕೊಂಡುಕೊಳ್ಳಬೇಕಾದರೆ ಅವನು ಖಂಡಿತ ಮಡೆಯನಿರಬೇಕು, ಅಷ್ಟೆ. ಜೆಫಿರ್ ಸಿಗರೇಟ್ ಪೊಟ್ಟಣ ಕಣ್ಣಿಗೆ ಬಿದ್ದಾಗಲೆಲ್ಲ ಪೇತ್ಯ ಮತ್ತು ಗಾವ್ರಿಕ್ ಇಬ್ಬರೂ ಜಿಗುಪ್ಸೆಯಿಂದ ಅದರ ಮೇಲೆ ಕ್ಯಾಕರಿಸಿ ಉಗಿಯುತ್ತಿದ್ದರು.

ಆ ಹುಡುಗರಿಬ್ಬರೂ ತಾವು ಯಾವಾಗ ದೊಡ್ಡವರಾದೇವೋ, ಎಂದು ಸಿಗರೇಟುಗಳನ್ನು ಸೇದುತ್ತೇವೋ ಎಂಬ ತವಕದಿಂದ ಕುದಿಯುತ್ತಿದ್ದರು. ಆಗ ತಾವು ಖಂಡಿತ ತಿಳಿಗೇಡಿಗಳಾಗಿ ವರ್ತಿಸುವುದಿಲ್ಲವೆಂದು ಖಚಿತಪಡಿಸಿಕೊಂಡಿದ್ದರು. ಆಗ ತಾವು 'ಕೆರ್ಚೆಸ್' ಸಿಗರೇಟುಗಳನ್ನೇ ಕೊಂಡುಕೊಳ್ಳುವುದೆಂದು ತೀರ್ಮಾನಿಸಿದ್ದರು. ಅದರ ರಟ್ಟಿನ ಮೇಲೆ ರೇವು ಪಟ್ಟಣ ಮತ್ತು ಅನೇಕ ಹಡಗುಗಳಿದ್ದ ಚಿತ್ರವಿರುತ್ತಿತ್ತು. ಅದೂ ಅರ್ಧಂಬರ್ಧ ಚಿತ್ರವಲ್ಲ, ಪೂರ್ಣಾಕಾರದ ಚಿತ್ರ. ಹುಡುಗರಲ್ಲಿ ಅತಿ ನಿಪುಣರೆನಿಸಿಕೊಂಡವರೂ ಕೂಡ 'ಕೆರ್ಚೆಸ್'ಗೆ ಏನು ಬೆಲೆ ಕಟ್ಟಬೇಕೆಂಬುದನ್ನು ನಿಷ್ಕರ್ಷೆಮಾಡಿ ಹೇಳಲು ತಿಳಿದಿರಲಿಲ್ಲ. ಏಕೆಂದರೆ ಹಡಗುಗಳಿಗೆ ಬೆಲೆಕಟ್ಟುವುದರಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಆದರೆ ಅದಕ್ಕೊಂದು ಬೆಲೆ ಕಟ್ಟಿರಲೇಬೇಕು. ಏಕೆಂದರೆ ಅದನ್ನು ಆಟದಲ್ಲಿ ಉಪಯೋಗಿಸಬೇಕಾಗಿತ್ತು. ಹುಡುಗರು ಅದರ ವಿನಿಮಯದ ಬೆಲೆ ಐನೂರು ಎಂದು ನಿಗದಿಮಾಡಿದ್ದರು.

ಪೇತ್ಯ ಮತ್ತು ಗಾವ್ರಿಕ್ ಬಹುಭಾಗ್ಯಶಾಲಿಗಳಾಗಿದ್ದರು. ಅವರಿಗೆ 'ಕೆರ್ಚೆಸ್' ಸಿಗರೇಟಿನ ರಟ್ಟುಗಳು ವಿಪುಲವಾಗಿ ದೊರೆತುವು. ಹೂಳುಭೂಮಿಯ ಬಳಿಯ ಧೂಮಪಾನಾಸಕ್ತರೆಲ್ಲ 'ಕೆರ್ಚೆಸ್' ಸಿಗರೇಟುಗಳನ್ನೇ ಸೇದುತ್ತಿದ್ದರೆಂದು ಅದರಿಂದ ತಿಳಿಯಬಹುದಾಗಿತ್ತು! ಅವುಗಳನ್ನು ಆರಿಸಿಕೊಳ್ಳಲು ಹೋಗಿ ಒಬ್ಬರ ಮೇಲೊಬ್ಬರು ಬೀಳುತ್ತಿದ್ದರು. ಮೊದಲು ಅವರು ತಮ್ಮ ಕಣ್ಣುಗಳನ್ನು ನಂಬದಾದರು. ಹೆಜ್ಜೆಹೆಜ್ಜೆಗೂ ಮೂರು ರೂಬಲುಗಳ ನೋಟು ದೊರೆಯುವಂತೆ ನೀವು ಕನಸು ಕಾಣುತ್ತಿದ್ದರೆ ಹೇಗಿರುತ್ತದೆ! ಬಹು ಸ್ವಲ್ಪಹೊತ್ತಿನಲ್ಲೇ ಅವರ ಜೇಬುಗಳು ಸಿಗರೇಟಿನ ರಟ್ಟುಗಳಿಂದ ತುಂಬಿ ಹೋದುವು. ಅವರೀಗ ಸಂಪದ್ಭರಿತರಾಗಿದ್ದುದರಿಂದ ಅವರಿಗೆ ತಮ್ಮ ನಿಧಿಯಿಂದ ದೊರಕುವ ಸಂತೋಷ ನಷ್ಟವಾಗಿತ್ತು. ಅವರಿಗೆ ಕಟಕಿಯಾಗುವಷ್ಟು ಮೆಚ್ಚಿನ ನಿಧಿ ಸಿಕ್ಕಿತ್ತು.

ಎತ್ತರವಾದ ಕಾರ್ಖಾನೆಯ ಗೋಡೆಯೊಂದು ಕಂಡುಬಂದಿತು. ಹೊಗೆ ಹಿಡಿದ ಇಟ್ಟಿಗೆಯ ಆ ಗೋಡೆಯ ಮೇಲೆ ದಪ್ಪ ದಪ್ಪ ಅಕ್ಷರಗಳಲ್ಲಿ ಏನನ್ನೋ ಬರೆದಿತ್ತು. ಅಕ್ಷರಗಳು ಎಷ್ಟು ದೊಡ್ಡವಾಗಿದ್ದವೆಂದರೆ ಹತ್ತಿರದಿಂದ ಅವುಗಳನ್ನು ಓದಲು ಆಗುತ್ತಲೇ ಇರಲಿಲ್ಲ. ಆ ಗೋಡೆಯ ಪಕ್ಕದಲ್ಲಿ ಪೇತ್ಯ ಮತ್ತು ಗಾವ್ರಿಕ್ ಆಟವಾಡುತ್ತ ನಿಂತರು. ಚಿತ್ರವನ್ನು ಮೇಲಕ್ಕೆ ಚಿಮ್ಮಿ ಅದು ಕೆಳಗೆ ಬಿದ್ದಾಗ ಯಾವ ಕಡೆ ಮೇಲಿರುತ್ತದೆಂದು ನೋಡುವ ಆಟ ಅದು. ಈ ಆಟವನ್ನು ಹಲವು ಬಾರಿ ಆಡಿದರು. ಆ ಆಟದಲ್ಲಿ ಅವರಿಗೆ ಅಂಥ ಆಸಕ್ತಿ ಹುಟ್ಟಲಿಲ್ಲ. ತಮ್ಮ ಬಳಿ ಅನೇಕ ಚಿತ್ರ,

ಗಳಿದ್ದುದರಿಂದ ಅವುಗಳಲ್ಲಿ ಕೆಲವನ್ನು ಸೋತರೂ ಏನೂ ಯೋಚನೆಯಿರಲಿಲ್ಲ. ಈ ಕಾರಣದಿಂದ ಆ ಆಟದಲ್ಲಿ ಅವರಿಗೆ ಹೆಚ್ಚಿನ ಖುಷಿ ದೊರೆಯಲಿಲ್ಲ.

ಅಲ್ಲಿಂದ ಪುನಃ ಅವರು ಮುಂದುವರಿದರು. ಅಡ್ಡಾಡಿಕೊಂಡು ಮುಂದೆ ಹೋದಂತೆ ನಗರದ ಸ್ವರೂಪವೂ ನಡತೆಯೂ ಬದಲಾಯಿಸುತ್ತಿದ್ದುದನ್ನು ಅವರು ಗಮನಿಸಿದರು. ಸ್ವಲ್ಪ ಕಾಲ ಸಮಾಧಿಭೂಮಿಯ ಮತ್ತು ಕಾರಾಗೃಹದ ಆವರಣವು ಪ್ರಧಾನವಾಗಿತ್ತು. ಕ್ರಮೇಣ ಅದು ಮಳಿಗೆಗಳು ಮತ್ತು ಉಪಹಾರಗೃಹಗಳಿಗೆ ಸ್ಥಳವನ್ನು ಬಿಟ್ಟುಕೊಟ್ಟಿತು. ಆ ಬಳಿಕ ಕಾರ್ಖಾನೆಗಳ ಸರದಿ. ಈಗ ರೈಲುಗಳು ಆ ದೃಶ್ಯಕ್ಕೆ ಕಾಲಿಟ್ಟು ತಾವೇ ತಾವಾದುವು. ಸಾಮಾನು ತುಂಬುವ ಮಳಿಗೆಗಳು, ರೈಲುಬಂಡಿಗಳ ಸಂಚಾರವನ್ನು ಕ್ರಮಗೊಳಿಸುವ ತಡೆಸಂಜ್ಞೆಗಳು, ಕೆಂಪು ಹಸುರು ದೀಪಗಳ ಕೈಮರಗಳು ಕಣ್ಣಿನ ಮುಂದೆ ವಿಸ್ತರಿಸಿದ್ದುವು. ಹಾಗೆಯೇ ನೋಡುತ್ತ ಮುಂದೆ ಹೋಗಲು ಎದುರಿಗೆ ಕಬ್ಬಿಣದ ಹೆಬ್ಬಾಗಿಲು ಅಡ್ಡವಾಗಿ ಬಂದಿತು. ರೈಲು ಕಂಬಿಗಳನ್ನು ದಾಟುವ ಅಡ್ಡರಸ್ತೆಯಾಗಿತ್ತು ಅದು.

ಹಸುರು ಬಾವುಟವನ್ನು ಕೈಯಲ್ಲಿ ಹಿಡಿದು ರೈಲು ಕಂಬಿಗಳನ್ನು ಬದಲಾಯಿಸುವ ಕೆಲಸದ ಜವಾಬ್ದಾರಿಯನ್ನು ಹೊತ್ತಿದ್ದ ಒಬ್ಬನು ಕೈಮರಗಳ ಕೀಲುಗಳಿದ್ದ ಗೂಡಿನಿಂದ ಹೊರಟು ಎದುರಿಗೆ ಬಂದ. ಮರಗಳ ಹಿಂದಿನಿಂದ ಶುಭ್ರವಾದ ಆವಿಯ ಮೋಡವೆದ್ದಿತು. ಕಲ್ಲಿದ್ದಲು ಮತ್ತು ನೀರು ಇರುವ ಸರಬರಾಯಿ ಬಂಡಿಯನ್ನು ತಳ್ಳಿಕೊಂಡು ಒಂದು ದೊಡ್ಡ ರೈಲು ಇಂಜನ್ ಆ ಹುಡುಗರ ಕಣ್ಣುಗಳ ಮುಂದೆ ಹಾದುಹೋಯಿತು. ಹುಡುಗರು ಮಂತ್ರಮುಗ್ಧರಾದಂತೆ ನಿಂತುಬಿಟ್ಟರು. ಆಹಾ, ಎಂಥ ದೃಶ್ಯ! ಹಿರಿಯರ ಅಪ್ಪಣೆಯಿಲ್ಲದೆ ಮನೆ ಬಿಟ್ಟದ್ದು ಈಗ ಸಾರ್ಥಕವಾಯಿತು. ರೈಲು ಇಂಜನ್ನಿನ ಚಕ್ರಗಳನ್ನು ತಳ್ಳುತ್ತಿದ್ದ ಆ ಪಟ್ಟಿ ಹೇಗೆ ಸರಸರನೆ ಚಲಿಸುತ್ತಿತ್ತು. ರೈಲು ಕಂಬಿಗಳು ಅದೆಂಥ ಸುಮಧುರಗಾನವನ್ನು ಹೊರಹೊಮ್ಮಿಸುತ್ತಿದ್ದವು. ಪಾರದರ್ಶಕದಂತಿದ್ದ ಒತ್ತಾದ ಆವಿಯು ಮುಸುಕಿದ್ದರೂ ಅದರ ಹಿಂದೆ ಚಕ್ರಗಳು ಗರಗರನೆ ತಿರುಗುತ್ತಿದ್ದುದು ಹೇಗೆ ಕಾಣಿಸುತ್ತಿತ್ತು. ಆಹಾ ಅದೇನು ಮಿಂಚು, ಅದೇನು ಆಕರ್ಷಣೆ!

ರೈಲುಯಂತ್ರ ಕರ್ತವ್ಯಪರವಾಗಿ ನೆಟ್ಟದೃಷ್ಟಿಯಿಂದ ಮುಂದೆ ಹೋಗುತ್ತಿದ್ದರೆ ಅದರ ಅಮಾನುಷ ಶಕ್ತಿಯನ್ನು ನೋಡಿ ಆ ಹುಡುಗರ ಮನಸ್ಸು ಮೋಹಗೊಂಡಿತು, ಮರುಳಾಯಿತು. ಅವರಾಗಲೇ ತಮ್ಮ ಆತ್ಮಗಳನ್ನು ರೈಲುಯಂತ್ರದ ಚಕ್ರಗಳ ಕೆಳಕ್ಕೆ ನಿವೇದಿಸಿಕೊಂಡಾಗಿತ್ತು. ಹೀಗೆ ಆತ್ಮದಿಂದ ಪರಿತ್ಯಕ್ತವಾದ ಆ ದೇಹಗಳು ಆ ಪ್ರಲೋಭನವನ್ನು ತಡೆಯಲು ತಮ್ಮ ಸಾಮರ್ಥ್ಯವನ್ನೆಲ್ಲ ವೆಚ್ಚಮಾಡಬೇಕಾಯಿತು. ಹೇಗೋ ತಡೆದುಕೊಂಡು ಹಿಂದಕ್ಕೆ ನಿಂತದ್ದೇ ಹೆಚ್ಚು. ಈಗ ಆ ದೇಹಗಳು ಮೈಮೇಲಿನ ಪರಿವೆಯಿಲ್ಲದೆ ಸ್ತಬ್ಧವಾಗಿ ನಿಂತಿದ್ದುವು. ರೈಲಿನ ಆ ಭೂತಾಕಾರದ ಎದುರು ಅವರ ಮುಖಗಳು ಭಯದ ಭಾವನೆಯಿಂದ ಬಿಳಿಚಿಕೊಂಡವು. ಆನೆಯೆದುರಿನ ಆಡಿನಂತೆ ಹೊಳೆಯುವ ಕಣ್ಣುಗಳಿಂದ ಪಿಳಪಿಳನೆ ನೋಡುತ್ತ ಅವರು ಅಲ್ಲಾಡದೆ ಕಾಲುಗಳನ್ನಗಲಿಸಿಕೊಂಡು ನಿಂತುಬಿಟ್ಟಿದ್ದರು. ಅವರ ನೆತ್ತಿ ಬೆವರಿನಿಂದ ತೊಯ್ದಿತ್ತು. ಎಷ್ಟು ಭಯಂಕರ, ಆದರೆ ಅದೇ ಎಷ್ಟು ಪರಮಾನಂದಕರ!

ಗಾಪ್ರಿಕನಿಗೆ ಇದೇನು ಅಂಥ ಹೊಸದಲ್ಲ. ಪೇತ್ಯನಿಗಾದರೋ ಇದು ಮೊದಲನೆಯ ಅನುಭವ. ಈ ದೃಶ್ಯದಿಂದ ಅವನು ಪುಲಕಿತನಾಗಿದ್ದ. ಅಂಡಾಕಾರದ ರೈಲಿನ ಕಿಟಕಿಯ

ಳಿ ಯಂತ್ರ ಚಾಲಕನ ತಲೆಗೆ ಬದಲಾಗಿ ಕೆಂಪುಪಟ್ಟಿಯ ಟೋಪಿ ಧರಿಸಿದ್ದ ಸೈನಿಕನ ತಲೆ ಇದ್ದು ದನ್ನೂ ಅವನು ಮೊದಲು ಗಣನೆಗೆ ತಂದುಕೊಂಡಿರಲಿಲ್ಲ. ಕಲ್ಲಿದ್ದಲು ತುಂಬಿದ ಸರಬರಾಜು ಾಡಿಯ ಮೇಲೆ ಇನ್ನೊಬ್ಬ ಸೈನಿಕ ನಿಂತಿದ್ದ. ಬಂದೂಕಿಗೆ ಉಪಯೋಗಿಸುವ ಗುಂಡುಗಳನ್ನು ಡಲುಬೇಕಾದ ಚೀಲಗಳಿದ್ದ ನಡುಪಟ್ಟಿಯನ್ನು ಅವನು ಧರಿಸಿದ್ದ. ಅವನ ಕೈಯಲ್ಲಿ ಬಂದೂಕ ದ್ದಿತು. ಅದನ್ನೂ ಕೂಡ ಪೇತ್ಯ ಪ್ರಥಮತಃ ಗಮನಿಸಲಿಲ್ಲ.

ಮುಂದಿನ ತಿರುವನ್ನು ದಾಟಿ ರೈಲುಇಂಜನ್ನು ಹೊರಟು ಹೋಯಿತು. ಅದು ಕಣ್ಮರೆ ಯಾದಮೇಲೆ ಆ ಹುಡುಗರು ದಿಣ್ಣೆಯನ್ನೇರಿ ಓಡಿದರಲ್ಲದೆ, ಬೆಳ್ಳಗೆ ಹೊಳೆಯುತ್ತಿದ್ದ ಬಿಸಿ ಕಂಬಿಗಳಿಗೆ ಕಿವಿಗೊಟ್ಟು ಕಬ್ಬಿಣದಿಂದ ಹೊರ ಹೊರಡುತ್ತಿದ್ದ ಸಂಗೀತವನ್ನು ಕೇಳಿ ಆನಂದಿಸಿದರು.

ರೈಲು ಕಬಿಗಳಿಗೆ ಕಿವಿಗೊಟ್ಟು ಪಡುವ ಸುಖ ಮುಗಿದ ಮೇಲೆ, ರೈಲುಕಂಬಿಗಳ ಹಾದಿಯಲ್ಲಿ ಬಿದ್ದಿದ್ದ ಚಕಮುಕಿ ಕಲ್ಲುಗಳನ್ನು ಆರಿಸಿಕೊಂಡರು. ಅದೂ ಆದ ಮೇಲೆ ಅವರು ತಮ್ಮ ದಾರಿ ಗುಂಟ ಸಾಗಿದರು. ಆಗ ಪೇತ್ಯ "ಡ್ರೈವರಿನ ಬದಲು ರೈಲು ಯಂತ್ರದಲ್ಲಿ ಸೈನಿಕನಿದ್ದನಲ್ಲ, ಯಾಕೆ?" ಎಂದು ಗಾವ್ರಿಕನನ್ನು ಪ್ರಶ್ನಿಸಿದ.

"ರೈಲು ಕೆಲಸಗಾರರು ಪುನಃ ಮುಷ್ಕರ ಹೂಡಿರುವಂತೆ ತೋರುತ್ತದೆ" ಎಂದು ಇಷ್ಟವಿಲ್ಲದ ಮನಸ್ಸಿನಿಂದಲೊ ಎಂಬಂತೆ ಗಾವ್ರಿಕ್ ಉತ್ತರ ಕೊಟ್ಟ.

"ಮುಷ್ಕರ? ಹಾಗೆಂದರೇನು?"

"ಮುಷ್ಕರ ಎಂದರೆ ಮುಷ್ಕರವೇ. ಕೆಲಸಗಾರರು ಕೆಲಸಕ್ಕೆ ಹೋಗುವುದಿಲ್ಲ. ಅವರ ಬದಲಿಗೆ ಸೈನಿಕರು ರೈಲುಗಳನ್ನು ಓಡಿಸುತ್ತಾರೆ." ಎಂಬುದಾಗಿ ಗಾವ್ರಿಕ್ ನುಡಿದ. ಅವನ ದನಿ ಯಲ್ಲಿ ವಿಷಣ್ಣಭಾವ ಒಡೆದು ತೋರುತ್ತಿತ್ತು.

"ಸೈನಿಕರು ಮುಷ್ಕರ ಹೂಡುವುದಿಲ್ಲವೇ?"

"ಇಲ್ಲ, ಸೈನಿಕರು ಮುಷ್ಕರ ಹೂಡುವಂತಿಲ್ಲ. ಅವರು ಮುಷ್ಕರಕ್ಕೆ ಪ್ರಯತ್ನ ಮಾಡಿದ ರೆಂದು ತಿಳಿದು ಬಂದರೂ ಸಾಕು ಅವರಿಗೆ ಉಗ್ರ ಶಿಕ್ಷೆ ಕಾದಿರುತ್ತದೆ."

"ಹಾಗಿಲ್ಲದೆ ಹೋಗಿದ್ದರೆ ಅವರು ಮುಷ್ಕರ ಮಾಡುತ್ತಿದ್ದರು, ಅಲ್ಲವೇ?"

"ನಿನಗೆ ಹೇಗೆ ಎನ್ನಿಸುತ್ತದೆ?"

"ನಿಮ್ಮಣ್ಣ ಟೆರೆಂಟಿ ಮುಷ್ಕರಕ್ಕೆ ಸೇರುತ್ತಾನೋ?"

"ಅದೆಲ್ಲ ಆ ಸಂದರ್ಭದ ಮೇಲೆ ಹೋಗುತ್ತದೆ."

"ಆದರೆ ಹಾಗೆ ಮುಷ್ಕರ ಹೂಡುವುದೇಕೆ?"

"ಯಾಕೆ ಅಂದರೆ....ಥೂ ನಿನ್ನ, ಸುಮ್ಮನೆ ಪೀಡಿಸುತ್ತೀಯಲ್ಲ, ಅಲ್ಲಿ ನೋಡು ಒಡೆಸ್ಸ ನಗರದ ಸರಕಿನ ನಿಲ್ದಾಣವನ್ನು. ಅದರ ಆಚೆಗೇನೆ ಕಾರ್ಖಾನೆಯ ಉಪನಗರ. ಪೇತ್ಯ ಕತ್ತನ್ನು ನೀಡಿಕೊಂಡು ಆಕಡೆ ಈಕಡೆ ತಿರುಗಿ ತಿರುಗಿ ನೋಡಿದ. ಆದರೆ ಎಲ್ಲೂ ಯಂತ್ರಗಳು ಕಾಣಲೇ ಇಲ್ಲ. ವಾಯುಯಂತ್ರಗಳೂ ಕಾಣಲಿಲ್ಲ, ಜಲಯಂತ್ರಗಳೂ ಕಾಣಲಿಲ್ಲ.

ಅವನಿಗೆ ಕಂಡದ್ದೇನು ಎಂದರೆ, ನೀರು ಗೋಪುರ, ಒಡೆಸ್ಸ ಸರಕು ನಿಲ್ದಾಣದ ಹಳದಿಯ ಕಟಕಟೆ, ಕೆಂಪು ರೈಲು ಬಂಡಿಗಳು, ಕೆಂಪು ಅಡ್ಡಪಟ್ಟಿಗಳ ಗುರುತನ್ನು ಬರೆದಿದ್ದ ಒಂದು

ಆಸ್ಪತ್ರೆ, ರೈಲು, ಮೇಣಗಬಟವನ್ನು ಹೊದಿಸಿದ ಸಾಮಾನುಗಳು, ಕಾವಲುಗಾರರು....ಇತ್ಯಾದಿ ಇತ್ಯಾದಿ.

"ಕಾರ್ಖಾನೆಯ ಉಪನಗರವೆಲ್ಲಿ ?"

"ಅಗೋ ಅಲ್ಲಿ, ಅಲ್ಲಿ ನೋಡೋ ಪೆದ್ದ, ಆ ಅಂಗಡಿಗಳ ಹಿಂದೆ."

ಕಾರ್ಖಾನೆ ನಡೆಯಲು ಬೇಕಾದ ವಾಯು ಯಂತ್ರಗಳು ಆಕಾಶದಲ್ಲಿಲ್ಲವಲ್ಲ ಎಂದು ಪೇತ್ಯ ನಿಗೆ ಸಂದೇಹ. ಆದರೆ ಪುನಃ ಕೇಳಿದರೆ ಎಲ್ಲಿ ಗಾವ್ರಿಕ್ ತನ್ನನ್ನು ಗೇಲಿ ಮಾಡಿಬಿಡುತ್ತಾನೋ ಎಂಬ ಹೆದರಿಕೆ. ಆದುದರಿಂದ ಪೇತ್ಯ ಮರುಮಾತಾಡಲಿಲ್ಲ. ಬಹು ದೀರ್ಘಕಾಲ ತಲೆ ಎತ್ತಿ ಕೊಂಡು ಆಕಡೆ ಈಕಡೆ ತಿರುಗಿ ನೋಡಿದ್ದರಿಂದ ಅವನ ಕೊರಳು ಪಟ್ಟಿ ಕತ್ತಿನ ಮೃದುವಾದ ಚರ್ಮಕ್ಕೆ ಉಜ್ಜಿ ಆ ಸ್ಥಳ ಉರಿಯಲಾರಂಭಿಸಿತು. ಎಷ್ಟು ನಿಲುಕಿದರೂ ವಾಯು ಯಂತ್ರಗಳು ಎಲ್ಲೂ ಪೇತ್ಯನ ಕಣ್ಣಿಗೆ ಬೀಳಲಿಲ್ಲ. ವಿಚಿತ್ರ!

ತಾನು ನಿರೀಕ್ಷಿಸಿದ್ದ ಯಂತ್ರಗಳು ಗಾಳಿಯಲ್ಲಿ ತಿರುಗುತ್ತ ಇರುವುದನ್ನು ಪೇತ್ಯ ಕಾಣದೆ ಹೋದುದು ಸರಿಯಷ್ಟೆ. ಆದರೆ ಅದರಿಂದ ಅವನು ಅಷ್ಟೇನೂ ಚಕಿತನಾಗಲಿಲ್ಲ. ಅಲ್ಲೊಂದು ಉದ್ದವಾದ ಹೊಗೆಯಿಂದ ಕಪ್ಪಾದ ಗೋಡೆಯಿದ್ದಿತು. ಆ ಗೋಡೆಯಲ್ಲಿ ದೊಡ್ಡ ದೊಡ್ಡ ಚಚ್ಚೌಕವಾದ ಕಿಟಕಿಗಳಿದ್ದುವು. ಅವುಗಳಲ್ಲಿಯ ಕೆಲವು ಗಾಜುಗಳು ಅಲ್ಲಲ್ಲಿ ಒಡೆದು ಹೋಗಿದ್ದುದನ್ನು ಕಾಣಬಹುದಾಗಿತ್ತು. ಆ ಗೋಡೆಯ ಪಕ್ಕದಲ್ಲಿದ್ದ ಪಾದಚಾರಿಗಳ ದಾರಿ ಯಲ್ಲಿ ಪೇತ್ಯ ಸರಸರನೆ ಹೆಜ್ಜೆ ಹಾಕುತ್ತ ಹೋದ.

ಇಷ್ಟುಹೊತ್ತಿಗೆ ಪೇತ್ಯನಿಗೆ ತಕ್ಕಮಟ್ಟಿಗೆ ಆಯಾಸವಾಗಿತ್ತು. ಧೂಳು ಮತ್ತು ಕಾರ್ಖಾನೆ ಯಿಂದ ಹೊರಬಂದ ಹೊಗೆಯಿಂದ ಕಪ್ಪಾಗಿದ್ದ ಹುಲ್ಲುಹಸಲೆಯಮೇಲೆ ಕಾಲನ್ನು ಸೀಟುತ್ತ ಪೇತ್ಯ ಗಾವ್ರಿಕನ ಹಿಂದೆ ಹಿಂದೆ ಹೋದ. ಕಾರ್ಖಾನೆಯ ಕಿಟಕಿಗಳಿಂದ ಹೊರಗೆಸೆದಿದ್ದ ಕಬ್ಬಿಣದ ಸಣ್ಣ ಸಣ್ಣ ಚೂರುಗಳು ಕಾಲಿನ ಕೆಳಗೆ ಸಿಕ್ಕಿ ಸರಸರ ಶಬ್ದ ಮಾಡಿದುವು.

ಗಾವ್ರಿಕ್ ಮೆಟ್ಟಂಗಾಲಿನಮೇಲೆ ನಿಂತು ಕಿಟಕಿಯ ಒಳಕ್ಕೆ ಬಗ್ಗಿ ನೋಡಿದ. "ಪೇತ್ಯ, ಇಲ್ಲಿ ನೋಡು. ರೈಲು ಬಂಡಿಗಳ ಕೆಲಸ ನಡೆಯುವ ಸ್ಥಳ ಇದು. ಇಲ್ಲೇ ನಮ್ಮಣ್ಣ ಟೆರೆಂಟಿ ಕೆಲಸ ಮಾಡುವುದು. ನೀನು ಯಾವಾಗಲಾದರೂ ಈ ಸ್ಥಳವನ್ನು ನೋಡಿದ್ದೆಯಾ. ನೋಡು ಬಾ." ಎಂದ. ಗಾವ್ರಿಕನ ಪಕ್ಕದಲ್ಲಿ ಪೇತ್ಯನೂ ಮೆಟ್ಟಂಗಾಲಮೇಲೆ ನಿಂತು ಒಡೆದ ಕಿಟಕಿ ಗಾಜುಗಳ ಮೂಲಕ ಒಳಗಡೆಗೆ ದೃಷ್ಟಿಹಾಯಿಸಿದ. ಧೂಳಿಡಿದ ಗಾಳಿ ಅಷ್ಟಗಲಕ್ಕೂ ಒಳಗಡೆ ವ್ಯಾಪಿ ಸಿದ್ದುದಲ್ಲದೆ ಎದುರುಗಡೆಯ ಕಿಟಕಿಗಳೂ ಅವುಗಳ ಒಡೆದ ಗಾಜುಗಳೂ ಮಸಕುಮಸಕಾಗಿ ಗೋಚರಿಸಿದುವು. ಯಂತ್ರದ ಚಕ್ರಗಳಿಗೆ ಹಾಕುವ ಅಗಲವಾದ ಪಟ್ಟಿಗಳು ನೇತುಬಿದ್ದಿದ್ದುವು. ಅಲ್ಲಲ್ಲಿ ದೊಡ್ಡ ದೊಡ್ಡ ವಿಲಕ್ಷಣಯಂತ್ರಗಳು ನಿಂತಿದ್ದುವು. ಅವುಗಳಲ್ಲಿ ಚಿಕ್ಕ ಚಿಕ್ಕ ಚಕ್ರ ಗಳಿದ್ದುವು. ಒಳಗಡೆ ನೆಲದ ಮೇಲೆ ಸಿಕ್ಕಾಬಟ್ಟೆ ಕಬ್ಬಿಣದ ಚೂರುಗಳು ಹರಡಿದ್ದುವು. ಕೊನೆ ಮೊದಲು ತಿಳಿಯದಂತೆ ವಿಸ್ತಾರವಾಗಿದ್ದ ಆ ನೆಲದ ಮೇಲೆ ಕಿಟಕಿಯ ಮೂಲಕ ಹಾದು ಬಂದ ಬಿಸಿಲು ಚೌಕಗಳನ್ನು ಬರೆದಂತೆ ಕಂಗೊಳಿಸುತ್ತಿತ್ತು. ಆ ಅತಿ ವಿಸ್ತಾರವಾದ ಸ್ಥಳವು ನಿರ್ಜನವಾಗಿದ್ದು ಅಲೌಕಿಕ ಅನುಭವವು ಮನಸ್ಸಿನಲ್ಲಿ ಮರುಕೊಳಿಸುವಂತೆ ಮಾಡುತ್ತಿತ್ತು. ಇದೇ ಪೇತ ಕಿಟಕಿಯ ಮೂಲಕ ಕಂಡ ದೃಶ್ಯ. ಆ ಸ್ಥಳವನ್ನು ಆವರಿಸಿದ ಭಯಂಕರವಾ

ಅಮಾನುಷ ನಿಸ್ತಬ್ಧತೆಯು ಪೇತ್ಯನನ್ನು ನಡುಗಿಸಿತು.

"ಇಲ್ಲಿ ಯಾರೂ ಇಲ್ಲ." ಕೇಳಿಸುತ್ತದೋ ಇಲ್ಲವೋ ಎನ್ನುವಷ್ಟು ಮೆತ್ತಗೆ ಪೇತ್ಯ ಉಸುರಿದ.

ಗಾವ್ರಿಕನ ಮನಸ್ಸಿನ ಸ್ಥಿತಿಯು ಪೇತ್ಯನದಕ್ಕಿಂತ ಬೇರೆಯೇನೂ ಆಗಿರಲಿಲ್ಲ. ಪೇತ್ಯನ ಭಯದ ಭಾವ ಗಾವ್ರಿಕನಿಗೂ ವ್ಯಾಪಿಸಿದಂತೆ ಕಾಣುತ್ತಿತ್ತು. ಗಾವ್ರಿಕನೂ ಕೂಡ ತುಟಿ ಅಲುಗಿತೋ ಇಲ್ಲವೋ ಎನ್ನುವಂತೆ ಬಹು ಮೆತ್ತನೆ ದನಿಯಲ್ಲಿ ಹೇಳಿದ: "ಪುನಃ ಮುಷ್ಕರ ಹೂಡಿರುವಂತೆ ತೋರುತ್ತದೆ."

"ಏಯ್, ಯಾರಲ್ಲಿ? ಕಿಟಕಿಯಿಂದಾಚೆಗೆ ಹೋಗ್ತೀರೋ ಇಲ್ಲವೋ?" ಒರಟು ದನಿಯೊಂದು ಎಲ್ಲೋ ಮೇಲುಗಡೆಯಿಂದ ಬಂದಿತು.

ಭಯದಿಂದ ಸರಕ್ಕನೆ ಇಬ್ಬರು ಬಾಲಕರೂ ತಿರುಗಿ ನೋಡಿದರು. ಅವರಿಗೆ ಹತ್ತಿರದಲ್ಲೇ ಒಬ್ಬ ಸೈನಿಕ. ಮೈಮೇಲೆ ಒಂದು ತುಂಬು ಅಂಗಿಯನ್ನು ಅವನು ಧರಿಸಿದ್ದ. ಅಲ್ಲದೆ ಅವನ ಕೈಯ್ಯಲ್ಲಿ ಬಂದೂಕ ಬೇರೆ ಇತ್ತು. ಅವನು ಎಷ್ಟು ಹತ್ತಿರ ಇದ್ದನೆಂದರೆ ಸೈನ್ಯದ ಕೋಸುಗೆಡ್ಡೆ ಸಾರಿನ ಮತ್ತು ಬೂಡ್ಸಿನ ಬಣ್ಣದ ವಾಸನೆ ಪೇತ್ಯನ ಮೂಗಿಗೆ ಬಡಿಯಿತು.

ಆ ಹುಡುಗರು ನೋಡುತ್ತಾರೆ ಆ ಸಿಪಾಯಿಯ ನಡುಕಟ್ಟಿನಲ್ಲಿ ಬಂದೂಕಿನ ಗುಂಡುಗಳನ್ನಿಡುವ ಅನೇಕ ಚೀಲಗಳಿವೆ; ಆ ನಡುಪಟ್ಟಿಯೋ ಹಳದಿಯ ಚರ್ಮದ್ದು, ನಿರಿನಿರಿ ಎನ್ನುತ್ತಿದೆ. ಆ ಭಯಂಕರ ವ್ಯಕ್ತಿಯ ಎದೆಯ ಮೇಲೆ ಹಿತ್ತಾಳೆಯ ಹೊಳೆಹೊಳೆಯುವ ಗುಂಡಿಗಳು ಆಕಾಶಕ್ಕೆ ಹಾಕಿದ ಮೆಟ್ಟಲಿನಂತೆ ಕಾಣುತ್ತಿದ್ದುವು. ನೋಡಿದರೆ ತಲೆ ತಿರುಗಬೇಕು! "ನಮ್ಮ ಕೆಲಸ ಮುಗಿಯಿತು" ಎಂದು ಪೇತ್ಯ ದಿಗಿಲಿನಿಂದ ತತ್ತರಿಸಿಹೋದ. ಹುಡುಗರು ದಿಗಿಲುಗೊಂಡಾಗ ಸ್ವಾಭಾವಿಕವಾಗಿ ಯಾಂತ್ರಿಕವಾಗಿ ಮಾಡುವ ಮೊದಲನೆಯ ಕೆಲಸಕ್ಕೆ ಅವನಾಗಲೇ ಸಿದ್ಧವಾಗಿದ್ದ.

"ಕಂಬ ಕೀಳೋ." ಗಾವ್ರಿಕ್ ದುರ್ಬಲದನಿಯಲ್ಲಿ ಕಿರಿಚಿ ಹಿಂದಕ್ಕೆ ನೋಡದೆ ಓಟ ಕಿತ್ತ. ಪೇತ್ಯನೂ ಕೂಡ ಗಾವ್ರಿಕನ ಬೆನ್ನುಹಿಡಿದ. ತನ್ನ ಬೆನ್ನಹಿಂದೆ ಸೈನಿಕನ ಬೂಡ್ಸುಗಳ ತುಳಿತದ ಶಬ್ದ ಕೇಳುತ್ತಿರುವಂತೆ ಪೇತ್ಯನಿಗೆ ಭಾಸವಾಯಿತು. ಆಗ ತನ್ನಲ್ಲಿದ್ದ ಶಕ್ತಿಯನ್ನೆಲ್ಲ ಬಿಟ್ಟು ಪೇತ್ಯ ಇನ್ನೂ ಜೋರಾಗಿ ಓಡಲಾರಂಭಿಸಿದ. ಆದರೆ ಅವನ ಹಿಂದುಗಡೆಯಿಂದ ಕೇಳಿಬರುತ್ತಿದ್ದ ಬೂಡ್ಸಿನ ಸಪ್ಪಳ ನಿಲ್ಲಲೇ ಇಲ್ಲ. ಪೇತ್ಯನ ದೃಷ್ಟಿ ತನ್ನ ಮುಂದೆ ಓಡುತ್ತಿದ್ದ ಗಾವ್ರಿಕನ ಹಿಮ್ಮಡಿಗೆ ಕೀಲಿಸಿತ್ತು. ಅವನ ಎದೆ ರಭಸದಿಂದ ಹೊಡೆದುಕೊಳ್ಳಲಾರಂಭಿಸಿತು. ಓ, ಇನ್ನೂ ಆ ಸೈನಿಕ ತನ್ನ ಹಿಂದೆಯೇ ಇದ್ದಾನೆ ಎಂಬ ದಿಗಿಲು ಅವನಿಗೆ. ಪೇತ್ಯನ ಕಿವಿಯಲ್ಲಿ ಗಾಳಿ ಭೋರ್ಗರೆಯುತ್ತಿತ್ತು. ಹೀಗೆ ಸುಮಾರು ಒಂದು ಮೈಲಿಗೆ ಕಡಿಮೆಯಿಲ್ಲದಂತೆ ಅವರು ಓಡಿದ್ದಿರಬಹುದು. ಆಗ ಪೇತ್ಯನಿಗೆ ಅರ್ಥವಾಯಿತು ತನ್ನ ಹಿಂದಿನಿಂದ ಕೇಳುತ್ತಿದ್ದ ಶಬ್ದ ಸೈನಿಕನ ಬೂಡ್ಸಿನಿಂದ ಉಂಟಾದುದಲ್ಲ, ಅದು ತನ್ನ ಟೋಪಿ ತಲೆಯಿಂದ ಹಿಂದಕ್ಕೆ ಸರಿದು ಬೆನ್ನಿಗೆ ಹೊಡೆಯುತ್ತಿದ್ದುದರಿಂದ ಉಂಟಾದುದು ಎಂದು. ಆಗ ಆ ಹುಡುಗರು ಉಸಿರು ಬಿಟ್ಟರು. ಅವರ ಕೆನ್ನೆ ಮತ್ತು ಗದ್ದಗಳಿಂದ ಬಿಸಿ ಬೆವರು ಸುರಿಯುತ್ತಿತ್ತು.

ಸೈನಿಕ ತಮ್ಮ ಬೆನ್ನುಹತ್ತಿಲ್ಲ ಎಂಬ ಧೈರ್ಯಮಾಡಿಕೊಂಡೊಡನೆ ಅವರ ವರ್ತನೆಯೇ ಬದಲಾಯಿಸಿತು. ಔದಾಸೀನ್ಯದಿಂದ ಕೈಗಳನ್ನು ಜೇಬಿನೊಳಕ್ಕೆ ತುರುಕಿ ಹಾಗೂ ಹೀಗೂ

ಹೆಜ್ಜೆಯಿಡುತ್ತ ಮಂದಗಮನದಿಂದ ಮುಂದುವರಿದರು. ಅಂಥ ಗಮನಾರ್ಹವಾದ ವಿಷಯ ಯಾವುದೂ ನಡೆದೇ ಇಲ್ಲ, ಹಾಗೇನಾದರೂ ನಡೆದಿದ್ದರೆ ಅದೊಂದು ಅಲ್ಪ ವಿಷಯ, ಅದನ್ನು ನಾಲಗೆಯಮೇಲೆ ತರುವುದು ಅಪ್ರಕೃತ—ಎಂಬುದನ್ನು ಅವರ ಠೀವಿ ಎತ್ತಿ ತೋರಿಸುತ್ತಿತ್ತು.

ಹೀಗೆ ಬಹುಹೊತ್ತು ಆ ಹುಡುಗರಿಬ್ಬರೂ ಅಗಲವಾದ ಒರಟುರಸ್ತೆಯ ಮೇಲೆ ಹೆಜ್ಜೆ ಹಾಕುತ್ತಿದ್ದರು, ಪಟ್ಟಣಗಳಲ್ಲಿದ್ದಂತೆಯೇ ಇಲ್ಲಿಯೂ ಮನೆಗಳ ಮುಂದುಗಡೆ ನಂಬರುಗಳನ್ನು ಬರೆದಿದ್ದ ಲಾಂದ್ರಗಳಿದ್ದುವು. ಅಂಗಡಿಗಳ ಮತ್ತು ಕಾರ್ಖಾನೆಗಳ ಹೆಸರುಗಳನ್ನು ತಿಳಿಸುವ ಹಲಗೆಗಳಿದ್ದುವು. ಒಂದು ಮೂಲೆಯ ಔಷಧಿಯ ಅಂಗಡಿಯಲ್ಲಿ ಬಣ್ಣಬಣ್ಣದ ಹೂಜಿಗಳೂ ಮತ್ತು ಚಿನ್ನದ ಬಣ್ಣದ ಹದ್ದಿನ ಗುರುತೂ ಕಂಗೊಳಿಸುತ್ತಿದ್ದುವು. ಆದರೂ ಅದನ್ನು ನಗರದ ಸುಂದರವಾದ ರಸ್ತೆ ಎನ್ನುವುದಕ್ಕಿಂತ ಅದೊಂದು ಹಳ್ಳಿಯ ಓಣಿ ಎನ್ನುವುದು ಸಹಜವಾಗಿತ್ತು.

"ಸರಿ, ನಿನ್ನ ಆ ಕಾರ್ಖಾನೆಯ ಉಪನಗರವೆಲ್ಲಿ?" ಎಂದು ಪೇತ್ಯ ಮುಖ ಹಿಂಡಿಕೊಂಡು ಪ್ರಶ್ನಿಸಿದ.

"ಇದೇನೆ ನೋಡು. ನಿನಗೆ ಕಣ್ಣಿಲ್ಲವೋ?"

"ಎಲ್ಲಿ?"

"ಎಲ್ಲಿ ಎಂದರೇನು? ಇಲ್ಲಿ."

"ಇಲ್ಲಿ?"

ಹೌದು ಮತ್ತೆ."

"ಹಾಗಿದ್ದರೆ ಯಂತ್ರಗಳೆಲ್ಲಿ, ಕಾಣುವುದೇ ಇಲ್ಲವಲ್ಲ?"

"ನೀನೂ ಒಳ್ಳೆ ಗುಗ್ಗೂಷಾ· ಫೌಂಟನ್ ಅಂತ ನಗರದ ಭಾಗಕ್ಕೆ ಹೆಸರಿದ್ದರೆ ಅಲ್ಲಿ ಚಿಲುಮೆ ಹುಡುಕಿದ ಹಾಗಾಯಿತು. ಒಳ್ಳೆ ಎಳೆ ಮಗೂ ಬಾಯಿಬಿಟ್ಟ ಹಾಗೆ ಆಡ್ತಿದೀಯ. ಏನು ಕೇಳ್ತಾ ಇದ್ದೇನೆ ಎನ್ನೋದು ಗೊತ್ತಿಲ್ಲದೆ ಪ್ರಶ್ನೆಹಾಕುವ ಕ್ರಮ ಚೆನ್ನಾಗಿದೆ."

ಪೇತ್ಯನ ಬಾಯಿಕಟ್ಟಿತು. ಗಾವ್ರಿಕ್ ಹೇಳಿದ್ದು ನಿಜ. ಮಾಲಿ ಫಾಂಟೊನ್, ಬಾಲ್ಷಾಯಿ ಫಾಂಟಾಂನ್, ಸ್ರೆಡ್ನಿ ಫಾಂಟಾನ್‌ಗಳಲ್ಲಿ ಚಿಲುಮೆಗಳೆಲ್ಲಿದ್ದುವು. 'ಆ ನಗರದ ಭಾಗಕ್ಕೆ ಆ ಹೆಸರು' ಎನ್ನುವಷ್ಟೇ ಬೆಲೆ ಅದಕ್ಕೆ. ಕಾರ್ಖಾನೆ ಉಪನಗರ ಎಂದರೆ ಅಲ್ಲಿ ಕಾರ್ಖಾನೆ ನಡೆಸುವ ಯಂತ್ರಗಳು, ವಾಯುಯಂತ್ರಗಳು ತುಂಬಿರಬೇಕಾದ್ದೇನೂ ಇಲ್ಲ.

ಕಾರ್ಖಾನೆಯ ಉಪನಗರ ಒಂದು ಸಣ್ಣ ಜಾಗ. ವಿಧವೆಯರ ನೆರಳು ಮತ್ತು ತೇಪೆ ಹಾಕಿದ ಲಂಗಗಳನ್ನು ತೊಟ್ಟ ತಬ್ಬಲಿಹುಡುಗಿಯರ ಬಿಳಿಚಿದ ಮುಖ ಇವುಗಳು ಎಲ್ಲಿಂದ ಬರಬೇಕು ಅಲ್ಲಿ? ಭಯಂಕರವಾದ ವಿಕಾರವಾದ ಕಪ್ಪು ಆಕಾಶವೆಲ್ಲಿ, ಕಣ್ಣೀರು ಸುರಿಸುತ್ತಿರುವ ಗಿಡಗಳೆಲ್ಲಿ? ಒಂದುಸಲ ಪ್ರವೇಶಿಸಿದ ಮೇಲೆ ಪುನಃ ಹಿಂದಿರುಗಿ ಬರಲಾರದ ಅಮಾನುಷ ಶೋಕಾವೃತ ಭೂಮಿಯೆಲ್ಲಿ? ಗಾವ್ರಿಕನನ್ನು ಪ್ರಶ್ನಿಸಿ ಪ್ರಯೋಜನವಿರಲಿಲ್ಲ!

ಪೇತ್ಯನ ಕಲ್ಪನೆಯಲ್ಲಿ ಮನೆಮಾಡಿದ್ದ ಆ ಭ್ರಾಂತಿಗಳೆಲ್ಲ ಈಗ ಚಕ್ಕನೆ ಮಾಯವಾದುವು. ಪೇತ್ಯನ ಕಣ್ಣಿಗೆ ವಿಧವೆಯರೂ ಕಾಣಲಿಲ್ಲ, ಕಣ್ಣೀರು ಬಿಡುತ್ತಿರುವ ಗಿಡಗಳೂ ಕಾಣಿಸಲಿಲ್ಲ, ದುಃಖದಿಂದ ಕೂಡಿದ ಗಗನವೂ ಕಾಣಿಸಲಿಲ್ಲ. ಬಿಸಿಲು ಜೋರಾಗಿತ್ತು, ಗಾಳಿ ಬಿರುಸಾಗಿತ್ತು, ಆಕಾಶವು ಕಾಂತಿಯುಕ್ತವಾದ ನೀಲಿಯಿಂದ ರಂಜಿಸುತ್ತಿತ್ತು.

ಮನೆಗಳ ಅಂಗಳಗಳಲ್ಲಿ ಜಾಲಿಮರಗಳೂ, ಹಚ್ಚಹಸುರಿನ ಉಪ್ಪುನೇರಳೆ ಗಿಡಗಳೂ ಬೆಳೆದು ನಿಂತಿದ್ದುವು. ಅಕಾಲದಲ್ಲಿ ಹೂವುಬಿಟ್ಟ ಕುಂಬಳದ ಗಿಡಗಳಲ್ಲಿ ಹೂವುಗಳು ತರಕಾರಿ ತೋಟಕ್ಕೆ ಸಿಂಗಾರವಾಗಿದ್ದುವು. ತಲೆಬಗ್ಗಿಸಿದ್ದ ಹುಲ್ಲುಹಸಲೆಯಮೇಲೆ ಬಾತುಗಳು ಸಂಚರಿಸುತ್ತಿದ್ದುವು. ಅವುಗಳು ಸೈನಿಕರಂತೆ ತಲೆಯನ್ನು ಎಡಕ್ಕೂ ಬಲಕ್ಕೂ ತಿರುಗಿಸುತ್ತಿದ್ದುದು ನೋಡುವವರ ಮನಸೆಳೆಯುವಂತಿತ್ತು.

ಅಲ್ಲೊಬ್ಬ ಕಮ್ಮಾರನ ಕುಲುಮೆಯಲ್ಲಿ ತಿದಿಯೊತ್ತಿದ ಸಷ್‌ಸಷ್ ಶಬ್ದವೂ ಸುತ್ತಿಗೆಯ ಬಡಿತವೂ ಕೇಳಿಬರುತ್ತಿದ್ದುವು.

ಇವೆಲ್ಲ ನಿಷ್ಪಕ್ಷಪಾತವಾದ ಶುದ್ಧ ದೃಷ್ಟಿಯಿಂದ ನೋಡಿದಾಗ ಕುತೂಹಲದಾಯಕವಾಗಿದ್ದುದು ನಿಜ. ಆದರೆ ಪೇತ್ಯನ ಮನಸ್ಸನ್ನು ಆವರಿಸಿದ್ದ ಆ ಭ್ರಾಂತಿನಿರಸನ ಒಂದೇ ಸಲಕ್ಕೆ ಆಗುವುದು ಶಕ್ಯವಿದ್ದಿರಲಿಲ್ಲ. ಅಕಸ್ಮಾತ್ ಮರಣ ಸಂಭವಿಸಿದವರ ಬಂಧುಗಳು ವಿಶ್ರಾಂತಿ ಹೊಂದುತ್ತಿದ್ದ ಆ ಅಮಾನುಷ ಛಾಯಾ ಜಗತ್ತಿನ ಭಾವನೆಯು ಮನಸ್ಸನ್ನು ಇನ್ನೂ ಕೊರೆಯುತ್ತಲೇ ಇದ್ದಿತು. ಪೇತ್ಯನ ಅಂತರಂಗದಲ್ಲಿ ಕಲ್ಪನಾಲೋಕಕ್ಕೂ ವಾಸ್ತವ ಜಗತ್ತಿಗೂ ಇದ್ದ ಅಂತರದ ವಿಷಯದಲ್ಲಿ ಇನ್ನೂ ಮಥನ ಮುಗಿದಿರಲಿಲ್ಲ. ಪೇತ್ಯನ ಕಲ್ಪನಾಲೋಕದಲ್ಲಿ ಮನೆ ಮಾಡಿದ್ದ ಆ ಛಾಯಾ ಪ್ರಪಂಚವೆಲ್ಲಿ, ಗಾವ್ರಿಕನ ಅಣ್ಣ ವಾಸಿಸುತ್ತಿದ್ದ ರೈಲ್ವೆ ಕೆಲಸಗಾರರ ನಿವಾಸದ ಆ ಉಜ್ವಲ ಚಿತ್ರವೆಲ್ಲಿ!

೨೩. ಗಾವ್ರಿಕ್ ಮಾಮ

"ಇಗೋ, ಇದೇ ಮನೆ."

ಗಾವ್ರಿಕ್ ಕಾಲಿನಿಂದ ಕಿರುಬಾಗಿಲನ್ನು ತಳ್ಳಿ ತೆರೆದ. ಆ ಗೆಳೆಯರಿಬ್ಬರೂ ಒಣಗಿ ತರಕಲಾಗಿದ್ದ ಮನೆಯ ಮುಂದೋಟದೊಳಕ್ಕೆ ಕಾಲಿಟ್ಟರು. ತೋಟದ ಅಂಚಿನಲ್ಲಿ ಕೆನ್ನೀಲಿಯ ಐರಿಸ್ ಗಿಡಗಳಿದ್ದುವು. ಒಣಹುಲ್ಲಿನ ಬಣ್ಣದ ಹುಬ್ಬುಗಳ ಭಾರಿ ನಾಯಿ ತಕ್ಷಣ ಅವರ ಕಡೆಗೆ ನುಗ್ಗಿತು. "ರುಡ್ಕೊ! ಸುಮ್ಮನಿರು. ನನ್ನ ಗುರುತಾಗಲಿಲ್ಲವೇನೊ?" ಎಂದು ಗಾವ್ರಿಕ್ ಗಟ್ಟಿಯಾಗಿ ಹೇಳಿದ. ನಾಯಿ ಮೂತಿಯಿಂದ ಮೂಸಿನೋಡಿ ಹುಡುಗನ ಗುರುತು ಹಿಡಿಯಿತು. ನಿಷ್ಕಾರಣವಾಗಿ ಉದ್ರಿಕ್ತನಾದುದರಿಂದಲೋ ಏನೋ ಅದು ದುಃಖಮಿಶ್ರಿತ ನಗುವನ್ನು ಬೀರಿತು. ಪೊದೆಗೂದಲಿನ ಬಾಲವನ್ನು ಡೊಂಕಾಗಿ ಬಗ್ಗಿಸಿಕೊಂಡು ನಾಲಗೆ ಚಾಚಿಕೊಂಡು ಉಸಿರಿಕ್ಕುತ್ತ ಅಂಗಳದ ಹಿಂಭಾಗಕ್ಕೆ ಹೊರಟುಹೋಯಿತು. ಮೇಲುಗಡೆ ತಂತಿಗೆ ಸೇರಿಸಿ ಅದರ ಕತ್ತಿಗೆ ಕಟ್ಟಿದ್ದ ಸರಪಳಿಯನ್ನು ಝಣ ಝಣ ಎಂದು ಶಬ್ದಮಾಡುವಂತೆ ತನ್ನ ಹಿಂದೆ ಎಳೆದುಕೊಂಡು ಹೋಯಿತು.

ಮಣ್ಣಿನ ಜೋಪಡಿಯ ಮರದ ಬಾಗಿಲಿನಿಂದ ಹೆದರಿದ ಹೆಂಗಸೊಬ್ಬಳು ಬಗ್ಗಿ ನೋಡಿದಳು. ಬಂದವರು ಬೇರಾರೂ ಅಲ್ಲದೆ ಈ ಹುಡುಗರು ಎಂಬುದನ್ನು ಕಂಡುಕೊಂಡಳು. ಆಗ ಕೊಂಚ ಧೈರ್ಯದಿಂದ ಬಾಗಿಲ ಕಡೆಗೆ ತಿರುಗಿ ನಿಂತುಕೊಂಡು ಕೆಲಸ ಮಾಡುವಾಗ ಬಟ್ಟೆಗಳು ಕೊಳೆಯಾಗದಂತೆ ಕತ್ತಿಗೆ ಸೇರಿಸಿ ಕಟ್ಟಿಕೊಂಡಿದ್ದ ಮುಂಗವಚದಲ್ಲಿ ಕೈಯನ್ನು ಒರೆಸಿಕೊಳ್ಳುತ್ತ

" ಗಾಬರಿಯೇನಿಲ್ಲ. ಬಂದವನು ನಿಮ್ಮ ತಮ್ಮ" ಎಂದಳು.

ಅವಳ ಹಿಂದುಗಡೆಯಿಂದ ಎತ್ತರವಾದ ಪುರುಷನೊಬ್ಬ ಕಾಣಿಸಿಕೊಂಡ. ಪಟಪಟೆಯ ನಾವಿಕಅಂಗಿಯನ್ನು ಅವನು ಧರಿಸಿದ್ದ. ಜಟ್ಟಿಗಳು ಹಾಕಿಕೊಳ್ಳುವ ಷರಟಿನಂತೆ ಅದು ಇದ್ದಿತಲ್ಲದೆ, ಅದರ ತೋಳು ತುಂಡಾಗಿದ್ದಿತು. ಅವನ ಮೈಕಟ್ಟು ಜಟ್ಟಿಯಂತೆ ಇದ್ದಿತಾದರೂ ಅವನ ಮುಖಭಾವ ತದ್ವಿರುದ್ಧವಾಗಿದ್ದಿತು. ಸಿಡುಬಿನ ಕಲೆಗಳು ತುಂಬಿದ್ದ ಆ ಮುಖದ ಮೇಲೆ ಬೆವರಿನ ಹನಿಗಳು ಹೊಳೆಯುತ್ತಿದ್ದವು. ಅವನ ಮುಖದಲ್ಲಿ ಸಂಕೋಚ ಪ್ರಕೃತಿಯೂ, ನಾಚಿಕೆಯ ಸ್ವಭಾವವೂ ಎದ್ದು ಕಾಣುತ್ತಿದ್ದುವು. ಭಯದ ಭಾವನೆಯನ್ನು ಹುಟ್ಟಿಸುವಂಥ ಬಲಿಷ್ಠವಾದ ದೇಹದ ಆಕಾರ ಅವನದಾಗಿದ್ದರೂ ಸಾಧು ಹೆಂಗಸಿನ ಮುಖ ಅವನದಾಗಿತ್ತು. ಆ ಮನುಷ್ಯ ನಡುಪಟ್ಟಿಯನ್ನು ಒಂದು ಸಲ ಬಿಗಿಮಾಡಿಕೊಂಡು ಹುಡುಗರನ್ನು ಸಮೀಪಿಸಿದ.

"ಇವನು ಪೇತ್ಯ. ಕುಲಿಕೋವೋ ಮೈದಾನದ ತಿರುವಿನ ಕನತ್ನಾಯ ರಸ್ತೆಯಲ್ಲಿದೆ ಇವನ ಮನೆ. ಮಾಸ್ತರರ ಮಗ ಇವನು. ಇವನಿಂದ ತೊಂದರೆ ಏನಿಲ್ಲ ನಮಗೆ." ಸರಳವಾಗಿ ತಲೆಯಲ್ಲಾಡಿಸುವುದರ ಮೂಲಕ ತನ್ನ ಗೆಳೆಯನನ್ನು ಉದ್ದೇಶಿಸಿ ಗಾವ್ರಿಕ್ ಹೇಳಿದ ಮಾತುಗಳಿವು.

ಟೆರೆಂಟಿ ಒಂದು ಸಲ ಪೇತ್ಯನನ್ನು ತಲೆಯಿಂದ ಕಾಲಿನವರೆಗೆ ನೋಡಿದ. ಬಳಿಕ ತನ್ನ ಹೊಳೆಯುವ ಸಣ್ಣ ಕಣ್ಣುಗಳನ್ನು ಗಾವ್ರಿಕನಲ್ಲಿ ಕೀಲಿಸಿ " ಈಸ್ಟರ್ ಹಬ್ಬಕ್ಕೆ ನಿನಗೆ ನಾನು ತೆಗೆದುಕೊಟ್ಟಿದ್ದ ಬೂಡ್ಸುಗಳೇನಾದುವು. ಒಳ್ಳೆ ಅಲೆಮಾರಿ ಹಾಗೆ ಇಷ್ಟು ದೂರ ಅಲ್ಲಿಂದ ಇಲ್ಲಿಗೆ ನಡೆದುಕೊಂಡು ಬಂದಿದ್ದೀಯಲ್ಲ ?" ಎಂದು ಗಾವ್ರಿಕನನ್ನು ಪ್ರಶ್ನಿಸಿದ.

ಗಾವ್ರಿಕ್ ವಿಶಾದಪೂರ್ಣ ಶಿಳ್ಳೆ ಹೊಡೆದು "ಓ, ಆ ಬೂಡ್ಸುಗಳೇ? ಅವು..." ಎನ್ನುತ್ತಲ್ಲಿದ್ದ.. ಅಷ್ಟರಲ್ಲಿ ಅವನ ಅಣ್ಣ " ನೀನೊಬ್ಬ ಪೋಲಿ ಕಣೊ, ಪೋಲಿ, ತಿಳಿಯಿತೆ." ಎಂದು ನುಡಿಯುತ್ತ ತಲೆದೂಗಿ ಮನೆಯ ಹಿಂಭಾಗಕ್ಕೆ ನಡೆದ. ಹುಡುಗರು ಅವನನ್ನು ಹಿಂಬಾಲಿಸಿದರು

ಅಡಿಗೆ ಮನೆಯಲ್ಲಿ ಉಪಯೋಗಿಸುವಂಥ ಒಂದು ಹಳೆಯ ಮೇಜು ಉಪ್ಪುನೀರಳೇ ಮರದಡಿಯಲ್ಲಿ ಇತ್ತು. ಅಲ್ಲಿ ಒಂದು ಸ್ವಸಂಪೂರ್ಣವಾದ ತವರಗಾರನ ಅಂಗಡಿ ಕಂಗೊಳಿಸುತ್ತಿತ್ತು. ಅದನ್ನು ನೋಡಿದಾಗ ಪೇತ್ಯನಿಗೆ ಅವರ್ಣನೀಯವಾದ ಆನಂದವಾಯಿತು. ಪುಟ್ಟ ಫಿರಂಗಿಯ ಬಾಯಿಂದ ಹೊರ ಹೊರಡುವ ಜ್ವಾಲೆಯಂತೆ ಉಕ್ಕಿನ ನಳಿಗೆಯ ಸಣ್ಣ ಮೂತಿಯಿಂದ ಬಲವಾದ ನೀಲಿಯ ಉರಿಯು ಹೊರಡುತ್ತಿದ್ದಿತು. ಅದು ಭೊಸ್ ಎಂದು ಶಬ್ದ ಮಾಡುತ್ತಿತ್ತು.

ತಗಡಿನ ಮಕ್ಕಳ ಸ್ನಾನದ ತೊಟ್ಟಿಯನ್ನು ತಲೆಕೆಳಕಾಗಿ ಮಗ್ಗಲಿಗೆ ಒರಗಿಸಿ ಇಟ್ಟದುದ್ದನ್ನೂ, ಟೆರೆಂಟಿಯು ಕೈಯಲ್ಲಿ ಹಿಡಿದಿದ್ದ ಬೆಸಗಂಬಿಯನ್ನೂ ನೋಡಿ "ರಿಪೇರಿ ಕೆಲಸವೋ ?" ಎಂದು ಗಾವ್ರಿಕ್ ಕೇಳಿದ. ಬಳಿಕ ಬೆಳೆದ ಮನುಷ್ಯನಂತೆ ಪಿಚಕ್ಕನೆ ಒಂದು ಸಲ ಉಗುಳಿದ.

"ಹೂ" ಎಂದು ಉತ್ತರ ಕೊಟ್ಟ ಟೆರೆಂಟಿ.

"ಕಾರ್ಖಾನೆಯಲ್ಲಿ ಕೆಲಸವಿಲ್ಲವೇ ?"

ಆ ಪ್ರಶ್ನೆಯನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ಟೆರೆಂಟಿ ಬೆಸೆಗಂಬಿಯನ್ನು ಭೊಸ್ಸೆನ್ನುತ್ತಿದ್ದ ನೀಲಿ ಉರಿಗೆ ಹಿಡಿದು ಅದು ಕೆಂಪಗಾಗುವುದನ್ನೇ ಗಮನವಿಟ್ಟು ಈಕ್ಷಿಸಲಾರಂಭಿಸಿದ.

" ಅದು ಹಾಗಿರಲಿ. ನಮ್ಮ ಬಗ್ಗೆ ನೀನೇನೂ ಚಿಂತಿಸಬೇಡ. ಗೇಣುದ್ದ ಹೊಟ್ಟೆಗೆ ಬೇಕಾದ ಉಪ್ಪು ಸೊಪ್ಪಿಗೆ ತಕ್ಕಷ್ಟು ಕೆಲಸ ಹೇಗಾದರೂ ಗಿಟ್ಟುತ್ತೆ."

ಗಾವ್ರಿಕ್ ಕಾಲಿನಮೇಲೆ ಕಾಲು ಹಾಕಿಕೊಂಡು ಒಂದು ಕಾಲುಮಣೆಯ ಮೇಲೆ ಕುಳಿತು ಕೊಂಡ. ಅದು ಎಷ್ಟು ಎತ್ತರವಾಗಿತ್ತೆಂದರೆ ಆ ಹುಡುಗನ ಕಾಲುಗಳಿಗೆ ಆಗ ನೆಲ ಎಟಕು ತ್ತಿರಲಿಲ್ಲ. ಎರಡೂ ಕೈಗಳಿಂದ ಮಂಡಿಯನ್ನು ಸುತ್ತಿ ಹಿಡಿದುಕೊಂಡು ಹಿಂದಕ್ಕೂ ಮುಂದಕ್ಕೂ ತೂಗಿಕೊಳ್ಳುತ್ತ ಗಾವ್ರಿಕ್ ತನ್ನ ಅಣ್ಣನೊಡನೆ ಸರಸ ಸಂಭಾಷಣೆಗೆ ತೊಡಗಿದ. ಸಿಪ್ಪೆ ಸುಲಿ ದಂತೆ ಇದ್ದ ಮೂಗನ್ನು ಹೊರಳಿಸುತ್ತ ಬಿಸಿಲಿನಿಂದಲೂ ಉಪ್ಪು ನೀರಿನಿಂದಲೂ ಬೆಳ್ಳಗಾಗಿದ್ದ ಹುಬ್ಬನ್ನು ಏರಿಸುತ್ತ ಗಾವ್ರಿಕ್ ಕುಶಲ ಸಮಾಚಾರವನ್ನು ಆರಂಭಿಸಿದ. ಅಜ್ಜನ ಶುಭಾಶಯ ಗಳನ್ನು ಮೊದಲು ತಿಳಿಸಿದ, ಮಾರುಕಟ್ಟೆಯಲ್ಲಿ ಮೀನಿನ ಬೆಲೆಯ ಸ್ಥಿತಿಯನ್ನು ವರ್ಣಿಸಿದ. ಮದಾಂ ಸ್ತ್ರೊರೊಷೆಂಕೋಳಮೇಲೆ ಕೋಪವನ್ನು ಕಾರಿದ. 'ಅವಳೊಬ್ಬಳು ಹಾಳು ಸೂಳೆ, ಒಬ್ಬರ ಕುತ್ತಿಗೆ ಹಿಡಿದು ಬಿಟ್ಟರೆ ಅವರಿಗೆ ಉಸಿರು ಬಿಡುವುದಕ್ಕೂ ಜಾಗ ಕೊಡುವುದಿಲ್ಲ ಅವಳು.' ಹೀಗೆಯೇ ಇದೇ ಧಾಟಿಯಲ್ಲಿ ಹರಟೆ ಕೊಚ್ಚುತ್ತ ಹೋದ

ಟೆರೆಂಟಿ ತನ್ನ ಕೆಲಸದಲ್ಲಿ ಮಗ್ನನಾಗಿದ್ದಂತೆಯೆ ಉದ್ದಕ್ಕೂ ಗಾವ್ರಿಕನ ಮಾತುಗಳಿಗೆ ಹೂ ಕೊಡುತ್ತಿದ್ದ. ಕೆಂಪಗೆ ಕಾದಿದ್ದ ಬೆಸೆಗಂಬಿಯ ತುದಿಯನ್ನು ಟಂಕಕ್ಕೆ ತಗುಲಿಸಿದ ಒಡನೆ ಅದು ಬೆಣ್ಣೆಯಂತೆ ಕರಗಿತು.

ತಮ್ಮನೊಬ್ಬ ತನ್ನ ಅಣ್ಣನ ಮನೆಗೆ ಅವನನ್ನು ನೋಡಬೇಕೆಂದು ಬಂದರೆ ಅದರಲ್ಲಿ ಅಂಥ ದೇನು ಆಶ್ಚರ್ಯತೋರಲಾರದೆಂದು ಹೇಳುವಿರಲ್ಲವೆ; ಅಣ್ಣನನ್ನು ನೋಡಬಂದ ತಮ್ಮನು ಮನೆಯ ವಿಚಾರಗಳನ್ನು ಕುರಿತು ಹರಟೆ ಹೊಡೆಯುವುದರಲ್ಲಿಯೂ ಅಸಾಧಾರಣವಾದುದೇನಿಲ್ಲ ಎನ್ನುವಿರಿ, ಅಲ್ಲವೆ. ಆದರೆ ಗಾವ್ರಿಕನ ಮುಖದಲ್ಲಿ ಒಡೆದು ಕಾಣುತ್ತಿದ್ದ ಖಿನ್ನ ಭಾವವನ್ನೂ, ಬಹುದೂರದಿಂದ ಕಾಲು ನಡಿಗೆಯಲ್ಲಿ ಅಣ್ಣನೊಡನೆ ಏನನ್ನೋ ಮಾತಾಡಬೇಕೆಂಬ ಉದ್ದೇಶ ದಿಂದ ಮಾತ್ರ ಆಯಾಸಪಟ್ಟುಕೊಂಡು ಬಂದಿದ್ದ ಎಂಬುದನ್ನೂ ಗಮನಿಸಿ ನೋಡಿದಲ್ಲಿ ಗಾವ್ರಿಕನ ಹೃದಯ ಯಾವುದೋ ಒಂದು ಚಿಂತಾಭಾರದಿಂದ ಕುಸಿದಿತ್ತೆಂದೂ, ಯಾವುದೋ ಒಂದು ಮುಖ್ಯ ವಿಷಯ ಅವನ ಮನಸ್ಸನ್ನು ಕೊರೆಯುತ್ತಿತ್ತೆಂದೂ ಊಹಿಸುವುದು ಕಷ್ಟವಾಗಿರಲಿಲ್ಲ. ಹಲವು ಬಾರಿ ಟೆರೆಂಟಿ ಗಾವ್ರಿಕನ ಕಡೆಗೆ ಪ್ರಶ್ನಾರ್ಥಕ ದೃಷ್ಟಿಯನ್ನು ಬೀರಿದ. ಗಾವ್ರಿಕನೂ ಕೂಡ ಹೊರಕ್ಕೆ ಅಷ್ಟಾಗಿ ಎದ್ದು ಕಾಣದಂತೆ ಸೂಕ್ಷ್ಮವಾಗಿ ಕಣ್ಣುರೆಪ್ಪೆಯನ್ನು ಹೊಡೆಯುವುದರ ಮೂಲಕ ತಮ್ಮಿಬ್ಬರ ನಡುವೆ ಪೇತ್ಯನಿದ್ದಾನೆಂಬುದನ್ನು ಸೂಚಿಸಿದ್ದ. ಹೀಗೆ ಪ್ರಶ್ನೋತ್ತರಗಳು ಸಂಜ್ಞೆಯಿಂದಲೇ ನಡೆದಿದ್ದರೂ ಹೊರಗೆ ಸ್ವಲ್ಪವೂ ಒಜ್ಜೆ ಬರದಂತೆ ಒಂದೇ ಸಮನೆ ಗಾವ್ರಿಕ್ ನಾಲಗೆಯನ್ನು ಆಡಿಸುತ್ತಲೇ ಇದ್ದ.

ಆದರೆ ಇತ್ತ ಟೆರೆಂಟಿ ಬೆಸುಗೆ ಹಾಕುತ್ತಿದ್ದ ಕೆಲಸವನ್ನು ಲಕ್ಷ್ಯವಿಟ್ಟು ನೋಡುತ್ತ ಪೇತ್ಯ ಅದರಲ್ಲಿಯೇ ಮಗ್ನನಾಗಿದ್ದ. ಅವನಿಗೆ ಹೊರಗೆ ಏನು ನಡೆಯುತ್ತಿದೆ ಎಂಬುದರ ಪರಿವೆಯೇ ಇರಲಿಲ್ಲ. ಕಾಗದವನ್ನು ಕತ್ತರಿಸುವಂತೆ ಹೆಗ್ಗತ್ತರಿಯು ತಗಡನ್ನು ಸರಾಗವಾಗಿ ಕತ್ತರಿಸಿ ಹಾಕುತ್ತಿದ್ದುದನ್ನು ಪೇತ್ಯ ಕಣ್ಣರಳಿಸಿ ನೋಡುತ್ತಿದ್ದ. ಮನೆಯ ಅಂಗಳದ ನಡುವೆ ತನ್ನ ಸಲಕರಣೆಗಳನ್ನು ಹರಡಿಕೊಂಡು ಕೆಲಸಮಾಡುವ ತವರಗಾರನ ಸುತ್ತ ನೆರೆದು ಅವನ ಕುಶಲಕರ್ಮದ ಯಕ್ಷಿಣಿವಿದ್ಯೆಯನ್ನು ಈಕ್ಷಿಸುವುದೆಂದರೆ ಒಡೆಸ್ಸ ನಗರದ ಹುಡುಗರಿಗೆ ಒಂದು ಹಬ್ಬವೆಂದೇ ಹೇಳಬೇಕು. ಈ ನಿಮಿಷ ಬಂದು ಕೆಲಸ ಮುಗಿಸಿ ಮರುನಿಮಿಷ

ಮಾಯವಾಗಿ ಬಿಡುವಂಥ ಒಬ್ಬ ಪರಕೀಯ ಅಪರಿಚಿತನ ಕಾರ್ಯ ಕುಶಲತೆಯನ್ನು ನೋಡಿ ಕುತೂಹಲಗೊಳ್ಳಬೇಕಾಗಿತ್ತು ಆ ಬಾಲಕರು. ಚತುರ ಕಲೆಗಾರನ ಕೈ ರಂಗ ಭೂಮಿಯಮೇಲೆ ಈ ಕಡೆಯಿಂದ ಒಂದು ಪಾತ್ರವನು ಬಿಟ್ಟು ಆಕಡೆಯಿಂದ ನೇಪಥ್ಯಕ್ಕೆ ಕರೆದು ಕೊಳ್ಳುವಂತೆ ಆ ತವರಗಾರ ಒಂದು ಪಾತ್ರೆಯ ರಂಧ್ರವನ್ನು ಬೆಸೆದು ಮುಚ್ಚಿದ ಕೂಡಲೆ ತಾನು ಅಂಗಡಿ ಇಟ್ಟುಕೊಂಡಿದ್ದ ಸಾಮಾನುಗಳನ್ನೆಲ್ಲ ಜೋಡಿಸಿಕೊಂಡು ಪೆಟ್ಟಿಗೆಯೊಳಕ್ಕೆ ತುಂಬಿ ಅದರ ಪಟ್ಟಿಯನ್ನು ಹೆಗಲಿಗೇರಿಸಿದ್ದೇ ತಡ ಅಂಗಳದಿಂದ ಹೊರಕ್ಕೆ ನಡೆದು ಬಿಡುತ್ತಾನೆ. "ಡಬ್ಬಗಳನ್ನು ಸರಿಮಾಡೋದು! ಪಾತ್ರೆಗಳನ್ನು ಸರಿಮಾಡೋದು!" ಎಂದು ಸಾರುವ ತವರ ಗಾರನ ಧ್ವನಿ ಕ್ರಮವಾಗಿ ದೂರವಾಗುವುದು.

ಆದರೆ ಇಲ್ಲಿಯಾದರೋ ಪೇತ್ಯ ತನಗೆ ಪರಿಚಯವಿರುವ ತನ್ನ ಸ್ನೇಹಿತನ ಅಣ್ಣನ ಕೌಶಲ ವನ್ನು ನೋಡುತ್ತಿದ್ದ. ಟೆರೆಂಟಿ ಬೀದಿಯಲ್ಲಿ ಸಾರಿಕೊಂಡು ಹೋಗಿ ಸಾಮಾನ್ಯ ತವರಗಾರನಂತೆ ಎಲ್ಲರಿಗೂ ತನ್ನ ಕಲೆಯನ್ನು ಪ್ರದರ್ಶಿಸುವುದಿಲ್ಲ. ಅವನ ಮನೆಯಲ್ಲಿ ಅವನು ಕೆಲಸಮಾಡು ತ್ತಿರುವ ಸ್ಥಳಕ್ಕೆ ಪ್ರವೇಶಾವಕಾಶವಿರುವ ಕೆಲವೇ ಜನಗಳಿಗೆ ಟೆರೆಂಟಿಯ ಕುಶಲ ಕಲೆಯ ದರ್ಶನವಾಗುವುದು. ಯಾವಾಗ ಬೇಕಾದರೂ "ಅದೇನು, ಇದೇನು? ಅದರಲ್ಲಿರುವುದು ನೀರೇ? ಆ ಕಬ್ಬಿಣದ ಪೆಟ್ಟಿಗೆಯಲ್ಲಿರುವುದೇನು? ಇದು ಆಮ್ಲವೇ?" ಎಂದೆಲ್ಲ ತನಗೆ ಬೇಕಾದ ಪ್ರಶ್ನೆ ಗಳನ್ನು ಹಾಕಿ ಉತ್ತರವನ್ನು ಪಡೆಯಬಹುದಾಗಿತ್ತು. ಆದರೆ ಅಲ್ಲಿ ಬೀದಿಯ ತವರಗಾರನು ಯಾರಾದರೂ ಅಂಥ ಪ್ರಶ್ನೆಗಳನ್ನು ತನಗೆ ಹಾಕಿದ್ದೇ ಆದರೆ ಅಸಹನೆಯಿಂದ "ಇಲ್ಲಿ ಕೆಲಸಕ್ಕೆ ಅಡ್ಡಿ ಬರಬೇಡ ನಡಿ, ದೂರ ಓಡು"! ಎಂದು ಒರಟಾಗಿ ಉತ್ತರಿಸುವನು. ಅಲ್ಲಿಗೂ ಇಲ್ಲಿಗೂ ಎಷ್ಟು ಅಂತರ! ಇಲ್ಲಿಯ ಆತ್ಮೀಯತೆ ಮತ್ತು ಸ್ವಾತಂತ್ರ್ಯ ಅಲ್ಲೆಲ್ಲಿ!

ಪೇತ್ಯ ತನಗಾದ ಅತ್ಯಾನಂದದಿಂದ ಕೇವಲ ಎಳೆಯ ಮಕ್ಕಳ ಹಾಗೆ ನಾಲಗೆಯನ್ನು ಹೊರಕ್ಕೆ ಚಾಚಿಕೊಂಡು ಟೆರೆಂಟಿಯ ಕೆಲಸವನ್ನು ನೋಡುತ್ತಿದ್ದ. ಅವನಿಗೇ ಅದರ ಅರಿವಾಗಿ ದ್ದಿದ್ದರೆ ತನ್ನಂಥ ಬೆಳೆದ ಹುಡುಗ ಮಕ್ಕಳಂತೆ ನಾಲಗೆ ನೀಡಿಕೊಂಡು ಜೊಲ್ಲುಸುರಿಸುತ್ತ ನಿಂತು ದಕ್ಕಾಗಿ ನಾಚಿಕೊಳ್ಳುತ್ತಿದ್ದ. ಮಗುವನ್ನು ಕಂಕುಳಲ್ಲಿ ಎತ್ತಿಕೊಂಡ ಹುಡುಗಿಯೊಬ್ಬಳು ಅಕಸ್ಮಾತ್ತಾಗಿ ಅಲ್ಲಿಗೆ ಬರದೆ ಇದ್ದಿದ್ದರೆ ಅವನು ಪ್ರಾಯಃ ಆ ಕೆಲಸದ ಸ್ಥಳವಾದ ಉಪ್ಪುನೇರಳೆ ಮರದಡಿಯನ್ನು ಬಿಟ್ಟು ಕದಲುತ್ತಿರಲಿಲ್ಲವೇನೋ.

ಆ ಹುಡುಗಿ ಎತ್ತಿಕೊಂಡಿದ್ದ ಮಗುವಿನ ಹವಳದಂಥ ಬಾಯಲ್ಲಿ ಎರಡು ಹಲ್ಲುಗಳು ಬೆಳ್ಳಗೆ ಹೊಳೆಯುತ್ತಿದ್ದುವು. ದುಂಡು ದುಂಡಾಗಿ ಬೆಳೆದಿದ್ದ ಆ ಮಗುವನ್ನು ಪ್ರಯಾಸದಿಂದ ಮೇಲಕ್ಕೆ ಎತ್ತಿ ಗಾವ್ರಿಕನ ಎದುರಿಗೆ ಹಿಡಿದಳು.

"ನೋಡು, ಬಂದಿರುವವರು ಯಾರು? ಗಾವ್ರಿಕ್ ಮಾಮಾ. ಛೀ ಕಳ್ಳ. 'ಗಾವ್ರಿಕ್‌ಮಾಮಾ' ಅನ್ನು ನೋಡೋಣ."

ಗಾವ್ರಿಕ್ ಬಹಳ ಗಂಭೀರವಾದ ಮುಖಭಾವದಿಂದ ತನ್ನ ಷರಟಿನ ಒಳಜೇಬಿಗೆ ಕೈಹಾಕಿ ಹುಂಜನ ಆಕಾರದ ಕೆಂಪು ಸಕ್ಕರೆಮಿಠಾಯಿಯನ್ನು ಹೊರಕ್ಕೆ ತೆಗೆದ. ಅದನ್ನು ನೋಡಿದಾಗ ಪೇತ್ಯನಿಗೆ ಎಲ್ಲಿಲ್ಲದ ಆಶ್ಚರ್ಯವಾಯಿತು. ಈ ನಿಧಿಯನ್ನು ಮೂರುಗಂಟೆಗಳಕಾಲ ಷರಟಿನಲ್ಲಿ ಮುಚ್ಚಿಟ್ಟುಕೊಂಡಿರಬೇಕಾದರೆ ಎಂಥ ಬಿಗಿಮನಸ್ಸು ಗಾವ್ರಿಕನದು! ಒಂದುಸಲವಾದರೂ

ಅದನ್ನು ನೆಕ್ಕಿ ನೋಡೋಣ ಎನ್ನುವ ಚಪಲ ಕೂಡ ಆಗಲಿಲ್ಲವೆ ಅವನಿಗೆ! ತನಗೆ ಕೂಡ ತೋರಿಸಲಿಲ್ಲವಲ್ಲ. ನಂಬಲಸಾಧ್ಯವಾದ ಮನೋನಿಗ್ರಹ ಗಾವ್ರಿಕನದು ಎನ್ನಿಸಿರಬೇಕು ಪೇತ್ಯನಿಗೆ.

ಗಾವ್ರಿಕ್ ಮಿಠಾಯಿಯನ್ನು ಮಗುವಿನ ಎದುರಿಗೆ ಹಿಡಿದು "ಇಲ್ಲಿ ನೋಡು, ಮಿಠಾಯಿ" ಎಂದ.

"ಇಸುಕೊ ಜೆನೆಚ್ಕ. ಪುಟ್ಟ ಕೈಯಲ್ಲಿ ಹಿಡ್ಕೊ. ಮಾವಾ ಎಷ್ಟು ಚಂದಾಗಿರೋ ಮಿಠಾಯಿ ತಂದಿದಾನೆ. ಇಂದು ಹುಂಜ ಕಂದ, ಚೆನ್ನಾಗಿ ನೋಡು ಹ್ಯಾಗಿದೆಯೋ. ಹಾಗೆ ಜಾಣ. ಎಲ್ಲಿ ಈಗ 'ಥ್ಯಾಂಕ್ಯು ಮಾವಾ' ಅನ್ನು ನೋಡೋಣ. ಹೇಳೋ ಮರಿ. ಮಾವಾ ಮಿಠಾಯಿ ತಂದುಕೊಡಲಿಲ್ಲವೋ. 'ಥ್ಯಾಂಕ್ಯು' ಅಂದುಬಿಡು." ಎಂದು ಆ ಹುಡುಗಿ ಮಗುವನ್ನು ಪುಸಲಾಯಿಸಿದಳು. ಮಗು ಮಿಠಾಯಿಯನ್ನು ದುಂಡುದುಂಡಾದ ಪುಟ್ಟ ಕೈಗಳಲ್ಲಿ ತೆಗೆದುಕೊಂಡು ಭದ್ರವಾಗಿ ಮುಷ್ಟಿಯಲ್ಲಿಟ್ಟುಕೊಂಡಿತು. ಬಾಯಲ್ಲಿ ಜೊಲ್ಲು ಸುರಿಸುತ್ತ ಗುಳ್ಳೆಗಳನ್ನು ಬರಿಸುತ್ತ ಬುರ್ರೆಂದಿತು. ಮಗುವಿನ ತಿಳುನೀಲಿಬಣ್ಣದ ಕಣ್ಣುಗಳು ಗಾವ್ರಿಕನ ಮೇಲೆ ನೆಟ್ಟುವು.

"ನೋಡಿದೆಯಾ ಗಾವ್ರಿಕ್, 'ಥ್ಯಾಂಕ್ಯೂ ಮಾಮ' ಎಂದು ಅವನು ಹೇಳುವುದು ಹಾಗೇನೇ." ಮಿಠಾಯಿಯನ್ನು ಆಸೆಯ ಕಣ್ಣುಗಳಿಂದ ದೃಷ್ಟಿಸಿ ನೋಡುತ್ತ ಆ ಹುಡುಗಿ ಹೇಳಿದಳು. "ಚಿನ್ನ, ಒಂದೇ ಸಲಕ್ಕೆ ಮಿಠಾಯಿಯನ್ನು ಬಾಯಿಗೆ ಹಾಕ್ಕೋಬಾರದು. ಹುಂಜ ತುಂಬ ಚೆನ್ನಾಗಿದೆ. ಸ್ವಲ್ಪ ಹೊತ್ತು ಅದರ ಜತೆ ಆಟ ಆಡು. ಗಂಜಿ ಕುಡಿದಮೇಲೆ ತಿನ್ನೂವಂತೆ. ನಾನು ಹೇಳಿದ ಮಾತು ಕೇಳ್ತಾನೆ. ಜಾಣಮರಿ." ಹೀಗೆ ಮಗುವನ್ನು ಮುದ್ದಿಸುತ್ತಿರುವಾಗ ನಡುನಡುವೆ ಆ ಹೊಸ ಹುಡುಗನ ಕಡೆಗೆ ತನ್ನ ಕುತೂಹಲಭರಿತ ದೃಷ್ಟಿಯನ್ನು ಬೀರಿ ಸರ್ರನೆ ಹಿಂತೆಗೆದುಕೊಳ್ಳುತ್ತ ಇದ್ದಳು. ಅವನ ಹೊಸ ಬೂಡ್ಸುಗಳೂ, ತಲೆಯ ಮೇಲಿನ ಟೋಪಿಯೂ, ಸುಂದರಾಕಾರವೂ ಅವಳನ್ನು ಆಕರ್ಷಿಸಿದ್ದುವು.

"ಕುಲಿಕೋವೊ ತಿರುವಿನಲ್ಲಿ ಕನತ್ನಾಯ ರಸ್ತೆಯಲ್ಲಿ ಇವರ ಮನೆ ಇದೆ. ಇವನ ಹೆಸರು ಪೇತ್ಯ. ನೀನ್ಯಾಕೆ ಇವನ ಜತೆ ಸ್ವಲ್ಪಹೊತ್ತು ಆಟ ಆಡಬಾರದು, ಮೋತ್ಯ? ಹೋಗು, ಆಡು ಹೋಗು." ಎಂದ ಗಾವ್ರಿಕ್.

ಈ ಮಾತುಗಳಿಂದ ಉದ್ವಿಗ್ನಳಾದ ಹುಡುಗಿಯ ಮುಖ ಬಿಳುಪೇರಿತು. ಮಗುವನ್ನು ಬಿಗಿಯಾಗಿ ಅಪ್ಪಿಕೊಂಡು ಮುದ್ದಿಸುತ್ತ ಪೇತ್ಯನನ್ನು ಸಂಶಯದೃಷ್ಟಿಯಿಂದ ವೀಕ್ಷಿಸುತ್ತ ಹಿಂದು ಹಿಂದಕ್ಕೆ ಹೆಜ್ಜೆ ಇಡುತ್ತ ಹೋದಳು. ಕೊನೆಗೆ ತಂದೆಯ ಕಾಲುಗಳನ್ನು ಎಡವಿದಾಗಲೆ ಅವಳು ನಿಂತದ್ದು. ಟರೆಂಟಿ ಮಗಳ ಪೆಗಲನ್ನೂ ಗುತ್ತನಾಗಿ ಕತ್ತರಿಸಿದ್ದ ತಲೆಗೂದಲುಗಳನ್ನು ಮುಚ್ಚಿದ್ದ ಬಿಳಿ ಟೋಪಿಯನ್ನೂ ತಟ್ಟುತ್ತ "ಆ ಹುಡುಗನ ಜತೆ ಆಟ ಆಡಿಕೋ ಹೋಗು, ಮೋತ್ಯ. ನೀನು ಕಾಯಿಲೆಯಾಗಿ ಹಾಸಿಗೆ ಹಿಡಿದಿದ್ದಾಗ ತಂದುಕೊಟ್ಟಿದ್ದೆನಲ್ಲ ಆ ನಿನ್ನ ರಷ್ಯ-ಜಪಾನಿ ಚಿತ್ರಗಳನ್ನು ಅವನಿಗೆ ತೋರಿಸು. ಹೋಗು ಮುದ್ದೇ, ಜೆನೇಚ್ಕನನ್ನು ಅಮ್ಮನ ಹತ್ತಿರ ಬಿಟ್ಟುಬಿಟ್ಟು ಅವನ ಜತೆ ಆಟ ಆಡಿಕೋ ಹೋಗು" ಎಂದ.

ಮೋತ್ಯ ನಿಂತಿದ್ದಂತೆಯೇ ತನ್ನ ಬೆನ್ನನ್ನು ತಂದೆಯ ಕಾಲುಗಳಿಗೆ ಉಜ್ಜುತ್ತ ನಾಚಿಕೆಯಿಂದ ಕೆಂಪಾದ ಮುಖವನ್ನು ಅವನ ಕಡೆಗೆ ತಿರುಗಿಸಿದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು.

ಕಿವಿಯಲ್ಲಿದ್ದ ವೈಡೂರ್ಯ ಬಣ್ಣದ ಸಣ್ಣ ಓಲೆಗಳು ಕಂಪಿಸುತ್ತಿದ್ದುವು. ಅಂಥ ಕರ್ಣಾಭರಣಗಳನ್ನು ಹಾಲು ಮಾರುವ ಹೆಂಗಸರು ಧರಿಸುತ್ತಿದ್ದುದನ್ನು ಪೇತ್ಯ ಕಂಡಿದ್ದ.

"ಹೆದರಬೇಡ. ಅವನು ನಿನ್ನ ಜತೆ ಜಗಳ ಆಡುವುದಿಲ್ಲ." ಎಂದು ಹೆದರಿದ ಮಗಳಿಗೆ ತಂದೆ ಹೇಳಿದರು.

ಮೋತ್ಯ ತಂದೆಯ ಆಜ್ಞೆಯಂತೆ ಮಗುವನ್ನು ಮನೆಯೊಳಕ್ಕೆ ಕರೆದುಕೊಂಡುಹೋದಳು. ಕೆನ್ನೆಗಳನ್ನು ಒಳಕ್ಕೆ ಎಳೆದುಕೊಂಡು ಗಂಭೀರಮುಖಭಾವದಿಂದ ಕಟ್ಟೆಗೆಯಂತೆ ನೆಟ್ಟಗೆ ಬೆನ್ನನ್ನು ಮಾಡಿಕೊಂಡು ಹಿಂದಕ್ಕೆ ನಡೆದುಬಂದಳು. ಪೇತ್ಯನಿದ್ದ ಸ್ಥಳಕ್ಕೆ ನಾಲ್ಕು ಹೆಜ್ಜೆ ದೂರದಲ್ಲಿ ನಿಂತಳು. ನೀಳವಾಗಿ ಒಂದುಸಲ ಉಸಿರನ್ನು ಎಳೆದುಕೊಂಡಳು. ಪಕ್ಕಕ್ಕೆ ದೃಷ್ಟಿಯನ್ನು ಬೀರುತ್ತ ತಡೆತಡೆದು ಅಸಹಜವಾದ ತೆಳುದನಿಯಲ್ಲಿ "ಬೇಕಾದರೆ ನನ್ನ ರಷ್ಯ-ಜಪಾನಿ ಚಿತ್ರಗಳನ್ನು ನಿನಗೆ ತೋರಿಸುತ್ತೇನೆ." ಎಂದಳು.

"ಒಳ್ಳೆಯದು ಹಾಗೆಯೇ ಆಗಲಿ" ಎಂದು ಪೇತ್ಯ ಗಡುಸಾದ ದನಿಯಲ್ಲಿ ನಿಶ್ಚಿಂತನಾಗಿ ನುಡಿದ. ಚಿಕ್ಕ ಹುಡುಗಿಯರೊಡನೆ ಯಾವ ದನಿಯಲ್ಲಿ ಮಾತಾಡಬೇಕೆಂದು ಪೇತ್ಯ ಭಾವಿಸಿದ್ದನೋ ಅದನ್ನುಅವನ ಮಾತು ಕನ್ನಡಿಸುವಂತಿತ್ತು. ಅದೇ ಸಮಯಕ್ಕೆ ಪೇತ್ಯ ಪ್ರಯತ್ನಪೂರ್ವಕವಾಗಿ ತನ್ನ ಹೆಗಲಿನ ಮೇಲಿನಿಂದ ಹಿಂದಕ್ಕೆ ಪಿಚಕ್ಕನೆ ಉಗುಳಿದ. ಈ ಸಲ ಅವನು ಬಹುಮಟ್ಟಿಗೆ ಯಶಸ್ವಿಯಾಗಿದ್ದ.

" ಬಾ, ಹಾಗಿದ್ದರೆ ಹೋಗೋಣ " ಎಂದು ಹೇಳಿದ ಪೇತ್ಯ.

ಪೇತ್ಯನ ಕಡೆಗೆ ಬೆನ್ನು ಮಾಡಿಕೊಂಡು ಹೆಗಲನ್ನು ಆವಶ್ಯಕತೆಗಿಂತ ಹೆಚ್ಚಾಗಿ ಕುಣಿಸುತ್ತ ನೆಗೆಯುತ್ತ ಹಾರುತ್ತ ಮನೆಯ ಅಂಗಳದ ಹಿಂದಿನ ಪಾರ್ಶ್ವಕ್ಕೆ ಹುಡುಗಿ ಹೋದಳು. ಹಾಗೆ ಅವಳು ಹೋಗುತ್ತಿರುವಾಗ ಹುಡುಗಿಯರಿಗೆ ಸಹಜವಾದ ವೈಯಾರವನ್ನು ಅವಳು ಸ್ವಲ್ಪವಾದರೂ ತೋರಿಸುತ್ತಿದ್ದಂತೆ ಕಾಣುತ್ತಿದ್ದಿತು. ನೆಲಮಾಳಿಗೆಯ ಹಿಂಭಾಗದಲ್ಲಿ ಅವಳ ಗೊಂಬೆಗಳು ಸಂಸಾರ ಹೂಡಿದ್ದುವು, ಹುಡುಗಿಯ ಗಮನ ಆಕಡೆಗೆ ಇದ್ದಿತು ಎಂದು ಬೇರೆ ಹೇಳಬೇಕಾಗಿಲ್ಲ.

ಪೇತ್ಯ ಅವಳ ಬೆನ್ನ ಹಿಂದೆ ಠೀವಿಯಿಂದ ಹೆಜ್ಜೆ ಹಾಕುತ್ತ ಹೋದ. ಹಾಗೆ ಹಿಂದಿನಿಂದ ಹೋಗುವಾಗ ಅವಳ ತೆಳುವಾದ ಕತ್ತಿನ ಮೇಲಿನ ಕುಳಿಯನ್ನೂ, ಅದರ ಮೇಲುಗಡೆಯಲ್ಲಿ ಪುಟ್ಟತ್ರಿಕೋಣಾಕಾರದಲ್ಲಿದ್ದ ಕೂದಲ ಸಾಲನ್ನೂ ನೋಡಿ ಪೇತ್ಯ ಭಾವೋದ್ವಿಗ್ನನಾಗಿದ್ದಂತೆ ಕಂಡು ಬಂದಿತು. ಕಾರಣ ಅವನ ಮೊಣಕಾಲುಗಳು ನಡುಗುತ್ತಿದ್ದುವು. ಇದನ್ನು ಗಾಢವಾದ ಅನುರಾಗದ ಕುರುಹು ಎಂದು ಕರೆಯುವುದಕ್ಕೆ ಆಗದೆ ಇದ್ದರೂ, ಉತ್ಕಟವಾದ ಪ್ರೇಮ ಪ್ರಸಂಗಕ್ಕೆ ಇದು ದಾರಿ ಮಾಡಿಕೊಟ್ಟು ಅದನ್ನು ಬೆಳಸಬಹುದೆಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿತ್ತು.

೨೪. ಪ್ರೇಮ.

ನಿಜ ಹೇಳಬೇಕೆಂದರೆ ತನ್ನ ಅಲ್ಲಿಯವರೆಗಿನ ಜೀವನಕಾಲದಲ್ಲಿ ಪೇತ್ಯ ಅನೇಕ ಬಾರಿ ಪ್ರೇಮಿಸಿದ್ದ. ಆ ಕಂದು ಕೂದಲಿನ ಹುಡುಗಿ, ಅವಳು ಯಾರು ? ವೆರೋಚ್ಕ ಅಲ್ಲವೆ ! ತನ್ನ

ತಂದೆಯ ಸಹೋದ್ಯೋಗಿಗಳಲ್ಲೊಬ್ಬರ ಮನೆಯಲ್ಲಿ ಕಳೆದ ಕ್ರಿಸ್‌ಮಸ್ ಹಬ್ಬದ ಸಂತೋಷಕೂಟ ನಡೆದಾಗ ಪೇತ್ಯನೂ ಅಲ್ಲಿಗೆ ಹೋಗಿದ್ದ. ಅಲ್ಲಿ ಅವಳನ್ನು ಕಂಡು ಪ್ರೀತಿಸಿದ್ದ. ಅದೇ ಮೊದಲ ಬಾರಿ ಅವನು ಪ್ರೀತಿಸಿದ್ದು. ಆ ಸಂಜೆಯಲ್ಲಿ ಅವರು ಪ್ರೇಮದ ಪ್ರಭಾವಕ್ಕೆ ಒಳಗಾಗಿದ್ದರು. ಉಪಹಾರದ ಮೇಜಿನ ಬಳಿ ಇಬ್ಬರೂ ಒಬ್ಬರ ಪಕ್ಕದಲ್ಲಿ ಒಬ್ಬರು ಕುಳಿತಿದ್ದರು. ಮೇಣದ ಬತ್ತಿಯ ದೀಪಗಳನ್ನು ಆರಿಸಿದಾಗ ಅವರಿಬ್ಬರೂ ಕತ್ತಲೆಯಲ್ಲೇ ಕ್ರಿಸ್‌ಮಸ್ ಮರದಡಿಯಲ್ಲಿ ತೆವಳಿಕೊಂಡು ಹೋಗಿದ್ದರು. ಫರ್ ಮರದ ಮುಳ್ಳುಗಳು ನೆಲದ ಮೇಲೆಲ್ಲ ಉದುರಿದ್ದುದರಿಂದ ನೆಲ ಜಾರುತ್ತಿದ್ದಿತು.

ಪ್ರಥಮ ಸಂದರ್ಶನದಲ್ಲಿ ಉದಿಸುವ ಪ್ರೇಮವಾಗಿದ್ದಿತು ಆದು. ಎಂಟೂವರೆ ಗಂಟೆಯ ಸಮಯದಲ್ಲಿ ಅವಳು ಮನೆಗೆ ಹೊರಟಾಗ ಪೇತ್ಯ ನಿರಾಸೆಯಿಂದ ಕುಗ್ಗಿಹೋದ. ಅವಳು ಹೊರಡುವುದಕ್ಕೆ ಸಿದ್ಧವಾಗಿ ತುಪ್ಪುಳಿನ ಚರ್ಮದ ಅಂಗಿಯನ್ನೂ ತಲೆಗೆ ಟೋಪಿಯನ್ನೂ ಧರಿಸಿದಾಗ ಅವಳ ಸುಂದರವಾದ ಕೂದಲೂ, ಅದಕ್ಕೆ ಕಟ್ಟಿದ್ದ ರಿಬ್ಬನ್ನೂ ಕಣ್ಣಿಗೆ ಕಾಣಿಸದಂತಾದಾಗ ಪೇತ್ಯ ಕುಂಯ್ ಗುಟ್ಟುತ್ತ ಹುಚ್ಚು ಹುಚ್ಚಾಗಿ ಮಾತಾಡಿದ. ಅವಳನ್ನು ಸಾಯುವವರೆಗೂ ಪ್ರೀತಿಸುವುದಾಗಿ ಅಲ್ಲಿಂದಲೇ ಪ್ರತಿಜ್ಞೆ ಮಾಡಿದ. ಕ್ರಿಸ್‌ಮಸ್ ಮರ ತನಗೆ ದಯಪಾಲಿಸಿದ್ದ ರಟ್ಟಿನ ಮಾಂಡೊಲಿನ್ ವಾದ್ಯವನ್ನೂ, ಮೂರು ಚಿನ್ನದ ಮತ್ತು ಒಂದು ಬೆಳ್ಳಿಯ ಒಟ್ಟು ನಾಲ್ಕು ಕಾಯಿಗಳನ್ನೂ ಅವಳಿಗೆ ತನ್ನ ಪ್ರೀತಿಯ ಸಂಕೇತವಾಗಿ ಅರ್ಪಿಸಿದ. ಎರಡು ದಿನಗಳು ಕಳೆದ ಬಳಿಕ ಆ ಪ್ರೇಮ ಆರಿಹೋಯಿತು. ಅದರ ನೆನಪು ಸವಿನೆನಪಾಗದೆ ಹೋಯಿತು. ಹುಚ್ಚು ಹುಚ್ಚಾಗಿ ಆಡಿ ತನ್ನ ಮಾಂಡೊಲಿನ್ನನ್ನು ಕಳೆದುಕೊಂಡುದಕ್ಕಾಗಿ ಪೇತ್ಯ ಪಶ್ಚಾತ್ತಾಪದಿಂದ ನೊಂದುಕೊಂಡ, ಅಷ್ಟೆ.

ಆ ಬಳಿಕ ಅವನು ಎರಡನೆಯ ಸಲ ಪ್ರೀತಿಸಿದ್ದು ಎಂದರೆ ಬೇಸಗೆ ನಿವಾಸಸ್ಥಾನದಲ್ಲಿ ತಾನು ಕಂಡಿದ್ದ ಜೋಯ ಎಂಬ ಹುಡುಗಿಯನ್ನು. ಅವಳು ಅಪ್ಸರೆಯಂತೆ ಪಾಟಲವರ್ಣದ ಕಾಲು ಚೀಲಗಳನ್ನು ಧರಿಸಿದ್ದಳು. ಏಪ್ರಿಕಾಟ್ ಮರದಡಿಯಲ್ಲಿ ನೀರಿನ ಪೀಪಾಯಿಯ ಬಳಿ ಅವಳಿಗೆ ಪೇತ್ಯ ಒಂದು ಮುತ್ತನ್ನೂ ಕೊಟ್ಟಿದ್ದ. ಆದರೆ ಜೋಯಳನ್ನು ಪ್ರೀತಿಸಿದುದು ತಪ್ಪು ಎಂದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಏಕೆಂದರೆ ಮಾರನೆಯ ದಿನವೇ ಕ್ರೋಕೆ ಚೆಂಡಾಟದಲ್ಲಿ ಅವಳು ನಿರ್ಲಕ್ಷ್ಯವಾಗಿ ಪೇತ್ಯನಿಗೆ ಮೋಸಮಾಡಿಬಿಟ್ಟಳು. ಆಗ ಪೇತ್ಯನಿಗೆ ಭಾರಿ ಕೋಪವೇ ಬಂದು ಬಿಟ್ಟಿದ್ದಿತು. ಕ್ರೋಕೆದಾಂಡಿನಿಂದ ಅವಳ ಕಣಕಾಲಿಗೆ ಒಂದನ್ನು ಬಾರಿಸಿಯೆ ಬಿಟ್ಟ. ಇಷ್ಟೆಲ್ಲ ಸಂಭವಿಸಿದ ಮೇಲೆ ಪ್ರೀತಿ ನಿಲ್ಲುವುದು ಹೇಗೆ ಸಾಧ್ಯ.

ಮುಂದೆ ಪೇತ್ಯ ಪ್ರೀತಿಸಿದ್ದು ಹಡಗಿನ ಮೇಲೆ ಕಂಡ ಆ ಸುಂದರ ಬಾಲಿಕೆಯನ್ನು. ಮೊದಲನೆ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದು ತನ್ನ ತಂದೆಯೊಡನೆ ಯಾವಾಗಲೂ ವಾದಿಸುತ್ತಿದ್ದಳು ಆ ಹುಡುಗಿ.

ಇವೆಲ್ಲ ಏನು ಲೆಕ್ಕ. ಯಾರು ತಾನೆ ಇಂಥ ಅಪ್ರಾಮುಖ್ಯ ಅನುರಾಗಗಳ ಅನುಭವವನ್ನು ಪಡೆದಿಲ್ಲ. ಇದರಲ್ಲಿ ಅಂಥ ವಿಶೇಷವೇನೂ ಇರಲಿಲ್ಲ.

ಆದರೆ ಮೋತ್ಯಳ ವಿಷಯವೇ ಬೇರೆ. ಅವಳೂ ಹುಡುಗಿ, ವೈಡೂರ್ಯ ಬಣ್ಣದ ಓಲೆಗಳನ್ನು ಧರಿಸಿದ್ದಳು. ಸಣ್ಣ ವಿಷಯಗಳಿಗೆಲ್ಲ ಅವಳ ಮುಖ ಬಿಳುಪೇರುವುದು ಇಲ್ಲವೆ ಬಣ್ಣ

ವೇರುವುದು, ನಡೆಯುವಾಗ ಅವಳು ಅದೊಂದು ಮೋಹಕವಾಗಿ ಹೆಗಲುಗಳನ್ನು ಕುಣಿಸುತ್ತಿದ್ದಳು, ನಿಜ. ಆದರೆ ಇವೆಲ್ಲ ಗಣನೀಯವಲ್ಲ. ಅವಳು ತನ್ನ ಗೆಳೆಯನ ಸಹೋದರಿ, ಇದು ವಿಶೇಷ. ವಾಸ್ತವವಾಗಿ ಸಹೋದರಿಯೇ ಎಂದು ಕೇಳುತ್ತೀರಾ, ಹಾಗಾದರೆ ಕೇಳಿ ಸಹೋದರಿಯಲ್ಲ ಸೋದರಸೊಸೆ ಎನ್ನಬೇಕು ಅವಳನ್ನು. ಗಾವ್ರಿಕನ ವಯಸ್ಸನ್ನು ಗಣನೆಗೆ ತೆಗೆದುಕೊಂಡರೆ ಅವಳನ್ನು ಸಹೋದರಿ ಎಂದು ಕರೆಯಬೇಕೆನ್ನಿಸುವುದು. ತನ್ನ ಮಿತ್ರನ ಸಹೋದರಿ! ಈ ಬಾಂಧವ್ಯವಿರುವಾಗ ಆಕರ್ಷಣೀಯವಾಗಿಯೂ ಸುಂದರಿಯಾಗಿಯೂ ಕಾಣಿಸಿಕೊಳ್ಳಲು ಒಬ್ಬ ಹುಡುಗನಿಗೆ ಇನ್ನೇನು ಬೇಕು. ಅನುರಾಗದ ಮೊಳಕೆ ಬೇರು ಬಿಡುವುದಕ್ಕೆ ಈ ಒಂದು ಮೇಲ್ಮೆ ಸಾಕು.

ಪೇತ್ಯ ಮೋಹದಿಂದ ಆಹತನಾದ. ಅವರು ನೆಲಮಾಳಿಗೆಯನ್ನು ಸಮಿಾಪಿಸುವ ಹೊತ್ತಿಗೆ ಪೇತ್ಯನ ಅಂಗಾಂಗಗಳಲ್ಲೂ ಪ್ರೇಮ ಪ್ರವಹಿಸುತ್ತಿದ್ದಿತು. ಆದರೆ ಮೋತ್ಯಳಿಗೆ ಇದು ತಿಳಿಯದಿರಲೆಂಬ ಉದ್ದೇಶದಿಂದ ಅವನು ದರ್ಪಪ್ರವೃತ್ತಿಯನ್ನೂ ನಿರ್ಲಕ್ಷ್ಯ ಮನೋಭಾವವನ್ನೂ ಪ್ರದರ್ಶಿಸಲಾರಂಭಿಸಿದ.

ಮೋತ್ಯ ಬಹಳ ವಿನಯದಿಂದ ತನ್ನ ಬೊಂಬೆಗಳನ್ನೆಲ್ಲ ಮೊದಲು ತೋರಿಸಿದಳು. ಬೆಚ್ಚಗೆ ಹೊದಿಸಿ ಮಂಚದಲ್ಲಿ ಮಲಗಿಸಿದ ಬೊಂಬೆಗಳು ಒಂದುಕಡೆ ಇದ್ದುವು. ಚಿಕ್ಕ ಒಲೆ, ಅಡಿಗೆ ಮಾಡಲು ಬೇಕಾದ ಆಟದ ತಪ್ಪಲೆ, ಬಾಣಲೆಗಳು ಇನ್ನೊಂದು ಕಡೆ ಇದ್ದುವು. ಅಡಿಗೆಯ ಪಾತ್ರೆ ಒಲೆ ಮೊದಲಾದುವುಗಳನ್ನು ಅವಳ ತಂದೆ ಡಬ್ಬದ ತಗಡುಗಳಿಂದ ಮಾಡಿಕೊಟ್ಟಿದ್ದರು. ಆಟದ ಸಾಮಾನುಗಳೆಲ್ಲ ಬಹಳ ಚಂದವಾಗಿವೆ ಎಂದು ಅನ್ನಿಸಿದುದು ನಿಜವಾದರೂ, ಪೇತ್ಯ ಅದನ್ನು ಹೊರಕ್ಕೆ ತೋರಗೊಡದೆ ಜರೆಯುವ ರೀತಿಯಲ್ಲಿ ಕೆನೆದು ತನ್ನ ತಿರಸ್ಕಾರವನ್ನು ಪ್ರಕಟಪಡಿಸುವಂತೆ ಹಲ್ಲುಗಳ ಸಂದಿನಿಂದ ಪಿಚಕ್ಕನೆ ಉಗುಳಿದ. ಆ ಬಳಿಕ "ಮೋತ್ಯ, ಇದ್ಯಾಕೆ ನಿನ್ನ ತಲೆಯ ಕೂದಲುಗಳನ್ನು ಇಷ್ಟು ತುಂಡಾಗಿ ಕತ್ತರಿಸಿದೆ?" ಎಂದು ಕೇಳಿದ.

"ನನಗೆ ಟೈಫಸ್ ಕಾಯಿಲೆ ಆಗಿತ್ತು." ನೊಂದವಳಂತೆ ಸಣ್ಣ ದನಿಯಲ್ಲಿ ಉತ್ತರಿಸಿ ಪೇತ್ಯ ನಿಟ್ಟುಸಿರು ಬಿಟ್ಟಳು. ಆಗ ಅವಳ ಗಂಟಲಿನಲ್ಲಿ ಹಕ್ಕಿಯ ಉಲಿಯಂತೆ ಪೀಪ್ ಎಂಬ ಸಣ್ಣ ದನಿ ಕೇಳಿಸಿತು. ಬಳಿಕ "ನನ್ನ ಚಿತ್ರಗಳನ್ನು ನೋಡುತ್ತೀಯೇನು?" ಎಂದು ಅವಳು ಕೇಳಿದಳು. ಪೇತ್ಯ ಒಪ್ಪಿಗೆ ಕೊಟ್ಟ. ಅವರಿಬ್ಬರೂ ನೆಲಮೇಲೆ ಪಕ್ಕಪಕ್ಕದಲ್ಲಿ ಕುಳಿತರು. ದೇಶಭಕ್ತಿಯನ್ನು ಪ್ರೇರೇಪಿಸುತ್ತಿದ್ದ ಕಲ್ಲಚ್ಚಿನ ನೌಕಾಯುದ್ಧದ ಚಿತ್ರಗಳು ಹಲವು ಅಲ್ಲಿದ್ದುವು.

ಒಂದು ಚಿತ್ರದಲ್ಲಿ ಜಗುಟಾಗಿ ತೋರುತ್ತಿದ್ದ ಅಚ್ಚನೀಲಿಯ ಆಕಾಶ ಚಿತ್ರಿತವಾಗಿತ್ತು. ಹುಡುಕುದೀಪದ ಕಾಂತಿಯ ಸರಳುಗಳು ಅಡ್ಡತಿಡ್ಡಾಗಿ ಆಕಾಶದಲ್ಲಿ ಸಂಚರಿಸುತ್ತಿದ್ದುವು. ಬಾವುಟಗಳ ಹಾರಾಟದೊಡನೆ ಧ್ವಜಸ್ತಂಭಗಳು ಮುರಿದು ಬೀಳುತ್ತಿದ್ದುವು. ಮೊನಚಾದ ಅಲೆಗಳ ಅಂಚಿನಿಂದ ಸಿಡಿತದಿಂದಾಗಿ ನೀರಿನ ಧಾರೆ ಮೇಲಕ್ಕೆ ಚಿಮ್ಮುತ್ತಿತ್ತು. ನಕ್ಷತ್ರಗಳಂತೆ ವಾಯುಮಂಡಲದಲ್ಲಿ ಸಿಡಿಗುಂಡುಗಳು ಸಿಡಿಯುತ್ತಿದ್ದುವು.

ಒಂದು ಜಪಾನಿ ಕಾವಲುಹಡಗು ಮುಳುಗುತ್ತಿತ್ತು. ಅದರ ಮೊನಚಾದ ಮೂಗು ಮೇಲಕ್ಕೆ ಎದ್ದಿತ್ತು ಮತ್ತು ಹಳದಿಗೆಂಪಿನ ಜ್ವಾಲೆಗಳಿಂದ ಅದು ಆವೃತವಾಗಿದ್ದಿತು. ಹಳದಿ ಮುಖದ ಕುಳ್ಳು ಮನುಷ್ಯರು ಸಮುದ್ರದೊಳಕ್ಕೆ ಉರುಳಿಬೀಳುತ್ತಿದ್ದರು. "ಜಪ್ಪಿಗಳು!" ಚಿತ್ರದ ಸುತ್ತ ಅಂಚೆ

ಗಾಲು ಹಾಕುತ್ತ ಅತ್ಯೌತ್ಸುಕ್ಯದಿಂದ ಆ ಹುಡುಗಿ ಉಸುರಿದಳು.

"ಜಪ್ಪಿಗಳು ಎನ್ನಬೇಡ. ಜಪಾನಿಗಳು ಎಂದು ಹೇಳು" ಪೇತ್ಯ ನಿರ್ದಯವಾಗಿ ಅವಳ ತಪ್ಪನ್ನು ತಿದ್ದಿದ. ರಾಜಕೀಯದಲ್ಲಿ ಯಾವುದಕ್ಕೆ ಏನು ಸರಿಯಾದ ಹೆಸರು ಎಂಬುದನ್ನು ಪೇತ್ಯ ತಿಳಿದಿದ್ದ.

ಇನ್ನೊಂದು ಚಿತ್ರದಲ್ಲಿ ಮೊಣಕಾಲಿನವರೆಗಿನ ಕೆಂಪು ಪಟ್ಟಿಯಿದ್ದ ಷರಾಯಿಯನ್ನೂ, ಒರೆಯಾಗಿ ಫರ್‌ಕೂದಲಿನ ಟೋಪಿಯನ್ನೂ ಹಾಕಿದ್ದ ಕಾಸಕನೊಬ್ಬನು ತನ್ನ ತಲೆಯ ಮೇಲೆ ಗುಡ್ಡದ ಹಿಂದಿನಿಂದ ಹೊಡೆದಿದ್ದ ಜಪಾನಿ ಸೈನಿಕರ ಮೂಗನ್ನು ಕೊಚ್ಚಿ ತೆಗೆದಿದ್ದ. ಆ ಜಪಾನಿ ಸಿಪಾಯಿಯ ಮೂಗಿನಿಂದ ರಕ್ತಪ್ರವಾಹವು ಚಿಲುಮೆಯಂತೆ ಚಿಲ್ಲೆಂದು ಚಿಮ್ಮುತ್ತಿತ್ತು. ಕಿತ್ತಳೆ ಬಣ್ಣದ ಮೊಂಡು ಮೂಗು ತನ್ನ ಎರಡು ಕಪ್ಪು ಹೊಳ್ಳೆಗಳನ್ನು ಪ್ರದರ್ಶಿಸುತ್ತ ಗುಡ್ಡದ ಮೇಲೆ ಬಿದ್ದಿತ್ತು. ಇದನ್ನು ಕಂಡ ಒಡನೆ ಮಕ್ಕಳು ಬಿದ್ದೂಬಿದ್ದೂ ನಕ್ಕರು.

"ನಿನಗೆ ಸಂಬಂಧವಿಲ್ಲದ ಜಾಗದಲ್ಲಿ ನನ್ನದೂ ಒಂದಿದೆ ಎಂದು ನಿನ್ನ ಮೂಗನ್ನು ತೂರಿಸುವುದಕ್ಕೆ ಬರಬೇಡ!" ಕೋಳಿಗಳ ಪಿಚಕಿಗಳು ಹರಡಿದ್ದ ಶಾಖವಾದ ನೆಲದಮೇಲೆ ಕೈಗಳನ್ನು ಬಡಿಯುತ್ತ ನಗುತ್ತ ಪೇತ್ಯ ಕಿರಿಚಿಕೊಂಡ.

"ನಿನ್ನ ಮೂಗನ್ನು ಮಧ್ಯೆ ಚಾಚಬೇಡ!" ಧೂಳು ಹರಡಿದ್ದ ತನ್ನ ತೆಳ್ಳನೆ ಚೂಪು ಮೂಗನ್ನು ಹೊರಳಿಸುತ್ತ ಆ ಸುಂದರ ಬಾಲಕನ ಹೆಗಲಿನ ಮೇಲಿನಿಂದ ದೃಷ್ಟಿ ಬೀರುತ್ತ, ಮೋತ್ಯ ಮರುದನಿಯಿತ್ತಳು.

ಮೂರನೆಯ ಚಿತ್ರದಲ್ಲಿ ಅದೇ ಕಾಸಕ ಮತ್ತು ಅದೇ ಗುಡ್ಡವಿದ್ದಿತು. ಆ ಗುಡ್ಡದ ಇನ್ನೊಂದು ಪಕ್ಕದಲ್ಲಿ ಕಾಲಿಗೆ ಬಿದ್ದು ಹೇಳುತ್ತಿದ್ದ ಜಪಾನಿ ಸಿಪಾಯಿಯ ಕಾಲು ಹರಡಿನಿಂದ ಹಿಂಡಿಯುವರೆಗೂ ಸಿಪಾಯಿಗಳು ಸುತ್ತಿಕೊಳ್ಳುವ ಕಣಕಾಲು ಪಟ್ಟಿಯು ಬಿದ್ದಿತ್ತು. ಅದರ ಕೆಳಗೆ ಈ ಉಕ್ತಿಯಿದ್ದಿತು:

ಅವರಲ್ಲಿದ್ದನೊಬ್ಬ ಜಪಾನಿ ಸೇನಾನಿ ನಾಗಿ
ಹ-ಹ!
ಜಡಿದುರುಳಿಸಿದ ಇವಾನ ನವನ ನಡಿಮೇಲಾಗಿ
ಟ-ಟ!

"ನಿನ್ನ ಮೂಗು ಮಧ್ಯೆ ಚಾಚಬೇಡ! ನಿನ್ನಮೂಗು ಮಧ್ಯೆ ಚಾಚಬೇಡ!" ಪೇತ್ಯನನ್ನು ವಿಶ್ವಾಸಪೂರ್ವಕವಾಗಿ ಒರಗಿಕೊಳ್ಳುತ್ತ ಆನಂದದಿಂದ ಮೋತ್ಯ ಹಾಡಿದಳು. "ಇದು ಸರಿಯಲ್ಲವೆ? ಅವನ್ಯಾಕೆ ತನ್ನದೂ ಒಂದಿದೆ ಇದರಲ್ಲಿ ಎಂದು ತನ್ನ ಮೂಗನ್ನು ಚಾಚುವುದಕ್ಕೆ ಬರಬೇಕಾಗಿತ್ತು?"

ಪೇತ್ಯ ಹುಬ್ಬುಗಂಟಿಕ್ಕಿಕೊಂಡ. ನಾಚಿಕೆಯಿಂದ ಅವನ ಮುಖ ಕೆಂಪೇರಿತು. ಮುಖದಲ್ಲಿ ಅಂತೆ ಹೊಳೆಯುತ್ತಿದ್ದ ಹುಡುಗಿಯ ಪುಟ್ಟ ಬರಿತೋಳುಗಳ ಮೇಲಿನಿಂದ ತನ್ನ ದೃಷ್ಟಿಯನ್ನು ತೆಗೆಯುವುದು ಅವನಿಗೆ ಕಷ್ಟವಾಯಿತು. ಆದರೆ ಕಾಲ ಮಿಂಚಿಹೋಗಿತ್ತು. ಅವನಾಗಲೆ ಅವಳನ್ನು ಮಿತಿಮೀರಿ ಪ್ರೀತಿಸಲಾರಂಭಿಸಿದ್ದ.

ಮೋತ್ಯಳ ಹತ್ತಿರ ರಷ್ಯ-ಜಪಾನ್ ಯುದ್ಧದ ಚಿತ್ರಗಳಲ್ಲದೆ ಅತ್ಯುತ್ತಮವಾದ ಚಕಮುಕಿ

ಕಲ್ಲುಗಳು, "ರಾಜ ಮತ್ತು ರಾಜಕುಮಾರ" ಎಂಬ ಆಟವನ್ನು ಆಡಲು ಬೇಕಾದ ಕಾಯಿಗಳು, ಪೆಪ್ಪರ್‌ಮೆಂಟಿನ ಮೇಲಿನ ಬಣ್ಣ ಬಣ್ಣದ ಚೀಟಿಗಳು ಮತ್ತು ಸಿಗರೇಟ್ ಪೊಟ್ಟಣದ ರಟ್ಟುಗಳೂ ಕೂಡ ಇದ್ದುವು. ಇದನ್ನು ಕಂಡಾಗ ಪೇತ್ಯನ ಪ್ರೀತಿ ಗಗನವನ್ನು ಮುಟ್ಟಿತು. ಆಹ ಅದೆಂಥ ಅಪೂರ್ವ ಆನಂದದ ದಿವಸ! ಪೇತ್ಯ ತನ್ನ ಜೀವನದಲ್ಲೆಂದೂ ಅದನ್ನು ಮರೆಯಲಾರ.

ಮೋತ್ಯ ಕಿವಿಯಲ್ಲಿ ಧರಿಸಿದ್ದ ಓಲೆಗಳು ಕೆಳಗೆ ಬೀಳದೆ ಹೇಗೆ ಕಿವಿಗೇ ಅಂಟಿಕೊಂಡಿವೆ ಎಂಬುದನ್ನು ತಿಳಿಯಲು ಕುತೂಹಲವನ್ನು ವ್ಯಕ್ತಪಡಿಸಿದಾಗ ಸ್ವಲ್ಪಕಾಲದ ಹಿಂದೆ ಚುಚ್ಚಿದ್ದ ಕಿವಿಯ ರಂಧ್ರವನ್ನು ಅವಳು ಪೇತ್ಯನಿಗೆ ತೋರಿಸಿದಳು. ಮೋತ್ಯಳ ಕಿವಿಯ ಕೆಳಗಿನ ಚಪ್ಪಟೆಯಾದ ಭಾಗವನ್ನು ಮುಟ್ಟಿನೋಡುವ ಸಾಹಸಮಾಡಿದ ಪೇತ್ಯ. ಅದು ಮೃದುವಾಗಿತ್ತು, ಕಿವಿಯನ್ನು ಹೊಸದಾಗಿ ಚುಚ್ಚಿದ್ದರಿಂದ ಕಿತ್ತಳೆ ತೊಳೆಯಂತೆ ಸ್ವಲ್ಪ ಊದಿತ್ತು.

ಆ ಬಳಿಕ ಅವರಿಬ್ಬರೂ ಟಿಕ್ಕಿ ಆಟವನ್ನು ಆಡಿದರು. ಪೇತ್ಯ ಅವಳ ಟಿಕ್ಕಿಗಳನ್ನೆಲ್ಲ ಗುಡಿಸಿ ತೆಗೆದುಕೊಂಡು ಬಿಟ್ಟ. ಆಗ ಆ ಹುಡುಗಿಯ ಮುಖ ಸೋಲಿನಿಂದ ಜೋತಿತು. ಇದನ್ನು ಪೇತ್ಯ ನೋಡಿ ಸಹಿಸಲಾರದೆಹೋದ. ಅನುಕಂಪೆಯಿಂದ ತಾನು ಗೆದ್ದಿದ್ದ ಟಿಕ್ಕಿಗಳನ್ನೆಲ್ಲ ಅವಳಿಗೆ ವಾಪಸು ಕೊಟ್ಟಿದ್ದಲ್ಲದೆ ತನ್ನಲ್ಲಿದ್ದವುಗಳನ್ನೂ ಕೂಡ ಒಂದೂ ಬಿಡದೆ ಬಹುಮಾನವಾಗಿ ಕೊಟ್ಟು ಬಿಟ್ಟ. ತಾನು ಎಷ್ಟು ಉದಾರಿ ಎಂಬುದನ್ನು ಅವಳು ಕಂಡುಕೊಳ್ಳಲಿ ಎಂಬುದೇ ಅವನ ಧಾರಾಳವಾದ ಕೊಡುಗೆಯ ಉದ್ದೇಶವಾಗಿತ್ತು.

ಆಮೇಲೆ ಒಣಗಿದ ಕಸಕಡ್ಡಿಗಳನ್ನು ಆರಿಸಿಕೊಂಡು ಬಂದು ಅವರಿಬ್ಬರೂ ಬೊಂಬೆ ಒಲೆಯನ್ನು ಹೊತ್ತಿಸಿದರು. ಹೊಗೆ ತುಂಬಿಕೊಂಡಿತೇ ಹೊರತು ಉರಿ ಮೇಲಕ್ಕೇಳುವಂತೆ ಕಾಣಲೇ ಇಲ್ಲ. ಆಗ ಅದನ್ನು ಕೈಬಿಟ್ಟು ಮುಚ್ಚಿಟ್ಟುಕೊಳ್ಳುವ ಆಟವನ್ನಾರಂಭಿಸಿದರು.

ಒಬ್ಬರು ಇನ್ನೊಬ್ಬರಿಗೆ ಪತ್ತೆ ಹಚ್ಚಲು ಆಗದಂತೆ ಮುಚ್ಚಿಟ್ಟುಕ್ಕೊಳ್ಳಲು ಪ್ರಯತ್ನಿಸಿದರು. ಆ ಪ್ರಯತ್ನದಲ್ಲಿ ಅವರು ಬಳಕೆಯಾದ ಸ್ಥಳಗಳನ್ನು ಬಿಟ್ಟು ದೂರದೂರದ ಸ್ಥಳಗಳಿಗೆಲ್ಲ ತೆವಳಿಕೊಂಡು ಹೋದರು. ಅಂಥ ಸ್ಥಳಗಳಲ್ಲಿ ಮುಚ್ಚಿಟ್ಟುಕೊಂಡಾಗ ಒಂಟಿಯಾಗಿರಲು ಅನೇಕ ಸಲ ಅವರಿಗೆ ತುಂಬಾ ದಿಗಿಲಾಗುತ್ತಿತ್ತು. ಎಲ್ಲಾದರೂ ತುಟಿಗಳನ್ನು ಮೀರಿ ನಗುವು ಹೊರಕ್ಕೆ ಬಂದುಬಿಟ್ಟೀತೆಂದು ಮೂಗು ಬಾಯಿಗಳನ್ನು ಎರಡು ಕೈಗಳಿಂದಲೂ ಬಿಗಿಯಾಗಿ ಅಮುಕಿ ಹಿಡಿದುಕೊಂಡು ಕುಳಿತಿದ್ದಾಗ ಹುಡುಕಿಕೊಂಡುಬರುವವರ ಹೆಜ್ಜೆಯ ಸಪ್ಪಳವನ್ನು ಕೇಳುವುದೆ ಒಂದು ಆನಂದ. ಆಗ ಎಲ್ಲಿ ಗೊತ್ತಾಗಿಬಿಡುವುದೋ ಎಂದು ಎದೆ ಹೇಗೆ ಹೊಡೆದುಕೊಳ್ಳುತ್ತದೆ! ಕಿವಿಯಲ್ಲಿ ಹೇಗೆ ಧನ್‌ಧನ್ ಶಬ್ದವಾಗುತ್ತದೆ! ಇದ್ದಕ್ಕಿದ್ದ ಹಾಗೆ ಒಂದು ಮೂಲೆಯ ಹಿಂದುಗಡೆಯಿಂದ ತುಟಿಗಳನ್ನು ಬಿಗಿಯಾಗಿ ಕಚ್ಚಿದ ಭಾವಾತಿರೇಕದಿಂದ ಬಿಳಿಚಿಕೊಂಡ ಅಥ ಮುಖ ಕಾಣಿಸಿಕೊಳ್ಳುತ್ತದೆ. ಬೆಳ್ಳನೆ ಮೂಗು, ಬಟ್ಟಲು ಕಣ್ಣು, ಚೂಪು ಗದ ತಲೆಯ ಬಿಳಿಯ ಟೋಪಿ-ಈ ಒಂದೊಂದೂ ಕಣ್ಣೆದುರು ನಿಂತಂತೆ ಸ್ಪಷ್ಟವಾಗಿ ಕಾ ತ್ತದೆ. ಅವರಿಬ್ಬರ ದೃಷ್ಟಿಗಳೂ ಏಕಕಾಲದಲ್ಲಿ ಒಂದಾಗುತ್ತವೆ ಇನ್ನೇನು ಮೂರ್ಛೆ ಹೋ ಬೇಕು ಎನ್ನುವಷ್ಟು ಆಶ್ಚರ್ಯ ಇಬ್ಬರಿಗೂ. ಅನಂತರ ರಕ್ತ ಹೆಪ್ಪುಗಟ್ಟುವಂತೆ ವಿಜಯೋನ್ಮ ಕಾಗಿ ಮಾಡುವ ಸಿಂಹನಾದ: "ಪೇತ್ಯ, ಸಿಕ್ಕಿಬಿದ್ದೆ!" ಬಳಿಕ ಯಾರು ಮೊದಲು 'ಅ ಕೋಲನ್ನು ಗಿಟ್ಟಿಸುತ್ತಾರೆ ಎಂದು ಇಬ್ಬರಲ್ಲೂ ಓಟದ ಸ್ಪರ್ಧೆ. "ಸಿಕ್ಕಿಬಿದ್ದೆ!" "ಸಿಕ್ಕಿಬಿದ್ದೆ

ಎಂಬ ಕೂಗುಗಳು. ಮುಚ್ಚಿಟ್ಟುಕೊಳ್ಳುವ ಆಟದ ಸುಖವನ್ನು ಆಡಿಯೇ ಸವಿಯಬೇಕು.

ಒಂದು ಸಲ ಮೋತ್ಯ ಬಹುದೂರಕ್ಕೆ ಹೋಗಿ ಮುಚ್ಚಿಟ್ಟುಕೊಂಡಳು. ಪೇತ್ಯ ಸುಮಾರು ಅರ್ಧಗಂಟೆಯ ಕಾಲ ಹುಡುಕಲು ಶ್ರಮಪಟ್ಟ. ಕೊನೆಗೆ ತನ್ನ ಪ್ರಯತ್ನ ವಿಫಲವಾಗಲು ಮನೆಯ ಹಿಂದಿನ ಬೇಲಿಯನ್ನು ಹತ್ತಿ ಅದರ ಹಿಂದಕ್ಕೆ ಇದ್ದ ಗೋಮಾಳದ ಮೇಲೆ ಸೂಕ್ಷ್ಮದೃಷ್ಟಿಯನ್ನು ಹರಿಸಿದ. ಅಗೋ ಅಲ್ಲಿ, ಗಿಡಗಂಟಿಗಳು ಬೆಳೆದಿದ್ದ ಕುಳಿಯಲ್ಲಿ ಮೋತ್ಯ ತೆರೆದ ಮೊಣಕಾಲುಗಳ ಮೇಲೆ ಗದ್ದವನ್ನಿಟ್ಟುಕೊಂಡು ತುಂಡು ಮೋಡ ತೇಲಿಹೋಗುತ್ತಿದ್ದ ಗಗನವನ್ನು ದೃಷ್ಟಿಸುತ್ತ ಕುಳಿತಿದ್ದಳು. ಅವಳ ಸುತ್ತ ಕ್ರಿಕೆಟ್‌ಗಳು ಚಿರ್ರೆನ್ನುತ್ತಿದ್ದುವು, ದನಗಳು ಮೇಯುತ್ತಿದ್ದುವು. ಸನ್ನಿವೇಶ ಭಯದ ಬೀಜವನ್ನು ಬಿತ್ತಲನುಕೂಲವಾಗಿತ್ತು. ಪೇತ್ಯನಿಗೆ ಗಾಬರಿಯೋ ಗಾಬರಿ. ಪೇತ್ಯ ಕುಳಿಯೊಳಕ್ಕೆ ದೃಷ್ಟಿ ಬೀರಿದ. ಇಬ್ಬರೂ ಒಬ್ಬರನ್ನೊಬ್ಬರು ಬಹು ಹೊತ್ತು ದೃಷ್ಟಿಸಿ ನೋಡಿದರು. ಆಗ ಅವರಿಗೆ ಒಂದು ವಿಲಕ್ಷಣವಾದ ಚಿಂತೆಯ ಅನುಭವವುಂಟಾಯಿತು. ಆಟದಲ್ಲಿ ಆ ರೀತಿಯ ಮನೋವೇದನೆಯ ಅನುಭವ ಅವರಿಗೆ ಅದುವರೆಗೆ ಆಗಿರಲಿಲ್ಲ. ಆಟದಲ್ಲಿ ದೊರಕುವ ಅನುಭವಕ್ಕಿಂತ ಅದು ಬೇರೆಯಾದುದಾಗಿತ್ತು.

"ಸಿಕ್ಕಿಬಿದ್ದೆ, ಮೋತ್ಯ!" ಆ ಹುಡುಗನಿಗೆ ಕಿರಿಚಿಕೊಳ್ಳಬೇಕೆಂಬ ಮನಸ್ಸು. ಆದರೆ ಗಂಟಲಿನಿಂದ ಶಬ್ದವೇ ಹೊರಕ್ಕೆ ಹೊರಡದು. ಖಂಡಿತವಾಗಿ ಆಟದಲ್ಲಿ ಈ ರೀತಿ ಅವನೆಂದೂ ಕ್ಲೇಶವನ್ನು ಅನುಭವಿಸಿರಲಿಲ್ಲ.

ಮೋತ್ಯ ಕುಳಿಯಿಂದ ಮೇಲಕ್ಕೆ ಎಚ್ಚರಿಕೆಯಿಂದ ಏರಿ ಬಂದಳು. ಅಲ್ಲಿಂದ ನಿಧಾನವಾಗಿ ಮನೆಯ ಅಂಗಳಕ್ಕೆ ಅವರಿಬ್ಬರೂ ನಡೆದು ಬಂದರು. ಮನಸ್ಸಿನಲ್ಲಿ ಏನೋ ಕಿರಿಕಿರಿ. ಅವರ ಬೆರಳುಗಳು ಪರಸ್ಪರ ತಗಲುತ್ತಿದ್ದರೂ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಳ್ಳಬೇಕೆಂಬ ಇಚ್ಛೆಯನ್ನು ಬೇಕೆಂತಲೇ ತಡೆಯುತ್ತಿದ್ದರು.

ಗೋಮಾಳದ ಹೂವಿನ ಗಿಡಗಳ ಮೇಲೆ ಮೋಡದ ತುಂಡಿನ ನೆರಳು ನಿಧಾನವಾಗಿ ಹರಿದು ಹೋಯಿತು.

ಬೇಲಿಯನ್ನು ಏರಿ ಮನೆಯ ಹಿಂಭಾಗವನ್ನು ತಲಪಿದಾಗ ಪೇತ್ಯ ಪ್ರಜ್ಞೆಗೆ ಬಂದ. "ಸಿಕ್ಕಿಬಿದ್ದೆ!" ಎಂದು ಲೇವಡಿ ಮಾಡುವಂತೆ ಅರಚುತ್ತ "ಅಜ್ಜ ಕೋಲನ್ನು" ತೆಗೆದುಕೊಳ್ಳುವುದಕ್ಕಾಗಿ ಓಡಿಬಂದ; ಆಟದ ನಿಯಮದ ಪ್ರಕಾರ ಅವಳ ಬೆರಳಿನ ಗಿಣ್ಣುಗಳ ಮೇಲೆ ಅಜ್ಜ ಕೋಲಿನಿಂದ ಎರಡೇಟು ಕೊಟ್ಟು ಚುರುಕುಮುಟ್ಟಿಸಬಹುದು ಎಂಬ ತೀವ್ರಾಸಕ್ತಿಯೇ ಅವನ ಆ ನಡತೆಗೆ ಕಾರಣವಾಗಿತ್ತು.

ಪೇತ್ಯ ಆಟದಲ್ಲಿ ಮುಳುಗಿದ್ದುದರಿಂದ ಗಾವ್ರಿಕನ ಹತ್ತಿರಕ್ಕೆ ಬಂದಾಗ ಆಟವ ಮತ್ತಿನಲ್ಲಿ ಅವನನ್ನು ಗಮನಿಸಲೇ ಇಲ್ಲ.

"ಆ ನಾವಿಕನ ಹೆಸರೇನು ಹೇಳ್ತೀಯೋ ಪೇತ್ಯ?" ಎಂದು ಗಾವ್ರಿಕ್ ಹುಬ್ಬೇರಿಸಿ ಅನ್ಯಮನಸ್ಕನಂತೆ ಕೇಳಿದ.

"ಯಾವ ನಾವಿಕ?"

"ತುರ್ಗನೀವ್ ಹಡಗಿನಿಂದ ಸಮುದ್ರಕ್ಕೆ ಹಾರಿದವನು."

"ನನಗೆ ಗೊತ್ತಿಲ್ಲ."

"ಆ ಗಬ್ಬು ಮನುಷ್ಯ, ಪತ್ತೇದಾರನಾದ ಮಾಸೆ ಏನೋ ಹೆಸರು ಹಿಡಿದು ಕೂಗಿದ ಎಂದ
ಹೇಳಲಿಲ್ಲವೇ. ಜ್ಞಾಪಿಸಿಕೊಂಡು ಹೇಳು, ನೋಡೋಣ."

"ಓ, ಹೌದು. ನೀನು ಹೇಳಿದ್ದು ಸರಿ. ಜುಕೋವ್, ರೊಡಿಯಾನ್ ಜುಕೋವ್. ಸಾಕ
ಇನ್ನು ಸುಮ್ಮನೆ ತೊಂದರೆ ಕೊಡಬೇಡ. ನಾವು ಆಟ ಆಡುತ್ತಿದ್ದೇವೆ."

ಮೊದಲಿನಂತೆ ಅನ್ಯಮನಸ್ಕತೆಯಿಂದ ಹುಬ್ಬನ್ನೇರಿಸಿಕೊಂಡು ಆ ಸ್ಥಳವನ್ನು ಬಿಟ್ಟ. ಪೇತ
ಈ ಹೊಸ ಪ್ರೇಮಪ್ರಸಂಗದ ಕಾವಿನಲ್ಲಿದ್ದುದರಿಂದ ಮೇಲಿನ ಸಂವಾದವನ್ನು ಬಹುಬೇಗ ಮರೆತ
ಬಿಟ್ಟ.

ಸ್ವಲ್ಪ ಹೊತ್ತಿನಲ್ಲೇ ಮೋತ್ಯಳ ತಾಯಿ ಇಬ್ಬರನ್ನೂ ಊಟಕ್ಕೆ ಕರೆದಳು.

"ಮೋತ್ಯ, ನಿನ್ನ ಆ ಶ್ರೀಮಂತ ಸ್ನೇಹಿತನನ್ನು ಒಳಕ್ಕೆ ಕರೆದುಕೊಂಡು ಬಾ. ನಮ
ಅಂಬಲಿ ರುಚಿ ಹೇಗಿದೆ ನೋಡಲಿ. ಅವನಿಗೆ ಹೊಟ್ಟೆ ಹಸಿದಿರಬೇಕು." ಎಂದಳು.

ಮೋತ್ಯಳ ಮುಖ ಲಜ್ಜೆಯಿಂದ ಕೆಂಪೇರಿತು, ಆ ಬಳಿಕ ಬಿಳಿಚಿಕೊಂಡಿತು. ಕೋ
ನಂತೆ ನೆಟ್ಟಗೆ ಸೆಟೆತುಕೊಂಡು ನಿಂತಳು. "ನಮ್ಮ ಜತೆ ಅಂಬಲಿ ಕುಡಿಯುತ್ತೀಯಾ?" ಗಂಟಲ
ಕಟ್ಟಿದಂತೆ ಆಯಿತು ಅವಳಿಗೆ. ಆ ನಾಲ್ಕು ಮಾತುಗಳು ಹೊರಗೆ ಬರುವುದೂ ಕಷ್ಟ ಎನ್ನಿಸಿತು

ನಿಜವಾಗಿಯೂ ತನಗೆ ಹಸಿವಾಗಿದೆಯೆಂಬ ಅರಿವು ಪೇತ್ಯನಿಗಾಗಿದ್ದು ಆಗಲೇ. ಅಂದ
ಬೆಳಗಿನಿಂದ ಅವನು ಊಟವನ್ನೇ ಮಾಡಿರಲಿಲ್ಲ. ತನ್ನ ಜೀವನದಲ್ಲಿ ಅದುವರೆಗೆ ಪೇತ್ಯ ಅಷ
ಗಟ್ಟಿಯಾದ ರುಚಿಕರವಾದ ಅಂಬಲಿಯನ್ನು ಕುಡಿದಿರಲಿಲ್ಲ, ಅಷ್ಟು ಗಟ್ಟಿಯಾಗಿದ್ದ ಹೊ
ವಾಸನೆಯ ಆಲೂಗೆಡ್ಡೆ ಮತ್ತು ಹಂದಿಮಾಂಸದ ಹೋಳುಗಳನ್ನೂ ತಿಂದಿರಲಿಲ್ಲ.

ಉಪ್ಪುನೀರಳೆ ಮರದಡಿಯಲ್ಲಿ ಬಯಲಿನಲ್ಲಿ ಮಾಡಿದ ಆ ಅದ್ಭುತ ಭೋಜನವಾದ ಬಳಿ
ಆ ಇಬ್ಬರು ಹುಡುಗರೂ ಮನೆಯ ಕಡೆಗೆ ಹೊರಟರು. ಟೆರೆಂಟಿ ಅವರನ್ನು ಕಳುಹಿಸಿಕೊಡಲ
ಅವರೊಡನೆ ಬಂದ. ಮನೆಯೊಳಕ್ಕೆ ಓಡಿಹೋಗಿ ಗುತ್ತನಾದ ಅಂಗಿಯನ್ನೂ ಗುಂಡಿಯಿಂ
ಕಂಗೊಳಿಸುತ್ತಿದ್ದ ಹೊಳಪಿನ ಟೋಪಿಯನ್ನೂ ಧರಿಸಿ ಒಂದುಕ್ಷಣದಲ್ಲಿ ಹೊರಕ್ಕೆ ಬಂದ. ರ
ದಿನಗಳಲ್ಲಿ ಒಡೆಸ್ಸದ ಕುಶಲಕೆಲಸಗಾರರು ಗಾಳಿ ಸಂಚಾರಕ್ಕೆ ಹೊರಡುವಾಗ ಕೈಯಲ್ಲಿ ವಾ
ಕೆಯಾಗಿ ತೆಗೆದುಕೊಂಡು ಹೋಗುತ್ತಿದ್ದಂಥ ಕಬ್ಬಿಣದ ಛತ್ರಿಕೋಲನ್ನು ತೆಗೆದುಕೊಂಡ
ಹುಡುಗರೊಡನೆ ಹೊರಟ.

ಬಾಗಿಲವರೆಗೆ ಬಂದು ಟೆರೆಂಟಿಯನ್ನು ಕಳುಹಿಸಿಕೊಡುವಾಗ ಅವನ ಹೆಂಡತಿ "ಪ್ರ
ಟೆರೆಂಟಿ, ತುಂಬ ಹೊತ್ತಾಗಿದೆ. ಈಗ ಹೋಗಬೇಡಿ." ಎಂದಳು. ಅವಳ ಕಣ್ಣುಗಳಲ್ಲಿ ಕುಣಿಯ
ತ್ತಿದ್ದ ಕಾತುರಭಾವವನ್ನು ಕಂಡಾಗ ಪೇತ್ಯನ ಮನಸ್ಸು ಕಲಕಿತು.

"ಯಾವ ಹೊತ್ತಿನಲ್ಲಿ ಏನೋ. ಮನೆಯಲ್ಲೇ ಇರಬಾರದೇ."

"ಸ್ವಲ್ಪ ಕೆಲಸ ಇದೆ." ಟೆರೆಂಟಿ ಉತ್ತರ ಕೊಟ್ಟ.

"ನಿಮ್ಮ ಇಷ್ಟ" ನಮ್ರಳಾಗಿ ಹೆಂಡತಿ ನುಡಿದಳು.

"ಏನೂ ತೊಂದರೆ ಇಲ್ಲ." ಟೆರೆಂಟಿ ಉಲ್ಲಾಸಭರಿತನಾಗಿ ಕಣ್ಣು ಮಿಟುಕಿಸಿದ.

"ರೈಲು ನಿಲ್ದಾಣದಿಂದ ಆಚೆಗೆ ಹೋಗಬೇಡಿ."

"ಏನೂ ಭಯ ಪಡಬೇಡ."

"ಶುಭವಾಗಲಿ, ಹೋಗಿಬನ್ನಿ."

"ನಿನಗೂ ಅದನ್ನೇ ಹಾರೈಸುತ್ತೇನೆ."

ಟಿರೆಂಟಿ ಮತ್ತು ಆ ಹುಡುಗರಿಬ್ಬರೂ ನಗರಕ್ಕೆ ಹೊರಟರು. ಆದರೆ ಈಬಾರಿ ಟಿರೆಂಟಿ ಅವರನ್ನು ಕರೆದುಕೊಂಡು ಹೋದ ದಾರಿ ಹುಡುಗರು ಮೊದಲು ಬಂದ ದಾರಿಗಿಂತ ತೀರ ಬೇರೆಯದಾಗಿತ್ತು. ಖಾಲಿ ನಿವೇಶನಗಳು, ಮನೆಯ ಹಿತ್ತಿಲಿನ ತರಕಾರಿ ತೋಟಗಳು, ಗಲ್ಲಿಗಳು—ಇವೇ ಹೆಚ್ಚಾಗಿ ಅವರಿಗೆ ಕಾಣಸಿಕ್ಕವುಗಳು. ಈ ದಾರಿ ಬಹಳ ಹತ್ತಿರದ ದಾರಿಯಂತೆ ತೋರಿತು ಮತ್ತು ದಾರಿಯಲ್ಲಿ ಅಷ್ಟೊಂದು ಹೆಚ್ಚು ಜನರೂ ಓಡಾಡುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ಅವರು ಚಿರಪರಿಚಿತವಾದ ಸೆನ್ನಾಯ ಚೌಕವನ್ನು ತಲಪಿದರು. ಇಲ್ಲಿ ಟಿರೆಂಟಿ "ಇವತ್ತು ಸಾಯಂಕಾಲ ಬಂದು ನೋಡುತ್ತೇನೆ" ಎಂದು ಗಾಪ್ರಿಕನಿಗೆ ಹೇಳಿ ತಲೆಯನ್ನು ಒಂದು ಸಲ ತೂಗಿ ಜನಗಳ ಗುಂಪಿನಲ್ಲಿ ಮರೆಯಾಗಿಬಿಟ್ಟ.

ಆಗಲೆ ಸೂರ್ಯ ಮುಳುಗಿದ್ದ. ಕೆಲವು ಅಂಗಡಿಗಳಲ್ಲಿ ದೀಪವನ್ನು ಹೊತ್ತಿಸುತ್ತಿದ್ದರು. "ಮನೆಯಲ್ಲಿ ಏನು ಹೇಳುತ್ತಾರೆ!" ಎಂಬ ಯೋಚನೆ ತಟಕ್ಕನೆ ಪೇತ್ಯನ ತಲೆಯನ್ನು ಮುತ್ತಿತು. ಈಗ ಅವನಿಗೆ ಗಾಬರಿಯಾಯಿತು. ಅವನ ಮನಸ್ಸಿನ ಹರ್ಷವೆಲ್ಲ ಇಂಗಿಹೋಯಿತು. ಈಗ ತನಗೆ ಪ್ರಾಯಶ್ಚಿತ್ತ ಮನೆಯಲ್ಲಿ ಕಾದಿದೆ ಎನ್ನಿಸಿತವನಿಗೆ. ಈ ವಿಷಯವನ್ನು ಯೋಚನೆ ಮಾಡಬಾರದೆಂದು ಅವನು ಪ್ರಯತ್ನ ಪಟ್ಟಷ್ಟೂ ಅದನ್ನು ತಡೆಯುವುದು ದುಸ್ಸಾಧ್ಯವಾಗುತ್ತ ಬಂದಿತು.

ದೇವರೇ ಗತಿ, ಅವನ ಹೊಸ ಬೂಡ್ಸುಗಳ ಗತಿ ಏನಾಗಿದೆ! ಕಾಲುಚೀಲಗಳೋ? ಮೊಣಕಾಲಿನ ಬಳಿ ಕಾಲು ಚೀಲಗಳಲ್ಲಿ ಅಷ್ಟು ದೊಡ್ಡ ರಂಧ್ರಗಳು ಎಲ್ಲಿಂದ ಬಂದುವು! ಬೆಳಗ್ಗೆ ಏನೂ ಆಗಿರಲಿಲ್ಲ, ಚೆನ್ನಾಗಿದ್ದುವು. ಅವನ ಕೈಗಳೋ, ಎಕ್ಕಡ ಹೊಲೆಯುವವನ ಕೈಗಳಾದರೂ ವಾಸಿ! ಕೆನ್ನೆಗಳ ಮೇಲೆ ಟಾರಿನ ಕಪ್ಪು ಚುಕ್ಕೆಗಳು ಬೇರೆ. ದೇವರು ದಿಕ್ಕು!

ತಾನು ಮನೆಗೆ ಹೋದ ಒಡನೆ ದೊಡ್ಡ ರಂಪವೇ ಆಗುತ್ತದೆ. ಕೋಲು ತೆಗೆದುಕೊಂಡು ಹೊಡೆಯುವುದಾದರೆ ಚಿಂತೆಯಿಲ್ಲ, ನಾಲ್ಕೇಟುಗಳನ್ನು ತಿಂದುಬಿಡಬಹುದು. ಮನೆಯಲ್ಲಿ ಹಾಗೆ ಮಾಡುವುದಿಲ್ಲ. ಅದೇ ತೊಂದರೆ. ವಟಗುಟ್ಟಿಕೊಳ್ಳುತ್ತಾರೆ, ಶಾಪಹಾಕುತ್ತಾರೆ. ಅವನ ಹೃದಯ ನೋವುಗಳನ್ನು ಕೇಳಿ ಹಿಂಡಿ ಹೋಗುವುದು. ಅವರ ಬೈಗುಳೆಲ್ಲ ನ್ಯಾಯವಾಗಿರುತ್ತವೆ. ಅದೊಂದೇ ತಲೆನೋವು.

ತಂದೆ ಹೆಗಲನ್ನು ಹಿಡಿದುಕೊಂಡು ಜೋರಾಗಿ ಅಲ್ಲಾಡಿಸುತ್ತ "ಎಲ್ಲಿ ಹೋಗಿದ್ದೆಯೋ, ಬಟ್ಮಾಳ. ನೀನು ಯಾವುದಕ್ಕೂ ಪ್ರಯೋಜನವಿಲ್ಲ. ನನ್ನನ್ನು ಹೂತುಹಾಕಿಬಿಡಬೇಕು ಅಂತ ನಿನ್ನ ಯೋಚನೆ ಎಂದು ಕಾಣುತ್ತದೆ" ಎಂದು ಕಿರಿಚುವರು. ಅತಿ ನೀಚವಾಗಿ ಹೊಡೆಯುವುದಕ್ಕಿಂತ ಹತ್ತರಷ್ಟು ಕೆಟ್ಟದ್ದು ಇದು ಎಂಬುದು ಎಲ್ಲರಿಗೂ ತಿಳಿದ ವಿಷಯ.

ಇವೇ ಮೊದಲಾದ ಕಹಿ ಯೋಚನೆಗಳು ಪೇತ್ಯನನ್ನು ಎದೆಗುಂದಿಸಿದುವು. ತಾನು ಸಂದರ್ಶಿಸಿದ ಆ ಹುಡುಗಿಗೆ ತನ್ನ ಟಿಕ್ಕಿಗಳೆಲ್ಲವನ್ನೂ ಯೋಚನೆಮಾಡದೆ ಹುಚ್ಚನಂತೆ ಕೊಟ್ಟುಬಿಟ್ಟೆನಲ್ಲ ಎಂಬ ಪಶ್ಚಾತ್ತಾಪ ಮೂಡಿ ಅದು ಅವನ ಮನೋವ್ಯಥೆಯನ್ನು ಮತ್ತಷ್ಟು ಕೆರಳಿಸಿತು.

೨೫. "ನನ್ನನ್ನು ಹಿಡಿದುಕೊಂಡು ಹೋಗಿಬಿಡತ್ತಾ ಇದ್ದರು!"

ಹಿಂದೆಂದೂ ತಾನು ಕಾಣದಿದ್ದಂಥ ಬೈಗುಳದಿಂದ ತನ್ನನ್ನು ತಪ್ಪಿಸಲು ಜಗತ್ತಿನ ಯಾ ಮಹಾಶಕ್ತಿಗೂ ಸಾಧ್ಯವಿಲ್ಲವೆಂದು ಪೇತ್ಯನಿಗೆ ತೋರಿತು. ಎಷ್ಟೋ ಹುಡುಗರಿಗಿರುವಂ ಪೇತ್ಯನ ನೆತ್ತಿಯಮೇಲೆ ಕೂದಲಿನ ಎರಡು ಸುಳಿಗಳಿಗಳಿದ್ದುವೇನೋ ನಿಜ. ಆದರೆ ಅದನ್ನು ಅದೃಷ್ಟದ ಸುಳಿಯೆಂದು ಜನ ಸುಮ್ಮನೆ ಹೇಳುವುದಿಲ್ಲವೆಂಬುದು ಇಂದು ಪೇತ್ಯನ ವಿಷಯದಲ್ಲಿ ಒಳ್ಳೆಯ ನಿದರ್ಶನವಾಗಿ ಪರಿಣಮಿಸಿತು. ತಂದೆಯ ಆಕ್ಷೇಪಣೆಗಳಿಂದ ತಪ್ಪಿಸಿಕೊಳ್ಳುವಂ ಒಂದು ಅದೃಷ್ಟದ ಸಂಗತಿ ನಡೆಯಿತು. ಪೇತ್ಯ ಅಂದು ಏನೇನು ಬೇಕಾದರೂ ನಡೆಯಬಹ ದೆಂದು ನಿರೀಕ್ಷಿಸಿದ್ದ. ಆದರೆ ಹೀಗಾಗುವುದೆಂದು ಅವನು ಊಹಿಸುವುದು ಸಾಧ್ಯವೇ ಇರಲಿಲ್ಲ.

ಸೆನ್ನಾಯ ಚೌಕಕ್ಕೆ ಸ್ವಲ್ಪ ದೂರದಲ್ಲಿ ಸ್ತಾರೊ-ಪೋರ್ರೊತ್ಫ್ರಾಂಕೊವ್‌ಸ್ಕಾಯ ಬೀದಿಯಲ್ಲಿ ಪಾವಲಿಕ್ ರಸ್ತೆಯ ಮಗ್ಗುಲಲ್ಲಿ ಅಳುತ್ತ ಓಡುತ್ತಿದ್ದುದನ್ನು ಪೇತ್ಯ ಕಂಡ. ಪಾವಲಿಕನ ಜೊತೆ ಯಲ್ಲಿ ಯಾರೂ ಇರಲಿಲ್ಲ. ಪಾವಲಿಕ್ ಮುಗ್ಗರಿಸಿ ಬೀಳುವುದನ್ನೂ ನೋಡದೆ ಓಡುತ್ತಿದ್ದ ನೆನೆದ ಬಟ್ಟೆಯಿಂದ ನೀರನ್ನು ಹಿಂಡಿದಂತೆ ಧೂಳು ತುಂಬಿ ಕೊಳೆಯಾದ ಕೆನ್ನೆಯ ಮೇಲಿನಿಂದ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ಚೌಕವಾಗಿ ತೆರೆದುಕೊಂಡಿದ್ದ ಬಾಯಲ್ಲಿ ಅವನ ಕೆಂಪುನಾಲಗೆ ಕಂಪಿಸುತ್ತಿತ್ತು. ಅವನ ಮೂಗಿನ ಹೊಳ್ಳೆಗಳಿಂದ ಮುತ್ತುಗಳ ಆಕಾರದ ಎರಡು ತೋರ ಹನಿಗಳು ಕೆಳಗೆ ಇಳಿಬಿದ್ದಿದ್ದುವು. ಪಾವಲಿಕ್ ಒಂದೇ ಸಮನೆ ಗೊಳೋ ಎಂದು ಅಳುತ್ತಿದ್ದ. ಆದರೆ ಅವನು ಅಳುತ್ತಲೇ ಓಡುತ್ತಿದ್ದುದರಿಂದ ನಿರಂತರವಾಗಿ ಒಂದೇ ಕ್ರಮದಲ್ಲಿ ಬರುತ್ತಿದ್ದ "ಆಂಂಂ.." ಆಗಿರಲಿಲ್ಲ. ಅದಕ್ಕೆ ಬದಲಾಗಿ ನಿಲ್ಲಿಸಿ ನಿಲ್ಲಿಸಿ ಬಿಕ್ಕಳಿಸುವಂತಿದ್ದ "ಆ್ಹಂ! ಆ್ಹಂ! ಆ್ಹಂ!" ಶಬ್ದವಾಗಿ ಮಾರ್ಪಡುತ್ತಿತ್ತು.

"ಪಾವಲಿಕ್!"

ಅಣ್ಣನನ್ನು ಕಾಣುತ್ತಲೇ ಪಾವಲಿಕ್ ಅವನ ಬಳಿಗೆ ಓಡಿಹೋಗಿ ಅವನ ಬಟ್ಟೆಯನ್ನು ಬಿಗಿಯಾಗಿ ಮುಷ್ಟಿಯಲ್ಲಿ ಹಿಡಿದುಕೊಂಡು ನಿಂತುಬಿಟ್ಟ. ಏದುತ್ತ ನಡುಗುತ್ತ ಕೂಗಿಕೊಂಡ "ಓ, ಅಣ್ಣಯ್ಯ!"

"ತುಂಟ, ಇಲ್ಲೇನೋ ಮಾಡ್ತಾ ಇದ್ದೀ?" ಕಠಿಣವಾಗಿ ಪೇತ್ಯ ಪ್ರಶ್ನಿಸಿದ.

ಉತ್ತರಕೊಡುವ ಬದಲು ಪಾವಲಿಕ್ ಬಿಕ್ಕಳಿಸಲಾರಂಭಿಸಿದ. ಅವನ ಗಂಟಲಿನಿಂ ಮಾತು ಹೊರಕ್ಕೆ ಹೊರಡಲಿಲ್ಲ.

"ಏನ್ಮಾಡ್ತ ಇದ್ದೆ ಇಲ್ಲಿ? ಮುಟ್ಠಾಳ, ಎಲ್ಲಿ ಹೊಗಿದ್ದೆಯೋ? ಎಲ್ಲಿ ಹೋಗಿದ್ದೆ, ಏನ್ಮಾಡ ಇದ್ದೆ? ನನ್ನನ್ನು ಹಳ್ಳಕ್ಕೆ ತಳ್ಳುವುದಕ್ಕೆ ನೋಡ್ತಿದ್ದೀಯಾ? ಬಾಯಿ ಬಿಡೋ? ಇಲ್ಲ ನಾ ಬಾಯಿಬಿಡಿಸಲೋ? ಭಡವಾ!" ಪೇತ್ಯ ಪಾವಲಿಕನ ಹೆಗಲನ್ನು ಬಿಗಿಯಾಗಿ ಹಿಡಿದು ಅಲ್ಲಾಡಿ ತ್ತಿದ್ದ. ಕೊನೆಗೊಂದು ಸಲ ಪಾವಲಿಕ್ ಬಿಕ್ಕಳಿಸುತ್ತ "ನಾನು.... ಹ್ಹೌಪ್.......ನಾ

ಹ್‌ಪ್,...ತಪ್ಪಿಸಿಕೊಂಡುಬಿಟ್ಟಿದ್ದೆ....ಹ್ಹ್‌ಪ್....ನನ್ನನ್ನು ಹಿಡಿದುಕೊಂಡು ಹೋಗಿಬಿಡ್ತಾ ಇದ್ದರು?" ಪುನಃ ಕಣ್ಣೀರು ಹರಿಸಲಾರಂಭಿಸಿದ.

ನಡೆದದ್ದೇನು?

ನಗರಕ್ಕೆ ಬೇಸಿಗೆಯ ನಿವಾಸದಿಂದ ಹಿಂದಿರುಗಿ ಬಂದ ಮೂರನೆಯ ದಿವಸ ತಾನೇ ತಾನಾಗಿ ಒಂದುಸಲ ನಗರದಲ್ಲಿ ಠಳಾಯಿಸಿಕೊಂಡು ಬರಬೇಕೆಂದು ಪೇತ್ಯನೊಬ್ಬನೇ ಅಲ್ಲದೆ ಪಾವಲಿಕನೂ ಆಶಿಸಿದ್ದ. ಆದರೆ ಪೇತ್ಯ ಹೋದಷ್ಟು ದೂರ ಹೋಗುವ ಅಭಿಪ್ರಾಯ ಪಾವಲಿಕನಿಗಿರಲಿಲ್ಲ. ಕಸದ ತಿಪ್ಪೆಗೆ ಭೇಟಿಕೊಡುವುದು ಮತ್ತು ಮುಂದಿನ ತಿರುವಿನಲ್ಲಿದ್ದ ಸೈನ್ಯದ ಅಧಿಕಾರಿಗಳ ತರಬೇತಿಶಾಲೆಯ ಹೆಬ್ಬಾಗಿಲಿನಲ್ಲಿ ಸೈನಿಕರು ಹೇಗೆ ಬಂದೂಕಿನ ಸಲಾಮನ್ನು ಕೊಡುತ್ತಿದ್ದರು ಎಂಬುದನ್ನು ನೋಡುವುದು—ಇವೆರಡೇ ಪಾವಲಿಕನ ಆಸೆಗಳಾಗಿದ್ದುವು. ದುರದೃಷ್ಟವಶಾತ್ ಮನೆಯಿಂದ ಹೊರಗೆ ಬರುವಷ್ಟರಲ್ಲಿ ಅಂಗಳದಲ್ಲಿ ಪಾನ್ಕರುತ್ಯೂತ್ಯ ಬೊಂಬೆಯಾಟ ಕಾಣಿಸಿಕೊಳ್ಳಬೇಕೇ.

ಇತರ ಹುಡುಗರು ಮಕ್ಕಳೊಡನೆ ಪಾವಲಿಕ್ ಮೊದಲಿನಿಂದ ಕೊನೆಯವರೆವಿಗೂ ಆಟವನ್ನು ನೋಡಿದ. ಆದರೆ ಆಟ ಬಹು ಬೇಗ ಮುಗಿದು ಹೋದ ಹಾಗೆ ಎನ್ನಿಸಿತು. ಮುಂದಿನ ಅಂಗಳದಲ್ಲಿ ದೀರ್ಘವಾದ ಆಟ ನಡೆಯುತ್ತದೆಂಬ ವದಂತಿ ಪಾವಲಿಕನ ಕಿವಿಗೆ ಬಿದ್ದಿತು. ಮಕ್ಕಳು ಮುಂದಿನ ಅಂಗಳಕ್ಕೆ ಪಾನ್ಕರುತ್ಯೂತ್ಯುವನ್ನು ಹಿಂಬಾಲಿಸಿದರು. ಆದರೆ ಆಟ ಅಲ್ಲಿ ಇನ್ನೂ ಸಣ್ಣದಾಗಿದ್ದಿತು. ಉದ್ದಮೂಗಿನ, ಬಿಗಿದಕತ್ತಿನ, ಕೆಂಪು ಮೆಣಸಿನಕಾಯಿಯ ಗೊಂಚಲಿನಂತೆ ಕಾಣುತ್ತಿದ್ದ ಟೋಪಿಯನ್ನು ತಲೆಯ ಮೇಲೆ ಧರಿಸಿದ್ದ ಪಾನ್ಕರೂತ್ಯೂತ್ಯ ಬಂದು ಕೋಲಿನಿಂದ ಹೊಡೆದು ಪೋಲೀಸಿನವನನ್ನು ಕೊಲ್ಲುವ ಸಂದರ್ಭಕ್ಕೆ ಆಟ ನಿಂತುಹೋಯಿತು. ಬಳಿಕ ಏನು ನಡೆಯುತ್ತದೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತು. ಕರಡಿಗೂದಲಿನ ಬಾತುಕೋಳಿ ಮತ್ತು ಮೊಸಳೆಗಳಿಗೆ ಮಧ್ಯಸ್ತವಾದ ಸ್ವರೂಪದ ಒಂದು ಪೆಡಂಭೂತ ಆ ಬಳಿಕ ಕಾಣಿಸಿಕೊಳ್ಳಬೇಕು. ಇದು ಪಾನ್ಕರುತ್ಯೂತ್ಯ ತಲೆಯನ್ನು ತನ್ನ ದವಡೆಗಳ ನಡುವೆ ಸಿಕ್ಕಿಸಿಕೊಂಡು ಅಧೋಲೋಕಕ್ಕೆ ಎಳೆದುಕೊಂಡು ಹೋಗಬೇಕು. ಆಟದಲ್ಲಿ ಈ ಭಾಗವನ್ನು ತೋರಿಸಲೇ ಇಲ್ಲ. ಬೊಂಬೆಯಾಟದವನು ಹಾಸಿದ್ದ ಬಟ್ಟೆಯ ಮೇಲೆ ತಕ್ಕಷ್ಟು ಕಾಸುಗಳು ಬೀಳದೇ ಹೋದುದೇ ಈ ರೀತಿ ಪೂರ್ತಿಯಾಗಿ ಆಟವನ್ನು ತೋರಿಸದೇ ಇದ್ದುದಕ್ಕೆ ಕಾರಣವಿರಬಹುದು. ಮುಂದಿನ ಅಂಗಳದಲ್ಲಿ ಜಾಸ್ತಿ ಕಾಸುಗಳು ಸಿಕ್ಕಬಹುದೆಂಬ ನಿರೀಕ್ಷೆ.

ಕೀಲುಗೊಂಬೆಗಳನ್ನು ಮುಚ್ಚಿಟ್ಟಿದ್ದ ಹೆಣಿಗೆ ಕಡ್ಡಿಯ ಬುಟ್ಟಿಯಲ್ಲಿ ತಮ್ಮ ದೃಷ್ಟಿಯನ್ನು ಕೀಲಿಸಿ ಆ ಮುಗ್ಧರಾದ ಹುಡುಗರು ಒಂದು ಅಂಗಳದಿಂದ ಇನ್ನೊಂದಕ್ಕೆ ಪಾದವನ್ನು ಬೆಳೆಸುತ್ತಿದ್ದರು. ಅವರ ಮುಂದೆ ಹಾರ್ಮೊನಿಯಂ ವಾದ್ಯವನ್ನು ಹೆಗಲಿಗೆ ತೂಗು ಹಾಕಿಕೊಂಡ ಬಣ್ಣಬಣ್ಣದ ಬಟ್ಟೆಯ ಉಡುಪಿನ ಹೆಂಗಸೊಬ್ಬಳೂ, ಕಂಕುಳಿನಲ್ಲಿ ಪರದೆಯನ್ನು ಇರುಕಿಕೊಂಡ ಮತ್ತು ತಲೆಯ ಮೇಲೆ ಟೊಪಿಯನ್ನು ಧರಿಸಿದ ಪುರುಷನೊಬ್ಬನೂ ಹೋಗುತ್ತಿದ್ದರು.

ಪಾವಲಿಕ್ ಕುತೂಹಲಭರಿತನಾಗಿ ಇತರ ಮಕ್ಕಳ ಒಡನೆ ತಾನೂ ದೊಡ್ಡ ಕಪ್ಪು ಗುಡ್ಡೆಗಳನ್ನುಳ್ಳ, ತೆಳು ಚಾಕಲೇಟ್ ಬಣ್ಣದ ಕಣ್ಣುಗಳನ್ನು ಅಗಲವಾಗಿ ಬಿಡುತ್ತ, ನಾಲಗೆಯನ್ನು ಬಾಯಿಂದ ಹೊರಕ್ಕೆ ಚಾಚಿಕೊಂಡು ತನ್ನ ಪುಟ್ಟ ಬಲವಾದ ಕಾಲುಗಳನ್ನು ಎಳೆದುಕೊಂಡು

ಹೋಗುತ್ತಲಿದ್ದ. ಅವನು ಅಪ್ಪ ಚಿಕ್ಕಮ್ಮ ಎಲ್ಲರನ್ನೂ ಮರೆತುಬಿಟ್ಟ. ಹುಲ್ಲು ಹುರುಳಿ ಕೊಡದೆ ಇನ್ನೂ ಕೊಟ್ಟಿಗೆಗೆ ಕಟ್ಟದೆ ಇದ್ದ ಕುಡ್ಲಾಟ್ಕನ ನೆನಪು ಕೂಡ ಉಳಿಯಲಿಲ್ಲ. ಆ ಸಮಯದಲ್ಲಿ ಹುಡುಗನಿಗೆ ವೇಳೆಯ ಜ್ಞಾನವೇ ಇರಲಿಲ್ಲ. ವಿಸ್ಮರಣೆ ಹೋಗಿ ಅವನು ಕಣ್ಣುಬಿಟ್ಟು ನೋಡಿದಾಗ ಆಗಲೇ ಕತ್ತಲೆಯಾಗುತ್ತಿರುವುದೂ ತನಗೆ ಪರಿಚಿತವಲ್ಲದ ಬೀದಿಗಳಲ್ಲಿ ತಾನು ಹೋಗುತ್ತಿರುವುದೂ ಅರಿವಾಗಿ ಪಾವಲಿಕ್ ಗಾಬರಿಯಾದ. ತನ್ನೊಡನೆ ಇದ್ದ ಮಕ್ಕಳುಗಳಲ್ಲಿ ಯಾರೂ ಅವನ ಕಣ್ಣಿಗೆ ಬೀಳಲಿಲ್ಲ. ಪಾವಲಿಕ್ ಏಕಾಂಗಿಯಾಗಿದ್ದ.

ಮನೆಗೆ ಹೋಗುವ ಆತುರದಿಂದಲೋ ಏನೋ ಆ ಆಟದ ಹೆಂಗಸೂ ಗಂಡಸೂ ಬಹಳ ಬೇಗ ಬೇಗ ಹೆಜ್ಜೆ ಹಾಕುತ್ತಿದ್ದರು. ಪಾವಲಿಕನಿಗೆ ಅವರೊಡನೆ ಹೆಜ್ಜೆ ಹಾಕುವುದು ಕಷ್ಟವಾಗಿ ಕಂಡಿತು. ತಾನು ಎಂದೂ ಕಾಣದ ಸಂದೇಹಾಸ್ಪದವಾದ ಹೊಸ ಹೊಸ ರಸ್ತೆಗಳಲ್ಲಿ ಅವರು ಹೋಗುತ್ತಿದ್ದರು. ಅನುಮಾನಾಸ್ಪದವಾದ ರೀತಿಯಲ್ಲಿ ಆ ಹೆಂಗಸೂ ಗಂಡಸೂ ಕಿವಿಯಲ್ಲಿ ಏನೇನೋ ಪಿಸುಗುಟ್ಟಿಕೊಂಡು ಮಾತಾಡುತ್ತಿದ್ದುದನ್ನು ಪಾವಲಿಕ್ ನೋಡಿದ. ಒಂದು ರಸ್ತೆಯ ತಿರುವಿಗೆ ಬಂದ ಒಡನೆ ಅವರು ಇದ್ದಕ್ಕಿದ್ದಂತೆ ಭರಭರನೆ ಹೋಗಲಾರಂಭಿಸಿದರು. ಆಗ ಆ ಹೆಂಗಸಿನ ಬಾಯಲ್ಲಿ ಸಿಗರೇಟು ಹೊಗೆಯಾಡುತ್ತಿದ್ದುದು ಪಾವಲಿಕನ ಕಣ್ಣಿಗೆ ಬಿದ್ದಿತು. ಆಗ ಭಯದ ಬಿರುಗಾಳಿಗೆ ಸಿಕ್ಕಿ ತತ್ತರಿಸಿ ಹೋದ ಆ ಹುಡುಗ. ಬೀದಿಯ ಹಾರ್ಮೋನಿಯಂ ವಾದ್ಯಗಾರರು ಹುಡುಗರನ್ನು ಆಕರ್ಷಿಸಿ ಮನೆಗಳಿಂದ ತಪ್ಪಿಸಿಕೊಂಡು ಬರುವಂತೆ ಮಾಡುತಾರಲ್ಲದೆ ಅವರನ್ನು ಕರೆದುಕೊಂಡು ಹೋಗಿ ಕೈಕಾಲುಗಳನ್ನು ತಿರಿಚಿ ಸರ್ಕಸ್ ಆಟಗಾರರಿಗೆ ಮಾರಿಬಿಡುತ್ತಾರೆಂಬ ವಿಷಯ ಯಾರಿಗೆ ಗೊತ್ತಿರಲಿಲ್ಲ. ಇದನ್ನು ಥಟ್ಟನೆ ನೆನೆಸಿಕೊಂಡು ಪಾವಲಿಕ್ ಥರಥರನೆ ನಡುಗಲಾರಂಭಿಸಿದ.

ಹಾಡು ಹಗಲಿನಂತೆ ಸತ್ಯವಾದ ಈ ವಿಷಯವನ್ನು ಪಾವಲಿಕ್ ಮರೆತದ್ದಾದರೂ ಹೇಗೆ! "ಕ್ರಾಕ್ಮಲ್ನಿಕೊವ್ ಸಹೋದರರು" ತಯಾರಿಸಿದ ಪೆಪ್ಪರ್‌ಮೆಂಟುಗಳಲ್ಲಿ ವಿಷವಿರುವುದು ಹೇಗೆ ಜಗದ್ವಿಖ್ಯಾತವಾದ ಸತ್ಯವೋ, ಬೀದಿಯಲ್ಲಿ ಮಾರುವ ಮಿಠಾಯಿಗಳು ರೋಗಿಗಳನ್ನು ಸ್ನಾನಮಾಡಿಸಿದ ಹಾಲಿನಿಂದ ಮಾಡಿದವು ಎಂಬುದು ಎಷ್ಟು ಸತ್ಯವೋ, ಹಾಗೆಯೇ ಅಷ್ಟೇ ಸತ್ಯವಾಗಿದ್ದಿತು ಈ ಬೀದಿಯ ವಾದ್ಯಗಾರರು ಮಕ್ಕಳನ್ನು ಕದಿಯುತ್ತಿದ್ದ ವಿಷಯ.

ಅನುಮಾನಕ್ಕೆ ಆಸ್ಪದವೇ ಇರಲಿಲ್ಲ. ಮಕ್ಕಳನ್ನು ಕದಿಯುವ ಕಂದಾರೆಯವರು ಮತ್ತು ಇತರ ದುಷ್ಟ ಸ್ತ್ರೀಯರು ಮಾತ್ರ ಸಿಗರೇಟನ್ನು ಕುಡಿಯುತ್ತಾರೆ ಎಂಬುದು ಯಾರಿಗೂ ತಿಳಿಯದ ವಿಷಯವಲ್ಲ. ಇನ್ನೊಂದು ನಿಮಿಷದಲ್ಲಿ ತನ್ನನ್ನು ಹಿಡಿದುಕೊಂಡು ಬಾಯಿಗೆ ಬಟ್ಟೆ ತುರುಕಿ ಶೋಮಾನೋವ್ಕಗೆ ಹೊತ್ತುಕೊಂಡು ಹೋಗುವರು ಮತ್ತು ಅಲ್ಲಿ ತನ್ನ ಕೈಕಾಲುಗಳನ್ನು ತಿರಿಚಿ ತನ್ನನ್ನು ಒಬ್ಬ ದೊಂಬರಾಟದವನನ್ನಾಗಿ ಮಾಡಿಬಿಡುವರು ಎಂದು ಪಾವಲಿಕ್ ಖಚಿತಪಡಿಸಿಕೊಂಡ. ಗಟ್ಟಿಯಾಗಿ ಅರಚುತ್ತ ಪಾವಲಿಕ್ ಹಿಂದಿರುಗಿದ್ದೇ ಓಡಲಾರಂಭಿಸಿದ. ತನ್ನ ಶಕ್ತಿಯಿದ್ದಷ್ಟೂ ವೇಗವಾಗಿ ಓಡುತ್ತ ಬಂದು ಕೊನೆಗೆ ಪೇತ್ಯನ ಕಾಲುಗಳಿಗೆ ತಗುಲಿಕೊಂಡಿದ್ದ ಪೇತ್ಯ ತಮ್ಮನಿಗೆ ನಾಲ್ಕು ಬಿಗಿದಿದ್ದೇ ತೋಳನ್ನು ಹಿಡಿದುಕೊಂಡು ಮನೆಗೆ ಎಳೆದುಕೊಂಡು ಬಂದ. ಮನೆಯಲ್ಲೋ ಗಾಬರಿ ಎಂದರೆ ಗಾಬರಿ. ದುನ್ಯ ಸಿಲ್ಕಿನ ಲಂಗವನ್ನು ಎಳೆದಾಡುತ್ತ ಅಕ್ಕಪಕ್ಕದ ಅಂಗಳಗಳಲ್ಲಿ ಒಂದರಿಂದ ಒಂದಕ್ಕೆ ಕಣ್ಣೂ ಮುಚ್ಚಿಕೊಂಡು ಬಿರುಸಿನಿಂದ ಓಡಿದ್ದ

ಓಡಿದ್ದು. ತಾತ್ಯಾನ ಚಿಕ್ಕಮ್ಮ ತಲೆನೋವಿನ ಔಷಧಿಯನ್ನು ಹಣೆಗೆ ತಿಕ್ಕಿಕೊಳ್ಳುತ್ತಿದ್ದಳು. ತನ್ನ ಮಗ ತಪ್ಪಿಸಿಕೊಂಡಿದ್ದಾನೆ ಎಂದು ಪೋಲೀಸ್ ಕಚೇರಿಗೆ ದೂರು ಕೊಡಲು ಹೋಗುವುದಕ್ಕಾಗಿ ತಂದೆ ತಮ್ಮ ಬೇಸಿಗೆಯ ಕೋಟನ್ನು ಹಾಕಿಕೊಳ್ಳುತ್ತಿದ್ದರು.

ಪಾವಲಿಕ್ ಸುರಕ್ಷಿತವಾಗಿ ಹಿಂದಿರುಗಿ ಬಂದುದನ್ನು ನೋಡಿ ಚಿಕ್ಕಮ್ಮ ಅವನ ಬಳಿಗೆ ನುಗ್ಗಿದಳು. ಅವಳಿಗೆ ಅಳಬೇಕೋ ನಗಬೇಕೋ ತಿಳಿಯಲಿಲ್ಲ. ಆದರೆ ನಗು ಅಳುವುಗಳೆರಡೂ ಒಂದೇ ಕಾಲದಲ್ಲಿ ಹೊರಬಿದ್ದುವು. ಆ ಪುಟ್ಟ ಪೋಲಿಯನ್ನು ಹಿಡಿದುಕೊಂಡು ಚೆನ್ನಾಗಿ ಥಳಿಸಿದಳು. ಬಳಿಕ ಕೊಳೆತುಂಬಿದ ಪುಟ್ಟ ಮುಖಕ್ಕೆ ಮುತ್ತುಗಳ ಸುರಿಮಳೆಯಾಯಿತು. ಪುನಃ ಬೆನ್ನಿನ ಮೇಲೆ ಎರಡು ಬಿಟ್ಟಳು. ಇಷ್ಟಾದ ಮೇಲೆಯೇ ಅವಳು ಪೇತ್ಯನ ಕಡೆಗೆ ಕೆಂಗರಿಸಿಕೊಂಡು ನೋಡಿದ್ದು.

"ಏನು ರಾಯರೇ, ನಿಮ್ಮ ವಿಷಯವೇನು ?"

"ಭಡವಾ, ಎಲ್ಲೋ ಅಲೆದಾಡ್ತಾ ಇದ್ದೆ ಇಷ್ಟು ಹೊತ್ತು ?" ಎಂದು ತಂದೆ ಅವನ ಹೆಗಲನ್ನು ಹಿಡಿದುಕೊಂಡು ಗಟ್ಟಿಯಾಗಿ ಅಲ್ಲಾಡಿಸಿದರು.

"ಪಾವಲಿಕ್‌ನನ್ನು ಹುಡುಕುತ್ತ ಇದ್ದೆ." ಬಹಳ ಮೆದುವಾಗಿ ವಿನಯದಿಂದ ಪೇತ್ಯ ಹೇಳಲಾರಂಭಿಸಿದ. "ನಗರದ ಬೀದಿ ಬೀದಿಗಳನ್ನೆಲ್ಲ ತಡಕಿಬಿಟ್ಟೆ. ಆಮೇಲೆ ಸಿಕ್ಕಿದ. ನಾನಿಲ್ಲದೆ ಹೋಗಿದ್ದರೆ ಅವನು ಕಳುವಾಗಿ ಹೋಗ್ತಾ ಇದ್ದ. ಇದಕ್ಕಾಗಿ ನೀವುಗಳೆಲ್ಲ ನನ್ನ ಬೆನ್ನು ತಟ್ಟಿ ಭೇಷ್ ಎಂದು ಹೇಳಿ ಅಭಿನಂದಿಸಬೇಕು."

ಅಲ್ಲಿಂದಲೇ ಒಂದು ಅದ್ಭುತವಾದ ಕಥೆಯನ್ನು ಪೇತ್ಯ ಸೃಷ್ಟಿಸಿ ಹೇಳಿದ. ಬೀದಿಯ ವಾದ್ಯಗಾರನನ್ನು ಪೇತ್ಯ ಅಟ್ಟಿಸಿಕೊಂಡು ಹೋದದ್ದು, ಅವನು ಸಣ್ಣಗಲ್ಲಿಗಳಲ್ಲಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ್ದು, ಕೊನೆಗೆ ಅವನ ಕತ್ತಿನ ಪಟ್ಟಿಗೆ ಕೈಹಾಕಿ ಹಿಡಿದುಕೊಂಡು ಪೋಲೀಸಿನವರಿಗಾಗಿ ಕೂಗಿಕೊಂಡಿದ್ದು, ಆ ವಾದ್ಯಗಾರ ಭಯಬೀತನಾಗಿ ಪಾವಲಿಕನನ್ನು ಬಿಟ್ಟು ಪಲಾಯನಮಾಡಿದ್ದು ಎಲ್ಲವನ್ನೂ ಬಣ್ಣ ಕಟ್ಟಿ ಹೇಳಿದ. "ಇಲ್ಲದೆ ಇದ್ದರೆ ಅವನನ್ನು ಜೈಲಿಗೆ ಕಳಿಸಿಬಿಡ್ತಾ ಇದ್ದೆ, ದೇವರ ಸತ್ಯವಾಗೂ." ಎಂದ.

ತನ್ನ ನಿರೀಕ್ಷೆಯಂತೆ ಪೇತ್ಯನ ಕಥೆ ಕೊಂಚವೂ ಶ್ಲಾಘನೆಯನ್ನು ತರಲಿಲ್ಲ. ತಂದೆ ಜಿಗುಪ್ಸೆಯಿಂದ ಮುಖವನ್ನು ಗಂಟು ಹಾಕಿಕೊಂಡು "ಈ ಅಬದ್ಧವನ್ನೆಲ್ಲ ಹೇಳಲು ನಿನಗೆ ನಾಚಿಕೆಯಾಗುವುದಿಲ್ಲವೇ ?" ಎಂದುಬಿಟ್ಟರು. ಆದರೆ ಯಾರೂ ಏನೂ ಮಾಡುವಂತಿರಲಿಲ್ಲ. ಕಾರಣ ತಪ್ಪಿಸಿಕೊಂಡಿದ್ದ ಪಾವಲಿಕ್ ದೊರಕಿದ್ದು ಪೇತ್ಯನ ದೆಸೆಯಿಂದಲ್ಲದೆ ಬೇರೆ ಅಲ್ಲ. ಅಂತೂ ಪೇತ್ಯ ಬೈಗುಳಿಂದ ಸುಲಭವಾಗಿ ತಪ್ಪಿಸಿಕೊಂಡ. ಅಷ್ಟಲ್ಲದೆ ಏನು! ಹಣೆಯಲ್ಲಿ ಎರಡು ಸುಳಿ ಇರುವುದು ಬಿಟ್ಟಿಯೇ !

ಇತ್ತ ಗಾವ್ರಿಕ್ ಮನೆಗೆ ಬಂದು ನೋಡುತ್ತಾನೆ ಅಜ್ಜ ಮತ್ತು ನಾವಿಕ ಇಬ್ಬರೂ ವ್ಯಗ್ರರಾಗಿದ್ದಾರೆ. ಕೊಂಚ ಹೊತ್ತಿಗೆ ಮೊದಲು ಕೆಲವು ಅಧಿಕಾರಿಗಳು ಅಜ್ಜನ ಮೀನು ಹಿಡಿಯುವ ಪರವಾನಗಿಯನ್ನು ಪರೀಕ್ಷಿಸಲು ಬಂದಿದ್ದರು. ಪ್ರಾಯಶಃ ಅವರು ನಗರಸಭೆಯ ಅಧಿಕಾರಿಗಳಿರಬಹುದು. ಪರವಾನಗಿಯ ಪತ್ರಗಳು ಕ್ರಮಬದ್ಧವಾಗಿದ್ದುವು.

"ಆ ಹಾಸಿಗೆಯ ಮೇಲೆ ಮಲಗಿರುವವರು ಯಾರು ?" ನಾವಿಕನನ್ನು ನೋಡಿ ಕಾಗದಪತ್ರ

ಗಳ ಸಣ್ಣ ಪೆಟ್ಟಿಗೆಯನ್ನು ಹಿಡಿದುಕೊಂಡಿದ್ದ ಅಧಿಕಾರಿ ಪ್ರಶ್ನೆ ಮಾಡಿದ.

"ಅವನಿಗೆ ಖಾಯಿಲೆಯಾಗಿದ್ದರೆ ಆಸ್ಪತ್ರೆಗೆ ಯಾಕೆ ಕರೆದುಕೊಂಡು ಹೋಗಿಲ್ಲ?" ಇನ್ನೊಬ್ಬ ಪ್ರಶ್ನಿಸಿದ.

"ಇಲ್ಲ, ಅವನಿಗೇನೂ ಖಾಯಿಲೆ ಇಲ್ಲ. ಕುಡಿದು ಬಿದ್ದಿದಾನೆ, ಅಷ್ಟೆ." ಉಲ್ಲಾಸಪೂರಿತನಾಗಿದ್ದ ಹಾಗೆ ನಟಿಸುತ್ತ ಅನಾಸಕ್ತಭಾವದಿಂದ ಅಜ್ಜ ಉತ್ತರ ಕೊಟ್ಟ.

"ಕುಡಿದಿದ್ದಾನೋ ಅವನು ? ನಿನ್ನ ಮಗನೋ ?"

"ಅಲ್ಲ."

"ಅಪರಿಚಿತನೋ ?"

"ಸ್ವಾಮಿ, ಅವನು ಕುಡಿದು ಬಿದ್ದಿದ್ದಾನೆ."

"ಅದು ತಿಳಿಯಿತಲ್ಲ. ಅವನೆಲ್ಲಿಯವನು ಎಂದು ಹೇಳು."

"ಎಲ್ಲಿಯವನು ?" ಅಜ್ಜ ತಾನೊಬ್ಬ ಅರುಳು ಮರುಳು ಮುದುಕನೆಂಬಂತೆ ನಟಿಸುತ್ತ ಹೇಳಿದ. "ಅವನು ಕುಡಿದಿದ್ದಾನೆ. ನಿಮಗೆ ಗೊತ್ತಿಲ್ಲವೆ, ಕುಡಿದಿದ್ದಾನೆ ಎಂದರೆ ಕುಡಿದೇ ಇದ್ದಾನೆ. ಆ ಗಿಡಗಳ ಮಧ್ಯೆ ಬಿದ್ದಿದ್ದ, ಅಷ್ಟೆ."

ಆ ಮನುಷ್ಯ ನಾವಿಕನನ್ನು ಹತ್ತಿರದಿಂದ ಪರೀಕ್ಷಿಸುವವನಂತೆ ನೋಡಿದ. "ಅವನು ಬಟ್ಟೆ ಬರೆ ಇಲ್ಲದೆ, ಬರಿ ಚಡ್ಡಿಯಲ್ಲಿ ಗಿಡಗಳ ಮಧ್ಯೆ ಬಿದ್ದಿದ್ದನೋ ?"

"ಅವನು ನನಗೆ ಸಿಕ್ಕಿದಾಗ ಇದ್ದದ್ದು ಹಾಗೆ. ಅದಕ್ಕೆ ನಾನೇನು ಮಾಡಲಿ."

"ಏಯ್. ಎಲ್ಲಿ ನಿನ್ನ ಉಸಿರು ನೋಡೋಣ, ಕುಡಿತದ ವಾಸನೆ ಬರುತ್ತೋ ಇಲ್ಲವೊ ?" ಗಟ್ಟಿಯಾಗಿ ಕೂಗಿ ನಾವಿಕನ ಮುಖದ ಹತ್ತಿರಕ್ಕೆ ತನ್ನ ಮುಖವನ್ನು ಅಧಿಕಾರಿ ತೆಗೆದುಕೊಂಡು ಹೋದ.

ತನಗೆ ಅವನು ಹೇಳಿದ್ದು ಕೇಳಿಸಲಿಲ್ಲವೋ ಎಂಬಂತೆ ಜುಕೋವ್ ನಟಿಸಿದ. ಗೋಡೆಗೆ ಮುಖ ತಿರುಗಿಸಿಕೊಂಡು ಮುಖವನ್ನು ದಿಂಬಿನಿಂದ ಮುಚ್ಚಿಕೊಂಡ.

"ಆಶ್ಚರ್ಯ! ಕುಡಿದಿರುವವನ ಬಾಯಿಂದ ಹೆಂಡದ ಹುಳಿವಾಸನೆ ಹೊಡೆಯುವುದೇ ಇಲ್ಲ!" ಎಂದು ಹೇಳಿ ಅಜ್ಜನ ಕಡೆಗೆ ತಿರುಗಿ ಕಠಿಣವಾಗಿ "ಸ್ವಲ್ಪ ಎಚ್ಚರಿಕೆಯಿಂದಿರು, ತಿಳಿಯಿತೋ." ಎಂದ. ಅನಂತರ ಆ ಅಧಿಕಾರಿಗಳು ಅಲ್ಲಿಂದ ತೆರಳಿದರು.

ಗಾವ್ರಿಕನಿಗೆ ಈ ಜನಗಳ ಮುಖ ಎಂದರೆ ಹಿಡಿಸದು. ಉಪಾಹಾರಗೃಹದ ಮುಂದಿನಿಂದ ಬರುತ್ತಿರುವಾಗ ಅಲ್ಲಿ ಜಿಲ್ಲಾ ಪೋಲೀಸ್ ಇನ್ಸ್‌ಪೆಕ್ಟರು ಒಂದು ಮೇಜಿನ ಬಳಿ ಕುಳಿತಿದ್ದುದನ್ನು ನೋಡಿದ. ಅವನಂಥ ಅನಿಷ್ಟ ಇನ್ನಿಲ್ಲ ಎನ್ನಿಸಿತು ಗಾವ್ರಿಕನಿಗೆ. ಅವನನ್ನೇ ಬೆಸ್ತರೆಲ್ಲ "ನಮ್ಮ ದೋಣಿ ಕಿರುಬ" ಎಂದು ಕರೆಯುತ್ತಿದ್ದುದು.

ಆ ಇನ್‌ಸ್ಪೆಕ್ಟರನು ಬೀರ್ ಮದ್ಯವನ್ನು ಕುಡಿಯುತ್ತಿದ್ದ. ಅವನ ಆ ಭಾರವಾದ ಮದ್ಯದ ಪಾತ್ರೆಯನ್ನು ದುಂಡಾದ ಮಂದವಾದ ರಟ್ಟಿನ ಪೀಠದ ಮೇಲೆ ಇಟ್ಟಿತ್ತು. ಆ ರಟ್ಟಿನ ಮೇಲೆ "ಸಾಜೆನ್ ಬಾಷರ್ ಬೀರ್" ಎಂದು ಬರೆಯಲಾಗಿತ್ತು. ತನ್ನ ಬೆಳ್ಳಿಯ ಗಡಿಯಾರವು ತೋರಿಸುತ್ತಿದ್ದ ಕಾಲದ ಮೇಲೆ ಅವನಿಗೆ ನಿಗಾ ಇದ್ದಷ್ಟು ಕುಡಿತದ ಮೇಲೆ ಇದ್ದಂತೆ ಕಾಣಲಿಲ್ಲ.

ಅಜ್ಜನ ಗುಡಿಸಿಲಿನಲ್ಲಿ ಮಲಗಿದ್ದ ನಾವಿಕನ ಸ್ಥಿತಿ ಈಗ ಉತ್ತಮವಾಗಿತ್ತು. ಗಂಡಾಂತರ

ಕಳೆದಿತ್ತು. ಈಗ ಅವನಿಗೆ ಜ್ವರವಿರಲಿಲ್ಲ. ಗಡ್ಡ ತುಂಬಿದ ಗಲ್ಲವನ್ನು ಉಜ್ಜುತ್ತ ಹಾಸಿಗೆಯ ಅಂಚಿನಲ್ಲಿ ಕುಳಿತ. "ಈಕ್ಷಣ ಇಲ್ಲಿಂದ ನಾನು ಹೊರಟುಹೋಗಬೇಕು." ಎಂದು ಹೇಳಿದ.

"ಷರಾಯಿ ಕೂಡ ಇಲ್ಲದೆ ಹ್ಯಾಗೆ ಹೊರಗೆ ಹೋಗ್ತೀಯಪ್ಪ?" ದುಃಖದಿಂದ ಅಜ್ಜ ಹೇಳಿದ. ಕತ್ತಲೆಯಾಗುವವರೆಗೂ ಇಲ್ಲಿರು. ಬೇರೆ ದಾರಿಯೇ ಎಲ್ಲ. ಗಾವ್ರಿಕ್ ನಿನಗೆ ಹಸಿವಿಲ್ಲವೆ?"

"ನಾನು ಟೆರೆಂಟಿಯ ಮನೆಯಲ್ಲಿ ಊಟ ಮಾಡಿದೆ." ಎಂದು ಉತ್ತರಕೊಟ್ಟ ಗಾವ್ರಿಕ್.

ಅಜ್ಜ ಚಕಿತನಾಗಿ ಹುಬ್ಬನ್ನು ಏರಿಸಿದ. ನೋಡಿದೆಯಾ, ನನ್ನ ಮೊಮ್ಮಗ ಆಗಲೆ ಟೆರೆಂಟಿ ಮನೆಗೆ ಹೋಗಿ ಬಂದಿದ್ದಾನೆ! ಕೆಲಸದಲ್ಲಿ ಬಹಳ ಚುರುಕು ಎಂದುಕೊಂಡ.

"ಅಲ್ಲಿಯ ವಿಚಾರವೇನು?"

"ಅಣ್ಣ ಇಲ್ಲಿಗೆ ಬರಬೇಕೆಂದು ಏರ್ಪಾಡು ಮಾಡಿಕೊಳ್ಳುತ್ತಿದ್ದಾನೆ."

ಮುದುಕ ತುಟಿಯನ್ನು ಕಚ್ಚುತ್ತ ಹುಬ್ಬನ್ನು ಇನ್ನೂ ಮೇಲಕ್ಕೆ ಏರಿಸಿದ. ತನ್ನ ಮೊಮ್ಮಗ ಎಷ್ಟು ತಿಳಿವಳಿಕೆಯುಳ್ಳವನು ಎಂದು ಬೆರಗಾದ. ಎಷ್ಟೋ ಜನ ದೊಡ್ಡವರಿಗಿಂತ ಉತ್ತಮವಾಗಿ ವಿಷಯಗಳನ್ನು ಗ್ರಹಿಸಬಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸೂಕ್ಷ್ಮಬುದ್ಧಿಯುಳ್ಳವನು. ಅಬ್ಬ! ಇನ್ನೂ ಒಂಬತ್ತೂವರೆ ವರ್ಷ ಅವನಿಗೆ. ಕೆಲವು ವಿಷಯಗಳಲ್ಲಿ ಅನೇಕ ಜನ ವಯಸ್ಸಾದವರಿಗಿಂತಲೂ ಮಿಗಿಲಾದ ಗ್ರಹಣಶಕ್ತಿ ಅವನಲ್ಲಿತ್ತು. ಇದೇನೂ ಅಂಥ ಆಶ್ಚರ್ಯವಾದ ವಿಷಯವಾಗಿರಲಿಲ್ಲ. ಏಕೆಂದರೆ ನಾವಿಕರು, ಹಡಗಿನ ಯಂತ್ರದ ಒಲೆಯ ಉರಿಯನ್ನು ನೋಡಿಕೊಳ್ಳುವ ಉರಿಗಾಹಿಗಳು ಹಡಗುಕಟ್ಟೆಯ ಕೆಲಸಗಾರರು ಮತ್ತು ಹಡಗು ನಿರ್ಮಾಣದ ಕೆಲಸಗಾರರುಗಳೇ ಮೊದಲಾದ ಅತಿ ಬಡವರಾದ ಹಾಗೂ ಸ್ವಾತಂತ್ರ್ಯ ಪ್ರಿಯರಾದ ನಗರನಿವಾಸಿಗಳಿಗಿಂತ ಒಡೆಸ್ಸದ ಬೆಸ್ತರುಗಳು ಯಾವ ವಿಧದಲ್ಲಿಯೂ ಬೇರೆಯವರಾಗಿರಲಿಲ್ಲ. ಜೀವನದಲ್ಲಿನ ಪರೀಕ್ಷಾ ಸಂದರ್ಭಗಳು ಮತ್ತು ಕಷ್ಟಸಂಕಟಗಳೇ ಮೊದಲಾದುವುಗಳಲ್ಲಿ ತಮಗೆ ಸಲ್ಲಬೇಕಾದ ಪಾಲಿಗಿಂತ ಹೆಚ್ಚಿನದನ್ನು ಅವರೆಲ್ಲ ಪಡೆಯುತ್ತಿದ್ದುದು ಸ್ವಾಭಾವಿಕವಾಗಿತ್ತು. ಇದರಲ್ಲಿ ಮಕ್ಕಳೇನು ದೊಡ್ಡವರಿಗಿಂತ ಕಡಮೆಯಿರಲಿಲ್ಲ. ಪ್ರಾಯಶಃ ಮಕ್ಕಳೇ ಆ ಕಷ್ಟ ಸುಖಗಳಲ್ಲಿ ಹೆಚ್ಚಿನ ಪಾಲುದಾರರಾಗಿರುತ್ತಿದ್ದರು. ಮೊದಲನೆಯ ರಷ್ಯದ ಕ್ರಾಂತಿಯ ಪ್ರಥಮ ವರ್ಷವಾದ ೧೯೦೫ನೆಯ ಇಸವಿ ಅದು. ವಾರಸು ಕಳೆದುಕೊಂಡವರು, ದಲಿತರು ದಬ್ಬಾಳಿಕೆಗೊಳಗಾದವರು ಜಾರ್ ಚಕ್ರವರ್ತಿಯ ನಿರಂಕುಶ ಪ್ರಭುತ್ವವನ್ನೆದುರಿಸಲು ಪ್ರಬಲರಾಗುತ್ತಿದ್ದರು. ಅವರುಗಳಲ್ಲಿ ಬೆಸ್ತರೇನೂ ಹಿಂದುಳಿದಿರಲಿಲ್ಲ. ಮರಣವನ್ನು ಕೂಡ ಲೆಕ್ಕಿಸದ ಉಗ್ರವಾದ ಹೋರಾಟ ಆರಂಭವಾಗಿತ್ತು. ಈ ಹೋರಾಟ ಅವರನ್ನು ಕುಶಾಗ್ರ ಮತಿಗಳೂ, ಜಾಗರೂಕರೂ, ಎದೆಗಾರರೂ ಆಗುವಂತೆ ಮಾಡಿತ್ತು. ಈ ಗುಣಗಳೆಲ್ಲ ಕ್ರಮವಾಗಿ ಅಗೋಚರವಾಗಿ ಬೆಸ್ತರ ಎಳೆಯ ಕುಡಿಗಳಲ್ಲೂ ಬೆಳೆದು ವೃದ್ಧಿಯಾಗಿದ್ದುವು.

ಗಾವ್ರಿಕನ ಅಣ್ಣ ಟೆರೆಂಟಿಯೂ ಕೂಡ ಮೀನುಗಾರ ವೃತ್ತಿಯವನೇ ಆಗಿದ್ದ. ಮದುವೆಯಾದ ಮೇಲೆ ಅವನು ಅದೇನೋ ರೈಲ್ವೆ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಬಿಟ್ಟ. ಆ ಕಾಲದಲ್ಲಿ ಅಸ್ಪಷ್ಟವಾಗಿದ್ದರೂ ಅರ್ಥಗರ್ಭಿತವಾಗಿರುವಂತೆ ಯಾವುದನ್ನು "ಚಳುವಳಿ" ಎಂದು ಕರೆಯುತ್ತಿದ್ದರೋ ಅದರೊಡನೆ ತನ್ನ ಅಣ್ಣ ಸಂಬಂಧವನ್ನು ಹೊಂದಿದ್ದಾನೆಂಬುದನ್ನು ಕೆಲವು ಸೂಚನೆಗಳಿಂದ ಗಾವ್ರಿಕ್ ಊಹಿಸಿದ್ದ.

ಕಾರ್ಖಾನೆಯ ಉಪನಗರದಲ್ಲಿ ವಾಸಿಸುತ್ತಿದ್ದ ಅಣ್ಣ ಟೆರೆಂಟಿಯನ್ನು ಗಾವ್ರಿಕ್ ನೋಡಲು

ಹೋದಾಗಲೆಲ್ಲ "ಸಮಿತಿ" "ಪಕ್ಷ" "ಸಂಕೇತ" ಇಂಥ ಪದಗಳನ್ನು ಅವನು ಉಪಯೋಗಿಸುತ್ತಿದ್ದುದನ್ನು ಕೇಳಿದ್ದ. ಅವುಗಳ ಅರ್ಥವೇನು ಎಂಬುದು ಗಾವ್ರಿಕನಿಗೆ ಗೊತ್ತಿಲ್ಲದೆ ಹೋದಾಗ್ಯೂ ಅವು ಎಲ್ಲರಿಗೂ ಗೊತ್ತಿದ್ದ "ಮುಷ್ಕರ" "ಪೋಲೀಸರ ಏಜೆಂಟ್" ಮತ್ತು "ಹಸ್ತಪತ್ರಿಕೆ" ಮೊದಲಾದ ಪದಗಳಿಗೆ ಸಂಬಂಧಿಸಿದುವೆಂದು ಅರ್ಥಮಾಡಿಕೊಂಡಿದ್ದ.

"ಹಸ್ತಪತ್ರಿಕೆಗಳು" ಎಂದರೆ ಏನೆಂಬುದರ ತಿಳಿವಳಿಕೆ ಅವನಿಗೆ ವಿಶೇಷವಾಗಿದ್ದಿತು. ಅವು ಬೂದು ಬಣ್ಣದ ಸಣ್ಣ ಅಕ್ಷರಗಳಿಂದ ಅಚ್ಚಾದ ಒರಟು ಕಾಗದದ ಹಾಳೆಗಳಾಗಿದ್ದುವು. ಒಂದು ಸಲ ಕೆಲವನ್ನು ಸಮುದ್ರ ತೀರದಲ್ಲಿ ಜನಗಳಿಗೆ ಹಂಚಲೋಸುಗ ಟೆರೆಂಟಿ ಗಾವ್ರಿಕನಿಗೆ ಕೊಟ್ಟಿದ್ದ. ಗಾವ್ರಿಕ್ ಅವುಗಳನ್ನು ರಾತ್ರಿ ಯಾರಿಗೂ ಕಾಣದಂತೆ ಬೆಸ್ತರ ದೋಣಿಗಳಲ್ಲಿ ಇಟ್ಟುಬಂದಿದ್ದ. "ನಿನ್ನನ್ನು ಯಾರಾದರೂ ನೋಡಿದರೆ ನೀರೊಳಕ್ಕೆ ಎಸೆದುಬಿಟ್ಟು ಓಡಿಬಿಡು. ಯಾರಾದರೂ ನಿನ್ನನ್ನು ಹಿಡಿದುಕೊಂಡರೆ ಪೊದೆಗಳ ಸಂದಿಯಲ್ಲಿ ನನಗೆ ಸಿಕ್ಕಿತು ಎಂದು ಹೇಳು." ಎಂದು ಗಾವ್ರಿಕನಿಗೆ ಟೆರೆಂಟಿ ಹೇಳಿಕೊಟ್ಟಿದ್ದ. ಆದರೆ ಎಲ್ಲವೂ ಸುಗಮವಾಗಿ ನಡೆದುಹೋಗಿತ್ತು.

ನಾವಿಕನ ವಿಷಯವನ್ನು ತಿಳಿಸಲು ಅಣ್ಣನ ಬಳಿಗೆ ನೇರವಾಗಿ ಗಾವ್ರಿಕ್ ಹೋದುದರ ರಹಸ್ಯ ಇದೇ ಆಗಿತ್ತು. ಟೆರೆಂಟಿ ಎಲ್ಲವನ್ನೂ ಸರಿಯಾಗಿ ನೋಡಿಕೊಳ್ಳುತ್ತಾನೆ ಎಂಬುದು ಗಾವ್ರಿಕನಿಗೆ ಗೊತ್ತಿತ್ತು. ಅಲ್ಲದೆ ತನ್ನ ಅಣ್ಣ ಎಲ್ಲಕ್ಕೂ ಮೊದಲು ಯಾರೊಡನೆಯೋ ಸಮಾಲೋಚಿಸಬೇಕಾಗುತ್ತದೆ, ಪ್ರಾಯಶಃ "ಸಮಿತಿ"ಯನ್ನು ನೋಡಬೇಕಾಗುತ್ತದೆ ಎಂದು ಗಾವ್ರಿಕ್ ಅರ್ಥಮಾಡಿಕೊಂಡಿದ್ದ. ಎಂದರೆ ತಾವು ಸ್ವಲ್ಪ ಸಮಯ ಕಾದು ಕುಳ್ಳಿರಬೇಕಾಗುತ್ತದೆಂಬುದು ವಾಸ್ತವ. ಆದರೆ ಆ ಸಂದರ್ಭದಲ್ಲಿ ಕಾಯುತ್ತ ಕುಳಿತುಕೊಳ್ಳುವುದು ಅಪಾಯಕರವಾಗಿತ್ತು.

ಮೇಲಿಂದ ಮೇಲೆ ನಾವಿಕ ಬಾಗಿಲ ಸಂದಿನ ಮೂಲಕ ಬಹಳ ಎಚ್ಚರಿಕೆಯಿಂದ ಬಗ್ಗಿ ನೋಡುತ್ತಿದ್ದ. ಈಗ ತಕ್ಕಮಟ್ಟಿಗೆ ಕತ್ತಲೆ ಹಬ್ಬಿತ್ತು. ಆದರೆ ತಾನಿದ್ದ ಆ ಸ್ಥಿತಿಯಲ್ಲಿ ಇತರರ ಗಮನವನ್ನು ತನ್ನ ಕಡೆಗೆ ಸೆಳೆಯದಂತೆ ಹೋಗುವುದು ಇನ್ನೂ ಸಾಧ್ಯವಿರಲಿಲ್ಲ. ಏತಕ್ಕೆಂದರೆ ಸಮುದ್ರ ತೀರದಲ್ಲಿ ಇನ್ನೂ ಜನಸಂಚಾರ ಕಡಮೆಯಾಗಿರಲಿಲ್ಲ. ನೀರಿನಮೇಲೆ ದೋಣಿ ನಡೆಸಿಕೊಂಡು ಬೆಸ್ತರು ಹಾಡುತ್ತ ಇದ್ದುದು ಇನ್ನೂ ಕೇಳಿಸುತ್ತಿತ್ತು.

ನಾವಿಕ ಹಾಸಿಗೆಯ ಬಳಿಗೆ ಬಂದ. ಮುದುಕನಿಗಾಗಲಿ ಗಾವ್ರಿಕನಿಗಾಗಲಿ ಹೆದರದೆ "ಹೆಗ್ಗಣಗಳು, ಹಾಳು ಬೇಟೆ ನಾಯಿಗಳು!" ಎಂದು ಗಟ್ಟಿಯಾಗಿ ಉಚ್ಚರಿಸಿದ. "ನನ್ನ ಕೈಗೆ ಅವರು ಒಂದು ಸಲ ಸಿಕ್ಕಲಿ! ಆಗ ತೋರಿಸುತ್ತೇನೆ ನನ್ನ ಕೈಯನ್ನು. ನನ್ನ ತಲೆ ಹೋದರೂ ನನ್ನ ಸೇಡು ತೀರಿಸಿಕೊಳ್ಳದೆ ಬಿಡುವುದಿಲ್ಲ—" ತನ್ನ ಬಲವಾದ ಮುಷ್ಟಿಯಿಂದ ಹಾಸಿಗೆಯನ್ನೊಂದು ಸಲ ಗುದ್ದಿದ.

೨೬. ಮುತ್ತಿಗೆ

ಗುಡಿಸಿಲಿನ ಬಾಗಿಲನ್ನು ಯಾರೋ ಹೊರಗಡೆಯಿಂದ ತಳ್ಳಿ ತೆರೆದಾಗ ಕತ್ತಲೆಯಾಗಿತ್ತು. ಒಂದು ಕ್ಷಣಕಾಲ ದೊಡ್ಡ ಪುರುಷಾಕಾರವೊಂದು ಬಾಗಿಲಿಗೆ ಅಡ್ಡವಾಗಿ ನಿಂತು ಬಾಗಿಲ ಮೂಲಕ ಕಾಣಿಸುತ್ತಿದ್ದ ಆಕಾಶದ ನಕ್ಷತ್ರಗಳನ್ನು ಕಣ್ಣಿನಿಂದ ಮರೆಮಾಡಿದ್ದಿತು. ನಾವಿ

ಪುಟಿದು ಎದ್ದು ನಿಂತುಕೊಂಡ.

"ಏನೂ ಗಾಬರಿಯಿಲ್ಲ. ಅವನು ನನ್ನ ಅಣ್ಣ ಟೆರೆಂಟಿ." ಎಂದ ಗಾವ್ರಿಕ್.

ಹೊಸಬನ ಕಡೆಗೆ ಶೂನ್ಯದೃಷ್ಟಿಯನ್ನು ಬೀರುತ್ತ ನಾವಿಕ ಸುಮ್ಮನೆ ಕುಳಿತುಕೊಂಡ.

"ಸಂಜೆಯಾಗಿಹೋಯಿತು. ಕಣ್ಣು ಕಾಣದಷ್ಟು ಕತ್ತಲೆ ಹರಡಿದೆ. ದೀಪ ಯಾಕೆ ಹಚ್ಚಿಲ್ಲ? ಎಣ್ಣೆ ಇಲ್ಲವೇನು?" ಎಂದು ಕೇಳಿದ ಟೆರೆಂಟಿ.

"ಎಲ್ಲೋ ಒಂದು ನಾಲ್ಕು ತೊಟ್ಟು ಎಣ್ಣೆ ಉಳಿದಿರಬಹುದು." ಗೊಣಗುತ್ತ ಅಜ್ಜ ಮೇಲಕ್ಕೆದ್ದು ದೀಪ ಹಚ್ಚಿದ.

"ಏನಜ್ಜ, ಹ್ಯಾಗಿದ್ದೀಯೆ? ಹಾಗೆಯೇ ನಗರದ ಪೇಟೆಗೆ ಬಂದಿದ್ದೆ. ಯಾಕೆ ನಮ್ಮವರನ್ನು ನೋಡಿಕೊಂಡು ಹೋಗಬಾರದು ಎಂದು ಬಂದೆ. ಯಾರೋ ಅತಿಥಿ ಇರುವಹಾಗಿದೆ." ಟೆರೆಂಟಿ ಆ ಹೊಸಬನನ್ನು ದೀಪದ ಬೆಳಕಿನಲ್ಲಿ ಚುರುಕಾದ ದೃಷ್ಟಿಯಿಂದ ದಿಟ್ಟಿಸಿ ನೋಡಿದ.

"ನಮಗೆ ಸಮುದ್ರದಲ್ಲಿ ಸಿಕ್ಕಿದವ ಇವನೇ." ಅಜ್ಜ ಸುಸ್ವಭಾವವನ್ನು ವ್ಯಕ್ತಪಡಿಸುತ್ತ ದಂತಪ್ರದರ್ಶನವನ್ನು ಮಾಡಿದ.

"ನಾನೂ ಆ ವಿಷಯವನ್ನು ಕೇಳಿದೆ."

ನಾವಿಕ ಏನನ್ನೂ ಹೇಳಲಿಲ್ಲ. ಅವನು ಖಿನ್ನನಾಗಿ ಸಂದೇಹದೃಷ್ಟಿಯಿಂದ ಟೆರೆಂಟಿಯನ್ನು ಈಕ್ಷಿಸಿದ.

"ರೋಡಿಯಾನ್ ಜುಕೋವ್, ಅಲ್ಲವೇ?" ಗೆಲುವಿನ ದನಿಯಲ್ಲಿ ಟೆರೆಂಟಿ ಕೇಳಿದ.

ನಾವಿಕ ಸ್ವಲ್ಪ ಗಾಬರಿಯಾದ, ಆದರೆ ತಕ್ಷಣ ಎಚ್ಚತ್ತುಕೊಂಡ. ಹಾಸಿಗೆಯನ್ನು ತನ್ನ ಮುಷ್ಟಿಗಳಿಂದ ಬಿಗಿಯಾಗಿ ಒತ್ತಿ ಹಿಡಿದುಕೊಂಡು ಕಿರುಗಣ್ಣಿನಿಂದ ನೋಡಲಾರಂಭಿಸಿದ. "ಆದರೇನು? ನಿನಗೆ ನಾನು ಉತ್ತರ ಕೊಡಬೇಕಾದ ಅಗತ್ಯವಿಲ್ಲ. ಸಮಿತಿಗೆ ಉತ್ತರಕೊಡಲು ನಾನು ಬಾಧ್ಯ." ಟೆರೆಂಟಿಯನ್ನು ಕೆಣಕುವಂತೆ ಮುಗುಳು ನಗುತ್ತ ನಾವಿಕ ಹೇಳಿದ. ಟೆರೆಂಟಿಯ ಸಿಡುಬಿನ ಕಲೆಯ ಮುಖದಲ್ಲಿನ ಅಲಕ್ಷ್ಯವು ನಶಿಸಿತು. ತನ್ನ ಅಣ್ಣ ಇಷ್ಟು ಗಂಭೀರವಾದುದನ್ನು ಗಾವ್ರಿಕ್ ಎಂದೂ ನೋಡಿರಲಿಲ್ಲ.

"ನನ್ನನ್ನೇ **ಸಮಿತಿ** ಎಂದು ತಿಳಿ." ಒಂದು ನಿಮಿಷ ಆಲೋಚಿಸಿ ಟೆರೆಂಟಿ ಉತ್ತರಕೊಟ್ಟು ನಾವಿಕನ ಪಕ್ಕದಲ್ಲಿ ಹಾಸಿಗೆಯ ಬಳಿ ಕುಳಿತುಕೊಂಡ.

"ಇದಕ್ಕೆ ರುಜುವಾತೇನು?" ನಾವಿಕ ಪಕ್ಕಕ್ಕೆ ಸರಿಯುತ್ತ ಗಡುಸಾಗಿ ಕೇಳಿದ.

"ನೀನು ಯಾರು ಎಂಬುದನ್ನು ಮೊದಲು ಪ್ರಮಾಣೀಕರಿಸು" ಎಂದ ಟೆರೆಂಟಿ.

ನಾವಿಕ ತನ್ನ ಚಡ್ಡಿಯ ಕಡೆಗೆ ಬೊಟ್ಟಿಟ್ಟು ತೋರಿಸುತ್ತ ಕೆಂಡದಂಥ ಕಣ್ಣುಗಳಿಂದ "ನೋಡಲು ನಿನಗೆ ಕಣ್ಣಿಲ್ಲವೇ?" ಎಂದ.

"ಅದು ಸಾಲದು." ಟೆರೆಂಟಿ ಹೀಗೆ ಹೇಳಿ ಬಾಗಿಲಿನ ಬಳಿಗೆ ಹೋದ. ಬಾಗಿಲಿನ ಸಂದಿಯಲ್ಲಿ "ಒಂದು ನಿಮಿಷ ಒಳಕ್ಕೆ ಬರ್ತೀಯಾ, ಇಲಿಯಬೊರಿಸೋವಿಚ್!" ಎಂದು ಮೆತ್ತಗೆ ಹೇಳಿದ. ಗಿಡದ ಪೊದೆಗಳಲ್ಲಿ ಸರಸರ ಶಬ್ದವಾಯಿತು. ಕೃಶಾಂಗನಾದ ಕುಳ್ಳ ಯುವಕನೊಬ್ಬ ಗುಡಿಸಿಲನ್ನು ಪ್ರವೇಶಿಸಿದ. ಅವನು ಮೂಗಿಗೆ ಕನ್ನಡಕವನ್ನು ಸಿಕ್ಕಿಸಿಕೊಂಡಿದ್ದ. ಆ ಕನ್ನಡಕದ ಒಂದು ತುದಿಗೆ ಕಪ್ಪುದಾರವನ್ನು ಕಟ್ಟಿತ್ತು. ಆ ದಾರದ ಕುಣಿಕೆಯನ್ನು ಒಂದು

ಕಿವಿಗೆ ಸಿಕ್ಕಿಸಿತ್ತು. ಕಪ್ಪು ಸ್ಯಾಟೀನು ಬಟ್ಟೆಯ ಒಳಷರಟು ಗುಂಡಿ ಬಿಚ್ಚಿದ್ದ ಅಂಗಿಯ ಒಳಗಿನಿಂದ ಇಣಿಕಿ ನೋಡುತ್ತಿತ್ತು. ನಡುವಿಗೆ ಚರ್ಮದ ನಡುಪಟ್ಟಿಯನ್ನು ಬಿಗಿದುಕೊಂಡಿದ್ದ. ಬಾಚಣಿಗೆಯನ್ನು ಕಾಣದೆ ಇದ್ದ ಒರಟುಕೂದಲಮೇಲೆ ಒಂದು ಚಪ್ಪಟೆಯ ಟೋಪಿಯು ಕುಳಿತಿದ್ದಿತು. ಈ "ವಿದ್ಯಾರ್ಥಿ"ಯನ್ನು ಎಲ್ಲೋ ನೋಡಿದ್ದ ನೆನಪು ನಾವಿಕನಿಗೆ.

ಆ ಯುವಕ ಪಕ್ಕಕ್ಕೆ ತಿರುಗಿನಿಂತುಕೊಂಡು ತನ್ನ ಮೂಗು ಕನ್ನಡಕವನ್ನು ಸರಿಮಾಡಿಕೊಂಡನಲ್ಲದೆ ನಾವಿಕನ ಕಡೆಗೆ ಓರೆನೋಟವನ್ನು ಬೀರಿದ.

"ಏನು ?" ಎಂದು ಟೆರೆಂಟಿ ಕೇಳಿದ.

"ಜೂನ್ ೧೫ ನೆಯ ತಾರೀಖಿನ ಪ್ರಾತಃಕಾಲದಲ್ಲಿ ಪ್ಲಾತೊನೊವ್ ಬಂದರುಕಟ್ಟೆಯ ಒಡ್ಡಿನ ಬಳಿ ಅಧಿಕಾರಿಗಳಿಂದ ಅತಿಕ್ರೂರವಾಗಿ ವಧೆಯಾದ ವಕುಲಿನ್‌ಚುಕ್‌ನ ದೇಹವನ್ನು ಕಾಯುತ್ತ ಈ ಒಡನಾಡಿಯು ಇದ್ದುದನ್ನು ನಾನು ಕಂಡಿದ್ದೆ." ಎಂದು ಆ ತರುಣ ಉಸಿರು ಮಗುಚದೆ ಹೇಳಿ ಮುಗಿಸಿದ. "ನೀನು ಅಲ್ಲಿರಲಿಲ್ಲವೇನಯ್ಯ, ಸಂಗಾತಿ ?" ಎಂದು ನಾವಿಕನನ್ನು ಪ್ರಶ್ನಿಸಿದ.

"ನೀನು ಹೇಳಿದ್ದು ನಿಜ." ನಾವಿಕ ಉತ್ತರಿಸಿದ,

"ನೋಡಿದೆಯಾ, ನಾನು ತಪ್ಪುವುದುಂಟೆ ?"

ಮರುಮಾತನ್ನು ಆಡದೆ ಟೆರೆಂಟಿ ತನ್ನ ಅಂಗಿಯ ಒಳಗೆ ಹುದುಗಿಸಿಟ್ಟುಕೊಂಡಿದ್ದ ಒಂದು ಸಣ್ಣ ಬಟ್ಟೆಯ ಗಂಟನ್ನು ಹೊರತೆಗೆದು ನಾವಿಕನ ಮೊಣಕಾಲುಗಳ ಮೇಲೆ ಇಟ್ಟ. "ಷರಾಯಿ, ಒಂದು ಬೆಲ್ಟು, ಒಂದು ನಡುವಂಗಿ ಇಲ್ಲಿವೆ. ಬೂಡ್ಸು ದೊರೆಯಲಿಲ್ಲ. ಏನು ಮಾಡುವುದು. ನಿನಗೆ ಕೊಂಡುಕೊಳ್ಳುವುದಕ್ಕೆ ಆಗುವವರೆಗೆ ಬರಿಗಾಲಿನಲ್ಲೇ ಇರಬೇಕಾಗುತ್ತದೆ. ಬೇಗ ಬಟ್ಟೆಗಳನ್ನು ಹಾಕಿಕೋ. ಇರುವ ಸಮಯ ಅತ್ಯಲ್ಪ. ನಾವು ಇಲ್ಲಿಂದ ತಕ್ಷಣ ಕಾಲ್ತೆಗೆಯಬೇಕು. ಈ ಸ್ಥಳದ ಮೇಲೆ ಪೋಲೀಸಿನವರ ಕಣ್ಣುಬಿದ್ದಿರುವಂತೆ ಕಾಣುತ್ತದೆ." ಒಂದೇ ಉಸುರಿನಲ್ಲಿ ಆ ತರುಣ ಹೇಳಿದ.

ಟೆರೆಂಟಿ ರೆಪ್ಪೆ ಹೊಡೆದು "ನೀನು ಮುಂದೆ ಹೋಗುತ್ತಾ ಇರು, ಗಾವ್ರಿಕ್" ಎಂದ.

ಗಾವ್ರಿಕ್ ತಕ್ಷಣ ತಿಳಿದುಕೊಂಡುಬಿಟ್ಟ. ಮೌನವಾಗಿ ಆ ಗುಡಿಸಿಲಿನಿಂದ ಹೊರಕ್ಕೆ ಹೊರಟು ಕತ್ತಲೆಯೊಳಕ್ಕೆ ಕಾಲಿಟ್ಟ. ಅವನು ಹಾಗೆಯೇ ನಿಂತುಕೊಂಡು ಕಿವಿಗೊಟ್ಟು ಆಲಿಸಿದ. ತರಕಾರಿ ತೋಟದಲ್ಲಿನ ಒಣಗಿದ ಆಲೂಗೆಡ್ಡೆಯ ಗಿಡಗಳ ನಡುವೆ ಸರಸರ ಶಬ್ಧವಾದಂತಾಯಿತು.

ಗಾವ್ರಿಕ್ ಬಗ್ಗಿಕೊಂಡು ಮುಂಗಾಲುಗಳ ಮೇಲೆ ಮುಂದುವರಿದ. ಅವನ ಕಣ್ಣುಗಳು ಕತ್ತಲೆಗೆ ಪಳಗಿದ ಮೇಲೆ ಇದ್ದಕ್ಕಿದ್ದ ಹಾಗೆ ತರಕಾರಿ ತೋಟದ ನಡುವಿನಿಂದ ಅಲ್ಲಾಡದೆ ನಿಂತಿದ್ದ ಎರಡು ವ್ಯಕ್ತಿಗಳು ಕಣ್ಣಿಗೆ ಬಿದ್ದರು. ಹುಡುಗ ತಕ್ಷಣ ಉಸಿರನ್ನು ತಡೆಹಿಡಿದುಕೊಂಡ. ಅವನ ಕಿವಿಯಲ್ಲಿ ಹೃದಯದ ಬಡಿತದ ಶಬ್ದ ಮಾತ್ರವಲ್ಲದೆ ಬೇರೊಂದು ಶಬ್ದವೂ ಕೇಳಿಸುತ್ತಿರಲಿಲ್ಲ. ಸಮುದ್ರದ ಭೋರ್ಗರೆತ ಕೂಡ ಕೇಳಿಸುತ್ತಲಿರಲಿಲ್ಲ. ತುಟಿಗಳನ್ನು ಸಿಟ್ಟಿನಿಂದ ಕಚ್ಚಿಕೊಳ್ಳುತ್ತ ಗುಡಿಸಿಲಿನ ಹಿಂಭಾಗಕ್ಕೆ ಸ್ವಲ್ಪವೂ ಶಬ್ದವಾಗದಂತೆ ಹೋದ. ಅಲ್ಲಿ ದಾರಿಯಲ್ಲಿ ಯಾರಾದರೂ ಇದ್ದಾರೇನೋ ಎಂಬುದನ್ನು ಪರೀಕ್ಷಿಸುವ ಉದ್ದೇಶ ಅವನದು. ದಾರಿಯಲ್ಲಿ ಇನ್ನಿ

ಬ್ಬರು ನಿಂತಿದ್ದುದನ್ನು ಗಾವ್ರಿಕ್ ಕಂಡ. ಅವರಲ್ಲೊಬ್ಬ ಬಿಳಿಯ ಅಂಗಿಯನ್ನು ತೊಟ್ಟಿದ್ದ. ಗಾವ್ರಿಕ್ ಗುಡ್ಡದ ಕಡೆಗೆ ತೆವಳಿಕೊಂಡು ಹೋದ. ಅಲ್ಲಿಯೂ ಕೂಡ ಕೆಲವು ಜನರಿದ್ದರು. ಅವರ ಬಿಳಿಯ ಅಂಗಿಗಳಿಂದ ಅವರು ಪೋಲೀಸಿನವರೆಂಬುದನ್ನು ತಿಳಿದುಕೊಂಡ. ಪೋಲೀಸರು ಗುಡಿಸಿಲನ್ನು ಸುತ್ತಗಟ್ಟಿದ್ದರೆಂಬುದರಲ್ಲಿ ಸಂಶಯವಿರಲಿಲ್ಲ.

ಗಾವ್ರಿಕ್ ಇನ್ನೇನು ಹಿಂದಕ್ಕೆ ಓಡಿಹೋಗಬೇಕು, ಅಷ್ಟರಲ್ಲಿ ದಡಿಯನೊಬ್ಬನ ಸುಡುತ್ತಿದ್ದ ಕೈ ಹಿಂದುಗಡೆಯಿಂದ ಗಾವ್ರಿಕನ ಹೆಕ್ಕತ್ತಿನ ಮೇಲೆ ಬಂದೆರಗಿ ಬಿಗಿಯಾಗಿ ಅವನನ್ನು ಹಿಡಿದು ಕೊಂಡಿತು. ಗಾವ್ರಿಕ್ ತಪ್ಪಿಸಿಕೊಂಡ.ಆದರೆ ಮರುಕ್ಷಣವೇ ಅವನಿಗೆ ತೊಡರುಗಾಲುಕೊಟ್ಟು ಪೊದೆ ಯೊಳಕ್ಕೆ ಕೈಕಾಲು ಒದರಿಕೊಂಡು ಬೀಳುವಂತೆ ಮಾಡಿತು ಮೊದಲು ಹೆಕ್ಕತ್ತಿನ ಮೇಲೆ ಕೈಹಾಕಿ ಹಿಡಿದ ವ್ಯಕ್ತಿ. ಒಂದು ಜತೆ ಬಲಿಷ್ಠ ಕೈಗಳು ಅವನನ್ನು ಗಟ್ಟಿಯಾಗಿ ಹಿಡಿದುಕೊಂಡುವು. ಗಾವ್ರಿಕ್ ಹಿಂದಿರುಗಿ ನೋಡುತ್ತಾನೆ. ಅವನ ಎದುರಿಗೆ ಮಿಶಾಸೆ. ಅವನನ್ನು ಕಂಡು ಹುಡುಗ ನಿಗೆ ದಿಗಿಲಾಯಿತು. ದುರ್ವಾಸನೆ ಹೊಡೆಯುತ್ತಿದ್ದ ತೆರೆದ ಬಾಯಿ ಮತ್ತು ಪೈನ್ ಮರದ ಹಲಗೆಯಂತೆ ತರಿತರಿಯಾದ ಗಡ್ಡ ಹುಡುಗನ ಮುಖದೆದುರಿಗೆ ಇದ್ದುವು.

"ದಯ...ವಿಟ್ಟು" ಗಾವ್ರಿಕ್ ತೆಳುದನಿಯಲ್ಲಿ ಅಂಗಲಾಚಿದ.

"ಬಾಯಿ ಮುಚ್ಕೋ, ಕತ್ತೆ!" ಮಿಶಾಸೆ ಭುಸ್ಸೆನ್ನುತ್ತ ನುಡಿದ.

"ನನ್ನನ್ನು ಬಿಟ್ಟುಬಿಡಿ, ದಯವಿಟ್ಟು ನನ್ನನ್ನು ಬಿಟ್ಟುಬಿಡಿ."

"ಕಿರಿಚಿಕೊಂಡೆಯಂತೆ, ನೋಡು ಏನು ಮಾಡುತ್ತೇನೆ ಎಂದು. ಮೂಗಿಲಿ ಕಣೋ ನೀನು ಮೂಗಿಲಿ." ಹಲ್ಲುಗಳ ಸಂದಿನಿಂದ ವಟಗುಟ್ಟುತ್ತ ಮಿಶಾಸೆ ಉಕ್ಕಿನ ಬೆರಳುಗಳಿಂದ ಗಾವ್ರಿಕನ ಕಿವಿಗಳನ್ನು ಹಿಡಿದುಕೊಂಡ. ಗಾವ್ರಿಕ್ ಹಿಂದಕ್ಕೆ ಜಗ್ಗಿ ಗುಡಿಸಿಲಿನ ಕಡೆಗೆ ಮುಖ ಮಾಡಿ ಕೊಂಡು "ಓಡಿ!" ಎಂದು ಗುಡುಗಿನಂತೆ ಕೂಗಿಬಿಟ್ಟ.

"ಬಾಯಿ ಮುಚ್ಕುತ್ತೀಯೋ ಇಲ್ಲ ನಿನ್ನನ್ನು ಇಲ್ಲೇ ಒರಗಿಸಿ ಬಿಡಲೋ!" ಮಿಶಾಸೆ ಗಾವ್ರಿಕನ ಕಿವಿಗಳನ್ನು ರಾಕ್ಷಸನಂತೆ ಹಿಡಿದು ಜಗ್ಗಿದ. ತಲೆ ಸಿಡಿದುಹೋಯಿತೋ ಎನ್ನುವಷ್ಟು ನೋವಾ ಯಿತು ಗಾವ್ರಿಕನಿಗೆ. ಊಹಿಸಲಸಾಧ್ಯವಾದಂಥ ಭಯಂಕರ ನೋವು. ಆದರೆ ಅದೇ ಸಮಯ ದಲ್ಲಿ ದ್ವೇಷ ಮತ್ತು ಕ್ರೋಧದ ಅಲೆಯೊಂದು ಗಾವ್ರಿಕನನ್ನು ಆವರಿಸಿಬಿಟ್ಟಿತು. ಆಗ ಅವನ ಕಣ್ಣೆದುರಿಗೆ ಬೇರೇನೂ ಕಾಣಿಸಲಿಲ್ಲ, "ಓಡಿ!" ತೀವ್ರ ಯಾತನೆ ಚುಚ್ಚುತ್ತಿದ್ದರೂ ಕೂಡ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಗುಡುಗಿದ.

ಮಿಶಾಸೆ ಗಾವ್ರಿಕನ ಮೇಲೆ ಬಿದ್ದ. ಹುಡುಗನ ಕಿವಿಗಳನ್ನು ಭಯಂಕರವಾಗಿ ಒಂದು ಕೈಯಿಂದ ಹಿಂಡಲಾರಂಭಿಸಿದನಲ್ಲದೆ ಇನ್ನೊಂದು ಕೈಯಿಂದ ಅವನ ಬಾಯಿಗೆ ಬೀಗ ಹಾಕಲು ಹವಣಿಸಿದ. ಬೆವರಿನಿಂದ ನೆನೆದಿದ್ದ ಮತ್ತು ಕೂದಲು ತುಂಬಿದ್ದ ಕೈಯೊಳಕ್ಕೆ ಗಾವ್ರಿಕ್ ಸೇಡಿನಿಂದ ಹಲ್ಲುಗಳನ್ನು ಊರಿದ್ದೆ ನೆಲದ ಮೇಲಕ್ಕೆ ಉರುಳಿದ. ಅಳುತ್ತಿದ್ದರೂ ಹುಚ್ಚು ಕೆರಳಿದಂತೆ "ಓ. . ಡಿ!" ಎಂದು ಕಿರುಚಿದ.

ಮಿಶಾಸೆ ಗಾವ್ರಿಕನನ್ನು ಬಿರುಸಿನಿಂದ ಒಂದು ಕಡೆಗೆ ತಳ್ಳಿ ಗುಡಿಸಿಲಿನ ಕಡೆಗೆ ಧಾವಿಸಿದ. ನಿಡಿದಾದ ಪೋಲೀಸ್ ಸಿಳ್ಳು ಕೇಳಿಸಿತು. ಗಾವ್ರಿಕ್ ತಕ್ಷಣ ಎದ್ದುನಿಂತ. ತನ್ನ ಕೂಗು ಗುಡಿಸಿಲಿನಲ್ಲಿದ್ದವರಿಗೆ ಕೇಳಿಸಿತ್ತು. ಏಕೆಂದರೆ ಮೂರು ವ್ಯಕ್ತಿಗಳು- ಅವರಲ್ಲಿ ಇಬ್ಬರು ಎತ್ತರ

ವಾಗಿದ್ದರು, ಒಬ್ಬ ಕುಳ್ಳ-ಗುಡಿಸಲಿನಿಂದ ಹೊರಕ್ಕೆ ನುಗ್ಗಿ ತರಕಾರಿ ತೋಟದಮೇಲೆ ಎಡವಿ ಬೀಳುವುದನ್ನೂ ಗಮನಿಸದೆ ನುಗ್ಗಿದರು. ಬಿಳಿ ಅಂಗಿಗಳವರಿಬ್ಬರು ಅವರಿಗೆ ಅಡ್ಡಬಂದರು. ಆಗ ಪೋಲೀಸರಿಗೆ ಬೇಕಾದ ಆ ವ್ಯಕ್ತಿಗಳು ಅಲ್ಲಿಂದ ದಿಕ್ಕು ಬದಲಾಯಿಸಿದರು. ತಮ್ಮನ್ನು ಸುತ್ತುಗಟ್ಟಲಾಗಿದೆಯೆಂಬ ವಿಷಯ ಅವರಿಗೆ ಮನವರಿಕೆಯಾಯಿತು.

"ನಿಲ್ಲಿ!" ಅಪರಿಚಿತ ಧ್ವನಿಯೊಂದು ಕತ್ತಲೆಯೊಳಗಿನಿಂದ ಕೇಳಬಂದಿತು.

"ಗುಂಡು ಹಾರಿಸು, ಇಲಿಯ!" ಟೆರೆಂಟಿ ಹತಾಶನಾಗಿ ಕಿರಿಚಿದ್ದು ಗಾವ್ರಿಕನಿಗೆ ಕೇಳಿಸಿತು.

ಮರುಕ್ಷಣದಲ್ಲಿ ಮೂರುಸಲ ಮಿಂಚಿನ ಹೊಳಪಿನಂತೆ ಬೆಳಕು ಮೂಡಿ ಮಾಯವಾಯಿತು. ಮೂರುಸಲ ಪಿಸ್ತೂಲನ್ನು ಹಾರಿಸಿದ ಶಬ್ದ ಒಂದಾದ ಮೇಲೊಂದರಂತೆ ಕೇಳಿಸಿತು. ಆ ಕೂಗಾಟ ಗುಡುಗಾಟಗಳಿಂದ ಕತ್ತಲೆಯಲ್ಲಿ ತುಮುಲ ಪ್ರಾರಂಭವಾಗಿರಬೇಕೆಂದು ಗಾವ್ರಿಕ್ ಭಾವಿಸಿದ. ಅವರು ಸಿಕ್ಕಿಹಾಕಿಕೊಂಡುಬಿಡುತ್ತಾರೆಯೋ ಏನೋ ಎಂಬ ಭಯದ ಹಿಡಿತಕ್ಕೆ ಸಿಕ್ಕಿದವನಾಗಿ ತಾನೇನು ಮಾಡುತ್ತಿರುವೆನೆಂಬ ಅರಿವಿಲ್ಲದೆ ಯಾವುದಾದರೂ ರೀತಿಯಲ್ಲಿ ತಾನು ಅವರಿಗೆ ನೆರವಾಗ ಬಹುದೆಂಬ ಉದ್ದೇಶದಿಂದ ಗಾವ್ರಿಕ್ ಅವರ ಕಡೆಗೆ ರಭಸದಿಂದ ಹಾರಿದ. ಇನ್ನೂ ಹತ್ತು ಹೆಜ್ಜೆ ಓಡಿದ್ದನೋ ಇಲ್ಲವೋ ಆಗ ಆ ಮೂವರೂ ಗಲಾಟೆಯಿಂದ ತಪ್ಪಿಸಿಕೊಂಡು ಸಮುದ್ರದಡದ ದಿಣ್ಣೆಯ ಕಡೆಗೆ ಓಡಿದುದನ್ನೂ ಬಳಿಕ ಅವರು ಕತ್ತಲಿನಲ್ಲಿ ಮಾಯವಾದುದನ್ನೂ ಗಾವ್ರಿಕ್ ನೋಡಿದ.

"ಹಿಡಿಯಿರಿ ಅವರನ್ನು! ಹಿಡಿಯಿರಿ ಅವರನ್ನು!"

ಕೆಂಪು ಪ್ರಕಾಶ ಮಿಂಚಿತು. ಅದರ ಹಿಂದೆಯೇ ಪೋಲೀಸಿನವರ ಮದ್ದಿನ ಸಿಡಿತದ ಶಬ್ದ ಕಿವಿಗೆ ಬಿತ್ತು. ದಿಣ್ಣೆಯ ಮೇಲುಗಡೆ ಪೋಲೀಸಿನವರ ಶಿಳ್ಳೆಗಳು ಕೀರುತ್ತಿದ್ದುವು. ಸಮುದ್ರದ ದಡದುದ್ದಕ್ಕೂ ಸಾಲಾಗಿ ಪೋಲೀಸಿನವರ ಕಾವಲಿನ ಕೋಟೆಯನ್ನು ನಿರ್ಮಿಸಿದ್ದಂತೆ ತೋರು ತ್ತಿತ್ತು.

ಬೆನ್ನಟ್ಟಿಸಿಕೊಂಡು ಹೋಗುವಾಗಿನ ಬೊಬ್ಬೆಯನ್ನು ಕೇಳಿ ಗಾವ್ರಿಕನ ಮನಸ್ಸು ಇಳಿದು ಹೋಯಿತು. ಓಡಿಹೋಗಲು ಆ ದಿಕ್ಕನ್ನು ಟೆರೆಂಟಿ ಏಕೆ ಆರಿಸಿಕೊಂಡನೆಂಬುದು ಗಾವ್ರಿಕನಿಗೆ ಥಟ್ಟನೆ ಹೊಳೆಯಲಿಲ್ಲ. ಬುದ್ಧಿ ನೆಟ್ಟಗಿಲ್ಲದ ಹುಚ್ಚಮಾತ್ರ ಆ ದಿಣ್ಣೆಯನ್ನು ಏರುತ್ತಾನೆ. ನೇರ ವಾಗಿ ಬೋನಿಗೆ ಹೋಗಿ ಬೀಳಲು ಅದು ಸುಲಭವಾದ ಮಾರ್ಗವಾಗಿತ್ತು. ಸಮುದ್ರದಡದ ಕಡೆಯಿಂದ ತಪ್ಪಿಸಿಕೊಳ್ಳುವುದು ಸುಲಭವಾಗಿರಲಿಲ್ಲವೇ!

ಗಾವ್ರಿಕ್ ಇನ್ನೊಂದು ಸ್ವಲ್ಪದೂರ ಮುಂದಕ್ಕೆ ಓಡಿದ. ದಿಣ್ಣೆಯ ಕಡಿದಾದ ಗೋಡೆ ಯನ್ನು ಆ ಮೂವರೂ ಏರುತ್ತಿದ್ದಂತೆ ಕಾಣಿಸಿತು. ಇನ್ನೇನು ಅವರ ಕೆಲಸ ಮುಗಿದಂತೆಯೇ ಎಂದು ಮಾಡಿಕೊಂಡ. "ಅಯ್ಯೋ ಟೆರೆಂಟಿ, ನಿನ್ನಾಕೆ ಆ ದಾರಿ ಹಿಡಿದೆ!" ನಿರಾಶೆಯಿಂದ ಹುಡುಗ ಪಿಸುಗುಟ್ಟಿಕೊಂಡ. ತಾನು ಎಲ್ಲಿ ಕಿರಿಚಿಕೊಂಡುಬಿಟ್ಟೇನೋ ಎಂಬ ಭಯದಿಂದ ತನ್ನ ಕೈಯನ್ನು ಕಚ್ಚಿಕೊಳ್ಳುತ್ತಿದ್ದ. ಬಿಸಿ ಕಣ್ಣೀರು ಅವನ ಮೂಗಿನ ತುದಿಯಿಂದ ತೊಟ್ಟಿಕ್ಕುತ್ತಿತ್ತು, ಅವನ ಗಂಟಲು ಉರಿಯುತ್ತಿತ್ತು.

ಆದರೆ ಅವರು ಏಕೆ ದಿಣ್ಣೆಯನ್ನು ಆರಿಸಿಕೊಂಡರೆಂಬುದಕ್ಕೆ ಕಾರಣ ಗಾವ್ರಿಕನ ತಲೆಯಲ್ಲಿ ಇದ್ದಕ್ಕಿದ್ದಂತೆ ಹೊಳೆಯಿತು. ಇಷ್ಟು ಸರಳವಾದ ವಿಷಯ ತನಗೆ ತಿಳಿಯದೆ ಹೋಯಿತಲ್ಲ

ಎಂದುಕೊಂಡ. ವಿಷಯ ಏನೆಂದರೆ....

ಆ ಸಮಯಕ್ಕೆ ಸರಿಯಾಗಿ ಮಿಾಸೆ ಗ್ರಾವಿಕನ ಮೇಲೆ ಎಗರಿ ಬಿದ್ದು ಅವನನ್ನು ಹಿಡಿದುಕೊಂಡ. ಕಂಕುಳಲ್ಲಿ ತೋಳುಗಳಿಂದ ಅವನನ್ನು ಅದುಮಿಕೊಂಡು ಹಿಂದುಮುಂದಾಗಿ ಗುಡಿಸಿಲಿನೊಳಕ್ಕೆ ಎಳೆದುಕೊಂಡು ಹೋದ. ಆ ಹುಡುಗನ ಷರಟು ಹರಿದಿದ್ದೂ ಅವನಿಗೆ ಲಕ್ಷ್ಯವಿರಲಿಲ್ಲ. ಗುಡಿಸಿಲಿನ ಬಾಗಿಲಿನ ಮೂಲಕ ಒಳಕ್ಕೆ ತಳ್ಳಿದ. ಅಲ್ಲಿ ಇಬ್ಬರು ಪೋಲೀಸಿನವರು ನಿಂತಿದ್ದರು. ಗ್ರಾವಿಕನ ಕೆನ್ನೆ ಬಾಗಿಲಿಗೆ ತಗುಲಿ ನೋವಾಯಿತು. ಕಾಲನ್ನು ಒಂದರಮೇಲೆ ಒಂದನ್ನು ಇಟ್ಟು ಕೊಂಡು ಮೂಲೆಯಲ್ಲಿ ನೆಲದಮೇಲೆ ಕುಳಿತಿದ್ದ ಅಜ್ಜನ ತಲೆಯಮೇಲೆಯೇ ಉರುಳಿಬಿದ್ದ.

"ಇವನೇನಾದರೂ ತಪ್ಪಿಸಿಕೊಂಡರೆ ನಿಮ್ಮ ತಲೆ ತೆಗೆಸಿಬಿಡ್ತೇನೆ, ಹುಷಾರ್!" ಎಂದು ಗರ್ಜಿಸಿ ಮಿಾಸೆ ಅಲ್ಲಿಂದ ಓಡಿದ.

ಗಾವ್ರಿಕ್ ತಾನೂ ಕಾಲುಗಳನ್ನು ಮಡಿಚಿಕೊಂಡು ಅಜ್ಜನಂತೆಯೆ ಅವನ ಪಕ್ಕದಲ್ಲಿ ಕುಳಿತ. ದೂರದಲ್ಲಿ ನಿಧಾನವಾಗಿ ಮಂದವಾಗುತ್ತಿದ್ದ ಗಲಾಟೆಯನ್ನೂ ಪೋಲೀಸರ ಸಿಳ್ಳಿನ ಶಬ್ದವನ್ನೂ ಕೇಳುತ್ತ ಮೌನವಾಗಿ ಇಬ್ಬರೂ ಕುಳಿತಿದ್ದರು. ಕೊನೆಗೆ ಎಲ್ಲೆಲ್ಲೂ ನೀರವ. ಆಗ ಗಾವ್ರಿಕನಿಗೆ ಕಿವಿಯ ಕಡೆ ಗಮನ ಹೋಯಿತು. ಇದುವರೆಗೂ ಅವನಿಗೆ ಅದರಮೇಲೆ ಗಮನವೇ ಹೋಗಿರಲಿಲ್ಲ. ಈಗ ಅದು ಭಯಂಕರವಾಗಿ ನೋಯುತ್ತಿತ್ತು, ಬೆಂಕಿ ಹಚ್ಚಿದಂತೆ ಉರಿಯುತ್ತಿತ್ತು. ಅದನ್ನು ಕೈಯಲ್ಲಿ ಮುಟ್ಟಿದರೆ ಮತ್ತಷ್ಟು ಉರಿ.

"ಹಾಳು ದೆವ್ವ! ನನ್ನ ಕಿವಿಯನ್ನೇ ಹರಿದುಹಾಕಿತಲ್ಲ!" ಎಂದು ಗಾವ್ರಿಕ್ ಗೊಣಗಿಕೊಂಡ. ಅಷ್ಟೊಂದು ನೋಯುತ್ತಿದ್ದರೂ ಕಣ್ಣೀರನ್ನು ತಡೆದುಕೊಂಡು ನಿರ್ಲಕ್ಷ್ಯವಾಗಿರುವವನಂತೆ ತೋರಿಸಿಕೊಳ್ಳಲು ಪ್ರಯತ್ನಿಸಿದ.

ಅಜ್ಜ ತನ್ನ ತಲೆಯನ್ನು ಅತ್ತಕಡೆಗೆ ತಿರುಗಿಸದೆ ಕಡೆಗಣ್ಣೋಟವನ್ನು ಮೊಮ್ಮಗನ ಕಡೆಗೆ ಹರಿಸಿದ. ಮುದುಕನ ಕಣ್ಣುಗಳು ಸ್ಥಿರವಾಗಿದ್ದುವು. ಆದರೆ ಭಯಂಕರವಾಗುವಷ್ಟು ಶೂನ್ಯವಾಗಿದ್ದುವು. ಬಹು ಹೊತ್ತು ಮೌನ ನರ್ತಿಸುತ್ತಿತ್ತು. ಕೊನೆಗೆ ತಲೆಯಲ್ಲಾಡಿಸಿ ದೂಷಣೆಯ ದನಿಯಲ್ಲಿ "ಇದನ್ನು ಯಾರಾದರೂ ಕಂಡಿದ್ದರೆ! ಮಗುವಿನ ಕಿವಿಯನ್ನು ಹರಿದುಹಾಕುವುದು ಎಂದರೆ ಏನು? ಹೀಗೇನೇ ಮಾಡುವುದು?"

ಮುದುಕ ನಿಟ್ಟುಸಿರೊಂದನ್ನು ಬಿಟ್ಟು ಪುನಃ ತುಟಿಗಳನ್ನು ಆಗಿಯಲಾರಂಭಿಸಿದ. ಥಟ್ಟನೆ ಒಂದುಸಲ ಗಾವ್ರಿಕನ ಕಡೆಗೆ ಬಗ್ಗಿ ಬಾಗಿಲಕಡೆಯಿಂದ ಯಾರಾದರೂ ಕೇಳುತ್ತಿದ್ದಾರೋ ಎಂಬುದನ್ನು ಪರೀಕ್ಷಿಸುವಂತೆ ನೋಡಿ ಕುತೂಹಲದಿಂದ ಪಿಸುಗುಟ್ಟಿದ: "ನಿನಗೆ ಏನಾದರೂ ಕೇಳಿಸಿತೆ? ಅವರು ತಪ್ಪಿಸಿಕೊಂಡರೆ?"

"ಅವರು ದಿಣ್ಣೆಯನ್ನು ಏರುತ್ತಿದ್ದರು. ಟೆರೆಂಟಿ ಅವರನ್ನು ಸುರಂಗಮಾರ್ಗಕ್ಕೆ ಕರೆದುಕೊಂಡು ಹೋದ. ದಾರಿಯಲ್ಲಿ ಅವರಿಗೆ ಗುಂಡು ತಗುಲದೆ ಹೋಗಿದ್ದರೆ ಅವರು ಖಂಡಿತ ತಪ್ಪಿಸಿಕೊಂಡಿರುತ್ತಾರೆ." ಎಂದು ಬಹು ತಗ್ಗು ದನಿಯಲ್ಲಿ ಆದರೆ ಬಹು ಬೇಗನೆ ಗಾವ್ರಿಕ್ ಉಸಿರಿದ.

ಪವಾಡಕರ್ತನ ಮೂರ್ತಿಯ ಕಡೆಗೆ ಅಜ್ಜ ಮುಖಮಾಡಿ ಕಣ್ಣು ಮುಚ್ಚಿಕೊಂಡು ತನ್ನ ಬೆರಳುಗಳಿಂದ ಹಣೆ, ಹೊಟ್ಟೆ ಮತ್ತು ಹೆಗಲುಗಳನ್ನು ಅಮುಕಿ ಹಿಡಿದುಕೊಳ್ಳುವುದರ ಮೂಲಕ ನಿಧಾನವಾಗಿ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡ.

ಕಣ್ಣಿಗೆ ಕಾಣದಂಥ ಸಣ್ಣ ಕಣ್ಣೀರಿನ ಹನಿಯೊಂದು ಮುದುಕನ ಕೆನ್ನೆಯಿಂದ ಕೆಳಕ್ಕೆ ಇಳಿದು ಅವನ ಮುಖದ ಸುಕ್ಕುಗಳಲ್ಲಿ ಅದೃಶ್ಯವಾಯಿತು.

೨೭. ಅಜ್ಜ

ರೋಮ್, ನೇಪಲ್ಸ್, ಕಾನ್ಸ್ಟಾಂಟಿನೋಪಲ್, ಅಲೆಗ್ಸಾಂಡ್ರಿಯ, ಪ್ಯಾರಿಸ್, ಒಡೆಸ್ಸ-ಮೊದಲಾದ ಹಲವು ನಗರಗಳ ನೆಲದಡಿಯಲ್ಲಿ ಸುರಂಗಮಾರ್ಗಗಳಿವೆ.

ಸುಮಾರು ಐವತ್ತು ವರ್ಷಗಳ ಹಿಂದೆ ಒಡೆಸ್ಸದ ಸುರಂಗಮಾರ್ಗಗಳು ಸುಣ್ಣಕಲ್ಲಿನ ಗಣಿಗಳಾಗಿದ್ದುವು. ಇಂದಿಗೂ ಇಡೀ ನಗರದ ತಳದಲ್ಲಿ ಸುರಂಗಮಾರ್ಗಗಳು ಬಲೆಯಂತೆ ನೆಯ್ದುಕೊಂಡಿವೆ. ಅವುಗಳಿಗೆ ಅಲ್ಲಲ್ಲಿ ಬಾಯಿಗಳಿವೆ. ಒಡೆಸ್ಸದಲ್ಲಿನ ಜನಕ್ಕೆ ಈ ಸುರಂಗಮಾರ್ಗಗಳಿರುವ ವಿಷಯ ಗೊತ್ತು. ಆದರೆ ಅವುಗಳೊಳಕ್ಕೆ ಪ್ರವೇಶಿಸಿ ನೋಡಿದ್ದವರು ಬಹಳ ವಿರಳ. ಅಲ್ಲದೆ ಅವು ಯಾವ ರೀತಿ ಬಳಸಿಕೊಂಡುಹೋಗಿವೆ ಎಂಬುದರ ಜ್ಞಾನ ಇದ್ದವರಂತೂ ತೀರ ಅಲ್ಪ. ಒಂದು ರೀತಿಯಲ್ಲಿ ಈ ಸುರಂಗಮಾರ್ಗಗಳು ಒಡೆಸ್ಸದ ಪವಾಡಗಳೂ ಐತಿಹ್ಯಗಳೂ ಆಗಿ ಪರಿಣಮಿಸಿದ್ದುವು.

ಟೆರೆಂಟಿ ತಾನೂ ಒಂದು ಕಾಲದಲ್ಲಿ ಮೀನು ಹಿಡಿಯುತ್ತಿದ್ದನಲ್ಲವೆ. ಅವನಿಗೆ ಒಡೆಸ್ಸದ ತೀರಪ್ರದೇಶದ ಅನುಭವ ಬಹಳ ಚೆನ್ನಾಗಿ ಆಗಿತ್ತು. ಅಲ್ಲಿದ್ದ ಸುರಂಗಮಾರ್ಗಗಳ ಪ್ರವೇಶದ್ವಾರಗಳನ್ನೆಲ್ಲ ಆ ಕಾಲದಲ್ಲಿ ಟೆರೆಂಟಿ ಅಧ್ಯಯನ ಮಾಡಿದ್ದ. ಈ ಮಾರ್ಗಗಳ ದ್ವಾರವೊಂದು ಅಜ್ಜನ ಗುಡಿಸಿಲಿನ ಹಿಂಭಾಗಕ್ಕೆ ಸುಮಾರು ಒಂದು ನೂರು ಹೆಜ್ಜೆಗಳಷ್ಟು ದೂರದಲ್ಲಿ ತೀರದ ದಿಣ್ಣೆಯ ಏರಿನ ಮಧ್ಯದಲ್ಲಿತ್ತು. ದ್ವಾರದ ಬಾಯಿ ಚಿಕ್ಕದಾಗಿದ್ದುದಲ್ಲದೆ ಕಾಡು ಗುಲಾಬಿ ಗಿಡಗಳೂ ಕದಿರುಗಿಡಗಳೂ ಬೆಳೆದು ಆ ದ್ವಾರವು ಕಣ್ಣಿಗೆ ಕಾಣದಂತೆ ಮರೆಯಾಗಿತ್ತು. ದ್ವಾರದ ಬಾಯಿಯಿಂದ ಒಂದು ಸಣ್ಣ ನೀರಿನ ಚಿಲುಮೆ ದಿಣ್ಣೆಯಿಂದ ಕೆಳಕ್ಕೆ ತೊಟ್ಟಿಕ್ಕುತ್ತಿತ್ತು. ಪ್ರಕೃತಿಯ ಈ ಕಾರ್ಯದಿಂದ ಅಲ್ಲಿದ್ದ ಗಿಡಗಳೂ ಬಳ್ಳಿಗಳೂ ನಿರಂತರವಾಗಿ ಕಂಪಿಸುತ್ತಿದ್ದುವು.

ಪೋಲೀಸಿನವರನ್ನೂ ಪತ್ತೇದಾರರನ್ನೂ ಮೊದಲ ಆಕ್ರಮಣದಿಂದ ಹಿಮ್ಮೆಟ್ಟಿಸಿ ಟೆರೆಂಟಿ ತನ್ನ ಸಂಗಾತಿಗಳನ್ನು ದಿಣ್ಣೆಯ ಏರಿನ ನಡುವಿನಲ್ಲಿದ್ದ ಸುರಂಗದ್ವಾರದ ಬಾಯಿಯ ಬಳಿಗೆ ಕರೆದುಕೊಂಡು ಹೊರಟ. ಅವರನ್ನು ಬೆನ್ನಟ್ಟುತ್ತಿದ್ದವರಿಗೆ ಸುರಂಗದ್ವಾರದ ವಿಷಯ ಗೊತ್ತಿರಲಿಲ್ಲ. ದಿಣ್ಣೆಯನ್ನು ಏರಿ ಮೇಲಕ್ಕೆ ಹೋಗಿ ಉಪನಗರದ ಮೂಲಕ ನಗರಕ್ಕೆ ತಪ್ಪಿಸಿಕೊಂಡು ಹೋಗುತ್ತಾರೆಂದು ಪೋಲೀಸಿನವರು ಊಹಿಸಿದರು. ಹೀಗೆ ಮಾಡಿದ್ದೇ ಆದರೆ ಅವರು ಖಂಡಿತ ತಮ್ಮ ಬೋನಿನೊಳಕ್ಕೆ ನೇರವಾಗಿ ಬಂದುಬಿದ್ದಂತೆಯೇ ಎಂದು ಪೋಲೀಸಿನವರು ತೃಪ್ತಿಗೊಂಡರು. ಏಕೆಂದರೆ ಪೋಲೀಸ್ ದಳವು ಇಡೀ ಪ್ರದೇಶವನ್ನು ಸುತ್ತುಗಟ್ಟಿತ್ತು. ಆದುದರಿಂದಲೇ ಮೊದಲನೆಯ ಬಾರಿ ಗುಂಡು ಹಾರಿಸಿದ ಬಳಿಕ ಬಂದೂಕು ಹೊಡೆಯುವುದನ್ನು ನಿಲ್ಲಿಸಬೇಕೆಂದು ಆಜ್ಞೆಯೀಯಲಾಗಿತ್ತು. ಅಲೆಗ್ಸಾಂದ್ರೋವ್ಸ್ಕಿ ಪೋಲೀಸ್ ಠಾಣೆಯ ಮುಖ್ಯಾಧಿಕಾರಿಯು ಈ ಮುತ್ತಿಗೆಯನ್ನು ತಾನೇ ಸ್ವತಃ ನಿರ್ದೇಶಿಸುತ್ತಿದ್ದ. ಅವನು ಕೆಳಗೆ ನಿಂತುಕೊಂಡು ಅಪರಾಧಿಗಳು ಪೋಲೀಸರ ಕೈಕೆ ಸಿಕ್ಕುವರು ಎಂದು ಕಾಯುತ್ತಲಿದ್ದ. ಅವರು ಸಿಕ್ಕಿ

ದರೋ ಎಂಬ ತಿಳಿಯಲು ಕಾಲುಗಂಟೆಯ ಬಳಿಕ ಜಿಲ್ಲಾ ಪೋಲೀಸ್ ಇನ್ಸ್ಪೆಕ್ಟರನನ್ನು ಮೇಲಕ್ಕೆ ಕಳುಹಿಸಿಕೊಟ್ಟ. ಇನ್ಸ್ಪೆಕ್ಟರನು ದಿಣ್ಣೆಯ ಮೇಲಕ್ಕೆ ಹೋಗುವ ಸುಲಭವಾದ ಬಳಸುದಾರಿಯನ್ನು ಹಿಡಿದ. ಅಲ್ಲಿ ಅಪರಾಧಿಗಳು ಕಾಣಸಿಗಲಿಲ್ಲವೆಂಬುದನ್ನು ಮುಖ್ಯಾಧಿಕಾರಿಗೆ ಅವನು ಬಂದು ತಿಳಿಸಲು ಇನ್ನೊಂದು ಕಾಲುಗಂಟೆ ಕಳೆಯಿತು. ಅಪರಾಧಿಗಳು ದಿಣ್ಣೆಯ ಕೆಳಗೂ ಇಲ್ಲ ಮೇಲೂ ಇಲ್ಲ ಎಂಬುದು ನಿರ್ಧರವಾಯಿತು. ಹಾಗಿದ್ದರೆ ಅವರೆಲ್ಲಿಗೆ ಹೋದರು? ಪೋಲೀಸರ ಕೈಗೆ ಸಿಕ್ಕಿಹಾಕಿಕೊಳ್ಳುವುದಕ್ಕೋಸ್ಕರ ಅವರು ದಿಣ್ಣೆಯ ಏರಿನ ಮಧ್ಯದಲ್ಲಿ ಗಿಡಗಂಟೆಗಳ ನಡುವೆ ಮುಚ್ಚಿಟ್ಟುಕೊಂಡಿರುವರೆಂಬುದನ್ನು ಯೋಚಿಸಲು ಸಾಧ್ಯವಿರಲಿಲ್ಲ. ಏನಾದರೂ ಆಗಲಿ ಎಂದು ಪೋಲೀಸ್ ಮುಖ್ಯಾಧಿಕಾರಿಯು ದಿಣ್ಣೆಯನ್ನು ಹತ್ತಿ ಒಂದೊಂದು ಪೊದೆಯನ್ನೂ ಬಿಡದೆ ಶೋಧಿಸಬೇಕೆಂದು ಆಜ್ಞೆ ಮಾಡಿದ. "ಆ ಮುಟ್ಠಾಳ"ರನ್ನು ನಂಬಿ ಕೂರಲಿಷ್ಟವಿಲ್ಲದೆ ತಾನೂ ಅವರನ್ನು ಹಿಂಬಾಲಿಸಿದ. ಹಸುರುಹುಲ್ಲಿನ ಮೇಲೂ ಜೇಡಿಮಣ್ಣಿನಮೇಲೂ ಹೊಸ ಬೂಡ್ಸುಗಳು ಜಾರಿದಾಗ ಬೈಗುಳ ಸುರಿಮಳೆಯೇ ಅವನ ಬಾಯಿಂದ ಹೊರಕ್ಕೆ ಸುರಿಯುತ್ತಿತ್ತು.

ಪೋಲೀಸರು ದಿಣ್ಣೆಯನ್ನು ಮೇಲಿನಿಂದ ಕೆಳಗಿನವರೆಗೂ ಶೋಧಿಸಿಬಿಟ್ಟರು. ಆದರೆ ಯಾರೂ ಕಾಣಿಸಲಿಲ್ಲ. ಇದೇನೋ ಒಂದು ಪವಾಡದಂತೆ ತೋರಿತು ಅವರಿಗೆ. ಅಪರಾಧಿಗಳನ್ನು ಭೂಮಿ ನುಂಗಿ ಬಿಡುವುದು ಸಾಧ್ಯವಿಲ್ಲವಲ್ಲ!

"ಮಹಾಸ್ವಾಮಿ! ದಯವಿಟ್ಟು ಇಲ್ಲಿಗೆ ಬರೋಣವಾಗಲಿ !" ಹೆದರಿದ ಧ್ವನಿಯೊಂದು ಮೇಲಿನಿಂದ ಬಂದಿತು.

"ಏನು ಸಮಾಚಾರ ?"

"ಸುರಂಗ ಮಹಾಸ್ವಾಮಿ, ಸುರಂಗ."

ಪೋಲೀಸ್ ಮುಖ್ಯಾಧಿಕಾರಿ ಮೇಲಕ್ಕೆ ಹತ್ತಿ ಮುಳ್ಳಿನ ಪೊದೆಗಳನ್ನು ಬಿಳಿ ಕೈಚೀಲ ಮುಚ್ಚಿದ ಕೈಗಳಿಂದ ಹಿಡಿದುಕೊಂಡ. ಬಲವಾದ ಕೈಗಳು ಅವನನ್ನು ಮೇಲಕ್ಕೆ ಹಿಡಿದೆಳೆದುಕೊಂಡು ಬಂದು ಬಂಡೆಯ ಮುಂಚಾಚಿನ ಮೇಲೆ ನಿಲ್ಲಿಸಿದುವು. ಮಿಾಸೆ ಬೆಂಕಿ ಕಡ್ಡಿಗಳನ್ನು ಒಂದಾದರ ಮೇಲೆ ಒಂದರಂತೆ ಕೊರೆದು ಹತ್ತಿಸಿದ. ಮೇಲೆ ಪೊದೆಗಳು ಬೆಳೆದುಕೊಂಡಿದ್ದ ಒಂದು ಉದ್ದವಾದ ದೊಡ್ಡ ಬಿರುಕಿನಂಥ ದಾರಿ ಆ ಬೆಳಕಿನಲ್ಲಿ ಕಾಣಿಸಿತು.

ಅಪರಾಧಿಗಳನ್ನು ಹಿಡಿಯುವ ಈ ಸೆಣಸಾಟದಲ್ಲಿ ತಾನು ಸೋತೆನೆಂದು ಪೋಲೀಸ್ ಮುಖ್ಯಾಧಿಕಾರಿ ಖಚಿತಮಾಡಿಕೊಂಡ. ಎಂಥ ಸೊಗಸಾದ ಬೇಟೆ ಕೈ ತಪ್ಪಿಹೋಯಿತು! ಅವನು ಕೋಪದಿಂದ ತತ್ತರಿಸಿಹೋದ. ತನ್ನ ನಾಜೂಕಾದ ಬೂಡ್ಸನ್ನು ನೆಲಕ್ಕೆ ಒದ್ದ. ಆಚೆ ಈಚೆ ನಿಂತಿದ್ದವರ ಮೂಗು, ಕೆನ್ನೆ, ಮಿಾಸೆಗಳಿಗೆ ಅವನು ಕೋಪದಿಂದ ಬೀಸಿದ ಕೈ ತಗುಲಿತು.

"ಕತ್ತೆಗಳಿರಾ, ನಿಂತುಕೊಂಡು ಏನು ನೋಡುತ್ತಾ ಇದ್ದೀರಿ!" ಕಿರಿಚಿ ಕಿರಿಚಿ ಗಡುಸಾದ ಒರಟು ಧ್ವನಿಯಿಂದ ಪೋಲೀಸ್ ಮುಖ್ಯಾಧಿಕಾರಿ ಒದರಿದ. "ಮುಂದೆ ನಡೆಯಿರಿ! ಆ ಪಟಿಂಗರನ್ನು ಹಿಡಿದು ತರದೇ ಹೋದರೆ ನಿಮ್ಮ ತಲೆ ಚೆಂಡಾಡಿಬಿಡುತ್ತೇನೆ.! ನಿಮ್ಮ ಮೂತಿ ಒಡೆದುಹಾಕಿ ಬಿಡುತ್ತೇನೆ! ಹುಷಾರ್! ನಡೆಯಿರಿ!"

ಇದೆಲ್ಲ ವ್ಯರ್ಥವೆಂದು ಅವನು ತಿಳಿದಿದ್ದ. ಎಲ್ಲ ಸುರಂಗಗಳನ್ನೂ ಹುಡುಕುವುದೆಂದರೆ

ಕನಿಷ್ಠ ಪಕ್ಷ ಹದಿನೈನು ದಿನಗಳಾದರೂ ಹಿಡಿದೀತು. ಸುರಂಗಗಳನ್ನು ಹುಡುಕುವುದಕ್ಕೆ ಆರಂಭಿಸುವುದೂ ದಡ್ಡತನವೇ ಆದೀತು. ಅವರು ಆಗಲೇ ಅರ್ಧಗಂಟೆಗೂ ಹೆಚ್ಚುಕಾಲವನ್ನು ವ್ಯರ್ಥವಾಗಿ ಕಳೆದಾಗಿತ್ತು. ಈ ವೇಳೆಯಲ್ಲಿ ಅಪರಾಧಿಗಳು ನಗರದ ಇನ್ನೊಂದು ಭಾಗವನ್ನು ಸೇರಿರಲಿಕ್ಕೆ ಸಾಕು. ಹಲವು ಜನ ಪೋಲೀಸರು ಇಷ್ಟವಿಲ್ಲದೇ ಇದ್ದರೂ ಸುರಂಗದ್ವಾರದ ಬಾಯಿಂದ ಒಳಕ್ಕೆ ತೆವಳಿಕೊಂಡು ಹೋದರು. ಆದರೆ ಅವರು ಬೆಂಕಿಕಡ್ಡಿಗಳ ಬೆಳಕಿನಲ್ಲಿ ಪ್ರವೇಶದ್ವಾರದಿಂದ ಬಹುದೂರವೇನೂ ಹೋಗಲಿಲ್ಲ. ಅಧಃಪಾತಾಳಕ್ಕೆ ಹೋಗುವ ಕಗ್ಗತ್ತಲೆಯ ಮಾರ್ಗದಂತೆ ಮುಂದೆ ತೋರುತ್ತಿದ್ದ ಸುರಂಗಮಾರ್ಗದ ಸುಣ್ಣಕಲ್ಲಿನ ತೇವವಾದ ಪಕ್ಕಗಳನ್ನು ಮಾತ್ರ ಅವರು ಪರೀಕ್ಷಿಸಲು ಸಾಧ್ಯವಾಯಿತು!

ಪೋಲೀಸ್ ಮುಖ್ಯಾಧಿಕಾರಿಯು ಜುಗುಪ್ಸೆಯಿಂದ ನೆಲದಮೇಲಕ್ಕೆ ಉಗುಳಿದ. ದಿಣ್ಣೆಯಿಂದ ಕೆಳಕ್ಕೆ ಸರಸರನೆ ಓಡಿಹೋದ. ಆಗ ಬೂಡ್ಸುಗಳಿಗೆ ಸಿಕ್ಕಿಸಿದ್ದ ಕುದುರೆ ಸವಾರಿಯ ಹಿಮ್ಮಡಿ ಮುಳ್ಳುಗಳು ಜಣಜಣ ಎಂದು ಶಬ್ದಮಾಡಿದುವು. ಕ್ರೋಧದಿಂದ ಅವನ ಉಸಿರು ಕಟ್ಟಿತ್ತು. ಬಿಳಿಯಸಮವಸ್ತ್ರದ ಗಂಜಿಹಾಕಿ ಗರಿಮುರಿಯಾಗಿದ್ದ ಕತ್ತಿನ ಪಟ್ಟಿಯನ್ನು ಜೋರಾಗಿ ಕಿತ್ತಾಗ ಅದರ ಕೊಕ್ಕೆಗಳು ಕಿತ್ತು ಬಂದುವು.

ಅವನು ದಾಪುಗಾಲು ಹಾಕುತ್ತ ಗುಡಿಸಿಲಿಗೆ ಬರುವಾಗ ಅವನ ಕಾಲಕೆಳಗೆ ಸಿಕ್ಕಿದ ಗಿಡಗಂಟೆಗಳಿಂದ ಚರಚರ ಶಬ್ದವಾಯಿತು. ಗುಡಿಸಿಲಿನ ಬಾಗಿಲನ್ನು ಒದ್ದು ತೆರೆದ. ಅಲ್ಲಿದ್ದ ಪೋಲೀಸಿನವರು ಭಯದಿಂದ ನೆಗೆದೆದ್ದು ನಿಂತರು. ಪೋಲೀಸ್ ಮುಖ್ಯಾಧಿಕಾರಿ ಆ ಸಣ್ಣ ಕೊಠಡಿಯೊಳಕ್ಕೆ ಹೋಗಿ ಬೆನ್ನ ಹಿಂದೆ ಬೆರಳುಗಳನ್ನು ಮಿಡಿಯುತ್ತಾ ಕಾಲುಗಳನ್ನು ಅಗಲಿಸಿಕೊಂಡು ನಿಂತ. ಅನಂತರ ಮಿಾಸೆ ಒಳಕ್ಕೆ ಬಂದ.

"ಮಹಾಸ್ವಾಮಿ, ಕ್ರಾಂತಿಕಾರಿಗಳ ಈ ಗೂಡಿಗೆ ಇವನೇ ಯಜಮಾನ. ಅದು ಇವನ ಮರಿ." ಎಂದು ಮಿಾಸೆ ಮುದುಕನನ್ನೂ, ಮೊಮ್ಮಗನನ್ನೂ ತೋರಿಸುತ್ತ ಏನೋ ರಹಸ್ಯವನ್ನುಸುರುವಂತೆ ಕಿವಿಯಲ್ಲಿ ಹೇಳಿದ.

ಮಿಾಸೆಯ ಕಡೆಗೆ ದೃಷ್ಟಿಯನ್ನು ಬೀರದೆಯೇ ಅಧಿಕಾರಿಯು ಕೈಯನ್ನು ಬೀಸಿ ಬೆವರಿಳಿಯುತ್ತಿದ್ದ ಮಿಾಸೆಯ ಮುಖವನ್ನು ತುಂಬ ಜಿಗುಪ್ಸೆಯಿಂದ ಪಕ್ಕಕ್ಕೆ ತಳ್ಳಿಬಿಟ್ಟ.

"ನಿನ್ನನ್ನು ಕೇಳಿದವರು ಯಾರು ? ಮೂರ್ಖ, ಅದು ನನಗೆ ತಿಳಿಯದೆ ?"

ಗಾವ್ರಿಕ್ ಭಯದಿಂದ ಕಂಪಿಸುತ್ತಿದ್ದ. ಏನೋ ಭಯಂಕರವಾದುದು ಆಗಿಹೋಗಬಹುದೆಂದು ಹೆದರಿದ. ಮುಖ ಬಿಳಿಚಿಕೊಂಡಿದ್ದ ಆ ಪುಟ್ಟಹುಡುಗ ನಿಂತಿದ್ದ. ಅವನ ಕಿವಿಯೊ ಕೆಂಡದಂತೆ ದಪ್ಪವಾಗಿ ಊದಿಕೊಂಡಿತ್ತು. ಅವನು ನೀಲಿಯ ಷರಾಯಿ ಮತ್ತು ಕಪ್ಪು ಚರ್ಮ ಬೂಡ್ಸನ್ನು ಧರಿಸಿದ್ದ ಅಧಿಕಾರಿಯನ್ನು ರೆಪ್ಪೆಹೊಡೆಯದೆ ದಿಟ್ಟಿಸಿ ನೋಡುತ್ತಿದ್ದ.

ಆ ಅಧಿಕಾರಿ ಒಂದು ನಿಮಿಷ ಪೂರ್ತಿ ಸುಮ್ಮನೆ ನಿಂತಿದ್ದ. ಈ ಒಂದು ನಿಮಿಷ ಆ ಹುಡುಗನಿಗೆ ಒಂದು ಗಂಟೆಯಂತೆ ಭಾಸವಾಯಿತು. ಬಳಿಕ ಅಧಿಕಾರಿ ಮಂಚದ ಅಂಚಿನಲ್ಲಿ ಕುಳಿ ಅಜ್ಜನ ಮೇಲೆ ನೆಟ್ಟದೃಷ್ಟಿಯನ್ನು ತೆಗೆಯದೆ ಬೂಡ್ಸಿನ ಕಾಲನ್ನು ನೀಡಿದ. ಬೆಳ್ಳಿಯ ಸಿಗರೇಟ್ ಪೆಟ್ಟಿಗೆಯನ್ನೂ ಕಿತ್ತಳೆ ಬಣ್ಣದ ಬೆಂಕಿಕಡ್ಡಿ ಪೆಟ್ಟಿಗೆಯನ್ನೂ ಷರಾಯಿ ಜೇಬಿನಿಂದ ಹೊರತೆಗೆ ಹಳದಿ ಸಿಗರೇಟನ್ನು ಹತ್ತಿಸಿದ.

"ಆಸ್ಮಲೋವ್ ಸಿಗರೇಟನ್ನು ಸೇದುತ್ತಾನೆ ಇವನು!" ಎಂದುಕೊಂಡ ಗಾವ್ರಿಕ್.

ಅಧಿಕಾರಿಯು ಸಿಗರೇಟಿನ ಹೊಗೆಯನ್ನು ಮೂಗಿನ ಮೂಲಕ ಬಿಡುತ್ತ, ಫೂ.... ಊ....ಊ..... ಎಂದು ಹೊಗೆಯನ್ನು ಎಳೆಯುತ್ತಲಿದ್ದ. ಗಾವ್ರಿಕನ ಕಿವಿ ಕಿವುಡಾಗುವಷ್ಟು ಎತ್ತರದ ದನಿಯಲ್ಲಿ ಇದ್ದಕ್ಕಿದ್ದಹಾಗೆ ತನ್ನ ಶಕ್ತಿಯನ್ನೆಲ್ಲ ಬಿಟ್ಟು "ಕತ್ತೆ, ಅಧಿಕಾರಿಯ ಎದುರಿಗೆ ಎದ್ದು ನಿಂತುಕೊಂಡಿರಬೇಕು ಎಂದು ನಿನಗೆ ತಿಳಿಯುವುದಿಲ್ಲ ಅಲ್ಲವೆ?" ಎಂದು ಕಿರಿಚಿದ.

ಅಜ್ಜ ನಡುಗುತ್ತ ಥಟ್ಟನೆ ಎದ್ದು ನೆಟ್ಟಗೆ ನಿಂತುಕೊಂಡ. ಅವನಡೊಂಕಾದ ಬರಿಗಾಲುಗಳು ಎದ್ದು ಕಾಣುತ್ತಿದ್ದುವು. ಎಲುಬಿನ ಗೂಡನ್ನು ಪ್ರದರ್ಶಿಸುತ್ತಿದ್ದ ಎದೆಯ ಮೇಲಿನ ಷರಟನ್ನು ಸರಿಪಡಿಸಿಕೊಂಡು ಅಧಿಕಾರಿಯನ್ನು ಶೂನ್ಯ ದೃಷ್ಟಿಯಿಂದ ನೋಡುತ್ತಿದ್ದ. ಅಜ್ಜನ ಸೆಟೆದ ಕತ್ತು ನಡುಗುತ್ತಿರುವುದನ್ನು ಗಾವ್ರಿಕ್ ನೋಡಬಲ್ಲವನಾಗಿದ್ದ. ನೀಳವಾಗಿದ್ದ ಗಾಯದ ಕಲೆಗಳು ಕತ್ತಿನ ಚರ್ಮದಮೇಲೆ ಸ್ಪಷ್ಟವಾಗಿ ಕಾಣುತ್ತಿದ್ದುವು.

"ಬಂಡಾಯಗಾರರನ್ನು ಅಡಗಿಸುತ್ತಿದ್ದೀಯಾ ಅಲ್ಲವೆ ನೀನು?" ಕೊರೆಯುವ ದನಿಯಲ್ಲಿ ಅಧಿಕಾರಿ ಕೇಳಿದ.

"ಇಲ್ಲ, ಸ್ವಾಮಿ." ಅಜ್ಜ ಸಪ್ಪೆದನಿಯಲ್ಲಿ ಉತ್ತರ ಕೊಟ್ಟ.

"ಇಲ್ಲಿ ಇದ್ದವರು ಯಾರು, ಹೇಳು. ಬಾಯಿ ಬಿಡು."

"ನನಗೆ ಗೊತ್ತಿಲ್ಲ ಸ್ವಾಮಿ."

"ನಿನಗೆ ಗೊತ್ತಿಲ್ಲ ಅಲ್ಲವೆ? ಆಹಾಂ!" ಅಧಿಕಾರಿ ನಿಧಾನವಾಗಿ ಎದ್ದವನು ತುಟಿಕಚ್ಚಿಕೊಂಡು ಕೈಬೀಸಿ ಆ ಮುದುಕನಿಗೆ ಒಂದು ಬಿಟ್ಟನೋ ಇಲ್ಲವೋ ಮುದುಕ ಗೋಡೆಗೆ ಹೋಗಿ ಬಿದ್ದ.

"ಅವರು ಯಾರು, ಹೇಳು?"

"ನನಗೆ ಗೊತ್ತಿಲ್ಲ, ಸ್ವಾಮಿ." ದವಡೆಯ ಮಾಂಸಖಂಡಗಳು ಅದುರುತ್ತಿದ್ದರೂ ಅಜ್ಜ ದೃಢ ಸ್ವರದಲ್ಲಿ ಉತ್ತರಕೊಟ್ಟ.

ಬಿಳಿಯ ಕೈಚೀಲದ ಮುಷ್ಟಿ ಪುನಃ ಬೀಸಿತು. ಅಜ್ಜನ ಮೂಗಿನ ಹೊಳ್ಳೆಗಳಿಂದ ಎರಡು ತೊಟ್ಟು ರಕ್ತ ತೊಟ್ಟಿಕ್ಕಿತು. ಅವನು ಕಣ್ಮುಚ್ಚಿಕೊಂಡು ಹೆಗಲನ್ನು ಬಗ್ಗಿಸಿದ. ಉಸಿರು ಸಿಕ್ಕಿಕೊಂಡಂತಾಗಿ ಅಳುವವನಂತೆ ಒಂದುಸಲ ಬಿಕ್ಕಳಿಸಿದ.

"ಈ ಏಟಿಗೆ ಕಾರಣವೇನು, ಮಹಾಸ್ವಾಮಿ?" ಅಜ್ಜನ ಧ್ವನಿ ಬಹು ಮೃದುವಾಗಿದ್ದರೂ ನಿಷ್ಠುರವಾಗಿತ್ತು. ಮೂಗನ್ನು ಒರೆಸಿಕೊಂಡು ರಕ್ತದ ಕೈಯನ್ನು ಪೋಲೀಸ್ ಅಧಿಕಾರಿಗೆ ತೋರಿಸಿದ.

"ಸಾಕು ನಿಲ್ಲಿಸು ನಿನ್ನ ತಲೆಹರಟೆ. ಬಾಲಬಿಚ್ಚಬೇಡ." ಅಧಿಕಾರಿ ಅರಚಿದ. ಅವನ ಮುಖ ಬಿಳಿಚಿಕೊಂಡಿತು. ಸುಣ್ಣದಂತೆ ಬಿಳುಪಾಗಿದ್ದ ಅವನ ಮುಖದಮೇಲೆ ಮಖಮಲ್ಲಿನಂತೆ ಹೊಳೆಯುತ್ತಿದ್ದ ಸುಖಜೀವನದ ಚಿಹ್ನೆ ಎದ್ದು ಕಾಣುತ್ತಿತ್ತು. ಕೆಟ್ಟುಹೋದ ತನ್ನ ಕೈಚೀಲವನ್ನು ಜಿಗುಪ್ಸೆಯಿಂದ ನೋಡಿಕೊಂಡ.

"ಯಾರು ಅವರು? ಬೊಗಳು!"

"ನನಗೆ ಗೊತ್ತಿಲ್ಲ!"

ಅಜ್ಜ ಮುಖವನ್ನು ಕೈಗಳಿಂದ ಮುಚ್ಚಿಕೊಂಡು ಗೋಡೆಯ ಕಡೆಗೆ ತಿರುಗವಷ್ಟು ಸಮಯ
ವಿದ್ದಿತು. ಅಷ್ಟರಲ್ಲಿ ಪೋಲೀಸ್ ಅಧಿಕಾರಿಯ ಇನ್ನೊಂದು ಏಟು ಅವನ ತಲೆಗೆ ಬಿದ್ದಿತು. ಅವನ
ಷರಾಯಿ ಮೊಳಕಾಲಿನ ಬಳಿ ಸಡಿಲವಾಗಿ ಉಬ್ಬಿಕೊಂಡಿತು. ನಿಧಾನವಾಗಿ ನೆಲಕ್ಕೆ ಕುಸಿದ

"ಹೊಡೆಯಬೇಡಿ! ಅವನು ಮುದುಕ!" ಎಂದು ಗಾವ್ರಿಕ್ ಹತಾಶನಾಗಿ ಕಣ್ಣೀರು ಸು
ಸುತ್ತ ಪೋಲೀಸ್ ಅಧಿಕಾರಿಯ ಕಡೆಗೆ ಓಡಿದ.

ಆದರೆ ಅಧಿಕಾರಿ ಅಷ್ಟು ಹೊತ್ತಿಗೆ ದಾಪುಗಾಲು ಹಾಕುತ್ತ ಗುಡಿಸಿಲಿನ ಹೊರಗೆ ಬರುತ್ತಿದ್ದ
"ಈ ದುಷ್ಟನನ್ನು ವಶಕ್ಕೆ ತೆಗೆದುಕೊಳ್ಳಿ!" ಎಂದು ಕೂಗು ಹಾಕಿದ.

ಪೋಲೀಸಿನವರು ಅಜ್ಜನನ್ನು ಹಿಡಿದುಕೊಂಡು ಅವನ ತೋಳುಗಳನ್ನು ತಿರುಚಿ ಅವನ
ಬೆನ್ನಿನ ಹಿಂದಕ್ಕೆ ಸೇರಿಸಿದರು. ಹುಲ್ಲಿನ ಹೊರೆಯೋ ಎಂಬಂತೆ ಅವನನ್ನು ಎಳೆದುಕೊಂಡು
ಹೊರಟರು. ಗಾವ್ರಿಕ್ ನೆಲದ ಮೇಲೆ ದೊಪ್ಪನೆ ಬಿದ್ದ. ಕ್ರೋಧದಿಂದ ಅಳುತ್ತ ಮುಷ್ಟಿಯನ್ನು
ಕಡಿಯುತ್ತಿದ್ದ. ಸ್ವಲ್ಪ ಹೊತ್ತು ಅಲ್ಲಾಡದೆ ಹಾಗೆಯೇ ಕುಳಿತಿದ್ದ. ಸರಿಯಾಗಿ ಕೇಳಲು ಆಗು
ತ್ತಿದ್ದ ಒಂದೇ ಕಿವಿಯಿಂದ ಹೊರಗಿನ ಗಲಾಟೆಯನ್ನೂ ಇರುಳಿನ ಸದ್ದು ಗದ್ದಲಗಳನ್ನೂ ಆಲಿಸು
ತ್ತಿದ್ದ. ಅವನ ಇನ್ನೊಂದು ಕಿವಿ ಕಿವುಡಾಗಿತ್ತು. ಆಗಾಗ್ಗೆ ತನ್ನ ಬೆರಳನ್ನು ಸರಿಯಾಗಿದ್ದ
ಕಿವಿಗೆ ಬಿರಡೆಯಂತೆ ಭದ್ರವಾಗಿ ಹಾಕಿಕೊಂಡು ತನ್ನನ್ನು ಆವರಿಸಿದ ಸಂಪೂರ್ಣ ನೀರವತೆಯ
ಅನುಭವ ಮಾಡಿಕೊಳ್ಳಲಾರಂಭಿಸಿದ. ಅದೊಂದು ಭಯಾನಕ ನೀರವತೆಯಾಗಿತ್ತು. ಅದರಲ್ಲಿ
ಅಜ್ಞಾತವಾದ ಯಾವುದೋ ಅಪಾಯ ಹೊಂಚುಕಾಯುತ್ತಿರುವಂತೆ ಅವನಿಗೆ ತೋರಿತು. ಆ
ಬಳಿಕ ಅದುವರೆಗೂ ಬಂಧಿತವಾಗಿದ್ದ ಶಬ್ದಗಳನ್ನು ಒಳಕ್ಕೆ ಬಿಡಲು ಆತುರ ಪಡುವನೋ
ಎಂಬಂತೆ ಬೆರಳನ್ನು ಕಿವಿಯಿಂದ ಹೊರಕ್ಕೆ ತೆಗೆದ. ಒಂದು ಕಿವಿ ಒಂದೇ ಕಾಲದಲ್ಲಿ ಎಲ್ಲ
ಶಬ್ದಗಳನ್ನೂ ಗ್ರಹಿಸಲಸಮರ್ಥವಾಗಿತ್ತು. ಮೊದಲು ಮೇಲಿಂದ ಮೇಲೆ ಬರುತ್ತಿದ್ದ ಸಮುದ್ರದ
ಸುಯ್ಯೆನ್ನುವ ಶಬ್ದ ಕೇಳಿಬಂದಿತು. ಆಗ ಮತ್ತಾವುದೂ ಕೇಳಿಸುತ್ತಿರಲಿಲ್ಲ. ಆ ಬಳಿಕ
ಸಮುದ್ರದ ಶಬ್ದವನ್ನು ಬಂದು ಮಾಡಿ ಕ್ರಿಕೆಟ್ ಹುಳುಗಳ ಸಂಗೀತವು ಒಳನುಗ್ಗಿತು. ಅನಂತರ
ಸರಸರ ಶಬ್ದದೊಡನೆ ಗಿಡಗಳ ಮೇಲಿನಿಂದ ಬೀಸಿ ಬರುವ ಬಿಸಿಗಾಳಿ ಆ ಕತ್ತಲಿನ ಜಗತ್ತನ್ನು
ತುಂಬುತ್ತಿತ್ತು. ಆಗ ಸಮುದ್ರಕ್ಕಾಗಲಿ ಕ್ರಿಕೆಟ್‌ಗಳಿಗಾಗಲಿ ಅವಕಾಶವಿರುತ್ತಿರಲಿಲ್ಲ. ತರುವಾಯ
ಎಣ್ಣೆ ಮುಗಿದ ದೀಪದ ಚರಚರ ಶಬ್ದವಲ್ಲದೆ ಮತ್ತೇನೂ ಕಿವಿಯನ್ನು ಪ್ರವೇಶಿಸುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ತಾನು ಏಕಾಂಗಿಯಾಗಿದ್ದೇನೆಂಬ ಭಾವನೆ ಗಾವ್ರಿಕನನ್ನು ಆವರಿಸಿತು
ತಕ್ಷಣ ಮೇಲಕ್ಕೆ ಜಿಗಿದು ದೀಪವನ್ನು ಆರಿಸಿ ಅಜ್ಜನನ್ನು ನೋಡಲು ಧಾವಿಸಿದ.

ಸುಖಕರವಾದ ಸೊಬಗಿನ ಆಗಸ್ಟ್ ತಿಂಗಳ ರಾತ್ರಿ ಜಗತ್ತನ್ನು ವ್ಯಾಪಿಸಿತ್ತು. ಮಿರುಗ
ತ್ತಿದ್ದ ಕಪ್ಪು ಆಗಸವು ಓಡುತ್ತಿದ್ದ ಬಾಲಕನಮೇಲೆ ನಕ್ಷತ್ರದ ಮಳೆಯನ್ನು ಸುರಿಸುತ್ತಿದ್ದಂ
ತೋರುತ್ತಿತ್ತು. ಕ್ರಿಕೆಟ್‌ಗಳ ಜರ್ರೆನ್ನುವ ಶಬ್ದವು ಗಗನದ ಜ್ಯೋತಿಪಥದಷ್ಟು ಔನ್ನತ್ಯ
ಪ್ರವಹಿಸುತ್ತಿತ್ತು. ಆದರೆ ಈ ಪ್ರಕೃತಿ ಸೌಂದರ್ಯದಿಂದ ಹಿಂಸೆ ದೌರ್ಜನ್ಯಕ್ಕೊಳಗಾದವನಿ
ಏನು ಉಪಯೋಗ. ಈ ಸೌಂದರ್ಯ ಅವನಿಗೆ ಸಂತೋಷವುಂಟುಮಾಡುವ ಸಾಮರ್ಥ್ಯವನ್ನು
ಪಡೆದಿರಲಿಲ್ಲ,

ಅಜ್ಜ ಮತ್ತು ಅವನನ್ನು ಎಳೆದುಕೊಂಡು ಹೋಗುತ್ತಿದ್ದ ಇಬ್ಬರು ಪೋಲೀಸಿನವರ

ಹಿಡಿಯುವ ಹೊತ್ತಿಗೆ ಅವರು ಆಗಲೆ ಪೋಲೀಸ್ ಠಾಣೆಯ ಹೊರಗಡೆಗಿರುವ ಸ್ತಾರೋ-ಪೊರ್ಟೊ ಫ್ರಾಂಕೊವಸ್ಕಾಯ ರಸ್ತೆಯಲ್ಲಿದ್ದರು. ಅವರು ಒಂದು ಕುದುರೆ ಗಾಡಿಯಲ್ಲಿ ಹೋಗುತ್ತಿದ್ದರು. ಒಬ್ಬ ಪೋಲೀಸಿನವನು ಕುಳಿತಿದ್ದ, ಇನ್ನೊಬ್ಬ ನಿಂತಿದ್ದ. ಪೀಠದಿಂದ ಕೆಳಗಡೆ ಗಾಡಿಯ ನೆಲದ ಮೇಲೆ ಪೋಲೀಸಿನವನ ಕಾಲಬದಿಯಲ್ಲಿ ಅಜ್ಜ ಬಿದ್ದಿದ್ದ. ಗಾಡಿಗೆ ಹತ್ತಲು ಇರುವ ಮೆಟ್ಟಲಿಗೆ ಅವನ ತಲೆ ಹೊಡೆಯುತ್ತಿತ್ತು. ರಸ್ತೆಯ ಗ್ಯಾಸ್ ದೀಪದಿಂದ ಬಂದ ಬೆಳಕು ಅಜ್ಜನ ಮುಖದ ಮೇಲೆ ಮಿಣುಕುತ್ತ ಅವನ ಮುಖದ ಮೇಲಿನ ಧೂಳು ಮತ್ತು ರಕ್ತದ ಕಲೆಯನ್ನು ಗುರುತಿಸುತ್ತಿತ್ತು.

ಗಾವ್ರಿಕ್ ಗಾಡಿಯ ಪಕ್ಕಕ್ಕೆ ನುಗ್ಗಿದ. ಆದರೆ ಗಾಡಿ ಪೋಲೀಸ್ ಠಾಣೆಯ ಎದುರಿಗೆ ಬಂದು ನಿಂತಿತು. ಮುಗ್ಗರಿಸುತ್ತಿದ್ದ ಮುದುಕನನ್ನು ಪೋಲೀಸಿನವರು ಪೋಲೀಸ್ ಚೌಕಿಯ ಆವರಣದ ಹೊರ ಬಾಗಿಲಿನ ಮೂಲಕ ಒಳಕ್ಕೆ ಎಳೆದುಕೊಂಡು ಹೋದರು. "ಅಜ್ಜ!" ಗಾವ್ರಿಕ್ ಕೂಗಿದ. ಒಬ್ಬ ಸಿಪಾಯಿ ಕತ್ತಿಯ ಒರೆಯಿಂದ ಚುರುಕು ಮುಟ್ಟುವಂತೆ ಗಾವ್ರಿಕನ ಹೆಕ್ಕತ್ತಿನ ಮೇಲೆ ಒಂದುಬಿಟ್ಟ. ಹೆಬ್ಬಾಗಿಲು ಬಿರುಸಿನಿಂದ ಮುಚ್ಚಿಕೊಂಡಿತು. ಹುಡುಗ ಒಬ್ಬನೇ ಹಿಂದೆ ಉಳಿದ.

೨೮. ಹಟಗಾತಿ ಚಿಕ್ಕಮ್ಮ ತಾತ್ಯಾನ

ಪೇತ್ಯನ ಪರಮ ಸಂತೋಷದ ಮತ್ತು ಗೆಲುವಿನ ಸಮಯ ಅದು. ಮಧ್ಯಾಹ್ನದ ಒಂದುಗಂಟೆಯ ಹೊತ್ತಿಗೆ ತನ್ನ ಪರಿಚಿತರನ್ನೆಲ್ಲ ಕಂಡು ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳನ್ನು ಒದಗಿಸುವ ಪ್ರಾವೇಶಿಕ ಶಾಲೆಯ ಕುರುಹಾದ ಟೋಪಿಯನ್ನು ಅವರಿಗೆ ಹೆಮ್ಮೆಯಿಂದ ತೋರಿಸುತ್ತ ಅವನು ಅಂದು ಉತ್ತೀರ್ಣನಾದ ಪರೀಕ್ಷೆಯ ವಿವರಗಳನ್ನು ಸಡಗರದಿಂದ ಹೇಳಿಕೊಂಡ.

ವಾಸ್ತವಾಂಶವೇನೆಂದರೆ ಅಲ್ಲಿ ಅಂಥ ಹೇಳಿಕೊಳ್ಳುವ ವಿಷಯವೇನಿರಲಿಲ್ಲ. ನಿಜವಾದ ಯಾವ ಪರೀಕ್ಷೆಯೂ ನಡೆದಿರಲಿಲ್ಲ. ಅದೊಂದು ಪ್ರವೇಶೋಪ ಪರೀಕ್ಷೆಯಾಗಿತ್ತು. ಹದಿನೈದು ನಿಮಿಷಗಳ ಕಾಲ ಪರೀಕ್ಷೆ ನಡೆದಿದ್ದಿತು. ಪರೀಕ್ಷೆ ಬೆಳಗಿನ ಹತ್ತೂವರೆ ಗಂಟೆಗೆ ಆರಂಭವಾಯಿತು. ಹನ್ನೊಂದುಗಂಟೆ ಐದು ನಿಮಿಷಗಳ ಸಮಯದಲ್ಲಿ ಶಾಲೆಯ ಪಕ್ಕದ ಅಂಗಡಿಯವನು ಹುಡುಗನಿಗೆ ಅವನ ಹಳೆಯ ಹುಲ್ಲಿನ ಟೋಪಿಯನ್ನು ಕಾಗದದಲ್ಲಿ ಸುತ್ತಿಕೊಡುತ್ತ ಮುಗುಳ್ನಗೆಯಿಂದ ಬಗ್ಗಿ ನಮಸ್ಕರಿಸುತ್ತಿದ್ದ. ಪೇತ್ಯ ಅಂಗಡಿಯ ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಟೋಪಿಯನ್ನು ತನ್ನ ತಲೆಗೇರಿಸಿದ ಸಮಯದಿಂದ ಆ ಟೋಪಿಯನ್ನು ಕೆಳಕ್ಕೆ ಇಳಿಸಿಯೇ ಇರಲಿಲ್ಲ. ಸಾಯಂಕಾಲವಾದರೂ ಆ ಟೋಪಿಗೆ ಅವರೋಹಣದ ಅಸಂದರ್ಭ ಬಂದಿರಲಿಲ್ಲ.

"ಎಷ್ಟು ಭರ್ಜರಿಯಾಗಿ ಉತ್ತರಕೊಟ್ಟುಬಿಟ್ಟೆ ನಾನು ಪರೀಕ್ಷೆಯಲ್ಲಿ!" ಚಿಕ್ಕಮ್ಮ ತಾತ್ಯಾನ ಳೊಡನೆ ಬೀದಿಯಲ್ಲಿ ಬರುತ್ತಿದ್ದಾಗಲೇ ಅವನು ಸಂಭ್ರಮ ಉದ್ವೇಗಗಳಿಂದ ನುಡಿದ.

ತನ್ನ ಹೊಸ ಟೋಪಿಯಲ್ಲಿ ತಾನು ಹೇಗೆ ಕಾಣುತ್ತೇನೆ ಎಂಬುದನ್ನು ತಿಳಿದು ಹಿಗ್ಗುವ ಸಲುವಾಗಿ ದಾರಿಯಲ್ಲಿ ಕಂಡ ಕಂಡ ಕಿಟಕಿಗಳ ಗಾಜಿನಲ್ಲಿ ತನ್ನ ಪ್ರತಿಬಿಂಬವನ್ನು ಇಣಿಕಿ

ನೋಡಲು ಪ್ರಯತ್ನಿಸುತ್ತಿದ್ದ.

"ಸಮಾಧಾನವಾಗಿರು ಮಗು. ಅದು ಪರೀಕ್ಷೆಯಲ್ಲ, ಒಂದು ಉಪಪರೀಕ್ಷೆ, ಅಷ್ಟೆ" ಎಂದು ಚಿಕ್ಕಮ್ಮ ಟೀಕಿಸಿದಳು. ನಗುವನ್ನು ತಡೆಯುವ ಪ್ರಯತ್ನದಲ್ಲಿ ಅವಳ ಗದ್ದ ಕಂಪಿಸುತ್ತಿತ್ತು.

"ಯಾಕೆ ಚಿಕ್ಕಮ್ಮ, ನಿನಗೆ ಹ್ಯಾಗೆ ಗೊತ್ತು ಅದು ?" ತನಗೆ ಸಾಧ್ಯವಿದ್ದಷ್ಟು ಎತ್ತರದ ದನಿಯಲ್ಲಿ ಪೇತ್ಯ ಕೂಗಿದ. ಕೋಪದಿಂದ ಅವನ ಮುಖ ಕೆಂಡವಾಯಿತು. ಕಾಲಿನಿಂದ ನೆಲವನ್ನು ಒದ್ದ. ಇನ್ನೇನು ಕಣ್ಣುಗಳಲ್ಲಿ ನೀರು ಹರಿಯಬೇಕು. "ನೀನೇನೂ ಪರೀಕ್ಷೆಯನ್ನು ನೋಡಲಿಲ್ಲ. ಆದರೂ ನಿನಗೆ ಎಲ್ಲ ಗೊತ್ತಿರುವ ಹಾಗೇ ಮಾತಾಡುತ್ತೀಯಲ್ಲ! ಅದು ನಿಜವಾದ ಪರೀಕ್ಷೆಯೇ. ನೀನು ಸ್ವಾಗತದ ಕೊಠಡಿಯಲ್ಲಿ ಕುಳಿತಿದ್ದೆ. ನಿನಗೆ ಆ ವಿಷಯವನ್ನು ಕುರಿತು ಮಾತಾಡುವ ಅಧಿಕಾರವಿಲ್ಲ. ಅದು ಪರೀಕ್ಷೆಯೇ, ನಿಜವಾದ ಪರೀಕ್ಷೆ! ನಾನು ಹೇಳುತ್ತೇನೆ ಕೇಳು."

"ನೀನು ಬುದ್ಧಿವಂತ, ನಾನು ತಿಳಿಗೇಡಿ ಎಂದು ಬೇಕಾದರೂ ತಿಳಿದುಕೋ. ಆದರೆ ವಾಸ್ತವವಾಗಿಯೂ ಅದು ಉಪಪರೀಕ್ಷೆಯೇ ಹೊರತು ಬೇರೆ ಅಲ್ಲ."

"ಅಲ್ಲ, ಅಲ್ಲ. ಅದು ದೊಡ್ಡ ಪರೀಕ್ಷೆ!"

"ಗಡ್ಡ ಕೆರೆದಿರಲಿಲ್ಲ, ಕತ್ತರಿಸಿತ್ತು ಎಂದು ಹೇಳಿದ ಹಟಮಾರಿಯ ಹಾಗೆ ನೀನು ಹೇಳಿದ್ದು ಸರಿ ಎಂದು ಹಟಮಾಡುತ್ತಿದ್ದೀಯಲ್ಲ."

ಚಿಕ್ಕಮ್ಮ ಪ್ರಾಚೀನ ಉಕ್ರೇನ್ ದೇಶದ ಹಾಸ್ಯವನ್ನು ಉದಾಹರಿಸಿ ಮಾತಾಡಿದಳು. ಒಬ್ಬ ಹಟಮಾರಿಯಿದ್ದ. ಅವನಿಗೂ ಅವನ ಹೆಂಡತಿಗೂ ಒಬ್ಬ ಗುಮಾಸ್ತನ ಗಡ್ಡದ ವಿಷಯದಲ್ಲಿ ವಿವಾದವೆದ್ದಿತು. ಹೆಂಡತಿ ಏನೇನು ಹೇಳಿದರೂ ಗಂಡ ಗುಮಾಸ್ತನ ಗಡ್ಡವನ್ನು ಕತ್ತರಿಸಿತ್ತೆಂದೇ ವಾದಿಸುತ್ತಿದ್ದ. ಕೊನೆಗೆ ಕೋಪದಿಂದ ತಾಳ್ಮೆಗೆಟ್ಟ ಅವನ ಹೆಂಡತಿ ಗಂಡನನ್ನು ಎತ್ತಿಕೊಂಡು ಹೋಗಿ ಹೊಳೆಗೆ ಎತ್ತಿ ಹಾಕಿದಳು. ಅಲ್ಲೂ ಕೂಡ ಅವನು "ಗಡ್ಡವನ್ನು ಕತ್ತರಿಸಿತ್ತು" ಎಂದು ಕೂಗಿಕೊಳ್ಳಲಾರಂಭಿಸಿದ. ಸ್ವಲ್ಪ ಹೊತ್ತಿನಲ್ಲೇ ತಲೆ ನೀರಿನೊಳಕ್ಕೆ ಮುಳುಗಿತು. ಆಗಲೂ ಅವನ ಕೈ ನೀರಿನಿಂದ ಮೇಲಕ್ಕೆದ್ದು ಬೆರಳುಗಳ ಮೂಲಕ ಕತ್ತರಿ ಕತ್ತರಿಸುವಂತೆ ಚಲಿಸುತ್ತಿತ್ತು.

ಆದರೆ ಪೇತ್ಯ ಈ ಸೂಚನೆಯನ್ನು ಗ್ರಹಿಸಿ ಸುಮ್ಮನಾಗಲಿಲ್ಲ. ಕಣ್ಣೀರು ಸುರಿಸುತ್ತ "ಅದು ಪರೀಕ್ಷೆ ದೊಡ್ಡ ಪರೀಕ್ಷೆ!" ಎಂದು ಹೇಳುತ್ತಲೇ ಬಂದ.

ತಾತ್ಯಾನ ಚಿಕ್ಕಮ್ಮ ದಯಾಳುವಾಗಿದ್ದಳು. ತನ್ನ ಸೋದರಳಿಯ ತಾನು ಏನೋ ವಿಜಯವನ್ನು ಗಳಿಸಿದ್ದೇನೆಂಬ ಹೆಮ್ಮೆಯಿಂದ ಉಬ್ಬಿಹೋಗಿದ್ದಾನೆ. ಅದನ್ನು ಕಿತ್ತುಕೊಂಡು ಅವನಿಗೆ ತಾನೇಕೆ ದುಃಖವುಂಟುಮಾಡಬೇಕು. ನಿಜವಾದ ಪರೀಕ್ಷೆ ಎನ್ನುವುದರಿಂದ ಅವನಿಗೆ ಅಷ್ಟೊಂದು ಆನಂದವಾಗುತ್ತಿದ್ದರೆ ಅದನ್ನು ಪಡೆದುಕೊಳ್ಳಲಿ. ಈ ಆನಂದದ ದಿನದಲ್ಲಿ ಅವನನ್ನು ತಾನೇಕೆ ರೇಗಿಸಬೇಕು? ಹೀಗೆ ಅವಳು ತನ್ನ ಅಂತರಂಗದಲ್ಲಿ ವಾದಿಸಿದಳು. "ಪ್ರಾಯಃ ನಾನೇ ತಪ್ಪು ತಿಳಿದಿರಬಹುದು. ಅದೊಂದು ಪರೀಕ್ಷೆಯೆಂದೇ ನಂಬೋಣ." ಎಂದು ಹೇಳಿ ಮಾರ್ಮಿಕವಾಗಿ ನಕ್ಕಳು. ಪೇತ್ಯ ಹಿಗ್ಗಿ ಹೀರೇಕಾಯಾದ.

"ಅದೂ **ಎಂಥ** ಪರೀಕ್ಷೆ?"

ಆದರೆ ಪೇತ್ಯನ ಮನಸ್ಸಿನಾಳದಲ್ಲಿ ಸಂದೇಹ ತಲೆಹಾಕಿತು. ಎಷ್ಟು ಬೇಗ ಮುಗಿಯಿತು

ಮತ್ತು ಎಷ್ಟು ಸುಲಭವಾಗಿತ್ತು. ಇದನ್ನು ಪರೀಕ್ಷೆ ಎನ್ನಬಹುದೆ ಎಂದುಕೊಂಡ. ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಇಬ್ಬಿಬ್ಬರನ್ನೇ ಕೋಣೆಯೊಳಕ್ಕೆ ಬಿಡಲಾಯಿತು. ನೀಲಿಯ ಬಟ್ಟೆಯನ್ನು ಹೊದಿಸಿದ್ದ ಉದ್ದವಾದ ಮೇಜು ಆ ಕೋಣೆಯಲ್ಲಿದ್ದಿತು. ಮೇಜಿನ ಹಿಂಭಾಗದಲ್ಲಿ ನಿರ್ದಯ ವಾದ ಪರೀಕ್ಷಕರು ಕಳಿತಿದ್ದರು. ಚಿನ್ನದ ಬಣ್ಣದ ಗುಂಡಿಗಳ ನೀಲಿಯ ಸಮವಸ್ತ್ರಗಳನ್ನು ಅವರು ಧರಿಸಿದ್ದರು. ಚಿನ್ನದ ಚೌಕಟ್ಟಿನ ಕನ್ನಡಕ ಕಣ್ಣಿನಮೇಲೆ ಹೊಳೆಯುತ್ತಿತ್ತು. ಮುಂಭಾಗದಲ್ಲಿ ಎದೆಯಮೇಲೆ ಪದಕಗಳನ್ನು ತಗುಲಿಸಿಕೊಂಡಿದ್ದರು. ಕೋಳಿಮೊಟ್ಟೆಯ ಮೇಲಿನ ಚಿಪ್ಪಿನಂತೆ ಗರಿಮುರಿಯಾಗಿದ್ದ ಗಂಜಿ ಹಾಕಿದ ಷರಟಿನ ಮುಂಭಾಗ ಮತ್ತುಕೈಪಟ್ಟಿಗಳು ಅಲ್ಲಾಡಿದಾಗ ಚರಚರನೆ ಶಬ್ದ ಮಾಡುತ್ತಿದ್ದುವು. ಅವರುಗಳಲ್ಲಿ ರೇಷ್ಮೆಯ ನಿಲುವಂಗಿಯನ್ನು ಧರಿಸಿ ಹೆಂಗಸರಂತೆ ಕುರುಳುಗಳನ್ನು ಇಟ್ಟುಕೊಂಡಿದ್ದ ಒಬ್ಬ ಪಾದ್ರಿಯು ಎದ್ದು ಕಾಣುತ್ತಿದ್ದನು.

ಪೇತ್ಯ ಅವರೆದುರಿಗೆ ಹೋಗಿ ನಿಂತನೋ ಇಲ್ಲವೋ ಅವನ ಉತ್ಸಾಹ ತಗ್ಗಿತು, ಕಾಲು ತಣ್ಣಗಾಯಿತು, ಕೆನ್ನೆಯಮೇಲೆ ಮಂಜಿನಷ್ಟು ಶೀತಲವಾದ ಬೆವರು ಹೊರಟಿತು. ಅಂಥ ಸಮಯಗಳಲ್ಲಿ ಆಗಬಹುದಾದ ಚಿಹ್ನೆಗಳೆಲ್ಲವೂ ಪೇತ್ಯನಲ್ಲಿ ತಲೆದೋರಿದುವು.

ಪರೀಕ್ಷೆಯ ವಿಷಯವನ್ನು ಆಲೋಚಿಸಿ ನೋಡಿದ ಪೇತ್ಯ. ಇಲ್ಲ, ಖಂಡಿತವಾಗಿಯೂ ಅದೊಂದು ಉಪಪರೀಕ್ಷೆಯಾಗಿತ್ತು. ಅದರಲ್ಲಿ ಸಂಶಯವೇನೂ ಇರಲಿಲ್ಲ ಎಂಬುದಾಗಿ ಪೇತ್ಯ ಈಗ ಕಂಡುಕೊಂಡ.

ಪರೀಕ್ಷಾರ್ಥಿಗಳು ಬೆಂಚುಗಳ ಮೇಲೆ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತ ಕೂಡಲೇ ಪರೀಕ್ಷಕರಲ್ಲೊಬ್ಬರು ಮೇಜಿನ ಮೇಲಿನ ಒಂದು ಕಾಗದದ ಹಾಳೆಯನ್ನು ಕಣ್ಣಿನ ಹತ್ತಿರಕ್ಕೆ ಹಿಡಿದುಕೊಂಡು ಒಂದೊಂದು ಪದವನ್ನೂ ಸುಸ್ಪಷ್ಟವಾಗಿಯೂ ಸುಂದರವಾಗಿಯೂ ಉಚ್ಚರಿಸುತ್ತ ಹೇಳಿದರು: "ಸರಿ, ಇನ್ನು ಪ್ರಾರಂಭಿಸೋಣ. ಅಲೆಗ್ಸಾಂದ್ರೋವ್ ಬೋರಿಸ್. ಅಲೆಕ್ಸಾಂದ್ರೋವ್ ನಿಕೊಲಾಯ್, ಬಾಚಿ ಪ್ಯೋತ್ರ್."

ಪ್ರತಿಧ್ವನಿಯನ್ನು ಕೊಡುತ್ತಿದ್ದ ಆ ಜನಸಂದಣಿಯಿಲ್ಲದ ಕೊಠಡಿಯಲ್ಲಿ ವಿಚಿತ್ರವಾಗಿ ಉಚ್ಚರಿಸಿದ ತನ್ನ ಪೂರ್ಣ ಹೆಸರನ್ನು ಕೇಳಿದಾಗ ಪೇತ್ಯನ ಹೊಟ್ಟೆ ಕಿವಿಚಿದಂತಾಯಿತು. ಆ ಭಯದ ಗಳಿಗೆ ಅಷ್ಟು ಬೇಗ ಬರುವುದೆಂದು ಅವನು ನಿರೀಕ್ಷಿಸಿರಲಿಲ್ಲ. ತೀರ ಅನಿರೀಕ್ಷಿತವಾಗಿ ತನ್ನ ಪರೀಕ್ಷೆಯ ಗಳಿಗೆ ಬಂದುದರಿಂದ ಪೇತ್ಯನ ಮುಖ ಕೆಂಪೇರಿತು. ಅವನು ಮೂರ್ಛೆ ಬೀಳುವ ಸ್ಥಿತಿಯಲ್ಲಿದ್ದ. ಹೇಗೋ ಆ ಹೊಳೆಯುತ್ತಿದ್ದ ನೆಲದ ಮೇಲೆ ನಡೆದುಕೊಂಡು ಮೇಜಿನ ಬಳಿಗೆ ಹೋದ. ಒಬ್ಬೊಬ್ಬ ವಿದ್ಯಾರ್ಥಿಯೂ ಒಬ್ಬೊಬ್ಬ ಪರೀಕ್ಷನ ಮುಂದೆ ನಿಂತ. ಪೇತ್ಯನ ಮೊದಲ ಪರೀಕ್ಷಕನಾಗುವ ಸರದಿ ಪಾದ್ರಿಗೆ ಬಿದ್ದಿತು.

"ಒಳ್ಳೆಯದಾಯಿತು" ಎಂದು ಹೇಳುತ್ತ ಆ ಭಾರಿ ವ್ಯಕ್ತಿ ತನ್ನ ಅಂಗಿಯ ಅಳ್ಳಕವಾದ ತೋಳುಗಳನ್ನು ಮೇಲಕ್ಕೆಳೆದುಕೊಂಡರು. ಬೆಳ್ಳಿಯ ಸರಪಣಿಗೆ ತಗಲಿಸಿ ಕತ್ತಿಗೆ ನೇತುಹಾಕಿಕೊಂಡಿದ್ದ ಕ್ರಿಸ್ತಪ್ರತಿಮೆಯ ಶಿಲುಬೆಯನ್ನು ಗೂಡಿನಂತಿದ್ದ ತನ್ನ ಎದೆಗೆ ಒತ್ತಿಕೊಂಡರು. ಕಾಫಿ ಬೀಜಗಳಲ್ಲಿ ಹಳ್ಳವಿರುವಂತೆ ಕೊರೆದಿದ್ದ ಚಪ್ಪಟೆಯಾಕಾರದ ಕೊಂಡಿಗಳನ್ನು ಸೇರಿಸಿ ಆ ಸರಪಣಿಯನ್ನು ತಯಾರಿಸಲಾಗಿತ್ತು.

"ಹತ್ತಿರಕ್ಕೆ ಬಾಪ್ಪ, ಮಗು. ನಿನ್ನ ಹೆಸರೇನು?"

"ಪೇತ್ಯ."

"ಪೇತ್ಯ ಎಂದು ಅಲ್ಲ ಕಂದ, ಪ್ಯೋತ್ರ್ ಎಂದು ಹೇಳು. ಪೇತ್ಯನನ್ನು ಮನೆಯಲ್ಲೇ ಬಿಟ್ಟು ಬಂದಿದ್ದೀಯೆ?. ನಿನ್ನ ಹೆಸರಿನ ಮುಂದಿನ ಭಾಗ ಏನು ?"

"ಬಾಚಿ."

"ಔದ್ಯೋಗಿಕಶಾಲೆಯಲ್ಲಿ ಉಪಾಧ್ಯಾಯನಾಗಿರುವ ವಾಸಿಲಿ ಪೆತ್ರೋವಿಚ್ಚನ ಮ… ಅಲ್ಲವೆ ?"

"ಹೌದು."

ಧೂಮಪಾನಮಾಡುವವನ ಭಂಗಿಯಲ್ಲಿ ಕುರ್ಚಿಯನ್ನು ಒರಗಿಕೊಂಡು ಕುಳಿ… ಪೇತ್ಯನ ಕಡೆಗೆ ಕಣ್ಣನ್ನು ಕಿರಿದುಮಾಡಿಕೊಂಡು ನೋಡುತ್ತ ವ್ಯಂಗ್ಯವಾಗಿ ಪಾದ್ರಿ ನಕ್ಕರ… ಅದರ ಅರ್ಥವೇನೆಂದು ಪೇತ್ಯ ತಿಳಿದುಕೊಳ್ಳಲಾರದೆ ಹೋದ. "ನನಗೆ ಆತನ ಪರಿಚಯವಿ… ಯೆಂದು ಹೇಳಬೇಕು. ಉದಾರ ಅಭಿಪ್ರಾಯಗಳುಳ್ಳ ಮಹನೀಯ ಅವನು. ಸರಿ, ಈಗ— ಆ ಚಿಕ್ಕ ಕುರ್ಚಿಯ ಹಿಂಭಾಗಕ್ಕೆ ತನ್ನ ಭಾರವನ್ನು ಬಿಟ್ಟು ಹಿಂದಕ್ಕೆ ಬಾಗಿದಾಗ ಕುರ್ಚಿ ತ… ಹಿಂಗಾಲುಗಳ ಮೇಲೆ ಮಾತ್ರ ನಿಂತಿತ್ತು.

"ನಿನಗೆ ಯಾವ ಯಾವ ಪ್ರಾರ್ಥನೆಗಳು ಗೊತ್ತಿವೆ? ಕ್ರೈಸ್ತಮತದ ಸೂತ್ರಗಳು ಗೊತ್ತೊ…

"ಹೌದು, ಗೊತ್ತಿದೆ."

"ಒಪ್ಪಿಸು, ನೋಡೋಣ."

ಪೇತ್ಯ ಶ್ವಾಸಕೋಶಗಳ ತುಂಬ ಗಾಳಿಯನ್ನು ತುಂಬಿಕೊಂಡ. ವಿರಾಮಸ್ಥಾನಗಳನ… ಪೂರ್ಣವಾಗಿ ಕೈಬಿಟ್ಟು ತಾನು ಉರುಹಚ್ಚಿದ್ದ ಸೂತ್ರಗಳನ್ನು ಒಂದೇ ಉಸಿರಿನಲ್ಲಿ ಹೊರಚೆಲ್ಲಿ…

"ಭೂಸ್ವರ್ಗಗಳ ದೃಶ್ಯಾದೃಶ್ಯವಸ್ತುಗಳ ನಿರ್ಮಾತೃವಾದ ಪಿತೃಸ್ವರೂಪನಾದ ಭಗವಂ… ನನ್ನು ನಾನು ನಂಬುತ್ತೇನೆ. ಏಸುಕ್ರಿಸ್ತ ಸ್ವಾಮಿಯ....."

ಉಸಿರುಕಟ್ಟಿದುದರಿಂದ ಒಳಕ್ಕೆ ಶ್ವಾಸವನ್ನು ಎಳೆದುಕೊಳ್ಳಲು ವಾಕ್ಯವನ್ನು ನಿಲ್ಲಿಸಿ… ತನಗೆ ಮರೆತು ಹೋಯಿತೆಂದು ಪಾದ್ರಿ ಎಲ್ಲಿ ತಿಳಿದುಕೊಂಡು ಬಿಡುತ್ತಾರೋ ಎಂದು ಆತು… ದಿಂದ ಒಂದೇಸಲ ಗಾಳಿಯನ್ನು ನುಂಗಿದ. ಆದರೆ ಪೇತ್ಯ ಮುಂದಿನದನ್ನು ಆರಂಭಿಸುವುದ… ಮೊದಲೇ ಪಾದ್ರಿಯು ಕೈಬೀಸಿ ಹೇಳಿದರು.

"ಸಾಕು. ಸಾಕು. ಮುಂದಿನ ಪರೀಕ್ಷಕರ ಬಳಿಗೆ ಹೋಗು."

ಈಗ ಪೇತ್ಯ ಗಣಿತ ಪರೀಕ್ಷಕರ ಮುಂದೆ ಹೋಗಿ ನಿಂತ.

"ಎಲ್ಲಿಯವರೆಗೆ ಎಣಿಸಬಲ್ಲೆ ನೀನು?"

"ಎಲ್ಲಿಯವರೆಗೆ ಬೇಕಾದರೂ ಎಣಿಸುತ್ತೇನೆ." ಧರ್ಮದ ಪರೀಕ್ಷೆಯಲ್ಲಿನ ತನ್ನ ವಿಜ… ದಿಂದ ಧೈರ್ಯಗೊಂಡು ಪೇತ್ಯ ಉತ್ತರಕೊಟ್ಟ.

"ಸಂತೋಷ. ಹತ್ತುಲಕ್ಷದವರೆಗೆ ಎಣಿಸು."

ಮಂಜುಗಡ್ಡೆಯ ಬಿರುಕಿನೊಳಕ್ಕೆ ಕಾಲು ಜಾರಿ ಬಿದ್ದಂತಾಯಿತು ಪೇತ್ಯನಿಗೆ. ಪ್ರಶ… ಅರ್ಥವನ್ನು ಪೂರ್ಣವಾಗಿ ಗ್ರಹಿಸಲಾರದೆ ಉಸಿರು ಕಟ್ಟಿದಂತಾಗಿ ಒಂದು ಸಲ ಬಿಕ್ಕಳಿಸು… ಉಸಿರನ್ನು ಎಳೆದುಕೊಂಡ. ಎಲ್ಲಿಂದಲಾದರೂ ಸಹಾಯ ದೊರೆಯುತ್ತದೆಯೆನೋ ಎ…

ಹತಾಶನಾಗಿ ಸುತ್ತ ನೋಡಿದ. ಆದರೆ ಎಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ಗಣಿತದ ಪರೀಕ್ಷಕರು ಒಂದು ಪಕ್ಕಕ್ಕೆ ತಿರುಗಿ ಕನ್ನಡಕದ ಮೂಲಕ ನೋಡುತ್ತಿದ್ದರು. ಅವರ ಕನ್ನಡಕದ ಉಬ್ಬಾದ ಗಾಜಿನಲ್ಲಿ ಆ ಕೊಠಡಿಯ ಎರಡು ದೊಡ್ಡ ಕಿಟಕಿಗಳೂ, ಆ ಕಿಟಕಿಗಳಿಂದಾಚೆಗೆ ಶಾಲೆಯ ಉದ್ಯಾನದಲ್ಲಿದ್ದ ಮರಗಳೂ' ಸೇಂಟ್ ಪಾಂಟಿಲಿಮನ್ ಚರ್ಚಿನ ಗೋಳಾಕಾರದ ಗೋಪುರವೂ, ಕೊನೆಗೆ ಅಲೆಗ್ಸಾಂದ್ರೋವ್ಸ್ಕಿ ಅಗ್ನಿಶಾಮಕ ನಿಲ್ದಾಣದ ಕಾವಲ ಗೋಪುರವೂ ಪ್ರತಿಬಿಂಬಿಸಿದ್ದುವು.

ಹತ್ತುಲಕ್ಷದವರೆಗೆ ಎಣಿಸು! ಪೇತ್ಯ ತಬ್ಬಿಬ್ಬಾದ. ಆದರೆ ಧೈರ್ಯ ತಂದುಕೊಂಡು "ಒಂದು, ಎರಡು, ಮೂರು, ನಾಲ್ಕು, ಐದು, ಆರು. ಏಳು......" ಎಂದು ಆರಂಭಿಸಿದ. ಮಧ್ಯೆ ನಿಧಾನವಾಗಿ ತನ್ನ ಬೆರಳುಗಳನ್ನು ಮುರಿಯುತ್ತ ವಿಷಾದದಿಂದ ಮುಗುಳ್ನಕ್ಕ. "ಎಂಟು, ಒಂಬತ್ತು ಹತ್ತು, ಹನ್ನೊಂದು......"

ಗಣಿತದ ಪರೀಕ್ಷಕರು ಶಾಂತಚಿತ್ತರಾಗಿ ಕಿಟಕಿಯಿಂದಾಚೆ ನೋಡುತ್ತಿದ್ದರು. ಧೈರ್ಯ ವುಡುಗುತ್ತಿದ್ದ ಪೇತ್ಯ ಎಪ್ಪತ್ತೊಂಬತ್ತು ಎಂದಾಗ "ಸಾಕು. ನಿನಗೆ ಮಗ್ಗಿ ಬರುತ್ತದೆಯೋ?" ಎಂದು ಕೇಳಿದರು.

"ಒಂದೊಂದ್ಲು ಒಂದೋ, ಒಂದೆರಡ್ಲು ಎರಡೋ, ಒಂದ್ಮೂರ್ಲು ಮೂರೋ" ಪೇತ್ಯ ಎತ್ತರದ ದನಿಯಲ್ಲಿ ಎಲ್ಲಿ ಮಧ್ಯೆ ಸಾಕು ಎಂದುಬಿಡುತ್ತಾರೋ ಎಂಬ ಭಯದಿಂದ ಬೇಗ ಬೇಗ ಹೇಳಲಾರಂಭಿಸಿದ. ಆದರೆ ಪರೀಕ್ಷಕರು ತಲೆಯಲ್ಲಾಡಿಸಿ "ಸಾಕು" ಎಂದರು.

"ನನಗೆ ಕೂಡುವುದು, ಕಳೆಯುವುದು, ಗುಣಾಕಾರ ಮತ್ತು ಭಾಗಾಕಾರ ಕೂಡ ಬರುತ್ತದೆ!"

"ಆಗಲಿ, ಸಾಕು. ಮುಂದಿನ ಪರೀಕ್ಷಕರ ಬಳಿಗೆ ಹೋಗು."

ಪೂರ್ತಿ ಬಾಯಿಬಿಡುವುದಕ್ಕೂ ಈ ಪರೀಕ್ಷರುಗಳು ಅವಕಾಶಕೊಡುವುದಿಲ್ಲವಲ್ಲ, ಇದು ನ್ಯಾಯವಲ್ಲ ಎಂದುಕೊಂಡ ಪೇತ್ಯ.

ಮೂರನೆಯ ಪರೀಕ್ಷಕರು ಉದ್ದವಾದ ಹುಲುಸಾದ ಗಡ್ಡವನ್ನು ಬಿಟ್ಟಿದ್ದರು. ಅವರು ಧರಿಸಿದ್ದ ಹೊಳೆಯುವ ಕತ್ತಿನ ಪದಕವೊಂದು ಆ ಗಡ್ಡದ ಮೂಲಕ ಕಾಣಿಸುತ್ತಿತ್ತು.

"ಇಲ್ಲಿಂದ ಓದು."

ಪೇತ್ಯ ಮರ್ಯಾದಾಪೂರ್ವಕವಾಗಿ ಪಂಚರಂಗಿ ಕಾಗದದ ರಟ್ಟಿನ ಪುಸ್ತಕವನ್ನು ತೆಗೆದುಕೊಂಡು **"ಸಿಂಹ ಮತ್ತು ನಾಯಿ"** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿದ್ದ ತಲೆಬರಹದತ್ತ ಪರೀಕ್ಷಕರು ಇಟ್ಟಿದ್ದ ಹಳದಿ ಉಗುರಿನ ಬೆರಳನ್ನು ದೃಷ್ಟಿಸಿ ನೋಡಿದ.

"ಸಿಂಹ ಮತ್ತು ನಾಯಿ" ಉದ್ವೇಗದಿಂದ ಸ್ವಲ್ಪ ನಡುಗುತ್ತಿದ್ದರೂ ಸುಟಿಯಾದ ಶೈಲಿಯಲ್ಲಿ ಓದಲಾರಂಭಿಸಿದ. "ಸಿಂಹ ಮತ್ತು ನಾಯಿ. ಒಂದಾನೊಂದು ಕಾಲದಲ್ಲಿ ಮೃಗಾಲಯವೊಂದರಲ್ಲಿ ಒಂದು ಸಿಂಹವಿದ್ದಿತು. ಅದು ಬಹು ಭಯಂಕರವಾಗಿದ್ದಿತು. ಮೃಗಾಲಯದ ರಕ್ಷಕರು ಅದನ್ನು ಕಂಡರೆ ಹೆದರುತ್ತಿದ್ದರು. ಸಿಂಹ ತುಂಬ ಮಾಂಸವನ್ನು ತಿನ್ನುತ್ತಿದ್ದಿತು. ಮೃಗಾಲಯದ ಯಜಮಾನನಿಗೆ ಏನು ಮಾಡುವುದೆಂದು ಗೊತ್ತಾಗಲಿಲ್ಲ.—"

"ಸಾಕು. ನಿಲ್ಲಿಸು"

ಪೇತ್ಯನ ಕಣ್ಣುಗಳಲ್ಲಿ ನೀರು ಹರಿಯಬೇಕು. ಇನ್ನೂ ಕಥೆಯಲ್ಲಿ ನಾಯಿಯ ವಿಷಯ ಬರದೇ ಆಗಲೆ ಸಾಕು ಎಂದುಬಿಟ್ಟರಲ್ಲಾ!

"ಯಾವುದಾದರೂ ಪದ್ಯ ಬಾಯಿಗೆ ಬರುತ್ತದೆಯೋ ?"

ಪೇತ್ಯ ಇಂಥ ಸಂದರ್ಭ ಬರಲಿ ಭಗವಂತ ಎಂದು ಮನಸ್ಸಿನಲ್ಲಿಯೇ ದೇವರಿಗೆ ಹರಕೆ ಮಾಡಿಕೊಳ್ಳುತ್ತಿದ್ದ. ಈಗ ತನ್ನ ವಿಜಯವನ್ನು ನೋಡಬೇಕು. ಈಗ ತನಗೆ ಕೀರ್ತಿ ದೊರೆಯುವುದು ಖಂಡಿತ! ಎಂದು ಮನಸ್ಸಿನ ಮಂಡಿಗೆಯನ್ನು ಚಪ್ಪರಿಸಿದ.

"ಎಂ. ವೈ. ಲೆರ್‌ಮಾಂಟೊವ್ ಕವಿಯ 'ಹಾಯಿ' ಎಂಬ ಪದ್ಯ ಬರುತ್ತದೆ."

"ಒಪ್ಪಿಸು ಅದನ್ನು, ನೋಡೋಣ."

"ಭಾವಪೂರ್ಣವಾಗಿ ಹೇಳಲೇ ?"

"ಆಗಲಿ."

"ಒಂದು ನಿಮಿಷ."

ಪೇತ್ಯ ಕೂಡಲೆ ಒಂದು ಕಾಲನ್ನು ಮುಂದಕ್ಕೆ ಇಟ್ಟು ತಲೆಯನ್ನು ಹಿಂದಕ್ಕೆ ಮಾಡಿಕೊಂಡುನಿಂತ. ಪದ್ಯವನ್ನು ಭಾವಪೂರ್ಣವಾಗಿ ವಾಚಿಸುವಾಗ ಈ ಭಂಗಿಯಲ್ಲಿ ನಿಂತುಕೊಳ್ಳುವುದು ಅತ್ಯಂತ ಆವಶ್ಯಕವಾಗಿತ್ತು.

"ಹಾಯಿ" ಎಂ. ವೈ. ಲೆರ್ಮಾಂಟೊವ್ ಕವಿ ರಚಿಸಿದುದು ಎಂದು ರಾಗವಾಗಿ ಘೋಷಿಸಿದ.

"ಬಿಳಿಹಾಯಿ ಮಿನುಗುತಿದೆ ದೂರಲೊಂಟಿಯಾಗಿ
ನೀಲಿಮಂಜಿನೊಳಗಿಂ ನೊರೆತೆರೆಯ ಮೇಲಾಡಿ.
ಅನ್ಯರೇವುಗಳಲೇನನು ಕಾಣಬಯಸುತಿದೆ?
ತನ್ನನೆಲೆಯಿಂದಲೇತಕದೋಡಿ ಪೋಗುತಿದೆ?

ಆಶ್ಚರ್ಯ ಮತ್ತು ಭ್ರಾಂತಿಯ ಭಾವಗಳನ್ನು ಸೂಚಿಸುವಂತೆ ತಕ್ಷಣ ಪೇತ್ಯ ತನ್ನ ತೋಳುಗಳನ್ನು ಮುಂದಕ್ಕೆ ನೀಡಿದ. ಪರೀಕ್ಷಕರು ನಿಲ್ಲಿಸು ಎಂದು ಹೇಳುವುದಕ್ಕೆ ಮೊದಲೇ ಅದಷ್ಟನ್ನು ವಾಚನಮಾಡಿಬಿಡಬೇಕೆಂಬ ಆತುರದಿಂದ ಮುಂದುವರಿದ.

"ಪೆರ್ದೆರೆಗಳೋಡುತಿವೆ; ಮೆಲುಗಾಳಿಯಾಡುತಿದೆ
ಮುಳುಗೇಳುತ ಕೀರುವ ಕೂಪೆಕಂಬದ ಸುತ್ತ.
ನಲಿವನು ಕಳೆದೋಡುತಲಿಲ್ಲವೀ ಸಂಚಾರಿ
ಸೊಗವನೂ ಅರಸುತಿಲ್ಲ, ಬೇರೆಯಿವನ ದಾರಿ.

ಪೇತ್ಯ ಅವಸರದಿಂದ "ಇಲ್ಲ" ಎಂಬ ಪದವನ್ನು ಅಭಿನಯಪೂರ್ವಕವಾಗಿ ಒತ್ತಿಹೇಳಿದ. ಆದರೆ ಪೇತ್ಯ ಮುಂದಕ್ಕೆ ಆರಂಭಿಸುವಷ್ಟರಲ್ಲಿ ಪರೀಕ್ಷಕರು ಕೈಬೀಸಿ

"ಅಷ್ಟು ಸಾಕು" ಎಂದರು.

"ಸ್ವಲ್ಪವೇ ಉಳಿದಿರುವುದು. ಇನ್ನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ." ಎಂದು ಹುಡುಗ ಬೇಡಿಕೊಂಡು ಹೇಳಲಾರಂಭಿಸಿದ:

"ನೋಡಿತ್ತ ಹರಡಿಹುದಮಲ ನೀರವಿಸ್ತಾ,...."

"ಅಷ್ಟು ಸಾಕು. ಇನ್ನು ನೀನು ಮನೆಗೆ ಹೋಗಬಹುದು."

"ಇನ್ನು ಯಾವುದಾದರೂ ಪದ್ಯವನ್ನು ಹೇಳಲೇ? ಎ. ಎಸ್. ಪುಷ್ಕಿನ್‌ರವರ 'ವಿವೇಕಿ ಒಲೆಗನ ಹಾಡು' ('ದಿ ಲೆ ಆಫ್ ಓ ಲೆಗ್ ದಿ ವೈಸ್') ಎಂಬ ಕವನ ನನಗೆ ಬರುತ್ತದೆ"

"ಸಾಕು. ಇನ್ನಾವುದೂ ಬೇಡ. ನಿನ್ನನ್ನು ಸ್ಕೂಲಿಗೆ ಸೇರಿಸಿಕೊಳ್ಳಲು ಒಪ್ಪಿದ್ದಾರೆ ಎಂದು ನಿಮ್ಮ ತಂದೆಗೆ ಹೇಳಬಹುದು. ಅಷ್ಟೇ, ಇನ್ನೇನೂ ಇಲ್ಲ."

ಪೇತ್ಯನ ಬಾಯಿ ಕಟ್ಟಿತು. ಮುಂದೆ ಏನು ಮಾಡಬೇಕೆಂದು ತಿಳಿಯದೆ ಕೊಠಡಿಯ ಮಧ್ಯ ಭಾಗದಲ್ಲಿ ಒಂದೆರಡು ನಿಮಿಷ ಹಾಗೆಯೆ ನಿಂತುಕೊಂಡ. ಬೇಸಗೆ ರಜವೆಲ್ಲ ಯಾವ ಒಂದು ನಿಗೂಢವಾದ ಭಯಂಕರವಾದ ಗಳಿಗೆಗೋಸ್ಕರ ಕಾತುರತೆಯಿಂದ ಸಿದ್ಧಪಡಿಸಿಕೊಂಡು ಬಂದನೋ ಅದು ಆಗಲೇ ಅಷ್ಟು ಬೇಗ ಮುಗಿದುಹೋಯಿತೆಂಬುದನ್ನು ಪೇತ್ಯ ನಂಬಲಾರದೆ ಹೋದ.

ಕೊನೆಗೆ ಪೇತ್ಯ ಮುಗ್ಗುರಿಸುವುದನ್ನೂ ನೋಡದೆ ಆ ಕೋಣೆಯಿಂದ ಹೊರಕ್ಕೆ ಓಡಿದ. ಮರುಕ್ಷಣದಲ್ಲಿಯೇ ಹುಚ್ಚನಂತೆ ಹಿಂದಕ್ಕೆ ರಭಸದಿಂದ ಓಡಿಬಂದ.

"ಶಾಲೆಯ ಗುರುತಿನ ಟೋಪಿಯನ್ನು ನಾನು ಇನ್ನು ಕೊಂಡುಕೊಳ್ಳಬಹುದಲ್ಲವೇ?" ಎಂದು ಅತಿ ಕಾತರತೆಯಿಂದ ಒಡಕಲು ಧ್ವನಿಯಲ್ಲಿ ಕೇಳಿದ.

"ಖಂಡಿತ."

ಸ್ವಾಗತಕೊಠಡಿಯಲ್ಲಿ ತಾತ್ಯಾನ ಚಿಕ್ಕಮ್ಮ ತೆಳು ಪರದೆಯ ಬೇಸಗೆಯ ಟೋಪಿಯನ್ನೂ ಉದ್ದವಾದ ಕೈಚೀಲಗಳನ್ನೂ ಧರಿಸಿ ಚಿನ್ನದ ಬಣ್ಣ ಹಾಕಿದ್ದ ಕುರ್ಚಿಯಲ್ಲಿ ಕುಳಿತಿದ್ದಳು. ಅವಳ ಬಳಿಗೆ ಪೇತ್ಯ ನುಗ್ಗಿದ.

"ಚಿಕ್ಕಮ್ಮ!" ಬೀದಿಯಲ್ಲಿದ್ದ ಗಾಡಿಯವನಿಗೂ ಕೇಳಿಸಿದ್ದಿರಬೇಕು ಅವನು ಆಗ ಕೂಗಿದ್ದು "ಬೇಗ ಬಾ. ಶಾಲೆಯ ಟೋಪಿಯನ್ನು ಈಗಿಂದೀಗಲೇ ಕೊಂಡುಕೊಳ್ಳಬೇಕೆಂದು ಹೇಳಿದರು!"

೨೯. ಅಲೆಕ್ಸಾಂಡ್ರೋವ್ಸ್ಕಿ ಪೋಲೀಸ್ ಠಾಣೆ.

ಟೋಪಿಯನ್ನು ಕೊಂಡುಕೊಂಡುದರಿಂದಾದ ಆನಂದವನ್ನೇನು ಹೇಳೋಣ!

ಅಂಗಡಿಯಲ್ಲಿದ್ದ ಟೋಪಿಗಳನ್ನು ಒಂದಾದ ಮೇಲೆ ಒಂದರಂತೆ ತಲೆಗಿಕ್ಕಿಕೊಂಡು ಪರೀಕ್ಷಿಸಿಯಾಯಿತು. ಕೊನೆಯಲ್ಲಿ ಅವನ ತಲೆಗೆ ಅಳತೆಯಾದ ಟೋಪಿ ದೊರಕಿತು. ಆಮೇಲೆ ಸ್ವಲ್ಪ ಚೌಕಾಸಿ ನಡೆಯಿತು. ಅನಂತರ ಆ ಟೋಪಿಗೆ ಬೇಕಾದ ಬೆಳ್ಳಿಯ ಸುಂದರವಾದ ಲಾಂಛನದ ಬಿಲ್ಲೆಯನ್ನು ಆರಿಸಿದರು. ಆ ಬಿಲ್ಲೆಯ ಮೇಲೆ ಎರಡು ಮುಳ್ಳುಗಿಡದ ಗೊಂಚಲುಗಳು ಒಂದರಮೇಲೊಂದು ಅಡ್ಡವಾಗಿದ್ದವು. ಆ ಕೊಂಬೆಗಳ ನಡುವೆ ಒಡೆಸ್ಸ ನಗರದ ಐದನೆಯ ತರಬೇತಿಶಾಲೆಯ ಸಂಕೇತವಾದ "ಒ. ೫. ಜ" ಎಂಬ ಅಕ್ಷರಗಳಿದ್ದುವು. ಅವರು ಆರಿಸಿಕೊಂಡ ಬಿಲ್ಲೆ ಅಗಲವಾದುದೂ ಅಗ್ಗವಾದುದೂ ಆಗಿತ್ತು. ಅದರ ಬೆಲೆ ಹದಿನೈದು ಕೊಪೆಕ್ಕುಗಳು. ದಬ್ಬಳದಿಂದ ಅಲ್ಲಿಯ ಗುಮಾಸ್ತ ಆ ಟೋಪಿಯಲ್ಲಿ ಎರಡು ರಂಧ್ರಗಳನ್ನು ಮಾಡಿ ಬಿಲ್ಲೆಯ ಹಿತ್ತಾಳೆ ಕೊಂಡಿಯನ್ನು ಹಿಂದಕ್ಕೆ ಮಡಿಸಿ ಟೋಪಿಗೆ ಸಿಕ್ಕಿಸಿಕೊಟ್ಟನು.

ಪೇತ್ಯನ ಟೋಪಿಯೂ, ಅದರ ಮೇಲಿನ ಬಿಲ್ಲೆಯೂ ಮನೆಯಲ್ಲಿ ಮೆಚ್ಚಿಕೆಯ ಹೊಳೆಯನ್ನೇ ಹರಿಸಿದುವು. ಎಲ್ಲರೂ ಅದನ್ನು ಕೈಯಲ್ಲಿ ಹಿಡಿದು ನೋಡಬೇಕೆನ್ನುವವರೇ. ಆದರೆ ಪೇತ್ಯ ಅದಕ್ಕೆ ಅವಕಾಶ ಕೊಡುವವನೇ? ಯಾರು ಏನು ಬೇಕಾದರೂ ನೋಡಲಿ, ಆದರೆ ಅವರು ಟೋಪಿಯನ್ನು ಕೈಯಲ್ಲಿ ಮುಟ್ಟಬಾರದು. ತಂದೆ, ದುನ್ಯ, ಪಾವಲಿಕ್-ಎಲ್ಲರೂ ಕೇಳುವವರೇ "ಇದರ ಬೆಲೆ ಎಷ್ಟು?" ಎಂದು. ಅವರಿಗೆ ಅದರ ಬೆಲೆಯೇ ಬಹಳ ಪ್ರಾಮುಖ್ಯವಾದ ವಿಚಾರವೋ ಎಂಬಂತೆ ತೋರುತ್ತಿತ್ತು. "ಒಂದು ರೂಬಲ್ ಟೋಪಿಗೆ, ಮತ್ತು ಬಿಲ್ಲೆಗೆ ಹದಿನೈದು ಕೊಪೆಕ್ಕುಗಳು." ಎಂದು ಪೇತ್ಯ ಹೆಮ್ಮೆಯಿಂದ ಹೇಳಿದ. "ಆದರೆ ಅದೇನು ಮಹಾ! ನಾನು ಪರೀಕ್ಷೆಯಲ್ಲಿ ಪಾಸುಮಾಡಿದ್ದನ್ನು ನೋಡಬೇಕಾಗಿತ್ತು!" ಎಂದ. ಪಾವಲಿಕ್ ಅಸೂಯೆಯಿಂದ ಪೇತ್ಯನ ಟೋಪಿಯನ್ನು ದುರುಗುಟ್ಟಿಕೊಂಡು ನೋಡಿದ. ಅವನ ಕಣ್ಣುಗಳಲ್ಲಿ ಇನ್ನೇನು ನೀರು ಹರಿಯಬೇಕು ಆ ಸ್ಥಿತಿ.

ಬಳಿಕ ನುಸ್ಯಕೊಗನನಿಗೆ ತನ್ನ ಟೋಪಿಯನ್ನು ತೋರಿಸಬೇಕೆಂದು ಮಹಡಿಯ ಕೆಳಗಿನ ಅಂಗಡಿಗೆ ಪೇತ್ಯ ಓಡಿದ. ನುಸ್ಯನ ತಂದೆಯಾದ ಅಂಗಡಿಯವನು ಟೋಪಿಯಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸಿದ. ಅವನು ಕನ್ನಡಕವನ್ನೇರಿಸಿ ಟೋಪಿಯನ್ನು ತಿರುಗಿಸಿ ತಿರುಗಿಸಿ "ತ್ಚು.... ತ್ಚು...." ಎಂದು ಎನ್ನುತ್ತ ಪರೀಕ್ಷಿಸಿದ. ಕೊನೆಗೊಂದು ಸಲ "ಇದಕ್ಕೇನು ಬಿತ್ತು?" ಎಂದು ಕೇಳಿದ.

ಮನೆಯಲ್ಲಿನ ಪರಿಚಿತರಿಗೆಲ್ಲ ಟೋಪಿಯನ್ನು ಪ್ರದರ್ಶಿಸಿಯಾದ ಬಳಿಕ ಮೈದಾನಕ್ಕೆ ಹೋಗಿ ಅಲ್ಲಿ ಸೈನಿಕರಿಗೆ ಅದನ್ನು ತೋರಿಸಿದ. ಅವರೂ ಕೂಡ ಅದರ ಬೆಲೆಯನ್ನೇ ವಿಚಾರಿಸಿದರು. ದಿನದಲ್ಲಿ ಇನ್ನೂ ಅರ್ಧಭಾಗ ಕೂಡ ಕಳೆದಿರಲಿಲ್ಲ, ಟೋಪಿಯನ್ನು ತೋರಿಸುವುದಕ್ಕೆ ಇನ್ನಾರೂ ಇಲ್ಲವಲ್ಲ ಎಂದು ಪೇತ್ಯ ಚಡಪಡಿಸಿದ, ನಿರಾಶನಾದ.

ಇದ್ದಕ್ಕಿದ್ದಂತೆ ಹರಿಗೆ ಆಸ್ಪತ್ರೆಯ ಬಳಿ ಬರುತ್ತಿದ್ದ ಗಾವ್ರಿಕ್ ಪೇತ್ಯನ ಕಣ್ಣಿಗೆ ಬಿದ್ದ. ಸಂತೋಷದಿಂದ ಕಿರಿಚಿಕೊಳ್ಳುತ್ತ ಟೋಪಿಯನ್ನು ಬೀಸುತ್ತ ಪೇತ್ಯ ಅವನ ಹತ್ತಿರಕ್ಕೆ ಓಡಿದ. ದೇವರೇ, ಈ ಗಾವ್ರಿಕನಿಗೇನಾಗಿದೆ? ಮಾಸಿದ ಮುಖದಲ್ಲಿ ಕೋಪದಿಂದ ಕೂಡಿದ ಕಣ್ಣುಗಳು. ಕಣ್ಣುಗಳ ಕೆಳಗಡೆ ಕಂದುಬಣ್ಣದ ವಲಯ ಕಾಣಿಸುತ್ತಿದೆ, ಮೈಮೇಲಿನ ಷರಟೆಲ್ಲ ಜೂಲು. ಒಂದು ಕಿವಿ ಊದಿಕೊಂಡು ಕೆಂಡದಂತಾಗಿದೆ. ಮೊಟ್ಟಮೊದಲು ಪೇತ್ಯನ ಕಣ್ಣುಗಳಿಗೆ ಬಿದ್ದುದು ತನ್ನ ಸ್ನೇಹಿತನ ಕಿವಿ, ಅದನ್ನು ನೋಡಿ ಪೇತ್ಯನಿಗೆ ದಿಗಿಲಾಯಿತು.

"ಪರೀಕ್ಷೆಯಲ್ಲಿ ನಾನು ಹೇಗೆ ಮಾಡಿದೆನೋ, ನೀನು ನೋಡಬೇಕಾಗಿತ್ತು!" ಎಂದು ಕೂಗಿಕೊಳ್ಳಲು ಹೊರಟಿದ್ದ ಪೇತ್ಯ. ಆದರೆ ಅವನ ಮಾತುಗಳು ಬಾಯಲ್ಲಿಯೇ ಉಳಿದುವು, ಹೊರಕ್ಕೆ ಬರಲಿಲ್ಲ. ಅದಕ್ಕೆ ಬದಲಾಗಿ "ಯಾರ ಕೈಯಲ್ಲೋ ಜಗಳ ಆಡಿರುವ ಹಾಗೆ ಕಾಣುತ್ತದೆ. ಇದು ಯಾರು ನಿನ್ನ ಕಿವಿಯನ್ನು ಹೀಗೆ ಮಾಡಿದರು?" ಎಂದು ಪಿಸುಮಾತಿನಲ್ಲಿಯೇ ಪೇತ್ಯ ಕೇಳಿದ. ಗಾವ್ರಿಕ್ ಕಣ್ಣನ್ನು ಕೆಳಕ್ಕೆ ಹಾಕಿ ನಿರುತ್ಸಾಹದಿಂದ ಮುಗುಳು ನಕ್ಕ. "ಎಲ್ಲಿ ನಿನ್ನ ಟೋಪಿಯನ್ನು ನೋಡೋಣ? ಅದಕ್ಕೆ ಏನು ಕೊಟ್ಟೆ?" ಟೋಪಿಗಾಗಿ ಕೈನೀಡುತ್ತ ಗಾವ್ರಿಕ್ ಪ್ರಶ್ನಿಸಿದ. ಬೇರೊಬ್ಬರು ತನ್ನ ಟೋಪಿಯನ್ನು ಕೈಯಲ್ಲಿ ಹಿಡಿದರೆ ಪೇತ್ಯನಿಗೆ ವ್ಯಥೆಯಾಗುತ್ತಿದ್ದುದು ಸಹಜವಾಗಿತ್ತು, ಅವನು ತನ್ನ ಹೃದಯವನ್ನೇ ಕಿತ್ತುಕೊಟ್ಟಂತೆ ಹೇಳುತ್ತ "ಇದನ್ನು ಮಡಿಸಿ ಹಾಳು

ಮಾಡಬೇಡ" ಎಂದು ಆ ಟೋಪಿಯನ್ನು "ಗಾವ್ರಿಕನ ಕೈಗಿತ್ತ. ನೀನೇನು ಹೆದರಬೇಡ." ಎಂದ ಗಾವ್ರಿಕ್.

ಹುಡುಗರಿಬ್ಬರೂ ಕಸದ ರಾಶಿಯ ಬದಿಯಲ್ಲಿದ್ದ ಪೊದೆಯ ಹತ್ತಿರ ಕುಳಿತು ಆ ಟೋಪಿಯನ್ನು ದೀರ್ಘವಾದ ಪರೀಕ್ಷೆಗೆ ಈಡುಮಾಡಿದರು. ಅದುವರೆಗೆ ಪೇತ್ಯನ ಕಣ್ಣಿಗೆ ಬೀಳದೆ ಇದ್ದ ಹತ್ತಾರು ರಹಸ್ಯಗಳನ್ನು ಗಾವ್ರಿಕ್ ತೋರಿಸಿಕೊಟ್ಟ. ಟೋಪಿಯ ಮೇಲು ಭಾಗವನ್ನು ಎತ್ತಿ ಹಿಡಿದಿದ್ದ ಉಕ್ಕಿನ ತೆಳುವಾದ ದುಂಡುಬಳೆಯನ್ನು ಹೊರಕ್ಕೆ ತೆಗೆಯಲು ಬರುತ್ತಿತ್ತು. ತುಕ್ಕು ಹಿಡಿಯದ ಹಾಗೆ ಕಾಗದವನ್ನು ಅಂಟಿಸಿತ್ತು ಅದಕ್ಕೆ. ಟೋಪಿಯಿಂದ ಹೊರತೆಗೆದಾಗಲೂ ಅದಕ್ಕೆ ಬೆಲೆಯಿತ್ತು. ಮೊದಲನೆಯದಾಗಿ ಆ ಉಕ್ಕಿನ ಬಳೆಯನ್ನು ಹಲವಾರು ಚೂರುಗಳಾಗಿ ಮಾಡಿಟ್ಟುಕೊಳ್ಳಬಹುದಾಗಿತ್ತು. ಅದರಿಂದ ಬೇರೆ ಏನೂ ಪ್ರಯೋಜನವಾಗದೇ ಇದ್ದರೂ ಆ ಉಕ್ಕಿನ ಚೂರುಗಳನ್ನು ರೈಲು ಕಂಬಿಗಳ ಮೇಲಿಟ್ಟು ರೈಲು ಅದರಮೇಲೆ ಹರಿದಾಗ ಅದರ ಸ್ವರೂಪ ಹೇಗೆ ಬದಲಾಗುತ್ತದೆ ಎಂಬುದನ್ನು ನೋಡಬಹುದಾಗಿದ್ದಿತು. ಎರಡನೆಯದಾಗಿ ಟೋಪಿಗೆ ಕಪ್ಪು ಸಾಟೀನು ಬಟ್ಟೆಯ ಅಸ್ತರಿ ಪಟ್ಟಿಯನ್ನು ಹಾಕಿ ಹೊಲಿದಿತ್ತು. ಅದರಮೇಲೆ ಚಿನ್ನದ ಅಕ್ಷರಗಳಲ್ಲಿ "ಗುರಲ್ನಿಕ್ ಸಹೋದರರು" ಎಂದು ಮುದ್ರಿಸಿತ್ತು. ಅದರ ಅಂಚನ್ನು ಬಿಡಿಸಿದರೆ ಅದರಲ್ಲಿ ಅನೇಕ ರೀತಿಯ ಪದಾರ್ಥಗಳನ್ನು ಯಾರಿಗೂ ಗುಟ್ಟು ಗೊತ್ತಾಗದಂತೆ ಮುಚ್ಚಿಟ್ಟುಕೊಳ್ಳಬಹುದಾಗಿತ್ತು. ಮೂರನೆಯದಾಗಿ ಟೋಪಿಯ ಮುಂದುಗಡೆ ಚಾಚಿಕೊಂಡಿದ್ದ ಚರ್ಮದ ಭಾಗವನ್ನು ಕೈಯಿಂದ ಉಜ್ಜಿದರೆ ಇನ್ನಷ್ಟು ಚೆನ್ನಾಗಿ ಹೊಳೆಯುತ್ತಿತ್ತು. ಮೆರುಗೆಣ್ಣೆ ಮರದ ಕಾಯಿಯ ಮೇಲಿನ ಸಿಪ್ಪೆಯಿಂದ ಉಜ್ಜಿದರೆ ಸಾಕು ಕನ್ನಡಿಯಂತೆ ಹೊಳೆಯುವುದು. ಆ ಬಿಲ್ಲೆಯ ಮೇಲಿದ್ದ ಮರದ ಕೊಂಬೆಗಳನ್ನು ತುದಿಯಲ್ಲಿ ಸ್ವಲ್ಪ ಕತ್ತರಿಸಿ, ಬಿಲ್ಲೆಯನ್ನು ಹಿಂದಕ್ಕೆ ಬಗ್ಗಿಸಿದರೆ ಅದು ಒಂದು ನವೀನ ನಾಜೋಕನ್ನು ತರುತ್ತಿತ್ತು. ಒಂದು ನಿಮಿಷವನ್ನೂ ವ್ಯರ್ಥ ಮಾಡದೆ ಹುಡುಗರು ಆ ಕೆಲಸಕ್ಕೆ ಕೈ ಹಾಕಿದರು. ಆ ಟೋಪಿ ಕೊಡಬಹುದಾಗಿದ್ದ ಆನಂದವನ್ನೆಲ್ಲ ಅದರಿಂದ ಹೊರಡಿಸಿ ಪಡೆಯುವವರೆಗೂ ಅವರು ಅದರಲ್ಲಿ ಮಗ್ನರಾಗಿದ್ದರು.

ಇದು ಗಾವ್ರಿಕನ ಮನಸ್ಸನ್ನು ಒಂದು ಸ್ವಲ್ಪ ಹೊತ್ತು ಬೇರೆ ಕಡೆಗೆ ತಿರುಗಿಸಿ ಅವನ ಯಾತನೆಯನ್ನು ಕಡಮೆಮಾಡಿತು. ಆ ಟೋಪಿ ಅವರ ಕೈಗೆ ಸಿಕ್ಕಿ ಮರ್ದನವಾಗಿ ತನ್ನ ಮೊದಲಿನ ಸ್ವರೂಪವನ್ನು ಕಳೆದುಕೊಂಡಿತು. ಅದರ ಆಕರ್ಷಣೆ ಕಳೆದುಹೋದ ಮೇಲೆ ಗಾವ್ರಿಕ್ ಪುನಃ ಖಿನ್ನನಾದ. "ಇಲ್ಲಿ ಕೇಳು ಪೇತ್ಯ, ನನಗೆ ಸ್ವಲ್ಪ ಬ್ರೆಡ್ಡನ್ನೂ ಸಕ್ಕರೆಯನ್ನೂ ನಿಮ್ಮ ಮನೆಯಿಂದ ತಂದು ಕೊಡು. ಅದನ್ನು ನಮ್ಮ ಅಜ್ಜನಿಗೆ ತೆಗೆದುಕೊಂಡು ಹೋಗಿ ಕೊಡಬೇಕು" ಎಂದು ಗಾವ್ರಿಕ್ ಹಟಾತ್ತಾಗಿ ಗರಸು ದನಿಯಲ್ಲಿ ನುಡಿದ.

"ಯಾಕೆ? ನಿಮ್ಮ ಅಜ್ಜ ಎಲ್ಲಿದ್ದಾರೆ?"

"ಪೋಲೀಸ್ ಠಾಣೆಯಲ್ಲಿ."

ಇದು ಪೇತ್ಯನಿಗೆ ತಕ್ಷಣ ಅರ್ಥವಾಗಲಿಲ್ಲ. ಅಗಲವಾಗಿ ಕಣ್ಣು ಬಿಟ್ಟುಕೊಂಡು ತನ್ನ ಸ್ನೇಹಿತನನ್ನು ನೋಡಿದ.

ಗಾವ್ರಿಕ್ ಗಂಭೀರವಾಗಿ ಮುಗುಳುನಕ್ಕು ಪಿಚಕ್ಕನೆ ನೆಲದಮೇಲೆ ಉಗುಳಿದ.

"ಬಾಯಿಬಿಟ್ಟುಕೊಂಡು ಏನು ನೋಡುತ್ತೀಯೆ? ಇಷ್ಟೂ ಅರ್ಥವಾಗಲಿಲ್ಲವೆ ನಿನಗೆ?

ಒಳ್ಳೆಯ ಎಳೆ ಮಗು ಕಣೋ ನೀನು. ನಿನ್ನೆ ಅಜ್ಜನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅವರಿಗೆ ನಾನು ಏನಾದರೂ ಹೊಟ್ಟೆಗೆ ತೆಗೆದುಕೊಂಡುಹೋಗಿ ಕೊಡಬೇಕು" ಎಂದು ಹೇಳಿದ.

ಆದರೂ ಪೇತ್ಯನಿಗೆ ಅರ್ಥವಾಗಲಿಲ್ಲ. ಕುಡುಕರು, ಜಗಳಗಂಟಿಗಳು, ಕಳ್ಳರು, ಪೋಲಿಗಳು—ಇಂಥವರನ್ನು ಪೋಲೀಸ್ ಠಾಣೆಯಲ್ಲಿ ಕೂಡಿ ಹಾಕುತ್ತಾರೆಂದು ಕೇಳಿದ್ದ. ಆದರೆ ಗಾವ್ರಿಕನ ಅಜ್ಜನನ್ನು ಯಾಕೆ ಪೋಲೀಸ್ ಠಾಣೆಯಲ್ಲಿ ಕೂಡಿಹಾಕಿದರು? ಪೇತ್ಯನ ಬುದ್ಧಿಗೆ ನಿಲುಕದ ವಿಷಯವಾಗಿತ್ತದು.

ಪೇತ್ಯನಿಗೆ ಗಾವ್ರಿಕನ ತಾತನ ಪರಿಚಯ ಚೆನ್ನಾಗಿತ್ತು. ಏಕೆಂದರೆ ಸಮುದ್ರದ ತೀರಕ್ಕೆ ಗಾವ್ರಿಕನನ್ನು ನೋಡಲು ಅನೇಕಸಲ ಪೇತ್ಯ ಹೋಗಿದ್ದ. ಮೀನುಗಳನ್ನು ಹಿಡಿಯಲು ಎಷ್ಟು ಸಲ ಗಾವ್ರಿಕನೊಡನೆ ಪೇತ್ಯನನ್ನೂ ಕೂಡ ಗಾವ್ರಿಕನ ತಾತ ಕರೆದುಕೊಂಡು ಹೋಗಿರಲಿಲ್ಲ! ಬಹಳ ವಿಶೇಷವಾದ ತಮ್ಮದೇ ಆದ ಪರಿಮಳ ಬೀರುವ ಹೊಗೆವಾಸನೆಯ ಟೀಯನ್ನು ಎಷ್ಟು ಸಲ ತಾತ ಪೇತ್ಯನಿಗೆ ನೀಡಿರಲಿಲ್ಲ. "ಸಕ್ಕರೆಯಿಲ್ಲ, ಮಗು!" ಎಂದು ಕ್ಷಮೆಬೇಡುವವನಂತೆ ಅಂಥ ಸಮಯದಲ್ಲಿ ಹೇಳುತ್ತಿದ್ದುದನ್ನು ಪೇತ್ಯ ಎಂದಾದರೂ ಮರೆಯಬಲ್ಲನೆ! ಗಾಳಕ್ಕೆ ಕಟ್ಟುವ ಮುಳುಗುಗುಂಡನ್ನು ಪೇತ್ಯನಿಗೆ ತಯಾರಿಸಿಕೊಟ್ಟು ಅದನ್ನು ಗಾಳದ ಹುರಿಗೆ ಕಟ್ಟುವುದನ್ನು ತಾತ ಎಷ್ಟುಬಾರಿ ತೋರಿಸಿಕೊಟ್ಟಿರಲಿಲ್ಲ! ಎಂತೆಂಥ ಸಂದರ್ಭಗಳಿಗೆ ಹೊಂದುವಂಥ ತಮಾಷೆಯಾದ ಉಕ್ರೇನಿಯನ್ ಗಾದೆಗಳನ್ನು ಹೇಳಿ ತಮ್ಮನ್ನು ನಗಿಸಿರಲಿಲ್ಲ! ತುರ್ಕಿಯುದ್ಧದ ಎಷ್ಟೊಂದು ಕಥೆಗಳು ಗೊತ್ತಿದ್ದುವು ತಾತನಿಗೆ. ಅಲ್ಲದೆ ಸೈನಿಕರ ಜೀವನಕ್ಕೆ ಸಂಬಂಧಿಸಿದ ಹಾಸ್ಯದ ಚಟಾಕಿಗಳು ಎಷ್ಟೊಂದು ತಿಳಿದಿದ್ದುವು!

ತುರ್ಕಿಯವನಂತೆ ತನ್ನ ಬಳಿ ಕಾಲುಗಳನ್ನು ಒಂದರ ಮೇಲೆ ಒಂದನ್ನು ಹಾಕಿ ಕುಳಿತು ಕೊಂಡು ಮರವನ್ನು ಹೆರೆದು ಮಾಡಿದ ಸೂಜಿಯಿಂದ ಬಲೆಯನ್ನು ದುರಸ್ತು ಮಾಡುತ್ತ ತಾತ ಹೇಳುತ್ತಿದ್ದ ಕಥೆಗಳಿಗೆ ಕೊನೆ ಮೊದಲೆಲ್ಲಿ? ಆ ಕಥೆಗಳನ್ನು ಕೇಳುತ್ತ ನಕ್ಕು ನಕ್ಕು ಹೊಟ್ಟೆ ಹುಣ್ಣಾಗುತ್ತಿತ್ತು. ಕೊಡಲಿಯನ್ನು ಬೇಯಿಸಿದ ಸೈನಿಕನ ಕಥೆ, ಸ್ವರ್ಗಕ್ಕೆ ಹೋದ ಗೋಲಂದಾಜನ ಕಥೆ—ಅವನು ಹೇಳುತ್ತಿದ್ದ ಕಥೆಗಳು ಒಂದೇ ಎರಡೇ ಅಥವಾ ಒಂದು ರೀತಿಯವೇ?

ಕಥೆಯನ್ನು ಹೇಳುವುದರಲ್ಲಿ ಎಷ್ಟು ಆಸಕ್ತಿಯೋ ಅಷ್ಟೇ ಸಂತೋಷದಿಂದ ಇತರರು ಹೇಳುವುದನ್ನೂ ಕೇಳುತ್ತಿದ್ದ ತಾತ. ಇಂಥ ಮನಮೆಚ್ಚಿನ ಮನುಷ್ಯನನ್ನು ಪೇತ್ಯ ಆದುವರೆಗೆ ತನ್ನ ಬದುಕಿನಲ್ಲೇ ನೋಡಿರಲಿಲ್ಲ. ಪೇತ್ಯ ತನ್ನ ಕಲ್ಪನೆಯ ಲಗಾಮು ಬಿಚ್ಚಿ ತೋಳುಗಳನ್ನು ಬೀಸುತ್ತ ಕೇಳುವವನ ಕಿವಿಗಳು ಜುಮುಗುಟ್ಟುವಂಥ ವೈನವಿಕೇಳುವಂಥ ಉದ್ದುದ್ದವಾದ ಅದ್ಭುತ ಕಥೆಗಳನ್ನು ಹೇಳಿದಾಗ ಅಜ್ಜ ಸ್ವಲ್ಪವೂ ಅಸ್ಯಮನಸ್ಕನಾಗುತ್ತಿರಲಿಲ್ಲ. ಗಂಭೀರವಾಗಿ ತಲೆಯನ್ನು ಅಲ್ಲಾಡಿಸುತ್ತ "ಇದೆಲ್ಲ ಸಾಧ್ಯ, ಇಂಥದು ನಡೆಯುವುದು ಅಸಾಧ್ಯವಲ್ಲ." ಎಂದು ಹೇಳುತ್ತ ಇರುತ್ತಿದ್ದ.

ಇಂಥ ಮನುಷ್ಯನನ್ನು ಪೋಲೀಸ್ ಠಾಣೆಯಲ್ಲಿ ಕೂಡಿಡುವುದೆಂದರೆ! ನಂಬುವುದಕ್ಕಾಗುವು ದಿಲ್ಲ.

"ಆದರೆ ಏತಕ್ಕೆ? ಕಾರಣವೇನು!"

"ಏತಕ್ಕೆಂದರೆ...." ಗಾವ್ರಿಕ್ ದೊಡ್ಡವನಂತೆ ನಿಟ್ಟುಸಿರನ್ನು ಬಿಟ್ಟ. ಒಂದು ಕ್ಷಣ ಮೌನವಾಗಿದ್ದ. ಅನಂತರ ತನ್ನ ಸ್ನೇಹಿತನ ಕಡೆಗೆ ಬಗ್ಗಿ "ಕೇಳು" ಎಂದು ಏನೋ ರಹಸ್ಯವನ್ನಡಗಿಸಿಟ್ಟುಕೊಂಡವನಂತೆ ಕಿವಿಯಲ್ಲಿ ಹಿಂದಿನ ರಾತ್ರಿ ನಡೆದುದನ್ನು ಪೇತ್ಯನಿಗೆ ಹೇಳಲಾರಂಭಿಸಿದ. ಆದರೆ ನಿಜವಾಗಿ ಚಾಚೂ ತಪ್ಪದೆ ಇಡೀ ಕಥೆಯನ್ನು ಪೂರ್ಣವಾಗಿ ಹೇಳಲಿಲ್ಲ. ನಾವಿಕ ಮತ್ತು ಟೆರೆಂಟಿಯರ ವಿಷಯವಾಗಿ ಏನನ್ನೂ ಹೇಳಲಿಲ್ಲ. ಪೋಲೀಸರಿಂದ ತಪ್ಪಿಸಿಕೊಂಡು ಬಂದಿದ್ದ ಯಾರೋ ಮೂರು ಜನ ಅಪರಿಚಿತರು ಮರೆಸಿಕೊಳ್ಳಲು ರಾತ್ರಿ ತಮ್ಮ ಗುಡಿಸಿಲಿಗೆ ಬಂದಿದ್ದರು ಎಂದು ಮಾತ್ರ ಹೇಳಿದ. ಉಳಿದ ಕಥೆ ಪರಿಚಿತವಾದದ್ದೆ.

"ಆಗ ಆ ನಾಗರಹಾವು ನನ್ನ ಕಿವಿ ಹಿಡಿದು ತಿರುಚಿದ."

"ನಾನಿದ್ದರೆ ನನ್ನದೂ ಒಂದು ಕೈ ತೋರಿಸುತ್ತಾ ಇದ್ದೆ." ಪೇತ್ಯ ಕಿರುಚಿದ. ಅವನ ಕಣ್ಣು ಮಿಂಚುತ್ತಿತ್ತು. "ಅವನಿಗೆ ಒಳ್ಳೆಯ ಪಾಠ ಕಲಿಸಿಕೊಡುತ್ತ ಇದ್ದೆ."

"ಸಾಕು, ಬಾಯಿ ಮುಚ್ಚು." ಗಾವ್ರಿಕ್ ಖಿನ್ನನಾಗಿ ನುಡಿದ. ಪೇತ್ಯನ ಟೋಪಿಯ ತುದಿಯನ್ನು ಹಿಡಿದು ಜಗ್ಗಿಸಿದಾಗ ಅದು ಅವನ ಕಣ್ಣಿನಮೇಲೆ ಬಂದು ಕಿವಿಗಳನ್ನು ಒತ್ತಿತು. ಬಳಿಕ ಪುನಃ ಗಾವ್ರಿಕ್ ಕಥೆಯನ್ನು ಮುಂದುವರಿಸಿದ. ಪೇತ್ಯ ಕಥೆ ಕೇಳುತ್ತಿದ್ದಾಗ ಅವನ ಎದೆ ಭಯದಿಂದ ನಡುಗುತ್ತಿತ್ತು.

"ಆದರೆ ಅವರು ಯಾರು?" ಗಾವ್ರಿಕ್ ಕಥೆ ಮುಗಿಸಿದ ಬಳಿಕ ಪೇತ್ಯ ಕೇಳಿದ "ಕಳ್ಳರೇ?"

"ಅವರೂ ಸಾಧಾರಣ ಮನುಷ್ಯರೇ. ಸಮಿತಿಯವರು."

ಪೇತ್ಯನಿಗೆ ಅರ್ಥವಾಗಲಿಲ್ಲ. "ಎಂಥವರು ಎಂದೆ?"

"ನಿನಗೆ ಹೇಳುವುದಕ್ಕೆ ಬದಲು ಒಂದು ಕಂಬಕ್ಕೆ ಹೇಳುವುದು ಮೇಲು. ಸಮಿತಿಯವರು ಎಂದೆ, ಸಮಿತಿಯವರು ತಿಳಿಯಿತೆ?" ಗಾವ್ರಿಕ್ ಪೇತ್ಯನ ಹತ್ತಿರ ಬಗ್ಗಿ ಪಿಸುಗುಟ್ಟಿಕೊಂಡು ಹೇಳಿದಾಗ ಪೇತ್ಯನ ಮೂಗಿಗೆ ಈರುಳ್ಳಿ ವಾಸನೆ ಬಡಿಯಿತು. "ಮುಷ್ಕರ ನಡೆಸುತ್ತಾರಲ್ಲ ಅವರು. ಪಕ್ಷದವರು ತಿಳಿಯಿತೆ?"

"ಆದರೆ ಪೋಲೀಸಿನವರು ಅಜ್ಜನನ್ನು ಪೋಲೀಸ್ ಠಾಣೆಯಲ್ಲಿ ಕೂಡಿಹಾಕಿದ್ದೇಕೆ?"

ಗಾವ್ರಿಕ್ ತಿರಸ್ಕಾರದಿಂದ ನಕ್ಕ.

"ಅಯ್ಯೋ ಬೆಪ್ಪೆ, ಅವರನ್ನು ಗುಡಿಸಿಲಿನಲ್ಲಿ ಮುಚ್ಚಿಟ್ಟುಕೊಂಡಿದ್ದಕ್ಕೆ. ನಿನ್ನ ಬುದ್ಧಿ ಎಲ್ಲಿ ಹೋಯಿತು? ನನ್ನನ್ನೂ ಪೋಲೀಸಿನವರು ಎಳೆದುಕೊಂಡು ಹೋಗುತ್ತ ಇದ್ದರು. ಆದರೆ ನಾನಿನ್ನೂ ಹುಡುಗನಾದುದರಿಂದ ನನ್ನನ್ನು ಹಿಡಿದುಕೊಂಡು ಹೋಗುವ ಹಾಗಿಲ್ಲ. ಪೋಲೀಸಿನವರಿಂದ ತಪ್ಪಿಸಿಕೊಂಡು ಬಂದವರನ್ನು ಮರೆಸಿಟ್ಟದ್ದಕ್ಕೆ ಶಿಕ್ಷೆ ಏನು ಗೊತ್ತೆ? ಅಬ್ಬ ಅದನ್ನು ಹೇಳುವುದಕ್ಕೇ ದಿಗಿಲಾಗುತ್ತೆ. ಆದರೆ...." ಗಾವ್ರಿಕ್ ಸುತ್ತ ಕಣ್ಣೋಡಿಸಿ ನೋಡಿ "ಇನ್ನು ಒಂದು ವಾರದ ಮೇಲೆ ಅಲ್ಲಿರುವುದಿಲ್ಲ. ನೋಡುತ್ತಾ ಇರು. ಸ್ವಲ್ಪ ಕಾಲದಲ್ಲೇ ಅವರು ನಗರದ ಪೋಲೀಸ್ ಠಾಣೆಗಳ ಮೇಲೆಲ್ಲ ಹಲ್ಲೆ ಮಾಡುತ್ತಾರೆ. ಆ ಹಾವುಗಳನ್ನು ಒಬ್ಬೊಬ್ಬರನ್ನಾಗಿ ಹಿಡಿದುಕೊಂಡು ಕಪ್ಪು ಸಮುದ್ರಕ್ಕೆ ಎಸೆದು ಬಿಡುತ್ತಾರೆ. ಇದು ನಿಜ. ಇಲ್ಲದೇ ಇದ್ದರೆ, ನನ್ನ ಜೀವನಾದ್ಯಂತವೂ ನನಗೆ ಸುಖ ಬರಬೇಡ, ದೇವರಾಣೆಯಾಗೂ!" ಗಾವ್ರಿಕ್ ಪುನಃ ನೆಲದ

ಮೇಲಕ್ಕೆ ಉಗುಳಿದ. "ಇದು ಹ್ಯಾಗಿದೆ ಹೇಳು?" ಎಂದು ವ್ಯವಹಾರಜ್ಞನಂತೆ ಮಾತಾಡಿದ.

ಪೇತ್ಯ ಮನೆಗೆ ಓಡಿಹೋಗಿ ಎರಡು ನಿಮಿಷಗಳ ಬಳಿಕ ಗೋಧಿಯ ಬ್ರೆಡ್ಡಿನ ಅರ್ಧಭಾಗವನ್ನೂ, ಸಕ್ಕರೆಯ ಚೂರುಗಳನ್ನೂ ಷರಟಿನೊಳಗೆ ಮುಚ್ಚಿಕೊಂಡು ಬಂದ.

"ಇಷ್ಟು ಸಾಕು." ಸಕ್ಕರೆಯ ಚೂರುಗಳನ್ನು ಎಣಿಸಿ, ಬ್ರೆಡ್ಡನ್ನು ಕೈಯಲ್ಲಿ ತೂಗಿ ನೋಡಿ, "ನನ್ನೊಡನೆ ಪೋಲೀಸ್ ಠಾಣೆಗೆ ಬರುತ್ತೀಯಾ?" ಎಂದು ಪೇತ್ಯನನ್ನು ಗಾವ್ರಿಕ್ ಕೇಳಿದ.

ಮನೆಗೆ ಸಮೀಪದಲ್ಲಿದ್ದರೂ ಪೋಲೀಸ್ ಠಾಣೆ ಪೇತ್ಯ ಹೋಗಕೂಡದ ಸ್ಥಳವಾಗಿತ್ತು. ಅದೃಷ್ಟವಶಾತ್ ಆ ಸಮಯದಲ್ಲಿ ಇದ್ದಕ್ಕಿದ್ದಂತೆ ಪೇತ್ಯನ ಮನಸ್ಸಿನಲ್ಲಿ ಪೋಲೀಸ್ ಠಾಣೆಗೆ ಹೋಗಬೇಕೆಂಬ ಅದಮ್ಯ ಆಸೆ ಉತ್ಪನ್ನವಾಯಿತು. ಪುನಃ ಅವನ ಮನಸ್ಸಿನಲ್ಲಿ ವಿವೇಕಕ್ಕೂ ಅವನಿಗೂ ದೀರ್ಘವಾದ ಹೋರಾಟ ಆರಂಭವಾಯಿತು. ಆ ಹೋರಾಟ ಅವನು ಪೋಲೀಸ್ ಠಾಣೆಯನ್ನು ಸಮೀಪಿಸುವವರೆಗೂ ನಡೆದಿತ್ತು. ಮನಸ್ಸು ಗೆದ್ದಿತು ಎನ್ನುವ ಹೊತ್ತಿಗೆ ಅವನು ಪೋಲೀಸ್ ಠಾಣೆಯ ಹತ್ತಿರಕ್ಕೆ ಬಂದು ಬಿಟ್ಟಿದ್ದನು.

ಪೇತ್ಯ ಗಾವ್ರಿಕನ ಜೊತೆಯಲ್ಲಿದ್ದಾಗ ಅವನ ಭಾವನೆಗಳು ಯಾವಾಗಲೂ ತಮ್ಮ ವಾಡಿಕೆಯ ಸಹಜ ಸಂಬಂಧಗಳನ್ನು ಕಳೆದುಕೊಳ್ಳುತ್ತಿದ್ದುವು; ಅದುವರೆಗೆ ಅವನ ಕಣ್ಣಿನಿಂದ ಮರೆಯಾಗಿದ್ದ ವಿಷಯಗಳನ್ನು ಗಾವ್ರಿಕನ ಸಹವಾಸ ಸ್ಪಷ್ಟಪಡಿಸುತ್ತಿತ್ತು. ಕಾರ್ಖಾನೆಯ ಉಪನಗರವು ವಿಧವೆಯರ ತಬ್ಬಲಿಗಳ ನಿವಾಸವಾಗಿದ್ದದ್ದು ಮನೆಯ ಮುಂದುಗಡೆ ಹೂವಿನ ಗಿಡಗಳನ್ನು ಹೊಂದಿದ್ದ ಮನೆಗಳನ್ನುಳ್ಳ ಕೆಲಸಗಾರರ ನಿವಾಸಸ್ಥಾನವಾಗಿ ಮಾರ್ಪಟ್ಟುದೂ, ಪೋಲೀಸಿನವನು ಸರ್ಪವಾದುದೂ, ಟೋಪಿಯಲ್ಲಿ ಉಕ್ಕಿನ ಬಳೆಯು ಹುದುಗಿದ್ದುದು ಬಯಲಾದುದೂ ಗಾವ್ರಿಕನ ಸಹವಾಸದಿಂದ ಅಲ್ಲವೇ. ಈಗ ಪೋಲೀಸ್ ಠಾಣೆಯ ಸರದಿ ಬಂದಿತ್ತು.

ಪೋಲೀಸ್ ಠಾಣೆ ಎಂದರೆ ಇದುವರೆಗೆ ಪೇತ್ಯನ ಭಾವನೆ ಏನಾಗಿತ್ತು? ರಿಚೆಲ್ಲೊ ಮತ್ತು ನೊವೋರೂಬ್ನಿ ರಸ್ತೆಗಳ ಮೂಲೆಯಲ್ಲಿ ಸೇಂಟ್ ಪಾಂಟೆಲಿಮನ್ ಚರ್ಚಿನ ಎದುರಿಗೆ ಇದ್ದ ದೊಡ್ಡ ಸರ್ಕಾರಿ ಕಟ್ಟಡ ಅದು. ಕುದುರೆ ಕಟ್ಟಿ ಎಳೆಸುತ್ತಿದ್ದ ಟ್ರಾಮ್ ಗಾಡಿಗಳಲ್ಲಿ ಅವನು ಅದೇ ರಸ್ತೆಯಲ್ಲಿ ಎಷ್ಟು ಸಲ ಹೋಗಿರಲಿಲ್ಲ. ಆ ಕಟ್ಟಡದ ಮುಖ್ಯ ಭಾಗವೆಂದರೆ ಅದರ ಎತ್ತರವಾದ ಚೌಕವಾದ ಗೋಪುರ, ಆ ಗೋಪುರದ ತುದಿಯಲ್ಲಿ ಯಾವಾಗಲೂ ಒಬ್ಬ ಅಗ್ನಿಶಾಮಕದಳದ ಸಿಪಾಯಿ ನಿಂತಿರುತ್ತಿದ್ದ. ಕರಿಯ ಚರ್ಮದ ಕೋಟನ್ನು ಧರಿಸಿದ ಆ ಸಿಪಾಯಿ ನಗರದ ಎಲ್ಲ ಭಾಗಗಳನ್ನೂ ದಿಟ್ಟಿಸಿ ನೋಡುತ್ತ ಗೋಪುರದ ಮೇಲುಗಡೆ ಧ್ವಜಸ್ತಂಭದ ಸುತ್ತ ಸುತ್ತುತ್ತಿದ್ದ. ಅಡ್ಡಕಂಬಿಯನ್ನು ಹಾಕಿದ್ದ ಆ ಧ್ವಜಸ್ತಂಭವನ್ನು ನೋಡಿದಾಗಲೆಲ್ಲ ಪೇತ್ಯನಿಗೆ ತಕ್ಕಡಿಯ ಅಥವಾ ಸರ್ಕಸ್ಸಿನ ಆಟದ ಉಯ್ಯಾಲೆಯ ಜ್ಞಾಪಕ ಬರುತ್ತಿತ್ತು. ಯಾವಾಗಲೂ ಅಮಂಗಳ ಸೂಚಕವಾದ ಕಪ್ಪುಚೆಂಡುಗಳು ಆ ಅಡ್ಡಕಂಬಿಯಿಂದ ತೂಗಾಡುತ್ತಿದ್ದುವು. ಅವುಗಳ ಸಂಖ್ಯೆ ನಗರದ ಯಾವ ಭಾಗದಲ್ಲಿ ಬೆಂಕಿ ಬಿದ್ದಿದೆ ಎಂಬುದನ್ನು ಸೂಚಿಸುತ್ತಿತ್ತು. ಅಷ್ಟೊಂದು ದೊಡ್ಡ ನಗರದಲ್ಲಿ ಎಲ್ಲ ಸಮಯದಲ್ಲೂ ಎಲ್ಲಾದರೊಂದು ಕಡೆ ಬೆಂಕಿಯ ಪ್ರಕರಣ ಇದ್ದೇ ಇರುತ್ತಿತ್ತು. ಗೋಪುರದ ಬುಡದಲ್ಲಿ ಒಡೆಸ್ಸ ನಗರದ ಅಗ್ನಿಶಾಮಕದಳದ ಕೇಂದ್ರ ಕಚೇರಿಯಿದ್ದಿತು. ಕಬ್ಬಿಣದ ಹೆಬ್ಬಾಗಿಲುಗಳು ಅದರ ಮುಂದೆ ಸಾಲಾಗಿದ್ದುವು.

ತುತ್ತೂರಿ ಮೊಳಗಿದೊಡನೆ ಮಂಜಿನಂತೆ ಬೆಳ್ಳಗಿರುವ ಆಯಾಲುಗಳನ್ನೂ ಬಾಲವನ್ನೂ

ಪ್ರದರ್ಶಿಸುತ್ತ ಮೈಮೇಲೆ ಕಪ್ಪು ಮಚ್ಚೆಗಳಿದ್ದ ಬೂದುಬಣ್ಣದ ನಾಲ್ಕು ಭರ್ಜರಿ ಕುದುರೆಗಳು ಹೆಬ್ಬಾಗಿಲಿನಿಂದ ಹೊರಕ್ಕೆ ಒಂದರ ಹಿಂದೆ ಒಂದರಂತೆ ಹಾರುತ್ತಿದ್ದುವು. ಅಮಂಗಳ ಸೂಚಕ ವಾದರೂ ಆಟದ ಸಾಮಾನಿನಂತೆ ತೋರುತ್ತಿದ್ದ ಅಗ್ನಿಶಾಮಕ ಯಂತ್ರವು ಒಂದೇ ಸಮನೆ ಗಂಟೆಯ ಗಣಗಣ ಶಬ್ದ ಮಾಡುತ್ತ ರಸ್ತೆಯಲ್ಲಿ ವೇಗವಾಗಿ ಓಡುತ್ತಿತ್ತು. ಆ ಯಂತ್ರದ ದೀಪ ಗಳಿಂದ ಹೊರಟ ಕಿತ್ತಳೆ ಬಣ್ಣದ ಬೆಳಕು ಅದರ ಹಿಂದೆಯೇ ಓಡುತ್ತಿರುತ್ತಿತ್ತು. ಆ ಬೆಳಕು ಅಗ್ನಿಶಾಮಕದಳದ ಸಿಪಾಯಿಗಳ ತಲೆಯಮೇಲೆ ವಿರಾಜಮಾನವಾಗಿರುತ್ತಿದ್ದ ಹಿತ್ತಾಳೆಯ ಶಿರಸ್ತ್ರಾಣಗಳಲ್ಲಿ ಪ್ರತಿಬಿಂಬಿಸಿ ಅದಕ್ಕೊಂದು ಶೋಭೆಯನ್ನು ತಂದುಕೊಡುತ್ತಿತ್ತು. ಆ ನಿಮಿಷ ದಿಂದ ವಿನಾಶದ ಮತ್ತು ಅಪಾಯದ ಘೋರ ಕಲ್ಪನೆಯು ಅಜಾಗರೂಕವಾದ ನಗರದ ಬೆನ್ನು ಹತ್ತುತ್ತಿತ್ತು. ಇವುಗಳನ್ನುಳಿದರೆ ಪೋಲೀಸ್ ಠಾಣೆಯಲ್ಲಿ ಗಮನಾರ್ಹವಾದುದೇನೂ ಪೇತ್ಯನಿಗೆ ಕಂಡು ಬಂದಿರಲಿಲ್ಲ.

ಆದರೆ ಗಾವ್ರಿಕ್ ಹತ್ತಿರಕ್ಕೆ ಬಂದಂತೆಲ್ಲ ಮಾಯಾದಂಡದ ಸ್ಪರ್ಶದಿಂದಲೋ ಎಂಬಂತೆ ಹಿಂದಿನ ಕಲ್ಪನೆಗಳು ಮಾಯವಾಗಿ ಬಿಡುತ್ತಿದ್ದುವು. ಕಬ್ಬಿಣದ ಸರಳುಗಳಿಂದ ಪ್ರತಿಬಂಧಿಸಿದ ಕಿಟಕಿಗಳ ನೋಟವು ಈಗ ಆ ಕಟ್ಟಡದ ಒಂದು ಗಲ್ಲಿಯ ಕಡೆಯಲ್ಲಿ ಕಣ್ಣಿಗೆ ಕಾಣಿಸಿ ಕೊಂಡಿತು. ಪೋಲೀಸ್ ಠಾಣೆ ಒಂದು ಕಾರಾಗೃಹದಂತೆ ತೋರಿತು.

"ಇಲ್ಲಿ ನಿಂತಿರು." ಎಂದು ಗಾವ್ರಿಕ್ ಪೇತ್ಯನಿಗೆ ಹೇಳಿದ. ಬಳಿಕ ತೀವ್ರವಾಗಿದ್ದ ಕಾಲು ಹಾದಿಯ ಮೇಲಿನಿಂದ ಓಡುತ್ತ ಹೋಗಿ ಪೋಲೀಸಿನವರ ಕಣ್ಣಿಗೆ ಬೀಳದಂತೆ ಹೆಬ್ಬಾಗಿಲಿನ ಮೂಲಕ ಒಳಕ್ಕೆ ಜಾರಿಕೊಂಡು ಹೋದ. ಇಲ್ಲೂ ಕೂಡ ಗಾವ್ರಿಕನಿಗೆ ಅವನ ಮಾರ್ಗ ಚೆನ್ನಾಗಿ ಪರಿಚಿತವಾಗಿದ್ದಂತೆ ತೋರಿತು.

ಪೇತ್ಯ ಪೋಲೀಸ್ ಠಾಣೆಯ ಎದುರಿಗೆ ನಿಂತಿದ್ದ ಒಂದು ಸಣ್ಣ ಗುಂಪಿನೊಡನೆ ನಿಂತು ಕೊಂಡ. ಜೈಲಿನಲ್ಲಿದ್ದ ತಮ್ಮ ಸಂಬಂಧಿಕರುಗಳೊಡನೆ ರಸ್ತೆಯಾಚೆಯಿಂದ ಆ ಜನರು ಮಾತ ನಾಡುತ್ತಿದ್ದರು. ಅಷ್ಟೊಂದು ಜನಗಳು ಜೈಲಿನಲ್ಲಿರಬಹುದೆಂದು ಪೇತ್ಯ ಎಣಿಸಿರಲಿಲ್ಲ. ಅಲ್ಲಿ ಸುಮಾರು ಒಂದುನೂರು ಜನಗಳಾದರೂ ಇದ್ದಿರಬೇಕು. ಅವರು ಕುಳಿತಿದ್ದರೆಂದು ಹೇಳುವಂತಿರ ಲಿಲ್ಲ. ಕೆಲವರು ಕಂಬಿಗಳನ್ನು ಹಿಡಿದುಕೊಂಡು ಕಿಟಕಿಗಳಮೇಲೆ ನಿಂತಿದ್ದರು. ಇನ್ನು ಕೆಲವರು ಹಿಂದುಗಡೆಯಿಂದ ಕಿಟಕಿಯಾಚೆಗೆ ಬಗ್ಗಿನೋಡುತ್ತಿದ್ದರು. ಅವರು ತಮ್ಮ ಕೈಗಳನ್ನು ಬೀಸು ತ್ತಿದ್ದರು. ಇನ್ನು ಕೆಲವರು ಮುಂದಿನವರ ತಲೆ ಮತ್ತು ಹೆಗಲುಗಳ ಮೇಲಿನಿಂದ ರಸ್ತೆಯನ್ನು ನೋಡಲು ಮೇಲಕ್ಕೆ ಕುಪ್ಪಳಿಸುತ್ತಿದ್ದರು.

ಜೈಲಿನಲ್ಲಿ ಕಳ್ಳರು, ಕುಡುಕರು, ಪೋಲಿಗಳು ಇದ್ದುದನ್ನು ಪೇತ್ಯ ಕಾಣದೆ ಚಕಿತನಾದ. ತಾನು ಮೊದಲು ಭಾವಿಸಿದ್ದುದಕ್ಕೆ ಎಲ್ಲ ವಿಪರೀತವಾಗಿತ್ತು. ಅವರೆಲ್ಲ ಸಾಧಾರಣ ಗೌರವಯುತ ವ್ಯಕ್ತಿಗಳೇ ಆಗಿದ್ದರು. ಅಂಥವರನ್ನು ಪ್ರತಿನಿತ್ಯ ರೈಲ್ವೆ ನಿಲ್ದಾಣದ ಬಳಿಯಲ್ಲಿ, ಅಲೆಕ್ಸಾಂ ಡ್ರೊವ್ಸ್ಕಿ ಉದ್ಯಾನದಲ್ಲಿ, ಟ್ರಾಮುಗಳಲ್ಲಿ ಕಾಣಬಹುದಾಗಿದ್ದಿತು. ಅವರಲ್ಲಿ ಕೆಲವು ಜನ ವಿಶ್ವ ವಿದ್ಯಾನಿಲಯದ ವಿಧ್ಯಾರ್ಥಿಗಳೂ ಇದ್ದರು. ಚಿನ್ನದ ಗುಂಡಿಗಳಿದ್ದ ಬಿಳಿಯ ಜಬ್ಬದ ಮೇಲೆ ಕಕೇಶಿಯನ್ ಕಪ್ಪು ಮೇಲಂಗಿಯನ್ನು ಧರಿಸಿದ್ದವನೊಬ್ಬ ಎಲ್ಲರಿಗಿಂತ ಮೇಲೆ ಎದ್ದು ಕಾಣು ತ್ತಿದ್ದ. ಕಂಗೆಟ್ಟ ಕೆನ್ನೆಗಳನ್ನು ಕೈಗಳಿಂದ ಹಿಡಿದುಕೊಂಡು ಕಿವಿ ಕಿವುಡಾಗಿಸುವಂತೆ ಗಂಟಲಿ

ನಿಂದ ಕೂಗಿ ಬೀದಿಯಲ್ಲಿದ್ದ ಗುಂಪಿನಲ್ಲಿ ಇದ್ದವರೊಬ್ಬರಿಗೆ ಹೇಳುತ್ತಿದ್ದ: "ಸೆರೆಮನೆಯ ಕೋಣೆಗಳಿಂದ ಸಂಗಾತಿಗಳಾದ ಲೋರ್ದ್ಕಿರ್ಪಾನಿದ್ಸೆ, ಕ್ರಾಸಿಕೋವ್, ಮತ್ತು ಬುರೆವೈ ಇವರುಗಳನ್ನು ಕಳೆದ ರಾತ್ರಿ ಕರೆಸಿದ್ದರು. ಅವರು ತಮ್ಮೊಡನೆ ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಸಿದ್ಧರಾಗಬೇಕೆಂದು ಅಪ್ಪಣೆ ಮಾಡಲಾಯಿತು ಎಂದು ಸಮಿತಿಗೆ ತಿಳಿಸು.—ಲೋರ್ದ್ಕಿರ್ಪಾನಿದ್ಸೆ, ಕ್ರಾಸಿಕೋವ್ ಮತ್ತು ಬುರೆವೈ ಇವರುಗಳನ್ನು ಗೊತ್ತಾಯಿತೆ? ನಿನ್ನೆ ರಾತ್ರಿ. ಸಾರ್ವಜನಿಕ ಪ್ರತಿಭಟನೆಯನ್ನು ವ್ಯವಸ್ಥೆಗೊಳಿಸಿ. ನನ್ನ ಸಂಗಾತಿಗಳಿಗೆ ನಮಸ್ಕಾರ ಹೇಳಿ."

ಇನ್ನೊಂದು ಕಿಟಕಿಯಿಂದ ಕಾಲರ್ ಬಿಚ್ಚಿದ ರಷ್ಯದ ಅಂಗಿಯನ್ನು ತೊಟ್ಟು ಟಿರೆಂಟಿಯಂತೆ ಕಾಣಿಸುತ್ತಿದ್ದವನು "ಕಚೇರಿಗೆ ಹೋಗಿ ನನ್ನ ಸಂಬಳವನ್ನು ತೆಗೆದುಕೊಂಡು ಬರುವಂತೆ ಸೆರ್ಯೋಷಾಗೆ ಹೇಳು" ಎಂದು ಕೂಗಿದ. ಇತರ ಧ್ವನಿಗಳು ಒಂದರಮೇಲೊಂದರಂತೆ ಬರುತ್ತಿದ್ದುವು.

"ಅಫನಸ್ಯೇವನನ್ನು ನಂಬಬೇಡಿ. ಕೇಳಿಸಿತೇನು? ಅಫನಸ್ಯೆವನನ್ನು ನಂಬಬೇಡಿ!"

"ಕೋಲ್ಯಾ ಬುಲ್ವಾರ್ನಿ ಜೈಲಿನಿದ್ದಾನೆ!"

"ಪವೇಲ್ ಇವಾನಿಚ್ಚನ ಮನೆಯಲ್ಲಿ ಬಟ್ಟೆಗಳನ್ನಿಡುವ ಅಲಮಾರುವಿನ ಹಿಂದೆ ಒಂದು ಪೆಟ್ಟಿಗೆಯಲ್ಲಿ!"

"ಕೊನೇ ಪಕ್ಷ ಬುಧವಾರದೊಳಗೆ!"

ಜೈಲಿನಲ್ಲಿದ್ದವರ ಸಂಬಂಧಿಗಳೂ ಕೂಡ ಹೊರಗಡೆಯಿಂದ ಕೂಗಿಕೊಳ್ಳುತ್ತಿದ್ದರು. ಅವರು ಪೊಟ್ಟಣಗಳನ್ನೋ ಮಕ್ಕಳನ್ನೋ ತಲೆಯಿಂದ ಮೇಲೆಕ್ಕೆತ್ತಿ ತೋರಿಸುತ್ತಿದ್ದರು. ಮೋತ್ಯಳು ಧರಿಸಿದ್ದಂಥ ಓಲೆಗಳನ್ನು ಧರಿಸಿದ್ದ ಹುಡುಗಿಯನ್ನು ಒಬ್ಬ ಹೆಂಗಸು ಎತ್ತಿ ತೋರಿಸುತ್ತಿದ್ದಳು.

"ನಮ್ಮ ವಿಷಯದಲ್ಲಿ ತೊಂದರೆಪಟ್ಟುಕೊಳ್ಳಬೇಕಾದ್ದಿಲ್ಲ. ಜನಗಳು ನಮಗೆ ಸಹಾಯ ಮಾಡುತ್ತಿದ್ದಾರೆ. ನಮ್ಮ ಹೊಟ್ಟೆಗೆ ಬೇಕಾದಷ್ಟಿದೆ. ಯೋಚನೆ ಮಾಡಬೇಡಿ. ನಮ್ಮ ಪೆರೋಚ್ಕ ಎಷ್ಟು ಗಟ್ಟಿಮುಟ್ಟಾಗಿದ್ದಾಳೆ ನೋಡಿ."

ಆಗಾಗ್ಗೆ ಪೋಲೀಸಿನವನು ಕತ್ತಿಯ ಒರೆಯ ಮೇಲೆ ಕೈಹಾಕಿಕೊಂಡು ಜನಗಳ ಗುಂಪಿನ ಕಡೆಗೆ ಬರುತ್ತಿದ್ದ.

"ಮಹಿಳೆಯರೇ, ಮಹನೀಯರೇ, ನೀವುಗಳು ಕಿಟಕಿಗಳ ಎದುರಿಗೆ ನಿಲ್ಲಕೂಡದು ಮತ್ತು ಕೈದಿಗಳೊಡನೆ ಮಾತನಾಡಕೂಡದು." ಎನ್ನುತ್ತಿದ್ದ.

ಅವನ ಮಾತಿನ ಹಿಂದೆ ಕಿಟಕಿಗಳಿಂದ ಕಿವಿ ಕಿವುಡಾಗುವಂತೆ ಮಿಯಾವ್ ಶಬ್ದಗಳು, ಬೈಗುಳ ಮತ್ತು ಅಬ್ಬರ ಕೇಳಿಬರುತ್ತಿದ್ದುವು. ಕಲ್ಲಂಗಡಿಹಣ್ಣಿನ ಸಿಪ್ಪೆ, ಮುಸುಕಿನ ಜೋಳದ ತೆನೆಯ ನಡುವಿನ ದಿಂಡು, ಸೌತೆಕಾಯಿ ಮೊದಲಾದುವುಗಳು ಪೋಲೀಸಿನವನ ತಲೆಯ ಮೇಲಕ್ಕೆ ಹಾರಿಬರುತ್ತಿದ್ದುವು; ಹಾಗೆಯೇ ಕಟುವಾದ ಮಾತುಗಳೂ ಅವನ ಮೇಲೆರಗುತ್ತಿದ್ದುವು!

"ಏ, ಸರ್ಪ!"

"ಏ, ಪೋಲೀಸ್ ಪ್ಯಾದೆ!"

"ಜಪಾನೀಯರ ಕೈಲಿ ಯುದ್ಧಮಾಡು ಹೋಗೋ!"

ಕತ್ತಿಯನ್ನು ಕಂಕುಳಿಗೆ ಸೇರಿಸಿಕೊಂಡು ಪೋಲೀಸಿನವನು ಆತುರವಿಲ್ಲದವನಂತೆ ನಿಧಾನವಾಗಿ ಕಾಲುಹಾಕುತ್ತ ಅಂಥ ಅಸಾಧಾರಣವಾದುದು ಏನೂ ನಡೆಯಲಿಲ್ಲವೆಂಬಂತೆ ಮುಂಬಾಗಿ

ರಿನ ಬಳಿಗೆ ಹೋಗುತ್ತಿದ್ದ.

ಮೇಲುನೋಟಕ್ಕೆ ಕಾಣಿಸುತ್ತಿದ್ದಂತೆ ಜಗತ್ತಿನಲ್ಲಿ ಎಲ್ಲವೂ ಸುಲಲಿತವಾಗಿ ಜರುಗುತ್ತಿರಲಿಲ್ಲ!

ಗಾವ್ರಿಕ್ ಕೋಪದಿಂದ ಹಿಂದಿರುಗಿದ.

"ಅಜ್ಜ ನನ್ನ ನೋಡಿದೆಯಾ ?" ಪೇತ್ಯ ಪ್ರಶ್ನಿಸಿದ.

ಗಾವ್ರಿಕ್ ಉತ್ತರ ಕೊಡಲಿಲ್ಲ. ಇಬ್ಬರು ಹುಡುಗರೂ ಅಲ್ಲಿಂದ ತೆರಳಿದರು. ರೈಲ್ವೆ ನಿಲ್ದಾಣದ ಬಳಿ ಗಾವ್ರಿಕ್ ನಿಂತ.

"ಅಜ್ಜ ನನ್ನ ದಿನಾ ಹೊಡೆಯುತ್ತಾರೆ." ಸತ್ತ್ವಗುಂದಿದ ಧ್ವನಿಯಲ್ಲಿ ಗಾವ್ರಿಕ್ ನುಡಿದ. ಆಗ ಅವನು ಹರಿದ ಷರಟಿನ ತೋಳಿನಿಂದ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದ. "ಆಮೇಲೆ ನಿನ್ನನ್ನು ನೋಡ್ತೇನೆ" ಎಂದು ಹಿಂದಕ್ಕೆ ತಿರುಗಿದ.

"ಈಗ ಎಲ್ಲಿಗೆ ಹೋಗ್ತೀಯಾ ?"

"ಕಾರ್ಖಾನೆಯ ಉಪನಗರಕ್ಕೆ."

ಪೇತ್ಯ ಕುಲಿಕೊವೊ ಮೈದಾನದ ಮೂಲಕ ಹಾದು ಮನೆ ಸೇರಿದ. ಗಾಳಿ ಬೀಸಿ ಹಾಳು ಸುರಿಯುತ್ತಿದ್ದ ಒಣಗಿದ ಧೂಳನ್ನು ಎಬ್ಬಿಸಿತು.

ದಾರಿಯಲ್ಲಿ ಕಂಡ ಚಪ್ಪಟೆಯಾದ ಬಂದೂಕದ ಗುಂಡಿನ ಪೊಟ್ಟಣ ಕೂಡ ಪೇತ್ಯನಿಗೆ ಆಸಕ್ತಿಯನ್ನು ಹುಟ್ಟಿಸಲಿಲ್ಲ, ಹರ್ಷವನ್ನು ತರಲಿಲ್ಲ. ಅವನ ಹೃದಯ ದುಃಖದಿಂದ ಅಷ್ಟರ ಮಟ್ಟಿಗೆ ಭಾರವಾಗಿದ್ದಿತು.

೩೦. ವಿಶ್ವವಿದ್ಯಾನಿಲಯ ಪ್ರಾವೇಶಿಕ ತರಗತಿ

ಶರತ್ಕಾಲ ಬಂದಿತು. ಪೇತ್ಯ ವಿಶ್ವವಿದ್ಯಾನಿಲಯ ಪ್ರಾವೇಶಿಕ ಪಾಠಶಾಲೆಗೆ ಹೋಗಿ ಬರುತ್ತಿದ್ದಾನೆ. ಬಿಸಿಲಿಗೆ ಕಂದಿ ಕಪ್ಪುತಿರುಗಿದ್ದ ಚರ್ಮದ, ಮತ್ತು ಲೈಲ್‌ದಾರದ ಕಾಲುಚೀಲ ಮುಚ್ಚಿದ ಉದ್ದ ಕಾಲುಗಳ ಎತ್ತರವಾದ ಹುಡುಗ ಈಗ ತಲೆಗೂದಲನ್ನು ಕತ್ತರಿಸಿದ, ಪೋಟು ಕಿವಿಯ, ಕುಳ್ಳ ವಿದ್ಯಾರ್ಥಿಯಾಗಿ ಬದಲಾಯಿಸಿಬಿಟ್ಟಿದ್ದಾನೆ. ಇದಕ್ಕೆ ಕಾರಣ ಶಾಲೆಯ ಸಮವಸ್ತ್ರ. ವಿದ್ಯಾರ್ಥಿಗಳು ಪೇತ್ಯನನ್ನು ತಮ್ಮ ಬಳಕೆಯ ಮಾತಿನಲ್ಲಿ "ಹೀಚು" ಎಂದು ಕರೆಯುತ್ತಿದ್ದರು.

ಲ್ಯಾಂಡ್ಸ್‌ಮನ್‌ರವರ ಉಡುಪಿನ ಅಂಗಡಿಯಲ್ಲಿ ಮೂವತ್ತಾರು ರೂಬಲುಗಳನ್ನು ಕೊಟ್ಟು ಕೊಂಡುಕೊಂಡ ಉದ್ದಷರಾಯಿ ಮತ್ತು ತುಂಬುತೋಳಿನ ಅಂಗಿಗಳನ್ನು ಹಾಕಿಕೊಂಡಾಗ ಪೇತ್ಯನಿಗೆ ಕಿರುಕುಳವಾಗುತ್ತಿದ್ದುದಲ್ಲದೆ ಅದು ಗಾಳಿತುಂಬಿದ ಚಂಡಿನಂತೆ ಉಬ್ಬಿಕೊಂಡಿರುತ್ತಿತ್ತು. ಇದುವರೆಗೆ ಅವನು ಹಾಕಿಕೊಳ್ಳುತ್ತಿದ್ದ ನಾವಿಕರ ಅಂಗಿಯ ಕತ್ತು ಅಗಲವಾಗಿದ್ದುದರಿಂದ ಅವನ ಕೊರಳು ಬಿಡುವಾಗಿತ್ತು. ಈಗ ಒರಟಾದ ಕತ್ತಿನಪಟ್ಟಿ ಕೊರಳಿನಮೇಲೆ ಉಜ್ಜುತ್ತಿದ್ದುದರಿಂದ ಅವನಿಗೆ ಕತ್ತಿನಲ್ಲಿ ಉರಿ ಹತ್ತಿತ್ತು. ಟೋಪಿಯನ್ನು ತೆಗೆದುಕೊಳ್ಳುವುದಕ್ಕೆ ಕಾತುರನಾಗಿದ್ದಂತೆ ಪೇತ್ಯ ವಿಶ್ವವಿದ್ಯಾನಿಲಯ ಪ್ರಾವೇಶಿಕ ಶಾಲೆಯ ಗುರುತಾದ ಬೆಲ್ಟನ್ನು ಕೊಂಡುಕೊಳ್ಳಲು ಕನಸು ಕಾಣುತ್ತಿದ್ದ. ಜರ್ಮನ್‌ಬೆಳ್ಳಿ ಲೋಹದ ಕೊಕ್ಕೆಯನ್ನು ಹೊಂದಿದ್ದ ನಿಜವಾದ

ವಿಶ್ವವಿದ್ಯಾನಿಲಯ ಪ್ರಾವೇಶಿಕ ಶಾಲೆಯ ಗುರುತಿನ ಬೆಲ್ಟನ್ನು ಕೊಂಡುಕೊಂಡ. ಆದರೆ ಅದ ಅವನ ಮೊದಲಿನ ನಿರೀಕ್ಷೆಯನ್ನು ಪೂರ್ಣಗೊಳಿಸಲಿಲ್ಲ. ಬೆಲ್ಟು ಕಂಕುಳವರೆಗೂ ಬರಲ ಹವಣಿಸುತ್ತಿದ್ದಿತಲ್ಲದೆ, ಅದರ ಕೊಕ್ಕೆ ಒಂದು ಪಕ್ಕಕ್ಕೆ ಜಾರಿಕೊಂಡು ಹೋಗುತ್ತಿತ್ತು. ಬೆಲ್ಟಿ ತುದಿಯು ನಾಲಗೆಯಂತೆ ಮೇಲಕ್ಕೂ ಕೆಳಕ್ಕೂ ತೂಗಾಡುತ್ತಿತ್ತು. ಪೇತ್ಯನ ಈ ದುರವಸ್ ಯನ್ನು ನೋಡಿ ದೊಡ್ಡ ಹುಡುಗರೆಲ್ಲ ಹಾಸ್ಯಮಾಡುತಿದ್ದುದರಿಂದ ಬೆಲ್ಟಿನಿಂದ ಅವನಿಗೆ ಅಪಮಾ ವೆನಿಸುತ್ತಿತ್ತು.

ಆದರೆ ಕಾಪಿ ಪುಸ್ತಕಗಳನ್ನೂ, ಪಠ್ಯಪುಸ್ತಕಗಳನ್ನೂ ಮತ್ತು ಬರೆಯುವ ಕಾಗದ ಕಡ್ ಮೊದಲಾದುವುಗಳನ್ನೂ ಕೊಂಡುಕೊಳ್ಳುವಾಗ ಅವನಿಗೆ ತಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚ ಸಂತೋಷ ದೊರೆಯಿತು. ರಿಚಡ್ಲರಸ್ತೆ, ಆರ್ಕೇಡ್ ಮೊದಲಾದ ಸ್ಥಳಗಳಲ್ಲಿಯ ಗೊಡ ಅಂಗಡಿಗಳಿಗಿಂತ ಈ ಶಾಂತವಾದ ಗಂಭೀರವಾದ ಪುಸ್ತಕದ ಅಂಗಡಿ ಬೇರೆಯದಾಗಿ ತೋರಿತು ಅವುಗಳಿಗೂ ಇದಕ್ಕೂ ಅರ್ಥಾರ್ಥ ಸಂಬಂಧವಿಲ್ಲ. ಔಷಧಿ ಅಂಗಡಿಗಳಿಗಿಂತ ಹೆಚ್ಚು ಘನವಾ ತೋರಿತು ಈ ಪುಸ್ತಕಗಳ ಅಂಗಡಿ. ಹೇಗಾದರೂ ಈ ಪುಸ್ತಕದ ಅಂಗಡಿ ಆ ಇತರ ಎ ಅಂಗಡಿಗಳಿಂತಲೂ ಹೆಚ್ಚು ಬೌದ್ಧಿಕವಾದುದಾಗಿತ್ತು. 'ಶೈಕ್ಷಣಿಕ' ಎಂಬ ಗಂಭೀರವಾದ ಆಡಂಬ ವಿಲ್ಲದ ಪದ ಹಲಗೆಯಮೇಲೆ ಬರೆದಿದ್ದುದನ್ನು ನೋಡಿದರೆ ಯಾರ ಮನಸ್ಸಿನಲ್ಲಾದರೂ ಅದ ಬಗೆಗೆ ಗೌರವ ಹುಟ್ಟುತ್ತಿತ್ತೆಂಬುದರಲ್ಲಿ ಸಂದೇಹವಿರಲಿಲ್ಲ.

ಅದೊಂದು ಶರತ್ಕಾಲದ ಸಂಜೆಯ ಸಮಯದಲ್ಲಿ ಪೇತ್ಯನ ತಂದೆ ಅವನನ್ನು ಶೈಕ್ಷಣ ಪುಸ್ತಕಗಳ ಅಂಗಡಿಗೆ ಕರೆದುಕೊಂಡುಹೋಗಿದ್ದರು. ಮಲಗಿ ನಿದ್ದೆ ಮಾಡುತ್ತಿರುವಂತೆ ಸಾ ಸಾಲಾಗಿ ಪುಸ್ತಕಗಳ ಹಿಂಬಾಗದ ರಟ್ಟುಗಳು ಕಾಣಿಸುತ್ತಿದ್ದುವು. ಗ್ಯಾಸ್ ದೀಪದ ಬೆಳಕಿನ ಪುಸ್ತಕಗಳು ಹಸಿರು ಬಣ್ಣದ ಛಾಯೆಯನ್ನು ಹೊಂದಿರುವಂತೆ ತೋರುತ್ತಿದ್ದುವು. ಅಲ್ಲದೆ ಪುಸ್ತಕಗಳಿಂದ ಹೊರಡುತ್ತಿದ್ದ ಒಂದು ರೀತಿಯ ಸುವಾಸನೆ ವಿಶ್ವವಿದ್ಯಾನಿಲಯದ ಪರಿಮಳವೆ ಭಾವನೆಯನ್ನು ಹುಟ್ಟಿಸುತ್ತಿದ್ದುವು. ಪುಸ್ತಕಗಳ ಮೇಲುಗಡೆ ಗೋಡೆಯ ಮೇಲೆ ಮಾ ಜನಾಂಗದ ಜನಗಳ ಕೆಂಪು, ಹಳದಿ, ಕಪ್ಪು, ಬಿಳಿ ಬಣ್ಣದ ತಲೆಯ ನಾಲ್ಕು ಚಿತ್ರಗಳ ತೂಗುಹಾಕಲಾಗಿತ್ತು.

ಅವು ಪ್ರತಿನಿಧಿಸುವುವೆಂದು ನಂಬಲಾಗಿದ್ದ ಜನಾಂಗಗಳ ಲಕ್ಷಣವನ್ನು ಮೊದಲಿನ ಮೂ ತಲೆಗಳು ಹೋಲುತ್ತಿದ್ದುವು. ಇಂಡಿಯಾದವನ ತಲೆ ಎಷ್ಟು ಸಾಧ್ಯವೋ ಅಷ್ಟೂ ಕೆಂಪಗಿ ಚೀಣೀಯನ ಮುಖವು ನಿಂಬೆ ಹಣ್ಣಿನ ಬಣ್ಣದಂತೆ ಹಳದಿಯಾಗಿತ್ತು. ನೀಗ್ರೋವಿನ ಬಣ್ಣ ನಲ್ಲಿ ಕಪ್ಪು. ಹೆಸರಿಗೆ ತಕ್ಕಂತೆ ಇಲ್ಲದೆ ಇದ್ದುದೆಂದರೆ "ಆಳುವ ಜನಾಂಗ"ದ ಮನುಷ್ಯನ ಅದರ ಮುಖದ ಬಣ್ಣ ಪೂರ್ತಿ ಬೆಳ್ಳಗಿರಲಿಲ್ಲ. ಸ್ವಲ್ಪ ಅರುಣ ಕಾಂತಿ ಅದರಲ್ಲಿತ್ತು. ಉದ್ದ ನಸುಹೊಂಬಣ್ಣದ ಗಡ್ಡ ಬೇರೆ ಇದ್ದಿತು.

ಪೇತ್ಯ ಅಲ್ಲಿ ನಿಲ್ಲಿಸಿದ್ದ ನೀಲಿಯ ಭೂಗೋಳಗಳನ್ನೂ, ಅವುಗಳ ಮೇಲಿನ ಚಿನ್ನದ ಬ ಮಧ್ಯಾಹ್ನ ರೇಖೆಗಳನ್ನೂ, ನಕ್ಷತ್ರಗಳ ಕಪ್ಪು ನಕ್ಷೆಗಳನ್ನೂ, ಆಶ್ಚರ್ಯವನ್ನೂ ದಿಗಿಲ ಉಂಟುಮಾಡುವಷ್ಟು ಪ್ರಕಾಶಮಾನವಾದ ಬಣ್ಣಗಳಿಂದ ಚಿತ್ರಿಸಿದ ಮಾನವ ಶರೀರಶಾಸ್ತ್ರದ ಗಳನ್ನೂ ಮುಗ್ಧನಾಗಿ ನೋಡುತ್ತ ನಿಂತ.

ಲೋಕಜ್ಞಾನವೆಲ್ಲ ಈ ಅಂಗಡಿಯಲ್ಲಿ ಕೇಂದ್ರೀಕರಿಸಿರುವುದೋ ಎನ್ನಿಸುತ್ತಿತ್ತು. ಅಲ್ಲಿ ಬಂದ ಗಿರಾಕಿಯ ಚರ್ಮದ ರಂಧ್ರಗಳ ಮೂಲಕ ಹಾದು ಅವನ ಒಳಕ್ಕೆ ಜ್ಞಾನವು ಪ್ರವೇಶ ಮಾಡುವುದೆಂಬ ಭಾವನೆಯನ್ನು ಉಂಟುಮಾಡುತ್ತಿತ್ತು. ಆ ಅಂಗಡಿಯಲ್ಲಿ ಹತ್ತು ನಿಮಿಷಗಳಿಗಿಂತ ಹೆಚ್ಚು ಕಾಲ ನಿಲ್ಲದೆ ಹೋಗಿದ್ದರೂ, ಒಟ್ಟಿನಲ್ಲಿ ಐದು ಪುಸ್ತಕಗಳನ್ನು ಮಾತ್ರ ಕೊಂಡುಕೊಂಡಿದ್ದರೂ, ಅವರು ಕೊಂಡುಕೊಂಡ ಅತಿ ಹೆಚ್ಚಿನ ಬೆಲೆಯ ದಪ್ಪ ಪುಸ್ತಕವೆಂದರೆ ನಲವತ್ತೆರಡು ಕೊಪೆಕ್ಕುಗಳದು ಆಗಿದ್ದರೂ, ಕುದುರೆ ಟ್ರಾಮ್ ಗಾಡಿಯಲ್ಲಿ ಮನೆಗೆ ಹಿಂದಿರುಗುತ್ತಿದ್ದಾಗ ಪೇತ್ಯ ಅಸಾಧಾರಣ ವಿದ್ಯಾವಂತನೆಂದೇ ಭಾವಿಸಲಾರಂಭಿಸಿದ.

ಅಲ್ಲದೆ ಅವರು ಕರುವಿನ ತೊಗಲಿನ ಒಳ್ಳೆಯ ಪುಸ್ತಕದ ಚೀಲವನ್ನೂ ಒಂದು ಚಿಕ್ಕ ಉಪಹಾರವನ್ನು ಒಯ್ಯುವ ಪೆಟ್ಟಿಗೆಯನ್ನೂ ಕೊಂಡುಕೊಡಿದ್ದರು. ಆ ಚರ್ಮದ ಚೀಲದ ಹೊರಗಡೆ ಮೃದುವಾದ ಕೂದಲುಗಳು ಬೇರೆ ಇದ್ದುವು. ಒಂದು ಸುಂದರವಾದ ಸೀಸದ ಕಡ್ಡಿಗಳನ್ನಿಡುವ ಪೆಟ್ಟಿಗೆಯನ್ನೂ ಕೊಂಡುಕೊಂಡಿದ್ದರು. ಅದರ ಮೆರುಗಿನ ಮುಚ್ಚಳದ ತುದಿಯಲ್ಲಿ ಒಂದರಿಂದ ಇನ್ನೊಂದಕ್ಕೆ ವರ್ಗಾಯಿಸಬಹುದಾದ ಚಿತ್ರವನ್ನು ಕೂಡ ಇಟ್ಟಿದ್ದಿತು. ಅದರ ಮುಚ್ಚಳ ಬಹಳ ಬಿಗಿಯಾಗಿದ್ದುದರಿಂದ ಅದನ್ನು ತೆರೆದಾಗ ಹಳ್ಳಿಯಲ್ಲಿ ಮಾಡಿಸಿದ ಮರದ ಸಾಮಾನಿನಂತೆ ಕರಕರ ಎಂದು ಶಬ್ದ ಮಾಡುತ್ತಿತ್ತು. ಆ ಪೆಟ್ಟಿಗೆಯ ಖಾನಿಗಳಲ್ಲಿ ಆಯಾ ಸ್ಥಳಗಳಿಗೆ ಯೋಗ್ಯವಾದ ವಸ್ತುಗಳನ್ನು ಇಡುವ ಕೆಲಸದಲ್ಲಿ ಪೇತ್ಯ ಅಸಾಧಾರಣವಾದ ಎಚ್ಚರಿಕೆಯನ್ನೂ ಅಭಿರುಚಿಯನ್ನೂ ತೋರಿಸಿದ. ಆ ಪೆಟ್ಟಿಗೆಯ ಯಾವ ಭಾಗವೂ ಖಾಲಿ ಇರಕೂಡದೆಂಬುದಕ್ಕೆ ವಿಶೇಷ ಗಮನ ಕೊಟ್ಟಿದ್ದ. ಮೂರು ರಂಧ್ರದ ನೀಲಿಯ ಬರೆಯುವ ಮುಳ್ಳುಗಳು, "ಕೊಸ್ನೋಡೊ", "ರೋಂಡೊ", "ನಂ ೮೬", ಸುವಿಖ್ಯಾತ ಕವಿಯ ಗುಂಗುರು ಕೂದಲಿನ ತಲೆಯ ಚಿತ್ರವಿದ್ದ "ಪುಷ್ಕಿನ್"— ಹೀಗೆಯೇ ಇನ್ನೂ ಅನೇಕ ವಿಧದ ಬರೆಯುವ ಮುಳ್ಳುಗಳು ಆ ಪೆಟ್ಟಿಗೆಯ ಖಾಲಿಜಾಗಗಳನ್ನು ಭರ್ತಿಮಾಡಿದುವು.

ಆನೆಯ ಚಿತ್ರವಿದ್ದ ಇಂಡಿಯಾ ರಬ್ಬರ್, ಬಣ್ಣದ ಬಳಪ, ಬರೆಯುವುದಕ್ಕೆ ಒಂದು ಚಿತ್ರಗಳಿಗೆ ಒಂದು ಎಂದು ಎರಡು ಸೀಸದ ಕಡ್ಡಿಗಳು, ಹೊಳೆಯುವ ಕಪ್ಪೆಚಿಪ್ಪಿನ ಹಿಡಿಯ ಚಾಕು, ಇಪ್ಪತ್ತು ಕೊಪ್ಪೆಕ್ಕುಗಳ ಬೆಲೆಯ ಸೊಗಸಾದ ಲೇಖನಿ, ಬಣ್ಣದ ಗೋಂದಿನ ಪಟ್ಟಿಗಳು ರೇಖನ ಕಲೆಯಲ್ಲಿ ಉಪಯೋಗಿಸುವ ಗುಂಡು ಸೂಜಿಗಳು, ಸಾಧಾರಣ ಗುಂಡು ಸೂಜಿಗಳು ಮತ್ತು ಚಿತ್ರಗಳು—ಈ ಎಲ್ಲ ವಸ್ತುಗಳನ್ನೂ ಆ ಪೆಟ್ಟಿಗೆಯಲ್ಲಿ ಆಯಾ ಸ್ಥಳದಲ್ಲಿರಿಸಲಾಯಿತು.

ಈ ಎಲ್ಲ ಸಣ್ಣಪುಟ್ಟ ನಾಜೋಕಾದ ಅಭ್ಯಾಸದ ಸಾಧನ ಸಾಮಗ್ರಿಗಳು ಹೊಚ್ಚ ಹೊಸದಾಗಿದ್ದುವು. ಅವುಗಳ ಹೊಳಪೂ, ಹಿತಕರ ವಾಸನೆಯೂ ಪೇತ್ಯನ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತಿದ್ದುವು.

ಪೇತ್ಯ ಆದಿನ ಸಂಜೆಯೆಲ್ಲ ತನ್ನ ಪುಸ್ತಕಗಳ ಮತ್ತು ಕಾಪಿಪುಸ್ತಕಗಳಮೇಲೆ ನೀಲಿ ಚೀಟಿಗಳನ್ನೂ, ಅಂಚುಗಳಿಗೆ ಗೋಂದಿನ ಕಾಗದಗಳನ್ನೂ ಅಂಟಿಸುವುದರಲ್ಲಿ ಕಳೆದ.

ಶಾಯಿಯನ್ನು ಒತ್ತುವುದಕ್ಕೆ ಉಪಯೋಗಿಸುವ ಸಾಧನದ ಮೂಲೆಗಳಿಗೆ ಹೂವಿನ ಬಳ್ಳಿ

ಗಳ, ಗೊಂಚಲುಗಳ ಚಿತ್ರಗಳ ಪಟ್ಟಿಯನ್ನು ಅಂಟಿಸಿದ. ಎಲ್ಲ ಕಾಪಿ ಪುಸ್ತಕಗಳ ಮೇಲೂ

ಈ ಕಾಪಿಪುಸ್ತಕವು

ಪಿ. ಬಾಚಿ

೦. ಶ· ಜಿ. ವಿಶ್ವವಿದ್ಯಾನಿಲಯ ಪ್ರಾವೇಶಿಕಶಾಲೆಯ ವಿದ್ಯಾರ್ಥಿಯ ಆಸ್ತಿ.

ಎಂದು ಅಚ್ಚುಕಟ್ಟಾಗಿ ಅಚ್ಚುಹೊಡೆದ.

ಬೆಳಗಾಗುವವರೆಗೂ ಕಾಯವಷ್ಟು ತಾಳ್ಮೆ ಪೇತ್ಯನಲ್ಲಿ ಉಳಿದಿರಲಿಲ್ಲ. ಇನ್ನೂ ಮನೆಯಲ್ಲಿ ದೀಪ ಉರಿಯುತ್ತಲೇ ಇತ್ತು, ಹೊರಗಡೆ ಕತ್ತಲೆ ಅಳಿದಿರಲಿಲ್ಲ. ಅಷ್ಟು ಹೊತ್ತಿಗೇ ಯುದ್ಧಕ್ಕೆ ಸಿದ್ಧನಾಗಿ ಹೊರಡುವ ಸಿಪಾಯಿಯಂತೆ ಪೇತ್ಯ ತಲೆಯಿಂದ ಕಾಲಿನವರೆಗೆ ಸಿಂಗರಿಸಿಕೊಂಡು ಶಾಲೆಗೆ ಓಡಿದ.

ಜ್ಞಾನದ ಯಾವ ಇಲಾಖೆಯೂ ಕೂಡ ಪೇತ್ಯನ ದಾಳಿಯನ್ನು ತಡೆಯಲು ಸಮರ್ಥವಾಗಲಿಲ್ಲ. ಅವನ ಶಾಲೆಯ ಅಭ್ಯಾಸದ ಸಲಕರಣೆಗಳನ್ನು ಉತ್ತಮಪಡಿಸುವಲ್ಲಿ ಮನೆ ಮತ್ತು ಶಾಲೆಗಳೆರಡು ಕಡೆಯೂ ಮೂರು ವಾರಗಳ ಕಾಲ ತಾಳ್ಮೆಯಿಂದ ಶ್ರಮಿಸುತ್ತ ಇರಬೇಕಾಯಿತು. ಪುನಃ ಪುನಃ ಚಿತ್ರಗಳನ್ನು ತೆಗೆದು ಅಂಟಿಸಲಾಯಿತು, ಪಠ್ಯಪುಸ್ತಕಗಳ ರಟ್ಟುಗಳನ್ನು ತೆಗೆದು ಬೇರೆ ಬೇರೆ ಹಾಕಿಸಿದ್ದಾಯಿತು. ಸೌಂದರ್ಯದ ಅತ್ಯುನ್ನತ ಸ್ಥಿತಿಯನ್ನೂ ಪರಿಪೂರ್ಣತೆಯನ್ನೂ ಸಾಧಿಸಲು ಪಟ್ಟ ಪ್ರಯತ್ನ ಅಷ್ಟಿಷ್ಟಲ್ಲ.

"ಶಾಲೆಯ ಪಾಠಗಳನ್ನು ಓದುವುದು ಒಳ್ಳೆಯದಲ್ಲವೇ?" ಎಂದು ತಾತ್ಯಾನ ಚಿಕ್ಕಮ್ಮ ಟೀಕಿಸಿದಾಗ ಪೇತ್ಯ ನಿರಾಶೆಯಿಂದ "ಇಂಥ ಅರ್ಥವಿಲ್ಲದ ಮಾತುಗಳನ್ನಾಡಬೇಡ, ಚಿಕ್ಕಮ್ಮ. ಎಲ್ಲವನ್ನೂ ಸರಿಯಾಗಿ ಸಿದ್ಧಪಡಿಸಿಟ್ಟುಕೊಳ್ಳದೆ ಹೇಗೆ ಅಭ್ಯಾಸಮಾಡುವುದು?" ಎಂದು ಪೇತ್ಯ ಗೊಣಗುತ್ತಿದ್ದ.

ಇದುವರೆಗೆ ಎಲ್ಲವೂ ಭರ್ಜರಿಯಾಗಿ ನಡೆಯುತ್ತ ಬಂದಿತೆಂದು ಒಂದು ಮಾತಿನಲ್ಲಿ ಹೇಳಬಹುದು.

ಪೇತ್ಯನ ಜ್ಞಾನಾರ್ಜನೆಯ ಆನಂದಕ್ಕೆ ಮಸಿಬಳಿಯುವ ಒಂದೇ ಒಂದು ಸಂಗತಿ ನಡೆಯಿತು. ಒಂದೇ ಒಂದುಸಲವಾದರೂ ಪೇತ್ಯನನ್ನು ಪದ್ಯ ಹೇಳಲು ಉಪಾಧ್ಯಾಯರು ತರಗತಿಯಲ್ಲಿ ಕರೆದಿರಲಿಲ್ಲ. ಅವನ ವರದಿಯ ಪುಸ್ತಕದಲ್ಲಿ ಒಂದೇ ಒಂದು ಗುರುತನ್ನೂ ಮಾಡಿರಲಿಲ್ಲ. ತರಗತಿಯ ಎಲ್ಲ ಹುಡುಗರ ಪುಸ್ತಕಗಳಲ್ಲೂ ಹುಡುಗರ ಕಲಿಕೆಯ ವರದಿಯನ್ನು ಗುರುತಿಸಲಾಗಿತ್ತು. ಆದರೆ ಪೇತ್ಯನ ಪುಸ್ತಕ ಖಾಲಿಯಾಗಿತ್ತು. ಪ್ರತಿ ಶನಿವಾರವೂ ಖಾಲಿಯಾಗಿಯೇ ಇದ್ದ ತನ್ನ ವರದಿಯ ಪುಸ್ತಕವನ್ನು ದುಃಖದಿಂದ ಮನೆಗೆ ತರುತ್ತಿದ್ದ. ಆದರೆ ಆ ಪುಸ್ತಕವನ್ನು ಕೆಂಪುರಟ್ಟಿನಿಂದ ಅಂದಗೊಳಿಸಿದ್ದ. ಅದರ ಮೇಲೆ ಚಿನ್ನ ಮತ್ತು ಬೆಳ್ಳಿಯ ನಕ್ಷತ್ರಗಳನ್ನು ಅಂಟಿಸಿ ಅಲಂಕರಿಸಿದ್ದ. ಒಂದು ಶನಿವಾರ. ಅಂದು ಪೇತ್ಯ ಮೈಮೇಲಿನ ಕೋಟನ್ನೂ ತೆಗೆಯದೆ ವರದಿಯ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡೇ ನೇರವಾಗಿ ಅಡಿಗೆಯ ಮನೆಗೆ ನುಗ್ಗಿದ. ಅವನ ಮುಖ ಕೆಂಪಗೆ ಬೆಳಗುತ್ತಿತ್ತು. ತನ್ನ ಸುಂದರವಾದ ವರದಿಯ ಪುಸ್ತಕವನ್ನು ಮೇಲಕ್ಕೆತ್ತಿ ಬೀಸುತ್ತ "ಚಿಕ್ಕಮ್ಮ! ಪಾವಲಿಕ್! ದುನ್ಯ! ಬನ್ನಿ ಬನ್ನಿ ಬೇಗ. ನನಗೆ ನಂಬರು ಕೊಟ್ಟುಬಿಟ್ಟ

ದ್ದಾರೆ. ಅಯ್ಯೋ, ಇನ್ನೂ ಅಪ್ಪ ಶಾಲೆಯಿಂದ ಬಂದೇ ಇಲ್ಲವಲ್ಲ!" ಎಂದು ಕೂಗಿದ. ವಿಜಯೋತ್ಸಾಹದಿಂದ ವರದಿಯ ಪುಸ್ತಕವನ್ನು ಮೇಜಿನ ಮೇಲಕ್ಕೆ ಎಸೆದ. ಅವರು ಅದರಲ್ಲಿ ಬರೆದಿರುವ ಅಂಕಗಳನ್ನು ಗಮನವಿಟ್ಟು ನೋಡುವುದಕ್ಕೆ ನಡುವೆ ಅಡ್ಡಿ ಆಗದಂತೆ ಹೆಮ್ಮೆಯಿಂದ ಹೆಜ್ಜೆಯಿಡುತ್ತ ದೂರ ಸರಿದು ನಿಂತ.

ಯಾವುದೋ ಉಡುಪಿನ ಮಾದರಿಯನ್ನು ಕೈಯ್ಯಲ್ಲಿ ಹಿಡಿದ ಚಿಕ್ಕಮ್ಮ "ಎಲ್ಲಿ, ಎಲ್ಲಿ? ನಿನ್ನ ನಂಬರುಗಳನ್ನು ನೋಡೋಣ." ಎಂದು ಕೂಗುತ್ತ ಊಟದ ಮನೆಗೆ ಓಡಿಬಂದಳು. ವರದಿಯ ಪುಸ್ತಕವನ್ನು ಕೈಗೆ ತೆಗೆದುಕೊಂಡು ಅದನ್ನು ಪರೀಕ್ಷಿಸಿದಳು. "ಧರ್ಮ—ಸಾಕಷ್ಟಿಲ್ಲ. ರಷ್ಯನ್ ಭಾಷೆ—ಸಾಕಷ್ಟಿಲ್ಲ. ಅಂಕಗಣಿತ—ಅತೃಪ್ತಿಕರ. ಗಮನ—ತೃಪ್ತಿಕರ. ವ್ಯಾಸಂಗ—ತಕ್ಕಮಟ್ಟಿಗಿದೆ." ಈ ವರದಿಯನ್ನು ಆಶ್ಚರ್ಯಪಡುತ್ತಲೇ ಓದಿದಳು. ಆಕ್ಷೇಪಿಸುವ ರೀತಿಯಲ್ಲಿ ತಲೆಯಲ್ಲಾಡಿಸಿದಳು. "ನೀನೇಕಿಷ್ಟು ಕುಣಿದಾಡುತ್ತೀಯೋ ನನಗೆ ಬೇರೆ ತಿಳಿಯದು. 'ಸಾಕಷ್ಟಿಲ್ಲ' ಗಳ ಪ್ರಾಸವಲ್ಲದೆ ಬೇರೆ ಏನೂ ಇಲ್ಲಿ ಕಾಣುತ್ತಿಲ್ಲ" ಎಂದಳು.

ಪೇತ್ಯ ಸಿಡುಕಿನಿಂದ ನೆಲವನ್ನು ಕಾಲಿನಿಂದ ಅಪ್ಪಳಿಸಿದ. ತೀವ್ರ ಅಸಮಾಧಾನವನ್ನು ಪ್ರಕಟಿಸಿ ಅಳುತ್ತ "ನನಗೆ ಗೊತ್ತಿತ್ತು. ನೀನು ಹೀಗೆ ಹೇಳುತ್ತೀಯಾ ಎಂದು! ನಿನಗೆ ಏನೂ ಗೊತ್ತಾಗವುದಿಲ್ಲ, ಚಿಕ್ಕಮ್ಮ. ನಂಬರು ಕೊಟ್ಟಿದ್ದಾರಲ್ಲ ಅದೇ ಮುಖ್ಯವಾದದ್ದು. **ನಂಬರುಗಳು** ಕಣ್ಣಿಗೆ ಕಾಣಿಸುವುದಿಲ್ಲವೆ? ನಿನಗೆ ಕಣ್ಣಿಗೆ ಕಾಣದಿದ್ದರೂ ತಿಳಿದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಯಾವಾಗಲೂ ಹೀಗೆಯೇ ನೀನು!" ಪೇತ್ಯ ಕೋಪದಿಂದ ತನ್ನ ನಿಧಿಯಂತಿದ್ದ ವರದಿಯ ಪುಸ್ತಕವನ್ನು ಕಿತ್ತುಕೊಂಡು ನಂಬರುಗಳನ್ನು ಜತೆಯ ಹುಡುಗರಿಗೆ ತೋರಿಸುವುದಕ್ಕೋಸ್ಕರ ಹೊರಕ್ಕೆ ಓಡಿದ. ಹೀಗೆ ಪೇತ್ಯನ ವಿದ್ಯಾಭ್ಯಾಸದಲ್ಲಿ ಮೊದಲಿನ ಹಂತವಾದ ಉಲ್ಲಾಸದ ಕಾಲ ಮುಗಿಯಿತು. ಗೆಲುವಿಲ್ಲದ ನೀರಸವಾದ ಉರುಹಚ್ಚುವ ದಿವಸಗಳು ಉಲ್ಲಾಸದ ಕಾಲವನ್ನು ಹಿಂಬಾಲಿಸಿದುವು.

ಸ್ವಲ್ಪ ಕಾಲ ಗಾವ್ರಿಕ್ ಕೂಡ ಪೇತ್ಯನ ಇರುವಿಕೆಯನ್ನು ಮರೆತುಬಿಟ್ಟಿದ್ದ. ಅವನು ಈಗ ಟೆರೆಂಟಿಯೊಡನೆ ಉಪನಗರದಲ್ಲಿ ವಾಸಮಾಡುತ್ತಿದ್ದ. ಅಜ್ಜ ಇನ್ನೂ ಜೈಲಿನಲ್ಲಿಯೇ ಇದ್ದ. ಕೆಲವು ಕಾಲ ಅಲೆಗ್ಸಾಂಡ್ರೋವ್ಸ್ಕಿ ಕಾರಾಗೃಹದಲ್ಲಿಯೂ ಕೆಲವು ಕಾಲ ಪೋಲೀಸ್ ಗೂಢಸಮಾಚಾರರ ಇಲಾಖೆಯಲ್ಲಿಯೂ ಅಜ್ಜನನ್ನು ಇಟ್ಟಿರುತ್ತಿದ್ದರು. ಗೂಢಸಮಾಚಾರದ ಇಲಾಖೆಗೆ ರಾತ್ರಿಯಹೊತ್ತು ಗಾಡಿಯಲ್ಲಿ ಕರೆದುಕೊಂಡು ಹೋದ ದಿನಗಳೆಷ್ಟೋ. ಆ ಮುದುಕ ತನ್ನ ನಾಲಗೆಯನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಬಲ್ಲವನಾಗಿದ್ದ. ಆದ್ದರಿಂದ ಪೋಲೀಸಿನವರು ಟೆರೆಂಟಿಯನ್ನು ಮಾತಾಡಿಸಿರಲಿಲ್ಲ.

ನಾವಿಕ ಎಲ್ಲಿದ್ದನೆಂಬುದು ಗಾವ್ರಿಕನಿಗೆ ಸರಿಯಾಗಿ ಗೊತ್ತಿರಲಿಲ್ಲ. ಆ ವಿಷಯವನ್ನು ಟೆರೆಂಟಿಯಿಂದ ಕೇಳಿ ತಿಳಿದುಕೊಳ್ಳಬೇಕಾದ ಆವಶ್ಯಕತೆಯೂ ಅವನಿಗಿರಲಿಲ್ಲ. ಅಲ್ಲೇ ಎಲ್ಲೋ ಸಮೀಪದಲ್ಲೇ ನಾವಿಕ ಅಡಗಿಕೊಂಡಿದ್ದಾನೆಂಬುದನ್ನು ಕೆಲವೊಂದು ಸೂಚನೆಗಳಿಂದ ಗಾವ್ರಿಕ್ ತಿಳಿದುಕೊಂಡಿದ್ದ. ಕಾರ್ಖಾನೆಯ ಕೆಲಸಗಾರರ ನಿವಾಸಸ್ಥಾನದ ಆ ಭಾಗದಲ್ಲಿ ಎಷ್ಟೊಂದು ರಹಸ್ಯಗಳಿರಲಿಲ್ಲ? ಒಬ್ಬ ವ್ಯಕ್ತಿ ಅಡಗಿಕೊಂಡಿರಲು ಬೇಕಾದಷ್ಟು ಅನುಕೂಲಸ್ಥಳಗಳಿದ್ದುವು ಅಲ್ಲಿ. ಆ

ಭಾಗದಲ್ಲಿ ಎಷ್ಟು ಜನ ಹಾಗೆ ಪೋಲೀಸರ ಕಣ್ಣಿಗೆ ಕಾಣದಂತೆ ಅಡಗಿಕೊಂಡಿರಲಿಲ್ಲ? ಇತರರ ವಿಚಾರಗಳಲ್ಲಿ ತಾನು ಪ್ರವೇಶಿಸಬಾರದೆಂಬ ನಿಯಮಕ್ಕೆ ಗಾವ್ರಿಕ್ ಕಟ್ಟುಬಿದ್ದಿದ್ದ. ಅಲ್ಲದೆ ಅವನಿಗೆ ತನ್ನ ತೊಂದರೆಗಳೇ ಬೇಕಾದಷ್ಟಿದ್ದುವು. ಅವನು ಇತರರ ಸಮಾಚಾರಗಳನ್ನು ತೆಗೆದು ಕೊಂಡು ಏನು ಮಾಡಿಯಾನು?

ಟೆರೆಂಟಿಯ ಕುಟುಂಬ ಹೊಟ್ಟೆಗೆ ಬಟ್ಟೆಗೆ ಮಾಡಿಕೊಳ್ಳಲು ಪ್ರಯಾಸಪಡುತ್ತಿದ್ದಿತು. ರೈಲ್ವೆ ಕಾರ್ಖಾನೆಯ ಕೆಲಸಗಾರರೆಲ್ಲ ಬಹುಪಾಲು ದಿನಗಳು ಮುಷ್ಕರದಲ್ಲಿರುತ್ತಿದ್ದರು. ಮನೆ ಯಲ್ಲಿ ನಡೆಸುತ್ತಿದ್ದ ರಿಪೇರಿ ಕೆಲಸಗಳಿಂದ ಟೆರೆಂಟಿ ಸ್ವಲ್ಪ ಮಟ್ಟಿಗೆ ಸಂಪಾದಿಸುತ್ತಿದ್ದ. ಅವನಿಗೆ ಬೇಕಾದಷ್ಟು ಕೆಲಸ ಸಿಕ್ಕಬೇಕಲ್ಲ! ಅಲ್ಲದೆ ಯಾವುದೋ ತುರ್ತು ಕೆಲಸಗಳಲ್ಲಿ ಅವನ ಕಾಲ ವಿಶೇಷವಾಗಿ ವೆಚ್ಚವಾಗಿ ಹೋಗುತ್ತಿದ್ದಿತು. ಮನೆಯಲ್ಲಿ ಈ ವಿಷಯಗಳನ್ನು ಬಹಳ ರಹಸ್ಯ ವಾಗಿಟ್ಟಿರುತ್ತಿದ್ದರು, ಸ್ಪಷ್ಟವಾಗಿ ಮಾತನಾಡುತ್ತಿರಲಿಲ್ಲ.

ಟೆರೆಂಟಿಗೆ ತನ್ನ ಮೇಲೆ ತನಗೇ ಅಧಿಕಾರವಿರಲಿಲ್ಲವೋ ಎನ್ನಿಸುತ್ತಿತ್ತು. ಅರ್ಧರಾತ್ರಿ ಯಲ್ಲಿ ಯಾರಾದರೂ ಅವನನ್ನು ಹುಡುಕಿಕೊಂಡು ಬಂದರೆ ಮರುಮಾತನಾಡದೆ ಬಟ್ಟೆ ಹಾಕಿ ಕೊಂಡು ಟೆರೆಂಟಿ ಅವರೊಡನೆ ಹೊರಟುಬಿಡುತ್ತಿದ್ದ. ಎಷ್ಟೋ ದಿನಗಳು ಮನೆಗೆ ಬರದೇ ಇದ್ದ ಸಂದರ್ಭಗಳೂ ಉಂಟು.

ಅವನ ಮನೆಗೆ ಜನಗಳು ಯಾವಾಗಲೂ ಬರುತ್ತಲೇ ಇದ್ದರು. ಬಂದವರಿಗೆ ಟೀ ಕಾಯಿಸಿ ಕೊಡಲು ನೀರನ್ನು ಯಾವಾಗಲೂ ಒಲೆಯಮೇಲೆ ಇಟ್ಟಿರಬೇಕಾಗುತ್ತಿತ್ತು; ಅವರಿಗೆ ಅಂಬಲಿ ಕಾಯಿಸಿ ಕೊಡಬೇಕಾಗುತ್ತಿತ್ತು. ಆ ಶರತ್ಕಾಲದಲ್ಲಿ ಟೆರೆಂಟಿಯ ಮನೆಯ ಮುಂದುಗಡೆಯ ಪ್ರವೇಶದ್ವಾರದಲ್ಲಿ ಎಷ್ಟು ಜನರ ಹೆಜ್ಜೆಯ ಗುರುತುಗಳು ಮಣ್ಣಿನಲ್ಲಿ ಮೂಡಿರುತ್ತಿದ್ದುವೋ! ಕೊಠಡಿಯಂತೂ ಅಗ್ಗದ ಹೊಗೆಸೊಪ್ಪಿನ ಹೊಗೆಯಿಂದ ತುಂಬಿರುತ್ತಿತ್ತು.

ತನ್ನ ಅಣ್ಣನಿಗೆ ಹೊರೆಯಾಗಿರಲು ಗಾವ್ರಿಕನ ಅಂತರಂಗ ಒಪ್ಪುತ್ತಿರಲಿಲ್ಲ. ಅವರ ಅಣ್ಣ ನಿಗೆ ಸಂಸಾರವಿದ್ದಿತು. ಅವರ ಹೊಟ್ಟೆಗಾಗಿ ದುಡಿಯಬೇಕಾಗಿತ್ತು ಅವನು. ಆದುದರಿಂದ ಗಾವ್ರಿಕ್ ತನ್ನ ಹೊಟ್ಟೆಯನ್ನು ತಾನು ಹೊಡೆದುಕೊಳ್ಳಬೇಕಾಗಿತ್ತು. ಅವನೇನು ಇನ್ನೂ ಮಗುವೆ? ಅಲ್ಲದೆ ಜೈಲಿನಲ್ಲಿದ್ದ ಅಜ್ಜನಿಗೆ ಅನ್ನವನ್ನು ತೆಗೆದುಕೊಂಡುಹೋಗಿ ಕೊಡಬೇಕು. ಅಜ್ಜನಿಲ್ಲದೆ ತಾನೊಬ್ಬನೆ ಮೀನು ಹಿಡಿಯುವ ಕೆಲಸವನ್ನು ನಿಭಾಯಿಸುವುದು ಸಾಧ್ಯವಿರಲಿಲ್ಲ. ಪ್ರತಿದಿನ ಬಿರುಗಾಳಿ ಬೀಸುತ್ತಿದ್ದುದರಿಂದ ಮೀನು ಷಿಕಾರಿಗೆ ಹವ ಅನುಕೂಲವಾಗಿರಲಿಲ್ಲ.

ಗಾವ್ರಿಕ್ ಸಮುದ್ರದ ದಡಕ್ಕೆ ಹೋಗಿ ಪಕ್ಕದ ಮನೆಯ ಬಾಗಿಲಿಗೆ ತಮ್ಮ ದೋಣಿಯನು ಎಳೆದುಕೊಂಡು ಬಂದು ಬಿಟ್ಟ. ತಮ್ಮ ಗುಡಿಸಿಲಿನ ಬಾಗಿಲಿಗೆ ಬೀಗವನ್ನು ತಗುಲಿಸಿದ.

ತನ್ನ ಆಹಾರವನ್ನು ತಾನು ಸಂಪಾದಿಸಿಕೊಳ್ಳುವುದನ್ನು ಕಂಡುಕೊಳ್ಳಲು ನಿತ್ಯ ಬೆಳಗಿ ಯಿಂದ ಸಂಜೆಯವರೆಗೆ ಟೆರೆಂಟಿಯು ಕೊಟ್ಟಿದ್ದ ಬೂಡ್ಸುಗಳನ್ನು ಸವೆಸುತ್ತ ಗಾವ್ರಿಕ್ ನಗರದಲ್ಲೆಲ್ಲ ಅಲೆದಾಡುತ್ತಿದ್ದ. ಭಿಕ್ಷೆ ಬೇಡುವುದು ಎಲ್ಲಕ್ಕಿಂತ ಸುಲಭವಾದ ಕೆಲಸವಾ ತ್ತೆಂಬುದರಲ್ಲಿ ಸಂಶಯವಿರಲಿಲ್ಲ. ಒಂದು ತುತ್ತು ಅನ್ನಕ್ಕಾಗಿ ಇತರರ ಎದುರಿಗೆ ಕೈ ಒಡ್ಡು ದಕ್ಕೆ ಬದಲಾಗಿ ಸಾಯುವುದು ಮೇಲೆಂದು ಗಾವ್ರಿಕ್ ಭಾವಿಸಿದ್ದ. ಅದರ ಯೋಚನೆಯೆ ಸಾಕು ಮೀನುಗಾರನಾದ ಅವನ ರಕ್ತವನ್ನು ಕುದಿಯುವಂತೆ ಮಾಡಲು.

ಖಂಡಿತ ಆ ಕೆಲಸ ಮಾಡಲಾರ ಗಾವ್ರಿಕ್. ಮೈಮುರಿದು ತನ್ನ ಅನ್ನವನ್ನು ಸಂಪಾದಿಸಿ ಕೊಳ್ಳುವುದೇ ಅವನಿಗೆ ಒಗ್ಗಿದ್ದ ಕೆಲಸ. ಒಂದೊಂದುಸಲ ಮಾರುಕಟ್ಟೆಯಿಂದ ಸಾಮಾನು ಗಳನ್ನೋ ತರಕಾರಿ ಬುಟ್ಟಿಗಳನ್ನೋ ಮನೆಗೆ ಹೊತ್ತುಕೊಂಡುಹೋಗಿ ಕೊಟ್ಟು ಎರಡು ಕೊಪೆಕ್ಕು ಗಳನ್ನು ಸಂಪಾದಿಸುತ್ತಿದ್ದ. ಸಾಮಾನು ತುಂಬುವ ಒಡೆಸ್ಸದ ರೈಲು ನಿಲ್ದಾಣದಲ್ಲಿ ಸಾಮಾನು ತುಂಬುವವರಿಗೆ ಸಹಾಯ ಮಾಡುತ್ತಿದ್ದ. ಕುದುರೆಗಳನ್ನು ಬಿಟ್ಟು ಗಾಡಿಯಿಂದ ಇಳಿದು ಹೋಗ ಲಾರದ ಗಾಡಿಯವರಿಗೆ ಮದ್ಯದ ಅಂಗಡಿಗಳಿಂದ ವೋಡ್ಕವನ್ನು ತಂದು ಕೊಡುತ್ತಿದ್ದ. ಏನೂ ಕೆಲಸ ಸಿಕ್ಕದೆ ಹೊಟ್ಟೆ ಹಸಿವಾದ ದಿವಸ ಸಮಾಧಿ ಭೂಮಿಗೆ ಹೋಗಿ ಅಲ್ಲಿ ಯಾರನ್ನಾದರೂ ಹೂಳುವ ಸಂದರ್ಭವನ್ನು ಕಾಯುತ್ತ ನಿಲ್ಲುತ್ತಿದ್ದ. ಬೇಯಿಸಿದ ಅನ್ನದ ಮೇಲೆ ಸಕ್ಕರೆಯನ್ನು ಉದುರಿಸಿ ಕೆಂಪುಬಣ್ಣದ ಮಿಠಾಯಿಗಳಿಂದಲಂಕರಿಸಿದ **ಕೊಲಿವೊ** ಎಂಬ ಅಂತ್ಯ ಸಂಸ್ಕಾರ ಸಮಯದಲ್ಲಿ ದಾನ ಮಾಡುವ ಭಕ್ಷ್ಯವನ್ನು ಸ್ವೀಕರಿಸುತ್ತಿದ್ದ. ಶವ ಸಂಸ್ಕಾರದ ಸಮಯದಲ್ಲಿ ಕೊಲಿವೊವನ್ನು ಹಂಚುವುದು ಒಂದು ಪುರಾತನ ಸಂಪ್ರದಾಯವಾಗಿದ್ದಿತು. ಸಮಾಧಿಭೂಮಿಯ ಭಿಕ್ಷುಕರು ಅದರ ಪ್ರಯೋಜನವನ್ನು ಹೊಂದುತ್ತಿದ್ದರು. ಅದನ್ನು ತಿಂದ ಕೆಲವರು ಕೊಬ್ಬಿ ಬೆಳೆ ದದ್ದೂ ಉಂಟು. ಕೇವಲ ಭಿಕ್ಷುಕರೇ ಅಲ್ಲದೆ ಶವಸಂಸ್ಕಾರದಲ್ಲಿ ಹಾಜರಿದ್ದವರೆಲ್ಲ ಕೊಲಿವೋ ತಿನ್ನುತ್ತಿದ್ದುದರಿಂದ ತಾನು ಅವರ ನಡುವೆ ಸಂದಿಯಲ್ಲಿ ಸಮಾರಾಧನೆ ಮಾಡಿಕೊಳ್ಳುವುದು ಅಪ ಮಾನಕರವೆಂದು ಗಾವ್ರಿಕ್ ಬಗೆಯಲಿಲ್ಲ. ಅಲ್ಲಿಯ ಮಿಠಾಯಿಗಳನ್ನು ಟೆರೆಂಟಿಯ ಮಕ್ಕಳಿಗೆ ತೆಗೆದುಕೊಂಡುಹೋಗಿ ಕೊಡಬಹುದಾಗಿದ್ದ ಒಂದು ಹೆಚ್ಚಿನ ಉಪಯುಕ್ತತೆಯೂ ಅದರಲ್ಲಿತ್ತು. ಮಕ್ಕಳಿಗಾಗಿ ಕೈಯಲ್ಲಿ ಏನನ್ನೂ ತೆಗೆದುಕೊಳ್ಳದೆ ರಾತ್ರಿ ಮನೆಗೆ ಹಿಂದಿರುಗುವುದು ಉಚಿತವಲ್ಲ ವೆಂದು ಅವನು ತಿಳಿದುಕೊಂಡಿದ್ದ.

ಒಂದೊಂದು ಸಲ ಒಂದು ಭಾಂಗಿಯನ್ನು ಯಾವುದಾದರೂ ವಿಳಾಸಕ್ಕೆ ತಲಪಿಸಿ ಬರುವಂತೆ ಟೆರೆಂಟಿ ಗಾವ್ರಿಕನಿಗೆ ಕೆಲಸ ಒಪ್ಪಿಸುತ್ತಿದ್ದ. ವಿಳಾಸವನ್ನು ಗಟ್ಟಿಮಾಡಿಕೊಂಡು ಹೋಗಬೇಕಾ ಗಿರುತ್ತಿತ್ತೇ ವಿನಾ, ಅದನ್ನು ಕಾಗದದಮೇಲೆ ಬರೆದುಕೊಡುವಂತಿರಲಿಲ್ಲ. ಗಾವ್ರಿಕನಿಗೆ ಇಂಥ ಕೆಲಸಗಳೆಂದರೆ ಬಹಳ ಆಸೆ. ಟೆರೆಂಟಿ ಬಹಳವಾಗಿ ಹತ್ತಿಸಿಕೊಂಡಿದ್ದ ವಿಷಯಗಳಿಗೆ ಇವುಗಳು ಸಂಬಂಧಿಸಿರುತ್ತಿದ್ದುದೇ ಅವನ ಆಸಕ್ತಿಗೆ ಕಾರಣವಾಗಿತ್ತು. ಭಾಂಗಿ ಎಂದರೆ ಅದು ಕಾಗದಗಳ ಸುರುಳಿಯಾಗಿರುತ್ತಿದ್ದುದೇ ಹೆಚ್ಚು. ಅವುಗಳನ್ನು ಗಾವ್ರಿಕ್ ಜೇಬಿನೊಳಕ್ಕೆ ತುರುಕಿ ಜೇಬಿ ನಲ್ಲಿರುವುದು ಬೇಗ ಪತ್ತೆಯಾಗದಂತೆ ಜೇಬನ್ನು ಅಮುಕಿ ಮಟ್ಟಮಾಡಿಕೊಳ್ಳುತ್ತಿದ್ದ. ಅವನು ಯಾರ ಕೈಗಾದರೂ ಸಿಕ್ಕಿಕೊಂಡರೆ ತನಗೆ ಅದು ದಾರಿಯಲ್ಲಿ ಸಿಕ್ಕಿತೆಂದು ಹೇಳಬೇಕೆಂದು ಗೊತ್ತುಮಾಡಿಕೊಂಡಿದ್ದ.

ಯಾರಿಗೆ ಆ ಕಾಗದದ ಕಟ್ಟನ್ನು ಕೊಡಬೇಕಾಗಿರುತ್ತಿತ್ತೋ ಅವರನ್ನು ಕುರಿತು "ಕುಶಲವೇ? ಸೋಫಿಯ ಇವನೊವ್ನ ನಿಮಗೆ ನಮಸ್ಕಾರಗಳನ್ನು ತಿಳಿಸಲು ಹೇಳಿದ್ದಾಳೆ." ಎಂದು ಮರೆಯದೆ ಹೇಳಬೇಕಾಗುತ್ತಿತ್ತು. ಅದಕ್ಕೆ ಆ ವ್ಯಕ್ತಿ "ಸೋಫಿಯ ಇವನೋವ್ನ ಆರೋಗ್ಯವೇ?" ಎಂದು ಉತ್ತರ ಕೊಡಬೇಕಾಗುತ್ತಿತ್ತು. ಆ ಉತ್ತರ ಬಂದರೆ ಮಾತ್ರ ಕಾಗದದ ಕಟ್ಟನ್ನು ಕೈಗೆ ಒಪ್ಪಿಸಬೇಕಾಗಿತ್ತು. ಅನೇಕವೇಳೆ ಆ ವ್ಯಕ್ತಿ ಕಾಗದದ ಕಟ್ಟನ್ನು ತೆಗೆದುಕೊಂಡಮೇಲೆ ಟ್ರಾಮ್

ಖರ್ಚಿಗಾಗಿ ಎಂದು ಹತ್ತು ಕೊಪೆಕ್ಕುಗಳ ನಾಣ್ಯವೊಂದನ್ನು ಹುಡುಗನ ಕೈಗೆ ಇಡುತ್ತಿದ್ದ. ಇಂಥ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಭಯ ಮತ್ತು ವಿನೋದಗಳೆರಡೂ ಬೆರೆತಿರುತ್ತಿದ್ದುವು.

ಕೊನೆಗೆ ಯಾವುದೂ ಇಲ್ಲದೆ ಇದ್ದಾಗ ಗಾವ್ರಿಕ್ "ಗುಂಡಿ" ಆಟವನ್ನು ಆಡಿ ದುಡ್ಡು ಸಂಪಾದಿಸುತ್ತಿದ್ದ. ಈ ಆಟ ಇತ್ತೀಚೆಗೆ ಹುಡುಗರಲ್ಲಿ ಅಲ್ಲದೆ ದೊಡ್ಡವರಲ್ಲಿಯೂ ಬಳಕೆಗೆ ಬಂದಿತ್ತು ಸರ್ಕಾರಿ ನೌಕರರು ಧರಿಸುವ ಕೋಟುಗಳಿಗೆ ಹಾಕುತ್ತಿದ್ದ ಕೊಕ್ಕೆ ಇರುವ ಗುಂಡಿಗಳನ್ನು ಈ ಆಟದಲ್ಲಿ ಹುಡುಗರು ಉಪಯೋಗಿಸುತ್ತಿದ್ದರು.

ಆ ಆಟದ ಕ್ರಮವನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು : ಒಂದು ಗುಂಡಿಯನ್ನು ನೆಲದ ಮೇಲೆ ನಡುವೆ ಮಗುಚಿ ಇಡುವುದು. ಆ ಬಳಿಕ ಒಬ್ಬರಾದ ಮೇಲೆ ಒಬ್ಬರು ತಮ್ಮ ರಾಜಾ ಗುಂಡಿಯನ್ನು ನಿರ್ದಿಷ್ಟದೂರದಿಂದ ಮಗುಚಿದ ಗುಂಡಿಯ ಮೇಲಕ್ಕೆ ಎಸೆಯುವುದು. ನೆಲದ ಮೇಲೆ ಮಗುಚಿ ಇಟ್ಟಗುಂಡಿಯನ್ನು ನೆಟ್ಟಗೆ ಮಾಡುವುದೇ ಇದರ ಉದ್ದೇಶ· ಯಾರು ಆ ಗುಂಡಿಯನ್ನು ನೆಟ್ಟಗೆ ಮಾಡುವರೋ ಅವರದು ಆ ಗುಂಡಿ. ಗೆದ್ದ ಪ್ರತಿಸಲಕ್ಕೂ ಹೀಗೆ ಒಂದೊಂದು ಗುಂಡಿಯನ್ನು ಪಡೆದುಕೊಳ್ಳಬಹುದಾಗಿತ್ತು. ಬೀದಿಯ ಆಟಗಳಲ್ಲೆಲ್ಲ ಈ ಗುಂಡಿಯ ಆಟ ಅಂಥ ಕಷ್ಟವಾದುದಾಗಲಿ ಕುತೂಹಲದಾಯಕವಾದುದಾಗಲಿ ಆಗಿರಲಿಲ್ಲ. ಆದರೆ ಆ ಆಟದಲ್ಲಿ ಹುಡುಗರಿಗೆ ಅದೇನೋ ಒಂದು ಹುಚ್ಚು. ಆ ಗುಂಡಿಗಳಿಗೆ ಒಳ್ಳೆಯ ಬೆಲೆಯಿದ್ದುದೇ ಇದಕ್ಕೆ ಕಾರಣ. ಗುಂಡಿಗಳನ್ನು ಯಾವಾಗ ಬೇಕಾದರೂ ಮಾರಬಹುದಾಗಿತ್ತು ಇಲ್ಲವೆ ಕೊಳ್ಳಬಹುದಾಗಿತ್ತು. ಅವುಗಳಿಗೆ ನಿರ್ದಿಷ್ಟ ದರಗಳನ್ನು ಬೀದಿಯ ಹುಡುಗರ ವಿನಿಮಯ ಕೇಂದ್ರಗಳಲ್ಲಿ ಗೊತ್ತುಮಾಡಲಾಗಿದ್ದಿತು.

ಗಾವ್ರಿಕ್ ಗುಂಡಿಯ ಆಟಗಳನ್ನು ಆಡುವುದರಲ್ಲಿ ಪ್ರಚಂಡನಾಗಿದ್ದ. ಅವನ ಎಸೆತ ದೃಢವಾದದೂ ಕರಾರುವಾಕ್ಕಾದುದೂ ಆಗಿತ್ತು. ಅವನದು ಸೂಕ್ಷ್ಮದೃಷ್ಟಿ. ಗುಂಡಿಗಳ ಆಟಗಳಲ್ಲಿ ಗಾವ್ರಿಕ್ ಅಗ್ರಗಣ್ಯನಾಗಿ ಪ್ರಸಿದ್ಧನಾದ. ಬೆಲೆಬಾಳುವ ಉತ್ತಮ ಗುಂಡಿಗಳು ಯಾವಾಗಲೂ ಅವನ ಜೇಬುಗಳಲ್ಲಿ ಭರ್ತಿಯಾಗಿರುತ್ತಿದ್ದುವು. ಅವನಿಗೆ ತೊಂದರೆಯಾದಾಗ, ದುಡ್ಡಿನ ಆವಶ್ಯಕತೆ ಒದಗಿದಾಗ ತನ್ನ ಭಂಡಾರದಿಂದ ಸ್ವಲ್ಪ ಭಾಗವನ್ನು ಮಾರಿ ಹಣವನ್ನು ಒದಗಿಸಿಕೊಳ್ಳುತ್ತಿದ್ದ. ಆದರೆ ಅವನ ಜೇಬು ಎಂದೂ ಖಾಲಿಯಾಗಿ ನಿಂತುದಿಲ್ಲ. ತಾನು ಮಾರಬೇಕಾಗಿ ಬಂದುದಕ್ಕಿಂತ ಹೆಚ್ಚು ಗುಂಡಿಗಳನ್ನು ಮಾರನೆಯ ದಿನದ ಆಟದಲ್ಲಿ ಗೆದ್ದುಕೊಂಡುಬಿಡುತ್ತಿದ್ದ. ಉಳಿದವರಿಗೆ ವಿನೋದದ ಕ್ರೀಡೆಯಾಗಿದ್ದುದು ಗಾವ್ರಿಕನಿಗೆ ಸಂಪಾದನೆಯ ಮಾರ್ಗವಾಗಿತ್ತು. ಅವನಿಗೆ ಬೇರೆದಾರಿ ಇರಲಿಲ್ಲ. ಹೇಗಾದರೂ ಸರಿ ತನ್ನ ಅನ್ನವನ್ನು ಅವನು ಸಂಪಾದಿಸಿಕೊಳ್ಳಬೇಕಾಗಿತ್ತು.

೩೧. ಫಿರಂಗಿ ಗಾಡಿಯಮೇಲಿನ ಪೆಟ್ಟಿಗೆ

ಬೃಹದ್ಘಟನೆಗಳು ಸನ್ನಿಹಿತವಾಗಿದ್ದುವು. ಬಸವನ ಹುಳುವಿನಂತೆ ನಿಧಾನವಾಗಿ ಹರಿದು ಬರುತ್ತಿವೆಯೆಂದು ಮೇಲುನೋಟಕ್ಕೆ ಅವು ತೋರುತ್ತಿದ್ದರೂ ಪ್ರಚಂಡವೇಗಶಾಲಿ ರೈಲಿನಂತೆ ಅವು ಧಾವಿಸಿ ಬರುತ್ತಿದ್ದುವು. ಧಾವಿಸಿ ಬರುವ ವೇಗಶಾಲಿ ರೈಲಿನ ಬರುವಿಕೆಯನ್ನು ನಿರೀಕ್ಷಿಸು

ವಾಗಿನ ಅನುಭವವನ್ನು (ಕಾರ್ಖಾನೆಯ ಉಪನಗರದಲ್ಲಿ ವಾಸಿಸುತ್ತಿದ್ದ) ಗಾವ್ರಿಕ್‌ನಂಥ ಬಾಲಕ ಎಷ್ಟು ಚೆನ್ನಾಗಿ ತಿಳಿದಿದ್ದನೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ರೈಲು ಇನ್ನೂ ತುಂಬ ದೂರದಲ್ಲಿದೆ, ಅದು ಕಣ್ಣಿಗೆ ಕಾಣಿಸುತ್ತಲೂ ಇಲ್ಲ, ಅದರ ಶಬ್ದ ಕಿವಿಗೆ ಕೇಳಿಸುತ್ತಲೂ ಇಲ್ಲ. ಒಡೆಸ್ಸದ ಸಾಮಾನು ತುಂಬುವ ರೈಲ್ವೆ ನಿಲ್ದಾಣದ ಗಂಟೆಯ ಠಣ ಠಣ ಶಬ್ದವು ರೈಲಿನ ಬರುವಿಕೆಯ ಮುನ್‌ಸೂಚನೆಯನ್ನು ಕೊಡುತ್ತದೆ. ದಾರಿ ತೆರೆದಿದೆ. ಕೆಂಪು ಮತ್ತು ಹಸುರು ದೀಪದ ಕೈಮರದ ತೋಳು ಮೇಲಕ್ಕೆದ್ದಿದೆ. ಕಂಬಿಗಳು ಹೊಳೆಹೊಳೆಯುತ್ತ ಸ್ಥಿರವಾಗಿ ಸಿದ್ಧವಾಗಿ ನಿಂತಿವೆ. ಪೂರ್ಣ ನಿಶ್ಶಬ್ದ ಆವರಿಸಿದೆ. ರೈಲು ಬರುತ್ತಿದೆ ಮತ್ತು ಅದನ್ನು ಯಾರೂ ನಿಲ್ಲಿಸಲಾರರೆಂಬ ವಿಷಯ ಸರ್ವರಿಗೂ ವಿದಿತವಾಗಿದೆ.

ದಾಟುರಸ್ತೆಯ ಬಳಿ ಬಾಗಿಲು ನಿಧಾನವಾಗಿ ಕೆಳಕ್ಕಿಳಿದು ಬಂದು ವಾಹನಗಳ ಸಂಚಾರವನ್ನು ಅಡ್ಡಗಟ್ಟುತ್ತದೆ. ರೈಲ್ವೆ ನಿಲ್ದಾಣದ ಬೇಲಿಯ ಬಳಿ ಹುಡುಗರು ಮುತ್ತಿಕೊಳ್ಳುತ್ತಾರೆ. ಭಯದಿಂದ ಪಕ್ಕದ ಮರಗಳ ಮೇಲಿನ ಹಕ್ಕಿಗಳ ಗುಂಪೊಂದು ಮೇಲಕ್ಕೆ ಹಾರಿ ನೀರಿನ ಗೋಪುರದ ಮೇಲೆ ಬಂದು ಸುತ್ತು ಸುತ್ತುತ್ತದೆ. ಅಲ್ಲಿಂದ ಆ ಹಕ್ಕಿಗಳಿಗೆ ದೂರದಲ್ಲಿ ಬರುತ್ತಿರುವ ರೈಲು ಪ್ರಾಯಶಃ ಕಾಣುತ್ತಿದೆ.

ದೂರದಿಂದ ಹೊರಳುಗಂಬಿಗಳ ಮೇಲ್ವಿಚಾರಕ ಊದಿದ ಕಹಳೆಯ ಶಬ್ದ ಮಂದಮಂದವಾಗಿ ಕಿವಿಯಮೇಲೆ ಬೀಳುತ್ತದೆ, ನಿಶ್ಶಬ್ದದೊಳಕ್ಕೆ ಅಸ್ಪಷ್ಟ ಶಬ್ದಗಳು ತೂರಿ ಬರಲಾರಂಭಿಸುತ್ತವೆ. ಅಲ್ಲ, ಅದು ಗಲಾಟೆಯಲ್ಲ, ಆದರೆ ಮುಂಬರುವ ಘಟನೆಯ ಮುನ್ಸೂಚನೆ ಅಷ್ಟೆ. ರೈಲು ಕಂಬಿಗಳ ಸೂಕ್ಷ್ಮವಾದ ಕಂಪನದಿಂದುಂಟಾದ ಅಸ್ಪಷ್ಟ ಧ್ವನಿತರಂಗಗಳು ಅವು. ಮೊದಲು ಕಂಪನ, ಬಳಿಕ ಧ್ವನಿ, ಮತ್ತು ಆಮೇಲೆ ಗಲಾಟೆ.

ಈಗ ರೈಲಿನ ಶಬ್ದ ಸ್ಪಷ್ಟವಾಗಿ ಕೇಳಿಬರುತ್ತಿದೆ. ಅದು ನಿಧಾನವಾಗಿ ಹಬೆಯ ಶಕ್ತಿಯಿಂದ ಉಸಿರಿಕ್ಕುತ್ತಿದೆ. ಪ್ರತಿಯೊಂದು ಉಸಿರೂ ಒಂದಕ್ಕಿಂತ ಇನ್ನೊಂದು ಎತ್ತರದ ದನಿಯಲ್ಲಿ ಕೇಳಿಸುತ್ತ ಬರುತ್ತಿದೆ.

ಇಷ್ಟೆಲ್ಲ ಅನುಭವಗಳ ಅನಂತರವೂ ವೇಗಶಾಲಿ ರೈಲು ಇನ್ನೊಂದು ನಿಮಿಷದಲ್ಲಿ ರೈಲ್ವೆ ನಿಲ್ದಾಣದ ಮೂಲಕ ಹೋಗುತ್ತದೆ ಎಂಬುದನ್ನು ನಂಬುವುದು ಕಷ್ಟವಾಗುತ್ತದೆ. ಇದ್ದಕ್ಕಿದ್ದಂತೆ ರೈಲು ಅನಿರೀಕ್ಷಿತವಾಗಿ ಹಬೆಯ ಮೋಡದಲ್ಲಿ ಮುಳುಗಿ ದೂರದಲ್ಲಿ ಕಾಣಿಸಿಕೊಳ್ಳುತ್ತದೆ. ಹಸಿರು ಮರಗಳ ರಸ್ತೆಯ ಆ ತುದಿಯಲ್ಲಿ ರೈಲು ಸ್ತಬ್ಧವಾಗಿ ನಿಂತಿರುವುದು ಗೋಚರವಾಗುತ್ತದೆ. ಹೌದು ಅದು ನಿಂತಿರಬೇಕು. ಪುನಃ ಚಲಿಸುತ್ತಿದೆ. ಆದರೆ ಪ್ರತಿಕ್ಷಣವೂ ಅದು ದೊಡ್ಡದಾಗುತ್ತ ಬರುತ್ತಿರುವಂತೆ ಕಾಣುತ್ತಿದೆಯಲ್ಲ? ಏಕೆ? ಆ ಪ್ರಶ್ನೆಗೆ ಉತ್ತರವನ್ನು ಕೊಡಲು ಸಮಯವೆಲ್ಲಿದೆ ಈಗ. ಒಂದು ಪಕ್ಕದಿಂದ ಹಬೆಯನ್ನು ಊದುತ್ತ ನಿಲ್ದಾಣವನ್ನು ದಾಟುತ್ತ ರಭಸದಿಂದ ರೈಲು ಧಾವಿಸುತ್ತದೆ. ಸುಂಟರಗಾಳಿಯ ಸುಳಿಯಂತೆ ಉರುಳುವ ಚಕ್ರಗಳು, ಕಿಟಕಿಗಳು, ಬಾಗಿಲುಗಳು, ಬಾಗಿಲ ಮೆಟ್ಟಿಲುಗಳು, ಗಾಡಿಗಳನ್ನು ಒಂದಕ್ಕೊಂದಕ್ಕೆ ಬಂಧಿಸಿರುವ ಕೊಂಡಿಗಳು, ಸ್ಪ್ರಿಂಗುಗಳು . . .

ನಗರದಲ್ಲಿ ಒಂದೇ ಸಮನೆ ಅಲೆದಾಡುತ್ತಿದ್ದ ಗಾವ್ರಿಕನಿಗೆ ಮುಂಬರುವ ಘಟನೆಗಳ ಅರಿವಿರದೆ ಇರಲು ಸಾಧ್ಯವಿರಲಿಲ್ಲ. ಅವು ಎಲ್ಲೋ ಮಾರ್ಗಮಧ್ಯದಲ್ಲಿದ್ದಿರಬೇಕು. ಸೇಂಟ್ ಪೀಟರ್ಸ್‌ಬರ್ಗ್ ಮತ್ತು ಒಡೆಸ್ಸಗಳ ನಡುವೆ ಪ್ರಾಯಶಃ ಇದ್ದಿರಬಹುದೇನೋ. ಆದರೆ ಅಷ್ಟಾಗಿ

ಕಿವಿಗೆ ಕೇಳದೆ ಇದ್ದರೂ, ಇಂದ್ರಿಯಗಳ ಮೂಲಕ ಗ್ರಹಿಸಲು ಸಾಧ್ಯವಾಗಿದ್ದಂಥ ಧ್ವನಿಗಳು ನಿರೀಕ್ಷಣೆಯ ನೀರವ ವಾತಾವರಣದೊಳಕ್ಕೆ ಹರಿಯುತ್ತಿದ್ದುವು.

ಗಡ್ಡವನ್ನು ಬೆಳೆಸಿಕೊಂಡಿದ್ದ ಗಾಯಾಳುಗಳು ತಮ್ಮ ಹೊಸ ಊರೆಗೋಲುಗಳಮೇಲೆ ಭಾರವನ್ನು ಬಿಡುತ್ತ ರಸ್ತೆಗಳಲ್ಲಿ ಕುಂಟುತ್ತ ಬರುತ್ತಿದ್ದರು. ಅವರು ಗುಂಜು ಗುಂಜಾಗಿದ್ದ ಫರ್ ಕೂದಲಿನ ಟೋಪಿಗಳನ್ನು ಧರಿಸಿದ್ದರು. ಹೆಗಲಿನಮೇಲೆ ಹಾಕಿಕೊಂಡಿದ್ದ ಸೈನ್ಯದ ಕೋಟು ಗಳಿಗೆ ಸೇಂಟ್ ಜಾರ್ಜನ ಶಿಲುಬೆಯನ್ನು ಸಿಕ್ಕಿಸಲಾಗಿತ್ತು.

ಮಧ್ಯರಷ್ಯಾದಿಂದ ಬಂದ ಕಾರ್ಖಾನೆಯ ಕೆಲಸಗಾರರು ಒಂದು ಸಾರ್ವತ್ರಿಕ ಮುಷ್ಕರವು ನಡೆಯುವುದೆಂಬ ವದಂತಿಯನ್ನು ಹಬ್ಬಿಸಿದ್ದರು. ಪೋಲೀಸ್ ಠಾಣೆಯ ಬಳಿಯ ಗುಂಪಿನಲ್ಲಿ ಜನಗಳು ಹಿಂಸೆಯ ಮತ್ತು ಬಲಪ್ರಯೋಗದ ಮಾತುಗಳನ್ನಾಡುತ್ತಿದ್ದರು. ವಿಶ್ವವಿದ್ಯಾನಿಲಯ ಮತ್ತು ಸ್ತ್ರೀಯರ ಕಾಲೇಜುಗಳ ಬಳಿ ಸೇರುತ್ತಿದ್ದ ಗುಂಪುಗಳಲ್ಲಿ ಸ್ವಾತಂತ್ರ್ಯದ ಮಾತು ಜರುಗಿತ್ತು. ಘೆನ್ ಕಾರ್ಖಾನೆಯ ಬಳಿ ಸಶಸ್ತ್ರಬಂಡಾಯದ ವಿಷಯ ಚರ್ಚೆಯಾಗುತ್ತಿತ್ತು.

ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಒಂದು ದಿನ ಪೋರ್ಟ್ ಆರ್ಥರ್‌ನಲ್ಲಿ ಕೊಲೆಯಾದ ಸೇನಾನಿ ಕೊಂದ್ರಾತೆಂಕೋನ ದೇಹವನ್ನು ಹೊತ್ತು ತಂದ ದೊಡ್ಡ ಬಿಳಿಯ ಹಡಗೊಂದು ಬಂದರನ್ನು ಸೇರಿತು. ಭಾರವಾದ ಶವಸಂಪುಟವಿದ್ದ ಮತ್ತು ಸರಿಸುಮಾರು ಒಂದು ಟನ್ನು ತೂಗುತ್ತಿದ್ದ ಒಂದು ಭಾರಿ ಪೆಟ್ಟಿಗೆಯು ಬೇರೆಬೇರೆ ದೇಶಗಳನ್ನೂ ಸಮುದ್ರಗಳನ್ನೂ ದಾಟಿ ಒಂದು ವರ್ಷ ಕಾಲ ಪ್ರಯಾಣಮಾಡುತ್ತ ಕೊನೆಗೆ ಸ್ವದೇಶವನ್ನು ತಲಪಿತು. ಬಂದರಿನಲ್ಲಿ ಆ ಪೆಟ್ಟಿಗೆಯನ್ನು ಫಿರಂಗಿ ಗಾಡಿಯಮೇಲೆ ಇರಿಸಲಾಯಿತು. ಗಾಡಿ ಒಡೆಸ್ಸ ನಗರದ ರಾಜಬೀದಿಗಳ ಮೂಲಕ ಹೊರಟು ಒಡೆಸ್ಸ ರೈಲು ನಿಲ್ದಾಣಕ್ಕೆ ಹೋಗುತ್ತಿತ್ತು. ಶೋಕಾವೃತವಾದ ಆ ಮೆರವಣಿಗೆಯನ್ನು ಗಾವ್ರಿಕ್ ನೋಡಿದ. ಪಾದ್ರಿಗಳು ಧರಿಸಿದ್ದ ಸ್ಮಶಾನಯಾತ್ರೆಯ ಸಮಯದ ಉಡುಪುಗಳ ಮೇಲೂ, ಅಶ್ವದಳದಮೇಲೂ, ಬಿಳಿಯ ಕೈಚೀಲಗಳನ್ನು ಧರಿಸಿದ್ದ ಪೋಲೀಸಿನವರಮೇಲೂ ಬೀದಿಯ ಗ್ಯಾಸ್‌ದೀಪಗಳಮೇಲೆ ಇದ್ದ ಕ್ರೇಪ್ ರೇಷ್ಮೆ ಪಟ್ಟಿಗಳಮೇಲೂ ಸೆಪ್ಟೆಂಬರ್ ತಿಂಗಳ ಮಂಕು ಬಿಸಿಲು ಬಿದ್ದಿತ್ತು. ಪಂಜು ಹಿಡಿಯುವವರು ಬೆಳ್ಳಿಯ ಅಂಚಿನ ಮೂರು ಮೂಲೆಯ ಕಪ್ಪು ಟೋಪಿಗಳನ್ನು ಧರಿಸಿದ್ದರು. ಗಾಜಿನ ಲಾಂದ್ರಗಳನ್ನು ಸಿಕ್ಕಿಸಿದ ಕೋಲುಗಳನ್ನು ಹಿಡಿದಿದ್ದರು. ಲಾಂದ್ರಗಳಲ್ಲಿ ಉರಿಯುತ್ತಿದ್ದ ಮೇಣದ ಬತ್ತಿಗಳ ಉರಿಯನ್ನು ಹಗಲಿನ ಬೆಳಕಿನಲ್ಲಿ ಕಾಣುವುದೇ ಕಷ್ಟವಾಗಿತ್ತು. ಶೋಕಗತಿಯಲ್ಲಿ ಒಂದೇ ಸಮನೆ ಸೈನ್ಯದ ವಾದ್ಯವೃಂದ ವಿಲಂಬಿತ ನಾದವನ್ನು ಹೊಮ್ಮಿಸುತ್ತಿತ್ತು. ಅದರ ಸಂಗೀತವು ಚರ್ಚಿನ ಗಾಯಕ ವೃಂದದವರ ಗಾನದೊಡನೆ ಮಿಳಿತವಾಗಿತ್ತು.

ಆ ಸಮಯದಲ್ಲಿ ಸುಸಂಗತವಾಗಿದ್ದರೂ ದುಸ್ಸಹವಾಗುವಷ್ಟು ಕೀರಲು ಎಂದು ಹೇಳುವಂಥ ಮಕ್ಕಳ ಶೋಕಪೂರ್ಣ ಧ್ವನಿಯು ಜೋರಾಗಿ ಕೇಳಿಬರುತ್ತಿತ್ತು. ಆ ಧ್ವನಿಯು ಜೋತು ಬಿದ್ದಿದ್ದ ಜಾಲಿಮರಗಳ ಕಮಾನಿನವರೆಗೂ ಕಂಪಿಸುತ್ತ ತೇಲಿಕೊಂಡು ಹೋಗುತ್ತಿತ್ತು. ಧೂಪದ ಹೊಗೆಯ ಮೂಲಕ ಮಂಕಾದ ಬಿಸಿಲು ತೂರಿಬರುತ್ತಿತ್ತು. ಹೂದಂಡೆಗಳಿಂದಲೂ, ರೇಷ್ಮೆ ಪಟ್ಟಿಗಳಿಂದಲೂ ತುಂಬಿದ ಕಪ್ಪುಬಣ್ಣದ ಶವಸಂಪುಟವನ್ನು ತಲೆಯಮೇಲೆ ಹೊತ್ತ ಫಿರಂಗಿ ಗಾಡಿಯು ಸೈನಿಕರ ಸಾಲುಗಳ ನಡುವಿನಲ್ಲಿ ಪುಷ್ಕಿನ್ ರಸ್ತೆಯ ಮೂಲಕ ರೈಲು ನಿಲ್ದಾಣದ

ಕಡೆಗೆ ಬಹು ನಿಧಾನವಾಗಿ ಚಲಿಸುತ್ತಿತ್ತು.

ನಿಲ್ದಾಣದ ಎದುರಿನಲ್ಲಿದ್ದ ತೋಟದ ಬಳಿಗೆ ಮೆರವಣಿಗೆ ಬಂದಾಗ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನು ಕಬ್ಬಿಣದ ಬೇಲಿಯ ಮೇಲಕ್ಕೆ ನೆಗೆದುನಿಂತ. ಒಂದಾನೊಂದು ಕಾಲದಲ್ಲಿ ನೀಲಿ ಬಣ್ಣವನ್ನು ಹೊಂದಿದ್ದ ಪಟ್ಟಿಯಿದ್ದ ಮಾಸಲು ವಿದ್ಯಾರ್ಥಿ ಟೋಪಿಯನ್ನು ಬಾಚದೆ ಪೊದೆ ಗಟ್ಟಿದ ಕೂದಲಿನ ತನ್ನ ತಲೆಯಮೇಲಕ್ಕೆ ಎತ್ತಿ ಬೀಸುತ್ತ "ಸಂಗಾತಿಗಳೇ!" ಎಂದು ಕೂಗಿದ.

ಆ ಅಪಾರವಾದ ಜನಜಂಗುಳಿಯಲ್ಲಿ ಅವನ ಧ್ವನಿಯು ದುರ್ಬಲವಾಗಿರುವಂತೆಯೂ, ಕೇಳಿಸುವುದೇ ಇಲ್ಲವೋ ಎನ್ನುವಂತೆಯೂ ತೋರಿತು. ಆದರೆ ಅವನು ಗಟ್ಟಿಯಾಗಿ ಹೇಳಿದ ಆ "ಸಂಗಾತಿಗಳೇ" ಎಂಬ ಪದ ಅಪರಿಚಿತವಾದುದೂ, ಆಶ್ಚರ್ಯಕರವಾದುದೂ ಆಕರ್ಷಕವೂ ಆಗಿತ್ತಾದುದರಿಂದ ಅದು ಎಲ್ಲರಿಗೂ ಕೇಳಿಸಿತ್ತು. ಆ ಎತ್ತರವಾದ ಬೇಲಿಯನ್ನು ಹತ್ತಿದ್ದ ಸಣ್ಣ ವ್ಯಕ್ತಿಯ ಕಡೆಗೆ ಎಲ್ಲ ತಲೆಗಳೂ ತಿರುಗಿದುವು.

"ಸಂಗಾತಿಗಳೇ! ಪೋರ್ಟ್ ಆರ್ಥರನ್ನು ಸ್ಮರಿಸಿಕೊಳ್ಳಿರಿ! ತ್ಸುಶೀಮುವನ್ನು ಸ್ಮರಿಸಿ ಕೊಳ್ಳಿರಿ! ಜನವರಿ ಒಂಭತ್ತನೆಯ ತಾರೀಖಿನ ರಕ್ತಪಾತವನ್ನು ಜ್ಞಾಪಿಸಿಕೊಳ್ಳಿರಿ! ಜಾರ್ ಚಕ್ರವರ್ತಿಯೂ ಅವನ ಬಾಲಬಡುಕರೂ ರಷ್ಯಾದೇಶವನ್ನು ನಂಬಲಾಗದಂಥ ಅಪಮಾನಕ್ಕೀಡುಮಾಡಿದ್ದಾರೆ. ಹಿಂದೆಂದೂ ಕಾಣದಂಥ ರೀತಿಯಲ್ಲಿ ಬಡತನ ಮತ್ತು ಸರ್ವನಾಶಕ್ಕೆ ಇಳಿಸಿದ್ದಾರೆ. ಆದರೆ ರಷ್ಯಾದ ಮಹಾಜನರು ಹೋರಾಟವನ್ನು ಮುಂದುವರಿಸಿದ್ದಾರೆ. ನಿರಂಕುಶ ಪ್ರಭುತ್ವ ಪುಡಿಪುಡಿಯಾಗಲಿ!"

"ನಿರಂಕುಶ ಪ್ರಭುತ್ವ ಉರಿದು ಬೀಳಲಿ! ಸ್ವಾತಂತ್ರ್ಯ ಚಿರಾಯುವಾಗಲಿ! ಚಿರಾಯುವಾ...." ಅವನನ್ನು ಪೋಲೀಸರು ಕೆಳಕ್ಕೆಳೆದು ಕರೆದುಕೊಂಡು ಹೋದುದನ್ನು ಗಾವ್ರಿಕ್ ನೋಡಿದ.

ಘಂಟಾನಾದವು ಪಟ್ಟಣದಮೇಲೆ ತೇಲಿಕೊಂಡು ಹೋಗುತ್ತಿತ್ತು. ಅಶ್ವದಳದ ಕುದುರೆಗಳ ಗೊರಸಿನ ಶಬ್ದ ಕೇಳುತ್ತಲಿತ್ತು.

ಸೇನಾನಿ ಕೊಂಡ್ರಾತೆಂಕೋನ ಶವಸಂಪುಟವನ್ನು ಶವದ ಮೆರವಣಿಗೆಗಾಗಿ ಮಾಸಲಾಗಿದ್ದ ಸೇಂಟ್‌ಪೀಟರ್ಸ್‌ಬರ್ಗ್ ರೈಲಿನ ಗಾಡಿಯಲ್ಲಿ ಇರಿಸಲಾಯಿತು. ವಾದ್ಯವೃಂದ ಕೊನೆಯ ಹಾಡನ್ನು ನುಡಿಸಿತು.

"ಸೈನ್ಯದ ಗೌರವ ರಕ್ಷೆ ನೀಡಿ!"

ಗೌರವ ರಕ್ಷಣೆಯ ಬಳಿಕ ರೈಲು ನಿಲ್ದಾಣದಿಂದ ಹೊರಟಿತು. ಸಾಲಾಗಿ ಸಿದ್ಧತೆಯ ಸ್ಥಿತಿಯಲ್ಲಿ ನಿಂತುಕೊಂಡಿದ್ದ ಸೈನಿಕರು ಹಿಡಿದಿದ್ದ ಬಂದೂಕದ ತುದಿಯ ಕಿರುಗತ್ತಿಗಳ ಬೇಲಿಯ ನಡುವಿನಿಂದ ಶವಸಂಪುಟದ ಪೆಟ್ಟಿಗೆಯಿದ್ದ ರೈಲುಗಾಡಿ ಮುಂದಕ್ಕೆ ಹೋಯಿತು. ಮುಚ್ಚಳದ ಮೇಲೆ ಶಿಲುಬೆಯ ಗುರುತನ್ನು ಹೊಂದಿದ್ದ ಕಪ್ಪುಪೆಟ್ಟಿಗೆಯು ರೈಲುಗಾಡಿ ಒಡೆಸ್ಸ ನಗರದ ಸಾಮಾನು ತುಂಬುವ ರೈಲು ನಿಲ್ದಾಣವನ್ನೂ ಕಂಬಿಯ ಎರಡು ಕಡೆಗಳಲ್ಲಿ ನಿಂತಿದ್ದ ಜನಗಳನ್ನೂ ಹಿಂದಕ್ಕೆ ಬಿಟ್ಟಿತು. ಅದೇ ರೀತಿ ನಿಶ್ಶಬ್ದವಾದ ಸಣ್ಣಸಣ್ಣ ನಿಲ್ದಾಣಗಳು, ಧ್ವಜ ನಿಲ್ದಾಣಗಳು ಹಿಂದಕ್ಕೆ ಉಳಿದುವು. ಆ ರೈಲು ಸೇಂಟ್ ಪೀಟರ್ಸ್‌ಬರ್ಗನ್ನು ಸೇರುವ ಉದ್ದೇಶದಿಂದ ಉತ್ತರ ದಿಕ್ಕಿಗೆ ಪ್ರಯಾಣಮಾಡುತ್ತ ರಷ್ಯಾದೇಶವನ್ನು ಸೀಳಿಕೊಂಡು ಮುಂದಕ್ಕೆ ಓಡಿತು, ಈ ಶೋಕದ ರೈಲುಗಾಡಿಯೊಡನೆ ಕಳೆದ ಯುದ್ಧದ ಗೀತವೂ ಕೂಡ ರಷ್ಯಾದೇಶದ ಜನರ ಕಣ್ಣುಮುಂದೆ ಚಲಿಸಿತು.

ಆ ಕೆಲವು ದಿನಗಳ ಕಾಲ ಮನೆಯಲ್ಲಿ ಶ್ಮಶಾನ ಮೌನ ತುಂಬಿದ್ದಂತೆ ಪೇತ್ಯನಿಗೆ ಭಾ ವಾಯಿತು. ಪ್ರತಿಯೊಬ್ಬರೂ ಮೆತ್ತಗೆ ಹೆಜ್ಜೆಯಿಡುತ್ತಿದ್ದರು. ಯಾರೂ ಹೆಚ್ಚಾಗಿ ಮಾತಾಡ ತ್ತಿರಲಿಲ್ಲ ಮುದುರಿದ ಕರವಸ್ತ್ರ ಚಿಕ್ಕಮ್ಮ ತಾತ್ಯಾನಳ ಅಲಂಕಾರ ಮೇಜಿನ ಮೇಲೆ ಬಿದ್ದಿ ತ್ತಿತ್ತು. ಊಟವಾದ ಕೂಡಲೇ ತಂದೆ ಮೌನವಾಗಿ ಬಂದು ದೀಪಕ್ಕೆ ಹಸುರಿನ ಮರೆಯನ ಹೊದಿಸಿ ಸ್ಕೂಲಿನ ಅಭ್ಯಾಸದ ಪುಸ್ತಕಗಳನ್ನು ತಿದ್ದುತ್ತ ರಾತ್ರಿ ಬಹಳ ಹೊತ್ತಾಗುವವರೆಗ ಕುಳಿತಿರುತ್ತಿದ್ದರು. ಮಧ್ಯೆ ಮಧ್ಯೆ ಮೂಗು ಕನ್ನಡಕವನ್ನು ತೆಗೆದುಕೊಂಡು ಅಂಗಿಯ ಒ ಭಾಗಕ್ಕೆ ಹಾಕಿದ್ದ ನಯವಾದ ಬಟ್ಟೆಯಿಂದ ಉಜ್ಜುತ್ತ ಕುಳಿತುಬಿಡುತ್ತಿದ್ದರು.

ಪೇತ್ಯ ಈಗ ಒಬ್ಬ ಸಾಧು ಹುಡುಗನಾಗಿ ಬಿಟ್ಟಿದ್ದ. ವೃತ್ತಗಳನ್ನೂ, ಶಂಕುಗಳನ್ನೂ ತನ ಮನೆಯ ಅಭ್ಯಾಸದ ಪುಸ್ತಕಗಳಲ್ಲಿ ಬರೆಯುವ ಬದಲು ತನ್ನ ಲೇಖನ ಪುಸ್ತಕದಲ್ಲಿ ತುರೆಂಜೆನ ಯುದ್ಧ, ಮೊನಚು ಮೂತಿಯ ರೆಟ್‌ವಿಜಾನ್ ಹಡಗು, ಜಪಾನೀ ಸಿಡಿಮದ್ದುಗಳು ಸ್ಫೋ ಗೊಂಡಾಗ ಅವುಗಳಿಂದ ಹಡಗಿನ ಸುತ್ತ ಹಾರುವ ನೀರಿನ ಚಿಲುಮೆಗಳು—ಇವುಗಳ ಚಿತ್ರ ಗಳನ್ನು ಬರೆಯುತ್ತಿದ್ದ. ಪಾವಲಿಕ್ ಒಬ್ಬನೇ ಆ ಮನೆಯಲ್ಲಿ ಬೇಜವಾಬ್ದಾರಿಯಿಂದ ನಡೆ ಕೊಳ್ಳುತ್ತಿದ್ದವನು. ತಲೆಕೆಳಕಾಗಿ ಬಿದ್ದಿದ್ದ ಕುರ್ಚಿಗೆ ಕುಡ್ಲಾಟ್ಕನನ್ನು ಕಟ್ಟಿ, ಬಣ್ಣದ ತಗಡಿ ತುತ್ತೂರಿಯನ್ನು ಊದುತ್ತ "ಕೊಂದ್ರಾತೆಂಕೋನ ಶವದ ಮೆರವಣಿಗೆ"ಯನ್ನು ಪ್ರವೇಶ ಮಾಗ ದಲ್ಲಿ ಅಲ್ಲಿಂದಿಲ್ಲಿಗೆ ಎಳೆದಾಡುತ್ತಿದ್ದ.

ಒಂದು ದಿನ ರಾತ್ರಿ ಪೇತ್ಯ ಮಲಗಲು ಸಿದ್ಧನಾಗುತ್ತಿದ್ದಾಗ ತಂದೆಯವರೂ ಚಿಕ್ಕಮ್ಮನ ಅಡಿಗೆ ಮನೆಯಿಂದ ಆಡುತ್ತಿದ್ದ ಮಾತುಗಳು ಪೇತ್ಯನ ಕಿವಿಯ ಮೇಲೆ ಬಿದ್ದುವು.

"ಇಲ್ಲಿಯ ಜೀವನ ದುರ್ಭರವಾಗುತ್ತಿದೆ. ಇದನ್ನು ಖಂಡಿತ ಸಹಿಸಲಾರೆ" ನೆಗಡಿಯಾದ ಳಂತೆ ಮೂಗಿನಲ್ಲಿ ಚಿಕ್ಕಮ್ಮ ಹೇಳುತ್ತಿದ್ದಳು. ಚಿಕ್ಕಮ್ಮನಿಗೆ ನೆಗಡಿಯಾಗಿರಲಿಲ್ಲವೆಂಬುದನ ಪೇತ್ಯ ಚೆನ್ನಾಗಿ ತಿಳಿದಿದ್ದ. ಪೇತ್ಯ ಅವರ ಮಾತುಗಳನ್ನು ಆಲಿಸುತ್ತ ಹಾಗೆಯೇ ಮಲಗಿದ.

"ಈ ಸ್ಥಿತಿಯಲ್ಲಿ ಉಸಿರಾಡುವುದಕ್ಕೂ ಸಾಧ್ಯವಿಲ್ಲವಾಗಿದೆ!" ಕಣ್ಣೀರಿನಿಂದ ತೊಯ ಧ್ವನಿಯಲ್ಲಿ ಚಿಕ್ಕಮ್ಮ ಹೇಳಿದಳು. "ವಾಸಿಲಿ ಪೆತ್ರೋವಿಚ್, ನಿನಗೂ ನನ್ನ ಹಾಗೆಯೇ ಅನ್ನಿಸ ವುದಿಲ್ಲವೆ? ಅವರ ಸ್ಥಳದಲ್ಲಿ ನಾನಿದ್ದಿದ್ದರೆ ಜನಗಳ ಮುಖಗಳನ್ನು ನೋಡಲೂ ನನಗೆ ನಾಚಿ ಯಾಗುತ್ತಿತ್ತು. ಅಬ್ಬಾ, ದೇವರೇ ಕಾಪಾಡಬೇಕು! ಎಲ್ಲ ಸರಿಯಾಗಿಯೇ ಇದೆ ಎನ್ನುವಂ ನಡೆದುಕೊಳ್ಳುವರಲ್ಲ ಅವರು! ಫ್ರೆಂಚ್ ಸಾಲುಮರಗಳ ಬೀದಿಯಲ್ಲಿ ಬರುತ್ತಿದ್ದೆ. ನನ್ನ ಕಣ ಗಳನ್ನೇ ನಾನು ನಂಬಲಾರದಾದೆ. ಏನು ಆಡಂಬರ ಅದು! ಕಪ್ಪುಮಚ್ಚೆಗಳಿರುವ ಬೂದ ಬಣ್ಣದ ಒಳ್ಳೆಯ ಜಾತಿಕುದುರೆಗಳನ್ನು ಕಟ್ಟಿದ ನಾಲ್ಕು ಚಕ್ರಗಳ ಸಾರೋಟು. ಅದರ ಸಾರ ಬಿಳಿಯ ಕೈಚೀಲಗಳನ್ನು ತೊಟ್ಟ ಸೈನಿಕ. ಗಾಡಿ ಕಣ್ಣು ಕೋರೈಸುವಂತೆ ಹೊಳೆಯುತ್ತಲಿತ್ತ ಗಾಡಿಯೊಳಗೆ ಇಬ್ಬರು ಸ್ತ್ರೀಯರು ಕುಳಿತಿದ್ದರು. ಆಸ್ಪತ್ರೆ ದಾದಿಗಳು ಧರಿಸುವಂಥ ಕೆಂ ಅಡ್ಡಪಟ್ಟಿಯ ಬಿಳಿ ಟೋಪಿಗಳನ್ನು ತಲೆಯ ಮೇಲೆ ಧರಿಸಿದ್ದರು. ಮಖಮಲ್ಲಿನ ಮತ್ತು ತುಪ್ಪಳ ಚರ್ಮದ ಮೇಲುವಸ್ತ್ರವನ್ನು ತೊಟ್ಟಿದ್ದರು. ಇಷ್ಟಿಷ್ಟು ದಪ್ಪ ವಜ್ರದ ಹರಳಿನ ಉಂಗುರಗ ಬೆರಳುಗಳಲ್ಲಿ ಹೊಳೆಯುತ್ತಿದ್ದುವು. ಥಳಥಳಿಸುವ ಕನ್ನಡಕವೇನು, ಹುಬ್ಬುಗಳನ್ನು ತಿ ಕೊಂಡಿದ್ದುದೇನು, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿದ್ದುದೇನು! ಅವರೆದುರಿನಲ್ಲಿ ಇಬ್ಬರು ಸಹಾಯ

ಸೇನಾಧಿಕಾರಿಗಳು ಅದೇನು ಠೀವಿಯಿಂದ ಕುಳಿತಿದ್ದರೋ! ಅವರ ಕತ್ತಿಗಳು ಕನ್ನಡಿಯಂತೆ ಹೊಳೆಯುತ್ತಿದ್ದುವು. ಥಳಥಳನೆ ಹೊಳೆಯುತ್ತಿದ್ದ ಹಲ್ಲುಗಳಲ್ಲಿ ಸಿಗರೇಟ್ ಹಿಡಿಗಳನ್ನು ಕಚ್ಚಿಕೊಂಡಿದ್ದರು. ಅವರ ಉಲ್ಲಾಸವೇನು, ಝೋಕೇನು! ಅವರು ಯಾರು ಗೊತ್ತೆ? ಮದಾಂ ಕಾಲ್ಬಾರ್ಸ್ ಮತ್ತು ಅವಳ ಮಗಳು. ಇಬ್ಬರೂ ತಮ್ಮ ರೂಪಾರಾಧಕರೊಡನೆ ಆರ್ಕೇಡಿಯಕ್ಕೆ ಹೋಗುತ್ತಾ ಇದ್ದರು. ಇಡೀ ರಷ್ಯಾದೇಶವೇ ಕಣ್ಣೀರಲ್ಲೂ ರಕ್ತದಲ್ಲೂ ಕೈತೊಳೆಯುತ್ತಾ ಇದೆ. ಅಲ್ಲಿ ಹಾಗೆ, ಇಲ್ಲಿ ಇವರು ಹೀಗೆ. ಏನು ಹೇಳುತ್ತೀಯೆ ಇದಕ್ಕೆ? ಎಷ್ಟು ತೋರದ ವಜ್ರಗಳು ಅವು ಅಂತ? ಅದೆಲ್ಲ ಎಲ್ಲಿ ಸಿಕ್ಕಿತೊ ಅವರಿಗೆ? ಸುಲಿಗೆ, ಕಳವು ಮಾಲುಗಳಿಂದ ತಮ್ಮ ಜೇಬುಗಳನ್ನು ತುಂಬಿಕೊಳ್ಳುತ್ತಾ ಇದ್ದಾರೆ. ಅಷ್ಟೆ.ಅಬ್ಬ, ಆ ನೀಚರನ್ನು ಕಂಡರೆ ನನ್ನ ಮೈಯ್ಯೆಲ್ಲ ಉರಿದು ಹೋಗುತ್ತದೆ. ಮುಚ್ಚುಮರೆಯಿಲ್ಲದೆ ನನ್ನ ಮನಸ್ಸಿನಲ್ಲಿರುವುದನ್ನು ನಾನು ಹೇಳಿಬಿಡುತ್ತೇನೆ. ಮುಕ್ಕಾಲು ಮೂರುವೀಸಪಾಲು ದೇಶವೆಲ್ಲ ಹೊಟ್ಟೆಗಿಲ್ಲದೆ ನರಳುತ್ತಾ ಬಿದ್ದಿದೆ, ಎಷ್ಟೋ ಜಿಲ್ಲೆಗಳ ಜನರು ಸಾಯುತ್ತಾ ಬಿದ್ದಿದಾರೆ. ನಾನು ಇನ್ನು ಸಹಿಸಲಾರೆ. ನನ್ನ ಕೈಯಲ್ಲಿ ಆ ಶಕ್ತಿ ಇಲ್ಲ."

ಭಾವೋದ್ರೇಕದಿಂದ ಅಳುವ ಶಬ್ದ ಪೇತ್ಯನ ಕಿವಿಗೆ ಕೇಳಿಸಿತು.

"ಸಮಾಧಾನ ಮಾಡಿಕೋ, ತಾತ್ಯಾನ ಇವನೋವ್ನ. ನಾವು ಏನು ಮಾಡೋಣ ಹೇಳು. ನಮ್ಮ ಕೈಯಲ್ಲೇನಿದೆ?"

"ನನಗೇನು ಗೊತ್ತು? ಪ್ರತಿಭಟಿಸಿ, ಬಲವಂತದಿಂದ ಕೇಳಿ, ಕೂಗಿಕೊಳ್ಳಿ, ಬೀದಿಗೆ ಹೋಗಿ ನಿಂತು—"

"ದಯವಿಟ್ಟು, ಇಲ್ಲಿ ಕೇಳು. ನನಗೆ ಎಲ್ಲ ಅರ್ಥವಾಗುತ್ತೆ. ಆದರೆ ನಾವೇನು ಮಾಡಬಲ್ಲೆವು?"

"ನಾವೇನು ಮಾಡಬಲ್ಲೆವೋ?" ತಾತ್ಯಾನ ಇದ್ದಕ್ಕಿದ್ದಂತೆ ಉಚ್ಚಕಂಠದಲ್ಲಿ ಸ್ಪಷ್ಟವಾಗಿ ಕೂಗಿ ಹೇಳಿದಳು. "ಏನು ಬೇಕಾದರೂ ಮಾಡಬಲ್ಲೆವು. ನಮಗೆ ಆ ಮನೋಸ್ಥೈರ್ಯ ವಿದ್ದರೆ, ಹೆದರಿಕೆಯನ್ನು ನಾವು ಪರಿತ್ಯಜಿಸಿದರೆ ಏನನ್ನು ಮಾಡುವುದಕ್ಕೆ ಆಗುವುದಿಲ್ಲ. ಠಕ್ಕನನ್ನು ಠಕ್ಕ ಎಂದು ಅವನ ಮುಖದ ಎದುರಿಗೇ ಹೇಳಬಲ್ಲವಾಗುತ್ತೇವೆ. ಕಳ್ಳನನ್ನು ಕಳ್ಳ ಎನ್ನಬಲ್ಲೆವು; ಹೇಡಿಯನ್ನು ಹೇಡಿ ಎನ್ನಬಲ್ಲೆವು. ಆದರೆ ಮನೆಯೊಳಗೆ ಹೊಕ್ಕಿಕೊಂಡು ಗಂಭೀರವಾಗಿ ಕುಳಿತಿದ್ದೇವೆ. ದೇವರೇ, ರಷ್ಯಾದೇಶಕ್ಕೆ ದುರದೃಷ್ಟದ ಗ್ರಹ ಬಡಿದಿದೆಯಲ್ಲ! ಮೂಢ ಸೇನಾನಿಗಳು, ಅವಿವೇಕಿ ಮಂತ್ರಿಗಳು, ಮೂರ್ಖ ಜಾರ್‌ಚಕ್ರವರ್ತಿ. ಇನ್ನೇನು ಬೇಕು!"

"ದಯವಿಟ್ಟು ಸುಮ್ಮನಾಗು, ತಾತ್ಯಾನ ಇವನೋವ್ನ. ಮಕ್ಕಳು ಕೇಳಿಸಿಕೊಂಡಾರು!"

"ಸೊಗಸಾಗಿದೆ ನೀವು ಹೇಳುವುದು. ತಾವು ಜೀವಿಸುತ್ತಿರುವ ದೇಶದಸ್ಥಿತಿಯನ್ನು ಮಕ್ಕಳೂ ತಿಳಿದುಕೊಳ್ಳಲಿ. ಇದಕ್ಕಾಗಿ ಮುಂದೆ ಅವರು ನಮ್ಮನ್ನು ವಂದಿಸುವರು. ಜಾರ್ ಚಕ್ರವರ್ತಿ ಒಬ್ಬ ತಿಳಿಗೇಡಿ ಮತ್ತು ಕುಡುಕನೆಂದೂ, ಬಿದಿರುಕೋಲಿನಿಂದ ತಲೆಯಮೇಲೆ ಹೊಡೆದು ಅವನನ್ನು ಒಂದು ಮೂಲೆಯಲ್ಲಿ ಕೂರಿಸಿದ್ದಾರೆಂದೂ ಮಕ್ಕಳು ತಿಳಿದುಕೊಳ್ಳಲಿ. ಅವನೊಬ್ಬ ಭ್ರಷ್ಟ. ದೇಶದ ಶ್ರೇಷ್ಠವ್ಯಕ್ತಿಗಳು, ಪ್ರಾಮಾಣಿಕರು, ವಿದ್ಯಾವಂತರು, ಬುದ್ಧಿವಂತರು ಜೈಲಿನಲ್ಲಿ ಕಠಿಣ ಸಜಗಳನ್ನನುಭವಿಸುತ್ತ ಕೊಳೆಯುತ್ತಿದ್ದಾರೆಂಬುದನ್ನು ಮುಂದಿನ ಜನಾಂಗವಾದ ಇಂದಿನ ಮಕ್ಕಳು ತಿಳಿದುಕೊಳ್ಳುವುದೊಳ್ಳೆಯದು."

ತಂದೆ ಮೆಟ್ಟಂಗಾಲಿನ ಮೇಲೆ ಹೋಗಿ ಕೊಠಡಿಯಲ್ಲಿ ಮಕ್ಕಳು ಮಲಗಿದ್ದಾರೆಯೇ ಎಂಬ
ದನ್ನು ನೋಡಿದರು. ಪೇತ್ಯ ತಂದೆ ಬಂದುದನ್ನು ತಿಳಿದು ಕಣ್ಣುಮುಚ್ಚಿಕೊಂಡ, ಅಲ್ಲದೆ ನಿದ
ಬಂದವನಂತೆ ಒಂದೇ ಕ್ರಮದಲ್ಲಿ ನೀಳವಾಗಿ ಉಸಿರಾಡಲಾರಂಭಿಸಿದ. ತಂದೆ ಅವನ ಬಳಿ
ಬಂದು ಮುಖದಬಳಿಗೆ ಬಗ್ಗಿ ಕೆನ್ನೆಗೆ ಕಂಪಿಸುತ್ತಿದ್ದ ಅಧರಗಳಿಂದ ಒಂದು ಮುದ್ದು ಕೊಟ್ಟರ
ಬಳಿಕ ಸ್ವಲ್ಪವೂ ಶಬ್ದವಾಗದ ರೀತಿಯಲ್ಲಿ ಹೆಜ್ಜೆಯಿಡುತ್ತ ತಮ್ಮ ಹಿಂದೆ ಬಾಗಿಲನ್ನು ಬಿಗಿಯಾ
ಮುಚ್ಚಿಕೊಂಡು ಹೊರಟು ಹೋದರು. ಆದರೇನು, ಅಡಿಗೆಮನೆಯಿಂದ ಹೊರಟ ಮಾತುಗಳ
ಬಹು ಹೊತ್ತು ಬಾಗಿಲ ಸಂದಿಯ ಮೂಲಕ ಒಳಕ್ಕೆ ತೂರಿಬರುತ್ತಿದ್ದುವು. ಪೇತ್ಯನಿಗೆ ಸುತರಾ
ನಿದ್ದೆ ಬರಲಿಲ್ಲ. ಬೀದಿಯಲ್ಲಿ ಗಾಡಿಗಳು ಓಡಾಡುತ್ತಿದ್ದುದರಿಂದ ಅವುಗಳ ದೀಪಗಳು ಕಿಟಕಿಂ
ಕಂಬಿಗಳ ಮೇಲೆ ಬಿದ್ದು ಆ ಕಂಬಿಗಳ ನೆರಳು ಕಣ್ಣೆಗೆದುರಾಗಿ ಸೂರಿನಮೇಲೆ ಹಿಂದಕ್ಕ
ಮುಂದಕ್ಕೂ ಚಲಿಸುತ್ತಿತ್ತು. ಕುದುರೆಕಾಲುಗಳ ಗೊರಸಿನ ಶಬ್ದ ಕೇಳಿಬರುತ್ತಿತ್ತು. ಬೀದಿಯ
ಚಲಿಸುತ್ತಿದ್ದ ಗಾಡಿಗಳ ಕಿಟಕಿಗಳು ಕಟಕಟ ಶಬ್ದ ಮಾಡುತ್ತಿದ್ದುವು.

ಸರ್ಕಾರದ ಭಂಡಾರ (ಭಂಡಾರವೆಂದರೆ ಚಕ್ರಗಳಮೇಲೆ ನಿಂತ ಕಬ್ಬಿಣದ ಪೆಟ್ಟಿಗೆ ಎಂಬುದ
ಆ ಹುಡುಗನ ತಿಳಿವಳಿಕೆ) ದಿಂದ ಹಣದನ್ನೂ ವಜ್ರ ವೈಡೂರ್ಯಗಳನ್ನೂ ಲಪಟಾಯಿಸಿ
ಮದಾಂ ಕಾಲ್ಬಾರ್ಸಳ ನೆನಪು ಪೇತ್ಯನಿಗೆ ಬಂದಿತು. ಥಳಥಳನೆ ಹೊಳೆಯುವ ಅವಳ ಕುದು
ಸಾರೋಟು ಕಿಟಕಿಯಿಂದಾಚೆ ರಸ್ತೆಯಲ್ಲಿ ಹಿಂದಕ್ಕೂ ಮುಂದಕ್ಕೂ ಓಡಾಡುತ್ತಿದ್ದಂತೆ ಪೇತ್ಯನಿ
ಭಾಸವಾಗುತ್ತಿತ್ತು.

೩೨. ಹಿಮ

ಇದಕ್ಕೆ ಮೊದಲು ಶಂಕಿಸಲೂ ಆಗದೆ ಇದ್ದಂಥ ಎಷ್ಟೋ ವಿಷಯಗಳನ್ನು ಆ ಸಂಜೆಯ
ತೋರಿಸಿಕೊಟ್ಟಿತು.

ಕೆಲವು ಪ್ರಸಿದ್ಧವಾದ ಮತ್ತು ಚರ್ಚಾದೂರವಾದ ಅಭಿಪ್ರಾಯಗಳು ಮೊದಲಿನಿಂ
ಎಲ್ಲರಿಗೂ ತಿಳಿದಿದ್ದುವು. ಆದುದರಿಂದ ಅವುಗಳ ಬಗೆಗೆ ಆಲೋಚಿಸಬೇಕಾದ ಸಂದರ್ಭ
ಇರಲಿಲ್ಲ. ಉದಾಹರಣೆಗಾಗಿ ರಷ್ಯದೇಶವನ್ನೇ ತೆಗೆದುಕೊಳ್ಳೋಣ. ರಷ್ಯಾ ದೇಶ
ಇಡೀ ಜಗತ್ತಿನಲ್ಲೇ ಅತ್ಯಂತ ಬಲಶಾಲಿಯಾದ, ಸುಂದರವಾದ ಮತ್ತು ಅತ್ಯುತ್ತಮವಾ
ದೇಶವೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಅದು ಸುಸ್ಪಷ್ಟವಾದುದಾಗಿತ್ತು. ಅ
ಸತ್ಯತೆಯ ವಿಷಯದಲ್ಲಿ ಬೇರಾವ ವಾದಕ್ಕೂ ಅವಕಾಶವಿರಲಿಲ್ಲ. ತಾವು ರಷ್ಯದೇಶದಲ್ಲಿ ವಾಸಿ
ತ್ತಿದ್ದೇವೆಂಬ ಸತ್ಯವನ್ನು ಬೇರಾವ ರೀತಿಯಲ್ಲಿ ಜನರು ಸಮರ್ಥಿಸಿಕೊಳ್ಳಬಹುದಾಗಿತ್ತು ?

ಇನ್ನೊಂದು ನಿದರ್ಶನ ತಂದೆ. ತಂದೆಯು ಪ್ರಪಂಚದಲ್ಲಿ ಚತುರನೂ, ದಯಾಳುವೂ, ಬ
ಶಾಲಿಯೂ, ವಿದ್ಯಾವಂತನೂ ಆಗಿದ್ದನೆಂಬುದರಲ್ಲಿ ಎರಡುಂಟೆ ?

ಅಥವಾ ಜಾರ್ ಚಕ್ರವರ್ತಿಯ ವಿಷಯವನ್ನೇ ತೆಗೆದುಕೊಳ್ಳೋಣ. ಜಾರ್ ಚ
ವರ್ತಿಯು ಅತ್ಯಂತ ಬುದ್ಧಿವಂತನೂ, ಸಂಪದ್ಯುಕ್ತನೂ, ಮತ್ತು ಜಗತ್ತಿನಲ್ಲೆಲ್ಲ ಶಕ್ತಿಶಾಲಿಂ
ಆಗಿದ್ದನೆಂಬ ವಿಷಯವನ್ನು ನಿರ್ವಿವಾದವಾಗಿ ಒಪ್ಪತಕ್ಕದಾಗಿದ್ದಿತು. ರಷ್ಯ ದೇಶವು ಜ

ಚಕ್ರವರ್ತಿಗೆ ಒಳಪಟ್ಟಿದೆ. ಅದು ಬೇರಾವ ರಾಜನಿಗೂ ಸೇರಿಲ್ಲ. ಮಸಲಾ ಅದು ಫ್ರಾನ್ಸ್ ದೇಶದ ರಾಜನಿಗೆ ಸೇರಿದೆಯೆ ಎಂದರೆ ಇಲ್ಲ ಎಂಬ ವಿಷಯವನ್ನು ಬೇರೆ ರೀತಿಯಲ್ಲಿ ವಿವರಿಸುವುದು ಹೇಗೆ ?

ದೇವರ ವಿಷಯವನ್ನಂತೂ ಕೈಬಿಡುವಂತೆಯೂ ಇಲ್ಲ. ದೇವರ ವಿಷಯವಾಗಿ ಏನನ್ನೂ ಹೇಳುವಂತಿಲ್ಲ. ಏಕೆಂದರೆ ಅವನ ವಿಷಯ ಸರ್ವವಿದಿತವಾದುದು.

ಆದರೆ ಈಗ? ಎಷ್ಟೊಂದು ಬದಲಾವಣೆಗಳು. ರಷ್ಯದೇಶ ನಿರ್ಭಾಗ್ಯಶಾಲಿಯಾಗಿತ್ತು. ತಂದೆಗಿಂತಲೂ ಶ್ರೇಷ್ಠರಾದ ಜನರು ರಷ್ಯಾದೇಶದಲ್ಲಿದ್ದರು. ಅವರಲ್ಲಿ ಕೆಲವರು ಕಾರಾಗೃಹದಲ್ಲಿ ಶಿಕ್ಷೆಯನ್ನನುಭವಿಸುತ್ತ ಕೊಳೆಯುತ್ತ ಬಿದ್ದಿದ್ದರು. ಜಾರ್ ಚಕ್ರವರ್ತಿ ಒಬ್ಬ ತಿಳಿಗೇಡಿ ಮತ್ತು ಕುಡುಕನಾಗಿದ್ದ. ಅಲ್ಲದೆ ಅವನ ತಲೆಯಮೇಲೆ ಬಿದಿರುಕೋಲಿನಿಂದ ಏಟುಬೀಳುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮಂತ್ರಿಗಳು ಮಡೆಯರಾಗಿದ್ದರು; ಸೇನಾನಿಗಳು ಮೂರ್ಖರಾಗಿದ್ದರು; ಮೇಲಾಗಿ ಯುದ್ಧದಲ್ಲಿ ರಷ್ಯಾ ಜಪಾನನ್ನು ಸೋಲಿಸಿರಲಿಲ್ಲ, ತಾನೇ ಸೋತಿತ್ತು. ಆದರೆ ಅದುವರೆಗೆ ಎಲ್ಲ ಯುದ್ಧಗಳಲ್ಲೂ ರಷ್ಯಾ ಜಪಾನನ್ನು ಸೋಲಿಸಿತ್ತೆಂಬುದರಲ್ಲಿ ಸಂಶಯವೇ ಇರಲಿಲ್ಲ.

ಇದರಲ್ಲಿ ಬಹಳ ಗಮನಾರ್ಹವಾದ ಸಂಗತಿಯೆಂದರೆ ತಂದೆ ಮತ್ತು ಚಿಕ್ಕಮ್ಮ ಇಬ್ಬರೂ ಈ ವಿಷಯವನ್ನು ಕುರಿತು ಮಾತಾಡಿದುದು. ಈಚೀಚೆಗೆ ಹಿಂದಿನ ರೂಢಮೂಲ ನಂಬಿಕೆಗಳಲ್ಲಿ ಒಂದೆರಡರ ಬಗೆಗೆ ಪೇತ್ಯನಿಗೇ ಸಂಶಯ ಉಂಟಾಗಿತ್ತು.

ಮರ್ಯಾದಸ್ಥರನ್ನು ಕಾರಾಗೃಹದಲ್ಲಿ ಕೂಡಿಡಲಾಗಿತ್ತು. ಗಾಪ್ರಿಕನ ಅಜ್ಜನಂಥ ಒಳ್ಳೆಯ ಮುದುಕನನ್ನು ಪೋಲೀಸ್ ಠಾಣೆಯಲ್ಲಿ ಬಂಧಿಸಿಡಲಾಗಿತ್ತು. ಅದಕ್ಕಿಂತ ಹೆಚ್ಚಾಗಿ ಅವನನ್ನು ಹೊಡೆಯುತ್ತಿದ್ದರು. ನಾವಿಕನು ಹಡಗಿನಿಂದ ತಪ್ಪಿಸಿಕೊಳ್ಳಲು ಸಮುದ್ರಕ್ಕೆ ಹಾರಿದ್ದ. ತಮ್ಮ ಗಾಡಿಯನ್ನು ಪೋಲೀಸಿನವರು ತಡೆದು ನಿಲ್ಲಿಸಿದ್ದರು. ಬಂದರಿಗೆ ಕಾವಲನ್ನು ಹಾಕಲಾಗಿತ್ತು. ಬಂದರಿನ ಬಳಿಯ ಮರದ ಸೇತುವೆಯನ್ನು ಸುಟ್ಟು ಹಾಕಲಾಗಿತ್ತು. ಯುದ್ಧದ ಹಡಗು ನಗರದ ಮೇಲೆ ಗುಂಡುಗಳನ್ನು ಹಾರಿಸಿತ್ತು. ಇವೆಲ್ಲವುಗಳನ್ನೂ ನೋಡಿದಾಗ ಸ್ವಲ್ಪ ಕಾಲದ ಹಿಂದೆ ಇದ್ದಂತೆ ಈಗ ಜೀವನವು ಉಲ್ಲಾಸಕರವಾಗಿಯೂ ಆನಂದದಾಯಕವಾಗಿಯೂ, ನಿರಾತಂಕವಾಗಿಯೂ ಇರಲಿಲ್ಲವೆಂಬುದು ಸ್ಪಷ್ಟವಾಗಿತ್ತು.

ಜಾರ್ ಚಕ್ರವರ್ತಿಯ ತಲೆಯ ಮೇಲೆ ಬಿದಿರು ಕೋಲಿನಿಂದ ಹೊಡೆದವರಾರು ಮತ್ತು ಏತಕ್ಕೆ ಎಂಬುದನ್ನು ಚಿಕ್ಕಮ್ಮನಿಂದ ಕೇಳಿ ತಿಳಿದುಕೊಳ್ಳಬೇಕೆಂದು ಪೇತ್ಯ ಕಾತುರನಾಗಿದ್ದ. ಹೊಡೆಯುವುದಕ್ಕೆ ಬಿದಿರುಕೋಲೇ ಬೇಕಾಗಿತ್ತೆ? ಬೇರಾವ ಕೋಲೂ ಇರಲಿಲ್ಲವೇ ? ಆದರೆ ಕೆಲವು ವಿಷಯಗಳನ್ನು ಕುರಿತು ಮಾತನಾಡುವುದಕ್ಕಿಂತ ಮೌನ ಭೂಷಣವೆಂಬುದನ್ನೂ, ಆ ವಿಷಯ ತನಗೇನೂ ತಿಳಿಯದಂತೆ ನಟಿಸಬೇಕೆಂಬುದನ್ನೂ ಪೇತ್ಯ ಅರಿತುಕೊಂಡಿದ್ದ. ಚಿಕ್ಕಮ್ಮ ಒಳ್ಳೆಯ ಸ್ವಭಾವದ, ಸ್ವಸಾಮರ್ಥ್ಯದಲ್ಲಿ ನಂಬಿಕೆಯಿಟ್ಟಿದ್ದ, ವಿನೋದ ಶೀಲ ಸ್ತ್ರೀಯಾಗಿದ್ದರೂ ಕೂಡ ಆ ಸಂಜೆ ಅಷ್ಟು ಬಹಿರಂಗವಾಗಿ ಮಾತನಾಡಿದಳು. ಅದನ್ನು ಬಿಟ್ಟರೆ ಆಕೆ ಹೊರಕ್ಕೆ ತನ್ನ ಮನಸ್ಸಿನ ಉದ್ವೇಗ ಚಿಂತೆಗಳನ್ನು ತೋರ್ಪಡಿಸದೆ ಗಂಭೀರವಾಗಿದ್ದಳೆಂಬುದನ್ನು ಪೇತ್ಯ ಗಮನಿಸಿದ್ದ.

ಅಕ್ಟೋಬರ್ ತಿಂಗಳು ಸಮಾಪಿಸುತ್ತಿತ್ತು. ಜಾಲಿ ಮರಗಳಲ್ಲಿ ಬಹುತೇಕ ಎಲೆಗಳು

ಉದುರಿಹೋಗಿದ್ದುವು. ಸಾಗರದ ಮೇಲೆ ಬಿರುಗಾಳಿ ಆರಂಭವಾಯಿತು. ಬೆಳಗ್ಗೆ ಏಳುವ ಹೊತ್ತಿನಲ್ಲಿ ದೀಪ ಹತ್ತಿಸಬೇಕಾಗುತ್ತಿತ್ತು. ಒಂದೊಂದು ಸಲ ವಾರಗಟ್ಟಲೆ ನಗರವನ್ನು ಮಂಜು ಮುಚ್ಚಿರುತ್ತಿತ್ತು. ಮಂಜಿನಲ್ಲಿ ಮನುಷ್ಯರೂ ಮರಗಳೂ ಹಿಮಗಾಜಿನ ಮೇಲಿನ ಚಿತ್ರದಂತೆ ತೋರುತ್ತಿದ್ದರು. ಬೆಳಗ್ಗೆ ಒಂಬತ್ತು ಗಂಟೆಗೆ ದೀಪವನ್ನು ಆರಿಸಿದರೆ ಪುನಃ ಸಂಜೆ ಐದು ಗಂಟೆಗೇ ದೀಪವನ್ನು ಹತ್ತಿಸಬೇಕಾಗುತ್ತಿತ್ತು. ಸೋನೆಯಂತೆ ಮಳೆ ಉದುರುತ್ತಿತ್ತು. ಒಂದೊಂದು ಸಲ ಮಳೆ ನಿಂತು ಗಾಳಿಯು ಮಂಜನ್ನು ಹಾರಿಸಿಕೊಂಡು ಹೋಗುತ್ತಿತ್ತು. ಆಗ ಶೈಲು ನಿಲ್ದಾಣ, ಮಾರುಕಟ್ಟೆ, ಬತ್ತಲೆಯ ಮರದ ಕೊಂಬೆಗಳು—ಇವುಗಳ ಆಚೆಯಿಂದ ಹಿಮ ದಂತೆ ಸ್ವಚ್ಛವಾದ ಆಕಾಶದಲ್ಲಿ ರಕ್ತಾರುಣ ಪ್ರಕಾಶವು ನಗರವನ್ನು ಬೆಳಗುತ್ತಿತ್ತು. ಆಗ ಮರ ಗಳ ಬರಿಗೊಂಬೆಗಳಲ್ಲಿ ನೇಯ್ದುಕೊಂಡಿದ್ದ ಮಂಚೂರಿಯದ ಫರ್ ಕೂದಲಿನಂತೆ ಕಪ್ಪಾದ ಕಾಗೆಯ ಗೂಡುಗಳು ರಂಜಿಸುತ್ತಿದ್ದುವು.

ಕೈಚೀಲಗಳನ್ನು ಧರಿಸಿಕೊಳ್ಳದೆ ಹೋದರೆ ಕೈ ಕೊರೆಯುತ್ತಿತ್ತು. ನೆಲ ಗಟ್ಟಿಯಾಗಿರು ತ್ತಿತ್ತು. ಅಟ್ಟಗಳ ಮೇಲೆ ಭಯಾವಹವಾದ ಶೂನ್ಯತೆಯ ಅನುಭವವಾಗುತ್ತಿತ್ತು. ಚಳಿಗಾಲದ ಆ ಸಂಕ್ಷಿಪ್ತ ಗಂಟೆಗಳಲ್ಲಿ ಗಗನದಿಂದ ಭೂಮಿಯವರೆಗೆ ಎಲ್ಲೆಲ್ಲೂ ನೀರವತೆ ಹಬ್ಬಿರುತ್ತಿತ್ತು. ಮೌನದ ಆ ಪಾರದರ್ಶಕ ಗೋಡೆಯು ಮಧ್ಯೆ ಬಂದು ನಿಂತುದರಿಂದ ಕುಲಿಕೋವೋ ಮೈದಾನವು ದೂರದಿಂದ ನೋಡುವವರ ಕಣ್ಣಿಗೆ ಅಗೋಚರವಾಗಿರುತ್ತಿತ್ತು. ನಗರದಿಂದ ಬರುವ ಶಾಂತಿಗೆ ಭಂಗತರಬಹುದಾದ ಕಿಂವದಂತಿಗಳು, ರಹಸ್ಯಗಳು, ಮುಂಬರುವ ಘಟನೆಗಳ ಬಗೆಗೆ ಕುತೂಹಲ- ಮುಂತಾದುವುಗಳೆಲ್ಲ ಅನಂತವಾಗಿ ದೂರ ಸರಿದಂತೆ ಆ ಕಾಲದಲ್ಲಿ ಭಾಸವಾಗುತ್ತಿದ್ದುವು. ಆದರೆ ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿದಾಗ ಮಾತ್ರ ಅವು ಸ್ಪಷ್ಟವಾಗಿ ಕಾಣಿಸುತ್ತಿದ್ದುವು. ದುರ್ಬೀ ನನ್ನು ಹಿಂದುಮುಂದಾಗಿ ಇಟ್ಟುಕೊಂಡು ನೋಡಿದಂತೆ ಬಹುದೂರಗತವಾದಂತೆ ತೋರುತ್ತಿದ್ದು ವೆಂದು ಹೇಳಬಹುದು.

ಆದರೆ ಆ ಬಳಿಕ ಹವಾ ಬದಲಾಯಿಸುತ್ತಿತ್ತು. ಗಗನವು ಕಪ್ಪೇರುತ್ತಿತ್ತು. ಭೇದಿಸಲ ಸಾಧ್ಯವಾದ ಹಿಮವು ಸಮುದ್ರದ ಕಡೆಯಿಂದ ಬಂದು ನಗರವನ್ನು ಆವರಿಸುತ್ತಿತ್ತು. ಎರಡು ಹೆಜ್ಜೆ ಆಚೆಗೆ ಏನಿದೆ ಎಂಬುದು ಕಾಣಿಸುತ್ತಿರಲಿಲ್ಲ. ಕ್ರಮೇಣ ಕಡುಗತ್ತಲೆಯು ಆ ಅಲೌಕಿಕ ಸಂಜೆಗತ್ತಲಿನ ಸ್ಥಳವನ್ನು ಆಕ್ರಮಿಸುತ್ತಿದ್ದಿತು.

ಸಮುದ್ರದ ಮೇಲಿಂದ ಥಂಡಿಗಾಳಿ ಬೀಸುವುದು. ಮಂಜು ಭಯಂಕರವಾಗಿ ಬೀಳುತ್ತಿದೆ ಎಂಬುದನ್ನು ಸೂಚಿಸುವ ಕೊಂಬಿನ ಧ್ವನಿಯು ಭಯಭಕ್ತಿಯನ್ನು ಹುಟ್ಟಿಸುತ್ತ ಬಂದರಿನಿಂದ ಕೇಳಿಬರುವುದು. ಆ ಧ್ವನಿ ಮೊದಲು ಮಂದ್ರಸ್ವರದಲ್ಲಿ ಆರಂಭವಾಗುವುದು. ಅನಂತರ ಇದ್ದಕ್ಕಿದ್ದಂತೆ ಉಜ್ವಲವಾಗಿ ರಭಸದಿಂದ ಮೇಲೇರುತ್ತ ಹೋಗುವುದು. ಆಗ ಅದು ಕಿವಿಯನ್ನು ಭೇದಿಸಿಕೊಂಡುಬರುವ ಮೃದುವಾದ ತಾರಸ್ವರದ ಪ್ರಲಾಪದಂತೆ ಕೇಳಿಸುವುದು. ಮಾರಕವಾದ ಕ್ಷಿಪಣಿಯೊಂದು ರಕ್ತ ಹೆಪ್ಪುಗಟ್ಟುವಂಥ ರೋದನದೊಂದಿಗೆ ಗಾಢವಾದ ಕತ್ತಲೆಯನ್ನು ಹರಿದು ಕೊಂಡು ಬರುತ್ತಿದೆಯೋ ಎನ್ನಿಸುವುದು.

ಅಂಥ ಸಂಜೆಯ ದಿನಗಳಲ್ಲಿ ಕಿಟಕಿಯ ಬಾಗಿಲುಗಳನ್ನು ತೆಗೆದು ರಸ್ತೆಯಕಡೆಗೆ ನೋಡಿ ದಾಗಲೆಲ್ಲ ಪೇತ್ಯ ಭಯದ ಹಿಡಿತದಿಂದ ತನ್ನನ್ನು ಬಿಡಿಸಿಕೊಳ್ಳಲಾರದೆ ಹೋಗುತ್ತಿದ್ದ.

ವಿಸ್ತಾರವಾದ ಕುಲಿಕೋವೊ ಮೈದಾನ ಕಪ್ಪೂ ಎಂದರೆ ಕಪ್ಪಾಗಿ ಕಾಣುತ್ತಿತ್ತು. ಹಿಮುದಲ್ಲಿ ಮುಚ್ಚಿದ ಬೀದಿಯ ದೀಪಗಳೊಂದರಿಂದ ಇನ್ನೊಂದಕ್ಕೆ ಮೌನವಾಗಿ ಕದ್ದೋಡುತ್ತಿರುವಂತೆ ಕಾಣುವ ಕುಲಿಕೋವೊ ಮೈದಾನವೂ ಕೂಡ ನಗರದ ರಹಸ್ಯಗಳನ್ನು ಪಾಲುಗೊಳ್ಳುವಂತೆ ಮಂಜಿನ ಮುಸುಕಿನಲ್ಲಿ ಲೀನವಾಗಿ ಹೋಗಿತ್ತು.

ಅಪರೂಪವಾಗಿ ಸಂಚರಿಸುವ ಕಾಲುನಡಿಗೆಯವರ ನೆರಳುಗಳೂ ಕೂಡ ಕಣ್ಣಿಗೆ ಗೋಚರವಾಗದಂತೆ ಲೀನವಾಗಿ ಹೋಗುತ್ತಿದ್ದುವು. ಆಗೊಂದು ಸಲ ಈಗೊಂದು ಸಲ ಎನ್ನುವಂತೆ ದೀರ್ಘವಾಗಿ ಹಾಗೂ ದುರ್ಬಲವಾಗಿ ಪೋಲೀಸಿನವನ ಶಿಳ್ಳಿಯ ಶಬ್ದ ಕೇಳಿಬರುತ್ತಿತ್ತು. ಸೈನ್ಯದ ಅಧಿಕಾರಿಗಳ ತರಬೇತಿಶಾಲೆಯ ಕಟ್ಟಡದ ಬಳಿ ಸಂತರಿಗಳು ಎರಡು ಸರದಿಯಲ್ಲಿ ಕಾವಲಿನ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಿದ್ದರು. ಅವರ ಗಸ್ತಿನ ಹೆಜ್ಜೆಯ ತುಳಿತದ ಭಾರವಾದ ಶಬ್ದವು ಕತ್ತಲೆಯ ಮೂಲಕ ಕೇಳಿ ಬರುತ್ತಿತ್ತು.

ಯಾವ ಮೂಲೆಯಲ್ಲಿಯಾದರೂ ಯಾರಾದರೂ ಸಮಯವನ್ನು ನಿರೀಕ್ಷಿಸುತ್ತ ಅಡಗಿ ಕುಳಿತಿರಬಹುದು. ಯಾವ ಕ್ಷಣದಲ್ಲಿ ಏನಾಗುತ್ತದೋ! ಅನಿರೀಕ್ಷಿತವಾಗಿ ಭಯಂಕರವಾದ ಘಟನೆಯೊಂದು ನಡೆಯುವುದೇನೂ ಆಶ್ಚರ್ಯವಲ್ಲ! ಇಂಥ ಒಂದು ದಿನ ಸಂಜೆ ಒಂದು ಘಟನೆ ನಡದೇ ನಡೆಯಿತು.

ಒಂದು ದಿನ ರಾತ್ರಿ ಹತ್ತುಗಂಟೆಯ ಸಮಯ. ದುನ್ಯ ದೀಪಕ್ಕೆ ಪ್ಯಾರಾಫಿನ್ ಎಣ್ಣೆ ತರಲು ಅಂಗಡಿಗೆ ಹೋಗಿದ್ದವಳು ಊಟದ ಮನೆಗೆ ಓಡುತ್ತಲೇ ಬಂದಳು. ಮೇಲೆ ಹೊದ್ದುಕೊಂಡಿದ್ದ ಶಾಲನ್ನು ತೆಗೆಯಬೇಕೆಂಬಷ್ಟು ಗಮನವೂ ಅವಳಿಗಿರಲಿಲ್ಲ. ಸೇನಾಧಿಕಾರಿಗಳ ತರಬೇತಿ ಶಾಲೆಯ ಗೋಡೆಯ ಬಳಿಯ ಖಾಲಿ ಸ್ಥಳದಲ್ಲಿ ಐದು ನಿಮಿಷಗಳ ಹಿಂದೆ ಒಬ್ಬ ಸಂತರಿ ತನ್ನನ್ನು ತಾನೇ ಗುಂಡಿಕ್ಕಿಕೊಂಡನೆಂದು ಹಿಂದುಮುಂದು ನೋಡದೆ ದುನ್ಯ ಹೇಳಿಬಿಟ್ಟಳು. ಆ ಘೋರ ಸಂಗತಿಯ ವಿವರಗಳನ್ನೂ ಹೇಳಿದಳು. ಆ ಸೈನಿಕ ಒಂದು ಕಾಲಿನ ಬೂಡ್ಸನ್ನು ಕಿಗೆದುಹಾಕಿದ್ದ. ಬಂದೂಕದ ಬಾಯನ್ನು ತನ್ನ ಬಾಯೊಳಕ್ಕೆ ಇಟ್ಟುಕೊಂಡು ಬಂದೂಕದ ಕುದುರೆಯನ್ನು ಬರಿಗಾಲಿನ ಹೆಬ್ಬೆರಳಿನಿಂದ ತಳ್ಳಿದ್ದ. ಅವನ ತಲೆಯ ಹಿಂಭಾಗ ಒಡೆದು ಚೂರು ಚೂರಾಗಿತ್ತು. ದುನ್ಯ ಈ ವಿವರಗಳನ್ನು ಹೇಳುತ್ತ ಅಲ್ಲಿ ನಿಂತಿದ್ದಾಗ ಅವಳ ಮುಖ ವಿವರ್ಣವಾಗಿತ್ತು, ತುಟಿಗಳು ಬಿಳಿಚಿಕೊಂಡಿದ್ದುವು. ಉದ್ವೇಗದಿಂದ ತಾನು ಹೊದೆದುಕೊಂಡಿದ್ದ ಶಾಲಿನ ಅಂಚನ್ನು ಗಂಟು ಹಾಕುತ್ತ ಬಿಚ್ಚುತ್ತಲಿದ್ದಳು.

"ಅವನು ತಾನು ಸಾಯುತ್ತೇನೆ ಎಂದು ಬರೆದಿಟ್ಟು ಕೂಡ ಹೋಗಿರಲಿಲ್ಲವಂತೆ. ಅಬ್ಬಷ್ಟು ಘೋರವಾದ ಕಾರ್ಯ. ಪಾಪ, ಅವನಿಗೆ ಬರೆಯುವುದಕ್ಕೆ ಬರುತ್ತಿದ್ದಿತೋ ಇಲ್ಲವೋ!" ದೀರ್ಘ ಮೌನದ ಬಳಿಕ ದುನ್ಯ ಹೇಳಿದಳು.

ತಾತ್ಯಾನ ಚಿಕ್ಕಮ್ಮ ಕಪೋಲವನ್ನು ಬಿಗಿಯಾಗಿ ಬೆರಳುಗಳಿಂದ ಅಮುಕಿ ಹಿಡಿದಕೊಂಡಳು. "ಬರೆದಿಟ್ಟು ಬೇರೆ ಹೋಗಬೇಕಾಗಿತ್ತೇನು!" ಆಶ್ಚರ್ಯಭರಿತಳಾಗಿ ಕೇಳಿದಳು. ದುಃಖದಿಂದ ಕಣ್ಣೀರು ಅವಳ ಕಣ್ಣುಗಳಿಂದ ಉರುಳುತ್ತಿತ್ತು. ಮೇಜಿನ ಮೇಲಿದ್ದ ಬಟ್ಟೆಯಲ್ಲಿ ಮುಖವನ್ನು ಮುಚ್ಚಿಕೊಂಡಳು. ಓಲಾಡುತ್ತಿದ್ದ ಊಟದ ಮನೆಯ ದೀಪವು ಟೀ ಬಟ್ಟಲನ್ನಿಡುವ ಗಾಜಿನ ತಟ್ಟೆಯಲ್ಲಿ ತನ್ನ ಮೂಲ ಆಕಾರಕ್ಕಿಂತ ಸಣ್ಣನಾಗಿ ಪ್ರತಿಬಿಂಬಿಸಿತ್ತು. "ಬರೆದಿಟ್ಟು

ಬೇರೆ ಹೋಗಬೇಕಾಗಿತ್ತೇನು! ಬೇರೆ ಬರೆವಣಿಗೆ ಬೇಕೆ, ಸ್ಪಷ್ಟವಾಗಿ ಕಣ್ಣಿಗೆ ಕಾಣಿಸುತ್ತಿಲ್ಲ
ಎಂದಳು.

ಅಡಿಗೆಮನೆಯ ಕಿಟಕಿಯಿಂದ ಪೇತ್ಯ ಹೊರಕ್ಕೆ ಇಣಿಕಿಹಾಕಿದ. ಆ ವಿಶಾಲವಾದ ಬ
ನಲ್ಲಿ ಗಾಯಾಳುಗಳನ್ನು ಒಯ್ಯುವ ಗಾಡಿಯ ದೀಪವೂ, ಜನರ ನೆರಳುಗಳೂ ಚಲಿಸುತ್ತಿರುವ
ಪೇತ್ಯನ ಕಣ್ಣಿಗೆ ಬಿತ್ತು. ಬರಿದಾಗಿದ್ದ ಅಡಿಗೆಮನೆಯ ಕಿಟಕಿಯ ಗೂಡಿನಲ್ಲಿ ಪೇತ್ಯ ಕುಳಿ
ಕೊಂಡ. ಅವನು ಭೀತಿ ಮತ್ತು ಚಳಿಗಳಿಂದ ನಡುಗುತ್ತಿದ್ದ. ಮಳೆಯಿಂದ ತೊಳೆದು ಶುಭ್ರವಾಗಿ
ಕಿಟಕಿಯ ಗಾಜಿಗೆ ಮುಖವನ್ನು ಇಟ್ಟುಕೊಂಡು ನೋಡಲಾರಂಭಿಸಿದ. ಇನ್ನೂ ಯಮರಾಯ
ಜೀವಂತವಾಗಿರುವನೋ ಎನ್ನುವಂತೆ ತೋರುತ್ತಿದ್ದ ಆ ಅಂಧಕಾರದಿಂದ ಬೇರೆ ಕಡೆಗೆ ತ
ಕಣ್ಣನ್ನು ಕೀಳಲಾರದೆ ಹೋದ.

ಆ ರಾತ್ರಿ ಪೇತ್ಯನಿಗೆ ತುಂಬ ಹೊತ್ತು ನಿದ್ದೆ ಬರಲಿಲ್ಲ. ಅವನ ಮನಸ್ಸನ್ನು ಸತ್ತುಹೋ
ಆ ಸೈನಿಕನ ಚಿತ್ರ ಕಾಡುತ್ತಲೇ ಇದ್ದಿತು. ಕಾವಲು ಸಿಪಾಯಿಯ ಪೂರ್ಣ ಸಮವಸ್ತ್ರಗಳ
ಧರಿಸಿದ ಬರಿಗಾಲಿನ ಆ ಸೈನಿಕನ ತಲೆಯ ಹಿಂಭಾಗ ಒಡೆದು ಚೂರು ಚೂರಾಗಿದ್ದ, ನಿಗೂಢವ
ನಿಶ್ಚಲವಾಗಿದ್ದ ಆ ಸೈನಿಕನ ನೀಲಿಗಟ್ಟಿದ್ದ ಮುಖದ ಸ್ಪಷ್ಟ ಚಿತ್ರವನ್ನು ಪೇತ್ಯ ಕಾಣುತ್ತಲಿದ್ದ.

ಅವನ ಮನಸ್ಸಿನ ಭೀತಿ ಇನ್ನೂ ಹರಿಯದೆ ಹೋಗಿದ್ದರೂ ಸಹ ಮಾರನೆಯ ಬೆಳಗ್ಗ
ಭಯಾನಕ ಜಾಗವನ್ನು ನೋಡಬೇಕೆಂಬ ಕುತೂಹಲವನ್ನು ಪೇತ್ಯ ಹತ್ತಿಕ್ಕಲಾಗಲಿ
ಯಾವುದೋ ಒಂದು ಅದೃಶ್ಯ ಶಕ್ತಿ ಆ ಶೂನ್ಯಸ್ಥಳಕ್ಕೆ ಪೇತ್ಯನನ್ನು ತಳ್ಳುತ್ತಿದ್ದಿತು. ಸ್ಕೂ
ಹೋಗುತ್ತ ದಾರಿಯಲ್ಲಿ ಜಾಗರೂಕತೆಯಿಂದ ಆ ಸ್ಥಳದ ಕಡೆಗೆ ತಿರುಗಿದ. ಪ್ರಾರ್ಥನಾ ಮ
ರದ ಒಳಗಡೆ ನಡೆದುಕೊಂಡು ಹೋಗುವಂತೆ ಮಳೆ ಮತ್ತು ಮಂಜುಗಳಿಂದ ನೆನೆದು ಕೊಳೆ
ತ್ತಿದ್ದ ಹುಲ್ಲಿನ ಮೇಲೆ ಮೆಟ್ಟಂಗಾಲಿಕ್ಕುತ್ತ ಆ ಸ್ಥಳಕ್ಕೆ ಹೋದ. ಅಲ್ಲಿ ಆಗಲೇ ಕೆಲವು
ಕುತೂಹಲಿಗಳು ನೆರೆದಿದ್ದರು.

ಸೇನಾಧಿಕಾರಿಗಳ ತರಬೇತಿ ಶಾಲೆಯ ಗೋಡೆಯ ಮಗ್ಗುಲಲ್ಲಿ ನೆನೆದ ನೆಲದಮೇಲೆ
ಮನುಷ್ಯನ ತಲೆಯಷ್ಟು ಅಗಲದ ಒಂದು ಸಣ್ಣ ಕುಳಿಯಾಗಿದ್ದಿತು. ಸ್ವಲ್ಪ ಕೆಂಪು ಬಣ್ಣದಂ
ಮಳೆಯ ನೀರು ಆ ಕುಳಿಯಲ್ಲಿ ತುಂಬಿದ್ದಿತು. ಸತ್ತ ಸೈನಿಕನ ತಲೆ ನೆಲದಲ್ಲಿ ಆ ಸ್ಥಳಕ್ಕೆ ಬಡಿ
ಬೇಕೆಂದು ಪೇತ್ಯ ತಿಳಿದ. ಹಿಂದಿನ ದಿನದ ಸಂಜೆಯ ಘಟನೆಯ ಕುರುಹು ಅದೊಂದೇ ಉ
ದಿದ್ದುದು.

ಸ್ಕೂಲಿಗೆ ಹಾಕಿಕೊಂಡುಹೋಗುವ ತನ್ನ ಮೇಲಂಗಿಯ ಕತ್ತಿನ ಪಟ್ಟಿಯನ್ನು ಪ
ಮೇಲಕ್ಕೆಳೆದುಕೊಂಡ. ಚಳಿಗಾಳಿಯ ದೆಸೆಯಿಂದ ನಡುಗುತ್ತ ನೆಲದ ಆ ತಗ್ಗನ್ನು ದೃ
ನೋಡುತ್ತ ಸ್ವಲ್ಪಹೊತ್ತು ನಿಂತಿದ್ದ. ಇದ್ದಕ್ಕಿದ್ದ ಹಾಗೆ ಅವನ ಕಾಲಬಳಿ ಒಂದು ಸಣ್ಣ ದು
ನೆಯ ವಸ್ತು ಬಿದ್ದಿರುವುದು ಅವನಿಗೆ ಕಾಣಿಸಿತು. ಅವನು ಅದನ್ನು ಎತ್ತಿಕೊಂಡಾಗ ನಿಧಿಯೇ
ದಂತೆ ಆನಂದದಿಂದ ನಡುಗತೊಡಗಿದ. ಅದು ಒಂದು ಐದು ಕೊಪೆಕ್ಕಿನ ನಾಣ್ಯವಾಗಿದ್ದಿ
ಅದು ಕಪ್ಪು ಹಿಡಿದಿದ್ದಿತು. ನಾಣ್ಯದ ನಡುವೆ ಆಕಾಶನೀಲಿಯಲ್ಲಿ ಹದ್ದಿನ ಆಕಾರ
ಅಚ್ಚೊತ್ತಲಾಗಿತ್ತು.

ಅಲ್ಲಿ ಹಿಂದಿನ ಸಂಜೆ ನಡೆದಿದ್ದ ಘಟನೆಗೂ ಆ ದೊರಕಿದ ವಸ್ತುವಿಗೂ ಯ

ಸಂಬಂಧವೂ ಇರಲಿಲ್ಲ. ಆ ನಾಣ್ಯ ಪ್ರಾಯಃ ಕಳೆದ ಬೇಸಗೆಯಿಂದ ಅಲ್ಲಿ ಬಿದ್ದಿದ್ದಿರಬಹುದು. ನಾಣ್ಯವನ್ನು ಮೇಲೆಸೆದು ನೋಡುವ ಅದೃಷ್ಟ ಪರೀಕ್ಷೆಯ ಆಟವನ್ನು ಕಾರ್ಖಾನೆಯ ಕೂಲಿಗಾರರು ಆಡುತ್ತ ಅದನ್ನು ಕಳೆದುಕೊಂಡಿರಬಹುದು. ಅಥವಾ ಅಲ್ಲೇ ಎಲ್ಲಿಯೋ ಪೊದೆಗಳಲ್ಲಿ ರಾತ್ರಿಯನ್ನು ಕಳೆದ ಯಾವನಾದರೊಬ್ಬ ಭಿಕ್ಷುಕನ ಜೇಬಿನಿಂದ ಬಿದ್ದಿದ್ದಿರಬಹುದು. ಏನೇ ಆಗಲಿ ಆ ನಾಣ್ಯವು ಹುಡುಗರ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆಯಿತು. ಅಲ್ಲದೆ ಸಂಪತ್ತು ಕೈಗೂಡಿದಂತಾಗಿತ್ತು; ಇಡೀ ಐದು ಕೊಪೆಕ್ಕುಗಳು ಎಂದರೆ ಕಡಮೆಯೇ ?

ಹುಡುಗರ ಕೈಗೆ ದುಡ್ಡನ್ನು ಕೊಡುವುದರಿಂದ ಅವರು ಕೆಟ್ಟುಹೋಗುವರೆಂಬ ನಂಬಿಕೆ ಇದ್ದುದರಿಂದ ಪೇತ್ಯನ ತಂದೆ ಅವನಿಗೆ ದುಡ್ಡನ್ನು ಎಂದೂ ಕೊಡುತ್ತಿರಲಿಲ್ಲ. ಆದುದರಿಂದ ಅವನಿಗೆ ದೊರೆತ ಈ ಐದು ಕೊಪೆಕ್ಕುಗಳ ನಾಣ್ಯವು ಅವನನ್ನು ಸ್ವರ್ಗದ ತುದಿಗೇರಿಸಿತ್ತು. ನಾಣ್ಯ ದೊರೆತುದು ಒಂದು ಮಾಯಾಶಕ್ತಿಯೋ ಎನ್ನಿಸಿತು ಪೇತ್ಯನಿಗೆ. ಆದುದರಿಂದ ಇಡೀ ದಿನ ಪೇತ್ಯನಿಗೆ ಒಂದು ದೀರ್ಘ ರಜಾದಿನದಂತೆ ಉಲ್ಲಾಸಕರವಾಗಿ ಪರಿಣಮಿಸಿತು.

ತರಗತಿಯಲ್ಲಿ ಆ ನಾಣ್ಯವನ್ನು ಎಲ್ಲರೂ ನೋಡುವವರೇ. ಇಂಥ ವಿಷಯಗಳಲ್ಲಿ ನುರಿತ ಬಾಲಕರು ಪೇತ್ಯನ ಸಹಪಾಠಿಗಳಲ್ಲಿ ಕೆಲವರಿದ್ದರು. ನಿಶ್ಚಯವಾಗಿ ಅದೊಂದು ಮಾಯಾ ನಾಣ್ಯವೆಂದೂ, ಅದ್ಭುತ ಕಥೆಗಳಲ್ಲಿ ಬರುವ ಮಾಯಾ ರೂಬಲ್ ನಾಣ್ಯದ ತಮ್ಮನೆಂದೂ, ಅದು ಪೇತ್ಯನಿಗೆ ಅಗಾಧ ಸಂಪತ್ತನ್ನು ತಂದುಕೊಡುವುದರಲ್ಲಿ ಸಂದೇಹವೇ ಇಲ್ಲವೆಂದೂ ಚರ್ಚಿನ ಗೋಪುರದ ಕಡೆಗೆ ತಿರುಗಿಕೊಂಡು ಶಿಲುಬೆಯ ಸಂಜ್ಞೆಯನ್ನು ಮಾಡಿಕೊಳ್ಳುತ್ತಾ ಹೇಳಿದರು.

ವಿರಾಮಕಾಲದಲ್ಲಿ ತನ್ನೊಡನೆ ಪೇತ್ಯ ಉಪಾಹಾರತೆಗೆದುಕೊಳ್ಳಬೇಕೆಂದು ಒಬ್ಬ ಹುಡುಗ ಅವನಿಗೆ ಆಹ್ವಾನವನ್ನು ಕೊಟ್ಟ. ಆ ಮಂತ್ರಶಕ್ತಿಯ ತಾಯಿತಿಗೆ ಬದಲಾಗಿ ತನ್ನ ಸೊಗಸಾದ ಚಾಕುವನ್ನೇ ಕೊಡುವೆನೆಂಬುದಾಗಿ ಆಸೆ ತೋರಿಸಿದ. ತಿರಸ್ಕಾರಪೂರ್ಣವಾದ ನಗೆಯೊಡನೆ ಪೇತ್ಯ ಅದನ್ನು ಧಿಕ್ಕರಿಸಿದ. ಯಾವನಾದರೂ ಗುಗ್ಗು ಈ ಅದಲು ಬದಲಿನ ವ್ಯವಹಾರಕ್ಕೆ ಒಪ್ಪುತ್ತಿದ್ದ, ಅಷ್ಟೆ.

ಶಾಲೆ ಬಿಟ್ಟಮೇಲೆ ಪೇತ್ಯ ಮನೆಗೆ ಧಾವಿಸಿದ. ಮನೆ ಮತ್ತು ಮನೆಯ ಅಂಗಳದಲ್ಲಿರುವವರಿಗೆಲ್ಲ ಆದಷ್ಟು ಬೇಗ ತನ್ನ ನಿಧಿಯನ್ನು ಪ್ರದರ್ಶಿಸಬೇಕಾಗಿತ್ತು. ತಮ್ಮ ಮನೆಯ ಅಂಗಳದಲ್ಲಿ ಗಾವ್ರಿಕನನ್ನು ಕಂಡಾಗ ಪೇತ್ಯನಿಗಾದ ಆನಂದಕ್ಕೆ ಪಾರವಿರಲಿಲ್ಲ.

ಗಾವ್ರಿಕ್ ಮಂಡಿಯ ಮೇಲೆ ನಿಂತಿದ್ದ. ಅವನ ಸುತ್ತ ಮಕ್ಕಳು ಕುಳಿತಿದ್ದರು. ಗಾವ್ರಿಕ್ ಆ ಮಕ್ಕಳಿಗೆ ಜನಪ್ರಿಯವಾದ ಗುಂಡಿಗಳ ಆಟವನ್ನು ಕಲಿಸಿಕೊಡುತ್ತಿದ್ದ. ಬಹು ದಿವಸಗಳಿಂದ ನೋಡದೆ ಇದ್ದ ಸ್ನೇಹಿತನಿಗೆ ನಮಸ್ಕಾರ ಹೇಳುವುದನ್ನೂ ಪೇತ್ಯ ಮರೆತು ತಾನೂ ಗುಂಡಿಗಳ ಆಟದಲ್ಲಿ ಮಗ್ನನಾದ. ಗಾವ್ರಿಕನ ಗುಂಡಿಗಳನ್ನುಪಯೋಗಿಸಿಕೊಂಡು ಇಬ್ಬರೂ ಒಂದು ಆಟವನ್ನು ಮೊದಲು ಪ್ರಯೋಗಾರ್ಥವಾಗಿ ಆಡಿದರು. ಇದರಿಂದ ಪೇತ್ಯನ ಕುತೂಹಲ ಕೆರಳಿತು.

"ಗಾವ್ರಿಕ್, ಹತ್ತು ಗುಂಡಿಗಳನ್ನು ಸಾಲಕೊಟ್ಟರು. ನಾನು ಗೆದ್ದ ಕೂಡಲೆ ನಿನಗೆ ವಾಪಸ್ಸು ಕೊಟ್ಟುಬಿಡುತ್ತೇನೆ, ದೇವರಾಣೆಗೂ, ಸತ್ಯವಾಗಿ!" ಕೈಯನ್ನು ಚಾಚಿ ಕೇಳಿಕೊಳ್ಳುತ್ತಿದ್ದಾಗ ತವಕದಿಂದ ಆ ಕೈ ಅದಿರುತ್ತಿತ್ತು.

14

"ಕೈ ತೆಗೆಯೋ ಆಚೆಗೆ. ಇಂಥ ಕಥೆಯನ್ನು ಬೇಕಾದಷ್ಟು ಕೇಳಿದ್ದೇನೆ." ಎಂದು ಖಂಡಿ ವಾಗಿ ಗಾವ್ರಿಕ್ ಉತ್ತರಕೊಟ್ಟ. ಉಣ್ಣೆಯ ಒರಟು ಬಟ್ಟೆಯ ಚೀಲದೊಳಕ್ಕೆ ಗುಂಡಿಗಳನ್ನ ಹಾಕಿ ದಾರದಿಂದ ಬಿಗಿಯಾಗಿ ಕಟ್ಟುತ್ತ, "ಗುಂಡಿಗಳು ಟಿಕ್ಕಿಗಳಲ್ಲ, ತಿಳಿಯಿತೇ. ಗುಂಡಿಗಳ ಎಂದರೆ ಹಣ. ದುಡ್ಡು ಕೊಡು, ಬೇಕಾದರೆ ಕೆಲವು ಗುಂಡಿಗಳನ್ನು ನಿನಗೆ ಮಾರಿ ಬಿಡುತ್ತೇನೆ. ಎಂದ.

ಪೇತ್ಯ ಗಾವ್ರಿಕನದು ತಪ್ಪು ಎಂದು ತಿಳಿಯಲಿಲ್ಲ. ಸ್ನೇಹ ಬೇರೆ, ಆಟ ಬೇರೆ ಎಂಬುದನ ಪೇತ್ಯ ಚೆನ್ನಾಗಿ ತಿಳಿದುಕೊಂಡಿದ್ದ. ಅಲ್ಲದೆ ಎಲ್ಲ ಆಟಗಳಿಗೂ ಕೆಲವು ಮಾರಲಾರದ ನಿಯಮ ಗಳಿದ್ದುವು. ಗುಂಡಿಗಳಿಗೆ ಬೆಲೆಯಿದ್ದುದರಿಂದ ದುಡ್ಡು ಕೊಟ್ಟೇ ಅವುಗಳನ್ನು ಕೊಂಡುಕೊ ಬೇಕಾಗಿತ್ತು. ಇದಕ್ಕೂ ಸ್ನೇಹಕ್ಕೂ ಯಾವ ಸಂಬಂಧವೂ ಇರಲಿಲ್ಲ. ಇದು ಬೀದಿಯ ಹುಡುಗರ ನಡುವೆ ಚಲಾವಣೆಯಲ್ಲಿದ್ದ ಕಟ್ಟುನಿಟ್ಟಾದ ನಿಯಮವಾಗಿತ್ತು. ಪೇತ್ಯ ಈಗ ಏನ ಮಾಡಬೇಕು? ಅವನನ್ನು ಆಡಬೇಕೆಂಬ ಚಾಪಲ್ಯ ಬಾಧಿಸುತ್ತಿತ್ತು. ಅನಿಶ್ಚಯತೆಯ ಬಿರುಗಾ ಅವನನ್ನು ಅಲ್ಲಾಡಿಸಿಬಿಟ್ಟಿತು. ಒಂದು ನಿಮಿಷವೂ ಇರಲಿಲ್ಲ ಅವನು ಹಿಂದುಮುಂದು ನೋ ದುದು. ಜೇಬಿಗೆ ಕೈಹಾಕಿದ್ದೇ ಆ ಐದು ಕೊಪೆಕ್ಕುಗಳ ನಾಣ್ಯವನ್ನು ಗಾವ್ರಿಕನ ಎದುರಿ ಹಿಡಿದ. ಗಾವ್ರಿಕ್ ಸಂದೇಹಾಸ್ಪದ ದೃಷ್ಟಿಯಿಂದ ನಾಣ್ಯವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಬಳಿಕ ತಲೆಯಲ್ಲಾಡಿಸಿ

"ಯಾರೂ ಇದನ್ನು ತೆಗೆದುಕೊಳ್ಳುವುದಿಲ್ಲ." ಎಂದು ಹೇಳಿದ.

"ಯಾರಾದರೂ ದಮ್ಮಯ್ಯ ಎಂದು ತೆಗೆದುಕೊಳ್ಳುತ್ತಾರೆ!"

"ಇಲ್ಲ, ಯಾರೂ ತೆಗೆದುಕೊಳ್ಳುವುದಿಲ್ಲ."

"ನೀನೊಬ್ಬ ಮುಟ್ಠಾಳ!"

"ನೀನು ಅವನಪ್ಪ. ಅಂಗಡಿಗೆ ತೆಗೆದುಕೊಂಡುಹೋಗಿ ಚಿಲ್ಲರೆ ತೆಗೆದುಕೊಂಡು ಬಾ ನೋಡೋಣ."

"ನೀನೇ ಹೋಗು."

"ನಾನು ಯಾಕೆ ಹೋಗಲಿ. ನಿನ್ನ ದುಡ್ಡು ಅದು, ನನ್ನದಲ್ಲ."

"ಗುಂಡಿಗಳು ನಿನ್ನವೇ ಅಲ್ಲವೇ."

"ನೀನು ಬೇಕಾದರೆ ಕೊಂಡುಕೋ, ಇಲ್ಲದಿದ್ದರೆ ಬಿಡು. ನನಗೇನು?"

"ನನಗೂ ಏನೂ ಇಲ್ಲ."

ಗಾವ್ರಿಕ್ ನಿಧಾನವಾಗಿ ಗುಂಡಿಗಳ ಚೀಲವನ್ನು ಜೇಬಿನೊಳಕ್ಕೆ ಸೇರಿಸಿ ಹಲ್ಲುಗಳ ಸಂದಿ ಮೂಲಕ ದೂರಕ್ಕೆ ಪಿಚಕ್ಕನೆ ಉಗುಳಿದ. ಪೇತ್ಯ ಅಂಗಡಿಗೆ ಓಡಿಹೋಗಿ ಐದು ಕೊಪೆಕ್ಕಿ ನಾಣ್ಯಕ್ಕೆ ಚಿಲ್ಲರೆ ಕೇಳಿದ. ಅಂಗಡಿಯವನು ಬಹು ಹೊತ್ತು ತನ್ನ ಮಂದದೃಷ್ಟಿಯ ಕಣ್ಣುಗ ಬಳಿ ನಾಣ್ಯವನ್ನು ಹಿಡಿದುಕೊಂಡು ಪರೀಕ್ಷಿಸಿದ. ಆ ಒಂದು ಕ್ಷಣ ಪೇತ್ಯನಿಗೆ ಒಂದು ಯು ವಾಗಿ ಕಾಣಿಸಿತು. ಆ ಸಮಯದಲ್ಲಿ ತನಗೆ ಅವಮಾನವಾಗುವಂಥ ಘಟನೆಗಳು ನಡೆಯುಬ ದೆಂಬ ಭಾವನೆಗಳು ಅವನ ಮನಸ್ಸಿನಲ್ಲಿ ಉದಿಸಿದುವು. ಕಳವು ಮಾಲನ್ನು ಮಾರುತ್ತಿರುವ ಹೇ ಕಳ್ಳನೆಂಬ ಭಾವನೆಯೇ ಅದರಲ್ಲೆಲ್ಲ ಪ್ರಬಲವಾದುದಾಗಿತ್ತು.

ಆ ನಿಮಿಷದಲ್ಲಿ ಕತ್ತಿ ಹಿಡಿದ ಪೋಲೀಸಿನವರು ಆ ಅಂಗಡಿಗೆ ನುಗ್ಗಿ ನಿಂದಾತ್ಮಕವಾದ ರಹಸ್ಯ ಅಪರಾಧಿಗಳಲ್ಲಿ ಇವನೊಬ್ಬ ಎಂದು ಪೇತ್ಯನನ್ನು ಜೈಲಿಗೆ ಎಳೆದುಕೊಂಡುಹೋಗಿದ್ದಿದ್ದರೆ ಅವನಿಗೆ ಆಶ್ಚರ್ಯವೆನಿಸುತ್ತಿರಲಿಲ್ಲ.

ಕೊನೆಗೆ ಅಂಗಡಿಯವನು ದುಡ್ಡಿನ ಪೆಟ್ಟಿಗೆಯೊಳಕ್ಕೆ ನಾಣ್ಯವನ್ನು ಎಸೆದು ಒಂದೊಂದು ಕೊಪೆಕ್ಕುಗಳ ಐದು ನಾಣ್ಯಗಳನ್ನು ತೆಗೆದು ತ್ರಾಸಿನ ಬಟ್ಟಲಿನಲ್ಲಿ ಹಾಕಿದ. ಅವುಗಳನ್ನು ತೆಗೆದು ಕೊಂಡು ಪೇತ್ಯ ಅಂಗಳಕ್ಕೆ ಓಡಿದ. ಗಾವ್ರಿಕ್ ಇತರ ಹುಡುಗರಿಗೆ ಗುಂಡಿಗಳನ್ನು ಮಾರುತ್ತಿದ್ದ. ಅವನಿಂದ ಬೇರೆ ಬೇರೆ ಬೆಲೆಯ ಅನೇಕ ಗುಂಡಿಗಳನ್ನು ಅಷ್ಟು ದುಡ್ಡಿಗೂ ಪೇತ್ಯ ಕೊಂಡುಕೊಂಡ.

ಇಬ್ಬರೂ ಆಟವನ್ನು ಆರಂಭಿಸಿದರು. ಪೇತ್ಯ ಆಟದಲ್ಲಿ ಮಗ್ನನಾಗಿ ಬಾಹ್ಯಜಗತ್ತನ್ನೇ ಮರೆತ. ಕತ್ತಲಾಗುವ ಹೊತ್ತಿಗೆ ಪೇತ್ಯನ ಬಳಿ ಒಂದೇ ಒಂದು ಗುಂಡಿಯೂ ಉಳಿಯಲಿಲ್ಲ. ಎಲ್ಲಕ್ಕೂ ಆಶ್ಚರ್ಯಕರವಾದ ವಿಷಯವೆಂದರೆ ಪೇತ್ಯನಿಗೆ ಆಟದ ಮೊದಲಲ್ಲಿ ಅದೃಷ್ಟ ಹೊಡೆ ದಿದ್ದರಿಂದ ಗೆದ್ದ ಗುಂಡಿಗಳನ್ನು ತುಂಬಿಕೊಳ್ಳಲು ಅವನ ಜೇಬುಗಳು ಸಾಲದೆ ಹೋಗಿದ್ದುವು. ಆದರೆ ಈಗ ಅವನ ಬಳಿ ಇದ್ದ 'ಹಣವೂ ಪೋಯ, ಗುಂಡಿಗಳೂ ಪೋಯ' ಆದುವು.

ಪೇತ್ಯನ ಕಣ್ಣುಗಳಲ್ಲಿ ನೀರು ಹರಿಯಬೇಕು. ಅವನು ನಿರಾಶಾಕೂಪದಲ್ಲಿ ಮುಳುಗಿ ಹೋಗಿದ್ದ. ಗಾವ್ರಿಕ್ ತನ್ನ ಸ್ನೇಹಿತನ ಮೇಲೆ ಕರುಣೆ ತೋರಿಸಿ ಅವನ ನಷ್ಟವನ್ನು ಭರ್ತಿ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಲಿ ಎಂದು ಎರಡು ಅಗ್ಗದ ಗುಂಡಿಗಳನ್ನು ಸಾಲ ಕೊಟ್ಟ. ಪೇತ್ಯ ಸ್ವಲ್ಪವೂ ಎಚ್ಚರಿಕೆಯಿಲ್ಲದೆ ಆತುರಬಿದ್ದು ಆಟವಾಡಿದನೋ ಇಲ್ಲವೋ ಐದು ನಿಮಿಷಗಳಲ್ಲಿಯೇ ಎರಡು ಗುಂಡಿಗಳನ್ನೂ ಕಳೆದುಕೊಂಡ. ಆಟದಲ್ಲಿ ಗಾವ್ರಿಕನ ಸರಿಗಟ್ಟಲು ಪೇತ್ಯನಿಗೆಲ್ಲಿ ಸಾಧ್ಯ? ಗಾವ್ರಿಕ್ ತನ್ನ ಅಗಾಧ ಸಂಪಾದನೆಯನ್ನು ನಿರ್ಲಕ್ಷ್ಯವಾಗಿ ಚೀಲದೊಳಕ್ಕೆ ಹಾಕಿಕೊಂಡ ಬಳಿಕ ಮಾರನೆಯ ದಿನ ಬರುವುದಾಗಿ ಹೇಳಿ ಮನೆಯ ಕಡೆಗೆ ನಡೆದ.

೩೩. ಗುಂಡಿಗಳು

ಓಹ್, ಆಗ ಎಷ್ಟೊಂದು ಗುಂಡಿಗಳು ಕೈಯ್ಯಲ್ಲಿದ್ದುವು!

ವಿದ್ಯಾರ್ಥಿಗಳು ಧರಿಸುವ ಅಂಗಿಯ ದಪ್ಪಗುಂಡಿಗಳು; ಅವುಗಳ ಮೇಲೆ ಹದ್ದಿನ ಲೋಹದ ಆಕಾರವನ್ನು ಕೀಲಿಸಲಾಗಿತ್ತು. ಚಿನ್ನದ ಬಣ್ಣದ ಅಧಿಕಾರಿ ಗುಂಡಿಗಳು; ಅವುಗಳ ಮೇಲೆ ಹದ್ದಿನ ಉಬ್ಬುಚಿತ್ರವಿದ್ದಿತು. ವಾಣಿಜ್ಯಶಾಲೆಯ ಕಂದು ಬಣ್ಣದ ಗುಂಡಿಗಳು; ಅದರಮೇಲೆ ಹಾವುಗಳು ಸುತ್ತಿಕೊಂಡಂತಿರುವ ಮತ್ತು ತುದಿಯಲ್ಲಿ ಪುಟ್ಟ ರೆಕ್ಕೆಗಳಿರುವ ದಂಡವನ್ನು ಹಿಡಿದ ಮರ್ಕ್ಯುರಿ ದೇವತೆಯ ಚಿತ್ರ. ಒಂದರ ಮೇಲೊಂದಾಗಿ ಇಟ್ಟಿರುವ ಲಂಗರುಗಳ ಚಿತ್ರವನ್ನುಳ್ಳ ತೆಳು ಬಣ್ಣದ ನಾವಿಕರ ಗುಂಡಿಗಳು. ಹಸುರು ಗೆರೆಗಳ ಮಿಂಚಿನ ಮತ್ತು ಕಹಳೆಯ ಚಿತ್ರವಿರುವ ಅಂಚೆ ಮತ್ತು ತಂತಿ ಇಲಾಖೆಯ ಗುಂಡಿಗಳು. ಬಂದೂಕುಗಳನ್ನು ಮೂಡಿಸಿರುವ ಗೋಲಂದಾಜರ ಗುಂಡಿಗಳು. ನ್ಯಾಯಸ್ತಂಭದ ಗುರುತಿರುವ ವಕೀಲರ ಗುಂಡಿಗಳು. ಸಿಂಹಗಳಿಂದಲಂಕೃತವಾದ ಐವತ್ತು ಕೊಪೆಕ್ಕಿನ ನಾಣ್ಯದಷ್ಟು ದೊಡ್ಡದಾದ ಹಿತ್ತಾಳೆಯ ಊಳಿಗದವರ ಗುಂಡಿಗಳು. ರಾಷ್ಟ್ರಾ ಕಾರಗಳ ಸಮವಸ್ತ್ರಗಳ ಮೇಲಿನ ದಪ್ಪವಾದ ಗುಂಡಿಗಳು. ಗುಮಾಸ್ತರ ತೆಳ್ಳನೆಯ ಗುಂಡಿಗಳು

ಆಟದಲ್ಲಿ ಏಟುಬಿದ್ದಾಗ ಅವು ಸೊಳ್ಳೆಗಳಂತೆ ಭೊಂಯ್ಗುರೆಯುತ್ತಿದ್ದುವು. ವಿಶ್ವವಿದ್ಯಾನಿಲಯ ಪ್ರಾವೇಶಿಕ ಶಾಲೆಗಳ ವಿದ್ಯಾರ್ಥಿಗಳ ಅಂಗಿಗಳ ಮೇಲಿನ ದಪ್ಪನೆಯ ಗುಂಡಿಗಳು. ಆ ಗುಂಡಿಗಳ ಮೇಲೆ ಅಲ್ಲಲ್ಲಿ ಹಳ್ಳಗಳನ್ನೇರ್ಪಡಿಸಿ ಅವುಗಳಿಗೆ ಬೆಳ್ಳಿಯ ಬಣ್ಣವನ್ನೂ ಮಧ್ಯದ ಕುಳಿಗೆ ಕೆಂಪು ಬಣ್ಣವನ್ನೂ ತುಂಬಿತ್ತು.

ಒಂದು ಕ್ಷಣಕಾಲ ಇಡೀ ರಷ್ಯದೇಶದ ವೈಭವಯುತ ಲಾಂಛನಗಳ ಈ ಅಗಾಧ ಸಂಪತ್ತು ಪೇತ್ಯನ ಕೈಗಳಲ್ಲಿ ಕೇಂದ್ರೀಕೃತವಾಗಿತ್ತು. ಅದೆಂಥ ಆನಂದದ ಕಾಲ! ಅವನ ಅಂಗೈಗಳು ಆ ಗುಂಡಿಗಳ ತೂಕವನ್ನೂ, ಅವುಗಳ ವಿವಿಧಾಕಾರಗಳನ್ನೂ ಸ್ಮರಿಸಿಕೊಂಡು ಸ್ಪರ್ಶಸುಖವನ್ನು ಪಡೆಯುತ್ತಿದ್ದುವು. ಆದರೆ ಈಗ ಅವನು ಪೂರ್ಣದಿವಾಳಿಯಾಗಿದ್ದ, ನಾಶವಾಗಿ ಹೋಗಿದ್ದ. ಕುಲಿಕೋವೋ ಮೈದಾನದಲ್ಲಿ ದೊರೆತ ಆ ಮಾಯಾ ನಾಣ್ಯದ ಅದೃಷ್ಟದ ವಿಷಯವನ್ನು ಹೇಳಿದವರಾರು? ! ಈಗ ಅದರ ಫಲವೇನಾಯಿತು!

ಪೇತ್ಯನ ಮನಸ್ಸನ್ನೆಲ್ಲ ಗುಂಡಿಗಳು ಆಕ್ರಮಿಸಿಕೊಂಡು ಬಿಟ್ಟಿದ್ದುವು. ಗುಂಡಿಗಳ ವಿಚಾರವಲ್ಲದೆ ಬೇರೆ ಆಲೋಚನೆಯೇ ಅವನಲ್ಲಿರಲಿಲ್ಲ, ಕನಸಿನಲ್ಲಿ ನಿಧಿಯನ್ನು ಕಂಡರೆ ಹೇಗೊ ಹಾಗೇ ಆ ವೈಭವದ ದೃಶ್ಯ ಇನ್ನೂ ಅವನ ಕಣ್ಣಿಗೆ ಕಟ್ಟಿದ ಹಾಗಿತ್ತು. ಊಟದ ಮನೆಗೆ ಹೋಗಿ ಊಟದ ತಟ್ಟೆಯ ಮುಂದೆ ಕುಳಿತರೂ ಅವನಿಗೆ ಅದೇ ಯೋಚನೆಯೇ. ಸುಮಾರು ಮುನ್ನೂರು ದೀಪಗಳ ಮರೆಗಳ ಪ್ರತಿಬಿಂಬ ತಟ್ಟೆಯಲ್ಲಿ ಹೊಳೆಯುತ್ತಿದ್ದರೆ ಅವು ಚಿನ್ನದ ಹದ್ದುಗಳ ಚಿತ್ರದಿಂದ ಕೂಡಿದ ಮೂನ್ನೂರು ಹೊಳೆಯುವ ಗುಂಡಿಗಳಾಗಿ ಕಾಣಿಸುತ್ತಿದ್ದುವು.

ತಂದೆಯವರ ಅಂಗಿಯ ಮೇಲಿದ್ದ ಗುಂಡಿಗಳನ್ನು ನೋಡಿ ಅವನಿಗೆ ಜುಗುಪ್ಸೆಯಾಯಿತು. ಆ ಗುಂಡಿಗಳೆಲ್ಲ ಬಟ್ಟೆಯಿಂದ ಆವೃತವಾಗಿದ್ದುವು. ನಿಷ್ಪ್ರಯೋಜಕ ಗುಂಡಿಗಳು.

ತಾನೊಂದು ಬಡ ಸಂಸಾರದಲ್ಲಿ ವಾಸಿಸುತ್ತಿದ್ದೇನೆಂಬ ಅರಿವು ಪೇತ್ಯನಿಗೆ ಇಂದು ಉಂಟಾಯಿತು. ಆ ಇಡೀ ಕಟ್ಟಡವನ್ನು ಶೋಧಿಸಿದರೆ ಒಂದೇ ಒಂದು ಒಳ್ಳೆಯ ಗುಂಡಿ ದೊರಕಲಾರದು.

ತಾತ್ಯಾನ ಚಿಕ್ಕಮ್ಮ ಪೇತ್ಯನ ವಿಚಿತ್ರವರ್ತನೆಯನ್ನ ತಕ್ಷಣ ಕಂಡುಕೊಂಡಳು.

"ಏನಾಗಿದೆ ನಿನಗೆ ಇವತ್ತು? ಅಂಗಳದ ಹುಡುಗರು ಯಾರೂ ನಿನ್ನ ಜತೆ ಆಡುವುದಕ್ಕೆ ಬರಲಿಲ್ಲವೇ ?" ಏನನ್ನೋ ಹುಡುಕುತ್ತಿರುವಂತಿದ್ದ ಪೇತ್ಯನ ಕಣ್ಣುಗಳನ್ನೂ, ಅವನ ಅಸಾಧಾರಣವಾದ ಉದ್ವೇಗಪೂರಿತ ಮುಖವನ್ನೂ ಪರೀಕ್ಷಿಸುತ್ತ ತಾತ್ಯಾನ ಕೇಳಿದಳು.

ಪೇತ್ಯ ಕೋಪದಿಂದ ಚಿಕ್ಕಮ್ಮನ ಊಹೆಯನ್ನು ನಿರಾಕರಿಸುತ್ತ ತಲೆಯಲ್ಲಾಡಿಸಿದ.

"ಅಥವಾ ಶಾಲೆಯಲ್ಲಿ ನಿನಗೆ ಕಡಿಮೆ ಅಂಕಗಳು ಬಂದುದರ ಚಿಂತೆಯೋ? ಹಾಗೇನಾದರೂ ಇದ್ದರೆ ಸುಮ್ಮನೆ ವ್ಯಥೆಪಡುತ್ತ ಕುಳಿತಿರಬೇಡ, ಮರೆತುಬಿಡು."

"ಸುಮ್ಮನೆ ಹೋಗು, ಚಿಕ್ಕಮ್ಮ. ನನ್ನನ್ನು ಯಾಕೆ ಎಲ್ಲರೂ ಸೇರಿಕೊಂಡು ಚಿಟಕ ಮುಳ್ಳು ಆಡಿಸ್ತೀರಿ?"

"ಹುಷಾರಿಲ್ಲವೇನಪ್ಪ ನಿನಗೆ ?"

"ಓ, ಥೂಪ್ಪ !"

ಈ ಪ್ರಶ್ನೆಗಳನ್ನು ಕೇಳಿ ಪೇತ್ಯ ಅಳಲು ಪ್ರಾರಂಭಿಸುವಂತೆ ಬಿಕ್ಕಳಿಸಲು ಮೊದಲು ಮಾಡಿದ.

"ಹೇಳುವುದಕ್ಕೆ ಇಷ್ಟವಿಲ್ಲದೆ ಇದ್ದರೆ ಬಿಡು. ನಿನ್ನಷ್ಟಕ್ಕೇ ನೀನೇ ಕೊರಗಿಕೋ."

ಪೇತ್ಯ ನಿಜವಾಗಿಯೂ ಚಿಂತೆಗೀಡಾಗಿದ್ದ. ಮಾರನೆಯ ದಿವಸದ ಆಟಕ್ಕೆ ಬೇಕಾದ ಗುಂಡಿಗಳಿಗಾಗಿ ಎಲ್ಲಿಂದ ದುಡ್ಡು ತರುವುದು, ಏನು ಮಾಡುವುದು ಎಂದು ಕ್ಲೇಶಪಡುತ್ತಿದ್ದ. ತನಗೆ ಅಂದು ಆದ ನಷ್ಟವನ್ನು ಆದಷ್ಟು ಶೀಘ್ರವಾಗಿ ತುಂಬಿಕೊಳ್ಳಬೇಕೆಂಬ ಆಸೆಯಿಂದ ಮಾನಸಿಕ ಹಿಂಸೆಗೆ ಒಳಗಾದ ಪೇತ್ಯನಿಗೆ ಅಂದು ಸರಿಯಾಗಿ ನಿದ್ದೆ ಬರಲಿಲ್ಲ. ಬೆಳಗ್ಗೆ ಒಂದು ಚಮತ್ಕಾರವಾದ ಉಪಾಯವನ್ನು ಹೂಡಲು ನಿಶ್ಚಯಿಸಿದ.

ಬಹುಹೊತ್ತು ತಂದೆಯ ಬಳಿಯಲ್ಲಿಯೇ ಮುದ್ದುಮುದ್ದಾಗಿ ಅಡ್ಡಾಡಲಾರಂಭಿಸಿದ. ತಂದೆಯ ಮೊಣಕೈ ಕೆಳಗೆ ತಲೆಯನ್ನು ತೂರಿಸುತ್ತ ಹೊಸ ಸೋಪಿನ ಪರಿಮಳ ಬರುತ್ತಿದ್ದ ತಂದೆಯ ಕುತ್ತಿಗೆಗೆ ಮುತ್ತುಗಳನ್ನು ಕೊಡಲಾರಂಭಿಸಿದ. ತಂದೆ ಹುಡುಗನ ಗುಂಡುತಲೆಯನ್ನು ತಟ್ಟುತ್ತ ಪೇತ್ಯನಿಗೆ ಅಸಹನೆಯನ್ನು ಹುಟ್ಟಿಸಿದ್ದ ಅಂಗಿಯ ಗುಂಡಿಗಳಿಗೆ ಒತ್ತಿದರು.

"ಏನು ಬೇಕು ಮಗು, ಪೇತ್ಯ? ಏನು ಹೇಳು."

ಪೇತ್ಯ ನಿರೀಕ್ಷಿಸುತ್ತಿದ್ದ ಪ್ರಶ್ನೆಯೇ ಅದು. ಆ ಮೃದುವಾದ ತಂದೆಯ ಧ್ವನಿ ಬಂದಾಗ ತಾನು ಕೇಳಿದ್ದೆಲ್ಲ ಈಡೇರುವುದೆಂದು ಅವನು ಅನುಭವದಿಂದ ತಿಳಿದುಕೊಂಡಿದ್ದ. ಮೈನುಲಿಯುತ್ತ ನಾಚಿಕೆಯನ್ನು ತೋರಿಸುವವನಂತೆ ನಡುಪಟ್ಟಿಯನ್ನು ಸರಿಮಾಡಿಕೊಳ್ಳುತ್ತ ಪೇತ್ಯ "ಅಪ್ಪ, ನನಗೆ ಐದು ಕೊಪೆಕ್ಕು ?" ಎಂದ.

"ಯಾತಕ್ಕೆ ಬೇಕು ?" ಮಕ್ಕಳಲ್ಲಿ ಎಷ್ಟು ಪ್ರೀತಿಯಿದ್ದರೂ ಅವರ ಶಿಕ್ಷಣದ ವಿಷಯದಲ್ಲಿ ತನ್ನ ತತ್ವಗಳನ್ನು ಪಾಲಿಸುವುದರಲ್ಲಿ ತಂದೆ ಖಂಡಿತವಾದಿಯಾಗಿದ್ದರು.

"ನನಗೆ ಯಾತಕ್ಕೋ ಬೇಕಪ್ಪ."

"ಯಾತಕ್ಕೆ ಎಂದು ನೀನು ನನಗೆ ಹೇಳಿದರೆ ಕೊಡುತ್ತೇನೆ."

"ನನಗೆ ಬೇಕು, ಅಪ್ಪ."

"ಯಾತಕ್ಕೆ ಎಂದು ಹೇಳು. ನೀನು ಆ ದುಡ್ಡನ್ನು ಹೇಗೆ ಖರ್ಚುಮಾಡುತ್ತೀಯೆ ಎನ್ನುವುದು ನನಗೆ ಗೊತ್ತಾಗಬೇಕು. ಆ ದುಡ್ಡು ಯಾವುದಾದರೂ ಪ್ರಯೋಜನಕರವಾದ ಅಗತ್ಯವಾದ ವಿಷಯಕ್ಕೆ ಬೇಕಾಗಿದ್ದರೆ ನಾನು ಸಂತೋಷದಿಂದ ಕೊಡುತ್ತೇನೆ. ಅದನ್ನು ಕೆಟ್ಟದ್ದಕ್ಕೆ ಉಪಯೋಗಿಸುವ ಹಾಗಿದ್ದರೆ ನಾನು ಕೊಡುವುದಿಲ್ಲ. ಆದ್ದರಿಂದ ಈಗ ಹೇಳು, ನಿನಗೆ ಈ ದುಡ್ಡು ಯಾತಕ್ಕೆ ಬೇಕು."

ಆಟ ಆಡುವುದಕ್ಕೆ ಈ ದುಡ್ಡು ಬೇಕಾಗಿತ್ತು ಎಂದು ಪೇತ್ಯ ಹೇಗೆ ಹೇಳಿಯಾನು. ಆ ಪ್ರಶ್ನೆಯೇ ಏಳುವಂತಿಲ್ಲ. ಮಿಠಾಯಿ ಗಿಠಾಯಿ ಬೇಕೆಂಬ ಅಪೇಕ್ಷೆಯುಳ್ಳ ಒಳ್ಳೆಯ ನಡತೆಯ ಹುಡುಗನಂತೆ ಅಕೃತ್ರಿಮ ಸ್ವಭಾವವನ್ನು ಹೊರಗೆಡಹುತ್ತ

"ನಾನು ಅದರಿಂದ ಚಾಕಲೇಟುಗಳನ್ನು ಕೊಂಡುಕೊಳ್ಳುತ್ತೇನೆ." ಎಂದು ಗೊಣಗುಟ್ಟಿದ.

"ಚಾಕಲೇಟ್ ಬೇಕೆ? ನಾನೇನು ಬೇಡ ಎನ್ನುವುದಿಲ್ಲವಲ್ಲ."

ಈ ಉತ್ತರವನ್ನು ಕೇಳಿ ಪೇತ್ಯ ತನ್ನ ಆಸೆ ಈಡೇರಬಹುದೆಂದು ಹಿಗ್ಗಿದ. ತಂದೆ ಮರು ಮಾತನಾಡದೆ ಮೇಜಿನ ಬಳಿಗೆ ನಡೆದರು. ಅದರ ಬಾಗಿಲನ್ನು ತೆರೆದು ಚಿತ್ರವಿದ್ದ ಕಾಗದದಿಂದ ಸುತ್ತಿದ್ದ ಚಾಕಲೇಟನ್ನು ಪೇತ್ಯನ ಕೈಗಿತ್ತರು. ಅರಗಿನ ಮುದ್ರೆಗಳಿಂದ ಅಂಟಿಸಿದ ಲಕ್ಕೋಟೆ

ಯಂತೆ ಕಾಗದವನ್ನು ಚಾಕಲೇಟಿನ ಮೇಲೆ ಸುತ್ತಲಾಗಿತ್ತು. ಪೇತ್ಯ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಚಾಕಲೇಟನ್ನು ತಂದೆಯ ಕೈಯಿಂದ ಇಸುಕೊಂಡ. ಸಾಂಪ್ರದಾಯಿಕವಾಗಿ "ವಂದನೆಗಳು, ಅಪ್ಪ." ಎಂದ. ಭಗ್ನ ಹೃದಯನಾಗಿ ಶಾಲೆಗೆ ಹೊರಟ. ಏನೂ ಇಲ್ಲದೆ ಇರುವುದಕ್ಕಿಂತ ಚಾಕಲೇಟ್ ಹೀನವಾಗಿರಲಿಲ್ಲ. ಏಕೆಂದರೆ ಯಾರೊಡನೆಯಾದರೂ ಕೆಲವು ಗುಂಡಿಗಳನ್ನು ಚಾಕೆಲೇಟಿಗೆ ಬದಲಾಯಿಸಿಕೊಳ್ಳಬಹುದೆಂಬ ಆಸೆ ಅವನಲ್ಲಿ ಮೂಡಿತು.

ಆದರೆ ಅಂದು ಗುಂಡಿಯಾಟ ಆಡಲು ಅವಕಾಶವೇ ಪೇತ್ಯನಿಗೆ ದೊರಕಲಿಲ್ಲ.

ಕುಲಿಕೊವೊ ಮೈದಾನವನ್ನು ದಾಟಿ ತಮ್ಮ ಶಾಲೆಯಿದ್ದ ನೊವೊರಿಬ್ನಾಯ ಬೀದಿಗೆ ಪೇತ್ಯ ಬಂದನೋ ಇಲ್ಲವೋ ಏನೋ ಒಂದು ವಿಶೇಷವಾದ, ಮುಖ್ಯವಾದ ಹಾಗೂ ಅತ್ಯಾನಂದಕರವಾದ ಘಟನೆಯೊಂದು ನಗರದಲ್ಲಿ ನಡೆಯುತ್ತಿರುವುದು ಅವನಿಗೆ ಕಾಣಿಸಿತು.

ಬೆಳಗ್ಗೆ ಅಷ್ಟು ಬೇಗ ರಸ್ತೆಗಳೆಲ್ಲ ಜನಗಳಿಂದ ತುಂಬಿದ್ದುವು. ಏನೋ ಒಂದು ಔತ್ಸುಕ್ಯ ಮತ್ತು ನಿರೀಕ್ಷೆ ಅವರಲ್ಲಿ ಎದ್ದು ಕಾಣುತ್ತಿದ್ದುವು. ಆದರೆ ಅವರು ಅಲ್ಲಿಂದ ಕಾಲ್ತೆಗೆಯುವ ಆತುರವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಹೆಬ್ಬಾಗಿಲುಗಳ ಬಳಿಯಲ್ಲೂ ಬೀದಿ ಮೂಲೆಗಳ ಪುಸ್ತಕದ ಅಂಗಡಿಗಳ ಸುತ್ತಲೂ ಜನರು ಗುಂಪುಗುಂಪಾಗಿ ನಿಂತಿದ್ದರು. ಬಹು ಸಣ್ಣಗೆ ಉದುರುತ್ತಿದ್ದ ಮಳೆ ಹನಿಗಳ ನಡುವೆ ಓದಲು ಜನಗಳು ಬಿಡಿಸಿದ ಆ ಪತ್ರಿಕೆಗಳು ಆವರಣವನ್ನು ಕಾಂತಿಹೀನವಾಗಿ ಮಾಡಿದ್ದುವು.

ಎಲ್ಲ ಮನೆಗಳ ಮೇಲೂ ಬಿಳಿ ನೀಲಿ ಮತ್ತು ಕೆಂಪು ವರ್ಣದ ರಾಷ್ಟ್ರಧ್ವಜವನ್ನು ಹಾರಿಸಲಾಗಿತ್ತು. ಬಾವುಟಗಳ ಆಕಾರ ಮತ್ತು ಹೊಳಪಿನಿಂದಲೇ ಆ ಮನೆಗಳವರು ಎಷ್ಟು ಧನಿಕರು ಎಂಬುವನ್ನು ಅಳೆಯಬಹುದಾಗಿತ್ತು. ಕೆಲವು ಮಾಸಲು ಬಣ್ಣದ ಸಣ್ಣ ಬಾವುಟಗಳಾಗಿದ್ದುವು. ಹೇಗೆ ಹೇಗೊ ಒಂದು ಕೋಲಿಗೆ ಅದನ್ನು ಸಿಕ್ಕಿಸಿ ಹೆಬ್ಬಾಗಿಲಿಗೆ ಕಟ್ಟಿದ್ದರು. ಇನ್ನು ಕೆಲವು ಬಾವುಟಗಳು ಬಹಳ ದೊಡ್ಡವೂ, ಆಗ ತಾನೆ ಕೊಂಡು ತಂದವುಗಳೂ ಆಗಿದ್ದುವು. ಅವುಗಳ ಅಂಚಿಗೆ ತ್ರಿವರ್ಣದ ರೇಷ್ಮೆದಾರವನ್ನು ಸೇರಿಸಲಾಗಿತ್ತಲ್ಲದೆ, ಅವುಗಳಿಂದ ಕುಚ್ಚುಗಳು ನೇತಾಡುತ್ತಿದ್ದುವು. ಸ್ವಲ್ಪ ಮೈಗೂಡಿಕೊಂಡು ಬೀಸಿದರೇನೆ ಗಾಳಿಯು ಆ ದೊಡ್ಡ ಬಾವುಟಗಳನ್ನು ಹಾರಾಡಿಸಲು ಸಮರ್ಥವಾಗುತ್ತಿತ್ತು. ಆಗ ಅದರ ಪುಟ್ಟ ಹೊಸ ಬಣ್ಣದ ಪರಿಮಳವು ಮೂಗಿಗೆ ಹೊಡೆಯುತ್ತಿತ್ತು.

ಶಾಲೆಗೆ ರಜ ಕೊಡಲಾಗಿತ್ತು. ನಗುಮುಖದ ಶಾಲಾಬಾಲಕರು ರಸ್ತೆಯಲ್ಲಿ ಪೇತ್ಯನ ಕಡೆ ಓಡಿ ಹೋಗುತ್ತಿದ್ದರು. ಆಡಿನ ಚರ್ಮದ ಕತ್ತಿನ ಪಟ್ಟಿಯ ಚಳಿ ಅಂಗಿಯ ಮೇಲೆ ಬಿಳಿಯ ಧೂಳು ಕವಚವನ್ನು ಧರಿಸಿದ್ದ ಶಾಲೆಯ ಜವಾನ ಶಾಲಾಕಟ್ಟಡದ ಮುಂದಿನ ಮರಗಳಿಗೆ ಸಣ್ಣ ತಂತಿಗಳನ್ನು ಬಿಗಿಯುತ್ತಿದ್ದ. ಎಂದರೆ ಅಂದು ಸಂಜೆ ದೀಪೋತ್ಸವ! ಚಕ್ರವರ್ತಿ ಮತ್ತು ರಾಜವಂಶದ ಪುರುಷರ ವರ್ಧಂತಿಯಂಥ ರಜಾದಿನಗಳಲ್ಲೆಲ್ಲ ದೀಪೋತ್ಸವವಿದ್ದೇ ಇರುತ್ತಿತ್ತು.

ಚರ್ಚಿನ ಗೊಂಚಲು ದೀಪಗಳ ಗಾಜಿನ ಪ್ರಭೆಯ ತ್ರಿಮುಖಗಳಂತೆ "ದೀಪೋತ್ಸವ," "ರಜ," "ವರ್ಧಂತಿ" ಎಂಬ ಮೂರು ಮೋಹಕ ಪದಗಳು ಪೇತ್ಯನ ಕಲ್ಪನಾಲೋಕದಲ್ಲಿ ಹೊಳೆದುವು. ಗೊಂಚಲುದೀಪಗಳಿಗೆ ಸೇರಿಸಿರುತ್ತಿದ್ದ ತ್ರಿಕೋನಾಕಾರದ ಗಾಜುಗಳಿಗೆ ಒಡೆಸ್ಸನಗರದ ಬಾಲಕರು ಬಹಳ ಬೆಲೆಕೊಡುತ್ತಿದ್ದರು. ಆ ಗಾಜನ್ನು ಕಣ್ಣಿಗಿಟ್ಟುಕೊಂಡು ನೋಡಿದಾಗ "ಚಕ್ರವರ್ತಿ

ವರ್ಧಂತಿ"ಯ ದಿನದ ಮೋಹಕ ಉಲ್ಲಾಸದಂತೆ ಕಾಮನಬಿಲ್ಲಿನ ಸಪ್ತವರ್ಣಗಳ ಪ್ರಪಂಚ ಎದುರಿಗೆ ನರ್ತಿಸುತ್ತಿತ್ತು.

ಆದರೆ ಇದು ಚಕ್ರವರ್ತಿ ವರ್ಧಂತಿಯ ದಿನವೇ? ಅಲ್ಲ. ವರ್ಧಂತಿಯ ದಿನಗಳು ಯಾವಾಗ ಬರುವುವೆಂಬುದನ್ನು ಪಂಚಾಂಗಗಳು ಸಾರಿ ಹೇಳುತ್ತಿದ್ದುವು. ತಂದೆಯ ಪಂಚಾಂಗದ ಮೇಲಿನ ಅಂದಿನ ತಾರೀಖಿನ ಸಂಖ್ಯೆಯು ಕಪ್ಪು ಬಣ್ಣದಲ್ಲಿದ್ದಿತು. ಎಂದರೆ ಅದು ದೀಪೋತ್ಸವದ ದಿನವೂ ಅಲ್ಲ ರಜದ ದಿನವೂ ಅಲ್ಲ, ಯಾವ ರಾಜವರ್ಧಂತಿಯ ದಿನವೂ ಅಲ್ಲ.

ಹಾಗಿದ್ದರೆ ಈ ಎಲ್ಲ ಆಡಂಬರದ ಅರ್ಥವೇನು? ಕಳೆದ ವರ್ಷದಂತೆ ಈಗಲೂ ಚಕ್ರವರ್ತಿಗೆ ಕುಮಾರನೇನಾದರೂ ಉದಿಸಿದನೋ? ಅದು ಸಾಧ್ಯವಿರಲಿಲ್ಲ. ಪ್ರತಿವರ್ಷವೂ ಮಗನು ಹುಟ್ಟುವನೇ? ಆದುದರಿಂದ ಇನ್ನೇನೋ ಕಾರಣವಿದ್ದಿರಬೇಕು? ಏನಿರಬಹುದು?

"ಅಯ್ಯಾ, ಇವತ್ತು ಏನು?" ಎಂದು ಪೇತ್ಯ ಜವಾನನನ್ನು ಕೇಳಿದ.

"ಸ್ವಾತಂತ್ರ್ಯ!" ಜವಾನ ಉತ್ತರವಿತ್ತ. ಅವನ ಧ್ವನಿ ಪರಿಹಾಸ್ಯಮಾಡುವಂತೆ ಪೇತ್ಯನಿಗೆ ಕಾಣಿಸಿತು.

"ನಿಜವಾಗಿಯೂ?"

"ಹೌದು, ಸ್ವಾತಂತ್ರ್ಯ!"

"ಸ್ವಾತಂತ್ರ್ಯ?"

"ಇವತ್ತು ತರಗತಿಗಳಿಲ್ಲದೇ ಇರುವುದರಿಂದ ಮನೆಗೆ ಹೋಗಲು ಸ್ವಾತಂತ್ರ್ಯ. ತರಗತಿಗಳೆನ್ನೆಲ್ಲ ಇಂದು ರದ್ದು ಮಾಡಿದೆ."

ಪೇತ್ಯನ ಮನಸ್ಸಿಗೆ ನೋವಾದಂತಾಯಿತು.

"ಇಲ್ಲಿ ಕೇಳಯ್ಯ, ನನ್ನ ಪ್ರಶ್ನೆಗೆ ನೇರವಾಗಿ ಉತ್ತರಕೊಡು. ಗೇಲಿಮಾಡಬೇಡ." ಒಡೆಸ್ಸನಗರದ ಐದನೆಯ ವಿಶ್ವವಿದ್ಯಾನಿಲಯ ಪ್ರಾವೇಶಿಕ ಶಾಲೆಯ ವಿದ್ಯಾರ್ಥಿಯಂತೆ ಬಿಗಿಯಾಗಿ ಮುಖಮಾಡಿಕೊಂಡು ಪೇತ್ಯ ಪುನಃ ಪ್ರಶ್ನಿಸಿದ.

"ನೇರವಾಗಿಯೇ ಉತ್ತರ ಕೊಟ್ಟಿದ್ದೇನೆ. ನಿಮ್ಮ ಪ್ರೀತಿಯ ತಂದೆ ತಾಯಿಗಳು ಮನೆಯಲ್ಲಿ ಕಾಯುತ್ತಾ ಇರುತ್ತಾರೆ. ಅವರ ಹತ್ತಿರಕ್ಕೆ ಹೋಗು. ನನಗೆ ತುಂಬ ಕೆಲಸ ಇದೆ. ಮಧ್ಯೆ ಅಡ್ಡಿ ಮಾಡಬೇಡ."

ತಿರಸ್ಕಾರಸೂಚಕವಾಗಿ ಹೆಗಲನ್ನು ಕುಣಿಸಿ ಪೇತ್ಯ ಉದಾಸೀನ ಭಾವದಿಂದ ಅಡ್ಡಾಡುತ್ತ ಅಲ್ಲಿಂದ ಹೊರಟ. ಪಂಡಿತನಂತೆ ವಿದ್ಯಾರ್ಥಿಗಳನ್ನು ಗತ್ತಿನಿಂದ ಮಾತನಾಡಿಸುವ ತುಚ್ಛ ಅಭ್ಯಾಸದ ಆ ಜವಾನನ ಬಳಿಯಲ್ಲಿ ಪೇತ್ಯನಿಗೆ ನಿಲ್ಲಲಾಗಲಿಲ್ಲ.

ಸರ್ಕಾರದ ಪ್ರತಿನಿಧಿಯೆಂದು ಭಾವಿಸಲಾಗಿದ್ದ ಪೋಲೀಸಿನವನನ್ನು ಕೇಳಿ ತಿಳಿದುಕೊಳ್ಳಬೇಕೆಂದು ಪೇತ್ಯ ನಿರ್ಧರಿಸಿದ. ಆ ಪೋಲೀಸಿನವನು ಈ ಚಿಕ್ಕ ಬಾಲಕನನ್ನು ಮೇಲಿನಿಂದ ಕೆಳಗಿನವರೆಗೂ ಒಂದು ಸಲ ದಿಟ್ಟಿಸಿ ನೋಡಿ ತನ್ನ ಉದ್ದವಾದ ಕೆಂಪು ಮೀಸೆಯನ್ನೊಂದು ಬಾರಿ ನೀವಿಕೊಂಡ. ಆ ಬಳಿಕ ಇದ್ದಕ್ಕಿದ್ದ ಹಾಗೆ ಯೆಹೂದಿಗಳಂತೆ ಮುಖವನ್ನು ಗಂಟುಹಾಕಿಕೊಂಡು "ಸ್ವಾತಂತ್ರ್ಯ!" ಎಂದು ವಿಲಕ್ಷಣ ಧ್ವನಿಯಲ್ಲಿ ಉಚ್ಚರಿಸಿದ.

ಸಂಪೂರ್ಣವಾಗಿ ಸೋತವನಂತೆ ಪೇತ್ಯ ನಿಧಾನವಾಗಿ ಮನೆಯ ಕಡೆಗೆ ಹೊರಟ.

ಹೆಚ್ಚು ಸಂಖ್ಯೆಯಲ್ಲಿ ಜನಗಳು ರಸ್ತೆಗಳಿಗೆ ಬಂದು ತುಂಬುತ್ತಿದ್ದರು. ವಿದ್ಯಾರ್ಥಿಗಳ ಟೋಪಿಗಳನ್ನೂ, ಕಾಲೇಜು ಬಾಲಿಕೆಯರ ಕೈಗಳನ್ನು ಮುಚ್ಚಿದ್ದ ಮೃದುರೋಮದ ಕೈಗವುಸುಗಳನ್ನೂ, ಸ್ವತಂತ್ರ ವಿಚಾರಿಗಳ ಅಗಲ ಅಂಚಿನ ಹ್ಯಾಟುಗಳನ್ನೂ ಅಲ್ಲಲ್ಲಿ ಪೇತ್ಯ ಕಾಣುತ್ತಲಿದ್ದ. ತನಗೆ ಸ್ಪಷ್ಟವಾಗಿ ಅರ್ಥವಾಗದೆ ಇದ್ದ "ಸ್ವಾತಂತ್ರ್ಯ" ಎಂಬ ಪದ ಅಲ್ಲಲ್ಲಿ ಪೇತ್ಯನ ಕಿವಿಗೆ ಬೀಳುತ್ತಲಿತ್ತು.

ಪೇತ್ಯ ಕನತ್ನಾಯ ರಸ್ತೆಯ ಮೂಲೆಗೆ ಬಂದ. ಅಲ್ಲಿ ಸೌದೆ ಅಂಗಡಿಯ ಮುಂದಿನ ಮರದ ಬೇಲಿಗೆ ಅಂಟಿಸಿದ್ದ ಕಾಗದದ ಹಾಳೆಯ ಸುತ್ತ ಕೆಲವು ಜನರು ನೆರೆದಿದ್ದುದನ್ನು ಕಂಡ. ಪೇತ್ಯ ಮೆತ್ತಗೆ ದಾರಿಮಾಡಿಕೊಂಡು ಮುಂದಕ್ಕೆ ಹೋಗಿನಿಂತುಕೊಂಡ. ಅದರಲ್ಲಿ ಹೀಗೆ ಬರೆದಿತ್ತು.

ಸಾರ್ವಭೌಮ ಘೋಷಣೆ

ಭಗವದನುಗ್ರಹದಿಂದ ಇಡೀ ರಷ್ಯಾ ಚಕ್ರಾಧಿಪತ್ಯದ ಸಾರ್ವಭೌಮರೂ ಸ್ವಯಂಪ್ರಭುಗಳೂ, ಪೋಲೆಂಡಿನ ಜಾರರೂ, ಫಿನ್ಲೆಂಡಿನ ಶ್ರೀಮನ್ಮಂಡಲಾಧಿಪರೂ, ಇತ್ಯಾದ್ಯನೇಕ ಬಿರುದಾಂಕಿತರೂ ಆದ ದ್ವಿತೀಯ ನಿಕೋಲಾಯ್ ಎನ್ನಿಸಿಕೊಂಡ ನಾವು ನಮ್ಮ ಪ್ರಜೆಗಳಿಗೆ ತಿಳಿಯಪಡಿಸುವುದೇನೆಂದರೆ:

ನಮ್ಮ ಸಾಮ್ರಾಜ್ಯದ ರಾಜಧಾನಿಯಲ್ಲಿಯೂ, ಹಲವು ನಗರಾದ್ಯನೇಕ ಸ್ಥಳಗಳಲ್ಲಿಯೂ ನಡೆದಂಥ ದಂಗೆಗಳೂ ಚಳುವಳಿಗಳೂ ನಮಗೆ ಅಪಾರವಾದ ದುಃಖವನ್ನುಂಟುಮಾಡಿರುತ್ತವೆ. ನಮ್ಮ ಪ್ರಜೆಗಳ ಕಷ್ಟಸಂಕಟಗಳೇ ನಮ್ಮ ಕಷ್ಟಸಂಕಟಗಳೂ ಆಗಿರುತ್ತವೆ. ಪ್ರಸ್ತುತ ಆರಂಭವಾಗಿರುವ ದಂಗೆಗಳು ದೇಶದ ಶಾಂತಿಗೆ ಭಂಗವನ್ನುಂಟುಮಾಡುವುದಲ್ಲದೆ ನಮ್ಮ ಸಾಮ್ರಾಜ್ಯದ ಐಕ್ಯತೆಗೂ ನೆಮ್ಮದಿಗೂ ವಿಪತ್ಕಾರಕಗಳಾಗಿವೆ.

ನಾವು ಈ ಸಾಮ್ರಾಜ್ಯದ ಪಟ್ಟವನ್ನೇರಿದಾಗ ಕೈಗೊಂಡ ರಾಜಪ್ರತಿಜ್ಞೆಯು ನಮ್ಮಲ್ಲಿರುವ ಶಕ್ತಿಯನ್ನೂ ಬುದ್ಧಿಯನ್ನೂ ಉಪಯೋಗಿಸಿ ಸಾಮ್ರಾಜ್ಯಕ್ಕೆ ಭೀಕರ ಅಪಾಯವನ್ನು ತಂದೊಡ್ಡಿರುವ ಈ ಶಾಂತಿಭಂಗ ಚಳುವಳಿಗಳನ್ನು ಕೂಡಲೇ ತಟಸ್ಥಗೊಳಿಸಬೇಕೆಂದು ಆಜ್ಞಾಪಿಸುತ್ತಿವೆ......

ಹೇಗೋ ಕಷ್ಟದಿಂದ ಪೇತ್ಯ ಇಲ್ಲಿಯವರೆಗೆ ಓದಿಮುಗಿಸಿದ. "ಕ್ಷೇಮಾಭಿವೃದ್ಧಿ", "ಶಾಂತಿಭಂಗ ಚಳುವಳಿ" "ಆಜ್ಞಾಪಿಸು" "ತಟಸ್ಥಗೊಳಿಸು" ಮೊದಲಾದ ಅಸ್ಪಷ್ಟವಾದ ಕಠಿಣ ಶಬ್ದಗಳು ಬಂದಾಗ ಪೇತ್ಯ ಮುಗ್ಗುರಿಸಿದ. ಅಲ್ಲದೆ ಸಾಮಾನ್ಯಭಾಷೆಯ ನಿಯಮಗಳನ್ನು ಮೀರಿ ದಪ್ಪ ಅಕ್ಷರಗಳಲ್ಲಿ ಬರೆದಿದ್ದ "ನಾವು" ಮೊದಲಾದ ಪದಗಳನ್ನು ಅವನಿಗೆ ನೋಡಿ ಆಶ್ಚರ್ಯವಾಯಿತು.

ಚಕ್ರವರ್ತಿಯು ತೊಂದರೆಯಲ್ಲಿದ್ದಾನೆ. ಪ್ರತಿಯೊಬ್ಬರೂ ತನಗೆ ನೆರವು ನೀಡಬೇಕೆಂದು ಅವನು ಕೇಳಿಕೊಳ್ಳುತ್ತಿದ್ದಾನೆ ಎಂಬಷ್ಟು ಅರ್ಥವನ್ನು ಪೇತ್ಯ ಆ ವಾಕ್ಯಗಳಿಂದ ಗ್ರಹಿಸಲು ಸಮರ್ಥನಾದ. ಚಕ್ರವರ್ತಿಯ ತಲೆಯ ಮೇಲೆ ಯಾರೋ ಬಿದಿರುಕೋಲಿನಿಂದ ಹೊಡೆದಿದ್ದಾರೆಂಬ ವಿಷಯ ಜ್ಞಾಪಕಕ್ಕೆ ಬಂದಾಗಲಂತೂ ಬಡಪಾಯಿ ಚಕ್ರವರ್ತಿಯ ವಿಷಯದಲ್ಲಿ ಪೇತ್ಯನಿಗೆ ತುಂಬ ಮರುಕವುಕ್ಕಿ ಬಂದಿತು.

ಆದರೆ ಎಲ್ಲರೂ ಬಾವುಟವನ್ನು ಹಾರಿಸಿ ಸಂತೋಷ ಸಂಭ್ರಮದಲ್ಲಿರುವುದೇಕೆ ಎಂಬುದು

ಪೇತ್ಯನಿಗೆ ತಿಳಿಯಲಿಲ್ಲ. ಸಂತೋಷಕರವಾದ ವಿಷಯವನ್ನೇನಾದರೂ ಆ ಘೋಷಣೆಯಲ್ಲಿ ಮುಂದೆ ಬರೆದಿದೆಯೇ? ಚಕ್ರವರ್ತಿಯ ಶೋಕಾಕುಲಿತವಾದ ಘೋಷಣೆಯನ್ನು ಮುಂದಕ್ಕೆ ಓದುವ ತಾಳ್ಮೆ ಪೇತ್ಯನಿಗಿರಲಿಲ್ಲ. ಆದರೆ ಒಂದು ಸಂಗತಿ ಪೇತ್ಯನ ಗಮನವನ್ನು ಸೆಳೆಯಿತು. ಘೋಷಣೆಯನ್ನು ಓದಲು ಬಂದವರೆಲ್ಲ ಬರೆವಣಿಗೆಯ ಮಧ್ಯದ ಒಂದು ಸ್ಥಳವನ್ನು ಮಾತ್ರ ಗಮನವಿಟ್ಟು ನೋಡುತ್ತಿದ್ದರು. ಆ ಸ್ಥಳದಲ್ಲಿ ನಮೂದಿಸಿದ್ದ ವಿಷಯ ಅವರಿಗೆಲ್ಲ ಹೆಚ್ಚಿನ ಆನಂದವನ್ನು ಉಂಟುಮಾಡುವಂತಿತ್ತು. ಆ ಸ್ಥಳದ ವಾಕ್ಯವನ್ನು ಓದಿ ಇತರರ ಕಡೆಗೆ ತಿರುಗಿ ಕೊಂಡು ವಿಜಯೋನ್ಮಾದದಿಂದ "ಆಹಾ, ಇಲ್ಲಿ ಖಚಿತವಾಗಿ ಬರೆದಿದೆ: ಪ್ರಜೆಗಳ ಆತ್ಮಗೌರವ ವನ್ನೂ ವ್ಯಕ್ತಿಪಾರಮ್ಯವನ್ನೂ ಅತಿಕ್ರಮಿಸದೆ ವಿಚಾರಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯವನ್ನು ಮಾನ್ಯ ಮಾಡಲು" ಎಂದು ಗಟ್ಟಿಯಾಗಿ ಓದಿ ಹೇಳುತ್ತಿದ್ದರು. ಅನಂತರ ಕೆಲವರು ತಾವು ಸಾರ್ವಜನಿಕ ರಸ್ತೆಯಲ್ಲಿರುವುದನ್ನೂ ಕೂಡ ಮರೆತು "ಭಲೇ!" ಎಂದು ಕಿರಿಚುತ್ತಾ ಈಸ್ಟರ್ ಹಬ್ಬದ ಸಂಪ್ರದಾಯದಂತೆ ತಮ್ಮ ಬಳಿಯಿದ್ದವ ರನ್ನು ಮುತ್ತಿಡುತ್ತಿದ್ದರು.

ಈ ಸ್ಥಳದಲ್ಲಿ ನಡೆದ ಒಂದು ಸಂಗತಿ ಪೇತ್ಯನನ್ನು ಭಾವಪರವಶನನ್ನಾಗಿ ಮಾಡಿತು.

ಒಂದು ಕುದುರೆಯ ಗಾಡಿ ಜನಗಳ ಗುಂಪಿನ ಬಳಿಗೆ ಬಂದಿತು. ಹೊಸದಾಗಿದ್ದರೂ ಆಗಲೇ ನಲುಗಿ ಹೋಗಿದ್ದ ಗುಂಡುಟೋಪಿಯನ್ನು ಧರಿಸಿದ ಒಬ್ಬ ವ್ಯಕ್ತಿ ಗಾಡಿಯಿಂದ ಕೆಳಕ್ಕೆ ಹಾರಿದ. ಡೊಂಕಾದ ಮೂಗು ಕನ್ನಡಕವನ್ನು ಏರಿಸದೇ ಘೋಷಣೆಯಲ್ಲಿನ ಆ ವಾಕ್ಯವನ್ನು ಓದಿದ. ಅನಂತರ ದಿಗ್ಭ್ರಮೆಗೊಂಡಿದ್ದ ಕುದುರೆಗಾಡಿ ಹೊಡೆಯುವವನ ಕೆಂಪು ಗಡ್ಡವನ್ನು ಮೂರುಬಾರಿ ಜೋರಾಗಿ ಮುತ್ತಿಟ್ಟು ಗಾಡಿಯೊಳಕ್ಕೆ ಹಾರಿ ಕುಳಿತ. "ವೋಡ್ಕಕ್ಕೆ ಅರ್ಧ ರೂಬಲ್. ಹೂ, ಓಡಿಸು, ತುಂಬ ಜೋರಾಗಿ." ಎಂದು ಗಟ್ಟಿಯಾಗಿ ಕಿರಿಚಿಕೊಂಡ. ಮಿಂಚಿನಂತೆ ಬಂದಗಾಡಿ ಮಿಂಚಿನಂತೆ ಮಾಯವಾಯಿತು.

ಇದನ್ನೆಲ್ಲ ನೋಡಿದಾಗ ಎಲ್ಲ ರೀತಿಯಲ್ಲೂ ಅದೊಂದು ಅಸಾಧಾರಣ ದಿನವೆಂದು ಒಂದು ಮಾತಿನಲ್ಲಿ ಹೇಳಬಹುದಾಗಿತ್ತು.

ಗಗನ ನಿರ್ಮಲವಾಯಿತು. ತುಂತುರು ಮಳೆ ನಿಂತಿತು. ಮುತ್ತಿನ ಚಿಪ್ಪಿನ ಒಳಭಾಗದ ಹೊಳಪಿನಂತೆ ಸೂರ್ಯ ಕಾಣಿಸಿಕೊಂಡ.

ಲಾಂಛನ ರಹಿತ ಟೋಪಿಯನ್ನೂ, ಗುಂಡಿಗಳಿಗೆ ಬದಲಾಗಿ ಕೊಕ್ಕೆಗಳನ್ನಿಟ್ಟಿದ್ದ ಕರಿಯ ಶಾಲಾ ಅಂಗಿಯನ್ನೂ ಧರಿಸಿದ್ದ ನುಸ್ಯ ಕೊಗಾನ್ ಮನೆಯ ಅಂಗಳದಲ್ಲಿ ಬಹಳ ದೊಡ್ಡ ವ್ಯಕ್ತಿ ಯಂತೆ ಅಲ್ಲಿಂದಿಲ್ಲಿಗೆ ಹೆಜ್ಜೆ ಹಾಕುತ್ತ ಇದ್ದ. ಧಾರ್ಮಿಕ ಸ್ವಾತಂತ್ರ್ಯ ದೊರೆಯುವುದರಿಂದ ವಿಶ್ವವಿದ್ಯಾನಿಲಯ ಪ್ರಾವೇಶಿಕ ಶಾಲೆಗೆ ತಾನು ಹೋಗಬೇಕಾದ ರೀತಿಯನ್ನೂ, ಟೋಪಿಯ ಮೇಲೆ ಧರಿಸಬೇಕಾದ ಸುಂದರ ಲಾಂಛನವನ್ನೂ ಕುರಿತು ನುಸ್ಯ ಕನಸು ಕಾಣುತ್ತಿದ್ದ.

ಪೇತ್ಯ ಅವನೊಡನೆ ಬಹುಹೊತ್ತು ಕುಂಟೆಬಿಲ್ಲೆ ಆಟ ಆಡುತ್ತಿದ್ದ. ನಡುನಡುವೆ ಪ್ರಾವೇಶಿಕಶಾಲೆಯ ವಿಷಯಗಳನ್ನು ವರ್ಣಿಸಿ ನುಸ್ಯನನ್ನು ಹೆದರಿಸುತ್ತಿದ್ದ.

"ಆ ಮೇಲೆ ಅವರು ನಿನ್ನ ಹೆಸರನ್ನು ಕೂಗುತ್ತಾರೆ. ನಿನ್ನ ಮೇಲೆ ಪ್ರಶ್ನೆಗಳ ಸುರಿಮಳೆಯೇ ಆಗುತ್ತದೆ. ನಿನಗೆ ಒಂದೂ ಗೊತ್ತಾಗುವುದಿಲ್ಲ. ಆ ಮೇಲೆ ಅವರು "ನಿನ್ನ ಸ್ಥಳಕ್ಕೆ ಹೋಗಿ

ಕುಳಿತುಕೋ" ಎನ್ನುತ್ತಾರೆ. ಆ ಮೇಲೆ ನಿನ್ನ ಹೆಸರಿನ ಮುಂದೆ ಒಂದು ಸೊನ್ನೆ ಹಾಕುತ್ತಾರೆ. ಹೀಗೆ ಅಣ್ಣಾ. ಅಲ್ಲಿ, ಬಿಟ್ಟ ಅಲ್ಲ."

"ನಾನು ಪಾಠಗಳನ್ನು ಚೆನ್ನಾಗಿ ಗಟ್ಟಿಮಾಡಿಕೊಂಡು ಹೋದರೋ?" ಬುದ್ಧಿಶಾಲಿಯಾದ ನುಸ್ಯ ಹೆಗಲೇರಿಸಿ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದ.

"ಅದರಿಂದೇನೂ ಪ್ರಯೋಜನವಿಲ್ಲ, ಒಂದು ಸೊನ್ನೆ ಹಾಕಿಯೇ ಬಿಡುತ್ತಾರೆ." ಒಂಟಿ ಕಾಲಿನ ಮೇಲೆ ನೆಗೆಯುತ್ತ ಬಿಲ್ಲೆಯನ್ನು ಹೆಬ್ಬೆರಳಿನಿಂದ ಚೌಕದಿಂದ ಹೊರಕ್ಕೆ ಎಳೆದು ಕೊಳ್ಳುತ್ತ ಪೇತ್ಯ ಹೇಳಿದ. ಅನಂತರ ನುಸ್ಯನಿಗೆ ತನ್ನ ಚಾಕಲೇಟಿನಲ್ಲಿ ಒಂದು ಚೂರನ್ನು ಕೊಟ್ಟ. ನುಸ್ಯ ಅಂಗಡಿಗೆ ಓಡಿ ಹೋಗಿ ಒಂದು ಹಿಡಿ ಒಣಗಿದ ದ್ರಾಕ್ಷಿಯನ್ನು ತಂದ. ಅಷ್ಟು ಹೊತ್ತಿಗೆ ಪೇತ್ಯನನ್ನು ಉಪಾಹಾರಕ್ಕೆ ಕರೆದರು. ನುಸ್ಯನನ್ನೂ ತನ್ನ ಜತೆಯಲ್ಲಿ ಬರುವಂತೆ ಪೇತ್ಯ ಕರೆದ. ತಂದೆಯವರು ಆಗಲೆ ಮನೆಗೆ ಬಂದಾಗಿತ್ತು! ಅವರು ನುಸ್ಯನನ್ನು ನೋಡಿ "ಓಹೋ! ನೀನೂ ಪ್ರಾವೇಶಿಕ ಶಾಲೆಯ ವಿದ್ಯಾರ್ಥಿಯಾಗುವ ಸುಯೋಗವನ್ನು ಕಾಣಬಹುದಲ್ಲವೇ, ಧನ್ಯವಾದಗಳು! ಧನ್ಯವಾದಗಳು!" ಎಂದು ಗೆಲುವಿನಿಂದ ಹೇಳಿದರು. ನುಸ್ಯ ವಿನಯಪೂರ್ವಕವಾಗಿ ಬಗ್ಗಿ ನಮಸ್ಕರಿಸಿದ.

"ಹೌದು!" ದೃಷ್ಟಿಯನ್ನು ಕೆಳಕ್ಕೆ ಹಾಕಿ ಲಜ್ಜಾಮಿಶ್ರಿತ ಹೆಮ್ಮೆಯನ್ನು ತೋರಿಸುತ್ತ ಹೇಳಿದ ನುಸ್ಯ. ಆಗ ಅವನ ಮುಖ ಸಂತೋಷದ ಕಾವಿನಿಂದ ಕೆಂಪೇರಿತು.

ತಾತ್ಯಾನ ಮತ್ತು ತಂದೆ ಹಿಗ್ಗಿದರು. ಪಾವಲಿಕ್ ಯಾರ ಅಡ್ಡಿಯೂ ಇಲ್ಲದೆ "ಸ್ವಾತಂತ್ರ್ಯ" ಆಟವನ್ನು ಆಡುತ್ತ ಪ್ರವೇಶದ್ವಾರದಲ್ಲಿ ಗಲಾಟೆ ಮಾಡುತ್ತಿದ್ದ. ಕುರ್ಚಿಗಳನ್ನು ತಲೆಕೆಳಕಾಗಿ ಇಟ್ಟು ಅವುಗಳಿಗ ಬಟ್ಟೆಯನ್ನು ಹೊದಿಸುತ್ತ ಅವುಗಳನ್ನು ಸಾಲಾಗಿ ಇರಿಸಿದ. ಅವುಗಳ ಅಡಿಯಲ್ಲಿ ನುಸಿದುಹೋಗುತ್ತ ಆಟದ ಕಹಳೆಯನ್ನು ಊದುತ್ತಿದ್ದ. ಆ ಕಹಳೆಯ ಗಲಾಟೆಯಿಲ್ಲದೆ ಪಾವಲಿಕ್ ಯಾವ ಆಟವನ್ನೂ ಆಡುತ್ತಿರಲಿಲ್ಲ. ಇಂದು ಪಾವಲಿಕನನ್ನು ಯಾರೂ ತಡೆಯಲಿಲ್ಲ. ಅವನು ಮನಃಪೂರ್ತಿ ಆಟವಾಡುತ್ತಿದ್ದ.

ನಗರದ ಬಿಸಿಬಿಸಿ ಸುದ್ದಿಗಳನ್ನು ತೆಗೆದುಕೊಂಡು ದುನ್ಯ ಅಂಗಳದಿಂದ ಒಳಕ್ಕೂ ಹೊರಕ್ಕೂ ಓಡಾಡುತ್ತಿದ್ದಳು. ದೊಡ್ಡ ಗುಂಪೊಂದು ಕೆಂಪು ಬಾವುಟವನ್ನು ಹಿಡಿದುಕೊಂಡು ರೈಲು ನಿಲ್ದಾಣದ ಬಳಿ ಹೋಗುತ್ತಿತ್ತು. ರಿಚ್ಲ್ಯೂ ರಸ್ತೆಯಲ್ಲಿ ಜನರ ಗುಂಪೊಂದು ಸಂತೋಷಭರದಲ್ಲಿ ಸೈನಿಕನೊಬ್ಬನನ್ನು ಮೇಲಕ್ಕೆಸೆದು ಆಂತುಕೊಂಡಿದ್ದರು. ಆ ಬಡಪಾಯಿ ಚಂಡಿನಂತೆ ಮೇಲಕ್ಕೂ ಕೆಳಕ್ಕೂ ಹಾರಾಡುತ್ತಿದ್ದ. ಬಂಧಿತರನ್ನು ಬಿಡುಗಡೆ ಮಾಡುತ್ತಿದ್ದಾರೆಂಬ ಸುದ್ದಿಯನ್ನು ಕೇಳಿ ಜನ ಎಲ್ಲ ಕಡೆಯಿಂದಲೂ ಪೋಲೀಸ್ ಠಾಣೆಯ ಕಡೆಗೆ ಓಡುತ್ತಿದ್ದರು. ಒಬ್ಬಳು ಹೆಂಗಸು ಚಿಕ್ಕ ಹೆಣ್ಣು ಮಗುವನ್ನು ಎತ್ತಿಕೊಂಡು ಮನಃಪೂರ್ತಿಯಾಗಿ ಕಿರಿಚಿಕೊಳ್ಳುತ್ತ ಓಡುತ್ತಿದ್ದಳು! ಸೈನ್ಯ ತರಬೇತಿ ಶಾಲೆಯ ಕಟ್ಟಡದ ಬಳಿ ಸೈನ್ಯದ ಕಾವಲು ಬಲವಾಗಿತ್ತು, ಅಲ್ಲಿ ಸೈನಿಕರನ್ನು ನೋಡಲು ಯಾರನ್ನೂ ಒಳಗೆ ಬಿಡುತ್ತಿರಲಿಲ್ಲ; ಕಿಟಕಿಗಳ ಬಳಿ ಮುತ್ತಿಕೊಳ್ಳುತ್ತಿದ್ದವರನ್ನು ದೂರ ಓಡಿಸುತ್ತಿದ್ದರು. ಆದರೆ ಒಬ್ಬ ಧೈರ್ಯಸ್ಥ ಪ್ರಯಾಸದಿಂದ ಒಂದು ಕಿಟಕಿಯನ್ನು ಹಿಡಿದ. ಒಂದು ಬಂಡೆಯ ಮೇಲೆ ಕಾಲನ್ನಿಟ್ಟು ನಿಂತುಕೊಂಡು "ಸ್ವಾತಂತ್ರ್ಯ ಚಿರಾಯುವಾಗಲಿ!" ಎಂದು ಕೂಗಿದ. ಆಗ ಸೈನಿಕರೂ ಕೂಡ ಕಿಟಕಿಗಳ ಮೂಲಕ "ಸ್ವಾತಂತ್ರ್ಯ ಚಿರಾಯುವಾಗಲಿ!"

ಎಂದು ಮರುದನಿಯಿತ್ತರು.

ಇಂಥ ಸಮಾಚಾರಗಳನ್ನು ಎಲ್ಲರೂ ಸಂತೋಷದಿಂದ ಸ್ವೀಕರಿಸುತ್ತಿದ್ದರು. ಅನಂತರ ಕುತೂಹಲದಿಂದ ಪ್ರಶ್ನೆಗಳನ್ನು ಹಾಕುತ್ತಿದ್ದರು,

"ಪೋಲೀಸಿನವರು ಏನು ಮಾಡುತ್ತಿದ್ದರು?"

"ಅವನೇನು ಮಾಡಿದ?"

"ಅವಳೇನು ಮಾಡಿದಳು?"

"ಅವರೇನು ಮಾಡಿದರು?"

"ಗ್ರೀಕ್ ರಸ್ತೆಯಲ್ಲಿ ಏನು ನಡೆಯುತ್ತಿದೆ?"

ಎಷ್ಟೇ ಚಳಿ ಕೊರೆಯುತ್ತಿದ್ದರೂ ಲಕ್ಷ್ಯವಿಲ್ಲದೆ ಮಹಡಿಯ ಮೊಗಸಾಲೆಯ ಕಿಟಕಿಯನ್ನು ಕ್ಷಣ ಕ್ಷಣಕ್ಕೂ ತೆಗೆಯುತ್ತ ರಸ್ತೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದರು. ಕುಲಿಕೋವೊ ಮೈದಾನದ ಒಂದು ತುದಿಯಲ್ಲಿ ಜನರ ಗುಂಪನ್ನೂ ಕೆಂಪು ಬಾವುಟವನ್ನೂ ಸ್ಥೂಲವಾಗಿ ಕಾಣಬಹುದಾಗಿದ್ದಿತು.

ಬಹುದಿನಗಳಿಂದ ಮನೆಗೆ ಸ್ನೇಹಿತರು ಬರುವುದು ನಿಂತುಹೋಗಿದ್ದಿತು. ಆದರೆ ಅಂದು ಸಂಜೆ ಅನಿರೀಕ್ಷಿತವಾಗಿ ಎಲ್ಲರೂ ಬರುತ್ತಿದ್ದರು. ಅವರು ತಂದೆಯವರ ಶಾಲೆಯ ಉಪಾಧ್ಯಾಯರುಗಳೂ, ತಾತ್ಯಾನಳ ಪರಿಚಿತ ಕಾಲೇಜು ಹುಡುಗಿಯರೂ ಆಗಿದ್ದರು. ಹಜಾರದಲ್ಲಿ ನಿಲ್ಲಿಸಿದ್ದ ಮೇಲಂಗಿಯನ್ನು ತೂಗುಹಾಕುವ ಗೂಟಗಳು ಇಂದು ಅಂಗಿಗಳಿಂದಲೂ ಸ್ತ್ರೀಪುರುಷರ ಟೋಪಿಗಳಿಂದಲೂ ತುಂಬಿ ಹೋಗಿದ್ದುವು.

ಪೇತ್ಯ ಅಡಿಗೆಮನೆಯಲ್ಲಿ ಕುಳಿತು ಬೇಯುತ್ತಿರುವ ಮಾಂಸದ ತುಂಡುಗಳನ್ನೂ, ರುಚಿಕರವಾದ ಹಂದಿಯ ತೊಡೆಯ ಮಾಂಸವನ್ನೂ, ಸಣ್ಣಗೆ ಕತ್ತರಿಸುತ್ತಿದ್ದ ಬ್ರೆಡ್ಡಿನ ಚೂರುಗಳನ್ನೂ ನಿರೀಕ್ಷಿಸುತ್ತಿದ್ದ.

ಉಲ್ಲಾಸಕರವಾಗಿದ್ದ ಆ ದಿನದ ಕೊನೆಯಲ್ಲಿ ಪೇತ್ಯ ಆಯಾಸದಿಂದ ಸೋತು ಹಾಸಿಗೆಯಲ್ಲಿ ಬಿದ್ದುಕೊಂಡ. ಊಟದ ಮನೆಯಿಂದ ಅಪರಿಚಿತವ್ಯಕ್ತಿಗಳ ನಗುವಿನ ಶಬ್ದವೂ, ಅವರ ಓಡಾಟದ ಸದ್ದೂ, ಚಮಚಗಳ ಟಣಟಣ ಶಬ್ದವೂ ಬಹುಹೊತ್ತು ಕೇಳಿಬರುತ್ತಿದ್ದಿತು. ಪೇತ್ಯನ ಮಲಗುವ ಕೊಠಡಿಗೆ ದೀಪದ ಪ್ರಕಾಶಮಾನವಾದ ಬೆಳಕಿನ ಒಡನೆ ಸಿಗರೇಟಿನ ಹೊಗೆಯೂ ಕೂಡ ಅಡಿಗೆಯ ಮನೆಯಿಂದ ಬರುತ್ತಿದ್ದಿತು.

ಕಿಟಕಿಯಿಂದ ಹೊರಗಡೆ ವಾತಾವರಣವು ಹಗುರವಾಗಿದ್ದಿತು. ಬೀದಿ ದೀಪಗಳ ಮಿಣುಗುಟ್ಟುವ ಬೆಳಕಿನ ಜತೆಗೆ ಬೇರೆಬೇರೆ ಬಣ್ಣದ ಲಾಂದ್ರಗಳ ಬೆಳಕು ಬೆರೆತು ಪಾರದರ್ಶಕವಾದ ಕಿರಣಗಳು ಕಾಣಬರುತ್ತಿದ್ದುವು. ಇಷ್ಟು ಹೊತ್ತಿಗೆ ಕೆಂಪು ಬಾವುಟಗಳ ಬದಲು ಮೇಣದ ಬತ್ತಿಗಳು ಒಳಗಡೆ ಉರಿಯುತ್ತಿರುವ ಆರು ಮುಖಗಳ ಕೆಂಪುಗಾಜಿನ ಲಾಂದ್ರಗಳನ್ನು ನಗರದಲ್ಲೆಲ್ಲ ಮರಕ್ಕೆ ಹಾಕಿದ್ದ ತಂತಿಗಳ ಮೇಲಿನಿಂದ ತೂಗುಹಾಕಿದ್ದರೆಂದು ಪೇತ್ಯ ಊಹಿಸಿದ. ದೀರ್ಘವಾದ ನೇರವಾದ ಒಡೆಸ್ಸ ನಗರ ರಸ್ತೆಗಳುದ್ದಕ್ಕೂ ಒಂದೇ ರೀತಿಯ ದೀಪಗಳ ಎರಡು ಸಾಲುಗಳು ರೈಲುಕಂಬಿಯಂತೆ ಹಬ್ಬಿರುವುದು ಕಾಣಬರುತ್ತಿತ್ತು. 'ಬನ್ನಿ ಬನ್ನಿ, ಇಲ್ಲೇ ಹತ್ತಿರದಲ್ಲಿ ಆಗೋ ಬೀದಿಯ ಮೂಲೆಯಲ್ಲಿಯೇ ಅದ್ಭುತರಮ್ಯವಾದ ಸುಂದರ ದೃಶ್ಯವನ್ನು ತೋರಿಸು

ತ್ತೇವೆ, ಬನ್ನಿ' ಎಂದು ಅವು ಕೈನೀಡಿ ಬೀದಿಯಿಂದ ಬೀದಿಗೆ ಕರೆಯುತ್ತಿದ್ದಂತೆ ತೋರುತ್ತಿದ್ದುವು. ಆದರೆ ಆ ಬೀದಿಯ ಮುಂದಿನ ತಿರುವಿಗೆ ಹೋದರೆ ಅದೇ ಉದ್ದವಾದ ಬೀದಿ, ಅದೇ ದೀಪದ ಸಾಲುಗಳು. ಅವು ವಿವಿಧ ವರ್ಣದವುಗಳಾಗಿದ್ದರೂ ಏಕರೀತಿಯಾಗಿ ಬೇಸರವನ್ನುಂಟುಮಾಡುವಂತೆ ತೋರುತ್ತಿದ್ದುವು. ಜನರು ಆ ದೀಪಗಳ ನಡುವೆ ನಡೆದು ನಡೆದು ಬೇಸರಗೊಳ್ಳುವಂತೆ ಅವುಗಳೂ ಉರಿದು ಉರಿದು ಆಯಾಸಗೊಂಡಂತೆ ಕಾಣುತ್ತಿದ್ದುವು.

ಕೆಂಪು, ಹಸುರು, ನೀಲಿ, ನೇರಳೆ ಬಣ್ಣದ ದೀಪದ ಕಿರಣಗಳು ಮಂಜಿನಲ್ಲಿ ಬಾಗಿದಂತೆ ದಾರಿಗರ ಕಣ್ಣಿಗೆ ಬೀಳುತ್ತಿದ್ದುವು. ದೂರದಿಂದ ನೋಡಿದರೆ ಏನೋ ಒಂದು ನಾವೀನ್ಯವೂ ವಿಶೇಷ ಸೌಂದರ್ಯವೂ ಅವುಗಳಲ್ಲಿರುವಂತೆ ಕಂಗೊಳಿಸುತ್ತಿದ್ದುವು.

ಈ ರೀತಿಯ ಬೇಸರವನ್ನು ಹುಟ್ಟಿಸುವ ವೈವಿಧ್ಯವು "ರಾಜವರ್ಧಂತಿ", "ಚಕ್ರವರ್ತಿಯ ವರ್ಧಂತಿ" ಎಂದು ಮೊದಲಾಗಿ ಕರೆಸಿಕೊಳ್ಳುತ್ತಿತ್ತು. ಇಂದು ಅದನ್ನೇ ಹೊಸ ಹೆಸರಿನಿಂದ ಕರೆಯಲಾಯಿತು. ಆ ಹೊಸ ಪದವೂ ವಿವಿಧವರ್ಣಗಳಂತೆ ಧ್ವನಿವೈವಿಧ್ಯವನ್ನು ಪಡೆದಿತ್ತು.

ಊಟದ ಮನೆಯಿಂದ ಹೊಸಬರ ಧ್ವನಿಗಳ ಮತ್ತು ಬೆಳ್ಳಿಯ ಚಮಚಗಳ ಗಲಾಟೆಯ ಮಧ್ಯದಿಂದ "ಸಂವಿಧಾನ" ಎಂಬ ಶಬ್ದ ಆಗಾಗ್ಗೆ ಹಲವು ಬಾರಿ ಕೇಳಿಬರುತ್ತಿದ್ದಿತು.

ಪ್ರಾಯಃ ಆ ಜನಗಳ ಸದ್ದುಗದ್ದಲ ಮಧ್ಯರಾತ್ರಿಯವರೆಗೂ ನಡೆದಿದ್ದಿರಬೇಕು. ಈ ಗಲಾಟೆಯ ನಡುವೆ ಯಾವಾಗಲೋ ಪೇತ್ಯನಿಗೆ ನಿದ್ದೆ ಬಂದಿತು.

೩೪. ತಳಹದಿಯ ಕೊಠಡಿಯಲ್ಲಿ

ಬಂದಿಗಳನ್ನು ಬಿಡುಗಡೆ ಮಾಡುತ್ತಿರುವರೆಂಬ ವದಂತಿ ಉಪನಗರವನ್ನು ಮುಟ್ಟಿದ ಒಡನೆ ಗಾವ್ರಿಕ್ ಪೋಲೀಸ್ ಠಾಣೆಗೆ ಹೊರಟ.

ಕಳೆದ ಒಂದು ವಾರದಿಂದ ಮನೆಯಲ್ಲಿಲ್ಲದೆ ಎಲ್ಲಿಂದಲೋ ಆ ಬೆಳಗ್ಗೆ ತಾನೆ ಬಂದಿದ್ದ ಟೆರೆಂಟಿ ಗಾವ್ರಿಕನೊಡನೆ ಬೀದಿಯ ತಿರುವಿನವರೆಗೆ ಹೊರಟ, ಟೆರೆಂಟಿಗೆ ಹೆಜ್ಜೆ ಕೂಡಾ ಇಡಲಾಗುತ್ತಿರಲಿಲ್ಲ. ಅಷ್ಟೊಂದು ಆಯಾಸಗೊಂಡಿದ್ದ ಅವನು.

"ಅಜ್ಜನನ್ನು ಹೋಗಿ ನೋಡು, ಗಾವ್ರಿಕ್. ಆದರೆ ಅವನನ್ನು ದೇವರ ದಯೆಯಿಂದ ಇಲ್ಲಿಗೆ ಖಂಡಿತ ಕರೆದುಕೊಂಡು ಬರಬೇಡ. ಈ 'ಸ್ವಾತಂತ್ರ್ಯ' ಎಂಬುದು ಬಂದಿರುವುದು ಸುಮ್ಮನೆ ಅಲ್ಲ. ಇದರ ಹಿಂದೆ ಏನೇನು ಕಾದಿದೆಯೋ ಯಾರಿಗೆ ಗೊತ್ತು. ಸರಕಾರದ ಪಿಶಾಚಿಗಳು ಎಲ್ಲಿಯೂ ಹೋಗಿಲ್ಲ. ಯಾವನಾದರೂ ಒಬ್ಬ ನಿಮ್ಮ ಬೆನ್ನಿಗೆ ಗಂಟು ಬೀಳಬಹುದು. ಆ ಮೇಲೆ ಯಾರು ಯಾರಿಗೆ ಏನೇನು ತೊಂದರೆ ಕಾದಿದೆಯೋ ಬಲ್ಲವರಾರು!" ಎಂದು ಟೆರೆಂಟಿ ಎಚ್ಚರಿಸಿದ.

ಗಾವ್ರಿಕ್ "ಹೂ" ಎಂದು ತಲೆಯಲ್ಲಾಡಿಸಿದ. ಕಾರ್ಖಾನೆಯ ಉಪನಗರದಲ್ಲಿ ವಾಸಿಸುವುದಕ್ಕೆ ಬಂದಾಗಿನಿಂದ ಅವನು ಎಷ್ಟೋ ವಿಷಯಗಳನ್ನು ತಿಳಿದುಕೊಂಡಿದ್ದ. ಎಷ್ಟೋ ಹೊಸ ಸಂಗತಿಗಳನ್ನು ಕಂಡುಕೊಂಡಿದ್ದ. ಮುಷ್ಕರ ಸಮಿತಿಯವರು ಟೆರೆಂಟಿಯ ಮನೆಯಲ್ಲಿ ಸಂಧಿಸುತ್ತಿದ್ದರೆಂಬ ವಿಷಯ ಗಾವ್ರಿಕನಿಗೆ ಮೊದಲಿನಂತೆ ರಹಸ್ಯವಾಗಿ ಉಳಿದಿರಲಿಲ್ಲ. ಮನೆಯ ಹೆಬ್ಬಾಗಿಲಿನ ಪಕ್ಕದ ಬೆಂಚಿನಮೇಲೆ ಬೆಳಗಿನ ಜಾವದವರೆಗೂ ಗಾವ್ರಿಕ್ ಕುಳಿತುಕೊಂಡಿರುತ್ತಿದ್ದ ದಿ

ಗಳೆಷ್ಟೋ ಇದ್ದವು. ಯಾರಾದರೂ ಅಪರಿಚಿತರು ಮನೆಯ ಹತ್ತಿರ ಬಂದರೆ ಆಗ ಮೆದುವಾಗಿ ಸಿಳ್ಳು ಹಾಕುತ್ತಿದ್ದ,

ನಾವಿಕ ಇದ್ದಕ್ಕಿದ್ದಂತೆ ಮುಂಜಾನೆ ಎಲ್ಲಿಂದಲೋ ಬಂದು ತಕ್ಷಣ ಮಾಯವಾಗುತ್ತಿದ್ದುದನ್ನು ಗಾವ್ರಿಕ್ ಹಲವು ಸಲ ಕಂಡಿದ್ದ. ಈಗ ಅವನ ಗುರುತು ಹಿಡಿಯುವುದೇ ಕಷ್ಟವಾಗಿತ್ತು. ಮೈಗೆ ಒಳ್ಳೆಯ ಮೇಲಂಗಿಯನ್ನೂ, ತಲೆಗೆ ಅಡ್ಡಲಾಗಿರುವ ಚಿತ್ರದ ಲಾಂಛನವಿದ್ದ ಎಂಜನೀಯರ್‌ಗಳ ಟೋಪಿಯನ್ನೂ ಅವನು ಧರಿಸುತ್ತಿದ್ದ. ಅವನ ನೀಟಾದ ಗಡ್ಡವೂ ಮೀಸೆಯೂ ಅವನ ಗುರುತು ದೊರಕದಂತೆ ಮಾಡುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದುವು. ತಾನೂ ಅಜ್ಜನೂ ಕೂಡಿ ಸಮುದ್ರದಿಂದ ಮೇಲಕ್ಕೆತ್ತಿ ದೋಣಿಯಲ್ಲಿ ತಂದ ಮನುಷ್ಯ ಅವನೇ ಎಂಬುದನ್ನು ನಂಬಲಾಗದಷ್ಟು ಮಾರ್ಪಾಟಾಗಿದ್ದ. ಆದರೆ ಅವನ ವಿನೋದಶೀಲ ನೋಟ, ಆ ಚೂಪಾದ ಮುಗುಳ್ನಗೆ ಮತ್ತು ಅವನ ಕೈಯ ಮೇಲಿನ ಲಂಗರು ಇವುಗಳ ಮೇಲೆ ಒಂದು ಸಲ ದೃಷ್ಟಿ ಬಿದ್ದರೂ ಸಾಕು ಸಂದೇಹ ಉಳಿಯುತ್ತಿರಲಿಲ್ಲ.

ಏನನ್ನು ಕಂಡರೂ ಚಕಿತರಾಗಕೂಡದು, ಯಾರನ್ನೂ ಯಾವ ಕಾರಣದಿಂದಲೂ ಗುರುತಿಸಕೂಡದು ಮತ್ತು ನಾಲಗೆಯನ್ನು ಬಿಗಿಹಿಡಿದಿರಬೇಕು-ಇವು ಮೂರೂ ಯಾವ ದಾಖಲೆಯಲ್ಲೂ ಸಿಗದೆ ಇದ್ದ ಆದರೆ ಸುದೃಢವಾದ ಉಪನಗರದ ನಿಯಮಗಳಾಗಿದ್ದುವು. ಈ ನಿಯಮಗಳ ಪ್ರಕಾರ ಗಾವ್ರಿಕ್ ನಾವಿಕನನ್ನು ಯಾವಾಗ ಭೇಟಿಯಾದರೂ ತಾನೆಂದೂ ಹಿಂದೆ ಅವನನ್ನು ನೋಡಿಲ್ಲವೆಂಬಂತೆ ನಟಿಸುತ್ತಿದ್ದ. ನಾವಿಕನೂ ಕೂಡ ಗಾವ್ರಿಕನನ್ನು ಕಂಡರೆ ಅದೇ ರೀತಿ ನಡೆದುಕೊಳ್ಳುತ್ತಿದ್ದ.

ಒಂದೇ ಒಂದುಸಲ ನಾವಿಕ ಅಲ್ಲಿಂದ ಹೊರಕ್ಕೆ ಹೋಗುವಾಗ ಹಳೆಯಪರಿಚಿತನಂತೆ ತಲೆಯನ್ನು ಅಲ್ಲಾಡಿಸಿ ಕಣ್ಣು ಮಿಟುಕಿಸಿ ದೊಡ್ಡವರನ್ನು ಹೇಗೋ ಹಾಗೆ ಹುಡುಗನ ಬೆನ್ನು ತಟ್ಟಿದ.

"ಏಕಳುವೆ ಮರುಸ್ಯ ನೀನಿನ್ನು, ಎಂದಾದರು ನೀನೆನ್ನವಳು" ಎಂದು ಅವನು ಹಾಡಿದ್ದ. ಕುಳ್ಳಾದ ಬಾಗಿಲಿನಲ್ಲಿ ತಲೆಯನ್ನು ಬಗ್ಗಿಸಿಕೊಂಡು ಹೊರಬಂದು ಕತ್ತಲೆಯಲ್ಲಿ ಮಾಯವಾಗಿದ್ದ.

ಫೇನ್ ಕಾರ್ಖಾನೆ, ವೆಯಿನ್‌ಸ್ಟಿನ್ ಹಿಟ್ಟಿನ ಗಿರಣಿ, ಬಂದರುಕಟ್ಟೆ, ಬ್ರಾಡ್‌ಸ್ಕಿ ಕಾರ್ಖಾನೆ- ಹೀಗೇಯೇ ಇನ್ನೂ ಇತರ ಎಷ್ಟೋ ಕಡೆಯ ಜನಗಳು ಟೆರೆಂಟಿಯನ್ನು ನೋಡಲು ಬರುತ್ತಿದ್ದರು. ಆದರೆ ಅಧಿಕಾರಿಗಳು ಪತ್ತೆಹಚ್ಚಬೇಕೆಂದು ಕಣ್ಣಲ್ಲಿ ಎಣ್ಣೆಬಿಟ್ಟುಕೊಂಡು ಹುಡುಕಾಡುತ್ತಿದುದು ನಾವಿಕನಿಗಾಗಿ ಎಂಬುದನ್ನು ಗಾವ್ರಿಕ್ ಅರ್ಥಮಾಡಿಕೊಂಡಿದ್ದ.

ಶ್ಲಾಘನೀಯವಾದ ಹಾಗೂ ರಹಸ್ಯಮಯವಾದ "ಹೋರಾಟದ ಗುಂಪಿಗೆ" ನಾವಿಕ ಸೇರಿದ್ದನೆಂಬುದರಲ್ಲಿ ಸಂದೇಹವಿರಲಿಲ್ಲ. ಈಚೀಚೆಗೆ ಈ ಹೋರಾಟದ ವಿಷಯವನ್ನು ಉಪನಗರದಲ್ಲಿಯೇ ಅಲ್ಲದೆ ಆ ಪಟ್ಟಣದ ಎಲ್ಲೆಡೆಯಲ್ಲಿಯೂ ಜನರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದುದನ್ನು ಗಾವ್ರಿಕ್ ಕಂಡಿದ್ದ.

"ಏನು ಹಾಳು ಚಳಿ. ಆ ಮುದುಕನನ್ನು ಉಪನಗರಕ್ಕೆ ಕರೆದುಕೊಂಡು ಬರದೆ ಇನ್ನೆಲ್ಲಿಗೆ ತಾನೆ ಕರೆದುಕೊಂಡು ಹೋಗಲಿ.!" ಎಂದ ಗಾವ್ರಿಕ್.

ಟೆರೆಂಟಿ ಒಂದು ಕ್ಷಣ ಯೋಚಿಸಿ, ಆ ಬಳಿಕ "ಇಲ್ಲಿ ಕೇಳು. ಮೊದಲು ಪೋಲೀಸ್ ಠಾಣೆಯಿಂದ ನೇರವಾಗಿ ಸಮುದ್ರ ದಡದ ನಿಮ್ಮ ಗುಡಿಸಲಿಗೆ ಕರೆದುಕೊಂಡು ಹೋಗು. ಯಾರಾದರೂ

ನಿಮ್ಮನ್ನು ಹಿಂಬಾಲಿಸಿದರೆ ಅವರಿಗೆ ಏನೂ ತಿಳಿಯುವುದಿಲ್ಲ. ಕತ್ತಲೆಯಾಗುವವರೆಗೆ ಗುಡಿಸಲಿನಲ್ಲಿಯೇ ಇರಿ. ಅಲ್ಲಿಂದ ನೇರವಾಗಿ ನಾನು ಹೇಳುವ ಮನೆಗೆ ಹೋಗಿ. ವಿಳಾಸವನ್ನು ಮಾತ್ರ ಚೆನ್ನಾಗಿ ಮನನ ಮಾಡಿಕೋ. ಮಲಯ ಅರ್ನೌತ್ಸ್ಕಾಯ ರಸ್ತೆಯಲ್ಲಿ ಹದಿನೈದನೆ ನಂಬರಿನ ಮನೆ, ಬಾಗಿಲು ಕಾಯುವವನ್ನು ಕುರಿತು ಜೋಸೆಫ್ ಕಾರ್ಲೊವಿಚ್ ಯಾರು ಎಂದು ವಿಚಾರಿಸು. ಜೋಸೆಫ್ ಕಾರ್ಲೊವಿಚ್‌ನನ್ನು ಕಂಡಾಗ ಏನು ಹೇಳಬೇಕೆಂಬುದನ್ನು ಚೆನ್ನಾಗಿ ಜ್ಞಾಪಕವಿಟ್ಟುಕೋ. 'ಕ್ಷೇಮವೇ, ಜೋಸೇಫ್ ಕಾರ್ಲೊವಿಚ್. ನಿಕೊಲೈವ್‌ನಿಂದ ಏನಾದರೂ ಕಾಗದಗಳು ಬಂದಿವೆಯೇ ಎಂದು ಕೇಳಿಕೊಂಡು ಬರಲು ಸೋಫಿಯ ಪೆತ್ರೋವ್ನ ನನ್ನನ್ನು ಕಳಿಸಿದ್ದಾಳೆ' ಎಂದು ಹೇಳು. ಆಗ ಅವನು 'ಇಲ್ಲ, ಈಗ ಎರಡು ತಿಂಗಳುಗಳಿಂದ ಯಾವ ಕಾಗದವೂ ಇಲ್ಲ' ಎನ್ನುತ್ತಾನೆ. ತಿಳಿಯಿತೆ?"

"ಹೂ."

"ಹಾಗೆಯೇ ಪುನಃ ಹೇಳಬಲ್ಲೆಯೋ?"

"ಹೂ"

"ಎಲ್ಲಿ ಒಂದು ಸಲ ಹೇಳು ನೋಡೋಣ."

ಗಾವ್ರಿಕ್ ಹಣೆಯಲ್ಲಿ ಸುಕ್ಕು ಬರಿಸಿಕೊಂಡು ಮೂಗನ್ನು ಸುರುಟಿಕೊಂಡು ಪರೀಕ್ಷೆಯ ಸಮಯಕ್ಕಾಗಿ ತಲೆಯಲ್ಲಿ ತುಂಬಿದ್ದ ವಿಚಾರಗಳಲ್ಲಿ ತನಗೆ ಬೇಕಾದ್ದನ್ನು ಹುಡುಕಿ ತೆಗೆಯುವಂತೆ "ನಂ. ೧೫, ಮಲಯ ಅರ್ನೌತ್ಸ್ಕಾಯ ರಸ್ತೆ. ಬಾಗಿಲು ಕಾಯುವವನ್ನು ಕುರಿತು ಜೋಸೆಫ್ ಕಾರ್ಲೊವಿಚ್ ಅವರನ್ನು ನೋಡಬೇಕಾಗಿತ್ತು ಎನ್ನುತ್ತೇನೆ. ಆಮೇಲೆ ಅವರನ್ನು ಕುರಿತು ಕ್ಷೇಮವೇ, ಜೋಸೆಫ್ ಕಾರ್ಲೊವಿಚ್? ನಿಕೊಲೈವ್ ಎಂಬುವರಿಂದ ನಿಮಗೆ ಕಾಗದ ಬಂತೆ ಎಂದು ಕೇಳಿಕೊಂಡು ಬರುವಂತೆ ಸೋಫಿಯ ಪೆತ್ರೋವ್ನ ನನ್ನನ್ನು ಕಳಿಸಿದರು ಎನ್ನುತ್ತೇವೆ ಅದಕ್ಕೆ ಅವರು 'ಎರಡು ತಿಂಗಳುಗಳಿಂದ ಯಾವ ಕಾಗದವೂ ಬಂದಿಲ್ಲ' ಎನ್ನುತ್ತಾರೆ." ಎಂದು ಹೇಳಿದ.

"ಸರಿ. ಆಮೇಲೆ ಟೆರೆಂಟಿ ನಮ್ಮನ್ನು ಕಳಿಸಿದರು ಎಂದು ನೀನು ಅವರಿಗೆ ಹೇಳಲು ಹೆದರಬೇಕಾಗಿಲ್ಲ. ಸದ್ಯಕ್ಕೆ ಅಲ್ಲಿ ಆ ಮುದುಕನನ್ನು ಇಟ್ಟುಕೊಂಡು ಅವನಿಗೆ ಊಟ ಹಾಕುತ್ತಿರಬೇಕೆಂದು ಹೇಳು. ಆಮೇಲೆ ಮುಂದಕ್ಕೆ ಏನು ಮಾಡಬೇಕು ಎಂದು ನೋಡೋಣ. ಪುನಃ ನಾನು ಬಂದು ನೋಡುತ್ತೇನೆ. ಅರ್ಥವಾಯಿತೆ?"

"ಹೂ."

"ಸರಿ, ಹೋಗಿಬಾ."

ಟೆರೆಂಟಿ ಮನೆಗೆ ಹಿಂದಿರುಗಿದ. ಗಾವ್ರಿಕ್ ರೈಲಿನ ಕಡೆಗೆ ಆತುರ ಆತುರವಾಗಿ ಹೋದ. ರೈಲು ನಿಲ್ದಾಣದ ಹತ್ತಿರ ಬಂದಂತೆಲ್ಲ ಜನರ ಗುಂಪು ಒತ್ತಾಗುತ್ತ ಬಂದಿತು. ಗುಂಪಿನ ಮಧ್ಯೆ ನುಸಿದುಕೊಂಡು ಕೈಲಾದಷ್ಟು ಚುರುಕಾಗಿ ಓಡಿದ. ಸೆನ್ನಾಯ ಚೌಕದಲ್ಲಿ ರೈಲಿನಿಂದ ಬಿಡುಗಡೆ ಹೊಂದಿದ ಜನಗಳನ್ನು ಸಂಧಿಸಿದ. ಕೆಲವರು ಕಾಲು ನಡಿಗೆಯಲ್ಲಿ ಹೋಗುತ್ತಿದ್ದರು. ಕೆಲವರು ಗಂಟು ಮೂಟೆಗಳನ್ನು ತುಂಬಿಕೊಂಡು ಕುದುರೆ ಗಾಡಿಗಳಲ್ಲಿ ಹೋಗುತ್ತಿದ್ದರು. ಅವರನ್ನು ನೋಡಿದರೆ ರೈಲು ನಿಲ್ದಾಣದಿಂದ ಬರುತ್ತಿರುವವರಂತೆ ಕಾಣುತ್ತಿದ್ದರು. ಸ್ನೇಹಿತರು, ಬಂಧುಗಳು

ಅವರನ್ನು ಸುತ್ತುಗಟ್ಟಿದ್ದರು. ಅವರೆಲ್ಲ ಸಂತೋಷದಿಂದ ಟೋಪಿಗಳನ್ನು ತಲೆಯಮೇಲೆ ಆಡಿಸುತ್ತಿದ್ದರು. "ಸ್ವಾತಂತ್ರ್ಯ ಚಿರಾಯುವಾಗಲಿ! ಸ್ವಾತಂತ್ರ್ಯ ಚಿರಾಯುವಾಗಲಿ!" ಎಂದು ಜನಗಳ ಗುಂಪು ಹಾಡುತ್ತ ಕುದುರೆಗಾಡಿಗಳ ಪಕ್ಕದಲ್ಲಿ ಓಡಿಬರುತ್ತಿದ್ದಿತು.

ಅಲೆಗ್ಸಾಂಡ್ರೋವ್ಸ್ಕಿ ಜೈಲಿನ ಬಳಿಯಲ್ಲಂತೂ ಅಸಾಧ್ಯ ಗಲಾಟೆ, ಜೈಲಿನ ಸುತ್ತಲೂ ಪೋಲೀಸ್ ಅಶ್ವದಳದವರೂ ಕಾಲುದಳದವರೂ ನಿಂತು ಪಹರೆ ಕೊಡುತ್ತಿದ್ದರು. ಆ ಜನಗಳ ಗುಂಪಿನ ಮಧ್ಯೆ ದಾರಿಮಾಡಿಕೊಂಡು ಹೋಗಲು ಗಾವ್ರಿಕನೇ ಎದೆಗೆಟ್ಟ. ಆ ಅಸಾಧ್ಯ ಜನ ಸಂದಣಿಯಲ್ಲಿ ಅಜ್ಜ ತಪ್ಪಿಸಿಕೊಳ್ಳುವುದು ಸುಲಭವಾಗಿತ್ತು. ಅಜ್ಜ ತನಗೆ ಸಿಕ್ಕದೆ ಹೋಗಿ ಅವನೇನಾದರೂ ಟೆರೆಂಟಿಯ ಮನೆಗೆ ಹೋದರೆ ಅವನ ಬೆನ್ನು ಹತ್ತುವ ಸರ್ಕಾರಿಭೂತದ ನೆನಪಾಗಿ ಹುಡುಗನ ಮೈ ಬೆವರಿತು. ಹುಡುಗನ ಎದೆ ಬಡಿದುಕೊಳ್ಳುತ್ತಿತ್ತು. ಗುಂಪನ್ನು ತಪ್ಪಿಸಿಕೊಂಡು ಹೋಗಬೇಕೆಂದು ಪಕ್ಕದ ಗಲ್ಲಿಯೊಳಕ್ಕೆ ನುಗ್ಗಿದ. ನೇರವಾಗಿ ಜೈಲಿನ ಹತ್ತಿರಕ್ಕೆ ಹೋಗಿ ಅಜ್ಜನನ್ನು ಹುಡುಕಿಕೊಳ್ಳಬೇಕಾಗಿತ್ತು. ಆದರೆ ಅಷ್ಟರಲ್ಲಿ ಅಕಾಸ್ಮಾತ್ತಾಗಿ ಎರಡು ಮಾರುಗಳ ದೂರದಲ್ಲಿ ಅಜ್ಜನೇ ಬರುತ್ತಿದ್ದುದು ಗಾವ್ರಿಕನ ಕಣ್ಣುಗಳಿಗೆ ಬಿದ್ದಿತು. "ದೇವರೇ, ಇವನೇ ನನ್ನ ಅಜ್ಜನೇ?" ಎಂದು ಬಾಯಲ್ಲಿ ಗೊಣಗಿಕೊಳ್ಳುತ್ತ ನೋಡಿದ. ಏಕಾಏಕಿ ಅಜ್ಜನನ್ನು ಗುರುತಿಸುವುದೇ ಕಷ್ಟವಾಗಿತ್ತು.

ಗ್ಯಾವ್ರಿಕನ ಎದುರುಗಡೆಯಲ್ಲಿ ಬರುತ್ತಿದ್ದವನು ಬಿಳಿ ನರೆಗೂದಲಿನ ಗಡ್ಡದ, ನೀರು ತುಂಬಿದ ನೀಲಿಗಣ್ಣುಗಳ, ಹಲ್ಲುದುರಿದ ಬಚ್ಚುಬಾಯಿಯ ಜರ್ಜರಿತಾಂಗನಾದ ಮುದುಕ. ದಾರಿಯ ಪಕ್ಕಕ್ಕಿದ್ದ ಸಾಲುಮನೆಗಳ ಗೋಡೆಯ ಪಕ್ಕದಲ್ಲಿಯೇ ಅವನು ನಡೆದು ಬರುತ್ತಿದ್ದ. ಅವನ ಕಾಲುಗಳು ಬಗ್ಗಿದ್ದುವು, ಅಲ್ಲದೆ ಹತ್ತಿಯಿಂದ ಮಾಡಿದುವುಗಳಂತೆ ತತ್ತರಿಸುತ್ತಿದ್ದುವು. ಹರಿದು ಹೋದ ಬೂಡ್ಸುಗಳಿದ್ದ ಕಾಲನ್ನು ಬಹು ಕಷ್ಟದಿಂದ ಎಳೆದು ಎಳೆದು ಇಡುತ್ತಿದ್ದ. ಪ್ರತಿ ಎರಡು ಹೆಜ್ಜೆಗಳಿಗೊಂದು ಸಲ ಸುಧಾರಿಸಿಕೊಳ್ಳಲು ಹಾಗೆಯೇ ನಿಂತುಕೊಳ್ಳುತ್ತಿದ್ದ. ಮುದುಕನ ಕೈಗಳಿಂದ ನೇತಾಡುತ್ತಿದ್ದ ಆ ಬುಟ್ಟಿಯಿಲ್ಲದೆ ಇದ್ದಿದ್ದರೆ ಗಾವ್ರಿಕನಿಗೆ ಅಜ್ಜನ ಗುರುತು ಖಂಡಿತ ಸಿಗುತ್ತಿರಲಿಲ್ಲ. ಹೆಣಿಕೆ ಕಡ್ಡಿಯ ಸುಪರಿಚಿತವಾದ ಬುಟ್ಟಿ ಮತ್ತು ಅದಕ್ಕೆ ಹೊದಿಸಿದ್ದ ಮಲಿನವಾದ ಕ್ಯಾನ್‌ವಾಸ್ ಬಟ್ಟೆ ಗಾವ್ರಿಕನ ಕಣ್ಣುಗಳನ್ನು ಆಕರ್ಷಿಸಿದುವು. ಈ ಸ್ಥಿತಿಯಲ್ಲಿ ಅಜ್ಜನನ್ನು ನೋಡಿ ಗಾವ್ರಿಕನ ಎದೆ ದುಃಖದಿಂದ ಮುರುಟಿಕೊಂಡಿತು. "ಅಜ್ಜ! ಅಜ್ಜ! ನೀನೇನು?" ಗಾಬರಿಯ ದನಿಯಲ್ಲಿ ಗಾವ್ರಿಕ್ ಕೂಗಿಕೊಂಡ.

ಮುದುಕ ಸ್ವಲ್ಪವೂ ಚಕಿತನಾಗಲಿಲ್ಲ. ನಿಧಾನವಾಗಿ ಸೊಂಟವನ್ನು ಹಿಡಿದುಕೊಂಡು ನಿಂತು ಗಾವ್ರಿಕನ ಕಡೆಗೆ ಮುಖವನ್ನು ತಿರುಗಿಸಿದ. ಆ ಮುಖದಲ್ಲಿ ಕಷ್ಟಕ್ಕೆ ತಲೆಗೊಟ್ಟವನ ಗಟ್ಟಿಮನಸ್ಸಿನ ವಿಧೇಯಭಾವವಲ್ಲದೆ ಉಲ್ಲಾಸವಾಗಲಿ ಉದ್ವೇಗವಾಗಲಿ ಕಾಣಬರಲಿಲ್ಲ. ಅವನು ನಿರಾತಂಕವಾಗಿ ತುಟಿಗಳನ್ನು ಅಗಿಯುತ್ತಿದ್ದ. ಕಣ್ಣೀರು ತುಂಬಿದ ನೋಟ ದೂರದ ಯಾವುದೋ ಒಂದು ವಸ್ತುವನ್ನು ದಿಟ್ಟಿಸಿನೋಡುವಂತೆ ಇದ್ದಿತು. ಮೊಮ್ಮಗನನ್ನು ತಾನು ನೋಡಲಿಲ್ಲವೇನೋ ಎನ್ನುವಷ್ಟು ಮಟ್ಟಿಗೆ ಅವನ ದೃಷ್ಟಿ ನಿಶ್ಚಲವಾಗಿದ್ದಿತು.

"ಅಜ್ಜ, ಎಲ್ಲಿಗೆ ಹೋಗುತ್ತಾ ಇದ್ದೀಯೆ?" ಮುದುಕ ಕಿವುಡನೋ ಎಂಬಂತೆ ಉಚ್ಚಕಂಠದಿಂದ ಗಾವ್ರಿಕ್ ಕೇಳಿದ.

ಬಹುಹೊತ್ತು ತುಟಿಗಳನ್ನು ಅಗಿಯುತ್ತ ಇದ್ದು, ಆ ಬಳಿಕ "ಉಪನಗರಕ್ಕೆ" ಎಂದ ಶಾಂತವಾಗಿ ಸಹಜ ಧ್ವನಿಯಲ್ಲಿ ಹೇಳಿದ.

ಗಾವ್ರಿಕ್ ಹೆಗಲಿನ ಮೇಲಿನಿಂದ ದೃಷ್ಟಿಯನ್ನು ಹಾಯಿಸುತ್ತ "ನೀನು ಅಲ್ಲಿಗೆ ಹೋ ಕೂಡದು. ದೇವರಾಣೆ ನೀನು ಅಲ್ಲಿಗೆ ಬರಬಾದು ಎಂದು ಟೆರೆಂಟಿ ಹೇಳಿದ್ದಾನೆ" ಎಂದ.

ಮುದುಕನೂ ಕೂಡ ಹುಡುಗನಂತೆಯೇ ಹೆಗಲಿನ ಮೇಲಿನಿಂದ ದೃಷ್ಟಿಯನ್ನು ಹಾಯಿಸಿದ ಆದರೆ ಅದು ನಿಧಾನವಾಗಿ ನಿರ್ಲಕ್ಷ್ಯವಾಗಿ, ಯಾಂತ್ರಿಕವಾಗಿತ್ತು.

"ಮೊದಲು ಮನೆಗೆ ಹೋಗೋಣ ಬಾ, ಅಜ್ಜ. ಆ ಮೇಲೆ ಮುಂದಿನ ವಿಷಯ ನೋಡೋಣ.

ಅಜ್ಜ ವಿಧೇಯತೆಯಿಂದ ಹಿಂದಕ್ಕೆ ತಿರುಗಿದ. ಮರು ಮಾತನಾಡದೆ ಶ್ರಮದಿಂದ ಒಂದ ಹೆಜ್ಜೆಯ ಮುಂದೆ ಇನ್ನೊಂದು ಹೆಜ್ಜೆಯನ್ನಿಡುತ್ತ ನಡೆದ. ಗಾವ್ರಿಕ್ ಅಜ್ಜನಿಗೆ ತನ್ನ ಭುಜವನ ಆಸರೆಯಾಗಿ ಕೊಟ್ಟ. ಮುದುಕ ಅವನ ಮೇಲೆ ಭಾರವನ್ನುಬಿಟ್ಟು ಬಾಗಿದ. ಪ್ರಕ್ಷುಬ್ಧವಾಗಿ ನಗರದ ಕಡೆಗೆ ಬೆನ್ನುಮಾಡಿಕೊಂಡು ಸಮುದ್ರಕ್ಕೆ ಅಭಿಮುಖವಾಗಿ ಅವರು ನಡೆಯಲಾರಂಭಿ ದರು; ಕುರುಡನ ಕೈಗೋಲಿನಂತೆ ಹುಡುಗ ಮುಂದೆ, ಕುರುಡನಂತೆ ಮುದುಕ ಹಿಂದೆ.

ಮುದುಕ ನಡುನಡುವೆ ವಿಶ್ರಾಂತಿಗಾಗಿ ನಿಲ್ಲುತ್ತಿದ್ದ. ಪೋಲೀಸ್‌ಠಾಣೆಯಿಂದ ಸಮುದ್ರ ತೀರವನ್ನು ಸೇರಲು ಎರಡುಗಂಟೆಗಳ ಕಾಲ ಹಿಡಿಯಿತು. ಗಾವ್ರಿಕ್ ಒಬ್ಬನೇ ಆಗಿದ್ದಿದ್ದರೆ ಹ ನೈದು ನಿಮಿಷಗಳಲ್ಲಿ ಆ ದೂರವನ್ನು ನಡೆಯುತ್ತಿದ್ದ.

ಬಾಗಿಲ ಬೀಗವು ಗುಡಿಸಿಲಿನ ಬಳಿ ಗಿಡಗಳಲ್ಲಿ ಬಿದ್ದಿತ್ತು. ಬಾಗಿಲು ಮೇಲುಗಡೆಯ ತಿ ಪೊಂದರ ಆಧಾರದಿಂದ ಬಾಗಿ ನಿಂತಿದ್ದಿತು. ಗಾಳಿಬಂದಾಗಲೆಲ್ಲ ತೂಗಾಡುತ್ತ ಅದು ಕಿರುಗುಟ್ತಿತ್ತು. ಕಪ್ಪುಗಟ್ಟಿದ ಹಲಗೆಗಳ ಮೇಲೆ ಹಿಂದೆ ಅಜ್ಜ ಹಾಕಿದ್ದ ಸುಣ್ಣದ ಉಳಿಕೆಯೂ ಕೂ ಶರತ್ಕಾಲದ ಮಳೆಯಿಂದ ತೊಳೆದು ಹೋಗಿತ್ತು. ಸೂರಿನಮೇಲೆ ಜೊಂಡು ಹುಲ್ಲು ಹರಡಿತ್ತು ಇದು ಪಕ್ಷಿಹಿಡಿಯುವವರ ಕೆಲಸವಾಗಿತ್ತು. ಅವರು ಗುಡಿಸಿಲನ್ನೇ ಹಕ್ಕಿಗಳ ಬೋನಾಗಿ ಮಾಪ ಡಿಸಿದ್ದರು.

ಒಳಗೆಲ್ಲ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದುವು. ಹರಿದ ಹಾಸಿಗೆ ಮತ್ತು ದಿಂ ಒದ್ದೆಯಾಗಿ ಮಣ್ಣುಮೆತ್ತಿಕೊಂಡು ಒಂದು ಮೂಲೆಯಲ್ಲಿ ಬಿದ್ದಿದ್ದುವು. ಚಿಕ್ಕ ಕಬ್ಬಿಣದ ಪೆ ಗೆಯನ್ನು ಯಾರೂ ಮುಟ್ಟಿರಲಿಲ್ಲ. ಅದು ತನ್ನ ಮೊದಲಿನ ಸ್ಥಳದಲ್ಲಿಯೇ ಇದ್ದಿತು. ಸಾವಧ ನವಾಗಿ ಮುದುಕ ತನ್ನ ಮನೆಯನ್ನು ಪ್ರವೇಶಿಸಿದ. ಹಾಸಿಗೆಯ ಅಂಚಿನಲ್ಲಿ ಕುಳಿತುಕೊಂ ಬುಟ್ಟಿಯನ್ನು ತೊಡೆಗಳ ಮೇಲಿಟ್ಟುಕೊಂಡ. ಅವನು ಗುಡಿಸಿಲಿನ ಆ ರಂಪವನ್ನು ಗಮನಿಸ ಒಂದು ಮೂಲೆಯನ್ನೇ ದೃಷ್ಟಿಸುತ್ತ ಇದ್ದ.

ಒಂದೆರಡು ನಿಮಿಷ ಅಲ್ಲಿ ಕುಳಿತಿದ್ದು ವಿಶ್ರಾಂತಿ ತೆಗೆದುಕೊಂಡು ಪುನಃ ಅಲ್ಲಿಂದ ಹೊರ ಬಿಡುವ ಆಗಂತುಕನಂತೆ ಮುದುಕ ನಿರಾತಂಕವಾಗಿದ್ದ.

ಒಡೆದ ಕಿಟಕಿಯ ಮೂಲಕ ನೀರಿನ ತುಂತುರುಗಳನ್ನು ಹಾರಿಸುತ್ತ ಬಲವಾದ ಗ ಸಮುದ್ರದಿಂದ ಬೀಸಿತು. ನಿರ್ಜನವಾದ ಕಡಲಿನ ತೀರದುದ್ದಕ್ಕೂ ಬಿರುಗಾಳಿ ಬೀಸುತ್ತಿ ಪ್ರತಿಧ್ವನಿಸುತ್ತಿದ್ದ ಸಮುದ್ರ ತೀರದ ದಿಣ್ಣೆಯ ಮೇಲುಗಡೆಯಲ್ಲಿ ಸಮುದ್ರ ಶ್ವೇತಪಕ್ಷಿಗಳು ಹ ಹೋಗುತ್ತಿದ್ದುವು ಮತ್ತು ನೊರೆಗಳ ಬಿಳಿಯ ಗುಚ್ಛಗಳನ್ನು ಗಾಳಿಯು ಹಾರಿಸಿಕೊಂಡು ಹೊ

ತ್ತಿದ್ದಿತು. ದಡದುದ್ದಕ್ಕೂ ಇದ್ದ ಗುಹೆಗಳಿಂದ ಅಲೆಗಳ ಘೋರ್ಗರೆತದ ಅಬ್ಬರ ಮಾರ್ದನಿಯಾಗಿ ಹೊರಬರುತ್ತಿದ್ದಿತು.

"ಮಲಗಿಕೋ, ಅಜ್ಜ."

ಅಜ್ಜ ವಿಧೇಯನಂತೆ ಮಲಗಿದ. ಗಾವ್ರಿಕ್ ಅವನ ತಲೆಯಡಿಗೆ ದಿಂಬನ್ನು ಕೊಟ್ಟು ಅವನ ದೇಹದ ಮೇಲೆ ದಟ್ಟವನ್ನು ಹೊದಿಸಿದ. ಮುದುಕ ಕಾಲುಗಳನ್ನು ಮಡಿಸಿಕೊಂಡ. ಅವನು ನಡುಗುತ್ತಿದ್ದ.

"ಯೋಚನೆ ಮಾಡಬೇಡ. ಅಜ್ಜ. ಕತ್ತಲೆಯಾದ ಮೇಲೆ ಬೇರೆಲ್ಲಿಗಾದರೂ ಹೋಗೋಣ. ಅದುವರೆಗೆ ವಿಶ್ರಾಂತಿ ತೆಗೆದುಕೋ." ಎಂದು ಸಮಾಧಾನದ ಮಾತನಾಡಿದ ಮೊಮ್ಮಗ.

ಅಜ್ಜ ಉತ್ತರ ಕೊಡಲಿಲ್ಲ. ಅಲಕ್ಷ್ಯ ಮತ್ತು ಬಂದುದನ್ನು ಅನುಭವಿಸುವ ವಿನಯ ಭಾವಗಳು ಅವನಲ್ಲಿ ಎದ್ದು ಕಾಣುತ್ತಿದ್ದುವು. ಅಡಿಮೇಲಾಗಿರಿಸಿದಂತೆ ಕಾಣಬರುತ್ತಿದ್ದ ಊದಿಕೊಂಡು ನೀರು ತುಂಬಿದ್ದ ಕಣ್ಣುಗಳನ್ನು ಗಾವ್ರಿಕನ ಕಡೆಗೆ ತಿರುಗಿಸಿದ. ಬಹು ಹೊತ್ತು ಬತ್ತಿದ ತುಟಿಗಳನ್ನು ಅಗಿದ ಬಳಿಕ "ದೋಣಿ ಸುರಕ್ಷಿತವಾಗಿದೆಯೆ?" ಎಂದು ಕೇಳಿದ. ದೋಣಿ ನೆರೆಯವನೊಬ್ಬನ ಬಳಿ ಸುರಕ್ಷಿತವಾಗಿದೆಯೆಂದು ನಂಬಿಕೆ ಹುಟ್ಟುವಂತೆ ಗಾವ್ರಿಕ್ ಹೇಳಿದ. ಅಜ್ಜ ಒಪ್ಪಿದನೆಂಬಂತೆ ತಲೆಯನ್ನಲ್ಲಾಡಿಸಿ ಪುನಃ ಮೌನವಾಂತ.

ಒಂದು ಗಂಟೆಯ ಬಳಿಕ ಅಜ್ಜ ಇನ್ನೊಂದು ಮಗ್ಗುಲಾಗಿ ಮಲಗಿ ಒಂದು ಸಲ ನರಳಿದ.

"ನೋಯುತ್ತದೆಯೆ ಅಜ್ಜ?"

"ಅವರು ನನ್ನನ್ನು ಹೊಡೆದರು. ನನ್ನ ಕರುಳು ಕಿತ್ತು ಬರುವ ಹಾಗೆ ಚಚ್ಚಿದರು." ಮುದುಕ ಹಲ್ಲುಗಳಿಲ್ಲದ ನಸುಗೆಂಪು ಬಣ್ಣದ ಒಸಡನ್ನು ಪ್ರದರ್ಶಿಸಿ ಪಶ್ಚಾತ್ತಾಪ ಪೂರ್ಣವಾದ ಮುಗುಳುನಗೆಯಿಂದ ಹೇಳಿದ. ಮುದುಕನ ಸಂಕಟವನ್ನು ನೋಡಲಾರದೆ ಗಾವ್ರಿಕ್ ಮುಖ ಮುಚ್ಚಿಕೊಂಡ. ಅಂದು ಸಂಜೆಯವರೆಗೆ ಆ ಮುದುಕ ಇನ್ನೊಂದು ಮಾತನ್ನಾಡಲಿಲ್ಲ. ಕತ್ತಲೆಯಾದ ಬಳಿಕ ಗಾವ್ರಿಕ್ "ಬಾ, ಅಜ್ಜ." ಎಂದು ಕರೆದ. ಮುದುಕ ತನ್ನ ಬುಟ್ಟಿಯನ್ನು ಹಿಡಿದುಕೊಂಡು ಮೇಲಕ್ಕೆದ್ದ. ಅಲ್ಲಿಂದ ಅವರು ಕಿಟಕಿ ಬಾಗಿಲುಗಳು ಮುಚ್ಚಿದ ಮನೆಗಳನ್ನೂ, ಬಾಗಿಲು ಬಂದು ಮಾಡಿದ ಬಂದೂಕು ಹಾರಿಸುವ ಕ್ರೀಡಾಂಗಣವನ್ನೂ, ಉಪಹಾರ ಮಂದಿರವನ್ನೂ ದಾಟಿ ಮಲಯ ಅರ್ನೌತ್ಸ್ಕಾಯ ರಸ್ತೆಯ ಹದಿನೈದನೆಯ ನಂಬರಿನ ಮನೆಗೆ ಹೊರಟರು.

ಬಾಗಿಲು ಕಾಯುವವನನ್ನು ವಿಚಾರಿಸಿದ ಬಳಿಕ ಜೋಸೆಫ್ ಕಾರ್ಲೋವಿಚ್‌ನ ಕೊಠಡಿಯನ್ನು ಮನೆಯ ಅಡಿಪಾಯಕ್ಕೆ ಸೇರಿದಂತಿದ್ದ ಕತ್ತಲೆಯ ಭಾಗದಲ್ಲಿ ಕಂಡು ಹಿಡಿಯುವುದು ಕಷ್ಟವಾಗಲಿಲ್ಲ. ಬಾಗಿಲಿಗೆ ಅಂಟಿಸಿದ್ದ ಫೆಲ್ಟ್ ಬಟ್ಟೆ ಹರಿದಿತ್ತು. ಗಾವ್ರಿಕ್ ಬಾಗಿಲನ್ನು ತಟ್ಟಿದ.

"ಯಾರದು?" ಪರಿಚಿತವಾದ ಒಂದು ಧ್ವನಿ ಕೇಳಿಸಿತು.

"ಜೋಸೆಫ್ ಕಾರ್ಲೋವಿಚ್ ಇಲ್ಲಿದ್ದಾರೋ?"

"ನಿನಗೇನು ಬೇಕು?"

"ಬಾಗಿಲು ತೆಗೆಯಿರಿ. ಸೋಫಿಯ ಪೆತ್ರೋವ್ನ ನನ್ನನ್ನು ಕಳಿಸಿದಳು."

ತಕ್ಷಣ ಬಾಗಿಲು ತೆರೆಯಿತು. ಪ್ಯಾರಾಫಿನ್ ಎಣ್ಣೆಯ ದೀಪವನ್ನು ಕೈಯಲ್ಲಿ ಹಿಡಿದು ಎದುರಿಗೆ ಬಂದು ನಿಂತ ಬಂದೂಕು ಹಾರಿಸುವ ಕ್ರೀಡಾಂಗಣದ ಯಜಮಾನನನ್ನು ಕಂಡು ಗಾವ್ರಿಕ

ನಿಗೆ ಆಶ್ಚರ್ಯವಾಯಿತು. ಅವನು ಬಿಗುವಾನದಿಂದ ಮೌನವಾಗಿ ಹುಡುಗನ ಮೇಲೆ ದೃಷ್ಟಿಯನ್ನು ಬೀರಿದ!

"ನಾನೇ ಜೋಸೆಫ್ ಕಾರ್ಲೊವಿಚ್. ನಿನಗೇನು ಬೇಕಾಗಿತ್ತು?" ನಿಂತ ಸ್ಥಳದಿಂದ ಕದಲದೆ ಪ್ರಶ್ನಿಸಿದ.

ಚೆನ್ನಾಗಿ ಗಟ್ಟಿಮಾಡಿಕೊಂಡು ಬಂದ ಪಾಠವನ್ನು ಒಪ್ಪಿಸುವಂತೆ ಗಾವ್ರಿಕ್ "ಕ್ಷೇಮವೇ ಜೋಸೆಫ್ ಕಾರ್ಲೊವಿಚ್? ನಿಕೊಲೈವ್ ಎಂಬುವನಿಂದ ಏನಾದರೂ ಕಾಗದ ಬಂದಿತೇ ಎಂದು ಕೇಳಿಕೊಂಡು ಬರುವಂತೆ ಸೋಫಿಯ ಪೆತ್ರೋವ್ನ ನನ್ನನ್ನು ಕಳಿಸಿದ್ದಾಳೆ." ಎಂದು ಹೇಳಿದ.

ಬಂದೂಕುಹಾರಿಸುವ ಕ್ರೀಡಾಂಗಣದ ಯಜಮಾನನು ಆಶ್ಚರ್ಯದಿಂದ ಹುಡುಗನನ್ನು ತಲೆಯಿಂದ ಕಾಲಿನವರೆಗೆ ಪರೀಕ್ಷಿಸಿದ. ಗಾವ್ರಿಕ್ ಬಾಲಕನಾಗಿದ್ದರೂ ಕೂಡ ಈ ಪರೀಕ್ಷೆಯ ಕೆಲಸ ಅವನಿಗೆ ಎರಡು ನಿಮಿಷಗಳ ಕಾಲವನ್ನು ತೆಗೆದುಕೊಂಡಿತು. ಕೊನೆಗೆ ಮೊದಲಿಗಿಂತ ಹೆಚ್ಚಿನ ಬಿಗುವಾನದಿಂದ "ಎರಡು ತಿಂಗಳಿಂದ ಯಾವ ಕಾಗದವೂ ಇಲ್ಲ." ಎಂದ. ಒಂದು ನಿಮಿಷ ಸುಮ್ಮನಿದ್ದು, ಬಳಿಕ ಪಶ್ಚಾತ್ತಾಪಪೂರ್ಣವಾಗಿ ತಲೆಯನ್ನು ಅಲ್ಲಾಡಿಸುತ್ತ "ಕಾಲಕ್ಕೆ ಸರಿಯಾಗಿ ನಡೆದುಕೊಳ್ಳದ ಇಂಥ ಹೆಂಗಸನ್ನು ನಾನು ನೋಡಿರಲಿಲ್ಲ; ನಾಚಿಕೆಗೇಡು." ಎಂದು ನುಡಿದ.

ಮರುನಿಮಿಷದಲ್ಲಿ ಪೋಪ್‌ಗುರುವಿನ ನಿಯೋಗಿಯನ್ನು ತನ್ನ ರಾಜ್ಯಕ್ಕೆ ಸ್ವಾಗತಿಸುವ ಪೋಲೆಂಡಿನ ಶ್ರೀಮಂತ ಪ್ರಭುವಿನಂತೆ ಅವನ ಮುಖ ವಿನಯೌದಾರ್ಯಭಾವವನ್ನು ಪ್ರದರ್ಶಿಸಿತು. ಅಂಗಿಯ ಒಳಗಡೆ ಷರಟಿನ ಮತ್ತು ಕಾಲಿನಲ್ಲಿ ಪಾದರಕ್ಷೆಯ ಅಭಾವವಿದ್ದ ಅವನ ಆ ಸ್ಥಿತಿಗೆ ಅವನ ಆ ಮುಖಭಾವ ಹೊಂದುತ್ತಿರಲಿಲ್ಲ.

"ಒಳಕ್ಕೆ ಬಾ ಮಗು, ಅನೇಕವೇಳೆ ನೀನು ನನ್ನ ಕ್ರೀಡಾಂಗಣಕ್ಕೆ ಬಂದಿದ್ದೀಯಲ್ಲವೆ? ಎಂಥ ಆನಂದದ ಸಂಘಟನೆ! ಈ ಮುದುಕ ನಿನ್ನ ಅಜ್ಜನಿರಬೇಕಲ್ಲವೆ? ದಯವಿಟ್ಟು ಒಳಕ್ಕೆ ಬನ್ನಿ."

ಅಜ್ಜ ಮತ್ತು ಮೊಮ್ಮಗ ಇಬ್ಬರೂ ಬಿಸಿಗಾಳಿಯಿಂದ ಕೂಡಿದ ಬಿಲದಂಥ ಕೊಠಡಿಯನ್ನು ಪ್ರವೇಶಿಸಿದರು. ಅಲ್ಲಿಯ ಬಡತನ ಅವರನ್ನು ಬೆರಗುಗೊಳಿಸಿತು. ಬಂದೂಕು ಕ್ರೀಡಾಂಗಣದ ಯಜಮಾನ, ನಾಲ್ಕು ಮಾಂಟೆಕ್ರಿಸ್ಟೊ ಪಿಸ್ತೂಲುಗಳ ಒಡೆಯ, ಯಾರನ್ನು ತಾನು ಅತಿಧನಿಕನೆಂದು ಭಾವಿಸಿದ್ದನೋ ಅಂಥ ಮನುಷ್ಯ ಈ ಸ್ಥಿತಿಯಲ್ಲಿರುತ್ತಾನೆ ಎಂದು ಗಾವ್ರಿಕ್ ಊಹಿಸುವುದೂ ಸಾಧ್ಯವಿರಲಿಲ್ಲ.

ಹಸುರುಬಣ್ಣ ಬಳಿದ ಬೆತ್ತಲೆ ಗೋಡೆಗಳು. ಆ ಗೋಡೆಗಳ ಮೇಲೆಲ್ಲ ಬಂದೂಕು ಮತ್ತು ಪಿಸ್ತೂಲುಗಳನ್ನು ಕಾಣಬೇಕಿತ್ತು. ಆದರೆ ಕುದುರೆಗಳ ಕಡಿವಾಣದಂತೆ ಕಾಣುತ್ತಿದ್ದ ಕೊಳಕಾದ ಷರಾಯಿಯ ಹೆಗಲುಪಟ್ಟಿಗಳ ಒಂದು ಜತೆ ಮಾತ್ರ ಒಂದು ಕಡೆ ಮೊಳೆಯಿಂದ ನೇತಾಡುತ್ತಿತ್ತು.

"ನಿಮ್ಮ ಪಿಸ್ತೂಲುಗಳೆಲ್ಲ ಎಲ್ಲಿ?" ಎಂದು ದಿಗಿಲಿನಿಂದ ಗಾವ್ರಿಕ್ ಪ್ರಶ್ನೆಮಾಡಿದ.

ಪ್ರಶ್ನೆ ಕಿವಿಯ ಮೇಲೆ ಬೀಳಲೇ ಇಲ್ಲವೋ ಎಂಬಂತೆ ಜೋಸೆಫ್ ಕಾರ್ಲೊವಿಚ್ ನಟಿಸಿದ. ಕೈಬೀಸಿ ಕುಳಿತುಕೊಳ್ಳಬೇಕೆಂದು ಸೂಚಿಸಿದ.

"ನೀವೇನಾದರೂ ಹೇಳುವುದಿದೆಯೆ?" ಎಂದು ಮೆತ್ತನೆಯ ದನಿಯಲ್ಲಿ ಒಂದು ಮೂಲೆ

ಯಲ್ಲಿ ನಿಂತುಕೊಂಡು ಕೇಳಿದ.

ಅಜ್ಜನನ್ನು ಸದ್ಯಕ್ಕೆ ಅವನೊಡನೆ ಇಟ್ಟುಕೊಳ್ಳಬೇಕೆಂದು ತನ್ನ ಅಣ್ಣ ಹೇಳಿದನೆಂದು ಗಾವ್ರಿಕ್ ತಿಳಿಸಿದ.

"ನನ್ನ ಕೈಯಲ್ಲಿ ಸಾಧ್ಯವಾದುದನ್ನೆಲ್ಲ ಮಾಡುತ್ತೇನೆ. ಇದರಲ್ಲಿ ತಪ್ಪು ತಿಳಿದುಕೊಳ್ಳ ಬೇಕಾಗಿಲ್ಲವೆಂದು ನಿಮ್ಮಣ್ಣನಿಗೆ ಹೇಳು. ನಗರದಲ್ಲಿ ನನ್ನ ಪರಿಚಿತರು ಕೆಲವರಿದ್ದಾರೆ. ಅಲ್ಲೆಲ್ಲಾದರೂ ಅವನಿಗೆ ಒಂದು ರಾತ್ರಿಯ ಕಾವಲುಗಾರನ ಕೆಲಸವನ್ನು ಕೊಡಿಸಲು ಪ್ರಯತ್ನಿಸುತ್ತೇನೆ." ಎಂದು ಆತುರ ಆತುರವಾಗಿ ಜೋಸೆಫ್ ಕಾರ್ಲೊವಿಚ್ ಹೇಳಿದ.

ಆಗಾಗ್ಗೆ ಬಂದು ನೋಡಿಕೊಂಡು ಹೋಗುವುದಾಗಿ ಹೇಳಿ ಅಜ್ಜನನ್ನು ಜೋಸೆಫ್ ಕಾರ್ಲೊವಿಚ್‌ನ ಬಳಿ ಬಿಟ್ಟು ಗಾವ್ರಿಕ್ ಅಲ್ಲಿಂದ ಹೊರಟು ಹೋದ. ಹೋಗುವಾಗ ಬಂದೂಕು ಕ್ರೀಡಾಂಗಣದ ಯಜಮಾನ ಬಾಗಿಲಿಗೆ ಬಂದು ಕಿವಿಯಲ್ಲಿ "ನಿಮ್ಮ ಅಣ್ಣನಿಗೆ ಹೇಳು 'ಸೋಫಿಯಾ ಪೆತ್ರೋವ್ನ ಬಳಿ ಕಾಯಿಗಳು ಸಮೃದ್ಧಿಯಾಗಿವೆ. ಆದರೆ ಅವು ದಪ್ಪವಾಗಿಲ್ಲ ಎಂಬುದೇ ಚಿಂತೆ. ಆವು ಅಕ್ಷೋಟಮರದಕಾಯಿಗಳಲ್ಲ.' ಸರಿಯಾಗಿ ಹೇಳು ಅವನಿಗೆ ತಿಳಿಯುತ್ತದೆ. 'ಅಕ್ಷೋಟ ಮರದ ಕಾಯಿಗಳಲ್ಲ. ಅವುಗಳ ಸಾಗಣೆಗೆ ಏರ್ಪಾಡು ಮಾಡಲಿ'. ತಿಳಿಯಿತೆ?" ಎಂದು ಹೇಳಿದ. ಇಂಥ ಸಂದೇಶಗಳನ್ನು ಒಯ್ಯುವುದರಲ್ಲಿ ಪಳಗಿದ್ದ ಗಾವ್ರಿಕ್ ಆಗಲಿ ಎಂದ. ಆದರೂ ಪುನಃ ಅವನು "ಅಕ್ಷೋಟ ಮರದ ಕಾಯಿಗಳಲ್ಲ. ಅವುಗಳಿಗಾಗಿ ಯಾರನ್ನಾದರೂ ಕಳಿಸಲಿ." ಎಂದು ಹೇಳುತ್ತೇನೆ ಎಂದ. ಅದಕ್ಕೆ ಜೋಸೆಫ್ ಕಾರ್ಲೊವಿಚ್ "ಸರಿ" ಎಂದು ನುಡಿದ.

ಜೋಸೆಫ್ ಕಾರ್ಲೊವಿಚ್ ತನ್ನ ಅಂಗಿಯ ಕಳ್ಳ ಜೇಬನ್ನು ಹುಡುಕಿ ಹತ್ತು ಕೊಪೆಕ್ಕಿನ ನಾಣ್ಯವೊಂದನ್ನು ಹೊರತೆಗೆದ. "ಇದರಿಂದ ಏನಾದರೂ ಮಿಠಾಯಿ ಕೊಂಡುಕೋ. ನನ್ನ ಹತ್ತಿರ ಇನ್ನೇನೂ ಇಲ್ಲ ಎಂದು ಹೇಳಲು ದುಃಖವಾಗುತ್ತದೆ. ನಾನು ನಿಜವಾಗಿಯೂ ನಿನಗೆ ಒಂದು ಮಾಂಟೆಕ್ರಿಸ್ಟೋ ಪಿಸ್ತೂಲನ್ನು ಕೊಡಬೇಕು. ಅದರಿಂದ ನಿನಗೆ ಎಷ್ಟು ಸಂತೋಷವಾಗುತ್ತದೆಯೋ! ಆದರೆ ನನ್ನ ಕೆಟ್ಟ ಚಾಳಿಯ ಕಾರಣದಿಂದಾಗಿ ನನ್ನ ಹತ್ತಿರ ಒಂದಾದರೂ ಉಳಿದಿಲ್ಲ." ಜೋಸೆಫ್ ಕಾರ್ಲೊವಿಚ್ ದುಃಖದಿಂದ ಕೈಯನ್ನು ನೀಡಿದ. ಮನಸ್ಸಿನ ಯಾತನೆಯ ಪರಿಣಾಮಗಳು ಅವನ ಮುಖದಲ್ಲಿ ಎದ್ದು ಕಾಣುತ್ತಿದ್ದುವು.

ಗಾವ್ರಿಕ್ ಗಂಭೀರ ಮುಖಮುದ್ರೆಯಿಂದ ಹತ್ತು ಕೊಪೆಕ್ಕುಗಳ ನಾಣ್ಯವನ್ನು ಸ್ವೀಕರಿಸಿ ವಂದನೆಗಳನ್ನರ್ಪಿಸಿದ. ಬಳಿಕ ದೀಪೋತ್ಸವದಿಂದ ಬೆಳಕು ಚೆಲ್ಲಿದ್ದ ಬೀದಿಗೆ ಇಳಿದು ನಡೆದುಕೊಂಡು ಹೊರಟ.

೩೫. ನಂಬಿಕೆಯ ಸಾಲ

ಬೆಳಗ್ಗೆ ಪೇತ್ಯ ಉಗ್ರಾಣದಿಂದ ಎರಡು ಜತೆ ಚರ್ಮದ ಪಾದರಕ್ಷೆಗಳನ್ನು ತೆಗೆದುಕೊಂಡು ಹೊರಟ. ಶಾಲೆಗೆ ಹೋಗುವ ದಾರಿಯಲ್ಲಿ ಹಳೆ ಬಟ್ಟೆಗಳ ಅಂಗಡಿಯವನಿಗೆ ನಾಲ್ಕು ಕೊಪೆಕ್ಕುಗಳಿಗೆ ಅವುಗಳನ್ನು ಮಾರಿದ.

ಗಾವ್ರಿಕ್ ಮಧ್ಯಾಹ್ನ ಬಂದಾಗ ಆ ಇಬ್ಬರು ಹುಡುಗರೂ ತಮ್ಮ ಬಳಿಯ ಗುಂಡಿಗಳನ್ನು ಹರಡಿಕೊಂಡು ಕುಳಿತರು. ಪೇತ್ಯ ಪಾದರಕ್ಷೆಗಳನ್ನು ಮಾರಿ ಬಂದ ದುಡ್ಡಿನಿಂದ ಗುಂಡಿಗಳನ್ನು ಕೊಂಡುಕೊಂಡು ಆಟ ಆಡಿದ. ಹಿಂದಿನ ಸಲಕ್ಕಿಂತಲೂ ಬೇಗ ಈ ಬಾರಿ ಗುಂಡಿಗಳನ್ನು ಕಳೆದುಕೊಂಡ. ಈ ಸೋಲಿಗೆ ಕಾರಣವೂ ಇದ್ದಿತು. ಸ್ನೇಹಿತರು ಆಟದಲ್ಲಿ ಅಸಮಾನ ಮಟ್ಟದವರಾಗಿದ್ದರು.

ಆ ಪ್ರದೇಶದಲ್ಲಿ ಕಾಣಬಹುದಾಗಿದ್ದಂಥ ಎಲ್ಲ ರೀತಿಯ ಗುಂಡಿಗಳೂ ಗಾವ್ರಿಕನ ಜೇಬುಗಳಲ್ಲಿ ತುಂಬಿದ್ದುವು, ಅವನು ಆಟದಲ್ಲಿ ಎಷ್ಟು ಗುಂಡಿಗಳನ್ನಾದರೂ ಹೂಡಿ ಆಡಬಲ್ಲವನಾಗಿದ್ದ. ನಾಲ್ಕಾರು ಗುಂಡಿಗಳು ಹೋಗಲಿ ಬರಲಿ ಅವನಿಗೆ ಲಕ್ಷ್ಯವಿರಲಿಲ್ಲ. ಆದರೆ ಪೇತ್ಯನಾದರೋ ಒಂದೊಂದು ಗುಂಡಿಯನ್ನೂ ನಿಧಿಯಂತೆ ಕಾಪಾಡಿಕೊಳ್ಳ ಬೇಕಾಗಿದ್ದಿತು. ಬಹಳ ಹಿಡಿತದಿಂದ ಪಣಗಳನ್ನೊಡ್ಡಬೇಕಾಗಿದ್ದಿತು. ಈ ಹಿಡಿತ ಅವನನ್ನು ಬಹುಬೇಗ ನಷ್ಟಕ್ಕೆ ತಳ್ಳುತ್ತಿದ್ದಿತು.

ಮಾರನೆಯ ದಿನ ಆಟದ ಲೋಭವನ್ನು ಗೆಲ್ಲಲಾರದೆ ಪೇತ್ಯ ಅಡಿಗೆ ಮನೆಯ ಕಪಾಟಿನಲ್ಲಿ ದುನ್ಯ ಇಟ್ಟಿದ್ದ ಚಿಲ್ಲರೆ ದುಡ್ಡಿನಲ್ಲಿ ಹದಿನಾರು ಕೊಪೆಕ್ಕುಗಳನ್ನು ಸದ್ದಿಲ್ಲದೆ ತೆಗೆದುಕೊಂಡು ಬಂದ.

ಈ ಸಲ ಬಹಳ ಜಾಗರೂಕತೆಯಿಂದಲೂ ಬುದ್ಧಿವಂತಿಕೆಯಿಂದಲೂ ಆಟವಾಡಬೇಕೆಂದು ನಿರ್ಧರಿಸಿದ. ವಿಜಯವನ್ನು ಸಂಪಾದಿಸಲು ಪ್ರಪ್ರಥಮವಾಗಿ ಅವನಿಗೆ ಬೇಕಾಗಿದ್ದುದು ಒಂದು ಒಳ್ಳೆಯ ರಾಜಗುಂಡಿ. ಸಿಂಹಗಳ ಮತ್ತು ಶ್ರೀಮಂತಪ್ರಭುವಿನ ಕಿರೀಟ ಇವುಗಳ ಚಿತ್ರವಿದ್ದ ಸುಂದರವಾದ ದೊಡ್ಡ ಸೇವಕರ ಗುಂಡಿಯೇ ಪೇತ್ಯನ ರಾಜಗುಂಡಿಯಾಗಿದ್ದದ್ದು. ಆ ಗುಂಡಿ ನೋಡಲು ಎಷ್ಟೇ ಸುಂದರವಾಗಿದ್ದರೂ ಅದು ಪ್ರಯೋಜನಕ್ಕೆ ಬರುತ್ತಿರಲಿಲ್ಲ. ಏಕೆಂದರೆ ಅದು ಬಹಳ ಹಗುರವಾಗಿತ್ತು. ಅದು ಭಾರವಾಗುವಂತೆ ಅವನು ಮಾಡಬೇಕಾಗಿತ್ತು. ಪೇತ್ಯ ರೈಲು ನಿಲ್ದಾಣಕ್ಕೆ ಹೋದ. ಅಲ್ಲಿ ಪಕ್ಕದಲ್ಲಿ ಕಂಬಿಗಳಮೇಲೆ ಸಾಮಾನು ಗಾಡಿಗಳು ನಿಂತಿರುವ ಕಡೆಯಲ್ಲಿ ಎಂಜಿನ್ನಿನ ಮನೆಯಿಂದ ಆಚೆ ಇರುವ ಒಂದು ತುದಿಗೆ ಹೋದ. ಅಲ್ಲಿ ನಿಂತಿದ್ದ ಒಂದು ಸಾಮಾನಿನ ಗಾಡಿಯ ಬಾಗಿಲಿಗೆ ಹಾಕಿದ್ದ ಸೀಸದ ಮುದ್ರೆಯನ್ನು ಕಿತ್ತುಕೊಂಡ. ತನ್ನ ಕೆಲಸವನ್ನು ಯಾರಾದರೂ ನೋಡಿದರೆ ಏನುಗತಿ ಎಂದು ನಡುಗುತ್ತಲೇ ಇದ್ದ.

ಮನೆಗೆ ಬಂದು ಪೇತ್ಯ ಆ ಸೀಸವನ್ನು ಗುಂಡಿಯ ಬಟ್ಟಲಿನಂತಿದ್ದ ಹಳ್ಳಕ್ಕೆ ಹಾಕಿ ಕೊಡತಿಯಿಂದ ಅದನ್ನು ಕುಟ್ಟಿದ. ಕುಲಿಕೋವೊ ಮೈದಾನವನ್ನು ದಾಟಿ ಹೋಗಿ ರೈಲುಕಂಬಿಯ ಮೇಲೆ ಆ ಗುಂಡಿಯನ್ನಿಟ್ಟ. ಒಂದು ರೈಲು ಅದರಮೇಲೆ ಹಾದು ಹೋದಮೇಲೆ ಆ ಗುಂಡಿಯನ್ನೆತ್ತಿಕೊಂಡ. ಆಗ ಗುಂಡಿ ಬಿಸಿಯಾಗಿ ಅಗಲವಾಗಿ ಭಾರವಾಗಿ ಮಾರ್ಪಾಟಾಗಿದ್ದಿತು. ಈಗ ಅದು ಗಾವ್ರಿಕನ ಯಾವ ರಾಜಗುಂಡಿಗೂ ಕಡಮೆಯಿರಲಿಲ್ಲ.

ಸ್ವಲ್ಪ ಹೊತ್ತಿನಲ್ಲೇ ಗಾವ್ರಿಕ್ ಬಂದು ಆಟವನ್ನಾರಂಭಿಸಿದ. ಅದು ಬಹು ದೀರ್ಘವಾದ ಮತ್ತು ಉಗ್ರವಾದ ಸ್ಪರ್ಧೆಯಾಗಿದ್ದಿತು.

ಒಂದು ಒಳ್ಳೆಯ ರಾಜಗುಂಡಿ ಗೆಲುವಿನ ರಾಜಮಾರ್ಗ ಎಂದು ಪೇತ್ಯ ತಿಳಿದಿದ್ದುದು ನಿಜವಾಗಲಿಲ್ಲ. ಗೆಲುವಿಗೆ ಬೇಕಾಗಿದ್ದುದು ಚಾತುರ್ಯ! ಪೇತ್ಯ ತನ್ನ ಬಳಿಯಲ್ಲಿದ್ದುದನ್ನೆಲ್ಲ ಕಳೆದುಕೊಂಡನಲ್ಲದೆ, ಸಾಲಕ್ಕೂ ಒಳಗಾದ. ಗಾವ್ರಿಕ್ ಮಾರನೆಯ ದಿನ ಸಾಲದ ವಸೂಲಿಗಾಗಿ

ಬರುವುದಾಗಿ ಹೇಳಿ ಹೊರಟುಹೋದ.

ಇಲ್ಲಿಂದ ಮುಂದೆ ಭಯದ ಭೂತ ಪೇತ್ಯನ ಬೆನ್ನುಹತ್ತಿತು.

ಅಂದು ಸಂಜೆ ಊಟವಾದ ಬಳಿಕ ತಂದೆ "ಅಡಿಗೆ ಮನೆಯ ಕಪಾಟಿನಲ್ಲಿ ಹದಿನೈದು ಕೊಪೆಕ್ಕುಗಳ ಚಿಲ್ಲರೆ ಇಟ್ಟಿತ್ತು. ನೀನೇನಾದರೂ ಅದನ್ನು ಅಕಸ್ಮಾತ್ತಾಗಿ ಎತ್ತಿಕೊಂಡಿದ್ದೀಯೋ?" ಎಂದು ಶಾಂತ ಸ್ವರದಲ್ಲಿ ಕೇಳಿದರು. ಪೇತ್ಯನ ಎದೆ ಡವಡವನೆ ಹೊಡೆದುಕೊಳ್ಳಲಾರಂಭಿಸಿತು.

ತನಗೆ ಸಾಧ್ಯವಿದ್ದಷ್ಟುಮಟ್ಟಿಗೆ ನಿರ್ಲಕ್ಷ್ಯಭಾವವನ್ನು ತಂದುಕೊಳ್ಳುತ್ತ "ಇಲ್ಲ" ಎಂದ ಪೇತ್ಯ.

"ಬಾ ಇಲ್ಲಿ. ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡು." ತಂದೆ ಪೇತ್ಯನ ಗದ್ದವನ್ನು ಹಿಡಿದು ಕೊಂಡು ತಮ್ಮ ಮುಖದ ಕಡೆಗೆ ಎತ್ತಿದರು.

"ನನ್ನಾಣೆಗೂ, ಪವಿತ್ರವಾದ ಸತ್ಯಸ್ವರೂಪವಾದ ಶಿಲುಬೆಯ ಆಣೆಗೂ." ಎಂದು ಪೇತ್ಯ ಆಣೆಮಾಡಿದ. ತಂದೆಯ ದೃಷ್ಟಿಯನ್ನು ಧೈರ್ಯವಾಗಿ ತನ್ನ ಕಣ್ಣುಗಳಿಂದ ಎದುರಿಸುವ ಸಾಹಸ ಮಾಡಿದ ಪೇತ್ಯ. ಭಯದಿಂದ ದೇವಪ್ರತಿಮೆಯ ಕಡೆಗೆ ತಿರುಗಿಕೊಂಡು ನಿಂತು ಶಿಲುಬೆಯ ಆಕಾರವನ್ನು ಮಾಡಿಕೊಂಡ. ಮರುನಿಮಿಷದಲ್ಲಿ ಸ್ವರ್ಗಲೋಕದಿಂದ ತನ್ನ ಮೇಲೆ ಸಿಡಿಲೆರಗಿ ತನ್ನನ್ನು ನೆಲಕ್ಕೆ ಬೀಳಿಸುತ್ತದೆ ಎಂದು ಅವನು ನಿರೀಕ್ಷಿಸಿದ. ಇಷ್ಟು ಬಹಿರಂಗವಾಗಿ ಸುಳ್ಳು ಹೇಳಿ ದ್ರೋಹವೆಸಗಿದ ತಪ್ಪಿಗೆ ದೇವರು ತನ್ನನ್ನು ಶಿಕ್ಷಿಸದೆ ಇರುವುದಿಲ್ಲ ಎಂದು ಅವನು ನಂಬಿದ. ಆದರೆ ಏನೂ ಆಗಲಿಲ್ಲ.

"ಬಹಳ ಆಶ್ಚರ್ಯ. ನಮ್ಮ ಮನೆಯವರು ಯಾರೋ ಕಳ್ಳತನದ ದುರಭ್ಯಾಸಕ್ಕೆ ಬಿದ್ದಿರು ವರೆಂದು ಅರ್ಥವಾಗುತ್ತದೆ. ನಿಮ್ಮ ಚಿಕ್ಕಮ್ಮನಾಗಲಿ ನಾನಾಗಲಿ ಗುಟ್ಟಾಗಿ ಕಪಾಟಿನಿಂದ ದುಡ್ಡನ್ನು ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ. ಪಾವಲಿಕ್ ಆ ಕೆಲಸ ಮಾಡಿರಲಾರ. ಏಕೆಂದರೆ ನಾವು ದೊಡ್ಡವರು ಯಾರಾದರೂ ಒಬ್ಬರ ತಪ ಒಬ್ಬರು ಅವನೊಡನೆ ಇದ್ದೇವೆ. ನೀನು ವಾಗ್ದಾನ ಮಾಡಿದ್ದೀಯೆ. ಇನ್ನು ಉಳಿದವಳು ದುನ್ಯ. ಐದು ವರ್ಷಗಳಿಂದಲೂ ಪ್ರಾಮಾಣಿಕವಾಗಿ ನಮ್ಮ ಮನೆಯಲ್ಲಿ ಅವಳು ದುಡಿಯುತ್ತಿದ್ದಾಳೆ. ಅವಳ ಮೇಲೆ ಕಳ್ಳತನದ ಆಪಾದನೆಯನ್ನು ಮಾಡಬೇಕಾಗಿದೆ." ಎಂದು ತಂದೆ ಶಾಂತಚಿತ್ತರಾಗಿ ನುಡಿದರು.

ಆ ಸಮಯದಲ್ಲಿ ದೀಪಕ್ಕೆ ಎಣ್ಣೆ ಹಾಕುತ್ತ ದುನ್ಯ ಪಕ್ಕದ ಕೊಠಡಿಯಲ್ಲಿದ್ದಳು. ಚಿಮಣಿ ಯನ್ನೂ, ದೀಪ ಒರೆಸಲು ತಂದಿದ್ದ ಬಟ್ಟೆ ಚೂರನ್ನೂ ಕನ್ನಡಿಯ ಚೌಕಟ್ಟಿನ ಮೇಲೆ ಇಟ್ಟು ಬಾಗಿಲ ಬಳಿಗೆ ಬಂದು ಕಾಣಿಸಿಕೊಂಡಳು. ಅವಳ ಕತ್ತು ಮತ್ತು ಕೈ ಕೆಂಪಾಗಿದ್ದುವು. ಅವಳ ಸರಳ ಸ್ವಭಾವದ ಅಗಲವಾದ ಮುಖದಲ್ಲಿ ಮಚ್ಚೆ ಮಚ್ಚೆಯಾಗಿ ಕಲೆಗಳು ತುಂಬಿದ್ದುವು; ದಾರಿದ್ರ್ಯದ ರೇಖೆಗಳು ಮೂಡಿದ್ದುವು.

"ಚಿಕ್ಕ ಯಜಮಾನರು ಗಾವ್ರಿಕನ ಜತೆಯಲ್ಲಿ ಗುಂಡಿಗಳ ಆಟ ಆಡಿ ಆ ದುಡ್ಡನ್ನು ಕಳೆ ಯದೆ ಇದ್ದರೆ ನಾನು ಸಾಯುವವರೆಗೂ ಕಷ್ಟ ನನ್ನನ್ನು ಮುರಿದು ತಿನ್ನಲಿ." ಎಂದು ದುನ್ಯ ಕಿರಿಚಿದಳು.

ತಂದೆ ಪೇತ್ಯನ ಕಡೆಗೆ ತಿರುಗಿ ನೋಡಿದರು.

ತಕ್ಷಣ ಅವಳ ಬಾಯಿಮುಚ್ಚಿಸುವ ಪ್ರತಿವಾದವನ್ನು ಹೂಡಬೇಕೆಂದು ಪೇತ್ಯ ನಿರ್ಧರಿಸಿದ.

ಒಂದು ನಿಮಿಷವನ್ನೂ ಕಳೆಯದೆ ತನ್ನ ಮೇಲಿನ ಸಂದೇಹ ನಿವೃತ್ತಿಯಾಗುವಂಥ ಮತ್ತು ದುನ್ಯ ತಲೆಯೆತ್ತದಂತೆ ಮಾಡುವಂಥ ಯಾವುದಾದರೂ ನ್ಯಾಯವಾದ ಘನವಾದ ದರ್ಪದ ಮಾತನ್ನು ಆಡಬೇಕೆಂದು ಪೇತ್ಯ ನಿಶ್ಚಯಿಸಿದ. ಒಂದು ನಿಮಿಷಕ್ಕೆ ಮೊದಲಾಗಿದ್ದರೆ ತನ್ನ ತಪ್ಪನ್ನು ಒಪ್ಪಿಕೊಂಡುಬಿಡಬಹುದಾಗಿದ್ದಿತು. ಆದರೆ ಈಗ ಗುಂಡಿಗಳ ವಿಷಯ ಬಂದಿದ್ದರಿಂದ ಏನೇ ಆದರೂ ಒಪ್ಪಿಕೊಳ್ಳುವುದು ಅಸಾಧ್ಯವಾಗಿದ್ದಿತು.

"ಹಾಗೆ ಹೇಳುವುದಕ್ಕೆ ನಿನಗೆ ಏನು ಅಧಿಕಾರ? ಸುಳ್ಳು ಹೇಳುತ್ತಿದ್ದೀಯೆ." ಎಂದು ಒರಟಾಗಿ ಪೇತ್ಯ ಅರಚಿದ. ಕೃತ್ರಿಮ ಕೋಪ ಅವನ ಮುಖವನ್ನು ವ್ಯಾಪಿಸಿತು. ಆದರೆ ಇಷ್ಟು ಹೇಳಿದ್ದು ಸಾಲದು ಎನ್ನಿಸಿತು.

"ನೀನು. ಪ್ರಾಯಃ ನೀನೇ ಕದ್ದಿರಬಹುದು!" ಕಾಲಿನಿಂದ ನೆಲವನ್ನೊದೆಯುತ್ತ ಥಟ್ಟನೆ ಊದಿಬಿಟ್ಟ.

ದುನ್ಯ ಅಡಿಗೆಯ ಮನೆಯಲ್ಲಿ ತನ್ನ ಸಾಮಾನುಗಳನ್ನೆಲ್ಲ ಗಂಟುಕಟ್ಟುತ್ತ ತನ್ನ ಸಂಬಳವನ್ನೆಲ್ಲ ಪಾವತಿಮಾಡಿಬಿಡಬೇಕೆಂದು ಒತ್ತಾಯ ಮಾಡುತ್ತ ಇದ್ದಳು. ಪೇತ್ಯ ತನ್ನ ಕೊಠಡಿಗೆ ಓಡಿಹೋಗಿ ಬಾಗಿಲನ್ನು ಧಡಾರನೆ ಹಾಕಿಕೊಂಡ. ಬಾಗಿಲು ಹಾಕಿಕೊಂಡ ರಭಸಕ್ಕೆ ಹಾಸಿಗೆಯ ಹಿಂದುಕಡೆ ನೇತುಹಾಕಿದ್ದ ರಕ್ಷಕಸಂತನ ಮೆರುಗಿನ ಪ್ರತಿಮೆಯು ತೂಗಾಡಲಾರಂಭಿಸಿತು. ಪೇತ್ಯ ದುನ್ಯಳಲ್ಲಿ ಕ್ಷಮಾಪಣೆ ಕೇಳಿಕೊಳ್ಳಲು ಸ್ಪಷ್ಟವಾಗಿ ತಿರಸ್ಕರಿಸಿದ. ಹಾಸಿಗೆಯ ಮೇಲೆ ಬಿದ್ದುಕೊಂಡು ತಾನು ಮೈಮರೆತಿದ್ದೇನೆಯೋ ಎನ್ನುವಂತೆ ನಟಿಸಿದ. ಮನೆಯಲ್ಲಿ ಯಾರೂ ಅವನನ್ನು ಮಾತನಾಡಿಸಲಿಲ್ಲ. ಅವನ ಪಾಡಿಗೆ ಅವನು ಇದ್ದುಕೊಳ್ಳಲಿ ಎಂದು ಸುಮ್ಮನಾಗಿಬಿಟ್ಟರು. ತಂದೆಯು ಪದ್ಧತಿಯಂತೆ ಮಲಗುವುದಕ್ಕೆ ಮೊದಲು ಮುತ್ತು ಕೊಡಲು ಬರಲಿಲ್ಲ. ಚಿಕ್ಕಮ್ಮ ದುನ್ಯಳನ್ನು ಉಳಿಸಿಕೊಳ್ಳಲು ಅವಳನ್ನು ಬಲವಂತಮಾಡುತ್ತಿದ್ದುದು ಪೇತ್ಯನಿಗೆ ಕೇಳಿಸಿತು. ದುನ್ಯ ಅಳುತ್ತ ಕೊನೆಗೊಂದುಸಲ ಒಪ್ಪಿದಳು.

ತನ್ನ ಕೃತ್ಯಕ್ಕೆ ತಾನೇ ದಿಗಿಲುಗೊಂಡ ಪೇತ್ಯ ರಾತ್ರಿಯೆಲ್ಲ ಎದ್ದು ಎದ್ದು ಕುಳಿತುಕೊಳ್ಳುತ್ತಿದ್ದ. ಅಡಿಗೆ ಮನೆಗೆ ಓಡಿಹೋಗಿ ದುನ್ಯಳ ಕಾಲಿಗೆ ಬಿದ್ದು ಕ್ಷಮೆ ಬೇಡಿಕೊಂಡುಬಿಡಬೇಕೆನ್ನಿಸಿತು ಅವನಿಗೆ. ಆದರೆ ಅಷ್ಟರಲ್ಲಿ ಮಾರನೆಯ ದಿವಸ ತನ್ನ ಸಾಲವನ್ನು ತೀರಿಸು ಎಂದು ಕೇಳಲು ಬರುವ ಗಾವ್ರಿಕನ ಯೋಚನೆ ಬಂದು ಮನಸ್ಸು ಕಲಕಿತು.

ಬೆಳಗ್ಗೆ ತಂದೆಯವರು ಪಾವಲಿಕನನ್ನು ಬಚ್ಚಲುಮನೆಗೆ ಮುಖ ತೊಳೆಸಲು ಕರೆದುಕೊಂಡು ಹೋಗುವವರೆಗೆ ಪೇತ್ಯ ಕಾದಿದ್ದು ಬಟ್ಟೆಯ ಕಪಾಟಿನಲ್ಲಿದ್ದ ಸಮವಸ್ತ್ರಕ್ಕೆ ಸೇರಿದ ಹಳೆಯ ಕೋಟನ್ನು ತೆಗೆದುಕೊಂಡ.

ಆ ಕೋಟಿನ ವಿಷಯವಾಗಿ ಒಂದು ಐತಿಹ್ಯವಿದ್ದಿತು. ತಂದೆ ವಿಶ್ವವಿದ್ಯಾನಿಲಯದಿಂದ ಡಿಗ್ರಿ ಪಡೆದುಕೊಂಡು ಬಂದಾಗ ಆ ಕೋಟನ್ನು ಹೊಲಿಸಿದ್ದಂತೆ. ಆ ಕೋಟನ್ನು ಇದುವರೆಗಿನ ಅವರ ಜೀವನಕಾಲದಲ್ಲಿ ತಂದೆ ಒಂದೇ ಒಂದುಸಲ ತೊಟ್ಟಿದ್ದರಂತೆ. ಅಪ್ಪ ಅಮ್ಮನನ್ನು ಮದುವೆಯಾದಾಗ ಎಲ್ಲವೂ ಶಾಸ್ತ್ರೋಕ್ತವಾಗಿ ಆಗಬೇಕೆಂಬ ಅಮ್ಮನ ಶ್ರೀಮಂತಬಂಧುಗಳ ಬಲಾತ್ಕಾರಕ್ಕೆ ಅದನ್ನು ತೊಟ್ಟಿದ್ದರಂತೆ. ಅಲ್ಲಿಂದ ಇಲ್ಲಿಯವರೆಗೂ ಅದು ಯಾರ ಗಮನಕ್ಕೂ ಬರದೆ ಬಟ್ಟೆಯ ಅಲಮಾರಿನಲ್ಲಿ ನಿದ್ದೆಮಾಡುತ್ತಿತ್ತು.

ಆ ಕೋಟಿನ ಮೇಲೆ ಅನೇಕ ಗುಂಡಿಗಳಿದ್ದುವು. ನಿಜ. ಆದರೆ ಅವುಗಳಲ್ಲಿನ ಹೆಚ್ಚಿನ ಗುಂಡಿಗಳು ಬಹಳ ಚಿಕ್ಕವುಗಳಾಗಿದ್ದುರಿಂದ ಆಟದಲ್ಲಿ ಅವುಗಳಿಂದ ಹೆಚ್ಚಿನ ಪ್ರಯೋಜನ ವಿರಲಿಲ್ಲ. ಅದರಲ್ಲಿ ನಾಲ್ಕು ದೊಡ್ಡ ಗುಂಡಿಗಳಿದ್ದುವು. ಆದರೆ ಇವುಗಳೂ ಕೂಡ ನಿರೀಕ್ಷಿಸಿದ ಮಟ್ಟಕ್ಕೆ ಬರುತ್ತಿರಲಿಲ್ಲ. ಅವುಗಳು ಮಂದವಾಗಿದ್ದುವು ಅಲ್ಲದೆ ಮೂರರ ಅಂಕಿಯನ್ನು ಹೊಂದಿದ್ದುವು. ಅವು ಅಗ್ಗದವಾಗಿದ್ದುವು. ಈಗ ಹೆಚ್ಚಾಗಿ ಬಳಕೆಯಲ್ಲಿರಲಿಲ್ಲ.

ಕಳೆದ ಶತಮಾನದಲ್ಲಿ ಆ ಕೋಟನ್ನು ಹೊಲೆದ ಒಡೆಸ್ಸದ ದರ್ಜಿ ತನ್ನ ಕಸುಬಿನಲ್ಲಿ ಬಹಳ ನಿಪುಣನೂ ಪ್ರಾಮಾಣಿಕನೂ ಇದ್ದಿರಬೇಕು. ಆ ಗುಂಡಿಗಳು ಕತ್ತರಿಸಲು ಕತ್ತರಿಯ ಬಾಯಿಗೆ ಸಿಕ್ಕುತ್ತಿರಲಿಲ್ಲ. ಪೇತ್ಯ ಆತುರದಲ್ಲಿ ಹಲ್ಲಿನಿಂದ ಕಚ್ಚಿ ಬಟ್ಟೆಯ ಸಮೇತ ಗುಂಡಿಗಳನ್ನು ಕಿತ್ತುಬಿಟ್ಟ.

ಈ ಸಲವೂ ಪೇತ್ಯನನ್ನು ದುರದೃಷ್ಟ ಹಿಂಬಾಲಿಸಿತೆಂದು ಹೇಳುವ ಆವಶ್ಯಕತೆಯಿಲ್ಲ. ಮೊದಲಿಗಿಂತ ಹೆಚ್ಚಾಗಿ ಗಾವ್ರಿಕನಿಗೆ ಸಾಲಗಾರನಾದ. ಗಾವ್ರಿಕ್ ಪೇತ್ಯನನ್ನು ನಿಷ್ಠುರವಾದ ದಯೆಯಿಂದ ನಡೆಸಿಕೊಂಡ. ಇದರಿಂದ ಒಳ್ಳೆಯದಾಗುವ ಸೂಚನೆಗಳೇನೂ ಇರಲಿಲ್ಲ.

"ಒಳ್ಳೆಯದು ಪೇತ್ಯ, ಈಗ ನೀನು ಏನು ಹೇಳುತ್ತೀಯೆ ?" ಎಂದು ಕಠಿಣವಾಗಿ ಪ್ರಶ್ನಿಸಿದ.

ಗಾವ್ರಿಕನ ಈ ಮಾತುಗಳನ್ನು ಪೇತ್ಯ ತಪ್ಪುತಿಳಿದುಕೊಳ್ಳುವಂತಿರಲಿಲ್ಲ. "ಇಲ್ಲಿ ನೋಡು ಮಿತ್ರ. ನೀನು ನನಗೆ ಬರಬೇಕಾದ ಗುಂಡಿಗಳನ್ನು ಕೊಡದೆ ಹೋದರೆ ನಿನ್ನ ಚರ್ಮ ಸುಲಿದು ಕಿತ್ತುಕೊಳ್ಳುತ್ತೇನೆ, ಗೊತ್ತೆ? ಸ್ನೇಹಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇದು ನಮ್ಮ ನಿಯಮ, ನಿನಗೇ ಗೊತ್ತಿದೆಯಲ್ಲ. ಗುಂಡಿಗಳು ಎಂದರೆ ಸಿಗರೇಟ್ ಪೊಟ್ಟಣದ ಮೇಲಿನ ಚಿತ್ರಗಳಲ್ಲ. ಗುಂಡಿಗಳಿಗೆ ದುಡ್ಡು ಕೊಡಬೇಕು. ಬಿಟ್ಟಿ ಬರುವುದಿಲ್ಲ. ಇದಕ್ಕಾಗಿ ರೇಗ ಬೇಡ." ಈ ಅರ್ಥ ಗಾವ್ರಿಕನ ಮಾತುಗಳಿಗೆ ಎಂಬುದು ಪೇತ್ಯನಿಗೆ ಮನದಟ್ಟಾಗಿತ್ತು.

ಪೇತ್ಯ ರೇಗಲಿಲ್ಲ. ಗಾವ್ರಿಕ್ ನ್ಯಾಯವಾದದ್ದನ್ನು ಹೇಳುತ್ತಾ ಇದ್ದಾನೆ ಎನ್ನುವುದು ಅವನಿಗೆ ತಿಳಿದಿತ್ತು. ಪೇತ್ಯ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ಸ್ವಲ್ಪ ಕಾಲಾವಕಾಶವನ್ನು ಕೇಳಿಕೊಂಡ. ಗಾವ್ರಿಕ್ ಒಪ್ಪಿಕೊಂಡ.

ಆ ಸಾಯಂಕಾಲವೆಲ್ಲ ಪೇತ್ಯನ ಮನಸ್ಸನ್ನು ಗಾವ್ರಿಕನ ಸಾಲದ ಚಿಂತೆ ಕೊರೆಯುತ್ತಿತ್ತು. ಅವನ ಅತಿಯಾದ ಚಿಂತೆಯಿಂದ ತಲೆಯೆಲ್ಲ ಕಾಯ್ದಿತ್ತು. ಕಿವಿಯೂ ಬಿಸಿಯಾಯಿತು. ದೀಪದ ಬೆಳಕಿನಲ್ಲಿ ಅದು ಮಾಣಿಕ್ಯದ ಬಣ್ಣವನ್ನು ಹೊಂದಿತ್ತು.

ಅವನನ್ನು ಆ ಕ್ಷಣದಲ್ಲಿ ಧನಿಕನನ್ನಾಗಿ ಮಾರ್ಪಡಿಸುವ ಸಾವಿರಾರು ಯೋಚನೆಗಳು ಅವನ ತಲೆಯನ್ನು ತುಂಬಿದುವು. ಆದರೆ ಅವುಗಳೆಲ್ಲ ಭ್ರಾಂತಿಮೂಲಗಳೋ, ಅಪರಾಧಮೂಲಗಳೋ ಆಗಿದ್ದುವು. ಕೊನೆಗೆ ಆಶ್ಚರ್ಯಕರವಾದ ಆದರೆ ಅಷ್ಟೇ ಸರಳವಾದ ಒಂದು ಉಪಾಯ ಅವನಿಗೆ ಹೊಳೆಯಿತು. ತನ್ನ ತಾಯಿಯ ತಂದೆ ಅಥವಾ ತನ್ನ ಅಜ್ಜ ಸೈನ್ಯದಲ್ಲಿ ಮೇಜರ್ ಪದವಿಯ ಅಧಿಕಾರಿಯಾಗಿರಲಿಲ್ಲವೆ? ಇದನ್ನು ಅವನು ಮರೆತಿದ್ದನಲ್ಲ!

ಸ್ವಲ್ಪವೂ ಕಾಲವನ್ನು ಕಳೆಯದೆ ತನ್ನ ಗಣಿತ ಅಭ್ಯಾಸಪುಸ್ತಕದಿಂದ ಒಂದು ಹಾಳೆಯನ್ನು ಹರಿದುಕೊಂಡ. ಎಕತರಿನೊಸ್ಲಾವ್ ರಸ್ತೆಯಲ್ಲಿ ವಾಸಿಸುತ್ತಿದ್ದ ತನ್ನ ತಾಯಿಯ ತಾಯಿಗೆ, ಎಂದರೆ ತನ್ನ ಅಜ್ಜಿಗೆ ಒಂದು ಕಾಗದವನ್ನು ಬರೆಯಲು ಕುಳಿತ. ಕಾಗದದ ಆರಂಭದಲ್ಲಿ ಅವಳಲ್ಲಿ ತನಗಿರುವ

ಅಪಾರವಾದ ಪ್ರೀತಿಯನ್ನು ವರ್ಣಿಸಿದ. ಅನಂತರ ಶಾಲೆಯಲ್ಲಿ ತನ್ನ ಅದ್ಭುತ ಪ್ರಗತಿಯನ್ನು ಕುರಿತು ಬರೆದ. (ನಿಜ ಹೇಳಬೇಕೆಂದರೆ ಇದು ಅವನ ಪ್ರಗತಿಯ ಅತಿಶಯೋಕ್ತಿಯಾಗಿತ್ತು). ಅನಂತರ ತನ್ನ ಅಜ್ಜನ ಮೇಜರ್ ಪದವಿಯ ಸಮವಸ್ತ್ರವನ್ನು ಜ್ಞಾಪಕಾರ್ಥವಾಗಿ ಕಳಿಸಿಕೊಡಬೇಕೆಂದು ಬೇಡಿಕೊಂಡ.

ಪೇತ್ಯ ಬಹಳ ಚಾಣಾಕ್ಷ ಬುದ್ಧಿಯವನಾಗಿದ್ದ. ಆ ಮೃದುಹೃದಯದ ದಯಾಳು ಮುದುಕಿ ತುರ್ಕಿಯುದ್ಧದ ವೀರನಾದ ತನ್ನ ಪತಿಯ ನೆನಪನ್ನು ನಿಧಿಯಂತೆ ಭಾವಿಸುತ್ತಿದ್ದಳು. ಅಷ್ಟೇ ಕಟ್ಟಕ್ಕರೆಯಿಂದ ತನ್ನ ಮೊಮ್ಮಗ ಪೇತ್ಯನನ್ನೂ ಅವಳು ಪ್ರೀತಿಸುತ್ತಿದ್ದಳು. ಇದನ್ನು ಅರಿತೇ ಪೇತ್ಯ ಅವಳ ಹೃದಯಕ್ಕೆ ನೇರವಾಗಿ ತಾಗುವಂಥ ಮಾತುಗಳನ್ನು ಬರೆದ.

ತಾನೂ ತನ್ನ ವೀರ ಅಜ್ಜನ ಮಾರ್ಗವನ್ನನುಸರಿಸಿ ವೀರನಾಗಬೇಕೆಂದು ನಿರ್ಧರಿಸಿರುವುದಾಗಿ ಮುಂದೆ ಬರೆದ. ತಾನು ಸೈನ್ಯಕ್ಕೆ ಸೇರುವುದಾಗಿಯೂ ತನ್ನ ವೀರವೃತ್ತಿಗೆ ಸ್ಫೂರ್ತಿಯನ್ನು ಕೊಡುವುದಕ್ಕಾಗಿ ಅಜ್ಜನ ಆ ಸಮವಸ್ತ್ರ ಅಗತ್ಯವೆಂದೂ ಪೇತ್ಯ ಬರೆದ.

ಮೇಜರನ ಸಮವಸ್ತ್ರದ ಕೋಟಿನಲ್ಲಿ ತನಗೆ ತುಂಬ ಗುಂಡಿಗಳು ದೊರಕುವುದಾಗಿ ಪೇತ್ಯ ಆಸೆಯಿಟ್ಟುಕೊಂಡಿದ್ದ. ಹದ್ದುಗಳ ಚಿತ್ರದಮೇಲೆ ಐದರ ಅಂಕಿ ಇರುವ ಅಧಿಕಾರಿ ಗುಂಡಿಗಳಿಗೆ ಮೂವತ್ತು, ಇಲ್ಲದೆ ಇದ್ದರೆ ಇಪ್ಪತ್ತಾದರೂ ಸಿಕ್ಕಬಹುದೆಂಬ ನಂಬಿಕೆಯಿತ್ತು ಅವನಿಗೆ. ಇದರಿಂದ ತನ್ನ ಸಾಲ ತೀರುವುದಲ್ಲದೆ, ಅದೃಷ್ಟ ಚೆನ್ನಾಗಿದ್ದರೆ ಆಟದಲ್ಲಿ ಗೆದ್ದು ತನ್ನ ನಷ್ಟವನ್ನು ಭರ್ತಿ ಮಾಡಿಕೊಳ್ಳಬಹುದೆಂದು ಯೋಚಿಸಿದ. ಕೊನೆಯಪಕ್ಷ ಇನ್ನೊಂದು ವಾರದಲ್ಲಿ ಸಮವಸ್ತ್ರದ ಭಾಂಗಿ ತನಗೆ ತಲಪುವುದಾಗಿ ಲೆಕ್ಕಾಚಾರ ಹಾಕಿದ.

ಪೇತ್ಯ ಇಡೀ ಕಥೆಯನ್ನು ಗಾವ್ರಿಕನಿಗೆ ತಿಳಿಸಿದ. ಇದು ಒಳ್ಳೆಯ ಯೋಚನೆ ಎಂದು ಗಾವ್ರಿಕ್ ಒಪ್ಪಿದ. ಐದು ಮುದ್ರೆಗಳೂ ಎರಡು ಅಂಚೆ ತುತೂರಿಗಳ ಚಿತ್ರವೂ ಇದ್ದ ರಿಜಿಸ್ಟರ್ ಆದ ಪತ್ರವನ್ನು ಹಳದಿಯ ದೊಡ್ಡ ಅಂಚೆ ಪೆಟ್ಟಿಗೆಯೊಳಕ್ಕೆ ಇಬ್ಬರೂ ಮೆಟ್ಟಿಂಗಾಲ ಮೇಲೆ ನಿಂತು ಹಾಕಿದರು. ಭಾಂಗಿಗಾಗಿ ಕಾದು ಕುಳಿತಿರುವುದನ್ನು ಬಿಟ್ಟು ಮತ್ತೇನೂ ಅವರಿಗೆ ಕೆಲಸವಿರಲಿಲ್ಲ.

ಮುಂದೆ ಗುಂಡಿಗಳು ದೊರೆಯುತ್ತವೆ ಎಂಬ ನಿರೀಕ್ಷೆಯಿಂದ ಗಾವ್ರಿಕ್ ಮಿತಿಮೀರಿ ಗುಂಡಿಗಳನ್ನು ಪೇತ್ಯನಿಗೆ ಸಾಲಕೊಟ್ಟ. ಅಜ್ಜನಿಂದ ತನಗೆ ಬರುವ ಆಸ್ತಿಯನ್ನು ಪೇತ್ಯ ಸರಾಗವಾಗಿ ನಿಶ್ಚಿಂತೆಯಿಂದ ಜೂಜಾಡಿ ಕಳೆದುಬಿಟ್ಟ.

೩೬. ಭಾರವಾದ ಚರ್ಮದ ಚೀಲ

ಒಂದುವಾರ ಕಳೆಯಿತು, ಇನ್ನೂ ಒಂದು ವಾರ ಬಂದು ಹೋಯಿತು. ಆದರೆ ಅಜ್ಜಿಯಿಂದ ಪೇತ್ಯನಿಗೆ ಯಾವ ಭಾಂಗಿಯೂ ಬರಲಿಲ್ಲ.

ಜಾರ್ ಚಕ್ರವರ್ತಿಯು "ಸ್ವಾತಂತ್ರ್ಯ"ದ ಸಂದೇಶವನ್ನು ಸಾರಿದ್ದರೂ ಕೂಡ ಇನ್ನೂ ಹೆಚ್ಚಿನ ಶಾಂತಿಭಂಗ ದಂಗೆಗಳು ನಡೆಯುತ್ತಲೇ ಇದ್ದುವು. ಅಂಚೆ ಇಲಾಖೆಯ ಕೆಲಸಗಳು ಅಸ್ತವ್ಯಸ್ತವಾಗಿದ್ದುವು. ಮಾಸ್ಕೋದಿಂದ ತಂದೆಗೆ ಬರುತ್ತಿದ್ದ **"ರೂಸ್ಕಿಯೆ ವೆದೊಮೋಸ್ತಿ"** ಎಂಬ ಪತ್ರಿಕೆ ಬರುವುದು ನಿಂತಿತು. ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುದು ತಿಳಿಯದೆ ಯಾವ

ಪಕ್ಷವನ್ನು ಸ್ವೀಕರಿಸಬೇಕೆಂಬುದು ಅರ್ಥವಾಗದೆ ಮನಸ್ಸು ಕಲಕಿ ಸಂಜೆಗಳಲ್ಲಿ ಮೌನವಾಗಿ ತಂದೆ ಕುಳಿತುಬಿಡುತ್ತಿದ್ದರು.

ವಿಶ್ವವಿದ್ಯಾನಿಲಯ ಪ್ರಾವೇಶಿಕ ತರಗತಿಯನ್ನು ಅನಿರ್ದಿಷ್ಟವಾಗಿ ಮುಂದೆ ಹಾಕಲಾಗಿತ್ತು. ಪೇತ್ಯ ವ್ಯರ್ಥವಾಗಿ ಕಾಲಕಳೆಯುತ್ತಿದ್ದ. ಈ ಕಾಲದಲ್ಲಿ ಗಾವ್ರಿಕನೊಡನೆ ಆಟದಲ್ಲಿ ಪೇತ್ಯ ಭಯಂಕರವಾಗಿ ಸೋತಿದ್ದ, ಅದನ್ನು ಯೋಚಿಸಿದರೇ ಮೈ ಚಳಿ ಹಿಡಿಯುತ್ತಿತ್ತು. ಹೀಗಿರುವಲ್ಲಿ ಒಂದು ದಿವಸ ಗಾವ್ರಿಕ್ ಅನಿಷ್ಟಸೂಚಕವಾದ ನಗೆಯನ್ನು ಬೀರಿ ಹೇಳಿದ: "ನಿನ್ನ ಗುಂಡಿಗಳು ಬೇಗ ಬರುವುವೆಂಬುದಾಗಿ ನಿರೀಕ್ಷಿಸುವುದನ್ನು ಮರೆತುಬಿಡು. ಇನ್ನೊಂದೆರಡು ದಿವಸಗಳಲ್ಲಿ ಸಾರ್ವಜನಿಕ ಚಳುವಳಿಯು ನಡೆಯುವುದಿದೆ." ಒಂದು ತಿಂಗಳು ಮೊದಲಾಗಿದ್ದರೆ ಇದರ ಅರ್ಥ ಪೇತ್ಯನಿಗಾಗುತ್ತಿರಲಿಲ್ಲ. ಆದರೆ ಈಗ 'ಸಾರ್ವಜನಿಕ ಚಳುವಳಿ' ಎಂದರೆ ಮುಷ್ಕರ ಎಂಬರ್ಥ ಸುಸ್ಪಷ್ಟವಾಗಿತ್ತು. ಗಾವ್ರಿಕನ ಮಾತುಗಳನ್ನು ನಂಬದೆ ಇರಲು ಕಾರಣವಿರಲಿಲ್ಲ. ನಗರ ಪ್ರದೇಶಕ್ಕಿಂತಲೂ ಮೊದಲು ಕಾರ್ಖಾನೆಯ ಉಪನಗರದವರಿಗೆ ಅದು ಹೇಗೋ ಇಂಥ ವಿಷಯಗಳು ತಿಳಿಯುತ್ತವೆಂದು ಪೇತ್ಯನಿಗೆ ಗೊತ್ತಾಗಿತ್ತು. ಈ ಸಮಾಚಾರ ಕೇಳಿ ಹೃದಯಕ್ಕೆ ಚಾಕುವನ್ನು ಚುಚ್ಚಿದಂತಾಯಿತು.

"ಗುಂಡಿಗಳು ಅದಕ್ಕೆ ಮೊದಲು ಬರಲಾರವೆ?"

"ಸಂಭವವಿಲ್ಲ."

ಪೇತ್ಯನ ಮುಖ ಬಿಳಿಚಿಕೊಂಡಿತು.

"ಸಾಲದ ವಿಷಯ ಏನು ಮಾಡುತ್ತೀಯೆ?" ಕಠಿಣವಾಗಿ ಗಾವ್ರಿಕ್ ಕೇಳಿದ.

ಆಟವನ್ನು ಆರಂಭಿಸುವುದಕ್ಕೆ ಪೇತ್ಯ ಕಾತರವನ್ನು ವ್ಯಕ್ತಪಡಿಸಿದ. ಹೇಗಾದರೂ ಮಾಡಿ ಮಾರನೆಯ ದಿನದ ಹೊತ್ತಿಗೆ ತಪ್ಪದೆ ಸಾಲವನ್ನು ತೀರಿಸುವೆನೆಂದು ಪವಿತ್ರವಾದ ಶಿಲುಬೆಯ ಆಣೆಮಾಡಿ ಪ್ರತಿಜ್ಞೆ ಮಾಡಿದ ಪೇತ್ಯ.

"ತೀರಿಸದೆ ಇದ್ದರೆ ನೋಡು......" ಪಾಟಲವರ್ಣದ ಕಾರ್ಡರಾಯ್ ಬಟ್ಟೆಯ ಷರಾಯಿಯಲ್ಲಿದ್ದ ಕಾಲುಗಳನ್ನು ನಾವಿಕನಂತೆ ಅಗಲಿಸಿಕೊಂಡು ನಿಂತ ಗಾವ್ರಿಕ್.

ಅಂದು ಸಂಜೆ ಪೇತ್ಯ ಪಾವಲಿಕನ ದುಡ್ಡಿನ ಡಬ್ಬಿಗಡಿಗೆಯನ್ನು ಕದ್ದು ತೆಗೆದುಕೊಂಡು ಹೋಗಿ ಬಚ್ಚಲು ಮನೆಯನ್ನು ಸೇರಿ ಬಾಗಿಲನ್ನು ಒಳಗಿನಿಂದ ಹಾಕಿಕೊಂಡ. ಚಾಕುವಿನಿಂದ ಡಬ್ಬಿಗಡಿಗೆಯ ಬಾಯನ್ನು ಒಡೆದು ನೋಡಿದರೆ ಅದರಲ್ಲಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳೆಲ್ಲ ಒಟ್ಟುಸೇರಿ ನಲವತ್ತುಮೂರು ಕೊಪೆಕ್ಕುಗಳಿದ್ದುವು.

ತನ್ನ ಈ ಶಸ್ತ್ರಕ್ರಿಯೆಯ ವಿಧಾನವನ್ನು ಬಹು ವೇಗವಾಗಿಯೂ ಬಹು ಚಮಕಿನಿಂದಲೂ ನೆರವೇರಿಸಿದ. ಅನಂತರ ಡಬ್ಬಿಯೊಳಕ್ಕೆ ಕಬ್ಬಿಣದ ಮೊಳೆಗಳು, ಸೀಸದ ತುಂಡುಗಳು, ಮೂಳೆಯ ಗುಂಡಿಗಳು ಮತ್ತು ಚೂರುಗಳು ಇವುಗಳನ್ನು ತುಂಬಿ ಮೊದಲಿದ್ದಂತೆ ಡಬ್ಬಿಯು ಭಾರವಾಗಿ ಕಾಣುವಂತೆ ಮಾಡಿದ. ಈ ರೀತಿ ಮಾಡುವುದು ಅತ್ಯಗತ್ಯವಾಗಿತ್ತು. ಏಕೆಂದರೆ ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ದಿನಕ್ಕೆರಡು ಬಾರಿ ತನ್ನ ದುಡ್ಡಿನ ಡಬ್ಬಿಗಡಿಗೆಯನ್ನು ಪರೀಕ್ಷಿಸುವ ಒಂದು ಗೊತ್ತಾದ ಕಾರ್ಯಕ್ರಮವನ್ನು ಪಾವಲಿಕ್ ಇಟ್ಟುಕೊಂಡಿದ್ದ. ಕಿವಿಯ ಬಳಿಗೆ ಡಬ್ಬಿಗಡಿಗೆಯನ್ನು ಎತ್ತಿ ನಾಲಗೆ ಕಚ್ಚಿಕೊಂಡು ಅದನ್ನು ಅಲ್ಲಾಡಿಸುತ್ತಿದ್ದ. ಡಬ್ಬಿಗಡಿಗೆಯ ತೂಕ

ಮತ್ತು ಅದರೊಳಗಿನ ನಾಣ್ಯಗಳ ಠಣಠಣವೆಂಬ ನಾದಗಳಿಂದ ಸಂತೋಷಗೊಳ್ಳುತ್ತಿದ್ದ. ಕಳ್ಳತನ ಪತ್ತೆಯಾಗಿಬಿಟ್ಟರೆ ಆಗ ಪಾವಲಿಕ್ ಎಬ್ಬಿಸುತ್ತಿದ್ದ ರಂಪವನ್ನೂ ಬೊಬ್ಬೆಯನ್ನೂ ಊಹಿಸುವುದು ಕಷ್ಟವಾಗಿರಲಿಲ್ಲ. ಆದರೆ ಎಲ್ಲವೂ ಸುಗಮವಾಗಿ ನಡೆದುಕೊಂಡುಹೋಯಿತು. ಆ ದಿವಸ ಮಲಗು ವುದಕ್ಕೆ ಮೊದಲು ಪಾವಲಿಕ್ ಕಚಡ ತುಂಬಿದ ನಿಧಿಯ ಪೆಟ್ಟಿಗೆಯನ್ನು ಅಲ್ಲಾಡಿಸಿ ಅದು ಮೊದಲಿನಂತೆ ಸ್ವಸಂಪೂರ್ಣವಾಗಿರುವುದೆಂದು ತೃಪ್ತಿಗೊಂಡ.

ಅಪರಾಧವು ಎಂದಿಗೂ ಫಲಕಾರಿಯಲ್ಲವೆಂಬ ವಿಷಯವು ಎಲ್ಲರಿಗೂ ಗೊತ್ತಿರುವ ವಿಷಯ. ಒಂದು ಕೊಪೆಕ್ಕೂ ಉಳಿಯದಂತೆ ಪಾವಲಿಕನ ದುಡ್ಡನ್ನೆಲ್ಲವನ್ನೂ ಮೂರುದಿವಸಗಳಲ್ಲಿ ಪೇತ್ಯ ಕಳೆದುಬಿಟ್ಟ. ಸಾಲಮಾತ್ರ ತೀರಲಿಲ್ಲ, ಅಜ್ಜನ ಸಮವಸ್ತ್ರದ ಕೋಟು ಬೇಗ ಬರುವ ನಂಬಿಕೆ ದೂರವಾಯಿತು. ಪುನಃ ಗುಂಡಿಗಳನ್ನು ಹಿಂದಿರುಗಿಸಬೇಕೆಂದು ಗಾವ್ರಿಕ್ ಪೇತ್ಯನನ್ನು ಒತ್ತಾಯ ಪಡಿಸಲಾರಂಭಿಸಿದ.

ಪ್ರತಿದಿನವೂ ಬೆಳಗ್ಗೆ ಗಾವ್ರಿಕ್ ಅಜ್ಜಿಯ ಭಾಂಗಿಯನ್ನು ನಿರೀಕ್ಷಿಸುತ್ತ ಕಿಟಕಿಯಲ್ಲಿ ಕುಳಿತಿರುತ್ತಿದ್ದ. ಗುಂಡಿಗಳು, ಪಾದರಕ್ಷೆಗಳು, ವಿಶೇಷ ಸಮಾರಂಭದ ಆ ಕೋಟು, ಪಾವಲಿಕನ ಡಬ್ಬಿಗಡಿಗೆ ಇವುಗಳ ವಿಷಯ ಎಂದಾದರೊಂದುದಿನ ಪತ್ತೆಯಾದಾಗ ಏನು ಮಾಡುವುದು ಎಂಬುದನ್ನು ಮನಸ್ಸಿನಲ್ಲಿಯೇ ಚಿತ್ರಿಸಿಕೊಳ್ಳುತ್ತ ಪೇತ್ಯ ನಡುಗಿದ. ನಾಲ್ಕುದಿವಸ ಹೆಚ್ಚುಕಡಮೆ ಆ ಭಯಂಕರ ಸಮಯ ಬಂದೇ ಬರುವುದು. ಅಬ್ಬ!

ಆದರೆ ಆ ವಿಷಯವನ್ನು ಮನಸ್ಸಿಗೆ ತಂದುಕೊಳ್ಳವೆ ಇರಲು ಪೇತ್ಯ ಪ್ರಯತ್ನಿಸಿದ. ತನ್ನ ನಷ್ಟವನ್ನು ತುಂಬಿಕೊಳ್ಳುವ ಆಸೆಯನ್ನೇ ನಂಬಿ ಬದುಕುವ ದಿವಾಳಿ ಜೂಜುಗಾರನ ನಿಷ್ಪ್ರಯೋಜಕವಾದ ಅನಂತ ಕನಸುಗಳನ್ನು ಆಲೋಚಿಸುತ್ತ ಮನೋಯಾತನೆಯನ್ನನುಭವಿಸುತ್ತಿದ್ದ.

ಅಂದಿನ ದಿನಗಳಲ್ಲಿ ಬೀದಿಯಲ್ಲಿ ಹೋಗುವುದು ಅಪಾಯಕರವಾಗಿತ್ತು. ಆದರೆ ಗಾವ್ರಿಕ್ ಹೇಗಾದರೂಮಾಡಿ ಪೇತ್ಯನ ಕಣ್ಣಿಗೆ ಕಾಣಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಮನೆಯ ಅಂಗಳಕ್ಕೆ ಬಂದು ನಿಂತುಕೊಂಡು ಗಾವ್ರಿಕ್ ಎರಡು ಬೆರಳುಗಳನ್ನು ಬಾಯೊಳಕ್ಕೆ ತೂರಿಸಿ ಜೋರಾಗಿ ಭವ್ಯವಾದ ಸೀಟಿಯನ್ನೂದುತ್ತಿದ್ದ. ಪೇತ್ಯ ಶೀಘ್ರವೇ ಕಿಟಕಿಯಿಂದ ಗೆಳೆಯನ ಕಡೆಗೆ ಕೈಬೀಸಿ ಹಿಂದುಗಡೆಯ ಮೆಟ್ಟಲುಗಳನ್ನಿಳಿದು ಅವನ ಬಳಿಗೆ ಓಡುತ್ತಿದ್ದ.

"ಗುಂಡಿಗಳು ಬಂದುವೋ?"

"ನಾಳೆ ಕೊಟ್ಟುಬಿಡುತ್ತೇನೆ. ನನ್ನಾಣೆ, ಖಂಡಿತವಾಗಿಯೂ, ದೇವರ ಸತ್ಯವಾಗಿಯೂ. ಇದೇ ಕೊನೇಸಲ, ಇನ್ನು ಹೀಗೆ ಹೇಳುವುದಿಲ್ಲ."

ಒಂದು ದಿನ ಬೆಳಗ್ಗೆ ಗಾವ್ರಿಕ್ ತಾನಿನ್ನು ಕಾದು ಕುಳಿತಿರಲಾರೆನೆಂದು ಸಾರಿಬಿಟ್ಟ. ಪೇತ್ಯ ದಿವಾಳಿಯಾದ ಸಾಲಗಾರನಾದುದರಿಂದ ಪೂರ್ತಿಯಾಗಿ ಸಾಲ ತೀರಿಸುವವರೆಗೂ ಗಾವ್ರಿಕನ ಗುಲಾಮನಾದ ಎಂದು ಇದರ ಅರ್ಥ. ಇದು ಕಠೋರವಾದ ಆದರೆ ನ್ಯಾಯವಾದ ಬೀದಿ ಹುಡುಗರ ಶಾಸನವಾಗಿದ್ದಿತು.

ವೀರಪುರುಷನು ತನ್ನ ಅನುಚರನನ್ನು ಸ್ಕ್ವೈರ್ ಪದವಿಗೆ ಏರಿಸುವಂತೆ ಗಾವ್ರಿಕ್ ಪೇತ್ಯನ ಭುಜವನ್ನು ತಟ್ಟಿದ.

"ಈಗ ನೀನು ನನ್ನ ನೆರಳು. ನಿನ್ನ ಪುಸ್ತಕದ ಚರ್ಮದ ಚೀಲವನ್ನು ಹೆಗಲಿಗೇರಿಸಿಕೋ."

ಎಂದು ಅಧಿಕಾರ ವಾಣಿಯಲ್ಲಿ ಗಾವ್ರಿಕ್ ಹೇಳಿದ.

"ನನ್ನ ಚೀಲ? ಯಾತಕ್ಕಾಗಿ?"

"ಗುಂಡಿಗಳಿಗೋಸ್ಕರ. ಗೊತ್ತಿಲ್ಲವೇನೋ ಗುಗ್ಗು." ಪರೀಕ್ಷಾತ್ಮಕವಾದ ಸೂಕ್ಷ್ಮ ಹೊಳಪು ಗಾವ್ರಿಕನ ಕಣ್ಣುಗಳಲ್ಲಿ ಮಿಂಚಿತು.

ನಿಜ ಹೇಳುವುದಾದರೆ ಇಂಥ ವಿನೋದಕರವಾದ ಗುಲಾಮಗಿರಿಯನ್ನನುಭವಿಸುವ ಪ್ರತೀಕ್ಷೆಯು ಪೇತ್ಯನಿಗೆ ಆನಂದವನ್ನೇ ಉಂಟುಮಾಡಿತು. ಗಾವ್ರಿಕನೊಡನೆ ನಗರದ ಬೀದಿಗಳಲ್ಲಿ ಅಲೆದಾಡಬೇಕೆಂಬ ಹಂಬಲ ಪೇತ್ಯನಿಗೆ ಬಹಳ ದಿನಗಳಿಂದ ಇದ್ದಿತು. ಆದರೆ ಆಗಿನ ಶಾಂತಿಭಂಗ ಚಳುವಳಿಗಳ ಕಾರಣದಿಂದ ಅಂಗಳದಿಂದ ಹೊರಕ್ಕೆ ಕಾಲಿಕ್ಕಕೂಡದೆಂದು ಮನೆಯಲ್ಲಿ ಕಟ್ಟಾಜ್ಞೆಯಾಗಿದ್ದಿತು. ಈಗ ಅವನ ಮನಸ್ಸಿಗೆ ಶಾಂತಿ ದೊರಕಿತು. ಈಗ ತಾನು ಏನೂ ಮಾಡುವಂತಿರಲಿಲ್ಲ. ಗಾವ್ರಿಕನ ಇಚ್ಛಾನುಯಾಯಿ ತಾನು. ಗಾವ್ರಿಕನಿಗೆ ವಿಧೇಯನಾಗಿರುವುದೇ ತನ್ನ ಪರಮ ಕರ್ತವ್ಯವಾಗಿದ್ದಿತು. ತಾನು ತನ್ನ ಸ್ವಂತ ಇಚ್ಛೆಯಿಂದನಗರದ ಬೀದಿಗಳಲ್ಲಿ ಸುತ್ತಾಡಲು ಬಯಸಲಿಲ್ಲ. ಆದರೆ ಅವನು ಗಾವ್ರಿಕನ ನೆರಳಾಗಿರಬೇಕಾಗಿದ್ದಿತು. ಅದು ವಿಧಿ. ಪೇತ್ಯ ಮಹಡಿಯನ್ನೇರಿ ಹೋಗಿ ತನ್ನ ಪುಸ್ತಕದ ಚೀಲವನ್ನು ಕೈಯಲ್ಲಿ ತೆಗೆದುಕೊಂಡು ಬಂದ.

"ಹೆಗಲಿಗೆ ನೇತುಹಾಕಿಕೋ."

ಪೇತ್ಯ ಹೇಳಿದಂತೆ ನಡೆದುಕೊಂಡ. ಹಿಮ್ಮಡಿಯವರೆಗೆ ಬರುವ ನಿಲುವಂಗಿ ಧರಿಸಿ ಖಾಲಿ ಚೀಲವನ್ನು ಬೆನ್ನ ಕಡೆಗೆ ಬಿಟ್ಟುಕೊಂಡು ನಿಂತಿದ್ದ ವಿಶ್ವವಿದ್ಯಾನಿಲಯ ಪ್ರಾವೇಶಿಕ ತರಗತಿಯ ಈ ಪುಟ್ಟ ವಿದ್ಯಾರ್ಥಿಯನ್ನು ಗಾವ್ರಿಕ್ ಎಲ್ಲ ಪಕ್ಕಗಳಿಂದಲೂ ಪರೀಕ್ಷಿಸಿದ. ಅವನ ರೀತಿಯನ್ನು ನೋಡಿ ಗಾವ್ರಿಕನಿಗೆ ತೃಪ್ತಿಯಾಯಿತು.

"ಪ್ರಾವೇಶಿಕ ತರಗತಿಯ ಕಾರ್ಡು?"

"ಇದೆ."

"ಎಲ್ಲಿ ತೋರಿಸು!"

ಪೇತ್ಯ ತನ್ನ ಕಾರ್ಡನ್ನು ತೆಗೆದು ತೋರಿಸಿದ. ಗಾವ್ರಿಕ್ ಅದನ್ನು ತೆರೆದು ಮೇಲುಗಡೆಯಲ್ಲಿ ಬರೆದಿದ್ದುದನ್ನು ಓದಿದ: "ಆತ್ಮಗೌರವದ ಬೆಲೆಯನ್ನರಿತ ಪ್ರಾವೇಶಿಕ ತರಗತಿಯ ವಿದ್ಯಾರ್ಥಿಯು ತನ್ನ ಶಾಲೆಯ ಗೌರವಕ್ಕೆ ಬೆಲೆ ಕೊಡದೆ ಇರಲಾರ . . ."

"ಸರಿ" ಕಾಗದವನ್ನು ಹಿಂದಿರುಗಿ ಕೊಡುತ್ತ "ಇದನ್ನು ಭದ್ರವಾಗಿಟ್ಟುಕೊಂಡಿರು, ಸಮಯದಲ್ಲಿ ಕೆಲಸಕ್ಕೆ ಬರುತ್ತದೆ." ಎಂದು ಹೇಳಿದ.

ಅನಂತರ ಗಾವ್ರಿಕ್ ಪೇತ್ಯನನ್ನು ತಿರುಗಿಸಿ ಅವನ ಬೆನ್ನಿನ ಮೇಲಿದ್ದ ಚೀಲಕ್ಕೆ ಭಾರವಾದ ಗುಂಡಿಗಳ ಚೀಲಗಳನ್ನು ತುಂಬಿದ.

"ನಾವು ಎಲ್ಲಿ ಹೋದರೂ ನಮ್ಮನ್ನು ಇನ್ನು ಯಾರೂ ತಡೆಯುವವರಿಲ್ಲ." ಚೀಲದ ಬಾಯಿಯ ಪಟ್ಟಿಯನ್ನು ಬಿಗಿಮಾಡುತ್ತ ಗಾವ್ರಿಕ್ ಹೇಳಿದ. ಚೀಲದ ಮೃದುವಾದ ತೊಗಲಿನ ಮುಚ್ಚಳವನ್ನು ತೃಪ್ತಿಯಿಂದ ತಟ್ಟಿದ.

ಗಾವ್ರಿಕನ ಆ ಮಾತುಗಳ ಅರ್ಥ ಪೇತ್ಯನಿಗೆ ಸರಿಯಾಗಿ ಗೊತ್ತಾಗಲಿಲ್ಲ. ಬಾಯಿ ಬಿಗಿದುಕೊಂಡಿದ್ದು ಹೆಚ್ಚು ವಿಷಯಗಳನ್ನು ತಿಳಿ ಎಂಬ ಬೀದಿಯ ಸಾಮಾನ್ಯ ಶಾಸನದ ಪ್ರಕಾರ

ಪೇತ್ಯ ತನ್ನ ನಾಲಗೆಯನ್ನು ಅಲ್ಲಾಡಿಸದೆ ಸುಮ್ಮನೆ ಇದ್ದ. ಜಾಗರೂಕತೆಯಿಂದ ಅಂಗಳವನ್ನು ಬಿಟ್ಟು ಆ ಹುಡುಗರಿಬ್ಬರೂ ಅಲ್ಲಿಂದ ಹೊರಟರು.

ಅಂದಿನಿಂದ ಗಲಿಬಿಲಿಯ ಗೊಂದಲದ ನಗರದ ಬೀದಿಗಳ ಮೂಲಕ ಅವರ ಅಲೆತ ಆರಂಭವಾಯಿತು.

ದಿನ ಕಳೆದಂತೆಲ್ಲ ನಗರದ ಬೀದಿಗಳಲ್ಲಿ ಓಡಾಡುವುದು ಹೆಚ್ಚು ಹೆಚ್ಚು ಅಪಾಯಕರವಾಗುತ್ತ ಪರಿಣಮಿಸಿತು. ಆದರೆ ಗಾವ್ರಿಕ್ ಮಾತ್ರ ರೋಮಾಂಚಕರವಾದ ನಿಗೂಢವಾದ ತನ್ನ ಅಲೆದಾಡುವ ವೀರವೃತ್ತಿಯನ್ನು ತ್ಯಜಿಸಲಿಲ್ಲ. ಅದಕ್ಕೆ ಪ್ರತಿಯಾಗಿ ನಗರವು ಎಷ್ಟೊಂದು ಕ್ಷುಬ್ಧವೂ ಭೀಕರವೂ ಆಗುತ್ತ ಹೋಯಿತೋ ಅಷ್ಟು ಅಷ್ಟು ಹಟದಿಂದ ನಗರದ ಅತ್ಯಪಾಯಕರವಾದ ಕೊಂಪೆಗಳಿಗೂ ಕೂಡ ಗಾವ್ರಿಕ್ ಹೋಗಿ ಬರುವುದು ಹೆಚ್ಚಾಯಿತು. ಇದನ್ನೆಲ್ಲ ನೋಡಿ ಗಾವ್ರಿಕನಿಗೂ ಈ ಚಳುವಳಿಗೂ ಏನಾದರೂ ಒಂದು ಅವರ್ಣನೀಯವಾದ ಸಂಬಂಧವಿರಬಹುದೇ ಎಂದು ಪೇತ್ಯನಿಗೆ ಆಶ್ಚರ್ಯವಾಗಹತ್ತಿತು.

ಬೆಳಗಿನಿಂದ ಸಂಜೆಯವರೆಗೂ ಆ ಇಬ್ಬರು ಹುಡುಗರೂ ಹಿತ್ತಲುಕಡೆಯ ಬಾಗಿಲುಗಳ ಮೂಲಕ ಮನೆಯ ಅಂಗಳಗಳಿಗೆ ಹೋಗಿಬರುತ್ತಿದ್ದರು. ಅಲ್ಲಿ ಗಾವ್ರಿಕ್ ಹುಡುಗರೊಡನೆ ಗುಂಡಿಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಹಾರವನ್ನು ನಡೆಸುತ್ತಿದ್ದ. ಕೆಲವು ಮನೆಯ ಅಂಗಳಗಳಲ್ಲಿ ಗಾವ್ರಿಕ್ ಸಾಲವನ್ನು ವಸೂಲುಮಾಡಿಕೊಳ್ಳುತ್ತಿದ್ದ. ಇನ್ನು ಕೆಲವು ಅಂಗಳಗಳಲ್ಲಿ ಆಟವನ್ನಾಡುತ್ತಿದ್ದ. ಇನ್ನು ಕೆಲವು ಮನೆಗಳಲ್ಲಿ ದೊಡ್ಡವರೊಡನೆ ಗಾವ್ರಿಕನ ವ್ಯವಹಾರ ಜರುಗುತ್ತಿತ್ತು. ಹುಡುಗರಿಗಿಂತ ಹೆಚ್ಚಾಗಿ ಗಾವ್ರಿಕನ ಬಳಿ ಈ ದೊಡ್ಡವರು ಗುಂಡಿಗಳ ವಿಷಯದಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದುದನ್ನು ನೋಡಿ ಪೇತ್ಯ ಅತೀವ ಚಕಿತನಾಗಿದ್ದ.

ಪೇತ್ಯ ಭಾರವಾದ ಚರ್ಮದ ಚೀಲವನ್ನು ಬೆನ್ನಿನ ಮೇಲೆ ಹೊತ್ತುಕೊಂಡು ಗಾವ್ರಿಕ್ ಎಲ್ಲೆಲ್ಲಿ ಹೋದರೆ ಅಲ್ಲೆಲ್ಲ ವಿಧೇಯನಾಗಿ ಅವನನ್ನು ಹಿಂಬಾಲಿಸುತ್ತಿದ್ದ. ಗಾವ್ರಿಕನ ಜತೆಯಲ್ಲಿ ಹೋದಾಗಲೆಲ್ಲ ನಗರವು ಪೇತ್ಯನ ಆಶ್ಚರ್ಯಭರಿತ ಕಣ್ಣುಗಳ ಮುಂದೆ ಮಾಯೆಯಿಂದ ಎಂಬಂತೆ ಒಂದರಿಂದೊಂದಕ್ಕೆ ಪರಸ್ಪರ ಸಂಬಂಧ ಕಲ್ಪಿಸುವ ಅಂಗಳಗಳನ್ನೂ, ಉಗ್ರಾಣಗಳನ್ನೂ, ಬೇ‍ಗಳಲ್ಲಿನ ಕಳ್ಳಗಂಡಿಗಳನ್ನೂ, ಷೆಡ್ಡುಗಳನ್ನೂ, ಕಟ್ಟಿಗೆ ಅಂಗಡಿಗಳನ್ನೂ, ಗಾಜುಗಳನ್ನು ಹೊ‍ಸಿದ ಕಮಾನಿನ ಮೇಲ್ಚಾವಣಿಗಳನ್ನೂ, ಇನ್ನೂ ಇತರ ಎಲ್ಲ ರಹಸ್ಯಗಳನ್ನೂ ಬಹಿರಂಗಪಡಿ‍ತ್ತಿತ್ತು.

ಒಡೆಸ್ಸ ನಗರದ ಕೊಳಕು ಪ್ರದೇಶಗಳ ಭಯಂಕರವಾದ ಬಡತನದ ಚಿತ್ರ ಪೇತ‍ಕಣ್ಣಿಗೆ ಕಟ್ಟಿದಂತೆ ತೋರುತ್ತಿದ್ದಿತು. ಅಂಥ ಪ್ರದೇಶಗಳ ಇರುವಿಕೆಯೂ ಕೂಡ ಅವನಿಗೆ ಅ‍ವರೆಗೆ ಗೊತ್ತಿರಲಿಲ್ಲ.

ಗುಂಡುಗಳು ಹಾರಿದಾಗ ಹೆಬ್ಬಾಗಿಲುಗಳಲ್ಲಿ ಮರೆಯಾಗಿ ನಿಲ್ಲುತ್ತಲೂ, ರಸ್ತೆಯನ್ನು ‍ಗಟ್ಟಿ ತಲೆಕೆಳಕಾಗಿ ಬಿದ್ದ ಟ್ರಾಮುಗಳನ್ನು ಬಳಸಿಕೊಂಡು ಹೋಗುತ್ತಲೂ ಆ ಬಾಲಕರು ದೂರ ದೂರದ ಭಾಗಗಳಿಗೆಲ್ಲ ಹೋಗಿ ಬರುತ್ತ ನಗರದ ರಸ್ತೆಗಳಲ್ಲಿ ಓಡಾಡುತ್ತಿದ್ದರು.

ಪೇತ್ಯನು ಧರಿಸಿದ್ದ ವಿಶ್ವವಿದ್ಯಾನಿಲಯ ಪ್ರಾವೇಶಿಕ ತರಗತಿಯ ವಿದ್ಯಾರ್ಥಿಗಳ ಸಮವ‍ಕಾರಣ ಸೈನ್ಯ ಮತ್ತು ಪೋಲೀಸರಿಂದ ಸುತ್ತುಗಟ್ಟಲ್ಪಟ್ಟ ಮೊಹಲ್ಲಗಳಿಗೂ ಕೂಡ ಸುಲಭ

ಹೋಗಿ ಬರಲು ಸಾಧ್ಯವಾಗುತ್ತಿತ್ತು. ಈ ಕಲೆಯಲ್ಲಿ ಗಾವ್ರಿಕ್ ಪೇತ್ಯನನ್ನು ಚೆನ್ನಾಗಿ ತರಬೇತು ಮಾಡಿದ್ದ. ಪೇತ್ಯ ಕಾವಲು ಪಡೆಯ ಮುಖಂಡನ ಬಳಿಗೆ ಹೋಗಿ ಕಣ್ಣೀರು ಸುರಿಸುತ್ತ "ಸ್ವಾಮಿ, ನಾನೂ ನನ್ನ ಗೆಳೆಯನೂ ರಸ್ತೆಯನ್ನು ದಾಟಲು ಅವಕಾಶ ಕೊಡಿ. ಅಲ್ಲಿ ಕಾಣುವ ಆ ದೊಡ್ಡ ಬೂದಿಬಣ್ಣದ ಮನೆಯಲ್ಲಿ ನಾವು ವಾಸವಾಗಿರುವುದು. ತುಂಬ ಹೊತ್ತಾಗಿ ಹೋಯಿತು ಎಂದು ನಮ್ಮ ತಾಯಿ ಪರದಾಡುತ್ತಿರಬಹುದು." ಎಂದು ಹೇಳುತ್ತಿದ್ದ. ಶಾಲೆಯ ಆ ಪುಸ್ತಕದ ಚೀಲ ಮತ್ತು ಸಮವಸ್ತ್ರಗಳಲ್ಲಿ ಪೇತ್ಯ ನಿಷ್ಕಪಟಿಯಂತೆಯೂ ಗೌರವಯುತ ವ್ಯಕ್ತಿಯಂತೆಯೂ ಕಾಣುತ್ತಿದ್ದುದರಿಂದ ಆ ಶಂಕಿತ ಪ್ರದೇಶಕ್ಕೆ ಯಾರನ್ನೂ ಬಿಡಕೂಡದೆಂಬ ಕಟ್ಟಾಜ್ಞೆಯಿದ್ದರೂ ಕೂಡ ಆ ಆಜ್ಞೆಗೆ ಅಪವಾದವಾಗಿ ಈ ಹೆದರಿದ ಕಂದರಿಬ್ಬರಿಗೂ ರಸ್ತೆಯನ್ನು ದಾಟಲು ಅಪ್ಪಣೆ ದೊರೆಯುತ್ತಿದ್ದಿತು.

"ಓಡಿ, ಓಡಿ ಆದರೆ ಎಚ್ಚರಿಕೆಯಿಂದಿರಿ. ಗೋಡೆ ಪಕ್ಕದಲ್ಲೇ ಹೋಗಿ. ಪುನಃ ನನ್ನ ಕಣ್ಣಿಗೆ ಬಿದ್ದೀರಿ, ಜೋಕೆ."

ಈ ರೀತಿಯಲ್ಲಿ ಆ ಹುಡುಗರು ಇತರ ಭಾಗಗಳಿಂದ ಪೂರ್ಣವಾಗಿ ಕಡಿದು ಹೋಗಿದ್ದ ನಗರ ಪ್ರದೇಶಗಳಿಗೆಲ್ಲ ಪ್ರವೇಶವನ್ನು ಗಿಟ್ಟಿಸಿಕೊಳ್ಳುತ್ತಿದ್ದರು.

ಮಲಯ ಅರ್ನೌತ್ಸ್ಕಾಯ ರಸ್ತೆಯಲ್ಲಿದ್ದ ಒಂದು ಮನೆಗೆ ಅವರು ಹಲವು ಬಾರಿ ಹೋಗಿ ಬರುತ್ತಿದ್ದರು. ಆ ಮನೆಯ ಅಂಗಳದಲ್ಲಿ ಒಂದು ಚಿಲುಮೆಯಿದ್ದಿತು. ಸ್ಪಂಜಿನಂತೆ ಇದ್ದ ಸಮುದ್ರದ ಕಲ್ಲುಗಳನ್ನು ಪಿರಮಿಡ್ಡಿನಂತೆ ಜೋಡಿಸಲಾಗಿತ್ತು. ಅದರ ತುದಿಯಲ್ಲಿ ಹಸಿರು ಬಣ್ಣದ ಕಬ್ಬಿಣದ ಕೊಕ್ಕರೆ ನಿಂತಿದ್ದಿತು. ಒಂದಾನೊಂದು ಕಾಲದಲ್ಲಿ ಕೊಕ್ಕರೆಯ ಕೊಕ್ಕಿನಿಂದ ನೀರು ಬರುತ್ತಿದ್ದಿತಂತೆ.

ಪೇತ್ಯ ಅಂಗಳದಲ್ಲಿ ಗಾವ್ರಿಕನಿಗಾಗಿ ಕಾಯುತ್ತ ನಿಲ್ಲುತ್ತಿದ್ದ. ಗಾವ್ರಿಕ್ ಅದರ ತಳ ಹದಿಯ ಕಡೆಗೆ ಓಡಿಹೋಗಿ ಅಸಾಧಾರಣವಾಗಿ ಭಾರವಾಗಿರುತ್ತಿದ್ದ ಗುಂಡಿಗಳ ಚೀಲಗಳನ್ನು ಹೊತ್ತು ಹಿಂತಿರುಗಿ ಬರುತ್ತಿದ್ದ. ಆ ಚೀಲಗಳನ್ನು ಪೇತ್ಯನ ಚರ್ಮದ ಚೀಲದೊಳಕ್ಕೆ ತುಂಬುತ್ತಿದ್ದ. ಅಂಗಳದ ಪುರಾತನವಾದ ಶಿಥಿಲವಾದ ಕಂಬಸಾಲುಗಳ ಮಾರ್ಗದ ಮೂಲಕ ತಕ್ಷಣ ಅವರಿಬ್ಬರೂ ಅಲ್ಲಿಂದ ಹೊರಟುಬಿಡುತ್ತಿದ್ದರು.

ಒಂದುಸಲ ಪೇತ್ಯ ಗಾವ್ರಿಕನ ಅಜ್ಜನನ್ನು ಅಲ್ಲಿ ಕಂಡ. ಅವನು ಡೊಂಕುಕಾಲುಗಳ ಮೇಲೆ ನಡೆಯುತ್ತ ಅಂಗಳದ ಮೂಲಕ ಕಸದ ತೊಟ್ಟಿಗೆ ಹೋಗುತ್ತಿದ್ದ.

"ಓ ಅಜ್ಜ! ಇಲ್ಲಿ ನೀನೇನು ಮಾಡುತ್ತಿದ್ದೀಯೆ? ನೀನು ಜೈಲಿನಲ್ಲಿದ್ದೀಯೆ ಎಂದು ಮಾಡಿದ್ದೆ." ಎಂದು ಪೇತ್ಯ ಕೂಗಿದ

ಅಜ್ಜ ಹುಡುಗನ ಕಡೆಗೆ ತಿರುಗಿ ನೋಡಿದರೂ ಕೂಡ ಬೇಕೆಂತಲೇ ಅವನನ್ನು ಗುರುತಿಸಲಿಲ್ಲ.

"ಈಗ ನಾನು ಇಲ್ಲಿಯೇ ಇರುವುದು. ನಾನು ಇಲ್ಲಿಯ ಕಾವಲುಗಾರ, ರಾತ್ರಿಯ ಕಾವಲುಗಾರ." ಎಂದು ತನ್ನ ಒಂದು ಕೈಯ್ಯಲ್ಲಿದ್ದ ಪಾತ್ರೆಯನ್ನು ಇನ್ನೊಂದು ಕೈಗೆ ತೆಗೆದುಕೊಳ್ಳುತ್ತ ಕೆಳದನಿಯಲ್ಲಿ ಗೊಣಗಿದ, ಮೊದಲಿನಂತೆ ನಿಧಾನವಾಗಿ ನಡೆಯುತ್ತ ತನ್ನ ದಾರಿ ಹಿಡಿದ.

ಆ ಹುಡುಗರು ಬಂದರುಕಟ್ಟೆ, ಚುಮ್ಕ, ಡ್ಯೂಕನ ಉದ್ಯಾನ, ಪೆರಿಸಿಪ್, ಫೆನ್‌ಕಾರ್ಖಾನೆ ಮೊದಲಾದ ಎಲ್ಲ ಸ್ಥಳಗಳಿಗೂ ಹೋಗಿಬ್ಬರುತ್ತಿದ್ದರು. ಆದರೆ ಕಾರ್ಖಾನೆಯ ಉಪನಗರಕ್ಕೆ ಮಾತ್ರ ಗಾವ್ರಿಕ್ ಒಬ್ಬನೇ ತನ್ನ ದಿನದ ಕೆಲಸಗಳೆಲ್ಲ ಮುಗಿದ ತರುವಾಯ ಹೋಗುತ್ತಿದ್ದ.

ತಾತ್ಯಾನ ಚಿಕ್ಕಮ್ಮ ಮತ್ತು ತಂದೆಯವರುಗಳಿಗೆ ತಮ್ಮ ಪೇತ್ಯ ಆ ಕಾಲದಲ್ಲಿ ಭೇಟಿ ಕೊಡುತ್ತಿದ್ದ ಸ್ಥಳಗಳ ಅಸ್ಪಷ್ಟ ಸೂಚನೆ ದೊರಕಿದ್ದರೂ ಕೂಡ ಅವರು ತಮ್ಮ ಬುದ್ಧಿಯನ್ನು ಕಳೆದುಕೊಂಡು ಹುಚ್ಚರಾಗುತ್ತಿದ್ದರೆಂಬುದರಲ್ಲಿ ಸಂಶಯವಿರಲಿಲ್ಲ.

೩೭. ಬಾಂಬು

ಕೊನೆಗೊಂದುಸಲ ಈ ಆಶ್ಚರ್ಯಕರವಾದ ಆದರೆ ವಿಲಕ್ಷಣವಾದ ಸುತ್ತಾಟವು ಮುಕ್ತಾಯಗೊಂಡಿತು.

ಆ ಒಂದು ಸ್ಮರಣಯೋಗ್ಯವಾದ ದಿನ ಗಾವ್ರಿಕ್ ಎಂದಿಗಿಂತ ಬೇಗ ಬಂದು ಕಾಣಿಸಿಕೊಂಡ. ಮರುಕ್ಷಣವೇ ಅವನೂ ಪೇತ್ಯನೂ ಹೊರಹೊರಟರು.

ಗಾವ್ರಿಕನ ಮುಖ ಕಳೆಗುಂದಿತ್ತು ಮತ್ತು ಅಸಾಧಾರಣವಾಗಿ ಬಿಗಿಯಾಗಿತ್ತು. ಗಟ್ಟಿಯಾಗಿ ಔಡು ಕಚ್ಚಿದ್ದರಿಂದ ಅವನ ತುಟಿಗಳು ಚಳಿಯ ಕಾರಣ ಬೇರೆ ಬೇರೆ ಬಣ್ಣಗಳನ್ನು ಪಡೆದುಕೊಂಡಿದ್ದುವು. ಗಾವ್ರಿಕ್ ಸಡಿಲವಾದ ಕಾರ್ಡರಾಯ್ ಷರಾಯಿ ಜೇಬಿನೊಳಕ್ಕೆ ಕೈಯನ್ನು ತುರುಕಿಕೊಂಡು ಓಲಾಡುತ್ತ ಸರಸರನೆ ಹೆಜ್ಜೆಯಿಡುತ್ತ ಹೋದ. ಆಗ ಅವನು ಬಗ್ಗಿದ ದೃಢ ನಿಲುವಿನ ಸಣ್ಣ ವ್ಯಕ್ತಿಯಾಗಿ ತೋರುತ್ತಿದ್ದ. ಆಗಿಂದಾಗ್ಗೆ ಅಜ್ಜನ ದೃಷ್ಟಿಯನ್ನು ಹೋಲುತ್ತಿದ್ದ ನೆಟ್ಟ ನೋಟದ ಅವನ ಸ್ವಚ್ಛ ಕಣ್ಣುಗಳಲ್ಲಿ ಒಂದು ದೃಢ ಪ್ರಕಾಶ ಮಿನುಗುತ್ತಿತ್ತು. ಪೇತ್ಯ ಗಾವ್ರಿಕನ ಸಮಕ್ಕೂ ಹೆಜ್ಜೆ ಹಾಕಲು ಶ್ರಮಪಡಬೇಕಾಯಿತು. ಕನಸಿನ ರಸ್ತೆಗಳಂತೆ ನಿರ್ಜನವಾದ ಆ ಬೀದಿಗಳುದ್ದಕ್ಕೂ ಅವರು ಓಡುತ್ತಿರುವಂತೆ ಕಾಣುತ್ತಿದ್ದಿತು.

ಉದ್ವೇಗಪೂರಿತವಾದ ನಿರೀಕ್ಷಣೆಯು ನಿರುತ್ಸಾಹಕರವಾದ ವಾತಾವರಣದಲ್ಲಿ ಜೋತು ಬಿದ್ದಂತೆ ಇದ್ದಿತು. ರಸ್ತೆಗೆ ಹಾಸಿದ್ದ ಕಲ್ಲುಗಳಮೇಲೆ ಹುಡುಗರ ಕಾಲುಸಪ್ಪಳ ಪ್ರತಿಧ್ವನಿಸುತ್ತಿತ್ತು. ಅಲ್ಲೊಂದು ಇಲ್ಲೊಂದು ಸಣ್ಣ ಹಳ್ಳವನ್ನು ಮುಚ್ಚಿದ್ದ ಮಂಜಿನಗಡ್ಡೆಯ ಹಲಗೆ ಕಾಲಿನ ತುಳಿತಕ್ಕೆ ಸಿಕ್ಕಿ ಮುರಿದು ಹೋಗುತ್ತಿದ್ದಿತು. ನಗರದ ಮಧ್ಯದ ದೂರದಿಂದ ಇದ್ದಕ್ಕಿದ್ದಂತೆ ಗಡಗಡ ಶಬ್ದವೊಂದು ಮೆತ್ತಗೆ ಕೇಳಬಂದಿತು. ಖಾಲಿ ಪೆಟ್ಟಿಗೆಗಳ ರಾಶಿ ಗಾಡಿಯ ಮೇಲಿನಿಂದ ಕಳಚಿ ಬಿದ್ದಂತೆ ಆ ಶಬ್ದ ಇದ್ದಿತು. ಗಾವ್ರಿಕ್ ನಡೆಯುವುದನ್ನು ಬಿಟ್ಟು ನಿಂತು ಆ ದುರ್ಬಲವಾದ ಪ್ರತಿಧ್ವನಿಯನ್ನು ಆಲಿಸಿದ.

"ಅದೇನು? ಖಾಲಿ ಪೆಟ್ಟಿಗೆಗಳೆ?" ಪಿಸುಮಾತಿನಲ್ಲಿ ಪೇತ್ಯ ಕೇಳಿದ.

"ಬಾಂಬು. ಯಾರೋ ಅದಕ್ಕೆ ತುತ್ತಾಗಿರಬೇಕು." ಗಾವ್ರಿಕ್ ಶುಷ್ಕವಾಗಿದ್ದರೂ ದೃಢವಾದ ಸ್ವರದಲ್ಲಿ ಹೇಳಿದ.

ಎರಡು ಬೀದಿಗಳಾಚೆ ಒಬ್ಬ ಹೆಂಗಸು ಕಲ್ಲಿದ್ದಲು ಗಡ್ಡೆಗಳನ್ನೂ ಕ್ವಿನ್ಸ್‌ಕಾಯಿಗಳನ್ನೂ ಕೆಳಕ್ಕೆ ಬೀಳಿಸುತ್ತ ಆ ತಿರುವಿನಲ್ಲಿ ಓಡಿದಳು.

ನಡುಗುತ್ತಿರುವ ಕೈಯಿಂದ ಕರವಸ್ತ್ರವನ್ನು ನೀವುತ್ತ "ಅಯ್ಯೋ ದೇವರೇ!" ಎಂದು ಮೇಲಿಂದ ಮೇಲೆ ಹೇಳುತ್ತ "ಏನು ಭಯಂಕರ ದೃಶ್ಯ! ಆ ಮನುಷ್ಯ ಚೂರು ಚೂರಾಗಿ ಹೋದ!" ಎಂದು ಉದ್ಗಾರ ತೆಗೆದಳು.

"ಎಲ್ಲಿ?"

"ಪೋಲೀಸ್ ರಸ್ತೆಯಲ್ಲಿ, ಇಗೋ ಇಲ್ಲಿ ನಾನು ಬರ‍್ತಾ ಇದ್ದೆ. ಅವನು ಅಲ್ಲಿದ್ದ, ಒಂದು ಗಾಡಿಯಲ್ಲಿ. ಆಗ ಅದು ಸಿಡಿಯಿತು. ಚೂರು ಚೂರಾಗಿ ಹರಿದುಹಾಕಿ ಬಿಟ್ಟಿತು. ದೇವರೇ ಕ್ಷಮಿಸು! ಅದು ಕುದುರೆಗಳನ್ನು ಕೊಂದು ಗಾಡಿಯನ್ನೂ ಕೂಡ ಪುಡಿಪುಡಿ ಮಾಡಿಬಿಟ್ಟಿತು."

"ಯಾರು ಅವನು?"

"ಅಲೆಗ್ಸಾಂದ್ರೋವ್ಸ್ಕಿ ಪೋಲೀಸ್ ಠಾಣೆಯ ಮುಖ್ಯಾಧಿಕಾರಿ. ಅಲ್ಲಿ ನಾನು ಇದ್ದೆ, ಇಲ್ಲಿ ಅವನು ಇದ್ದ. ಆ ಕ್ರಾಂತಿಕಾರ ಅಲ್ಲಿ ಎದುರಿಗೆ ಸರಿಯಾಗಿ ನಿಂತಿದ್ದ. ವರ್ತಮಾನ ಪತ್ರಿಕೆಯಲ್ಲಿ ಸುತ್ತಿದ್ದ ಒಂದು ಸಣ್ಣ ಪೊಟ್ಟಣವನ್ನು ಅವನು ಇಟ್ಟುಕೊಂಡಿದ್ದ."

"ಅವನನ್ನು ಹಿಡಿದರೋ?"

"ಕ್ರಾಂತಿಕಾರನನ್ನೇ, ಎಂದಿಗೂ ಇಲ್ಲ. ಎಲ್ಲರೂ ಓಡಿದರು, ಅವನೂ ಓಡಿದ. ವೇಷ ಬದಲಿಸಿಕೊಂಡ ನಾವಿಕ ಅವನು ಎಂದು ಜನ ಹೇಳುತ್ತಾರೆ."

ಹೆಂಗಸು ಓಡಿಹೋದಳು. ಮುಖ ಗಂಟುಹಾಕಿಕೊಂಡಿದ್ದರೂ ಕೂಡ ಪೇತ್ಯನ ಹೆಗಲನ್ನು ಗಾವ್ರಿಕ್ ಹಿಡಿದುಕೊಂಡು ಉತ್ಸಾಹದಿಂದ ಜಗಿಯುತ್ತ ನರ್ತಿಸಲಾರಂಭಿಸಿದ.

"ಅವನೇ ಅಜ್ಜನ ಮುಖಕ್ಕೆ ಅಪ್ಪಳಿಸಿದವನು. ತನ್ನ ಮುಷ್ಟಿಗಳನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ಅದು ಕಲಿಸಿಕೊಡುತ್ತದೆ. ಹೌದೋ?" ಆತುರಆತುರವಾಗಿ ಉಗ್ರವಾದ ಮಾತಿನಲ್ಲಿ ಗಾವ್ರಿಕ್ ಹೇಳಿದ.

"ಹೌದು ಹೌದು." ಉತ್ಸಾಹಶೂನ್ಯನಾಗಿ ಪೇತ್ಯ ಉತ್ತರಕೊಟ್ಟ.

ಆ ದಿವಸ ಹುಡುಗರು ಚಿಲುಮೆ ಮತ್ತು ಕೂಕ್ಕರೆಯಿದ್ದ ಮಲಯ ಅರ್ನೌತ್ಸ್ಕಾಯ ಬೀದಿಯ ಮನೆಗೆ ಎರಡುಸಲ ಹೋಗಿಬಂದರು. ಗಾವ್ರಿಕ್ ಹೇಳುವಂತೆ ಅವರು "ಸಾಮಾನು"ಗಳನ್ನು ಸ್ವೀಕರಿಸುತ್ತಿದ್ದರು.

ಅಲೆಗ್ಸಾಂದ್ರೋವ್ಸ್ಕಿ ಪ್ರಾಸ್ಪೆಕ್ಟಿಗೆ ಇದೇ ಮೊದಲನೆಯ ಬಾರಿ ಹುಡುಗರು "ಸಾಮಾನು"ಗಳನ್ನು ತೆಗೆದುಕೊಂಡುಹೋದುದು. ಆ ಪ್ರದೇಶವನ್ನು ಪೋಲೀಸರು ರಕ್ಷಣಾಕೋಟೆಯಿಂದ ಏರ್ಪಡಿಸಿದ್ದರು. ಹೆಚ್ಚೇನೂ ತೊಂದರೆ ಇಲ್ಲದೆ ಅವರಿಗೆ ಹೋಗಲು ಅನುಮತಿದೊರಕಿತು. ಅನೇಕ ಮನೆಗಳನ್ನು ಕಳೆದು ಮುಂದೆ ಹೋದ ಬಳಿಕ ಗಾವ್ರಿಕ್ ಪೇತ್ಯನನ್ನು ನಿರ್ಜನವಾದ ಅಂಗಳದೊಳಕ್ಕೆ ಹೆಬ್ಬಾಗಿಲಿನ ಮೂಲಕ ಕರೆದೊಯ್ದ. ಬಾಗಿಲ ಬಳಿಯಲ್ಲಿ ಸುತ್ತ ಸರಪಣಿ ಕಟ್ಟಿದ್ದ ಕಾವಲುಗಾರನ ಪೀಠವಿದ್ದಿತು. ಅಲ್ಲಿಯ ನೆಲ ಗಟ್ಟಿಯಾಗಿದ್ದಿತು. ಖಾಲಿಯಾದ ಟೊಮೇಟೊ ಕ್ಲಿಪ್ಪುಗಳು, ತೋಟಾಪೆಟ್ಟಿಗಳು ನೆಲದ ಮೇಲೆ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಆಳಿಕರು ಬೂಡ್ಸುಗಳಿಂದ ನೆಲದಮೇಲೆ ಅವುಗಳನ್ನು ಹೊಸಕಿದ್ದರು. ಹುಡುಗರು ಅಂಗಳವನ್ನು ದಾಟಿ ನೆಲಮಾಳಿಗೆಯೊಳಕ್ಕೆ ಇಳಿದರು. ತೇವವಾದ ಆ ಕತ್ತಲೆಯಲ್ಲಿ ಹಲವಾರು ಮರದ ಪೆಟ್ಟಿಗಳನ್ನು ದಾಟಿ ಅವರು ಇನ್ನೊಂದು ಅಂಗಳಕ್ಕೆ ಬಂದರು. ಅಲ್ಲಿಂದ ಅವರು ಒಂದು ಸಣ್ಣ

ಕಂಡಿಯನ್ನು ಪ್ರವೇಶಿಸಿ ಎರಡು ಎತ್ತರವಾದ ಕಪ್ಪು ಗೋಡೆಗಳ ನಡುವಿನಿಂದ ಹಾದು ಬೇರೆ ಇನ್ನೊಂದು ಅಂಗಳಕ್ಕೆ ಬಂದರು. ಗಾವ್ರಿಕನಿಗೆ ಇಲ್ಲಿಯ ಒಳಹೊರಗುಗಳೆಲ್ಲ ಚೆನ್ನಾಗಿ ಗೊತ್ತಿದ್ದುವು. ಆ ದಾರಿ ಬಹು ಚಿಕ್ಕದಾಗಿದ್ದಿತು. ಪೇತ್ಯ ಗಾವ್ರಿಕನನ್ನು ಕಷ್ಟಪಟ್ಟುಕೊಂಡು ಹಿಂಬಾಲಿಸುತ್ತಿದ್ದಾಗ ಅವನ ಬೆನ್ನಮೇಲಿನ ಚೀಲ ಗೋಡೆಗೆ ತಗಲುತ್ತಿದ್ದಿತು. ಕೊನೆಗೆ ಅವರು ಪ್ರವೇಶಿಸಿದ ಅಂಗಳವು ಕಡಿದಾಗಿಯೂ ಎತ್ತರವಾಗಿಯೂ ಇದ್ದಿತು. ಅದನ್ನು ನೋಡಿದರೆ ಒಂದು ತೊಟ್ಟಿಯಂತೆ ಕಾಣುತ್ತಿದ್ದಿತು. ಅವರು ನಡೆದ ದೂರವನ್ನೂ, ದಾಟಿದ ಹಲವಾರು ತಿರುವು ಗಳನ್ನೂ, ಸೊಟ್ಟಸೊಟ್ಟಾದ ದಾರಿಯನ್ನೂ ಲೆಕ್ಕಹಾಕಿ ನೋಡಿದಾಗ ಅವರು ಇನ್ನಾವುದೋ ಒಂದು ರಸ್ತೆಗೆ ಎದುರಾಗಿದ್ದ ಒಂದು ಕಟ್ಟಡಕ್ಕೆ ಹಿಂದುಗಡೆಯಿಂದ ಬಳಸಿಕೊಂಡು ಬಂದಿದ್ದ ರೆಂದು ಊಹಿಸಬಹುದಾಗಿದ್ದಿತು.

ಅಂಗಳದಲ್ಲೆಲ್ಲ ಒಡೆದ ಗಾಜಿನ ಮತ್ತು ಗಾರೆಯ ಚೂರುಗಳು ಹರಡಿದ್ದುವು. ಕಟ್ಟಡದ ಕಿಟಕಿಗಳನ್ನು ಬಿಗಿಯಾಗಿ ಮುಚ್ಚಲಾಗಿತ್ತು. ಅಲ್ಲಿ ಯಾರೂ ವಾಸಿಸುತ್ತಿದ್ದಂತೆ ಕಾಣಲಿಲ್ಲ. ಅಲ್ಲಿಯ ಗಾಳಿಯಲ್ಲಿ ಪೊಳ್ಳು ಮೌನವು ಇಳಿಬಿದ್ದಿದ್ದಂತೆ ಭಾಸವಾಗುತ್ತಿತ್ತು.

ಆ ಮೌನದ ಆಚೆ ಕಟ್ಟಡದ ಇನ್ನೊಂದು ಪಕ್ಕದ ಅಜ್ಞಾತ ರಸ್ತೆಯಲ್ಲಿ ಯಾವುದೋ ಒಂದು ರೀತಿಯ ಚಲನೆಯ ಅಪಾಯಸೂಚಕ ಗಲಾಟೆಯಿದ್ದಿತು. ಆ ಗಲಾಟೆಯನ್ನು ಕಿವಿಯಿಂದ ಆಲಿಸುವುದಕ್ಕೆ ಬದಲಾಗಿ ಇಂದ್ರಿಯಗಳಮೂಲಕ ಗ್ರಹಿಸಬೇಕಾಗಿತ್ತು.

ಅಲ್ಲದೆ ಮೇಲಿಂದ ಮೇಲೆ ಆಕಾಶದಿಂದಲೋ ಎಂಬಂತೆ ಗುಂಡು ಹೊಡೆದ ಶಬ್ದ ಕೇಳಿಸು ತ್ತಿದ್ದಿತು. ಬಾವಿಯನ್ನು ಪ್ರತಿಧ್ವನಿ ಅಲೆಅಲೆಯಾಗಿ ತುಂಬುವಂತೆ ಗುಂಡಿನ ಶಬ್ದ ಆ ಅಂಗಳ ವನ್ನು ತುಂಬುತ್ತಿದ್ದಿತು. ಪೇತ್ಯ ಬೆನ್ನನ್ನು ಗೋಡೆಗೆ ಆನಿಸಿಕೊಂಡು ನಡುಗುತ್ತ ಕಣ್ಣು ಮುಚ್ಚಿ ನಿಂತ. ಆದರೆ ಗಾವ್ರಿಕನಲ್ಲಿ ಈ ವಿಕಾರಗಳಾವುವೂ ಕಂಡುಬರಲಿಲ್ಲ. ನಿಧಾನವಾಗಿ ಬಾಯಿಗೆ ಎರಡು ಬೆರಳುಗಳನ್ನು ಹಾಕಿ ಸೀಟಿ ಹಾಕಿದ.

ಮೇಲುಗಡೆ ಯಾವುದೋ ಒಂದು ಕಿಟಕಿ ಬಡಿದ ಶಬ್ದ ಮತ್ತು "ಬಂದೆ" ಎಂಬ ಕೂಗು ಕೇಳಿಸಿತು. ಪೇತ್ಯನಿಗೆ ಒಂದು ನಿಮಿಷ ಒಂದು ಗಂಟೆಯಂತೆ ಕಾಣಿಸಿತು. ಆ ಒಂದು ನಿಮಿಷದ ಬಳಿಕ ಬೆವರಿಳಿಯುತ್ತಿದ್ದ ಕೆಂಪು ಮುಖದ ಮನುಷ್ಯನೊಬ್ಬ ಬಂದು ಹಿಂದುಗಡೆಯ ಮಹಡಿಯ ಬಾಗಿಲನ್ನು ತೆರೆದ. ಅವನ ಅಂಗಿಗೆಲ್ಲ ಸೀಮೆಸುಣ್ಣದಂಥ ಪುಡಿ ಬಳಿದಿತ್ತು. ಮೇಲಂಗಿಯನ್ನು ಅವನು ಧರಿಸಿರಲಿಲ್ಲ.

ಪೇತ್ಯ ಏದುತ್ತ ನೋಡಿದ, ಅವನು ಟೆರೆಂಟಿ.

"ಬೇಗ ಕೊಡಿಲ್ಲಿ!" ಟೆರೆಂಟಿ ಅಂಗಿಯ ತೋಳಿನಿಂದ ಮುಖದ ಮೇಲಿನ ಬೆವರನ್ನು ಒರೆಸಿ ಕೊಳ್ಳುತ್ತ ಸಣ್ಣ ದನಿಯಲ್ಲಿ ಹೇಳಿದ. ಪೇತ್ಯನನ್ನು ಗಮನಿಸದೆ ಟೆರೆಂಟಿ ನೇರವಾಗಿ ಅವನ ಬೆನ್ನ ಮೇಲಿನ ಚೀಲದ ಬಳಿಗೆ ಹೋದ.

"ವಂದನೆಗಳು. ಸದ್ಯ ಒಳ್ಳೆಯ ಸಮಯಕ್ಕೆ ಬಂದೆ. ಹಾಳಾದ್ದು ಒಂದೇ ಒಂದೂ ಉಳಿ ದಿರಲಿಲ್ಲ!"

ನಿಡಿದಾಗಿ ಉಸಿರು ಬಿಡುತ್ತ ಆತುರ ಆತುರವಾಗಿ ಚರ್ಮದ ಚೀಲದ ಮುಚ್ಚಳವನ್ನು ಸಿ ಸಿದ್ದ ಚರ್ಮದ ಪಟ್ಟಿಗಳನ್ನು ಬಿಚ್ಚಿದ್ದೇ ತಡ ಅದರೊಳಗಿನ ಚೀಲಗಳನ್ನೆಲ್ಲ ತನ್ನ ಜೇಬುಗ

ತುಂಬಿಕೊಂಡ. "ತಡಮಾಡದೆ ಇನ್ನೊಂದಿಷ್ಟನ್ನು ಕಳುಹಿಸಿಕೊಡಬೇಕೆಂದು ಜೋಸೆಫ್ ಕಾರ್ಲೋ ವಿಚ್ಚನಿಗೆ ಹೇಳು." ಎಂದು ಹಿಂದಕ್ಕೆ ಓಡುತ್ತ ಹೇಳಿದ. "ಅಲ್ಲಿರುವುದನ್ನೆಲ್ಲ ತೆಗೆದುಕೊಂಡು ಬಾ, ಇಲ್ಲದಿದ್ದರೆ ನಾವು ಬಹು ಹೊತ್ತು ಎದುರಿಸುವುದಕ್ಕಾಗುವುದಿಲ್ಲ."

"ಸರಿ, ಆಗಲಿ." ಎಂದ ಗಾವ್ರಿಕ್.

ಆಗತಾನೆ ಒಂದು ಗುಂಡು ಚಾವಣಿಯ ಹತ್ತಿರದ ಗೋಡೆಗೆ ಬಂದು ಬಡಿಯಿತು. ನಸುಗೆಂಪು ಬಣ್ಣದ ಇಟ್ಟಿಗೆಯ ಪುಡಿ ಹುಡುಗರ ತಲೆಯ ಮೇಲೆ ಸುರಿಯಿತು.

ಕೂಡಲೆ ಅವರು ಮಲಯ ಅರ್ನಾತ್ಸ್ಕಾಯ ಮನೆಗೆ ಹಿಂದಿರುಗಿದರು. "ಸಾಮಾನಿನ" ಇನ್ನೊಂದು ಹೊರೆಯನ್ನು ತೆಗೆದುಕೊಂಡರು. ಈ ಸಲ ಚರ್ಮದ ಚೀಲ ಬಹು ಭಾರವಾಗಿದ್ದುದರಿಂದ ಅದರ ಭಾರದಿಂದ ಪೇತ್ಯ ತತ್ತರಿಸಲಾರಂಭಿಸಿದ.

ಈಗ ಪೇತ್ಯನಿಗೆ ತಿಳಿಯಿತು ಚೀಲದಲ್ಲಿ ತುಂಬಿದ್ದುವು ಎಂಥ ಗುಂಡಿಗಳೆಂದು. ಬೇರಾವ ಕಾಲದಲ್ಲಾದರೂ ಆಗಿದ್ದರೆ ಚೀಲವನ್ನೆಸೆದು ಪೇತ್ಯ ಮನೆಗೆ ಓಡಿಬರುತ್ತಿದ್ದ. ಆದರೆ ಇಂದು ಅಪಾಯದ ಅದ್ಭುತಾನುಭವವೂ, ಜೂಜಿನ ಚಟಕ್ಕಿಂತಲೂ ಹೆಚ್ಚು ಶಕ್ತಿಯುತವಾದ ಆವೇಶವೂ ಅವನ ಇಡೀ ದೇಹವನ್ನು ಆಕ್ರಮಿಸಿಬಿಟ್ಟಿದ್ದುವು. ಏನೇ ಕೊಟ್ಟರೂ ಇಂದು ಅವನು ತನ್ನ ಮಿತ್ರನನ್ನು ಒಂಟಿಯಾಗಿ ಬಿಟ್ಟು ಹೋಗುವವನಿರಲಿಲ್ಲ. ಅಲ್ಲದೆ ಗಾವ್ರಿಕನ ಕೀರ್ತಿಯಲ್ಲಿ ಅವನಿಗೂ ಸಮಪಾಲು ದೊರೆಯುವುದಿತ್ತು. ಮುಂದೆ ತಾನು ತನ್ನ ಸಾಹಸದ ಕತೆಯನ್ನು ಇತರರಿಗೆ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಹಕ್ಕು ಕಳೆದುಹೋಗಬಹುದೆಂಬ ಯೋಚನೆ ಎಲ್ಲ ಅಪಾಯವನ್ನೂ ನಿರ್ಲಕ್ಷಿಸಿ ನಡೆಯುವ ಧೈರ್ಯವನ್ನು ಅವನಿಗೆ ತಂದುಕೊಟ್ಟಿತು.

ಗಾವ್ರಿಕ್ ಮತ್ತು ಪೇತ್ಯ ತಮ್ಮ ಮರುಪ್ರಯಾಣವನ್ನಾರಂಭಿಸಿದರು. ಅಷ್ಟೊಂದು ಅಲ್ಪ ಕಾಲದಲ್ಲಿ ಪಟ್ಟಣ ಎಷ್ಟು ಬದಲಾಯಿಸಿ ಹೋಗಿದ್ದಿತು! ನಗರವು ಈಗ ಕುದಿಯುತ್ತಿದ್ದಿತು.

ಒಂದು ನಿಮಿಷದಲ್ಲಿ ಚೆಲ್ಲಾಪಿಲ್ಲಿಯಾಗಿ ಓಡುವ ಜನಗಳಿಂದ ರಸ್ತೆಯು ಕಿಕ್ಕಿರಿದು ಬಿಡುತ್ತಿತ್ತು. ಮರುಕ್ಷಣದಲ್ಲಿ ಸೈನಿಕರ ಬಂದೂಕಗಳೆಂಬ ಕಬ್ಬಿಣದ ಕಸಬರಿಕೆಯಿಂದ ರಸ್ತೆಯನ್ನು ಗುಡಿಸಿಬಿಡಲಾಗುತ್ತಿತ್ತು.

ಪೋಲೀಸಿನವರ ಕಾವಲುಪಡೆಯನ್ನು ಸಮೀಪಿಸುತ್ತಿದ್ದಂತೆ ಗಾವ್ರಿಕ್ ಪೇತ್ಯನ ತೋಳನ್ನು ಹಿಡಿದು ಪಕ್ಕದ ಮನೆಯ ಬಾಗಿಲಿನ ಒಳಕ್ಕೆ ಎಳೆದುಕೊಂಡ.

"ನಿಲ್ಲು!"

"ಏತಕ್ಕೆ?"

ಗಾವ್ರಿಕ್ ಪೇತ್ಯನ ತೋಳನ್ನು ಹಿಡಿದುಕೊಂಡೇ ಜಾಗರೂಕತೆಯಿಂದ ಹೊರಕ್ಕೆ ಇಣಿಕಿ ನೋಡಿದ. ಮರುಕ್ಷಣವೇ ಹಿಂದಕ್ಕೆ ಜಗ್ಗಿ ಬಾಗಿಲಿನ ಗೋಡೆಯನ್ನು ಒರಗಿಕೊಂಡ. ಅವನ ತಲೆಯ ಮೇಲುಗಡೆಯಲ್ಲಿ ಆ ಮನೆಯಲ್ಲಿ ವಾಸವಾಗಿರುವವರ ಹೆಸರುಗಳನ್ನು ಬರೆದ ಕಪ್ಪು ಹಲಗೆಯನ್ನು ಗೋಡೆಗೆ ಹೊಡೆಯಲಾಗಿದ್ದಿತು.

"ನೋಡು ಪೇತ್ಯ, ನಾವು ಇಲ್ಲಿ ಸಿಕ್ಕಿಕೊಂಡಂತೆಯೇ. ನನ್ನ ಕಿವಿ ಕಿತ್ತುಹಾಕಿದ್ದ ಆ ಪಿಶಾಚಿಯನ್ನು ನಾನು ಕಂಡೆ. ನೋಡು, ಅಲ್ಲಿದ್ದಾನೆ ಅವನು."

ಪೇತ್ಯ ಮೆಟ್ಟಿಂಗಾಲಿನಮೇಲೆ ನಿಂತು ಬಾಗಿಲಿನ ತುದಿಯಿಂದ ನೋಡಿದ. ಕಾವಲು

ಪಡೆಯ ಸ್ಥಳದಲ್ಲಿ ಒಂದು ಭಾರವಾದ ಮೇಲಂಗಿಯನ್ನೂ ಮೃದುರೋಮದ ಟೋಪಿಯನ್ನೂ ಧರಿಸಿದ್ದ ಒಬ್ಬನು। ಬಂದೂಕಗಳ ಒಟ್ಟಿಲನ್ನೂ ಕಿತ್ತುಹೋದ ಸಾರ್ವಜನಿಕ ಉದ್ಯಾನದ ಬೇಲಿಯನ್ನೂ ದಾಟುತ್ತ ರಸ್ತೆಯಲ್ಲಿ ಅತ್ತಿಂದಿತ್ತ ನಡೆದಾಡುತ್ತಿದ್ದ. ಅವನು ತಿರುಗಿದಾಗ ಚೆನ್ನಾಗಿ ಕ್ಷೌರಮಾಡಿದ ಒರಟುಮುಖವನ್ನೂ, ದಪ್ಪವಾದ ಮೂಗನ್ನೂ ಪೇತ್ಯ ಕಂಡ. ಆ ಅಪರಿಚಿತ ಮುಖವನ್ನು ಎಲ್ಲೋ ಕಂಡಿದ್ದಂತೆ ಪೇತ್ಯನಿಗೆ ಎನ್ನಿಸಿತು. ಆದರೆ ಎಲ್ಲಿ? ಏನೋ ಸರಿಯಾಗಿ ನೆನಪು ಬರುವುದಿಲ್ಲ! ಆ ನೀಲಿ ಮೇಲ್ಸುಟಿಯವನಿರಬಹುದೆ? ಆಗ ತಕ್ಷಣ ಅವನಿಗೆ ಜ್ಞಾಪಕ ವಾಯಿತು. ಓ, ಅವನು ಮೀಸೆ! 'ತುರ್ಗನೀವ್' ಹಡಗಿನ ಮೇಲಿದ್ದವನು ಅವನು. ಈಗ ಅವನಿಗೆ ಮೀಸೆಯಿಲ್ಲ. ಅವನ ಜೀವನ ಪರ್ಯಂತವೂ ಪೇತ್ಯನ ಮನಸ್ಸಿನಲ್ಲಿ ಆ ಮುಖದ ನೆನಪು ಅಳಿಸಿಹೋಗುವಂತಿರಲಿಲ್ಲ. ಮೀಸೆ ಬಿಟ್ಟಿರಲಿ, ಇಲ್ಲದೆ ಇರಲಿ ಸಾವಿರ ಜನಗಳ ನಡುವೆ ಬೇಕಾದರೂ ಪೇತ್ಯ ಅವನನ್ನು ಪತ್ತೆ ಮಾಡಬಲ್ಲವನಾಗಿದ್ದ.

"ಅವನು ಮೀಸೆ!" ಪೇತ್ಯ ಬೆನ್ನಿನ ಮೇಲಿನ ಚೀಲವನ್ನು ಗೋಡೆಗೆ ಒತ್ತಿ ಹಿಡಿದುಕೊಂಡು ಗಾವ್ರಿಕನ ಪಕ್ಕಕ್ಕೆ ನಿಂತು ಪಿಸುಮಾತಿನಲ್ಲಿ ಹೇಳಿದ. "ಹಡಗಿನ ಮೇಲೆ ನಾವಿಕನನ್ನು ಅಟ್ಟಿಸಿಕೊಂಡು ಹೋಗುತ್ತಿದ್ದನಲ್ಲ ಅವನೇ. ಈಗ ಅವನಿಗೆ ಮೀಸೆ ಇಲ್ಲ, ಅಷ್ಟೆ. ಜ್ಞಾಪಕವಿದೆಯೆ ನಿನಗೆ? ಅವನ ವಿಷಯವನ್ನು ನಾನು ಹೇಳಿದಾಗ ನೀನು ನನ್ನನ್ನು ಹಾಸ್ಯಮಾಡಿದ್ದೆ."

"ಯಾರಿಗೂ ತನ್ನ ಗುರುತು ಗೊತ್ತಾಗದೆ ಇರಲಿ ಎಂದು ನುಣ್ಣಗೆ ಬೋಳಿಸಿಕೊಂಡಿದ್ದಾನೆ. ಆದರೆ ಆ ಧೂರ್ತನಿಗೆ ನನ್ನ ಗುರುತು ಚೆನ್ನಾಗಿದೆ. ನಾವು ಅಲ್ಲಿಂದ ಆಚೆಗೆ ಹೋಗುವ ಹಾಗೆಯೇ ಇಲ್ಲ ಇನ್ನು." ಗಾವ್ರಿಕ್ ಕೋಪದಿಂದ ಹೇಳಿದ.

"ನಾವು ಹೇಗಾದರೂ ಉಪಾಯದಿಂದ ಹೋಗಬಹುದು."

"ನಿನ್ನ ಪ್ರಾಣ ಬಿಟ್ಟರೂ ಆಗುವುದಿಲ್ಲ."

ಗಾವ್ರಿಕ್ ಇಣಿಕಿ ನೋಡಿ "ಅವನು ಅಲ್ಲಿಂದಿಲ್ಲಿಗೆ ನಡೆದಾಡುತ್ತಿದ್ದಾನೆ." ಎಂದ. ಗಾವ್ರಿಕ್ ಕೋಪದಿಂದ ಮುಷ್ಟಿಮಾಡಿಕೊಂಡು ಬೆರಳಿನ ಗಿಣ್ಣುಗಳನ್ನು ಹಲ್ಲುಗಳಿಂದ ಕಡಿಯಲಾರಂಭಿಸಿದ. "ಅವರು ನಮಗೋಸ್ಕರವಾಗಿಯೇ ಕಾದುಕೊಂಡು ಕುಳಿತಿದ್ದಾರೆ. ಥೂ ಆ ಹಾಳು ಸರ್ಪಬೇರೆ!"

ದಂಗೆಯ ಆ ಗಲಾಟೆ ಒಂದು ನಿಮಿಷ ಥಟ್ಟನೆ ನಿಂತಂತಾಗಿ ಸಂಪೂರ್ಣ ನೀರವತೆ ಹರಡಿತು. ದೂರದಲ್ಲಿ ಚೆದುರಿದಂತೆ ಗುಂಡು ಹೊಡೆದ ಶಬ್ದ ಆ ನಿಶ್ಶಬ್ದತೆಯನ್ನು ಮುರಿಯಿತು. ಮನೆಗಳ ಚಾವಣಿಗಳಿಂದ ಆ ಶಬ್ದದ ಪ್ರತಿಧ್ವನಿ ಗಗನವನ್ನು ತುಂಬಿತು.

"ಇಲ್ಲಿ ಕೇಳು ಪೇತ್ಯ." ಇದ್ದಕ್ಕಿದ್ದ ಹಾಗೆ ಗಾವ್ರಿಕ್ ಹೇಳಲಾರಂಭಿಸಿದ: "ಸಾಮಾನುಗಳಿಲ್ಲದೆ ಅವರು ಅಲ್ಲಿ ಕಾಯುತ್ತ ಕುಳಿತಿದ್ದಾರೆ. ಸುಲಭವಾಗಿ ಅವರೆಲ್ಲ ಸೈನಿಕರ ಗುಂಡುಗಳಿಗೆ ಆಹುತಿಯಾಗಿಬಿಡುತ್ತಾರೆ. ನಾನು ಪೋಲೀಸಿನವರ ಈ ಕೋಟೆಯನ್ನು ದಾಟಿ ಹೋಗಲಾರೆ. ಏಕೆಂದರೆ ಆ ಹಲ್ಕ ನನ್ನನ್ನು ಹಿಂಬಾಲಿಸಿ ಬಿಡುತ್ತಾನೆ. ಗೊತ್ತಾಯಿತೆ ನಿನಗೆ?"

ಗಾವ್ರಿಕನ ಕಣ್ಣುಗಳು ಕೋಪದ ಕಣ್ಣೀರಿನಿಂದ ತುಂಬಿದುವು. ಒಂದು ಸಲ ಜೋರಾಗಿ ಸೊರಗುಟ್ಟಿ ನೆಲಕ್ಕೆ ಉಸಿರನ್ನು ಮೂಗಿನಿಂದ ಊದಿದ. ಬಳಿಕ ಕೋಪದಿಂದ ಪೇತ್ಯನ ಕಣ್ಣುಗಳನ್ನು ದೃಷ್ಟಿಸಿ ನೋಡಿದ.

"ತಿಳಿಯಿತೇ?"

ತನ್ನ ಸ್ನೇಹಿತನ ಕೋಪದ, ಒತ್ತಾಯದ ಮತ್ತು ಸ್ನೇಹಪೂರ್ಣವಾದ ಬೇಡಿಕೆಯ ದೃಷ್ಟಿಯ ನೆರಳಿನಲ್ಲಿ ಪೇತ್ಯನ ತುಟಿಗಳು ಬಿಳಿಚಿಕೊಂಡುವು. "ಹೂಊ" ಎಂದ ಅವನು.

"ನೀನೊಬ್ಬನೇ ಇಲ್ಲಿಂದ ಹೋಗಬಲ್ಲೆಯಾ? ಅವರನ್ನು ಬಿಟ್ಟುಕೊಡುವುದಿಲ್ಲ ತಾನೇ?"

ಪೇತ್ಯನ ಮನಸ್ಸು ಉದ್ವಿಗ್ನವಾಗಿದ್ದುದರಿಂದ ಅವನ ಬಾಯಿಂದ ಒಂದು ಮಾತೂ ಈಚೆಗೆ ಹೊರಡಲಿಲ್ಲ. ಕಷ್ಟದಿಂದ ಉಗುಳುನುಂಗುತ್ತ ತಲೆಯಲ್ಲಾಡಿಸಿದ. ಗಾವ್ರಿಕ್ ಸುತ್ತಮುತ್ತ ಎಚ್ಚರಿಕೆಯಿಂದ ಕಣ್ಣಾಡಿಸಿ ಯಾರೂ ತಮ್ಮನ್ನು ನೋಡುತ್ತಿಲ್ಲವೆಂಬುದನ್ನು ದೃಢ ಪಡಿಸಿಕೊಂಡು ಪೇತ್ಯನ ಜೇಬುಗಳಿಗೆ ತನ್ನ ಚೀಲಗಳನ್ನು ತುಂಬಿದ.

"ಅವರಿಗೆ ಈ ಸಾಮಾನುಗಳನ್ನೆಲ್ಲ ಕೊಟ್ಟುಬಿಡು. ಒಂದನ್ನೂ ಬಿಡದೆ ಕೊಡು. ನಿನ್ನ ಚೀಲದಲ್ಲಿ ಏನಿದೆ ಮತ್ತು ನಿನ್ನ ಜೇಬುಗಳಲ್ಲಿ ಏನಿದೆ ಎಲ್ಲವನ್ನೂ ಕೊಟ್ಟುಬಿಡು. ನೀನೇನಾದರೂ ಪೋಲೀಸರ ಕೈಗೆ ಸಿಕ್ಕಿಹಾಕಿಕೊಂಡರೆ ಬೀದಿಯಲ್ಲಿ ಬಿದ್ದಿದ್ದಿತು, ಸಿಕ್ಕಿತು, ನನಗೇನೂ ಗೊತ್ತಿಲ್ಲ ಎಂದು ಹೇಳು. ಅರ್ಥವಾಯಿತೆ?"

"ಹೂಊ."

ಅವುಗಳನ್ನೆಲ್ಲ ಕೊಟ್ಟುಬಿಟ್ಟ ಬಳಿಕ ಇಲ್ಲಿಗೇ ನೇರವಾಗಿ ಬಂದುಬಿಡು. ಇದೇ ಬಾಗಿಲಿನ ಹತ್ತಿರ ನಿನಗಾಗಿ ಕಾಯುತ್ತಿರುತ್ತೇನೆ ಗೊತ್ತಾಯಿತೆ?"

"ಹೂ ಊ."

ಪೇತ್ಯನ ಜೇಬು ಜಗಿಯುತ್ತಿತ್ತು. ಅವನು ನೇರವಾಗಿ ಪೋಲೀಸಿನವರ ಬಳಿಗೆ ಹೋದ. ಉದ್ವೇಗ ಭಯಗಳಿಂದ ತುಂಬಿದ್ದ ಅವನಿಗೆ ತಾನೇನು ಮಾಡುತ್ತಿದ್ದೇನೆಂಬುದರ ಪರಿವೆಯಿರಲಿಲ್ಲ.

"ಏಯ್, ಎಲ್ಲಿಗೆ ಹೋಗುತ್ತಾ ಇದ್ದೀಯೆ? ನಿನಗೇನು ಕಣ್ಣು ಕುರುಡೋ?" ಗಟ್ಟಿಯಾಗಿ ಕೂಗುತ್ತ ವಿಾಸೆ ಅವನ ಬಳಿಗೆ ಹೋದ.

ಪೇತ್ಯ ಅಳುವಿನ ಸಣ್ಣ ದನಿಯಲ್ಲಿ "ದಯವಿಟ್ಟು ನನಗೆ ಹೋಗಲು ಅವಕಾಶ ಕೊಡಿ. ಅಲೆಗ್ಸಾಂಡ್ರೋವ್ಸ್ಕಿ ಪ್ರಾಸ್ಪೆಕ್ಟಿನ ಆ ದೊಡ್ಡ ಬೂದಿ ಬಣ್ಣದ ಮನೆಯಲ್ಲಿ ವಾಸವಾಗಿದ್ದೇನೆ. ನಮ್ಮಮ್ಮ ತುಂಬ ಗಾಬರಿಯಾಗಿರುತ್ತಾರೆ. ನಾನು ಸತ್ತುಹೋಗಿದ್ದೇನೆಯೋ ಏನೋ ಎಂದು ಅವರು ಪರದಾಡುತ್ತಾರೆ!"

ನಿಜವಾಗಿಯೇ ಕಣ್ಣೀರು ಧಾರಾವಾಹಿಯಾಗಿ ಅವನ ಕಣ್ಣುಗಳಿಂದ ಹೊರಟು ಉಬ್ಬಿಕೊಂಡಿದ್ದ ಕೊಳೆಯಾದ ಕೆನ್ನೆಗಳ ಮೇಲೆ ಹರಿಯಿತು, ಪ್ರಾವೇಶಿಕ ಶಾಲೆಯ ಆ ಪುಟ್ಟ ವಿದ್ಯಾರ್ಥಿಯನ್ನು ಜುಗುಪ್ಸೆಯಿಂದ ಈಕ್ಷಿಸಿ ವಿಾಸೆ ಅವನ ಚೀಲವನ್ನು ಹಿಡಿದುಕೊಂಡು ರಸ್ತೆಯ ಆಚೆಯ ಕಡೆಗೆ ಎಳೆದುಕೊಂಡು ಹೋಗಿಬಿಟ್ಟ. ತನ್ನ ಮುಂಡಿಯಿಂದ ಅವನನ್ನು ತಳ್ಳಿ "ಓಡು!" ಎಂದ. ಪೇತ್ಯ ಅತ್ಯಾನಂದದಿಂದ ಆ ಮನೆಯ ಕಡೆಗೆ ಓಟ ಕಿತ್ತ.

೩೮. ಬಂಡಾಯಗಾರರ ಹೋರಾಟದ ಕೇಂದ್ರ

ಪೇತ್ಯ ಗಾವ್ರಿಕನ ಜೊತೆಯಲ್ಲಿ ಆಗತಾನೆ ಬಂದು ಹೋಗಿದ್ದ ಅಲೆಗ್ಸಾಂಡ್ರೋವ್ಸ್ಕಿ ಪ್ರಾಸ್ಪೆಕ್ಟ್‌ನ ಮನೆಯ ಮುಂಬಾಗಿಲನ್ನು ಕಳೆದು ಅಂಗಳವನ್ನು ದಾಟಲಾರಂಭಿಸಿದ. ಒಂದು ಗಂಟೆ

ಮೊದಲು ಗಾವ್ರಿಕನೊಡನೆ ಅಲ್ಲಿಗೆ ಬಂದಿದ್ದಾಗ ಅವನಿಗೆ ಯಾವುದರ ಭಯವೂ ಇರಲಿಲ್ಲ ಅನುಭವಿಯಾದ ಉಪಾಯಕುಶಲನಾದ ಸ್ನೇಹಿತನ ರಕ್ಷಣೆಯಲ್ಲಿ ಅವನು ನಿಶ್ಚಿಂತೆಯಿಂದಿದ್ದ ಜತೆಗಾರನೊಡನಿದ್ದಾಗ ಬೇರಾವ ಆಲೋಚನೆಗಳೂ ಅವನ ಮನಸ್ಸನ್ನು ಪ್ರವೇಶಿಸಲವಕಾಶ ವಿರಲಿಲ್ಲ. ತನ್ನ ಸ್ವಂತ ಇಚ್ಛೆಯೆಂಬುದಿಲ್ಲದೆ ತನ್ನ ಸಂಗಡಿಗನಿಗೆ ವಿಧೇಯನಾಗಿದ್ದ. ಆ ತನಗಿಂತಲೂ ಸಮರ್ಥನಾದವನೊಬ್ಬನು ಆಲೋಚಿಸಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಆದರೆ ಈಗ ತಾನೊಬ್ಬನೇ ಆಗಿದ್ದ. ಈಗ ಪರಾವಲಂಬನೆಯಿರಲಿಲ್ಲ, ತನ್ನ ಮೇಲೆ ತಾನೆ ಭರವಸೆಯಿಡಬೇಕಾಗಿತ್ತು. ಗಾವ್ರಿಕನು ಈಗ ಜತೆಯಲ್ಲಿ ಇಲ್ಲದೆ ಹೋದುದರಿಂದ ತನ್ನ ಸುತ್ತು ಮುತ್ತಿನ ಜಗತ್ತು ಭಯಮಿಶ್ರಿತವಾಗಿಯೂ ಅಗಾಧವಾಗಿಯೂ ಅಪಾಯಸೂಚಕವಾಗಿಯೂ ಪೇತ್ಯನಿಗೆ ತೋರಲಾರಂಭಿಸಿತು.

ಒಳಗಿನ ಕಂಭಸಾಲುಗಳ ದಾರಿಯ ಕಲ್ಲಿನ ಕಮಾನುಗಳಲ್ಲಿಯೂ, ಅಶುಭಸೂಚಕವಾದ ಪೆಟ್ಟಿಗೆಗಳಲ್ಲಿಯೂ ಮತ್ತು ಹಳೆಯ ಮುರಿದ ಮರದ ಸಾಮಾನುಗಳಲ್ಲಿಯೂ ಅಪಾಯವೆಂಬುದು ತಲೆಮರೆಸಿಕೊಂಡು ಕುಳಿತಿರುವಂತೆ ಪೇತ್ಯನಿಗೆ ಕಾಣಹತ್ತಿತು. ಕುದುರೆಗಳು ಅಲ್ಲಲ್ಲಿ ಬುಡದಲ್ಲಿ ಅಗಿದಿದ್ದ ಉಪ್ಪುನೇರಳೆ ಮರವು ಅಂಗಳದಲ್ಲಿದ್ದಿತು. ಆ ಮರದ ಮೇಲೆ ಕುಳಿತು ಅಪಾಯವು ಹೊಂಚುಹಾಕುತ್ತಿದ್ದಂತೆ ಇದ್ದಿತು. ಕಚಡ ತೊಟ್ಟಿಯ ಕಪ್ಪು ಕಂಡಿಯಿಂದಲೂ ಅಪಾಯವು ಇಣಿಕಿ ಹಾಕುತ್ತಿದ್ದಿತೋ ಎನ್ನಿಸಿತು ಪೇತ್ಯನಿಗೆ.

ಹುಡುಗನ ಕಣ್ಣಿಗೆ ಕಾಣಿಸಿದ ಪ್ರತಿಯೊಂದೂ ಅತಿಶಯವಾದ ಆಕಾರವನ್ನು ಪಡೆದಿದ್ದಂತೆ ಇದ್ದಿತು. ದೊಡ್ಡ ಕಾಸಕ ಕುದುರೆಗಳು ಕುಣಿಯುತ್ತಿರುವ ಮೆತ್ತನೆಯ ಚಿನ್ನದ ಬಣ್ಣದ ಜೀನಿನ ಪಟ್ಟಿಯನ್ನು ಹುಡುಗನಿಗೆ ಒತ್ತಿ ಹಿಡಿದಂತೆ ತೋರಿತು. ಅದರ ಬೃಹದಾಕಾರದ ಬಾಲ ಅವನ ಚೀಲಕ್ಕೆ ಬೀಸಿ ಹೊಡೆದ ಹಾಗಾಯಿತು. ಕೆಂಪು ಪಟ್ಟೆಯಿದ್ದ ನೀಲಿಯ ಮೊಣಕಾಲಿನ ವರೆಗಿನ ಷರಾಯಿಯನ್ನು ಧರಿಸಿಕೊಂಡ ಕಾಸಕ ಗೌರವವ್ಯಕ್ತಿಯು ಒಂದು ಕಾಲಿನಲ್ಲಿ ಕುಪ್ಪಳಿ ದ್ದಂತೆ ಕಂಡಿತು.

"ಬಲದಿಂದ, ಮೂರು ಮೂರಾಗಿ!" ಕಾಸಕ ಸಿಪಾಯಿಯೊಬ್ಬನು ಗಡಸುದನಿಯಲ್ಲಿ ಕೂ ಹೇಳಿದ. ತಲೆಯ ಮುಡಿಚಿದ ಟೋಪಿಯ ಮೇಲುಗಡೆಗೆ ಎತ್ತಿದ ಕತ್ತಿಯು ಬಾಲಚಂದ್ರನಂ ಹೊಳೆಯುತ್ತಿದ್ದ ಹಾಗೆ ಇತ್ತು.

ಪೇತ್ಯ ನೆಲಮಾಳಿಗೆಗೆ ಇಳಿದ. ಉಸಿರು ಕಟ್ಟುವ ಶೀತಲವಾದ ಆ ಕತ್ತಲೆಯಲ್ಲಿ ದಾ ಯನ್ನು ಹುಡುಕುತ್ತ ತಡವರಿಸುತ್ತ ಬಹುಹೊತ್ತು ನಡೆದ. ಉಗ್ರಾಣದ ಕೊಠಡಿಗಳಿಂದ ಬ ತ್ತಿದ್ದ ಧೂಳಿನ ಗಾಳಿಯನ್ನೇ ಅವನು ಉಸಿರಾಡಬೇಕಾಗಿದ್ದಿತು. ಅವನ ರೆಪ್ಪೆಗೆ ಜೇಡನ ಬ ತಾಗಿದಾಗಲೆಲ್ಲ ಅದು ಬಾವಲಿಯ ರೆಕ್ಕೆ ಎಂದು ಭಾವಿಸಿ ಪೇತ್ಯ ಭಯದಿಂದ ಗಡಗಡನೆ ನಡು ಹೋಗುತ್ತಿದ್ದ.

ಕೊನೆಗೆ ಎರಡನೆಯ ಅಂಗಳವನ್ನು ಸೇರಿದ. ಅದು ವಿಜನವಾಗಿತ್ತು. ಈ ವಿಲಕ್ಷ ಶೂನ್ಯತೆಯಲ್ಲಿ ಏಕಾಂಗಿಯಾಗಿರುವುದು ಎಷ್ಟು ಭಯಂಕರ ಅನುಭವ ಎಂಬುದನ್ನು ಪೇತ್ಯ ಅ ತಿಳಿದುಕೊಂಡ. ಅವನು ಹಿಂದಕ್ಕೆ ಓಡಿಹೋಗಬೇಕೆಂದು ಬಯಸಿದ. ಆದರೆ ಗಾವ್ರಿಕನಿಗ ರಸ್ತೆಗೂ ಮತ್ತು ತನಗೂ ನಡುವೆ ಸಾವಿರ ಮೈಲಿಗಳು ಸಾವಿರ ಅಪಾಯಗಳು ಇವೆ ಎಂಬು

ಅರಿವಾದಾಗ ಸುಮ್ಮನಾಗಬೇಕಾಯಿತು.

ಎರಡನೆಯ ಅಂಗಳದಿಂದ ಮೂರನೆಯ ಅಂಗಳಕ್ಕೆ ಹೋಗುವ ಬಾಗಿಲಿನಲ್ಲಿ ನಿಶ್ಶಬ್ದತೆಯು ಅಸಹನೀಯವಾಗಿತ್ತು. ಆಗ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಕಿರಿಚಿಕೊಳ್ಳಬೇಕೆಂಬ ಮನಸ್ಸಾಯಿತು ಅವನಿಗೆ. ಆ ನಿಶ್ಶಬ್ದತೆಯನ್ನು ಮರೆಸುವಂತೆ ಹತಾಶನಾಗಿ ಹುಚ್ಚುಹುಚ್ಚಾಗಿ ಕೂಗಬೇಕೆನ್ನಿಸಿತು. ಅದು ಎರಡು ಬಂದೂಕಿನ ಹೊಡೆತಗಳ ನಡುವೆ ಬರುವಂಥ ನಿಶ್ಶಬ್ದತೆ ಆಗಿತ್ತು.

ಈಗ ಪೇತ್ಯ ಬಾಯಿಗೆ ಎರಡು ಬೆರಳುಗಳನ್ನಿಟ್ಟುಕೊಂಡು ಶಿಲ್ಟಿ ಹೊಡೆಯಬೇಕಾಗಿತ್ತು. ಆದರೆ ಬೆರಳುಗಳಮೂಲಕ ಶಿಲ್ಟಿ ಹೊಡೆಯುವುದು ಅವನಿಗೆ ಗೊತ್ತಿರಲಿಲ್ಲ. ಅವನು ಬಹುಹಿಂದೆ ಹಲ್ಲುಗಳ ಸಂದಿನ ಮೂಲಕ ಪಿಚಕ್ಕನೆ ಉಗುಳುವುದನ್ನು ಕಲಿತಿದ್ದನೇ ಹೊರತು ಶಿಲ್ಟಿ ಹೊಡೆಯುವುದನ್ನು ಇನ್ನೂ ಕಲಿತಿರಲಿಲ್ಲ. ಅವನು ಆ ವಿಷಯವನ್ನೇ ಅಲ್ಲಿಯವರೆಗೆ ಯೋಚಿಸಿರಲಿಲ್ಲ. ಅದು ಅವನಿಗೆ ಹೊಳೆದೂ ಇರಲಿಲ್ಲ.

ಒಡ್ಡೊಡ್ಡಾಗಿ ಬಾಯಿಗೆ ಬೆರಳನ್ನು ಹಾಕಿಕೊಂಡು ಊದಿದ. ಆದರೆ ಶಿಲ್ಟಿಯ ಶಬ್ದ ಹೊರಬರಲಿಲ್ಲ, ಹತಾಶನಾಗಿ ಆದಷ್ಟು ಗಟ್ಟಿಯಾಗಿ ಉಸಿರುಬಿಟ್ಟು ಊದಿದ. ಏನೂ ಫಲ ಆಗಲಿಲ್ಲ, ಕೇವಲ ಉಗುಳು ಮತ್ತು ಚಿಸ್ ಎಂಬ ಶಬ್ದ ಮಾತ್ರ ಹೊರಕ್ಕೆ ಬಂದಿತು.

ಅನಂತರ ಪೇತ್ಯ ತನ್ನ ಚೈತನ್ಯವನ್ನೆಲ್ಲ ಜಮಾಯಿಸಿಕೊಂಡ. “ರೀ” ಎಂದು ಕಣ್ಣು ಮುಚ್ಚಿಕೊಂಡು ಕಿರುಚಿದ. ಅವನ ಗಂಟಲಿನಿಂದ ಹೊರಟ ಧ್ವನಿ ದುರ್ಬಲವಾಗಿ ಕಿವಿಗೆ ಬಿದ್ದಿತು. ಆದರೂ ಆ ಅಂಗಳದ ತೊಟ್ಟಿಯಲ್ಲಿ ಅವನ ಕೂಗು ಪ್ರತಿಧ್ವನಿಸಿತು. ಆದರೆ ಯಾರೂ ಉತ್ತರ ಕೊಡಲಿಲ್ಲ. ನಿಶ್ಶಬ್ದತೆಯು ಮೊದಲಿಗಿಂತಲೂ ಹೆಚ್ಚು ಭಯಂಕರವಾಗಿ ಕಂಡಿತು. ಮೇಲುಗಡೆಯಲ್ಲಿ ಕಿವಿ ಕಿವಿಡಾಗುವಂಥ ಬಂದೂಕಿನ ಶಬ್ದವಾಗುತ್ತಿದ್ದಿತು. ಆ ಸಮಯದಲ್ಲೇ ಬಚ್ಚಲು ನೀರನ್ನು ಕೆಳಕ್ಕೆ ಒಯ್ಯುವ ಕೊಳವೆಗಳನ್ನು ಸೇರಿಸಿದ್ದ ಭಾಗವು ಕಳಚಿಕೊಂಡು ಕೆಳಕ್ಕೆ ಬೀಳಬೇಕೇ. ಅದರೊಡನೆ ಇಟ್ಟಿಗೆಯ ಚೂರುಗಳು, ಗಾರೆ ಮತ್ತು ದಪ್ಪ ಮೊಳೆಗಳು ಹಾರಿದುವು.

“ರೀ ! ರೀ ! ರೀ !” ಉಸಿರನ್ನೆಲ್ಲ ಬಿಟ್ಟು ಪೇತ್ಯ ಕೂಗುಹಾಕಿದ.

ಮೇಲಿನ ಮಹಡಿಯ ಒಂದು ಕಿಟಕಿಯ ಬಾಗಿಲು ತೆರೆಯಿತು. ಅದರ ಮೂಲಕ ಒಬ್ಬ ಅಪರಿಚಿತ ಹೊರಕ್ಕೆ ತಲೆ ಹಾಕಿದ.

“ಯಾತಕ್ಕೆ ಕಿರಿಚಿಕೊಳ್ಳುತ್ತೀಯೆ ? ಇಲ್ಲಿಗೆ ತೆಗೆದುಕೊಂಡು ಬಾ ? ಮಹಡಿ ಹತ್ತಿ ಬಾ ! ಹೆದರಬೇಡ, ಚುರುಕಾಗಿ ಬಾ !”

ತಲೆ ಕಿಟಕಿಯ ಒಳಕ್ಕೆ ಹೋಯಿತು. ಪೇತ್ಯ ಅನಿಶ್ಚಿತತೆಯಿಂದ ಅತ್ತ ಇತ್ತ ನೋಡಿದ. ಅವನು ಏಕಾಂಗಿಯಾಗಿದ್ದ. ಅವನಿಗೆ ಸಲಹೆ ಕೊಡುವವರು ಯಾರೂ ಅಲ್ಲಿರಲಿಲ್ಲ. ಮೇಲಿನಿಂದ ಇನ್ನೊಂದು ಬಂದೂಕು ಹೊಡೆದ ಶಬ್ದ ಕೇಳಿಸಿತು. ಗಾರೆಯ ಹೆಪ್ಪಳಿಕೆಯೊಂದು ಮೇಲಿನಿಂದ ಕಳಚಿಕೊಂಡು ಬಂದು ಪೇತ್ಯನ ಪಾದಗಳ ಬಳಿ ಬಿದ್ದಿತು. ಬಗ್ಗಿಕೊಂಡು ಮಹಡಿಯ ಮೆಟ್ಟಲಿನ ಬಾಗಿಲಿಗೆ ಹೋದ. ಖಣ್ ಖಣ್ ಎಂದು ಶಬ್ದಮಾಡುತ್ತಿದ್ದ ಕಬ್ಬಿಣದ ಮೆಟ್ಟಲುಗಳನ್ನು ಏರತೊಡಗಿದ. ಅವನ ಕೋಟಿನ ತುದಿಗೆ ಅವನ ಮುಂದಿನ ಹೆಜ್ಜೆ ಸಿಕ್ಕಿಕೊಳ್ಳುತ್ತಿತ್ತು. ಆ ಕೋಟು ಬಹಳ ಸಡಿಲವಾಗಿದ್ದುದರಿಂದ ಅವನಂಥವನನ್ನು ಇಬ್ಬರನ್ನು ಅದರೊಳಕ್ಕೆ ತೂರಿಸಬಹುದಾಗಿತ್ತು.

"ಬೇಗ! ಬೇಗ ಬಾ!" ಮೇಲಿನಿಂದ ಕೋಪದ ಧ್ವನಿ ಬಂದಿತು.

ಭಾರವಾದ ಚೀಲ ಪೇತ್ಯನ ಬೆನ್ನಿಗೆ ಒತ್ತಿ ಬೆನ್ನು ನೋಯುತ್ತಿದ್ದಿತು. ಜಗಿಯುತ್ತಿದ್ದ ಜೇಬುಗಳು ಅವನ ನಡಿಗೆಯನ್ನು ಕುಂಠಿತಗೊಳಿಸುತ್ತಿದ್ದುವು. ಇದ್ದಕ್ಕಿದ್ದಂತೆ ಅವನಿಗೆ ಬಿಸಿ ತಟ್ಟಿತು. ಅವನ ಟೋಪಿಯೊಳಗಡೆ ಸೆಕೆ ಹತ್ತಿತು, ಅಲ್ಲದೆ ನೆನೆದುಹೋದಂತೆ ಅನುಭವವಾಯಿತು. ಬೆವರು ಹುಬ್ಬಗಳ ಮೇಲಿನಿಂದ ಕೆಳಕ್ಕೆ ಇಳಿಯುತ್ತಿದ್ದಿತು. ಅವನ ಮುಖ ಕೆಂಡದಂತೆ ಸುಡ ಲಾರಂಭಿಸಿತು. ಮಹಡಿಯ ಮೇಲಿನಿಂದ ಅದೇ ಸಿಟ್ಟಿನ ಬೇಡಿಕೆಯ ಧ್ವನಿ "ಬೇಗ ಬೇಗ ಬಾ! ಇನ್ನೂ ಬೇಗ!" ಎಂದು ಕೂಗುತ್ತಿತ್ತು. ಪೇತ್ಯ ಆಯಾಸದಿಂದ ನಾಲಗೆಯನ್ನು ಹೊರಕ್ಕೆ ನೀಡಿ ಕೊಂಡು ನೀಳವಾಗಿ ಉಸಿರೆಳೆದುಕೊಂಡ. ಪೇತ್ಯ ನಾಲ್ಕನೆಯ ಮಹಡಿಯನ್ನು ಏರಿದ್ದ. ಅಷ್ಟು ಹೊತ್ತಿಗೆ ಒಬ್ಬ ಮನುಷ್ಯ ಬಂದು ಅವನ ಭುಜವನ್ನು ಹಿಡಿದುಕೊಂಡ. ಅವನು ಕುರಿಮರಿಯ ಚರ್ಮದ ಕತ್ತಿನ ಪಟ್ಟಿಯಿಂದ ಕೂಡಿದ ಕೊಳೆಯಾದ ಬೆಲೆಬಾಳುವ ಮೇಲಂಗಿಯನ್ನು ಧರಿಸಿದ್ದ.

ಆ ಮನುಷ್ಯ ತಲೆಗೆ ಟೋಪಿಯನ್ನು ಧರಿಸದೆ ಬರಿ ತಲೆಯಲ್ಲಿದ್ದ. ಬೆವರಿನಿಂದ ನೆನೆದ ಕೂದಲಿನ ಎಳೆಗಳು ಹಣೆಗೆ ಅಂಟಿಕೊಂಡಿದ್ದುವು. ಬಿಳಿಯ ಪುಡಿ ತುಂಬಿದ್ದ ಚಪ್ಪಟೆ ಮೂಗಿನ ಕೆಂಪು ಮುಖಕ್ಕೂ ನೀಟಾದ ಚಿಕ್ಕ ಮೀಸೆಗಡ್ಡಗಳಿಗೂ ಹೊಂದುತ್ತಿರಲಿಲ್ಲ. ಬಿಳಿಯಧೂಳು ತುಂಬಿದ ಪೊದೆಯಂತೆ ಬೆಳೆದಿದ್ದ ಹುಬ್ಬಿನ ಕೂದಲುಗಳ ಕೆಳಗಡೆ ಕಣ್ಣುಗಳಲ್ಲಿ ಒಂದು ರೀತಿಯ ಒರಟು ಧೈರ್ಯವೂ ಒಂದು ರೀತಿಯ ಅಪಾಯದ ಭೀತಿಯೂ ಒಡನೊಡನೆ ಮಿನುಗುತ್ತಿದ್ದುವು. ಬಹಳ ಕಷ್ಟಕರವಾದ ಜರೂರು ಕೆಲಸದ ಮೇಲಿದ್ದ ಮನುಷ್ಯ ನಿರ್ವಾಹವಿಲ್ಲದೆ ಆ ಕೆಲಸವನ್ನು ಬಿಟ್ಟುಬಂದಿದ್ದರೆ ಪುನಃ ಅಲ್ಲಿಗೆ ಹೋಗಲು ಆತುರಪಡುತ್ತಿದ್ದಂತೆ ಅವನ ಸ್ಥಿತಿ ಇದ್ದಿತು.

ಯಾವಾಗ ಪೇತ್ಯ ತನ್ನ ಹೆಗಲುಗಳ ಮೇಲೆ ಬಲವಾದ ಬೆರಳುಗಳ ಹಿಡಿತವನ್ನು ಅನು ಭವಿಸಿದನೋ ಆಗ ತನ್ನ ತಂದೆ ಕೋಪದಲ್ಲಿ ತನ್ನನ್ನು ಹಿಡಿದು ಅಲುಗಿಸುತ್ತಿದ್ದಂತೆ ಅವನು ತನ್ನನ್ನು ಹಿಡಿದು ಅಲ್ಲಾಡಿಸುತ್ತಾನೆ ಎಂದು ಮಾಡಿದ್ದ. ಹೆದರಿಕೆಯಿಂದ ಆ ಮನುಷ್ಯನ ಬಳಿಯಲ್ಲಿ ಪೇತ್ಯನ ಕಾಲುಗಳು ಕೊಕ್ಕರಿಸಿಕೊಂಡುವು. ಆದರೆ ಆ ಮನುಷ್ಯ ಪೇತ್ಯನನ್ನು ಅಕ್ಕರೆಯಿಂದ ನೋಡಿದ.

"ಇಲ್ಲಿ ತಾ." ಎಂದು ಆತುರದಿಂದ ಮೆತ್ತಗೆ ಕೇಳಿದ. ಹುಡುಗನ ಉತ್ತರಕ್ಕಾಗಿ ಕಾಯದೆ ಆ ಮಹಡಿಯ ಮೇಲಿನ ವಾಸದ ಮನೆಯ ಅಡಿಗೆಯ ಕೋಣೆಗೆ ಅವನನ್ನು ಎಳೆದುಕೊಂಡು ಹೋದ. ಅಲ್ಲಿ ಏನೋ ಒಂದು ಪ್ರಚಂಡ ಭೀಕರ ಕಾರ್ಯ ನಡೆಯುತ್ತಿದೆಯೆಂಬುದರ ಅರಿವಾಯಿತು ಪೇತ್ಯನಿಗೆ. ಸಾಧಾರಣವಾಗಿ ಮಹಡಿಯ ಮೇಲಿನ ವಾಸದ ಮನೆಗಳಲ್ಲಿ ಇಂಥದು ಸಂಭವಿಸುವುದಿಲ್ಲ.

ಆ ಮನುಷ್ಯ ಪೇತ್ಯನ ಮೇಲೆ ಒಂದು ಸಲ ಕಣ್ಣುಗಳನ್ನೋಡಿಸಿ ಮರುಮಾತಾಡದೆ ಅವನ ಜೋಲುತ್ತಿದ್ದ ಜೇಬುಗಳಿಗೆ ಕೈಹಾಕಿದ. ಜೇಬುಗಳಿಂದ ಭಾರವಾದ ಸಣ್ಣ ಚೀಲಗಳನ್ನು ಹೊರ ಕ್ಕೆಳೆದು ತೆಗೆದುಕೊಂಡ. ಕೈಗಳನ್ನು ಮೇಲಕ್ಕೆತ್ತಿ ನೀಡಿಕೊಂಡು ಅವನೆದುರಿಗೆ ಪೇತ್ಯ ನಿಂತಿದ್ದ. ಆ ಸಣ್ಣ ಮೀಸೆ ಗಡ್ಡಗಳ ಆ ಅಪರಿಚಿತ ಮುಖದಲ್ಲಿ ಏನೋ ಒಂದು ಸಲಿಗೆಯ ಗುರುತು ಹತ್ತುತ್ತಿತ್ತು. ಪೇತ್ಯ ಆ ಮುಖವನ್ನೆಲ್ಲೋ ಇದಕ್ಕೆ ಮೊದಲು ನೋಡಿದ್ದ. ಆದರೆ ಯಾವಾಗ ಎಲ್ಲಿ? ಅವನು ತನ್ನ ನೆನಪಿನ ರಾಶಿಯನ್ನು ಕೆದಕಿ ನೋಡಿದ. ಏನೋ ಗೊತ್ತಾಗಲಿಲ್ಲ. ಯಾವುದೋ ನೆನಪು ಅವನ ಮನಸ್ಸನ್ನು ಕಾಡುತ್ತಿತ್ತು. ಅದು ಆ ಮೀಸೆ ಮತ್ತು ಗಡ್ಡ ಏರಬಹುದು

ಅಷ್ಟು ಹೊತ್ತಿಗೆ ಆ ಮನುಷ್ಯ ಅವನ ಜೇಬುಗಳಿಂದ ನಾಲ್ಕು ಚೀಲಗಳನ್ನೂ ತೆಗೆದು ಕೊಂಡಿದ್ದ.

"ಇಷ್ಟೇಯೇನು?"

"ಇಲ್ಲ, ಈ ಬೆನ್ನಿನ ಮೇಲಿನ ಚೀಲದಲ್ಲಿ ಇನ್ನೂ ಇದೆ."

"ಒಳ್ಳೆಯ ಹುಡುಗ! ವಂದನೆಗಳು! ಒಬ್ಬ ಪ್ರಾವೇಶಿಕ ತರಗತಿಯ ವಿದ್ಯಾರ್ಥಿಯ ಸಾಹಸವನ್ನು ನೋಡಿ! ಅಬ್ಬ!"

ತನ್ನ ಮೆಚ್ಚಿಕೆಯನ್ನು ತೋರಿಸುವಂತೆ ಆತ ಪೇತ್ಯನ ತಲೆಯ ಮೇಲಿನ ಟೋಪಿಯ ಮುಂಚಾಚನ್ನು ಅವನ ಕಿವಿಗಳಿಗೆ ತಗಲುವಂತೆ ಕೆಳಕ್ಕೆ ಎಳೆದ. ಪೇತ್ಯನ ಮೂಗಿನೆದುರಿಗೆ ಅವನ ಕೈ ಕಾಣಿಸಿತು. ಬಂದೂಕಿನ ಮದ್ದು ಅವನ ಕೈಗೆ ಬಳಿದುಕೊಂಡಿದ್ದುದರಿಂದ ಅದರ ಹುಳಿವಾಸನೆ ಹೊಡೆಯುತ್ತಿತ್ತು. ಅದರ ಮೇಲಿನಿಂದ ಸಣ್ಣ ನೀಲಿಯ ಲಂಗರಿನ ಚಿತ್ರಕಾಣಿಸಿತು.

"ನಾವಿಕ!" ಎಂದು ತನ್ನ ಆಶ್ಚರ್ಯವನ್ನು ಪೇತ್ಯ ವ್ಯಕ್ತಪಡಿಸಿದ.

ಅದೇ ಸಮಯಕ್ಕೆ ಸರಿಯಾಗಿ ಆ ಮನೆಯ ಇನ್ನೊಂದು ಭಾಗದಲ್ಲಿ ಏನೋ ಧಡೀರನೆ ಬಡಿದ ಶಬ್ದವಾಯಿತು. ಗಾಳಿ ಒಂದು ಸಲ ಬಿರುಸಾಗಿ ಹೊಡೆಯಿತು. ಕಪಾಟಿನ ಮೇಲಿನಿಂದ ಒಂದು ಮಡಕೆ ಕೆಳಕ್ಕೆ ಉರುಳಿತು. "ಇಲ್ಲೇ ಇರು!" ಎಂದು ಹೇಳುತ್ತ ಬೆಕ್ಕಿನಂತೆ ಮೆತ್ತಗೆ ಹೆಜ್ಜೆ ಹಾಕುತ್ತ ನಾವಿಕ ಹಜಾರದ ಬಳಿಗೆ ಹೋದ.

ಒಂದು ನಿಮಿಷದ ಅನಂತರ ಎಳೆದು ಹೊಡೆದ ಆರು ಬಂದೂಕಿನ ಹೊಡೆತದ ಶಬ್ದ ಹತ್ತಿರದಿಂದ ಕೇಳಬಂದಿತು. ಪೇತ್ಯ ತನ್ನ ಚರ್ಮದ ಚೀಲವನ್ನು ನೆಲದ ಮೇಲಕ್ಕೆಸೆದು ಅದರ ಬಾಯಿಯನ್ನು ಬಿಚ್ಚಲಾರಂಭಿಸಿದ. ಅಷ್ಟು ಹೊತ್ತಿಗೆ ಹಜಾರದಿಂದ ಅಡಿಯುಗೆಮನೆಗೆ ಟಿರೆಂಟಿ ಬಂದ. ಅವನು ತೂಗಾಡುತ್ತಿದ್ದ. ಅವನ ಮೈಮೇಲೆ ಕೋಟು ಇರಲಿಲ್ಲ; ಒಂದೇ ಒಂದು ತೋಳಿನ ಷರಟು ಮಾತ್ರ ಇದ್ದಿತು. ಇನ್ನೊಂದು ತೋಳನ್ನು ಹರಿದು ತಲೆಗೆ ಸುತ್ತಲಾಗಿತ್ತು. ತಲೆಯ ಗಾಯದಪಟ್ಟಿಯ ಅಡಿಯಿಂದ ರಕ್ತ ಕೆನ್ನೆಯ ಮೇಲಕ್ಕೆ ತೊಟ್ಟಿಕ್ಕುತ್ತಿತ್ತು. ಅವನ ಎಡಗೈಯಲ್ಲಿ ಒಂದು ಪಿಸ್ತೂಲು ಇದ್ದಿತು. ಅವನು ಪೇತ್ಯನನ್ನು ನೋಡಿದಾಗ ಏನನ್ನೋ ಹೇಳಬೇಕೆಂದು ಹೋದ. ಆದರೆ ಆಗದೆ ಕೇವಲ ಕೈಯನ್ನು ಬೀಸಿದ. ಅಲ್ಲಿದ್ದ ನಲ್ಲಿಗೆ ಬಾಯಿ ಕೊಟ್ಟು ನೀರನ್ನು ಕುಡಿದ.

"ಅದನ್ನು ತೆಗೆದುಕೊಂಡು ಬಾ." ನೀರು ಕುಡಿಯುವಾಗ ನಡುವೆ ಉಸಿರನ್ನು ಎಳೆದು ಕೊಳ್ಳುತ್ತ ಹೇಳಿದ. ಅವನ ಅಚ್ಚ ಬಿಳಿಯ ಮುಖದ ಮೇಲೆ ನೀರು ಹರಿಯಿತು. "ಗಾವ್ರಿಕ್ ಎಲ್ಲಿ? ಬದುಕಿದ್ದಾನೋ?"

"ಹೂ."

ಆದರೆ ಅಲ್ಲಿ ಪ್ರಶ್ನೆಗಳನ್ನು ಹಾಕುತ್ತ ಕುಳಿತುಕೊಳ್ಳಲು ಹೊತ್ತಿಲ್ಲ. ಮುಖವನ್ನು ಒರೆಸಿ ಕೊಳ್ಳದೆಯೇ ಚರ್ಮದ ಚೀಲದಿಂದ ಪುಟ್ಟ ಚೀಲಗಳನ್ನು ಹೊರಕ್ಕೆ ತೆಗೆದ.

"ಏನಾದರೂ ನಾವು ಹೆಚ್ಚು ಹೊತ್ತು ಎದುರಿಸಲಾರೆವು." ಎಂದು ವಟಗುಟ್ಟಿದ. ತನ್ನ ಕಾಲುಗಳ ಮೇಲೆ ನಿಲ್ಲಲೂ ಅವನಿಗೆ ಶಕ್ತಿಯಿರಲಿಲ್ಲ. "ನಾವು ಚಾವಣಿಗಳನ್ನು ದಾಟಿ ತಪ್ಪಿಸಿ ಕೊಳ್ಳುತ್ತೇವೆ. ಅವರು ಫಿರಂಗಿಯನ್ನು ಗುರಿ ನಿಲ್ಲಿಸುತ್ತಿದ್ದಾರೆ. ನೀನು ಇಲ್ಲಿಂದ ಹೊರಟು

ಹೋಗು, ಮಗು. ಎಲ್ಲಾದರೂ ಗುಂಡು ನಿನಗೆ ತಗುಲೀತು. ತಕ್ಷಣ ಹೊರಟು ಹೋಗು. ವಂದನೆಗಳು, ನಿನಗೆ ಒಳ್ಳೆಯದಾಗಲಿ!"

ಟೆರೆಂಟಿ ಕಾಲುಮಣೆಯಮೇಲೆ ಒಂದು ಕ್ಷಣ ಕುಳಿತುಕೊಂಡ. ಪುನಃ ಮರುಕ್ಷಣದಲ್ಲಿಯೇ ಮೇಲಕ್ಕೆದ್ದ. ಪಿಸ್ತೂಲನ್ನು ಮೊಣಕಾಲಿಗೆ ಉಜ್ಜುತ್ತ ಹಜಾರದಿಂದ ಗಾಜು ಒಡೆದ ಮತ್ತು ನಿರಂತರ ಗುಂಡಿನ ಮಳೆಯ ಶಬ್ದ ಕೇಳಿಬರುತ್ತಿದ್ದ ಕೊಠಡಿಯ ಕಡೆಗೆ ಓಡಿದ.

ಪೇತ್ಯ ಹಗುರವಾದ ಚರ್ಮದ ಚೀಲವನ್ನೆತ್ತಿಕೊಂಡು ಬಾಗಿಲಕಡೆಗೆ ಓಡಿದ. ಕುತೂಹಲದಿಂದ ಒಂದು ನಿಮಿಷ ನಿಂತು ಬಗ್ಗಿ ಹಜಾರವನ್ನು ನೋಡಿದ. ಮುರಿದ ಮರದ ಸಾಮಾನುಗಳನ್ನು ರಾಶಿ ಹಾಕಿದ್ದ ಕೊಠಡಿ ತೆರೆದ ಬಾಗಿಲಿನ ಮೂಲಕ ಕಾಣಿಸಿತು. ಕಂದು ಬಣ್ಣದ ಹೂಗೊಂಚಲಿನ ಚಿತ್ರದ ಕಾಗದವನ್ನು ಗೋಡೆಗೆ ಅಂಟಿಸಿತ್ತು. ಆ ಗೋಡೆಯ ನಡುವೆ ಪಟ್ಟಿಗಳನ್ನು ಅಡ್ಡಡ್ಡವಾಗಿ ಸೇರಿಸಿದ್ದ ಒಂದು ಅಗಲವಾದ ಕಿಂಡಿಯಿದ್ದಿತು.

ಜಜ್ಜಿ ಪುಡಿಯಾಗಿದ್ದ ಕಿಟಕಿಗಳ ಬಳಿ ಬಗ್ಗಿ ಕುಳಿತು ಹಲವು ಜನರು ಬೀದಿಗೆ ಒಂದೇ ಸಮನೆ ತಮ್ಮ ಪಿಸ್ತೂಲುಗಳಿಂದ ಗುಂಡು ಹಾರಿಸುತ್ತಿದ್ದರು. ಅವರ ನಡುವೆ ಪೇತ್ಯ ಟೆರೆಂಟಿಯ ಗಾಯದ ಪಟ್ಟಿಯನ್ನು ಕಟ್ಟಿದ ತಲೆಯನ್ನೂ, ನಾವಿಕನ ಕುರಿಮರಿಯ ಚರ್ಮದ ಕತ್ತಿನ ಪಟ್ಟಿಯನ್ನೂ ನೋಡಿದ. ಅಲ್ಲದೆ ಗುಂಜುಗುಂಜಾದ ಕರಿಯ ಕಕೇಶಿಯನ್ ಮೇಲಂಗಿಯೂ ಕಾಲೇಜ್ ವಿದ್ಯಾರ್ಥಿಯ ಟೋಪಿಯೂ ಕ್ಷಣಕಾಲ ಮಿಂಚಿ ಮಾಯವಾದವು.

ನೀಲಿಯ ಹೊಗೆಯ ಎಳೆಗಳಿಂದ ಆ ಕೊಠಡಿ ತೇಲುತ್ತಿರುವಂತೆ ಇತ್ತು; ನಾವಿಕ ಒಂದು ಕಿಟಕಿಯ ಬಳಿ ಬಗ್ಗಿ ನಿಂತಿದ್ದ. ಅವನ ಎದುರಿಗೆ ಒಂದು ಸ್ತ್ರೀಯರ ಕೋಣೆಯ ಮೇಜ ಇದ್ದಿತು. ಅವನು ಕೈಯನ್ನು ಮುಂದಕ್ಕೆ ದೂಡಿ ಪಿಸ್ತೂಲನ್ನು ಹೊಡೆಯುತ್ತಿದ್ದ. ಗುಂಡು ಪಿಸ್ತೂಲಿನಿಂದ ಹಾರಿದ ಪ್ರತಿಯೊಂದು ಸಲವೂ ಅವನ ಕೈ ಹಿಂದಕ್ಕೆ ತಳ್ಳಲ್ಪಡುತ್ತಿತ್ತು.

"ಗುಂಡು ಹಾರಿಸಿ! ಹಾರಿಸಿ! ಹಾರಿಸಿ!" ಎಂದು ಹುಚ್ಚನಂತೆ ಅರಚಿದ.

ಈ ಎಲ್ಲ ಚಲನೆ, ಅವ್ಯವಸ್ಥೆ, ಕೋಲಾಹಲ ಮತ್ತು ಹೊಗೆಗಳ ನಡುವೆ ಒಬ್ಬನೇ ಒಬ್ಬ ಬಹು ನಿಶ್ಚಲನಾಗಿದ್ದ. ಹಳದಿಯ ನಿರ್ಲಕ್ಷ್ಯಭಾವದ ಮೇಣದಂಥ ಮುಖ ಅವನದು. ಅವನ ಮುಚ್ಚಿದ ಕಣ್ಣುಗಳ ಮೇಲೆ ಒಂದು ಸಣ್ಣ ಕಪ್ಪು ತೂತು ಕಾಣಿಸುತ್ತಿತ್ತು. ಅವನು ಕೊಠಡಿಯ ಮಧ್ಯದಲ್ಲಿ ನೆಲದ ಮೇಲೆ ಮುಖ ಮೇಲಾಗಿ ಅಸ್ತವ್ಯಸ್ತನಾಗಿ ಬಿದ್ದಿದ್ದ. ಅವನ ಸುತ್ತ ಖಾಲಿಯಾದ ತೋಟಾ ಕ್ಲಿಪ್ಪುಗಳೂ, ಪೆಟ್ಟಿಗೆಗಳೂ ಹರಡಿದ್ದುವು. ಅವನ ಮೂಗು ಕನ್ನಡಕ ಅವನ ತಲೆಯ ಪಕ್ಕದಲ್ಲಿ ಗಾರೆ ಚೆಲ್ಲಿದ ಮರದ ಹಲಗೆಯ ನೆಲದಮೇಲೆ ಬಿದ್ದಿದ್ದಿತು. ಅದಕ್ಕೆ ಕಟ್ಟಿದ್ದ ಕಪ್ಪುದಾರ ಬಿಳಿಯ ಕಿವಿಗೆ ಸುತ್ತಿಕೊಂಡಿದ್ದಿತು. ಮುಂಚಾಚು ಮಡಿಚಿಕೊಂಡ ಯಂತ್ರಕಲಾ ಶಾಸ್ತ್ರಜ್ಞರು ಧರಿಸುವಂಥ ಹಳೆಯ ಟೋಪಿಯು ನೆಲದಮೇಲೆ ಬಿದ್ದಿತ್ತು. ಪೇತ್ಯ ಗಮನವಿಟ್ಟು ಆ ಮನುಷ್ಯನನ್ನು ನೋಡಿದಾಗ ತಾನು ಇಷ್ಟು ಹೊತ್ತೂ ನೋಡುತ್ತಿದ್ದುದು ಒಂದು ಶವವನ್ನು ಎಂಬ ವಿಷಯ ಸ್ಪಷ್ಟವಾಯಿತು.

ಹಿಂದಿರುಗಿದ್ದೇ ತಡ ಒಂದೇ ಉಸಿರಿಗೆ ಓಡಿದ. ಮನೆಯಿಂದ ಹೊರಕ್ಕೆ ಹೇಗೆ ಬಂದನೋ ಗಾವ್ರಿಕ್ ತನಗಾಗಿ ಕಾಯುತ್ತಿದ್ದ ಬಾಗಿಲಬಳಿಗೆ ಹೇಗೆ ಬಂದನೋ ಅವನಿಗೆ ಒಂದೂ ಗೊತ್ತಾಗಲಿಲ್ಲ.

"ಅವುಗಳನ್ನು ತಲಪಿಸಿದೆಯೋ ?"

"ತಲಪಿಸಿದೆ."

ಮಹಡಿಯಮೇಲಿನ ಭಯಂಕರವಾದ ಆ ಕೋಣೆಯಲ್ಲಿ ತಾನು ಕಂಡುದೆಲ್ಲವನ್ನೂ ಪೇತ್ಯ ಒಂದೇ ಸಮನೆ ಗಾವ್ರಿಕನಿಗೆ ತಿಳಿಸಿದ.

"ಏನಾದರೂ ಅವರು ಹೆಚ್ಚು ಹೊತ್ತು ಎದುರಿಸಿ ನಿಲ್ಲಲಾರರು. ಅವರು ಛಾವಣಿಗಳ ಮೇಲಿನಿಂದ ತಪ್ಪಿಸಿಕೊಂಡು ಹೋಗುವರು. ಪೋಲೀಸಿನವರು ಒಂದು ಫಿರಂಗಿಯನ್ನೇ ಅವರೆದುರಿಗೆ ನಿಲ್ಲಿಸುತ್ತಿದ್ದಾರೆ." ಪೇತ್ಯ ಭಾರವಾಗಿ ಉಸಿರುಬಿಡುತ್ತ ಪಿಸುಮಾತಿನಲ್ಲಿ ಹೇಳಿದ.

ಗಾವ್ರಿಕನ ಮುಖ ಬಳಿಚಿಕೊಂಡಿತು. ಅವನು ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡ. ತನ್ನ ಸ್ನೇಹಿತ ಇಷ್ಟರಮಟ್ಟಿಗೆ ದಿಗಿಲುಗೊಂಡುದನ್ನು ಪೇತ್ಯ ಇದುವರೆಗೆ ನೋಡಿರಲಿಲ್ಲ. ಅವರ ಪಕ್ಕದಲ್ಲಿಯೇ ಎನ್ನುವಂತೆ ಹತ್ತಿರದಲ್ಲಿ ಬಂದೂಕವೊಂದು ಮೊಳಗಿತು. ಮನೆಯ ಮೇಲಣ ಛಾವಣಿಗಳಿಂದ ಉಕ್ಕಿನಂಥ ಪ್ರತಿಧ್ವನಿ ಆ ಆವರಣವನ್ನು ತುಂಬಿತು.

"ಕೆಲಸಕೆಟ್ಟಿತು! ಓಡು!" ಎಂದು ಗಾವ್ರಿಕ್ ಹತಾಶನಾಗಿ ಕೂಗಿದ.

ಹುಡುಗರು ಬೀದಿಗೆ ನುಗ್ಗಿ ನಗರದಲ್ಲಿ ಓಡಲಾರಂಭಿಸಿದರು. ಅಂದಿನ ಬೆಳಗಿನಿಂದ ನಗರವು ಮೂರನೆಯಸಲಕ್ಕೆ ಬದಲಾಯಿಸಿತ್ತು. ಈಗ ಶಾಸಕ ಸೈನಿಕರ ಕೈ ಮೇಲಾಗಿದ್ದು ಸೈನಿಕರ ಕುದುರೆಕಾಲುಗಳ ಗೊರಸಿನ ಶಬ್ದವೇ ಎಲ್ಲೆಲ್ಲೂ ಪ್ರತಿಧ್ವನಿಸುತ್ತಿತ್ತು. ಅಂಗಳಗಳಲ್ಲಿ ನೆಲದ ಮೇಲೆ ಬಿದ್ದುಕೊಂಡು ಅಡಗಿಕೊಂಡಿದ್ದ ಸೈನಿಕರು ಮೇಲೆದ್ದು ಬಿರುಸಿನಿಂದ ತಮ್ಮ ಚಾವಟಿಗಳನ್ನು ಎಡಕ್ಕೂ ಬಲಕ್ಕೂ ಬೀಸುತ್ತ ಹೆಬ್ಬಾಗಿಲುಗಳ ಮೂಲಕ ಹೊರಕ್ಕೆ ಓಡಿಬಂದರು. ಕ್ರಾಂತಿಕಾರರು ಸೈನಿಕರ ಕಣ್ಣುಗಳಿಗೆ ಕಾಣದಂತೆ ಮುಚ್ಚಿಟ್ಟುಕೊಳ್ಳಲು ಇದ್ದ ಸ್ಥಳಗಳನ್ನೆಲ್ಲ ಬಂದು ಮಾಡಲಾಗಿತ್ತು, ಎಲ್ಲ ಮನೆಗಳ ಅಂಗಳದ ಮತ್ತು ಪ್ರವೇಶದ ಬಾಗಿಲುಗಳಿಗೆ ಭದ್ರವಾಗಿ ಬೀಗ ಬಿದ್ದಿತ್ತು. ಬಾಗಿಲು ಬಾಗಿಲಿಗೂ ಸೈನಿಕರೂ ಪೋಲಿಸರೂ ನಿಂತಿದ್ದರು. ಒಂದೊಂದು ಗಲ್ಲಿಯೂ ಒಂದೊಂದು ಬೋನಾಗಿ ಪರಿಣಮಿಸಿತ್ತು

ಕ್ರಾಂತಿಕಾರರಲ್ಲಿ ಅಳಿದುಳಿದವರು ತಮ್ಮನ್ನು ರಕ್ಷಿಸಿಕೊಳ್ಳುವ ಮಾರ್ಗ ತಿಳಿಯದೆ ದಿಕ್ಕಾಪಾಲಾಗಿ ಚದುರಿದರು. ಶಾಸಕ ಸೈನಿಕರು ಅವರನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ಒಬ್ಬಬ್ಬರನ್ನಾಗಿ ತುಂಡರಿಸಿದರು.

ಹ್ಯಾಟು ಕೋಟು ಏನೂ ಇಲ್ಲದ ಒಬ್ಬ ಡೊಂಕು ಕಾಲಿನ ಮನುಷ್ಯ ಮಲಯ ಅರ್ನಾತ್ಸ್ಕಯ ಬೀದಿಯ ಮಧ್ಯದಲ್ಲಿ ಹುಡುಗರನ್ನು ಹಿಂದಿಕ್ಕಿ ಓಡುತ್ತಿದ್ದ. ಅವನ ಬಗಲಿನಲ್ಲಿ ಕೆಂಪು ಬಾವುಟವಿದ್ದ ಒಂದುಕೋಲು ಇದ್ದಿತು. ಅವನು ಮತ್ತೆಯಾರೂ ಅಲ್ಲ, ಬಂದೂಕು ಕ್ರಿಡಾಂಗಣದ ಯಜಮಾನ. ಅವನು ಕುಂಟುತ್ತ ಒಲೆದಾಡುತ್ತ ಓಡುತ್ತಿದ್ದ. ಮತ್ತೆ ಯಾವುದಾದರೂ ಸಮಯವಾಗಿದ್ದರೆ ಈ ದೃಶ್ಯವನ್ನು ನೋಡಿ ಹುಡುಗರು ಆಶ್ಚರ್ಯ ಪಡುತ್ತಿದ್ದರು. ಆದರೆ ಈಗ ಅವರು ಭಯಭೀತರಾಗಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಎಂಟು ಹತ್ತು ಹೆಜ್ಜೆಗಳಿಗೊಂದು ಸಲ ಜೋಸೆಫ್ ಕಾರ್ಲೊವಿಚ್ ಭಯಂಕರವಾಗಿ ಬಿಳಿಚಿಕೊಂಡ ಮುಖವನ್ನು ಹಿಂದಕ್ಕೆ ತಿರುಗಿಸಿ ದಿಗಿಲುಕೊಂಡ ಕಣ್ಣುಗಳಿಂದ ನೋಡುತ್ತಿದ್ದ. ಅತೀವ ಯಾತನೆ ಆತನ ಮುಖದಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಇಬ್ಬರು ಶಾಸಕ ಸೈನಿಕರು ಅಶ್ವಾರೋಹಿಗಳಾಗಿ ಅವನನ್ನು ರಭಸದಿಂದ

ಬೆನ್ನಟ್ಟಿ ಬರುತ್ತಿದ್ದರು. ಕುದುರೆಕಾಲಿನ ಕಬ್ಬಿಣದ ಹಲ್ಲೆಗಳು ಕಲ್ಲುಗಳಿಗೆ ತಗುಲಿ ಖಣಿಲ್ ಖಣಿಲ್ ಎಂಬ ಶಬ್ದವನ್ನುಂಟುಮಾಡುತ್ತಿದ್ದವಲ್ಲದೆ ಹಲ್ಲೆಗಳು ತಗುಲಿದಾಗ ಕಲ್ಲುಗಳಿಂದ ಕಿಡಿಗಳು ಏಳುತ್ತಿದ್ದುವು. ಹಗಲಿನ ಬೆಳಕಿನಲ್ಲಿ ಆ ಕಿಡಿಗಳು ಕಾಂತಿ ಹೀನವಾಗಿದ್ದುವು.

ಒಂದು ನಿಮಿಷ ಕಳೆದಿರಲಿಕ್ಕಿಲ್ಲ. ಅಷ್ಟರಲ್ಲಿ ಜೋಸೆಫ್ ಕಾರ್ಲೋವಿಚ್ ಎರಡು ಕುದುರೆಗಳ ಮಧ್ಯೆ ಸಿಕ್ಕಿಕೊಂಡ. ತಟಕ್ಕನೆ ನಿಂತು ಕುದುರೆಗಳು ಮುಂದೆ ಹೋದ ಒಡನೆ ಪಕ್ಕಕ್ಕೆ ಹಾರಿ ಬಂದು ಬಾಗಿಲಿನ ಹಿಡಿಯನ್ನು ಹಿಡಿದುಕೊಂಡು ಅಲ್ಲಾಡಿಸಿದ. ಬಾಗಿಲಿಗೆ ಬೀಗ ಹಾಕಿತ್ತು. ಬೀಗವನ್ನು ಜಗ್ಗಿದ. ಜೀವವನ್ನು ಮುಷ್ಟಿಯಲ್ಲಿ ಹಿಡಿದುಕೊಂಡು ಉಗ್ರವಾಗಿ ಬಾಗಿಲನ್ನು ಒದ್ದ. ಅದೇನೂ ತೆರೆಯಲಿಲ್ಲ. ಕಾಸಕ ಸೈನಿಕರು ರಸ್ತೆಯ ಪಕ್ಕಕ್ಕೆ ಕುದುರೆಯನ್ನು ತಿರುಗಿಸಿದರು.

ಜೋಸೆಫ್ ಕಾರ್ಲೋವಿಚ್ ತಲೆಯನ್ನು ಬಗ್ಗಿಸಿಕೊಂಡು ಬಾಗಿಲಿಗೆ ದೇಹವನ್ನು ಕೀಲಿಸಿದ. ಬಾವುಟವನ್ನು ಎರಡೂ ಕೈಗಳಿಂದ ಎದೆಗೆ ಅವಚಿ ಹಿಡಿದುಕೊಂಡ. ಸೈನಿಕರ ಕೈಯ ಕತ್ತಿ ಮಿಂಚಿತು. ಅವನ ಬೆನ್ನು ಜಗ್ಗಿತು. ಅವನ ಮೈಮೇಲಿನ ಅಂಗಿ ಕತ್ತಿಯಿಂದ ಕತ್ತರಿಸಿ ಬಿಚ್ಚಿಕೊಂಡಿತು. ನಡುಗತ್ತ ರಭಸದಿಂದ ಮೈ ತಿರುಗಿಸಿದ. ಒಂದೇ ಒಂದು ಕ್ಷಣ ಮಾತ್ರ ಕಾಲ ಯಾತನೆಯಿಂದ ಗಂಟಿಕ್ಕಿದ ಮುಖವೂ ಒಂದು ಪಕ್ಕದಿಂದ ಮೀಸೆಯೂ ಮಿಂಚಿ ಮಾಯವಾದುವು.

"ದಗಾಕೋರರು! ಠಕ್ಕರು! ಕಟುಕರು!" ಉದ್ರೇಕಗೊಂಡು ತನ್ನ ಶಕ್ತಿಯನ್ನೆಲ್ಲ ಬಿಟ್ಟು ಎತ್ತರವಾದ ದನಿಯಲ್ಲಿ ಕಿರಿಚಿದ. "ನಿರಂಕುಶಪ್ರಭುತ್ವ ಅಳಿಯಲಿ! ದಬ್ಬಾಳಿಕೆಗೆ ಧಿಕ್ಕಾರ!"

ಅದೇ ನಿಮಿಷದಲ್ಲಿ ಎರಡು ಕತ್ತಿಗಳು ಒಂದೇ ಕಾಲದಲ್ಲಿ ಝಳಪಿಸಿದುವು. ಜೋಸೆಫ್ ಕಾರ್ಲೋವಿಚ್ ಬಿದ್ದ. ಆದರೆ ಅವನ ಪೊಡೆಗೂದಲಿನ ನೀಲಿಯ ಹಚ್ಚೆಯ ಗುರುತಿದ್ದ ಎದೆಗೆ ಅಪ್ಪಿದ್ದ ಧ್ವಜವನ್ನು ಮಾತ್ರ ಅವನು ಬಿಟ್ಟಿರಲಿಲ್ಲ.

ಕಾಸಕರಲ್ಲಿ ಒಬ್ಬ ಅವನ ಕಡೆಗೆ ಬಾಗಿ ಏನೋ ಒಂದು ಕಾರ್ಯವನ್ನು ಮಾಡಿದ.

ಮರುಕ್ಷಣದಲ್ಲಿ ಆ ಕಾಸಕರು ಕುದುರೆಗಳನ್ನೇರಿ ನಾಗಾಲೋಟದಿಂದ ಓಡಿದರು. ಹಗ್ಗಕ್ಕೆ ಕಟ್ಟಿದ್ದ ದೇಹ ಅವರ ಹಿಂದೆ ದರದರನೆ ನೆಲದಮೇಲೆ ಎಳೆದುಕೊಂಡು ಬರುತ್ತಿದ್ದಿತು. ದೇಹ ಮುಂದೆ ಹೋದಂತೆಲ್ಲ ರಸ್ತೆಯ ನೆಲದಮೇಲೆ ಉದ್ದವಾದ ಕೆಂಪು ಪಟ್ಟೆ ಬೆಳೆಯುತ್ತಿದ್ದಿತು

ಜನಗಳ ಗುಂಪೊಂದು ಪಕ್ಕದ ಬೀದಿಯೊಂದರಿಂದ ನುಗ್ಗಿಬಂದು ಹುಡುಗರನ್ನು ಎತ್ತಿಕೊಂಡು ಹೋಯಿತು.

೩೯. ವ್ಯವಸ್ಥಿತ ಹತ್ಯಾಕ್ರಮ

ಪೇತ್ಯನಿಗೆ ಅಂದು ವೇಳೆಯ ಅರಿವೇ ಆಗಲಿಲ್ಲ. ಅವನು ಕೊನೆಗೆ ಮನೆಯನ್ನು ಸೇರುವ ಹೊತ್ತಿಗೆ ಮುಚ್ಚಂಜೆಯಾದರೂ ಆಗಿದ್ದಿರಬೇಕೆಂದು ಅವನು ಭಾವಿಸಿದ್ದ. ಆದರೆ ಇನ್ನೂ ಎರಡು ಗಂಟೆ ಕೂಡ ಆಗಿರಲಿಲ್ಲ.

ಕುಲಿಕೋವೊ ಮೈದಾನ ಮತ್ತು ಸೈನ್ಯಾಧಿಕಾರಿಗಳ ಶಾಲೆಯ ಬಳಿಯಲ್ಲಿ ಪ್ರಶಾಂತತೆ ನೆಲಸಿದ್ದಿತು. ನಗರದಲ್ಲಿ ನಡೆದ ಘಟನೆಗಳು ಕರ್ಣಾಕರ್ಣಿಯಾಗಿ ದೂರದಲ್ಲಿ ಎಲ್ಲೋ ಗೋಲೀಬಾರು ಆಯಿತಂತೆ ಎಂದು ಈ ಭಾಗಕ್ಕೆ ತಿಳಿದುಬಂದವು. ಗೋಳಿಬಾರಿನ ವಿಷಯವೂ ದಂಗೆಯ

ದಂತಿಗಳೂ ಅಂದಿನ ಕಾಲದಲ್ಲಿ ಸರ್ವಸಾಮಾನ್ಯವಾಗಿದ್ದುವು.

ಗಗನವು ಬಹಳ ಕೆಳಕ್ಕೆ ಬಾಗಿದ ಹಾಗೆ ತೋರಿ ಕಪ್ಪಾಗುತ್ತ ಬಂದಿದ್ದಿತು. ಕೊರೆಯುವ ಚಳಿ ಗಾಳಿ ಹಿಮ ಬೀಳುವುದೆಂಬುದನ್ನು ಸೂಚಿಸುತ್ತಿದ್ದಿತು. ಅಂಥ ದಿವಸಗಳಲ್ಲಿ ಬೆಳಗಿನ ಹೊತ್ತೇ ಸಂಜೆ ಆರಂಭವಾದಂತೆ ಕಾಣುವುದು. ಮಂಜಿನಿಂದ ಕೂಡಿದ್ದ ನೀಲಿಗಾಳಿಯಲ್ಲಿ ಆಗಲೆ ಒಂದೆರಡು ಪುಟ್ಟ ಹಿಮದ ಚೂರುಗಳು ಹಾರಿದ್ದುವು. ಆದರೆ ಭೂಮಿ ಮಾತ್ರ ಕಪ್ಪಗೆ ಇತ್ತು, ಎಲ್ಲೂ ಬೂದು ಬಣ್ಣದ ಗುರುತುಗಳು ಇರಲಿಲ್ಲ.

ಪೇತ್ಯ ಹಿತ್ತಿಲು ಬಾಗಿಲಿನ ಮೂಲಕ ಮನೆಯ ಒಳಕ್ಕೆ ಹೋದ. ಅಡಿಗೆಯ ಮನೆಯಲ್ಲೇ ತನ್ನ ಚರ್ಮದ ಚೀಲವನ್ನು ಹಾಕಿ ತನ್ನ ಕೊಠಡಿಗೆ ಕಾಲುಸಪ್ಪಳವಾಗದಂತೆ ಮೆಟ್ಟಂಗಾಲಿನಲ್ಲಿ ನಡೆದುಹೋದ. ಅವನು ಇನ್ನೂ ಮನೆಗೆ ಬರಲಿಲ್ಲವಲ್ಲ ಎಂದು ಮನೆಯಲ್ಲಿ ಮನಸ್ಸಿಗೆ ಹಚ್ಚಿಕೊಳ್ಳುವಷ್ಟು ಹೊತ್ತಾಗಿರಲಿಲ್ಲ.

ಮನೆಯಲ್ಲಿ ಎಲ್ಲವೂ ಶಾಂತವಾಗಿದ್ದಿತು. ಹೊಲಿಯುವ ಯಂತ್ರದ ಭರ್ರೆನ್ನುವ ಶಬ್ದ ಕೇಳಿ ಬರುತ್ತಿದ್ದಿತು. ಕುದಿಯುತ್ತಿದ್ದ ಎಸರಿನ ವಾಸನೆಯು ಮೂಗಿಗೆ ಬರುತ್ತಿತ್ತು. ಈ ಸನ್ನಿವೇಶ ದಿಂದ ಪ್ರೇರಿತನಾಗಿ ಪೇತ್ಯ ತಕ್ಷಣ ಹೋಗಿ ತನ್ನ ತಂದೆಯ ಕೊರಳಿಗೆ ನೇತುಬಿದ್ದು ತನ್ನ ಕೆನ್ನೆ ಯನ್ನು ಅವರ ಅಂಗಿಗೆ ಒರಗಿಸಿಕೊಂಡು ಕಣ್ಣೀರು ಬಿಡುತ್ತ ಎಲ್ಲವನ್ನೂ ಹೇಳಿಬಿಡಬೇಕು ಎನ್ನಿಸಿತು. ಆದರೆ ಈ ಮನೋಭಾವ ಇದ್ದುದು ಒಂದು ನಿಮಿಷಮಾತ್ರ. ಉದ್ವೇಗ ಪೂರಿತ ವಾಗಿದ್ದ ಅವನ ಮನಸ್ಸಿನಲ್ಲಿ ಈ ಭಾವನೆ ಇನ್ನೊಂದು ಹೊಸ ಭಾವನೆಗೆ ಎಡಮಾಡಿ ಕೊಟ್ಟಿತು. ಗಾಂಭೀರ್ಯ, ಜವಾಬ್ದಾರಿ, ರಹಸ್ಯ ಎಂಬಿವೇ ಆ ಹೊಸ ಭಾವನೆಯಲ್ಲಿ ಸೇರಿದ್ದವುಗಳು. ಆ ಹುಡುಗನ ಜೀವನದಲ್ಲಿ ಮೊದಲನೆಯ ಬಾರಿಗೆ ಯಾರೂ ಹೇಳಿಕೊಡದೆ ಒಂದು ಸಾಧಾರಣವಾದ ಆದರೆ ಬಹಳ ಮುಖ್ಯವಾದ ಸತ್ಯದ ದರ್ಶನವಾಯಿತು. ಕೆಲವು ವಿಷಯಗಳು ಎಷ್ಟೇ ಕ್ಲೇಶಕರ ಗಳಾಗಿದ್ದರೂ ಕೂಡ ಅವುಗಳನ್ನು ತನ್ನ ಅತ್ಯಂತ ನೆಚ್ಚಿನವರಿಗೂ ಮೆಚ್ಚಿನವರಿಗೂ ಹೇಳತಕ್ಕವು ಗಳಲ್ಲ ಎಂಬುದೇ ಆ ಸತ್ಯವಾಗಿದ್ದಿತು.

ತಂದೆ ತೂಗು ಕುರ್ಚಿಯಲ್ಲಿ ಕುಳಿತು ತಲೆಯ ಹಿಂದಕ್ಕೆ ಎರಡು ಕೈಗಳನ್ನೂ ಕೊಟ್ಟು ಕೊಂಡು ತೂಗಿಕೊಳ್ಳುತ್ತಿದ್ದರು. ಅವರ ಮೂಗು ಕನ್ನಡಕವೂ ಸ್ವತಂತ್ರವಾಗಿ ತೂಗಾಡುತ್ತಿತ್ತು. ಪೇತ್ಯ ಒಳಕ್ಕೆ ಹೋಗಿ ಅವರ ಪಕ್ಕದ ಒಂದು ಕುರ್ಚಿಯಲ್ಲಿ ಮೊಳಕಾಲುಗಳ ಮೇಲೆ ಕೈಹಾಕಿ ಕೊಂಡು ಗಂಭೀರವಾಗಿ ಕುಳಿತುಕೊಂಡ.

"ಕೆಲಸವಿಲ್ಲದೆ ತುಂಬ ಬೇಸರವಾಗಿರಬೇಕು, ಅಲ್ಲವೆ ಮಗು. ಮನಸ್ಸಿಗೆ ಹಚ್ಚಿಕೊಳ್ಳ ಬೇಡ. ಇನ್ನು ಕೆಲವು ದಿವಸಗಳಲ್ಲೇ ಎಲ್ಲ ಶಾಂತವಾಗುತ್ತದೆ ಮತ್ತು ಶಾಲೆಗಳು ತೆರೆಯುತ್ತವೆ. ಆ ಬಳಿಕ ನೀನು ತರಗತಿಗಳಿಗೆ ಹೋಗಬಹುದು. ಅಲ್ಲಿ ಸಾಲದು ಎಂದು ಉಪಾಧ್ಯಾಯರು ನಿನ್ನ ಅಭ್ಯಾಸದ ಪುಸ್ತಕಗಳಲ್ಲಿ ಟೀಕೆಯನ್ನು ಗುರುತಿಸಿದಂತೆ ನಿನ್ನ ಬೇಸರ ತೊಲಗುವುದು."

ಪೇತ್ಯ ಕೆಳಗಡೆ ನೋಡುತ್ತ ಪ್ರೀತಿಯಿಂದಲೊ ಎಂಬಂತೆ ಮುಗುಳು ನಕ್ಕ.

ಇದ್ದಕ್ಕಿದ್ದಂತೆ ಅಡಿಗೆಯ ಮನೆಯ ಬಾಗಿಲು ಧಡಾರನೆ ಶಬ್ದವಾಯಿತು. ಯಾರೋ ಆತುರದಿಂದ ಬಂದಂತೆ ಕಾಲುಸಪ್ಪಳವಾಯಿತು. ದುನ್ಯ ಊಟದಮನೆಯ ಬಾಗಿಲಿನ ಬಳಿ ಕಾಣಿಸಿಕೊಂಡಳು. ಅವಳು ಬಾಗಿಲಿಗೆ ಒರಗಿಕೊಂಡು ನಿಂತಳು. ಕೈಗಳನ್ನು ಎದೆಗೆ ಅವಚಿ

ಕೊಂಡಿದ್ದಳು.

"ಓ ಸ್ವಾಮಿ—"

ಅವಳ ಬಾಯಿಂದ ಇನ್ನೊಂದು ಮಾತೂ ಹೊರಡಲಿಲ್ಲ. ಅವಳು ಭಾರವಾಗಿ ನಿಟ್ಟುಸಿರನ್ನು ಬಿಡುತ್ತಿದ್ದಳು. ಅರ್ಧ ತೆರೆದ ಬಾಯಿಂದ ಉಸಿರನ್ನು ನುಂಗುತ್ತಿದ್ದಳು, ಅವಳ ಕರವಸ್ತ್ರ ಮುದುರಿಕೊಂಡಿತ್ತು. ಭಯದಿಂದ ಬಿಳಿಚಿಕೊಂಡಿದ್ದ ಮುಖದ ಮೇಲೆ ಕೆಲವು ಕೂದಲೆಳೆಗಳು ಹರಡಿಕೊಂಡಿದ್ದುವು. ಒಂದೆರಡು ಕೂದಲೆಳೆಗಳಿಂದ ಒಂದು ಪಿನ್ನು ನೇತಾಡುತ್ತಿತ್ತು.

ಈ ರೀತಿಯಲ್ಲಿ ಮನೆಯೊಳಕ್ಕೆ ದುನ್ಯ ರಭಸದಿಂದ ನುಗ್ಗಿಬರುವುದು ಈಚೀಚೆಗೆ ಸಾಮಾನ್ಯವಾಗಿತ್ತು. ಅವಳು ಪಟ್ಟಣದಿಂದ ಯಾವುದಾದರೊಂದು ಸಮಾಚಾರವನ್ನು ಪ್ರತಿದಿನವೂ ತರದೆ ಇರುತ್ತಿರಲಿಲ್ಲ. ಆದರೆ ಈ ಸಲ ಅವಳ ಕೆರಳಿದ ಕಣ್ಣುಗಳು, ನಿಟ್ಟುಸಿರುಗಳು ಮತ್ತು ಅವಳ ಉದ್ರೇಕಗೊಂಡ ಮುಖ-ಇವುಗಳು ಏನೋ ಒಂದು ಅಸಾಧಾರಣವಾದ ಭಯಂಕರ ಸಂಗತಿಯ ಸೂಚನೆಯನ್ನು ಕೊಡುತ್ತಿದ್ದುವು.

ಆ ಮುಂದಿನ ಸ್ವಲ್ಪಕಾಲ ಅಶುಭದಾಯಕವಾದ ಕೆಟ್ಟ ಮೌನವಾವರಿಸಿತು. ಆ ಕಾಲದಲ್ಲಿ ಗಡಿಯಾರದ ಟಿಕ್ ಟಿಕ್ ಶಬ್ದವು ಒಂದಕ್ಕೆ ಹತ್ತರಷ್ಟು ಜೋರಾಗಿದ್ದಂತೆ ತೋರಿತು. ಕಿಟಿಕಿಗಳಿಗೆ ಬಿಳಿಯ ಗಾಜುಗಳಿಗೆ ಬದಲಾಗಿ ಬೂದು ಬಣ್ಣದ ಗಾಜುಗಳನ್ನು ಹಾಕಿಸಿದಾಗ ಇರುವಂತೆ ಇಡೀ ಕೊಠಡಿಯ ಆವರಣವನ್ನು ಒಂದು ರೀತಿಯ ಮಬ್ಬು ಆಕ್ರಮಿಸಿತ್ತು. ಹೊಲಿಗೆಯ ಯಂತ್ರದ ಭರ್ರೆನ್ನುವ ಶಬ್ದ ತಕ್ಷಣ ನಿಂತಿತು. ತಾತ್ಯಾನ ಕಣ್ಣುಗಳ ಪಕ್ಕದ ಕೆನ್ನೆಯ ಮೇಲಿನ ನೀಲಿಯ ಸಣ್ಣ ರಕ್ತನಾಳಗಳನ್ನು ಬೆರಳುಗಳಿಂದ ಒತ್ತುತ್ತ ಒಳಕ್ಕೆ ಓಡಿಬಂದಳು.

"ಏನು? ಏನು? ಏನಾಯಿತು?" ಎಂದು ತಾತ್ಯಾನ ಪ್ರಶ್ನಿಸಿದಳು.

ದುನ್ಯ ಮಾತಾಡಬೇಕೆಂದು ಪ್ರಯತ್ನಿಸಿದಳು. ಅವಳ ತುಟಿ ಅಲುಗಿತು, ಆದರೆ ಶಬ್ದಮಾತ್ರ ಹೊರಬರಲಾರೆ ಎಂದು ಹಟಹಿಡಿದಿತ್ತು. ಅವಳ ಗಂಟಲಿನಿಂದ ಮಾತುಗಳು ಹೊರಬಿದ್ದಾಗ ಕಿವಿಗಳಿಗೆ ಕೇಳಿಸುತ್ತದೋ ಇಲ್ಲವೋ ಎನ್ನುವಷ್ಟು ಮೆತ್ತಗಿದ್ದಿತು ಅವಳ ಧ್ವನಿ. "ಕನತ್ನಾಯ ಬೀದಿಯಲ್ಲಿ ಯೆಹೂದಿಗಳನ್ನು ಬಡಿಯುತ್ತಾ ಇದ್ದಾರೆ. ಪೊಗ್ರಾಮ್ (ಯೆಹೂದ್ಯರನ್ನು ಕೊಲ್ಲುವ ವ್ಯವಸ್ಥೆ) ಆರಂಭವಾಗಿದೆ. ನಿಸ್ಸಹಾಯಕ ಕಗ್ಗೊಲೆ!"

"ಅದು ಸಾಧ್ಯವಿಲ್ಲ!" ತಾತ್ಯಾನ ಕೈಯಿಂದ ಎದೆಯನ್ನು ಅಮುಕಿಕೊಂಡು ಹಾಗೆಯೇ ಒಂದು ಕುರ್ಚಿಯೊಳಕ್ಕೆ ಕುಸಿದಳು.

"ಸುಳ್ಳು ಹೇಳಿದರೆ ನನ್ನ ತಲೆ ತೆಗೆದುಹಾಕಿ. ಯೆಹೂದ್ಯರ ಅಂಗಡಿಗಳನ್ನೆಲ್ಲ ಒಡೆದು ಪುಡಿ ಪುಡಿಮಾಡುತ್ತಿದ್ದಾರೆ. ಎರಡನೆಯ ಮಹಡಿಯಿಂದ ಮರದ ಅಲಂಕಾರ ಮೇಜನ್ನೇ ರಸ್ತೆಗೆ ಬಿಸಾಡಿ ಬಿಟ್ಟರು. ಇನ್ನು ಹತ್ತು ನಿಮಿಷಗಳ ಸಮಯದಲ್ಲಿ ಅವರು ನಮ್ಮ ಬೀದಿಗೂ ಬರುತ್ತಾರೆ."

ತಂದೆ ಥಕ್ಕನೆ ಕುರ್ಚಿಯಿಂದ ಮೇಲಕ್ಕೆ ನೆಗೆದರು ಅವರ ಮುಖ ಬಿಳಿಚಿಕೊಂಡಿತು; ದವಡೆಗಳು ಅದಿರುತ್ತಿದ್ದುವು. ಮೂಗಿನ ಕನ್ನಡಕವನ್ನು ಏರಿಸಿಕೊಳ್ಳಬೇಕೆಂದು ಪ್ರಯತ್ನಿಸಿದರು, ಆದರೆ ಅವರ ಕೈ ಮೆಲಕ್ಕೇರಲೇ ಇಲ್ಲ.

"ಭಗವಂತ! ಇದರ ಅರ್ಥವೇನು?"

ತಂದೆ ದೇವರ ಪ್ರತಿಮೆಯ ಕಡೆಗೆ ತಿರುಗಿಕೊಂಡು ಶಿಲುಬೆಯ ಸಂಜ್ಞೆಯನ್ನು ಮಾಡಿ

ಕೊಂಡರು.

ಇದನ್ನೆ ಸೂಚನೆಯೆಂದು ಅರಿತ ದುನ್ಯ ಸನ್ನಿವೇಶವನ್ನು ಅರ್ಥಮಾಡಿಕೊಂಡಳು. ಕೂಡಲೆ ಉಳಿದ ದೇವರ ಚಿತ್ರಗಳನ್ನೂ ಪ್ರತಿಮೆಗಳನ್ನೂ ಅವಳು ತೆಗೆದುಕೊಂಡಳು. ಬೀದಿಯ ಕಡೆಗಿದ್ದ ಕಿಟಕಿಗಳಲ್ಲಿ ಅವುಗಳನ್ನು ಪ್ರದರ್ಶನಕ್ಕೊ ಎಂಬಂತೆ ಇಟ್ಟಳು. ಅವುಗಳು ಚೆನ್ನಾಗಿ ಕಾಣು ವಂತೆ ಮಾಡಲು ಕೈಗೆ ಸಿಕ್ಕಿದ ಪುಸ್ತಕಗಳು ಟೀ ಡಬ್ಬಗಳು ಮೊದಲಾದುವುಗಳನ್ನು ಪೇರಿಸಿಟ್ಟು ಅವುಗಳಮೇಲೆ ದೇವ ಮೂರ್ತಿಗಳನ್ನು ಇಡುತ್ತಿದ್ದಳು. ತಂದೆ ದಿಗ್ಭ್ರಮೆಯಿಂದ ಅವಳು ಮಾಡು ವುದನ್ನೆಲ್ಲ ನೋಡುತ್ತ ನಿಂತರು.

"ಇದೆಲ್ಲ ಯಾತಕ್ಕೆ? ನನಗೆ ಒಂದೂ ಅರ್ಥವಾಗುವುದಿಲ್ಲ." ತಂದೆ ಎಂದರು.

"ಈಗ ಮಾಡಬೇಕಾದ ಮೊದಲ ಕೆಲಸ ಇದು. ಅವರು ಯೆಹೂದ್ಯರನ್ನು ಮಾತ್ರ ಕೊಲ್ಲುತ್ತಾ ಇದ್ದಾರೆ, ರಷ್ಯನರನ್ನು ಮುಟ್ಟುವುದಿಲ್ಲ. ಕಿಟಕಿಗಳಲ್ಲಿ ಯಾರು ಯಾರು ದೇವರ ಪಟಗಳನ್ನೂ ಮೂರ್ತಿಗಳನ್ನೂ ಇಟ್ಟಿರುತ್ತಾರೋ ಅವರನ್ನೇನೂ ಮಾಡುವುದಿಲ್ಲ." ದುನ್ಯ ಹೆದರಿದ ದನಿಯಲ್ಲಿ ತಡವರಿಸುತ್ತ ಹೇಳಿದಳು.

"ಸಾಕು ನಿಲ್ಲಿಸು! ಸಾಕು ನಿಲ್ಲಿಸು! ಹೀಗೆ ಮಾಡಬೇಡ ಎಂದು ನಾನು ಹೇಳುತ್ತೇನೆ. ಕೇಳಿಸಿತೇನು? ಈ ನಿಮಿಷ ನಿಲ್ಲಿಸು! ದೇವರ ಮೂರ್ತಿಗಳೂ ಪಟಗಳೂ ಇರುವುದು ಈ ಕೆಲಸ ಕ್ಕಲ್ಲ. ಇದು ದೇವರ ನಿಂದೆ! ತಕ್ಷಣ ತೆಗೆ!"ಗಟ್ಟಿಯಾಗಿ ತಂದೆ ಕಿರಿಚಿದರು. ಮೇಜಿನ ಮೇಲೆ ಮುಷ್ಟಿಯಿಂದ ಜೋರು ಜೋರಾಗಿ ಗುದ್ದಿದರು. ತಂದೆಯವರ ಗಂಜಿ ಹಾಕಿ ಇಸ್ತ್ರಿ ಮಾಡಿದ ದುಂಡನೆಯ ಕೈಪಟ್ಟಿಗಳು ಕಳಚಿ ಬಿದ್ದುವು. ಅವರ ಮುಖ ದೆಯ್ಯಬಡಿದಂತೆ ಆಯಿತು. ಎತ್ತರ ವಾದ ಮೊನಚಾದ ಹಣೆಯಮೇಲೆ ಸಣ್ಣ ಕೆಂಪು ಚುಕ್ಕೆಗಳು ಕಾಣಿಸಿಕೊಂಡುವು. ತಂದೆ ಇಷ್ಟು ಕೋಪಗೊಂಡಿದ್ದನ್ನು ಪೇತ್ಯ ಇದೇ ಮೊದಲು ನೋಡಿದುದು. ಅವರ ದೇಹ ಅಡಿಯಿಂದ ಮುಡಿ ಯವರೆಗೂ ನಡುಗುತ್ತಿತ್ತು; ಅವರು ನೋಡಲು ಭಯಂಕರವಾಗಿ ಕಂಡರು.

ತಂದೆ ಕಿಟಕಿಯ ಬಳಿ ಹೋಗಿ ಒಂದು ದೇವಮೂರ್ತಿಯನ್ನು ಕೈಗೆ ತೆಗೆದುಕೊಂಡರು. ಆದರೆ ದುನ್ಯ ತಕ್ಷಣ ಅವರ ಬಳಿಗೆ ಹಾರಿ ಅವರ ಕೈಯನ್ನು ತಡೆದಳು.

ಅವಳು ಹತಾಶೆಯಿಂದ "ಬೇಡಿ, ದಮ್ಮಯ್ಯ! ಅವರು ಎಲ್ಲರನ್ನೂ ಕತ್ತರಿಸಿ ಹಾಕುತ್ತಿ ದ್ದಾರೆ." ಎಂದಳು. ಬಳಿಕ ತಾತ್ಯಾನಳ ಕಡೆಗೆ ತಿರುಗಿ "ತಾತ್ಯಾನ ಇವನೋವ್ನ! ಅವರು ನಮ್ಮೆಲ್ಲರನ್ನೂ ಕೊಂದುಹಾಕಿಬಿಡುತ್ತಾರೆ. ಯಾವುದಕ್ಕೂ ಹಿಂದುಮುಂದೆ ನೋಡುವುದಿಲ್ಲ." ಎಂದಳು.

"ಬಾಯಿ ಮುಚ್ಚು!" ಅಬ್ಬರಿಸಿದರು ತಂದೆ. ಅವರ ಹಣೆಯಮೇಲಿನ ರಕ್ತನಾಳಗಳು ಉಡಿದುಕೊಂಡುವು. ಅವರ ಆಕಾರವನ್ನು ನೋಡಿದರೆ ಭೀತಿ ಹುಟ್ಟುವುದು ಸ್ವಾಭಾವಿಕ ವಾಗಿತ್ತು. "ಬಾಯಿ ಮುಚ್ಚು! ನಾನು ಈ ಮನೆಯ ಯಜಮಾನ. ಇದು ನನ್ನ ಮನೆ. ಇಲ್ಲಿ ಇಂಥದಕ್ಕೆಲ್ಲ ಅವಕಾಶ ಕೊಡುವುದಿಲ್ಲ. ಅವರು ಬರಲಿ, ನಮ್ಮನ್ನೆಲ್ಲ ಕೊಲೆ ಮಾಡಲಿ! ಹಂದಿ ಗಳೇ! ನಿಮಗೆ ಅಧಿಕಾರವಿಲ್ಲ, ಅಧಿಕಾರವಿಲ್ಲ."

ತಾತ್ಯಾನ ಕೈಕೈಹಿಸುಕುತ್ತ ನಿಂತಿದ್ದಳು. "ವಾಸಿಲಿ ಪೆತ್ರೋವಿಚ್, ಬೇಡಿಕೊಳ್ಳುತ್ತೇನೆ, ದಯವಿಟ್ಟು ಶಾಂತರಾಗಿ." ಎಂದಳು. ಆದರೆ ತಂದೆ ಅಷ್ಟುಹೊತ್ತಿಗೆ ಕೈಗಳಿಂದ ಮುಖವನ್ನು

ಮುಚ್ಚಿಕೊಂಡು ಗೋಡೆಯನ್ನೊರಗಿಕೊಂಡು ನಿಂತಿದ್ದರು.

"ಅವರು ಬರುತ್ತ ಇದ್ದಾರೆ!" ದುನ್ಯ ಕೂಗಿಕೊಂಡಳು, ಎಲ್ಲರೂ ಮೌನವಾಂತರು.

ಬಹು ಜನರು ಒಟ್ಟಿಗೆ ದನಿಗೂಡಿಸಿಕೊಂಡು ಹಾಡುತ್ತಿದ್ದ ಶಬ್ದ ಬೀದಿಯಿಂದ ಕೇಳಿಬರುತ್ತಿದ್ದಿತು. ಯಾವುದೋ ಒಂದು ಧಾರ್ಮಿಕ ಉತ್ಸವ ಅಥವ ಶವದ ಮೆರವಣಿಗೆ ದೂರದಲ್ಲಿ ಸಾಗುತ್ತಿದ್ದಂತೆ ಭಾಸವಾಗುತ್ತಿತ್ತು. ಪೇತ್ಯ ಬಹು ಜಾಗರೂಕತೆಯಿಂದ ಕಿಟಕಿಯಿಂದಾಚೆಗೆ ಬಗ್ಗಿ ನೋಡಿದ. ಒಂದೇ ಒಂದು ನರಪಿಳ್ಳೆಯೂ ಬೀದಿಯಲ್ಲಿರಲಿಲ್ಲ. ನಿರ್ಜನವಾದ ಕುಲಿಕೋವೊ ಮೈದಾನದ ಮೇಲುಗಡೆ ಆಕಾಶವು ಸ್ಲೇಟಿನ ಬಣ್ಣಕ್ಕಿಂತಲೂ ಕಪ್ಪಾಗಿ ಮೊದಲಿಗಿಂತಲೂ ಹೆಚ್ಚಾಗಿ ಭೂಮಿಯ ಕಡೆಗೆ ಬಾಗಿದ್ದಂತೆ ತೋರುತ್ತಿತ್ತು. ಬರಿಯ ನೆಲದ ಮೇಲೆ ಎಲ್ಲೋ ಅಲ್ಲಿ ಇಲ್ಲಿ ಹಂಸದ ಮೈಮೇಲಿನ ಮೆದುವಾದ ತುಪ್ಪುಳದಂತೆ ಗಾಳಿ ಕೂಡಿಸಿ ಹಾಕಿದ್ದ ಹಿಮದ ಎಳೆಗಳು ಕಾಣಿಸುತ್ತಿದ್ದುವು.

ಹಾಡು ಮೊದಲಿಗಿಂತ ಜೋರಾಗಿ ಕೇಳಿಬರಲಾರಂಭಿಸಿತು. ಮೊದಲು ಕುಲಿಕೋವೊ ಮೈದಾನದ ರೈಲು ನಿಲ್ದಾಣದ ಎಡಗಡೆಯ ಕ್ಷಿತಿಜದಲ್ಲಿ ನೆಲಕ್ಕೆ ಸೇರಿದಂತೆ ಕಂಡುಬಂದ ಕಪ್ಪು ಮೋಡವು ಮೋಡವಲ್ಲವೆಂಬುದೂ ಅದು ನಿಧಾನವಾಗಿ ಹತ್ತಿರಬರುತ್ತಿದ್ದ ಜನರ ಗುಂಪೆಂಬುದೂ ಈಗ ಪೇತ್ಯನಿಗೆ ಸ್ಪಷ್ಟವಾಯಿತು.

ಮನೆಯ ಕಿಟಕಿಗಳನ್ನೆಲ್ಲ ಭದ್ರಪಡಿಸಿದರು. ಅಡಿಗೆ ಮನೆಯ ಕಡೆಯಿಂದ ಸಂಯಮದಿಂದ ಮಾತಾಡಿದ ಶಬ್ದಗಳು ಮೆತ್ತಗೆ ಕೇಳಿಬರುತ್ತಿದ್ದುವು. ಜನರ ಓಡಾಟದಿಂದಲೂ ಮತ್ತು ಅವರ ಬಟ್ಟೆಗಳಿಂದಲೂ ಉಂಟಾದ ನಿರಿನಿರಿ ಶಬ್ದವು ಕಿವಿಗೆ ಬೀಳುತ್ತಿದ್ದಿತು. ಆಗ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಒಬ್ಬ ವಯಸ್ಸಾದ ಹೆಂಗಸು ಕೈಯಲ್ಲಿ ನಸುಗೆಂಪು ಹಳದಿ ಬಣ್ಣದ ಕೂದಲುಗಳ ಮತ್ತು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡಿದ್ದ ಚಿಕ್ಕ ಹುಡುಗಿಯ ಕೈ ಹಿಡಿದುಕೊಂಡು ಬಾಗಿಲಲ್ಲಿ ಕಾಣಿಸಿಕೊಂಡಳು. ಅವಳು ಯಾರ ಮನೆಗೋ ಭೇಟಿಕೊಡುವ ಸಲುವಾಗಿ ಕಪ್ಪು ರೇಷ್ಮೆಯ ಲಂಗವನ್ನೂ, ಲೈಲ್‌ದಾರದ ಕೈಗವುಸವನ್ನೂ, ತಲೆ ಮತ್ತು ಭುಜಗಳನ್ನು ಮುಚ್ಚುವ ತೆಳ್ಳನೆಯ ಬಟ್ಟೆಯ ಮುಖಾವರಣವನ್ನೂ ಧರಿಸಿದ್ದಳು. ಹುಂಜದ ಗರಿಗಳನ್ನು ಸಿಕ್ಕಿಸಿದ್ದ ಎತ್ತರವಾದ ಕಪ್ಪು ಟೋಪಿ ಸೊಟ್ಟನಾಗಿ ತಲೆಯಮೇಲೆ ಕುಳಿತಿತ್ತು. ಅವಳ ಹೆಗಲುಗಳ ಹಿಂದಿನಿಂದ ನುಸ್ಯನ ಕಾಂತಿಹೀನವಾದ ದುಂಡುಮುಖವೂ ಇಜ್ಜಿಯ ಕೂದಲು ಚರ್ಮದ ಗುಂಡುಟೋಪಿಯೂ ಇಣಿಕಿ ನೋಡುತ್ತಿದ್ದವು. ಇದು ಶ್ರೀಮತಿ ಕೊಗನ್ ಮತ್ತು ಅವಳ ಸಂಸಾರವಾಗಿದ್ದಿತು.

ಕೊಠಡಿಯನ್ನು ಒಮ್ಮೆಲೆ ಪ್ರವೇಶಿಸುವ ಧೈರ್ಯವಿಲ್ಲದೆ ಅವಳು ಬಾಗಿಲಲ್ಲೇ ಬಹು ಹೊತ್ತು ನಿಂತುಕೊಂಡು ಒಂದು ಕೈಯ್ಯಲ್ಲಿ ಲಂಗದ ಅಂಚನ್ನು ಹಿಡಿದುಕೊಳ್ಳುತ್ತ ಇನ್ನೊಂದು ಕೈಯನ್ನು ಹೃದಯಕ್ಕೆ ಒತ್ತಿಕೊಳ್ಳುತ್ತ ಪ್ರಣಾಮಮಾಡುತ್ತಿದ್ದಳು. ಸುಕ್ಕುಸುಕ್ಕಾದ ಅತ್ತಿತ್ತ ಚಲಿಸುತ್ತಿದ್ದ ಅವಳ ಚಿಕ್ಕಮುಖದಲ್ಲಿ ಮಧುರವಾದ ಸುಸಂಸ್ಕೃತವಾದ ಆದರೂ ಚಿತ್ತಕ್ಷೋಭೆಯನ್ನು ಒಡೆದು ತೋರಿಸುತ್ತಿದ್ದ ಮುಗುಳುನಗೆ ರಂಜಿಸುತ್ತಿತ್ತು.

"ಶ್ರೀಯುತ ಬಾಚಿಯವರೇ!" ಕೈಚೀಲಹಾಕಿದ ನಡುಗುತ್ತಿದ್ದ ಕೈಗಳನ್ನು ತಂದೆಯವರ ಕಡೆ ನೀಡಿ ಹಕ್ಕಿಯಂಥ ಕೀರಲು ದನಿಯಲ್ಲಿ ಹೇಳಿದಳು." ಶ್ರೀಯುತ ಬಾಚಿಯವರೇ

ತಾತ್ಯಾನ ಇವನೋವ್ನ! ನಾವು ಯಾವಾಗಲೂ ನಿಮಗೆ ಒಳ್ಳೆಯ ನೆರೆಹೊರೆಯವರಾಗಿದ್ದೇವೆ! ನಾವು ಬೇರೆ ದೇವರನ್ನು ನಂಬುವುದು ತಪ್ಪೆ?"

ಇದ್ದಕ್ಕಿದ್ದಂತೆ ಮೊಣಕಾಲೂರಿ ನಮಸ್ಕರಿಸಿದಳು. "ನನ್ನ ಮಕ್ಕಳನ್ನು ಕಾಪಾಡಿ! ಅವರು ನನ್ನನ್ನು ಬೇಕಾದರೂ ಒಡೆದು ಪುಡಿಮಾಡಿ ಹಾಕಲಿ. ಆದರೆ ದಯವಿಟ್ಟು ನನ್ನ ಮಕ್ಕಳನ್ನು ಉಳಿಸಿ ಕೊಡಿರಿ!"

"ಅಮ್ಮ, ಇಷ್ಟೇಕೆ ಅಂಗಲಾಚಿಕೊಳ್ಳುತ್ತೀಯೆ. ಸಾಕು ಸುಮ್ಮನಿರು." ಎಂದು ನುಸ್ಯ ಕೋಪದಿಂದ ತಾಯಿಗೆ ಹೇಳಿದ. ಅವನು ಜೇಬುಗಳೊಳಕ್ಕೆ ಕೈಗಳನ್ನು ತುರುಕಿಕೊಂಡು ಪಕ್ಕಕ್ಕೆ ತಿರುಗಿದ. ಆಗ ಅವನ ಕ್ಷೌರಮಾಡಿದ ಕತ್ತಿನ ನೀಲಿಯ ಹಿಂಭಾಗ ಕಾಣಿಸಿತು.

"ನುಸ್ಯ, ಬಾಯಿ ಮುಚ್ಚುತ್ತೀಯೋ ಇಲ್ಲವೋ? ಅಥವಾ ಕೆನ್ನೆಗೆ ಎರಡು ಬಿಗಿಸಿಕೊಳ್ಳುತ್ತೀಯೋ? ನಿಮ್ಮ ತಾಯಿಗೆ ತಾನೇನು ಮಾಡುತ್ತಿರುವಳೆಂಬುದು ಗೊತ್ತು. ಶ್ರೀಯುತ ಬಾಚಿಟಿವರು ಜ್ಞಾನಿಗಳು ಮತ್ತು ಅವರು ನಮ್ಮ ಹತ್ಯೆಗೆ ಅವಕಾಶ ಕೊಡುವುದಿಲ್ಲ ಎಂಬುದು ಅವಳಿಗೆ ಗೊತ್ತು." ಎಂದು ಇಜ್ಜಿ ಹೇಳಿದ.

ತಾತ್ಯಾನ ಬಾಗಿಲಬಳಿಗೆ ಓಡಿಹೋಗಿ ಆ ಯೆಹೂದಿ ಹೆಂಗಸನ್ನು ಮೇಲಕ್ಕೆ ಎತ್ತಿದಳು. ಏಕೆ ಹೀಗೆ ಮಾಡುತ್ತಿದೀರಿ, ಶ್ರೀಮತಿ ಕೊಗನ್. ನಾಚಿಕೆಗೇಡು! ಒಳಕ್ಕೆ ಬನ್ನಿ! ದಯವಿಟ್ಟು ಒಳಕ್ಕೆ ಬನ್ನಿ! ಶ್ರೀಮಾನ್ ಕೊಗನ್‌ರವರೇ, ನುಸ್ಯ, ದೊರೊಚ್ಕ, ಏನು ದುರ್ವಿಧಿ ಇದು!"

ಶ್ರೀಮತಿ ಕೊಗನ್ ಉದ್ವೇಗಭರದಿಂದ ಅಳುತ್ತ ಇದ್ದಳು. ಅವಳ ಬಾಯಿಂದ ಕೃತಜ್ಞತಾ ಸೂಚಕವಾದ ಮಾತುಗಳು ಹೊರನುಗ್ಗುತ್ತಿದ್ದುವು. ಆಗ ಇದನ್ನೆಲ್ಲ ನೋಡಿದ ತಂದೆಯವರಿಗೂ ತಾತ್ಯಾನಳಿಗೂ ತುಂಬ ನಾಚಿಕೆಯಾಯಿತು. ಏಕೆ ತಮ್ಮನ್ನು ಭೂಮಿ ನುಂಗಿಕೊಳ್ಳಬಾರದು ಎಂದು ಅವರು ಆಲೋಚಿಸಿದರು. ಶ್ರೀಮತಿ ಕೊಗನ್ ಬೇಗಬೇಗನೆ ತನ್ನ ಪತಿಯನ್ನೂ ಮಕ್ಕಳನ್ನೂ ಹಿಂದುಗಡೆಯ ಕೊಠಡಿಗಳಲ್ಲಿ ಮುಚ್ಚಿಟ್ಟಳು. ಹೊರಗಡೆ ಹೆಜ್ಜೆಹೆಜ್ಜೆಗೂ ಜನರ ಗುಂಪಿನ ಹಾಡು ಜೋರಾಗುತ್ತ ಸಮೀಪಿಸಲಾರಂಭಿಸಿತು ಧಾರ್ಮಿಕ ಮೆರವಣಿಗೆಯಂತೆ ಕಾಣುತ್ತಿದ್ದ ಒಂದು ಚಿಕ್ಕ ಜನಗಳ ಗುಂಪು ಕುಲಿಕೋವೊ ಮೈದಾನವನ್ನು ದಾಟಿಕೊಂಡು ಪೇತ್ಯನ ಮನೆಯ ಕಡೆಗೆ ಬರುತ್ತಿದ್ದಿತು.

ಗುಂಪಿನ ಮುಂದುಗಡೆಯಲ್ಲಿ ಚಳಿಗಾಲದ ಕೋಟುಗಳನ್ನು ಧರಿಸಿದ ಇಬ್ಬರು ಬಿಳಿಗೂದಲಿನ ಮುದುಕರು ಬರಿದಲೆಯಲ್ಲಿ ನಡೆದು ಬರುತ್ತಿದ್ದರು. ಟವಲಿನ ಮೇಲೆ ಕಸೂತಿ ಹಾಕಿದ ಜಾರ್ ಚಕ್ರವರ್ತಿಯ ಭಾವಚಿತ್ರವನ್ನು ಅವರು ಹಿಡಿದುಕೊಂಡಿದ್ದರು. ಹೆಗಲಿನಿಂದ ಕಂಕುಳ ಕಡೆಗೆ ಹೋಗಿದ್ದ ನೀಲಿಯ ಪಟ್ಟಿಯನ್ನೂ ಓಕ್ ಹಣ್ಣಿನ ಚಿಪ್ಪಿನಂತಿದ್ದ ಮುಖವನ್ನೂ ಚಿತ್ರದಲ್ಲಿ ನೋಡಿದೊಡನೆಯೆ ಇದೇ ಜಾರ್ ಚಕ್ರವರ್ತಿಯ ಭಾವಚಿತ್ರವೆಂದು ತಕ್ಷಣ ಪೇತ್ಯ ತಿಳಿದುಕೊಂಡು ಭಾವಚಿತ್ರದ ಹಿಂದುಗಡೆ ಚಳಿಯಿಂದ ಕೂಡಿದ ನೀಲಿಯಾದ ಅಂಟುಗಾಳಿಯಲ್ಲಿ ಮೇಲಕ್ಕೆತ್ತಿಡಿದ ಚರ್ಚ್ ಬಾವುಟಗಳು ಕಾಣಿಸಿದುವು. ಇವರ ಹಿಂದುಗಡೆ ಮರ್ಯಾದಸ್ಥರಂತೆ ಕಂಡುಬಂದ ಸ್ತ್ರೀಪುರುಷರಿದ್ದರು. ಅವರು ಚಳಿಗಾಲದ ಮೇಲಂಗಿಗಳನ್ನೂ ಎತ್ತರವಾದ ಮೇಲುಗವುಸಿನ ಪಾದರಕ್ಷೆಗಳನ್ನೂ ಎತ್ತರವಾದ ಬೂಡ್ಸುಗಳನ್ನೂ ತೊಟ್ಟಿದ್ದರು. ಅಗಲವಾಗಿ ಬಿಟ್ಟ ಅವರ ಬಾಯಿಗಳಿಂದ ಬಿಳಿಯ ಹಬೆ ಹೊರಬರುತಿ ದ್ದಿತು.

ರಕ್ಷಿಸು ನಮ್ಮನು ತಂದೆಯೆ
ರಕ್ಷಿಸು ನಿನ್ನಯ ಮಂದೆಯ
ರಕ್ಷಿಸು ನಿನ್ನಯ ಭಕ್ತರ....

ಎಂದು ಮೊದಲಾಗಿ ಅವರು ಹಾಡುತ್ತಿದ್ದರು. ಅವರನ್ನು ಈ ಧಾರ್ಮಿಕ ಭಾವದಲ್ಲಿ ನೋಡಿದಾಗ ಅವರು ಎಷ್ಟೊಂದು ಘನವಂತರೂ ಶಾಂತಿಪ್ರಿಯರೂ ಆಗಿ ಕಾಣಿಸುತ್ತಾರೆಂದು ನೋಡಿದವರಿಗೆ ಅನ್ನಿಸಿರಬೇಕು. ತಂಡೆಯುವರ ಮುಖದಲ್ಲಿ ಅನಿಶ್ಚಿತತೆಯ ಮಂದಹಾಸ ಮೂಡಿತು.

"ಅಲ್ಲಿ ನೋಡಿ! ಅವರೆಷ್ಟು ಶಾಂತಿಯಿಂದ ನಡೆದು ಬರುತ್ತಿದ್ದಾರೆ. ಅವರು ಯಾರಿಗೂ ತೊಂದರೆ ಮಾಡುತ್ತಿಲ್ಲ! ನೀವು ಸುಮ್ಮನೆ...."

ಅದೇ ಸಮಯಕ್ಕೆ ಸರಿಯಾಗಿ ಗುಂಪು ಮನೆಯ ಎದುರಿಗೆ ರಸ್ತೆಯ ಆಚೆಯ ಕಡೆ ನಿಂತಿತು. ಆ ಗುಂಪಿನಿಂದ ಮಿಸೆಯ ಧಡುಮಿ ಹೆಂಗಸೊಬ್ಬಳು ಹೊರಬಂದಳು. ಅವಳ ಕೆನ್ನೆ ಕೆನ್ನೀಲಿಯ ಬಣ್ಣದಿಂದ ಮಿಂಚುತ್ತಿತ್ತು. ಚಳಿಗಾಗಿ ಅವಳು ಎದೆಗೆ ಎರಡು ಶಾಲುಗಳನ್ನು ಸುತ್ತಿಕೊಂಡಿದ್ದಳು. ಇಸಾಬೆಲ ದ್ರಾಕ್ಷಿಹಣ್ಣಿಗಳಂತೆ ಕಪ್ಪಗಿದ್ದ ಗುಡ್ಡೆಕಣ್ಣುಗಳಿಂದ ಕಿಟಕಿಗಳನ್ನು ದುರುಗುಟ್ಟಿಕೊಂಡು ನೋಡಿದಳು. ಅವಳ ದೃಷ್ಟಿಯಲ್ಲಿ ಕ್ರೂರ ಸಂಕಲ್ಪವು ಎದ್ದು ಕಾಣುತ್ತಿದ್ದಿತು. ಮಂದವಾದ ಉಣ್ಣೆಯ ಉದ್ದ ಕಾಲುಚೀಲಗಳನ್ನು ಹಾಕಿದ್ದ ಕಾಲುಗಳನ್ನು ಗಂಡಸಿನಂತೆ ಅಗಲಿಸಿಕೊಂಡು ನಿಂತುಕೊಂಡಳು. ಮನೆಯ ಕಡೆಗೆ ಬಿಗಿಮುಷ್ಟಿಯನ್ನು ಬೀಸುತ್ತ ಮಾರುಕಟ್ಟೆಯ ಹೆಂಗಸಿನ ಸ್ವಾಭಾವಿಕವಾದ ಕೀರಲು ದನಿಯಲ್ಲಿ ಕೂಗುಹಾಕಿದಳು. "ಆಹಾ, ಯೆಹೂದ್ಯರ ಮುಖಗಳು! ಮುಚ್ಚಿಟ್ಟುಕೊಂಡಿದ್ದೀರೋ? ಚಿಂತೆಮಾಡಬೇಡಿ. ಒಂದು ಲಾಜಾದಲ್ಲಿ ಹೊರಕ್ಕೆಳೆದು ತಂದು ಹಾಕುತ್ತೇನೆ. ನಿಷ್ಠಾವಂತ ಕ್ರಿಶ್ಚಿಯನರು ನಿಮ್ಮ ದೇವ ಮೂರ್ತಿಗಳನ್ನೂ ಶಿಲುಬೆಗಳನ್ನೂ ತೋರಿಸಿ,"

ಈ ಮಾತುಗಳನ್ನು ಉದ್ಘೋಷಿಸಿ ತನ್ನ ಲಂಗದ ಅಂಚನ್ನು ಎತ್ತಿಹಿಡಿದುಕೊಂಡು ದೃಢ ನಿರ್ಧಾರದಿಂದ ರಸ್ತೆಯನ್ನು ದಾಟಿದಳು. ರಸ್ತೆಯನ್ನು ಸರಿ ಮಾಡುವುದಕ್ಕಾಗಿ ರಾಶಿಹಾಕಿದ್ದ ಕಲ್ಲುಗುಡ್ಡೆಯಿಂದ ಒಂದು ಕಲ್ಲನ್ನು ಎತ್ತಿಕೊಂಡಳು. ಅವಳ ಹಿಂದುಗಡೆ ಉದ್ದತೋಳಿನ ಇಪ್ಪತ್ತು ಜನ ಒರಟರು ಗುಂಪಿನಿಂದ ಹೊರಟರು. ಅವರು ತ್ರಿವರ್ಣದ ರಿಬ್ಬನ್ನುಗಳನ್ನು ತಮ್ಮ ಮೇಲಂಗಿಗಳಿಗೆ ಸಿಕ್ಕಿಸಿಕೊಂಡಿದ್ದರು. ಅವರು ಒಬ್ಬರ ಹಿಂದೊಬ್ಬರಂತೆ ನಿಧಾನವಾಗಿ ರಸ್ತೆಯನ್ನು ದಾಟಲಾರಂಭಿಸಿದರು. ಒಬ್ಬೊಬ್ಬನೂ ಕಲ್ಲಿನ ರಾಶಿಯ ಹತ್ತಿರಕ್ಕೆ ಬಂದಾಗ ಬಹು ಚಮತ್ಕಾರವಾಗಿ ಬಗ್ಗಿ ಏಳುತ್ತಿದ್ದ. ಕೊನೆಯವನು ಮುಂದಕ್ಕೆ ಹೋದಾಗ ಕಲ್ಲಿನ ರಾಶಿ ಇದ್ದ ಸ್ಥಳವು ಸಮತಲವಾಗಿತ್ತು.

ಮರಣಶಾಂತಿ ತಾಂಡವವಾಡುತ್ತಿತ್ತು. ಗಡಿಯಾರದ ಒಂದೊಂದು ಟಿಕ್ ಟಿಕ್ ಶಬ್ದವು ಒಂದೊಂದು ಪಿಸ್ತೂಲಿನ ಗುಂಡಿನ ಹೊಡೆತದಂತೆ ಕೇಳಿಸುತ್ತಿದ್ದಿತು. ಅಲ್ಲದೆ ಕಿಟಕಿಯ ಗಾಜುಗಳು ಕಪ್ಪಾಗಿ ಕಾಣಲಾರಂಭಿಸಿದ್ದುವು. ಆ ನಿಶ್ಶಬ್ದತೆ ಬಹು ದೀರ್ಘವಾಗಿತ್ತಾದುದರಿಂದ ತಂದೆಗೆ ಮಧ್ಯೆ ಈ ಮಾತನ್ನು ಹೇಳಿಕೊಳ್ಳಲು ಅವಕಾಶ ಸಿಕ್ಕಿತು: "ಪೋಲೀಸಿನವರೆಲ್ಲ ಎಲ್ಲಿ ನೆಗೆದು ಬಿದ್ದು ಹೋಗಿದ್ದಾರೊ ಕಾಣೆ. ಸೈನ್ಯದ ಅಧಿಕಾರಿಗಳ ಶಾಲೆಯಿಂದ ಏತಕ್ಕೆ ಜನಗಳನ್ನು ಕಳುಹಿಸಬಾರದು?"

"ಓಹ್, ಪೋಲೀಸಿನವರೇ!" ತಾತ್ಯಾನ ಉದ್ರೇಕದಿಂದ ಹೇಳಿದಳು. ಅಷ್ಟರಲ್ಲಿಯೆ ಮಾತು ನಿಲ್ಲಿಸಿದಳು.

ನಿಶ್ಶಬ್ದತೆಯು ಮೊದಲಿಗಿಂತ ಭಯಂಕರವಾಗಿ ಅಸಹನೀಯವಾಯಿತು. ಇಜ್ಜಿಯು ಗುಂಡು ಟೋಪಿಯನ್ನು ಮುಖಕ್ಕೆಳೆದುಕೊಂಡು ಕುರ್ಚಿಯ ತುದಿಯಮೇಲೆ ನಡುಮನೆಯಲ್ಲಿ ಕುಳಿತಿದ್ದ. ಅವನ ದುಃಖೀಕಣ್ಣುಗಳು ಮೂಲೆಯ ಯಾವುದೋ ಒಂದು ವಸ್ತುವಿನ ಮೇಲೆ ದೃಷ್ಟಿಯನ್ನು ನೆಟ್ಟಿದ್ದುವು. ನುಸ್ಯ ಜೇಬಿನಲ್ಲಿ ಕೈತುರುಕಿಕೊಂಡು ಅಡ್ಡಾಡುತ್ತಿದ್ದ. ಈಗ ಕಿವಿಗೊಟ್ಟು ಆಲಿಸುತ್ತ ನಿಂತುಕೊಂಡ. ಪ್ರಯಾಸದಿಂದ ತಿರಸ್ಕಾರಪೂರ್ಣವಾದ ಮುಗುಳುನಗೆ ಅವನ ಬಿರುಕಿಸಿದ ದುಂಡು ತುಟಿಗಳಿಂದ ಹೊರನೆಗೆಯುತ್ತಿದ್ದಿತು.

ಅಸಹನೀಯವಾದ ನೀರವತೆ ಇನ್ನೊಂದು ಕ್ಷಣಕಾಲ ಇದ್ದಿತೇನೋ, ಬಳಿಕ ಅದು ಸಿಡಿಯಿತು. ಕೆಳಗಡೆಯಲ್ಲಿ ಒಂದು ಕಲ್ಲು ಕಿಟಕಿಗೆ ಬಡಿಯಿತು. ಅನಂತರ ಕಿರಿಚಾಟ ಆರಂಭವಾಯಿತು. ಗಾಜಿನ ಚೂರುಗಳು ನೆಲದ ಮೇಲಕ್ಕೆ ಉದುರಿದುವು. ಗುಡುಗಿನಂತೆ ಶಬ್ದ ಮಾಡುತ್ತ ಕಬ್ಬಿಣದ ಹೆಸರಿನ ಹಲಗೆ ಕೆಳಕ್ಕೆ ಬಿದ್ದಿತು. ಬಾಗಿಲುಗಳನ್ನೂ ಪೆಟ್ಟಿಗೆಗಳನ್ನೂ ಮುರಿದು ಒಡೆದ ಶಬ್ದ ಕೇಳಿಸಿತು. ಪೆಪ್ಪರಮೆಂಟುಗಳ ಜಾಡಿಗಳನ್ನೂ, ಡಬ್ಬಿಗಳನ್ನೂ ಬೀದಿಗೆಸೆಯಲಾಯಿತು. ಕೂಗುತ್ತ ಸಿಳ್ಳು ಹೊಡೆಯುತ್ತ ಆ ರಾಕ್ಷಸರ ಗುಂಪು ಮನೆಯನ್ನು ಸುತ್ತುಗಟ್ಟಿತು. ಚಿನ್ನದ ಬಣ್ಣದ ಚೌಕಟ್ಟಿನ ಚಕ್ರವರ್ತಿಯ ಭಾವಚಿತ್ರವನ್ನು ಮಗ್ಗಲುಮಾಡಿ ತಲೆಯ ಮೇಲುಗಡೆ ಎತ್ತಿಹಿಡಿಯಲಾಗಿದ್ದಿತು. ಅದು ಒಂದೊಂದುಸಲ ಒಂದೊಂದುಕಡೆ ಕಾಣಿಸುತ್ತ ಚಲಿಸುತ್ತಿದ್ದಿತು. ಭುಜದ ಅಲಂಕಾರಪಟ್ಟಿಯನ್ನೂ ಮತ್ತು ಹೆಗಲಿನಿಂದ ಕಂಕುಳಿಗೆ ನೀಲಿ ಪಟ್ಟಿಯನ್ನೂ ತಗುಲಿಸಿಕೊಂಡ ಅಧಿಕಾರಿಯೊಬ್ಬನು ಚರ್ಚಿನ ಬಾವುಟಗಳ ಮಧ್ಯದಿಂದ ಜನಗಳ ತಲೆಯ ಮೇಲುಗಡೆಯಿಂದ ಮೆಟ್ಟಂಗಾಲಿನ ಮೇಲೆ ನಿಂತು ನೋಡುವಂತೆ ಆ ಭಾವಚಿತ್ರ ತೋರುತ್ತಿದ್ದಿತು.

"ಬಾಚಿಯವರೇ! ನೋಡಿ, ಅವರೇನು ಮಾಡುತ್ತಿದ್ದಾರೆ ನೋಡಿ. ಎರಡುನೂರು ರೂಬಲುಗಳ ಬೆಲೆಯ ಅಂಗಡಿಯ ಸಾಮಾನು!" ಎಂದು ಕೈಹಿಸುಕಿಕೊಳ್ಳುತ್ತ ಪಿಸುಮಾತಿನಲ್ಲಿ ಶ್ರೀಯುತ ಕೊಗನ್ ಹೇಳಿದ.

"ಅಪ್ಪ, ಸುಮ್ಮನಿರು. ಸಣ್ಣತನವನ್ನು ತೋರಿಸಬೇಡ. ಇದು ದುಡ್ಡಿನ ಪ್ರಶ್ನೆಯಲ್ಲ!" ಎಂದ ನುಸ್ಯ.

ಪೊಗ್ರಾಮ್ ಮುಂದುವರಿಯಿತು.

"ಸ್ವಾಮಿ! ಯೆಹೂದಿಗಳಿಗಾಗಿ ಮನೆಗಳನ್ನೆಲ್ಲ ಶೋಧಿಸುತ್ತಿದ್ದಾರೆ" ಎಂದು ಶ್ರೀಮತಿ ಕೊಗನ್ ಕೂಗಿದಳು. ಕತ್ತಿಯ ಎದುರಿಗೆ ಪರದಾಡುವ ಕೋಳಿಯಂತೆ ಕತ್ತಲೆಯ ಆ ಕೋಣೆಯಲ್ಲಿ ಅವಳು ಪರದಾಡತೊಡಗಿದಳು.

"ಡೋರ! ನುಸ್ಯ! ಮಕ್ಕಳೇ!"

"ಅವರು ಮಹಡಿ ಹತ್ತಿ ಬರುತ್ತಿದ್ದಾರೆ, ಸ್ವಾಮಿ." ದುನ್ಯ ಹೇಳಿದಳು.

ಒರಟು ಧ್ವನಿಗಳೂ ಜನಗಳ ಕಾಲಿನ ಬೂಡ್ಸುಗಳ ಧಬಧಬ ಶಬ್ದವೂ ಕೇಳಲಾರಂಭಿಸಿದುವು. ಮರದ ಮಹಡಿಯ ಮೆಟ್ಟಲುಗಳಾಗಿದ್ದುದರಿಂದ ಬೂಡ್ಸುಕಾಲುಗಳ ಶಬ್ದ ಒಂದಕ್ಕೆ

ಹತ್ತಾಗಿ ಕೇಳುತ್ತಿದ್ದಿತು.

ನಡುಗುವ ಬೆರಳುಗಳಿಂದ ಬಹು ಶೀಘ್ರವಾಗಿ ಸರಸರನೆ ತಂದೆ ಕೋಟಿನ ಗುಂಡಿಗಳನ್ನೆಲ್ಲ ಹಾಕಿಕೊಂಡು ಗಡ್ಡದ ಕೆಳಗಡೆ ಕತ್ತಿಗೆ ಬಿಗಿಯಾಗಿ ಸೇರಿಕೊಂಡಿದ್ದ ಗಂಜಿ ಹಾಕಿದ್ದ ಕೊರಳು ಪಟ್ಟಿಯನ್ನು ಕಿತ್ತು ಹಾಕುತ್ತ ಬಾಗಿಲಬಳಿಗೆ ನುಗ್ಗಿದರು. ತಾತ್ಯಾನ ಏನನ್ನೋ ಹೇಳಬೇಕೆಂದು ಇರುವಷ್ಟು ಹೊತ್ತಿಗೆ ತಂದೆಯವರಾಗಲೆ ಮೆಟ್ಟಿಲುಗಳ ಬಳಿಯಿದ್ದರು.

"ದೇವರೇ ಗತಿ! ಇದೇನು ವಾಸಿಲಿ ಪೆತ್ರೊವಿಚ್!"

"ಬೇಡಿ ಸ್ವಾಮಿ, ಸಾಹಸ ಮಾಡಬೇಡಿ. ಅವರು ನಿಮ್ಮನ್ನು ಕೊಂದಾರು!"

"ಅಪ್ಪ!" ತಂದೆಯ ಹಿಂದೆ ಕೂಗುತ್ತ ಪೇತ್ಯ ಓಡಿದ.

ಕಪ್ಪು ಅಂಗಿಯನ್ನು ಧರಿಸಿದ್ದ ತಂದೆ ನೇರವಾಗಿ ಮುಖ ಎತ್ತಿಕೊಂಡು ಷರಟಿನ ಕೈಪಟ್ಟಿಗಳು ಅಲ್ಲಾಡುತ್ತಿರಲು ಚುರುಕಾಗಿ ಮಹಡಿಯಿಂದ ಕೆಳಕ್ಕೋಡಿದರು. ತಂದೆಗೆ ಎದುರಾಗಿ ದಿಟ್ಟವಾಗಿ ಅಡಿಯಿಡುತ್ತ ಬಿಳಿಯ ದಪ್ಪವಾದ ಉಣ್ಣೆಯ ಕಾಲುಚೀಲಗಳನ್ನು ಧರಿಸಿದ್ದ ಧಡೂತಿ ಹೆಂಗಸು ಮಹಡಿಯನ್ನು ಹತ್ತುತ್ತಿದ್ದಳು. ಅವಳ ಕೈಚೀಲ ಧರಿಸಿದ್ದ ಕೈಯಲ್ಲಿ ಕಲ್ಲು ಗುಂಡು ಇದ್ದೇ ಇದ್ದಿತು. ಈಗ ಅವಳ ಕಣ್ಣುಗಳು ಕಪ್ಪಗೆ ಕಾಣಲಿಲ್ಲ. ನೀಲಿಬಣ್ಣವಾಗಿ ಹೊಳೆಯುತ್ತಿದ್ದುವು. ಅವಳ ಕಣ್ಣುಗಳು ಆಗ ಸತ್ತ ಎತ್ತುಗಳ ಕಣ್ಣುಗಳಂತೆ ತೋರುತ್ತಿದ್ದುವು. ಕಿರಾಣಿ ವರ್ತಕರು ಧರಿಸುತ್ತಿದ್ದಂಥ ನೀಲಿಗಪ್ಪು ಟೋಪಿಗಳನ್ನು ಹಾಕಿಕೊಂಡ ಒರಟರು ಬೆವರುತ್ತ ಅವಳನ್ನು ಹಿಂಬಾಲಿಸುತ್ತಿದ್ದರು.

"ಮಹನೀಯರೇ! ಇನ್ನೊಬ್ಬರ ಮನೆಗೆ ನುಗ್ಗುವ ಅಧಿಕಾರವನ್ನು ನಿಮಗೆ ಕೊಟ್ಟವರು ಯಾರು? ಇದು ದರೋಡೆ! ಇದಕ್ಕೆ ಅವಕಾಶ ಕೊಡುವುದಿಲ್ಲ!" ಎಂದು ಕೃತಕ ಧ್ವನಿಯಲ್ಲಿ ಕೂಗಿ ಹೇಳುತ್ತಿದ್ದಾಗ ತಂದೆಯವರ ಕತ್ತು ಕೆಂಡದಂತೆ ಕೆಂಪಗಾಗಿತ್ತು.

"ನೀನು ಯಾರು? ಮನೆಯ ಯಜಮಾನನೋ?"

ಹೆಂಗಸು ಬಲಗೈಯಿಂದ ಎಡಗೈಗೆ ಕಲ್ಲನ್ನು ಬದಲಾಯಿಸಿಕೊಂಡಳು. ತಂದೆಯ ಕಡೆಗೆ ನೋಡದೆ ತನ್ನ ಬಲಮುಷ್ಟಿಯಿಂದ ಶಕ್ತಿಯನ್ನೆಲ್ಲ ಬಿಟ್ಟು ತಂದೆಯ ಕಿವಿಗೆ ಗುದ್ದಿದಳು. ತಂದೆ ಆಯ ತಪ್ಪಿ ಕೆಳಗೆ ಬೀಳುವಷ್ಟರಲ್ಲಿ ಜನರು ಬಂದು ಅವರನ್ನು ಹಿಡಿದು ಕೊಂಡರು. ಮಚ್ಚೆಯ ಗುರುತಿದ್ದ ಕೆಂಪು ಕೈಯೊಂದು ಅವರನ್ನು ತುಡುಕಿದಾಗ ಅಂಗಿಯ ಎದೆಯ ಭಾಗ ಸಿಕ್ಕಿತು. ಅದನ್ನು ಕೈಯಲ್ಲಿ ಹಿಡಿದು ಮುಂದಕ್ಕೆ ಜಗ್ಗಿಸಿದಾಗ ಆ ಹಳೆಯ ಬಟ್ಟೆ ಹರಿದು ಬಂದಿತು.

"ಹೊಡೆಯುವುದನ್ನು ನಿಲ್ಲಿಸಿ! ಅವರು ನಮ್ಮ ತಂದೆ! ಅವಿವೇಕಿಗಳಾ! ಅವರನ್ನು ಹೊಡೆಯುಲು ನಿಮಗೆ ಏನು ಅಧಿಕಾರ!" ಪೇತ್ಯ ಹೀಗೆ ಕೂಗಿದಾಗ ಅವನ ಧ್ವನಿ ಅವನಿಗೇ ಹೊಸದಾಗಿ ಕಂಡಿತು.

ಒಬ್ಬಾತ ತಂದೆಯ ತೋಳನ್ನು ಹಿಡಿದುಕೊಂಡು ತನ್ನ ಶಕ್ತಿಯನ್ನೆಲ್ಲ ಬಿಟ್ಟು ತೀವ್ರವಾಗಿ ಎಳೆದ. ತಂದೆಯ ಕೋಟಿನ ತೋಳು ಕಿತ್ತು ಬಂದಿತು. ದುಂಡಾದ ಕೈಪಟ್ಟಿಯೂ ಅದಕ್ಕೆ ಹಾಕಿದ್ದ ಗುಂಡಿಗಳೂ ಮೆಟ್ಟಲುಗಳ ಮೇಲಿನಿಂದ ಕೆಳಕ್ಕೆ ಉರುಳಿ ಹೋದುವು. ತಂದೆಯ ಮೂಗಿನ ಮೇಲೆ ಗಾಯದಿಂದ ರಕ್ತ ಸುರಿಯುತ್ತಿದ್ದುದನ್ನೂ ಕಣ್ಣುಗಳಲ್ಲಿ ನೀರು ತುಂಬಿದ್ದುದನ್ನೂ

ಪೇತ್ಯ ಕಂಡ. ಯಾರೋ ಅವರ ಮೂಗು ಕನ್ನಡಕವನ್ನು ಕಿತ್ತೆಸೆದರು. ಅವರ ತಲೆಗೂದಲು ಎರಡು ಭಾಗವಾಗಿ ಕೆದರಿದ್ದಿತು.

ಪೇತ್ಯನ ಮನಸ್ಸಿಗೆ ಯಾರೋ ಇರಿದಂತೆ ತುಂಬಾ ನೋವಾಯಿತು. ತಂದೆಗೆ ತೊಂದರೆ ಕೊಡುವುದನ್ನು ಅವರು ನಿಲ್ಲಿಸುವುದಾಗಿದ್ದರೆ ತನ್ನ ಪ್ರಾಣವನ್ನಾದರೂ ಕೊಡಲು ಪೇತ್ಯ ಸಿದ್ಧವಾಗಿದ್ದ.

"ಮೃಗಗಳು! ದನಗಳು! ಪ್ರಾಣಿಗಳು!" ಕೊಲೆಗಾರರಿಂದ ಹಿಂದಕ್ಕೆ ಸರಿಯುತ್ತ ಹಲ್ಲು ಕಚ್ಚಿಕೊಂಡು ತಂದೆ ಬಯ್ದರು. ತಾತ್ಯಾನ ಮತ್ತು ದುನ್ಯ ದೇವಮೂರ್ತಿಗಳನ್ನು ಕೈಯಲ್ಲಿ ಹಿಡಿದುಕೊಂಡು ಮಹಡಿಯ ಮೆಟ್ಟಿಲನ್ನಿಳಿದು ಓಡುತ್ತ ಬಂದರು.

"ಮಹನೀಯರೇ, ನೀವುಗಳು ಏನು ಮಾಡುತ್ತಿದ್ದೀರಿ? ನಿಮಗೆ ದೇವರ ಭಯವಿಲ್ಲವೋ?" ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ತಾತ್ಯಾನ ಪುನಃ ಪುನಃ ಹೇಳಿದಳು.

"ನಿಮಗೇನು ಹುಚ್ಚೇ?" ರಕ್ಷಕನ ಚಿತ್ರವೊಂದನ್ನು ಮೇಲಕ್ಕೆತ್ತಿ ಹಿಡಿಯುತ್ತ ದುನ್ಯ ಕೋಪದಿಂದ ಕೂಗಿದಳು. "ನೀವು ನಿಷ್ಠಾವಂತ ಕ್ರಿಶ್ಚಿಯನರನ್ನು ಹೊಡೆಯುತ್ತಿದ್ದೀರಿ! ನೀವು ಏನು ಮಾಡುತ್ತಿದ್ದೀರೆಂಬುದನ್ನು ಕಣ್ಣುಬಿಟ್ಟು ನೋಡಿ. ಎಲ್ಲಿಂದ ಹೊರಟಿರೋ ಅಲ್ಲಿಗೆ ಹಿಂದಿರುಗಿ. ಇಲ್ಲಿ ಯೆಹೂದಿಗಳಾರೂ ಇಲ್ಲ! ಒಂದು ಹುಳುವೂ ಇಲ್ಲ! ಹೊರಟು ಹೋಗಿ!"

ಯಥಾಪ್ರಕಾರ ಪದ್ಧತಿಯಂತೆ ಪೊಗ್ರಾಮ್ ಆರಂಭಿಸಿದ ಅರ್ಧಗಂಟೆಯಲ್ಲಿ ಪೋಲೀಸರು ಬಂದಿದ್ದರು. ಅವರು ರಸ್ತೆಗಳಿಂದ ಸೀಟಿ ಹಾಕುತ್ತಿದ್ದರು. ಆ ಹೆಂಗಸು ಕಲ್ಲನ್ನು ಮೆಟ್ಟಿಲಿನ ಮೇಲಿಟ್ಟು ಲಂಗದ ಅಂಚಿನಿಂದ ತನ್ನ ಕೈಗಳನ್ನು ಚೆನ್ನಾಗಿ ಒರೆಸಿಕೊಂಡಳು.

"ಇಲ್ಲಿಗೆ ಇಷ್ಟು ಸಾಕು." ತಲೆಯನ್ನು ಒಂದು ಸಲ ಅಲ್ಲಾಡಿಸಿ ಹೀಗೆ ಹೇಳಿದಳು "ಒಳ್ಳೆಯ ಕೆಲಸ ಸ್ವಲ್ಪವಾದರೂ ಎಷ್ಟೋ ಬೆಲೆಯುಳ್ಳದು. ಆ ನಮ್ಮ ಪೋಲೀಸಿನವರು ಏತಕ್ಕೆ ಸುಮ್ಮನೆ ನರಕಿತ್ತುಕೊಳ್ಳುವಂತೆ ಶಿಳ್ಳೆ ಊದುತ್ತಿದ್ದಾರೆ? ಬನ್ನಿ ಮಾಲೊಫಾಂಟನ್‌ಸ್ಕಾಯದಲ್ಲಿ ಮತ್ತು ಬೊಟನಿಚೆಸ್ಕಾಯದ ತಿರುವಿನಲ್ಲಿರುವ ಆ ಯೆಹೂದಿಯನ್ನು ವಿಚಾರಿಸಿಕೊಳ್ಳೋಣ!"

ಭಾರವಾದ ಲಂಗವನ್ನು ಕೈಯಲ್ಲಿ ಹಿಡಿದುಕೊಂಡು ಗೊಣಗುಟ್ಟುತ್ತಾ ಮಹಡಿಯನ್ನಿಳಿದು ಹೋದಳು.

೪೦. ಸೈನ್ಯಾಧಿಕಾರಿಯ ಸಮವಸ್ತ್ರ

ಅನೇಕ ದಿವಸಗಳವರೆಗೆ ಮನೆಯ ಮುಂದುಗಡೆ ನೆಲದಮೇಲೆ ಕಲ್ಲುಗಳು, ಗಾಜಿನ ಚೂರುಗಳು, ಮರದ ಮುರುಕುಗಳು, ಅಕ್ಕಿಕಾಳು, ಚಿಂದಿಬಟ್ಟೆ ಮತ್ತು ಗೃಹಕೃತ್ಯದ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಮೈದಾನದ ಒಂದು ಪೊದೆಯಲ್ಲಿ ಚಿತ್ರದ ಪುಸ್ತಕ, ಬಿದಿರಿನ ಪುಸ್ತಕದ ಕಪಾಟು, ದೀಪ ಮತ್ತು ಚಪ್ಪಟೆ ಕಬ್ಬಿಣ-ಈ ಸಾಮಾನುಗಳನ್ನು ಮೈದಾನವನ್ನು ಹಾದು ಹೋಗುವ ಯಾರಾದರೂ ಅಕಸ್ಮಾತ್ತಾಗಿ ಕಾಣಬಹುದಾಗಿದ್ದಿತು. ದಾರಿಗರು ಬಹಳ ಎಚ್ಚರಿಕೆಯಿಂದ ಇರುತ್ತಿದ್ದು ಅವುಗಳ ಹತ್ತಿರವೂ ಸುಳಿಯುತ್ತಿರಲಿಲ್ಲ. ಆ ಸಾಮಾನುಗಳ ಸಂಬಂಧ ತಮ್ಮನ್ನೂ ಧಾರ್ಮಿಕಬಲಿಗೆ ಸೇರಿದ್ದವರೆಂದೆಣ್ಣಿಸುವುದೆಂದು ಅವರು ಭಾವಿಸಿದ್ದರು. ಧಾರ್ಮಿಕ

ಬಲಿಯ ಸಂಬಂಧವನ್ನು ವೈಲಿಗೆಯೆಂದೂ ಅಪಮಾನಕರವಾದುದೆಂದೂ ಅವರು ತಿಳಿಯು ತ್ತಿದ್ದರು.

ಮಕ್ಕಳೂ ಕೂಡ ಈ ಭಾವನೆಯಿಂದ ಹೊರತಾಗಿರಲಿಲ್ಲ. ಲೂಟಿಯಾದ ಅಂಗಡಿಯನ್ನು ಮಕ್ಕಳು ಕುತೂಹಲದಿಂದ ನೋಡಲು ಹೋದರೂ ಕೂಡ ಅವರು ತಮ್ಮ ಕೈಗಳನ್ನು ಬಿಗಿಯಾಗಿ ಜೇಬಿನೊಳಕ್ಕೆ ತುರುಕಿಕೊಂಡಿರುತ್ತಿದ್ದರು. ಕಂಪನ್ನು ಬೀರುತ್ತಿದ್ದ ಕೇಕನ್ನಾಗಲಿ, ಕಾಲಿನಲ್ಲಿ ತುಳಿದ ಕೆರ್ಚ್‌ಸಿಗರೇಟುಗಳ ಪೊಟ್ಟಣವನ್ನಾಗಲಿ ತೆಗೆದುಕೊಳ್ಳುವಂತೆ ಎಲ್ಲಿ ತಮ್ಮ ಮನಸ್ಸು ಎಳೆಯುವುದೊ ಎಂಬ ಹೆದರಿಕೆಯಿಂದಲೇ ಆ ಹುಡುಗರು ಕೈಗಳನ್ನು ಜೇಬುಗಳಲ್ಲಿ ಹುದುಗಿಸಿಟ್ಟು ಕೊಳ್ಳುತ್ತಿದ್ದುದರ ಉದ್ದೇಶವಾಗಿತ್ತು.

ತಂದೆ ಗಡ್ಡವನ್ನು ಮುಂದಕ್ಕೆ ಮಾಡಿಕೊಂಡು ಹಗಲೂ ರಾತ್ರಿ ಒಂದೇ ಸಮನೆ ಶತಪಥ ಹಾಕುತ್ತಿದ್ದರು. ಅವರು ಮೊದಲಿಗಿಂತ ಈಗ ವಯಸ್ಸು ಕಡಮೆಯಾದವರಂತೆಯೂ, ಹೆಚ್ಚು ಕಠಿಣಸ್ವಭಾವದವರಾಗಿರುವಂತೆಯೂ ಕಾಣುತ್ತಿದ್ದರು. ಅಸಾಧಾರಣವಾದ ಚುರುಕು ಅವರ ನಡತೆಯಲ್ಲಿ ತೋರುತ್ತಿತ್ತು. ಕಿವಿಯ ಬಳಿಯಲ್ಲಿ ಕೂದಲು ಹೆಚ್ಚು ನರೆತಂತೆ ಕಾಣುತಿದ್ದಿತು! ಅಂದು ಗದ್ದಲದಲ್ಲಿ ಹರಿದು ಹೋಗಿದ್ದ ಅಂಗಿಯನ್ನು ಸ್ವಲ್ಪವೂ ಅನುಮಾನಕ್ಕೆ ಆಸ್ಪದವಿಲ್ಲದಂತೆ ರಿಪೇರಿಮಾಡಲಾಗಿದ್ದಿತು.

ಜೀವನ ಮೊದಲಿನ ಸ್ಥಿತಿಗೆ ಹಿಂದಿರುಗುತ್ತಿತ್ತು.

ರಸ್ತೆಗಳಲ್ಲಿ ನಡೆಯುತ್ತಿದ್ದ ಗೋಲೀಬಾರುಗಳು ನಿಂತಿದ್ದುವು. ಶಾಂತಿಯು ನಗರದಲ್ಲಿ ನೆಲಸಿದ್ದಿತು. ಮುಷ್ಕರಗಳು ಮುಗಿದಮೇಲೆ ಆರಂಭವಾದ ಮೊದಲನೆಯ ಟ್ರಾಮ್‌ಗಾಡಿ ಮನೆಯ ಮುಂದೆ ಹಾದು ಹೋಯಿತು. ಅದರ ಹಿಂದಿನ ಚಕ್ರಗಳು ದೊಡ್ಡವೂ ಮುಂದಿನ ಚಕ್ರಗಳು ಚಿಕ್ಕವೂ ಆಗಿದ್ದುವು. ಅದು ಕುದುರೆ ಗಾಡಿಯಂತೆ ಕಾಣುವ ಒಡ್ಡೊಡ್ಡಾಗಿ ಮಾಡಿದ ವಿಲಕ್ಷಣ ವಾಹನವಾಗಿದ್ದಿತು.

ರೈಲು ನಿಲ್ದಾಣದಲ್ಲಿ ರೈಲು ಸಂಚಾರ ಆರಂಭವಾದುದರ ಗುರುತಾಗಿ ರೈಲುಯಂತ್ರದ ಸಿಳ್ಳು ಕೇಳಿಸಿತು.

'ರೂಸ್ಕಿಯೆ ವೆದೊಮೊಸ್ತಿ', 'ನೀವ', 'ಜದುಶೆವ್ನೊಯೆ ಸ್ಲೊವೊ' ಮೊದಲಾದ ಪತ್ರಿಕೆಗಳು ಮನೆಗೆ ಬಂದುವು.

ಒಂದು ದಿವಸ ಪೇತ್ಯ ಕಿಟಕಿಯಿಂದ ಹೊರಕ್ಕೆ ನೋಡಿದಾಗ ಹಳದಿಯ ಅಂಚೆ ವಾಹನವು ಮನೆಯ ಬಾಗಿಲಬಳಿ ನಿಂತಿದ್ದುದು ಕಾಣಿಸಿತು. ಆಗ ಬಿಸಿರಕ್ತವು ಹೃದಯಕ್ಕೆ ನುಗ್ಗಿದಂತಾಗಿ ಒಂದುಕ್ಷಣ ಹೃದಯದ ಬಡಿತ ನಿಂತಂತೆ ಆಯಿತು. ಅಂಚೆಯ ಜವಾನ ವಾಹನದ ಹಿಂಬಾಗಿ ಲನ್ನು ತೆರೆದು ಒಂದು ಭಾಂಗಿಯನ್ನು ಹೊರಕ್ಕೆ ತೆಗೆದ.

"ಅಜ್ಜಯಿಂದ ಬಂದಿದೆ!" ಎಂದು ಕಿಟಕಿಯನ್ನು ಅಂಗೈಯಿಂದ ತಟ್ಟುತ್ತ ಪೇತ್ಯ ಉದ್ವೇಗ ದಿಂದ ಗಟ್ಟಿಯಾಗಿ ಹೇಳಿಕೊಂಡ. ಆ ವಿಚಾರವನ್ನೇ ಅವನು ಮರೆತುಬಿಟ್ಟಿದ್ದನಲ್ಲ! ಹಳದಿಯ ಗಾಡಿಯನ್ನು ಕಂಡೊಡನೆ ಈಗ ಅವನ ಹಿಂದಿನ ನೆನಪೆಲ್ಲ ಮರುಕಳಿಸಿತು. ಗುಂಡಿಗಳು, ಗುಂಡಿ ಕಿತ್ತು ಹರಿದ ಸಮಾರಂಭಗಳಲ್ಲಿ ಧರಿಸುವ ತಂದೆಯ ಕೋಟು, ತಾನು ಮಾರಿದ್ದ ಪಾದರಕ್ಷೆಗಳು ಮತ್ತು ಪಾವಲಿಕನ ಡಬ್ಬಿಗಡಿಗೆ-ಎಲ್ಲವನ್ನೂ ಜ್ಞಾಪಿಸಿಕೊಂಡಾಗ ಒಂದಲ್ಲ ಒಂದುದಿನ ತನ್ನ

ಅಪರಾಧಗಳು ಬೆಳಕಿಗೆ ಬರಬಹುದೆಂದು ಯೋಚಿಸಿದ.

ಗಂಟೆ ಹೊಡೆಯಿತು. ಪೇತ್ಯ ಅಂಚೆಯ ಜವಾನನ ಬಳಿಗೆ ಓಡಿದ. "ಯಾರೂ ಅದನ್ನು ಮುಟ್ಟಬೇಡಿ! ಅದು ನನ್ನದು!" ಎಂದ. ಅವನು ಹೇಳಿದುದು ನಿಜವಾಗಿತ್ತು. ಇದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಬಟ್ಟೆ ಸುತ್ತಿದ್ದ ಭಾಂಗಿಯ ಮೇಲೆ ಕೆಂಪು ಶಾಯಿಯಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ "ಮಾಸ್ಟರ್ ಪ್ಯೊತರ್ ಬಾಚಿ. ವೈಯಕ್ತಿಕ" ಎಂದು ಬರೆದಿತ್ತು.

ಭಾಂಗಿಯ ಚೀಲದ ಬಟ್ಟೆಯನ್ನು ಗಟ್ಟಿದಾರದಿಂದ ಹೊಲಿದಿದ್ದಿತು. ಅದನ್ನು ಹರಿಯುವಾಗ ಪೇತ್ಯನ ಉಗುರುಸಂದಿ ಗಾಯವಾಯಿತು. ನಿಧಾನವಾಗಿ ದಾರವನ್ನು ಕತ್ತರಿಸಿ ಬಟ್ಟೆಯ ಚೀಲವನ್ನು ಬಿಡಿಸಲೂ, ಅದರ ಒಳಗಿನ ಮರದ ಪೆಟ್ಟಿಗೆಗೆ ಹಾಕಿದ್ದ ಸಣ್ಣ ಉದ್ದವಾದ ಮೊಳೆಗಳನ್ನು ಕೀಳಲೂ ಅವನಿಗೆ ತಾಳ್ಮೆಯಿರಲಿಲ್ಲ. ಅಡಿಗೆ ಮನೆಯ ಸಣ್ಣ ಕೈಗೊಡಲಿಯಿಂದ ಪೆಟ್ಟಿಗೆಯನ್ನು ಒಡೆದು ಮುಚ್ಚಳವನ್ನು ತೆಗೆದ. 'ರೂಸ್ಕಿ ಇನ್‌ವಾಲಿಡ್' ಎಂಬ ಹಳೆಯ ಪತ್ರಿಕೆಯ ಕಾಗದದಲ್ಲಿ ಚೆನ್ನಾಗಿ ಸುತ್ತಿದ್ದ ಕಟ್ಟನ್ನು ಹೊರತೆಗೆದ, ಕಟ್ಟಿನಲ್ಲಿ ಅಧಿಕಾರಿಗಳು ಧರಿಸುವ ಅಂಗಿಯೊಂದು ಇದ್ದಿತು.

"ಅಜ್ಜನ ಸಮವಸ್ತ್ರ! ಇಗೋ ಇಲ್ಲಿ!" ಎಂದು ಪೇತ್ಯ ವಿಜಯದಿಂದ ಹಿಗ್ಗಿದ. ಆ ಭಾಂಗಿಯಲ್ಲಿ ಇನ್ನೇನೂ ಇರಲಿಲ್ಲ.

"ಎಲ್ಲಿ ಕಾಣುವುದಿಲ್ಲವಲ್ಲ!" ಎಂದು ಚಿಕ್ಕಮ್ಮ ತಡವರಿಸಿದಳು.

"ಮಗುವಿಗೆ ಸೈನ್ಯದ ಪ್ರಾಚೀನಾವಶೇಷವನ್ನು ಕಳುಹಿಸುವುದು ಎಂದರೇನು? ಓದುವ ಹುಡುಗನಿಗೆ ತೀರ ಅನುಚಿತವಾದುದು." ಹೆಗಲನ್ನು ಕುಣಿಸಿ ನೀರಸವಾಣಿಯಲ್ಲಿ ತಂದೆ ಟೀಕೆ ಮಾಡಿದರು.

"ಸುಮ್ಮನೆ ಇರಿ! ನಿಮಗೇನೂ ಗೊತ್ತಾಗುವುದಿಲ್ಲ! ಅಜ್ಜಯು ಕಳಿಸಿರುವುದು ಅದ್ಭುತವಾದುದು!" ಎಂದು ಆನಂದದಿಂದ ಹೇಳಿ ಮಕ್ಕಳ ಕೊಠಡಿಗೆ ನೇರವಾಗಿ ಓಡಿದ. ತೆಳ್ಳನೆಯ ಕಾಗದದ ಒಳಗಿನಿಂದ ಚಿನ್ನದ ಬಣ್ಣದ ಗುಂಡಿಗಳು ಮಿನುಗಿದುವು. ಹೊರಗೆ ಸುತ್ತಿದ್ದ ಕಾಗದವನ್ನು ಆತುರ ಆತುರವಾಗಿ ಪೇತ್ಯ ಕಿತ್ತೆಸೆದ. ದೇವರೇ! ಇದೇನಿದು? ಗುಂಡಿಗಳ ಮೇಲೆ ಹದ್ದುಗಳ ಚಿತ್ರವೇ ಇಲ್ಲ!

ಗುಂಡಿಗಳು ನಯವಾಗಿದ್ದುವು. ಸಾಮಾನ್ಯ ಸೈನಿಕರ ಅಂಗಿಗಳಮೇಲೆ ಇರುವಂಥ ಅಗ್ಗದ ಗುಂಡಿಗಳಿಗೂ ಇವುಗಳಿಗೂ ವ್ಯತ್ಯಾಸವೇ ಇರಲಿಲ್ಲ. ನಿಜ, ಅದರಲ್ಲಿ ಹದಿನಾರು ಗುಂಡಿಗಳಿದ್ದುವು. ಆದರೆ ಏನು ಪ್ರಯೋಜನ? ಅವುಗಳಷ್ಟನ್ನು ಕೊಟ್ಟರೂ ಐದರ ಸಂಖ್ಯೆಯ ಗುರುತಿನ ಗುಂಡಿಗಳು ಮೂರಕ್ಕಿಂತ ಹೆಚ್ಚು ಬರುತ್ತಿರಲಿಲ್ಲ.

ನಿಜಸಂಗತಿ ಏನು ಎಂಬುದು ಅನೇಕ ವರ್ಷಗಳ ಅನಂತರ ಪೇತ್ಯನಿಗೆ ತಿಳಿಯಿತು. ಎರಡನೆಯ ಅಲೆಗ್ಸಾಂಡರ್ ಚಕ್ರವರ್ತಿಯ ಕಾಲದಲ್ಲಿ ಅಧಿಕಾರಿಗಳ ಸಮವಸ್ತ್ರಗಳಿಗೆ ಹದ್ದಿನ ಲಾಂಛನವಿಲ್ಲದ ಚಿನ್ನದ ಬಣ್ಣದ ಗುಂಡಿಗಳನ್ನೇ ಹಾಕುತ್ತಿದ್ದುದು. ಆದರೆ ಇದು ಪೇತ್ಯನಿಗೆ ಮೊದಲು ಹೇಗೆ ಗೊತ್ತಾಗಬೇಕು? ಪುನಃ ತಲೆಯೆತ್ತದಂಥ ಸೋಲು ಪೇತ್ಯನಿಗಾಯಿತು.

ನಿರುಪಯೋಗಕರವಾದ ಸಮವಸ್ತ್ರವನ್ನು ತೊಡೆಯಮೇಲಿಟ್ಟುಕೊಂಡು ಕಿಟಕಿಯಲ್ಲಿ ಕುಳಿತುಕೊಂಡ. ಹೊರಗಡೆ ಹಿಮದ ತುಪ್ಪುಳುಗಳು ಗಾಳಿಯಲ್ಲಿ ಹಾರುತ್ತಿದ್ದುವು. ಅವು

ಗಳನ್ನು ಉದಾಸೀನ ಮನೋಭಾವದಿಂದ ನೋಡುತ್ತ ಕುಳಿತ. ಮೊದಲ ಸಲ ಚಳಿಗಾಲದ ಆರಂಭದಲ್ಲಿ ಹಿಮ ಬೀಳುವುದನ್ನು ನೋಡಲು ಎಷ್ಟು ಆಸೆಯಿಂದಿರುತ್ತಿದ್ದನೋ! ಆದರೆ ಈಗ ಅವನಲ್ಲಿ ಗೆಲುವಿನ ಗುರುತೂ ಇರಲಿಲ್ಲ.

ಸ್ವಲ್ಪಕಾಲದ ಮೊದಲು ತಾನು ಭಾಗವಹಿಸಿದ್ದ ಮತ್ತು ತಾನು ನೋಡಿದ್ದ ಘಟನೆಗಳು ಒಂದೊಂದಾಗಿ ಅವನ ಮನಃಪಟಲದಮೇಲೆ ಹಾದುಹೋದುವು. ಈಗ ಅವೇ ಘಟನೆಗಳು ಎಲ್ಲೋ ದೂರಗತವಾಗಿರುವಂತೆ, ಅಸ್ಪಷ್ಟವಾಗಿ, ಮಸಕುಮಸಕಾಗಿ ನಿಜವಲ್ಲವೋ ಎಂಬಂತೆ ಕನಸಿನಂತೆ ಕಾಣತೊಡಗಿದವು. ಯಾವುದೋ ಬೇರೆ ಒಂದು ನಗರದಲ್ಲಿ, ಬಹುಶಃ ಯಾವುದೋ ಬೇರೆ ಒಂದು ದೇಶದಲ್ಲಿ ಆ ಘಟನೆಗಳು ಸಂಭವಿಸಿದುವೋ ಎನ್ನಿಸುತ್ತಿತ್ತು ಪೇತ್ಯನಿಗೆ. ಆದರೂ ಪೇತ್ಯನಿಗೆ ಗೊತ್ತಿತ್ತು ಅದು ಕನಸಲ್ಲವೆಂದು. ಬಹಳ ದೂರವಲ್ಲ, ಅಲ್ಲೇ ಕುಲಿಕೋವೊ ಮೈದಾನದ ಆಚೆಕಡೆಗೆ ಭೂಮಿಯನ್ನೂ ಆಕಾಶವನ್ನೂ ತುಂಬಿದ್ದ ಹಿಮದ ಹಾಲುಹೊಗೆಯ ಹಿಂದೆ ಎಲ್ಲವೂ ನಡೆದಿತ್ತು.

ಗಾವ್ರಿಕ್ ಎಲ್ಲಿ ಕಾಣುವುದಿಲ್ಲವಲ್ಲ?

ಟೆರೆಂಟಿ ಮತ್ತು ನಾವಿಕ ಏನಾದರು? ಅವರು ಮನೆಗಳ ಸೂರುಗಳಮೇಲಿನಿಂದ ತಪ್ಪಿಸಿಕೊಂಡು ಹೋಗಿದ್ದರೇ? ಆದರೆ ಈ ಪ್ರಶ್ನೆಗಳಿಗೆ ಉತ್ತರ ದೊರಕುತ್ತಿರಲಿಲ್ಲ.

ಹಿಮವು ಹೆಚ್ಚು ಹೆಚ್ಚು ಮಂದವಾಗುತ್ತ ಬಂದಿತು. ಕುಲಿಕೋವೊ ಮೈದಾನದ ಕಪ್ಪುನೆಲವನ್ನು ಶುದ್ಧವಾದ ಬಿಳುಪಾದ ಹೊಳೆಯುವ ಚಳಿಗಾಲದ ಮಂಜು ಆಚ್ಛಾದಿಸಿತ್ತು.

೪೧. ಕ್ರಿಸ್‌ಮಸ್ ವೃಕ್ಷ

ಕ್ರಿಸ್‌ಮಸ್ ಬಂದಿತು. ಪಾವಲಿಕ್ ಮುಂಜಾನೆಯೇ ಎದ್ದ. ಕ್ರಿಸ್‌ಮಸ್ ಪೂರ್ವದಿನವು ಅವನಿಗೆ ಎರಡು ಹಬ್ಬಗಳ ದಿವಸವಾಗಿತ್ತು. ಅದು ಅವನ ಹುಟ್ಟಿದ ಹಬ್ಬವೂ ಆಗಿತ್ತು. ಇದ್ದಕ್ಕಿದಂತೆ ನಾಲ್ಕುವರ್ಷವಯಸ್ಸನ್ನು ಸಂಪಾದಿಸಿಕೊಳ್ಳುವ ಈ ಆನಂದದಾಯಕವಾದ ಕುತೂಹಲದಾಯಕವಾದ ದಿವಸಕ್ಕಾಗಿ ಎಷ್ಟರಮಟ್ಟಿಗೆ ಅವನು ಹಾತೊರೆಯುತ್ತಿದ್ದಿರಬೇಕೆಂಬುದನ್ನು ಊಹಿಸುವುದು ಸುಲಭ. ಹಿಂದಿನ ದಿನ ಇನ್ನೂ ಅವನಿಗೆ ಮೂರೇ ವರ್ಷ. ಮಾರನೆಯ ದಿನ ಬೆಳಗಾಗುತ್ತಲೇ ಅವನು ನಾಲ್ಕುವರ್ಷದವನಾಗಿ ಬಿಡುವನು. ಈ ಒಂದು ವರ್ಷ ಇದ್ದಕ್ಕಿದ್ದಂತೆ ವೃದ್ಧಿಯಾಗುವುದು ಯಾವಾಗ? ರಾತ್ರಿ ಅವನು ಮಲಗಿದ್ದಾಗ ಇರಬೇಕು.

ಒಂದುವರ್ಷವನ್ನು ತಮ್ಮ ವಯಸ್ಸಿಗೆ ಸೇರಿಸಿಕೊಳ್ಳುವ ಆ ಸಂಧಿಕಾಲಕ್ಕಾಗಿ ಪಾವಲಿಕ್ ಎಷ್ಟೋ ದಿನಗಳಿಂದ ಕಾಯುತ್ತಿದ್ದ. ಒಂದು ವರ್ಷ ವೃದ್ಧಿಯಾಗುವ ಆ ರಹಸ್ಯಾತ್ಮಕ ಸಮಯವನ್ನು ಕಂಡುಹಿಡಿಯಬೇಕೆಂದು ಅವನಿಗೆ ಆಸೆ. ಅವನು ಅರ್ಧರಾತ್ರಿಯಲ್ಲಿ ಎಚ್ಚತ್ತು ಅಗಲ ಅಗಲವಾಗಿ ಕಣ್ಣುಗಳನ್ನು ಬಿಟ್ಟುಕೊಂಡು ನೋಡಿದ. ತನಗೆ ತಿಳಿದಂತೆ ಯಾವುದರಲ್ಲೂ ಏನೂ ಬದಲಾವಣೆಯಾಗಿರಲಿಲ್ಲ. ಬಟ್ಟೆಗಳನ್ನಿಡುವ ಅಲಂಕಾರದ ಮೇಜು, ರಾತ್ರಿಯ ದೀಪ, ದೇವಮೂರ್ತಿಯ ಪಟದ ಹಿಂದಕ್ಕೆ ಸಿಕ್ಕಿಸಿದ್ದ ಒಣಗಿದ ತಾಳೆಎಲೆಗಳ ಕೊನೆ-ಎಲ್ಲವೂ ಹಿಂದಿನ ದಿನ ಇದ್ದಂತೆಯೇ ಇದ್ದುವು. ಈಗ ಅವನ ವಯಸ್ಸೆಷ್ಟು, ಮೂರೋ ನಾಲ್ಕೋ?

ಗಮನವಿಟ್ಟು ತನ್ನ ತೋಳುಗಳನ್ನು ಅವು ಉದ್ದವಾಗಿವೆಯೇನೋ ಎಂದು ಪರೀಕ್ಷಿಸಿ ನೋಡಿದ. ಕಂಬಳಿಯೊಳಗಡೆ ಇದ್ದ ಕಾಲುಗಳನ್ನು ಒಂದುಸಲ ಒದ್ದು ನೋಡಿದ. ಹಿಂದಿನ ದಿನ ರಾತ್ರಿ ಮಲಗಿದಾಗ ಹೇಗೆ ಇದ್ದುವೊ ಹಾಗೆಯೇ ಇವೆ ತೋಳುಗಳು ಮತ್ತು ಕಾಲುಗಳು. ಅಥವಾ ತಲೆ ಏನಾದರೂ ಸ್ವಲ್ಪ ದಪ್ಪವಾಗಿ ಬೆಳೆದಿದ್ದಿತೋ? ಕಣ್ಣು, ಕಿವಿ, ಕೆನ್ನೆ, ತಲೆ-ಎಲ್ಲವನ್ನೂ ಬಹು ಜಾಗರೂಕತೆಯಿಂದ ಮುಟ್ಟಿನೋಡಿಕೊಂಡ. ಅವೆಲ್ಲ ಹಿಂದಿನ ಇದ್ದಂತೆಯೇ ಕಂಡು ಬಂದವು. ಇದೇನಾಶ್ಚರ್ಯ!

ಮಾರನೆಯ ಬೆಳಿಗ್ಗೆ ತಾನು ನಾಲ್ಕು ವರ್ಷದವನಾಗುವುದು ಖಂಡಿತವಾಗಿದ್ದುದರಿಂದ ಅವನಿಗೆ ಮತ್ತಷ್ಟು ಸೋಜಿಗವೆನಿಸಿತು. ಅವನಿಗೆ ಅದರಲ್ಲಿ ಅನುಮಾನವೇ ಇರಲಿಲ್ಲ. ಎಂದರೆ ಆಗ ಅವನ ವಯಸ್ಸೆಷ್ಟು? ಇನ್ನೂ ಮೂರೇ ವರ್ಷವೇ? ಹೇಗೆಸಾಧ್ಯ? ನಾಲ್ಕು ಪೂರ್ತಿ ತುಂಬಿದೆಯೆಂದು ಹೇಳುವಂತೆಯೂ ಇರಲಿಲ್ಲವಲ್ಲ!

ತಂದೆಯನ್ನು ಎಬ್ಬಿಸಿ ಕೇಳುವುದೇನೋ ಒಳ್ಳೆಯ ಯೋಚನೆಯೇ. ಅಪ್ಪನಿಗಂತೂ ತಿಳಿದೇ ಇರಬೇಕಲ್ಲ. ಆದರೆ ಬೆಚ್ಚಗಿನ ರಜಾಯಿಯಿಂದ ಹೊರಕ್ಕೆ ಬಂದು ಬರಿಗಾಲಿನಲ್ಲಿ ತಂದೆಯ ಬಳಿಗೆ ನಡೆದು ಹೋಗಬೇಕಲ್ಲ. ಊಹೂ, ಆಗುವುದಿಲ್ಲ. ಅದಕ್ಕಿಂತ ಉತ್ತಮವಾದ ಭಾವನೆಯೆಂದರೆ ಮಲಗಿದ್ದಂತೆ ನಟಿಸಿ ಕಣ್ಣುಮುಚ್ಚಿಕೊಂಡಿದ್ದು ಆ ಬದಲಾವಣೆ ಹೇಗೆ ಸಂಭವಿಸುವುದೆಂಬುದನ್ನು ನೋಡುವುದು.

ಪಾವಲಿಕ್ ಕಣ್ಣುಗಳನ್ನು ಮುಚ್ಚಿಕೊಂಡ. ಅವನಿಗೆ ತಿಳಿಯುವುದಕ್ಕೆ ಮೊದಲೇ ಅವನನ್ನು ನಿದ್ದೆ ಆವರಿಸಿಯಾಗಿತ್ತು. ಅವನಿಗೆ ಪುನಃ ಎಚ್ಚರವಾದಾಗ ರಾತ್ರಿಯ ದೀಪ ಆರಿಹೋಗಿ ಕಿಟಕಿಯ ಬಾಗಿಲುಗಳ ಸಂದಿನಿಂದ ಚಳಿಗಾಲದ ಮುಂಜಾನೆಯ ಗಾಢನೀಲಿಯ ಬೆಳಕು ತೂರಿ ಬರುತ್ತಿದ್ದುದನ್ನು ಕಂಡ, ಈಗ ಅವನಿಗೆ ಯಾವ ಸಂದೇಹವೂ ಇರಲಿಲ್ಲ, ಅವನಿಗೆ ನಾಲ್ಕು ವರ್ಷವಾಗಿದ್ದಿತು.

ಆ ಇಡೀ ಕಟ್ಟಡದಲ್ಲಿ ಎಲ್ಲರೂ ನಿದ್ರಾಮಗ್ನರಾಗಿದ್ದರು. ದುನ್ಯ ಇನ್ನೂ ಅಡಿಗೆ ಮನೆಯಲ್ಲಿ ಓಡಾಡಲು ತೊಡಗಿರಲಿಲ್ಲ. ನಾಲ್ಕು ವರ್ಷದ ಪಾವಲಿಕ್ ಚಂಗನೆ ಹಾಸಿಗೆಯನ್ನು ಬಿಟ್ಟೆದ್ದ. ಬಟ್ಟೆಯ ಗುಂಡಿಗಳಿಂದಲಂಕೃತವಾಗಿದ್ದ ಜುಬ್ಬವನ್ನು ಹಿಂದುಮುಂದಾಗಿ ಮೈ ಮೇಲಕ್ಕೆಳೆದುಕೊಂಡು ಬರಿಗಾಲುಗಳನ್ನು ಪಾದರಕ್ಷೆಗಳೊಳಕ್ಕೆ ತುರುಕಿದ.

ಹೀಗೆ ಬಟ್ಟೆ ಧರಿಸಿದ ಬಳಿಕ ಕಿರುಗುಟ್ಟುತ್ತಿದ್ದ ಭಾರವಾದ ಬಾಗಿಲನ್ನು ನಿಧಾನವಾಗಿ ಎರಡು ಕೈಗಳಿಂದಲೂ ತೆರೆದ. ಅಲ್ಲಿಂದ ಹಜಾರಕ್ಕೆ ಹೊರಟ. ನಿರ್ಜನವಾದ ದೊಡ್ಡ ಮನೆಯ ಮೂಲಕ ಒಬ್ಬ ಚಿಕ್ಕ ಹುಡುಗ ದೀರ್ಘಪ್ರಯಾಣವನ್ನು ಆರಂಭಿಸಿದಂತೆ ಇದ್ದಿತದು. ಆ ಕತ್ತಲೆಯ ನಡುವೆ ಫರ್‌ಮುಳ್ಳುಗಳ ವಾಸನೆ ಬೀರುತ್ತ ಕೈಗಳನ್ನು ನೀಡಿಕೊಂಡು ಯಾವುದೋ ಒಂದು ದೊಡ್ಡ ಆಕಾರ ನಿಂತಿದ್ದುದು ಅಸ್ಪಷ್ಟವಾಗಿ ಪಾವಲಿಕನಿಗೆ ಕಾಣಿಸಿತು. ಅದರ ಕೈಗಳಿಂದ ಕಾಗದದ ಸರಪಣಿಗಳು ನೇತುಬಿದ್ದಿದ್ದುವು.

ಇದು ಕ್ರಿಸ್‌ಮಸ್ ವೃಕ್ಷವೆಂಬುದನ್ನು ಪಾವಲಿಕ್ ಆಗಲೆ ತಿಳಿದುಕೊಂಡಿದ್ದ. ಕತ್ತಲೆಗೆ ಕಣ್ಣು ಒಗ್ಗಿದ ಬಳಿಕ ಎಚ್ಚರಿಕೆಯಿಂದ ಆ ದೊಡ್ಡ ಹೊಳೆಯುವ ಮರದ ಸುತ್ತ ಹೆಜ್ಜೆ ಹಾಕಲಾರಂಭಿಸಿದ. ಆ ಮರದ ಬೆಳ್ಳಿಯ ಬಣ್ಣದ ದಾರಗಳು ಬೆಳಕಿನ ಬಹು ದುರ್ಬಲ ಪ್ರಕಾಶ

ದಿಂದ ಮಿನುಗುತ್ತಿದ್ದುವು. ಪಾವಲಿಕ್ ಮುಂದೆ ಇಟ್ಟ ಒಂದೊಂದು ಹೆಜ್ಜೆಗೂ ಆ ಮರದ ಕಾಗದಗಳು ಅಲ್ಲಾಡುತ್ತಿದ್ದುವು, ರಟ್ಟು ಅದುರುತ್ತಿದ್ದಿತು, ಗಾಜಿನ ಅಲಂಕಾರಗಳು ಬಹು ಸೂಕ್ಷ್ಮವಾಗಿ ಟಣ್ ಎನ್ನುತ್ತಿದ್ದುವು.

ಕಣ್ಣಿಗೆ ಕತ್ತಲೆ ಚೆನ್ನಾಗಿ ಒಗ್ಗಿತು. ಆಗ ಪಾವಲಿಕನಿಗೆ ಮೂಲೆಯಲ್ಲಿದ್ದ ಒಂದು ಮೇಜು ಕಾಣಿಸಿತು. ಅದರ ಮೇಲೆ ಬಹುಮಾನಗಳನ್ನು ಇಡಲಾಗಿದ್ದಿತು. ಒಂದು ಕ್ಷಣಕಾಲ ಮರವನ್ನು ಮರೆತು ಪಾವಲಿಕ್ ಆ ಬಹುಮಾನಗಳನ್ನು ಇಟ್ಟಿದ್ದ ಮೇಜಿನ ಬಳಿಗೆ ಹೋದ. ಅವನು ನಿರೀಕ್ಷಿಸಿದ್ದುದಕ್ಕಿಂತಲೂ ಉತ್ತಮವಾದ ಬಹುಮಾನಗಳಾಗಿದ್ದುವು ಅವು. ಒಂದು ಬಿಲ್ಲು ಮತ್ತು ಮಖಮಲ್ಲಿನ ಒರೆಯಲ್ಲಿಟ್ಟ ಬಾಣಗಳು, ವರ್ಣರಂಜಿತ ಚಿತ್ರಗಳ ಒಂದು ಪುಸ್ತಕ, 'ಅಜ್ಜಿ-ತಾತ್ಯಾನಳ ಕೋಳಿ ಸಾಕಣೆ ಅಂಗಳ,' ಒಂದು ನಿಜವಾದ ದೊಡ್ಡ ಲಾಟರಿ ಆಟದ ಸಾಮಾನು ಆದರೆ ಎಲ್ಲದಕ್ಕಿಂತ ಮುಖ್ಯವಾದುದೆಂದರೆ ಕುಡ್ಲಾಟ್ಯಕ್ಕಿಂತ ದೊಡ್ಡದಾದ ಸುಂದರವಾದ ಹೊಚ್ಚ ಹೊಸ ಕುದುರೆ. ಜಾರ್ಜಬೋರ್ಮನ್ ಪೆಪ್ಪರಮೆಂಟುಗಳ ಹೊಸ ತಗಡಿನ ಡಬ್ಬಿಗಳು, ಚಿತ್ರದ ಕಾಗದಗಳಿದ್ದ ಚಾಕಲೇಟ್ ತುಂಡುಗಳು, ದುಂಡುಪೆಟ್ಟಿಗೆಯಲ್ಲಿ ಕೇಕ್—ಇವೇ ಮೊದಲಾದ ಬಹುಮಾನದ ಸಾಮಾನುಗಳನ್ನು ಮೇಜಿನಮೇಲೆ ಇಡಲಾಗಿತ್ತು. ಪಾವಲಿಕ್ ಇಷ್ಟು ಬೆಲೆ ಬಾಳುವ ನಿಧಿಗಳನ್ನು ನಿರೀಕ್ಷಿಸಿಯೇ ಇರಲಿಲ್ಲ. ಮೇಜಿನ ಮೇಲೆ ಆಟದ ಸಾಮಾನುಗಳನ್ನೂ ವಿಧವಿಧದ ಸಿಹಿ ಮಿಠಾಯಿಗಳನ್ನೂ ರಾಶಿಹಾಕಲಾಗಿದ್ದಿತು. ಇದೆಲ್ಲ ಯಾರದು? ಪಾವಲಿಕನದು!

ಆದರೆ ಇವುಗಳೆಲ್ಲದರ ನಡುವೆ ಏನೋ ಒಂದು ಅಭಾವದ ಅನುಭವವಾಯಿತು. ಹರಿದು ಹಳೆಯದಾಗಿದ್ದ ಕುಡ್ಲಾಟ್ಯವನ್ನೂ ಸೇರಿಸಿ ತನ್ನ ಎಲ್ಲ ಹಳೆಯ ಆಟದ ಸಾಮಾನುಗಳನ್ನೂ ಮಕ್ಕಳ ಕೊಠಡಿಯಿಂದ ಎಳೆದುಕೊಂಡು ತಂದು ಹೊಸ ಸಾಮಾನುಗಳ ಜತೆಗೆ ಸೇರಿಸಿದ. ಈಗ ಅಲ್ಲಿ ಆಟದಸಾಮಾನುಗಳ ಒಂದು ಅಂಗಡಿಯೇ ಹರಡಿದ್ದಿತು. ಆದರೆ ಇದು ಇನ್ನೂ ಸಾಲದು ಎನ್ನಿಸಿತು. ತನ್ನ ಪ್ರಸಿದ್ಧವಾದ ದುಡ್ಡಿನ ಪೆಟ್ಟಿಗೆಯನ್ನು ತಂದು ತನ್ನ ಸಂಪತ್ತಿನ ಮುಖ್ಯ ಸಂಕೇತವಾಗಿ ಮೇಜಿನ ಮಧ್ಯದಲ್ಲಿದ್ದ ಡಮರುಗದ ಮೇಲೆ ಇರಿಸಿದ. ತನ್ನ ಗೆಲುವಿನ ಆಟದ ಸಾಮಾನುಗಳ ಗೋಪುರವನ್ನು ರಚಿಸಿ ಅವುಗಳನ್ನು ನೋಡಿ ಹಿಗ್ಗಿದ.

ಅಲ್ಲಿಂದ ಪಾವಲಿಕ್ ಕ್ರಿಸ್‌ಮಸ್ ವೃಕ್ಷದ ಬಳಿಗೆ ಬಂದ. ಹಳದಿಯ ಉಣ್ಣೆಯ ದಾರದಿಂದ ಕ್ರಿಸ್‌ಮಸ್ ಮರದ ಕೊಂಬೆಗೆ ಒಂದು ಸಿಹಿಗಡುಬನ್ನು ನೇತುಹಾಕಿತ್ತು. ಅದರ ಮೇಲೆ ಕೆಂಪು ಚಿತ್ರವನ್ನು ಕೊರೆಯಲಾಗಿತ್ತು. ಅದನ್ನು ನೋಡಿ ಅವನ ಬಾಯಲ್ಲಿ ಬಹು ಹೊತ್ತಿನಿಂದ ನೀರೂರಿತ್ತು. ಅದು ನಕ್ಷತ್ರದಾಕಾರದಲ್ಲಿದ್ದಿತು. ಅದರ ನಡುವೆ ಒಂದು ರಂಧ್ರವಿದ್ದಿತು. ಆ ಕಡುಬು ಬಹು ರಮ್ಯವಾಗಿದ್ದುದರಿಂದು ಆದಷ್ಟು ಬೇಗ ಅದನ್ನು ತಿನ್ನಬೇಕೆಂಬ ಹಂಬಲ ಅವನಿಗೆ ಉಂಟಾಯಿತು.

ಕ್ರಿಸ್‌ಮಸ್ ವೃಕ್ಷದಲ್ಲಿ ಒಂದು ಸಿಹಿಗಡುಬು ಕಡಮೆಯಾದರೆ ಏನೂ ಮುಳುಗಿ ಹೋಗುವುದಿಲ್ಲವೆಂದು ಭಾವಿಸಿ ಒಂದನ್ನು ಕೊಂಬೆಯೊಂದರಿಂದ ಬಿಚ್ಚಿ ತೆಗೆದುಕೊಂಡ. ಅದನ್ನು ಕಚ್ಚಿ ರುಚಿನೋಡಿದಾಗ ಅದು ತಾನು ನಿರೀಕ್ಷಿಸಿದಷ್ಟು ರುಚಿಯಾಗಿಲ್ಲವೆಂಬುದನ್ನು ಕಂಡುಹಿಡಿದ. ಅದನ್ನು ರೈಹಿಟ್ಟಿನಿಂದ ಮಾಡಲಾಗಿತ್ತು. ಅದು ಹಳಸಿದಂತೆ ತೋರಿತು. ಸಕ್ಕರೆ ಪಾಕದ ಕಟು ವಾಸನೆ ಹೊಡೆಯುತ್ತಿತ್ತೇ ಹೊರತು ಸಿಹಿಯಾಗಿ ಇರಲಿಲ್ಲ. ಆದರೆ ಅದು ಹೊರನೋಟಕ್ಕೆ

ನ್ನಾಗಿಯೇ ಇದ್ದಿತು. ಹಿಮದಂತೆ ಬೆಳ್ಳಗಿರುವ ಸುಂದರಿಯರಾದ ಕ್ರಿಸ್‌ಮಸ್ ಅಪ್ಸರೆಯರು ಸ್ವರ್ಗದಲ್ಲಿ ಹಾಡುತ್ತ ತಿನ್ನುವಂಥ ಕಡುಬಿನಂತೆ ಅದು ಕಾಣುತ್ತಿದ್ದಿತು.

ಗಂಟುಮೋರೆ ಮಾಡಿಕೊಂಡು ಮುಕ್ಕಾಗಿದ್ದ ಕಡುಬನ್ನು ಪುನಃ ಕ್ರಿಸ್‌ಮಸ್ ವೃಕ್ಷದ ಕೊಂಬೆಗೆ ಕಟ್ಟಿದ. ಇಲ್ಲೇನೋ ಆಚಾತುರ್ಯ ನಡೆದಿದೆಯೆಂದು ನೋಡಿದವರು ತಿಳಿದು ಕೊಳ್ಳುವರೆಂದು ಪೇತ್ಯ ಭಾವಿಸಿದ. ಪ್ರಾಯಶಃ ರೊಟ್ಟಿ ಅಂಗಡಿಯವನೇ ಎಲ್ಲೋ ಕಾಣದೆ ಕಟ್ಟಿ ಕಡುಬನ್ನು ಕೊಟ್ಟಿದ್ದಿರಬಹುದು ಎಂದು ತಿಳಿದುಕೊಳ್ಳುವರು ಎಂದು ಯೋಚಿಸಿ ಸುಮ್ಮನಾದ.

ಆಗ ಪಾವಲಿಕನ ಕಣ್ಣಿಗೆ ನೀಲಿಯ ಚಿತ್ರವನ್ನು ಕೊರೆದಿದ್ದ ಇನ್ನೊಂದು ಸಿಹಿಗಡುಬು ಕಣ್ಣಿಗೆ ಬಿದ್ದಿತು. ಅದು ತುಂಬ ಎತ್ತರದಲ್ಲಿ ನೇತಾಡುತ್ತಿತ್ತು. ಅದನ್ನು ಎಟುಕಿಸಿಕೊಳ್ಳಲು ಒಂದು ಕುರ್ಚಿಯನ್ನು ಎಳೆದುಕೊಂಡು ಅದರಮೇಲೆ ಹತ್ತಿ ನಿಂತುಕೊಂಡ. ಈ ಬಾರಿ ಅವನು ಕಡುಬನ್ನು ದಾರದಿಂದ ಬಿಚ್ಚದೆ ಹಾಗೆಯೇ ಅದರ ಒಂದು ತುದಿಯನ್ನು ಕಚ್ಚಿನೋಡಿದ. ಥೂ, ಕಾಳಾದ್ದು ಚೆನ್ನಾಗಿಯೇ ಇರಲಿಲ್ಲ. ಬಾಯೆಲ್ಲ ಕೆಟ್ಟು ಹೋಯಿತು ಎಂದುಕೊಂಡು ಉಗಿದುಬಿಟ್ಟ.

ಉಳಿದೆಲ್ಲ ಕಡುಬುಗಳೂ ಹೀಗೆಯೇ ಇರುತ್ತವೆ ಎಂದು ತಿಳಿಯುವುದು ಸಾಧ್ಯವಿರಲಿಲ್ಲ. ಆದುದರಿಂದ ಪಾವಲಿಕ್ ಎಲ್ಲವನ್ನೂ ಪರೀಕ್ಷಿಸಿ ನೋಡಿಬಿಡಬೇಕೆಂದು ನಿಶ್ಚಯಿಸಿಕೊಂಡ. ಮನಸ್ಸಿಗೆ ಬಂದೊಡನೆ ಅದನ್ನು ಕಾರ್ಯಗತಮಾಡಿಬಿಡಬೇಕಲ್ಲ ಗುರುಗುಟ್ಟುತ್ತ ಭಸಭಸನೆ ಉಸಿರು ಬಿಡುತ್ತ ನಾಲಗೆಯನ್ನು ನೀಡಿಕೊಂಡು ಕುರ್ಚಿಯನ್ನು ಮರದ ಸುತ್ತ ಎಳೆದಾಡಿ ಅದರ ಮೇಲೆ ಹತ್ತಿ ಒಂದಾದರಮೇಲೊಂದರಂತೆ ಕಡುಬುಗಳನ್ನು ಕಚ್ಚುತ್ತ ಅವುಗಳು ಚೆನ್ನಾಗಿಲ್ಲವೆಂದು ತೆಗಳುತ್ತ ಆ ಕಾರ್ಯದಲ್ಲೇ ಮಗ್ನನಾಗಿಬಿಟ್ಟ. ಸ್ವಲ್ಪಹೊತ್ತಿನೊಳಗೆ ಅವನು ಎಲ್ಲವನ್ನೂ ಕಚ್ಚಿ ರುಚಿ ನೋಡಿಯಾಗಿತ್ತು. ಎರಡು ಕಡುಬುಗಳು ಮಾತ್ರ ತಾರಸಿಯ ಹತ್ತಿರದಲ್ಲಿ ಕೈಗೆ ನಿಲುಕದಷ್ಟು ಎತ್ತರದಲ್ಲಿದ್ದುದರಿಂದ ಅವು ಪಾವಲಿಕನ ಬಾಯಿಂದ ಹೊರಗುಳಿದುವು. ತಲೆಯನ್ನು ಹಿಂದಕ್ಕೆ ಬಗ್ಗಿಸಿಕೊಂಡು ಅವುಗಳನ್ನೇ ನೋಡುತ್ತ ನಿಂತ. ಅವು ಕೈಗೆ ಎಟುಕದೆ ಇದ್ದುದರಿಂದ ಅವುಗಳ ಮೇಲಿನ ಆಸೆ ಪ್ರಬಲವಾಯಿತು. ಆ ಕಾರಣದಿಂದಲೇ ಅವುಗಳು ಬಹು ಸುಂದರವಾಗಿ ಕಾಣಿಸ ಲಾರಂಭಿಸಿದುವು.

ಈ ಕಡಬುಗಳು ತನಗೆ ಮೋಸಮಾಡಲಾರವು ಎಂದುಕೊಂಡ. ಮೇಜಿನಮೇಲೆ ಹೇಗೆ ಕುರ್ಚಿಯನ್ನು ನಿಲ್ಲಿಸುವುದು ಎಂದು ಯೋಚಿಸಲಾರಂಭಿಸಿದ. ಆದರೆ ಅಷ್ಟುಹೊತ್ತಿಗೆ ಹಬ್ಬದ ದಿನದ ಉಡುಗೆಯ ಮರ್ಮರ ಶಬ್ದ ಕೇಳಿಸಿತು. ತಾತ್ಯಾನ ಚಿಕ್ಕಮ್ಮಳ ಸಂತಸದ ಮುಖ ಹಜಾರ ವನ್ನು ಬಗ್ಗಿನೋಡಿತು.

"ಆಹಾ, ನಮ್ಮ ಹುಟ್ಟಿದ ಹಬ್ಬದ ಪುಟ್ಟಕಂದ ಎಲ್ಲರಿಗಿಂತಲೂ ಮೊದಲೇ ಎದ್ದಿದ್ದಾನೆ. ಏನು ಮಾಡುತ್ತಿದ್ದೀಯೆ, ಚಿನ್ನ?"

"ಕ್ರಿಸ್‌ಮಸ್ ವೃಕ್ಷವನ್ನು ಪ್ರದಕ್ಷಿಣೆ ಮಾಡುತ್ತಿದ್ದೆ." ಎಂದು ವಿನಯದಿಂದ ಪಾವಲಿಕ್ ಉತ್ತರಕೊಟ್ಟ. ಹಿರಿಯರಿಗೆ ವಿಧೇಯನಾಗಿ ನಡೆದುಕೊಳ್ಳುವ ಬಾಲಕನಂತೆ ಚಿಕ್ಕಮ್ಮನನ್ನು ನಂಬಿಕೆ ಹುಟ್ಟಿಸುವ ನೈಜದೃಷ್ಟಿಯಿಂದ ನೋಡಿದ.

"ಅಯ್ಯೋ, ನನ್ನ ಪುಟ್ಟಮರಿ ವುಕ್ಷ ಅಲ್ಲ; ವೃಕ್ಷ! ವೃಕ್ಷ ಎಂದು ಹೇಳು, ವುಕ್ಷ ಅಲ್ಲ. ಆ ಪದವನ್ನು ಸರಿಯಾಗಿ ಹೇಳುವುದನ್ನು ಯಾವಾಗ ಕಲಿತುಕೊಳ್ಳುತ್ತೀಯೋ ಕಾಣೆ? ಇರಲಿ ನಿನಗೆ ಹುಟ್ಟಿದ ಹಬ್ಬದ ಶುಭಾಶಯಗಳು !"

ಮರುನಿಮಿಷದಲ್ಲಿ ಹುಡುಗ ತಾತ್ಯಾನಳ ತೋಳಿಗೆ ಸಿಕ್ಕಿ ಅವಳ ಪರಿಮಳಿತ ಕೋಮಲ ಅಪ್ಪುಗೆಯನ್ನು ಅನುಭವಿಸುತ್ತಿದ್ದ.

ಕೆಂಪೇರಿದ ದುನ್ಯ ಸಡಗರದಿಂದ ಮುಖ ಅಡಿಗೆಮನೆಯಿಂದ ಆತುರಆತುರವಾಗಿ ಬಂದಳು. "ಸಂತೋಷದ ಹುಟ್ಟಿದ ದಿವಸ" ಎಂದು ಚಿನ್ನದ ಅಕ್ಷರದಲ್ಲಿ ಬರೆದಿದ್ದ ಆಕಾಶನೀಲಿಬಣ್ಣದ ಬಟ್ಟಲನ್ನು ಹಿಡಿದುಕೊಂಡಿದ್ದಳು. ಅನಿರೀಕ್ಷಿತವಾದ ಭಯಂಕರ ಮುಕ್ತಾಯವನ್ನು ಕಾಣಬೇಕಾಗಿದ್ದ ಆ ಸಂತೋಷದ ಹುಟ್ಟಿದ ಹಬ್ಬವು ಈ ರೀತಿಯಲ್ಲಿ ಆರಂಭವಾಯಿತು.

ಸಂಜೆ ಪಾವಲಿಕನ ಅತಿಥಿಗಳಾಗಿ ಪುಟ್ಟಹುಡುಗಿಯರು ಮತ್ತು ಹುಡುಗರು ಬಂದಿದ್ದರು. ಅವರೆಲ್ಲ ಚಿಕ್ಕವರಾಗಿದ್ದುದರಿಂದ ಅವರೊಡನೆ ಮಾತನಾಡುವುದು ತನ್ನ ಘನತೆಗೆ ಕುಂದು ಎಂದು ಪಾವಲಿಕ್ ಭಾವಿಸಿದ್ದ. ಇನ್ನು ಅವರೊಡನೆ ಆಟವಾಡುವುದು ದೂರ ಉಳಿಯಿತು.

ಮಕ್ಕಳ ಕೊಠಡಿಯ ಕಿಟಕಿಯಲ್ಲಿ ಕುಳಿತು ಪೇತ್ಯ ಭಾರವಾದ ಹೃದಯದಿಂದ ವಿಷಣ್ಣವದನನಾಗಿ ಕಿಟಕಿಯಾಚೆ ನೋಡುತ್ತಿದ್ದ. ಹಿಮಾಚ್ಛಾದಿತವಾಗಿದ್ದ ಗರಿಯಾಕಾರದ ಎಲೆಗಳಿದ್ದ ಗಿಡಗಳ ಮೂಲಕ ಹೊಳೆಯುತ್ತಿದ್ದ ಬೀದಿಯ ಲಾಂದ್ರದ ದೀಪ ಹಿಮ ಚಿತ್ರಗೆಲಸದ ಕಿಟಕಿಯ ಗಾಜಿನಲ್ಲಿ ಪ್ರತಿಬಿಂಬಿಸಿದ್ದಿತು. ಅಶುಭದ ಅಪಶಕುನಗಳ ಮುನ್ಸೂಚನೆ ಅವನ ಮನಸ್ಸನ್ನು ಕುಗ್ಗಿಸಿತ್ತು.

ಹಜಾರದಿಂದ ಶಾಖವಾದ ಚಿಟಿಚಿಟಿ ಎನ್ನುತ್ತಿದ್ದ ದೀಪದ ಬೆಳಕು ಕ್ರಿಸ್‌ಮಸ್ ವೃಕ್ಷದಿಂದ ಬರುತ್ತಿದ್ದಿತು. ಉರಿಯುತ್ತಿದ್ದ ಮೇಣದ ಬತ್ತಿಗಳಿಂದಲೂ ಸ್ವರ್ಣವರ್ಷವೆಂಬ ಬಾಣಬಿರುಸುಗಳಿಂದಲೂ ಆ ಬೆಳಕು ಬರುತ್ತಿದ್ದಿತು. ಅವನಿಗೆ ಪಿಯಾನೋದ ಆಕರ್ಷಕ ಸಂಗೀತವು ಕೇಳಿಬರುತ್ತಿದ್ದಿತು. ತಂದೆಯವರು ರೋಮನ್ ಕ್ಯಾಥೋಲಿಕ್ ಪಾಠಶಾಲೆಯಲ್ಲಿ ಬಳಕೆಯಲ್ಲಿದ್ದ ಪೋಲ್ಕ ನೃತ್ಯಗೀತವನ್ನು ಬಾರಿಸುತ್ತಿದ್ದರು. ಅವರ ಸಾಂಪ್ರದಾಯಿಕ ಸಮಾರಂಭಗಳ ಕೋಟಿನ ಉದ್ದವಾದ ಹಿಂಭಾಗ ಅಗಲವಾಗಿ ಹರಡಿಕೊಂಡಿದ್ದಿತು. ಗಂಜಿಹಾಕಿದ್ದ ಕೈ ಪಟ್ಟಿಗಳು ತರತರ ಶಬ್ದಮಾಡುತ್ತಿದ್ದುವು. ಹಲವಾರು ಮಕ್ಕಳ ಗಟ್ಟಿಮುಟ್ಟಾದ ಕಾಲುಗಳು ಕ್ರಿಸ್‌ಮಸ್ ವೃಕ್ಷದ ಸುತ್ತ ಅನಿಶ್ಚಿತವಾಗಿ ಹೆಜ್ಜೆ ಹಾಕುತ್ತಿದ್ದುವು.

"ಯೋಚಿಸಬೇಡ ಪೇತ್ಯ. ನಿನಗೆ ಹೊಟ್ಟೆಕಿಚ್ಚೆ? ನಿನ್ನ ಹುಟ್ಟಿದ ಹಬ್ಬದ ದಿವಸ ನೀನೂ ಸಂತೋಷದಿಂದಿರುವೆಯಂತೆ." ಆ ದಾರಿಯಾಗಿ ಬಂದ ತಾತ್ಯಾನ ಚಿಕ್ಕಮ್ಮ ಸಮಾಧಾನ ಮಾಡುವಂತೆ ಪೇತ್ಯನನ್ನು ಕುರಿತು ಹೇಳಿದಳು.

"ಚಿಕ್ಕಮ್ಮ ನಿನಗೊಂದೂ ಗೊತ್ತಾಗುವುದಿಲ್ಲ. ನನ್ನಷ್ಟಕ್ಕೆ ನನ್ನನ್ನು ಇರಲು ಬಿಡು." ವಿಷಾದದ ದನಿಯಲ್ಲಿ ಪೇತ್ಯ ಹೇಳಿದ.

ಕೊನೆಗೊಂದು ಸಲ ಬಹು ಸಮಯದಿಂದ ನಿರೀಕ್ಷಿಸುತ್ತಿದ್ದ ಕ್ರಿಸ್‌ಮಸ್ ವೃಕ್ಷದ ಕಡುಬುಗಳನ್ನೂ ಕಾಯಿಗಳನ್ನೂ ಹಂಚುವ ಕಾಲ ಬಂದಿತು. ಮಕ್ಕಳು ಮರದ ಸುತ್ತಲೂ ಮುಂಗಾಲಿನ ಮೇಲೆ ನಿಂತುಕೊಂಡು ಪದಕಗಳಂತೆ ಹೊಳೆಯುತ್ತಿದ್ದ ಕಡುಬುಗಳ ಕಡೆಗೆ ಕೈ ನೀಡಿದರು. ಮರ

ಲ್ಲಾಡಿತು, ಸರಪಣಿಗಳು ಸರಸರ ಶಬ್ದಮಾಡಿದುವು.

"ಇಲ್ಲಿ ನೋಡಿ, ನನ್ನ ಕಡಬನ್ನು ಯಾರೊ ಕಚ್ಚಿದ್ದಾರೆ" ಎಂದು ಒಂದು ಹೆದರಿದ ಸಣ್ಣದನಿ ೇಳಿತು.

"ನನ್ನದೂ ಹಾಗೆಯೆ ಇದೆ."

"ನನ್ನದೂನೂ, ಎಲ್ಲ ಕಡಬುಗಳನ್ನೂ ಯಾರೋ ಕಚ್ಚಿದ್ದಾರೆ"

"ಓಹ್, ಈ ಕಡಬುಗಳು ಹೊಸದಾಗಿ ತಂದುವಲ್ಲ. ಯಾರೋ ಅವುಗಳನ್ನು ಒಂದು ಸಲ ಚ್ಚಿ ತಿಂದಿದ್ದಾರೆ." ಒಬ್ಬ ನಿರಾಶೆಯಿಂದ ಹೇಳಿದ. ಎಲ್ಲಕಡೆಯಿಂದಲೂ ಕಚ್ಚಿದ ಕಡುಬುಗಳನ್ನು ಡಿದ ಮಕ್ಕಳ ಕೈಗಳು ತನ್ನ ಮುಂದೆ ನೀಡಿರುವುದನ್ನು ನೋಡಿ ತಾತ್ಯಾನಳ ಮುಖ ಕೆಂಪಾ ಂತು. ಕೊನೆಗೆ ಅವಳ ದೃಷ್ಟಿ ಪಾವಲಿಕನ ಮೇಲೆರಗಿತು. ತುಂಟ, ಇದು ನಿನ್ನ ಕೆಲಸವೋ?" ಂದು ಕೇಳಿದಳು.

"ಚಿಕ್ಕಮ್ಮ, ಪುಟ್ಟ ಕಡುಬನ್ನು ರುಚಿ ನೋಡಬೇಕೆಂದು ಹಾಗೆಮಾಡಿದೆ. ಅವುಗಳು ಚೆನ್ನಾಗಿವೆ ಎಂದು ಯೋಚಿಸಿದೆ. ಆದರೆ ಇವು ಅತಿಥಿಗಳಿಗೆ ಮೀಸಲು ಎಂಬುದು ನನಗೆ ಗೊತ್ತಿ ಲ್ಲಿಲ್ಲ." ಎಂದು ಪಾವಲಿಕ್ ಏನೂ ತಿಳಿಯದವನಂತೆ ಚಿಕ್ಕಮ್ಮನ ಅಗಲವಾಗಿ ತೆರೆದ ಕೋಪದ ಿಂಗಣ್ಣುಗಳನ್ನು ನೋಡತ್ತ ಹೇಳಿದ.

"ಸಾಕು ಸುಮ್ಮನಿರು. ನೀನು ಬಹಳ ದುಷ್ಟ." ಎಂದು ತಾತ್ಯಾನ ಕೂಗಿದಳು. ಹತಾಶ ಾಗಿ ಬೀರುವಿನ ಕಡೆಗೆ ಹೋದಳು. ಅದೃಷ್ಟವಶಾತ್ ಅಲ್ಲಿ ತುಂಬಾ ಮಿಠಾಯಿಗಳಿದ್ದುವು. ಿನ್ನ ಮನಸ್ಕರಾದ ಮಕ್ಕಳಿಗೆ ಇದರಿಂದ ತೃಪ್ತಿ ದೊರಕಿತು. ಈ ನಿಂದಾ ಪ್ರಸಂಗವನ್ನು ಈ ೀತಿ ಮುಚ್ಚಲಾಯಿತು.

ಕಣ್ಣುಗಳಲ್ಲಿ ನಿದ್ದೆ ಇಣಿಕಿಹಾಕುತ್ತಿದ್ದ ಮಕ್ಕಳನ್ನು ಮನೆಗೆ ಎತ್ತಿಕೊಂಡು ಕರೆದುಕೊಂಡು ಹೋದರು. ಸಂತೋಷಕೂಟ ಮುಗಿಯಿತು. ಅನಂತರ ಪಾವಲಿಕ್ ತನ್ನ ಸಂಪತ್ಸಾಮಗ್ರಿ ಗಳನ್ನೆಲ್ಲ ಸರಿಯಾದ ಕ್ರಮದಲ್ಲಿಡಲು ವ್ಯವಸ್ಥೆಯನ್ನು ಕೈಗೊಂಡ.

ಅದೇ ಸಮಯಕ್ಕೆ ಮಕ್ಕಳ ಕೊಠಡಿಯ ಬಾಗಿಲ ಬಳಿಗೆ ದುನ್ಯ ಬಂದು ಪೇತ್ಯನನ್ನು ಕರೆದಳು.

"ಚಿಕ್ಕರಾಯರೇ, ಆ ಹುಚ್ಚು ಗಾವ್ರಿಕ್ ಹಿಂಬಾಗಿಲಿನ ಮೆಟ್ಟಲಿನ ಹತ್ತಿರ ಕಾಯುತ್ತಿ ದ್ದಾನೆ." ಎಂದು ಸುತ್ತ ಕಣ್ಣಾಡಿಸುತ್ತ ಕಿವಿಯ ಬಳಿ ಮುಖವಿಟ್ಟು ದುನ್ಯ ಹೇಳಿದಳು.

ಪೇತ್ಯ ಅಡಿಗೆ ಮನೆಯ ಕಡೆಗೆ ಧಾವಿಸಿದ. ಚಂದ್ರನಿಂದ ಹೊರಟ ನೀಲಿಯ ಬೆಳಕಿನ ಚುಕ್ಕೆಗಳು ನರ್ತಿಸುತ್ತಿದ್ದ ಹಿಮಬಿದ್ದ ಕಿಟಕಿಯನ್ನು ಒರಗಿಕೊಂಡು ಗಾವ್ರಿಕ್ ಎತ್ತರವಾದ ಮಹಡಿಯ ಮೆಟ್ಟಲಿನ ಜಗಲಿಯಮೇಲೆ ಕುಳಿತಿದ್ದ. ತಲೆಯ ಮೇಲಿನ ವಸ್ತ್ರದ ಮುಸುಕಿ ನಡಿಯಲ್ಲಿ ಪುಟ್ಟ ಕ್ರುದ್ಧ ನಯನಗಳು ಹೊಳೆಯುತ್ತಿದ್ದುವು. ಅವನು ಭಾರವಾಗಿ ಉಸಿರು ಬಿಡುತ್ತಿದ್ದ.

ಗಾವ್ರಿಕ್ ತನ್ನ ಸಾಲವನ್ನು ವಸೂಲುಮಾಡಲು ಬಂದಿರುವನೆಂಬುದು ಪೇತ್ಯನ ಮೊದಲ ಯೋಚನೆಯಾಗಿತ್ತು. ಅಜ್ಜನ ಗುಂಡಿಗಳ ಕಥೆಯನ್ನು ಅವನಿಗೆ ಹೇಳಬೇಕೆಂದೂ, ಕೊನೆಯ ಪಕ್ಷ ಇನ್ನೆರಡು ದಿನಗಳಲ್ಲಿ ಸಾಲವನ್ನು ತೀರಿಸಿ ತನ್ನ ವಾಗ್ದಾನವನ್ನು ಉಳಿಸಿಕೊಳ್ಳುವೆನೆಂದೂ

ತಿಳಿಸಬೇಕೆಂದುಕೊಂಡ. ಅಷ್ಟರಲ್ಲಿ ಗಾವ್ರಿಕ್ ತನ್ನ ಅಂಗಿಯ ಒಳಭಾಗದಿಂದ ನಾಲ್ಕು ಪರಿಚಿತ ಸ್ವರೂಪದ ಸಣ್ಣ ಚೀಲಗಳನ್ನು ಹೊರಕ್ಕೆಳೆದ.

"ಇಲ್ಲಿ ನೋಡು. ಇವುಗಳನ್ನು ನಿಮ್ಮ ಮನೆಯಲ್ಲಿ ಮುಚ್ಚಿಟ್ಟಿರು. ನಿನ್ನ ಸಾಲ ತೀರಿತು ಎಂದುಕೋ. ಜೋಸೆಫ್‌ಕಾರ್ಲೋವಿಚ್ ಇವುಗಳನ್ನು ಬಿಟ್ಟುಹೋಗಿದ್ದ. ಅವನ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ." ಈ ಮಾತುಗಳನ್ನು ಹೇಳುತ್ತ ಹೇಳುತ್ತ ಗಾವ್ರಿಕ್ ಉದ್ವೇಗ ಪೂರ್ಣವಾಗಿ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡ.

"ಅವುಗಳ ಆವಶ್ಯಕತೆ ಬರುವವರೆಗೆ ಮುಚ್ಚಿಟ್ಟಿರು." ಎಂದು ಪುನಃ ಹೇಳಿದ.

"ಆಗಲಿ" ಎಂದು ಕಿವಿಯ ಹತ್ತಿರ ಪೇತ್ಯ ನುಡಿದ.

ಗಾವ್ರಿಕ್ ಬಹು ಹೊತ್ತು ಮಾತನಾಡದೆ ಮೌನವಾಗಿದ್ದ. ಕೊನೆಗೆ ತನ್ನ ಮುಷ್ಟಿಯಿಂದ ಮೂಗನ್ನು ಒರಸಿಕೊಂಡು ಕಿಟಕಿಯಿಂದ ಕೆಳಕ್ಕೆ ಇಳಿದ.

"ಅವರು ತಪ್ಪಿಸಿಕೊಂಡು ಹೋದರೆ?" ಪೇತ್ಯ ಪ್ರಶ್ನಿಸಿದ.

"ಹೌದು. ಮನೆಗಳ ಸೂರುಗಳ ಮೇಲಿನಿಂದ ತಪ್ಪಿಸಿಕೊಂಡರು. ಈಗ ಅವರನ್ನು ಎಲ್ಲ ಕಡೆಯೂ ಹುಡುಕಾಡುತ್ತಿದ್ದಾರೆ." ಗಾವ್ರಿಕ್ ತಾನು ಹೆಚ್ಚಿಗೆ ವಿಷಯವನ್ನು ಹೊರಗೆಡಹಿ ಬಿಟ್ಟೆನೇನೋ ಎಂದು ಒಂದು ನಿಮಿಷ ಯೋಚಿಸಿದ. ಆ ಬಳಿಕ ವಿಶ್ವಾಸಪೂರ್ಣವಾಗಿ ಅವನ ಕಡೆಗೆ ಬಗ್ಗಿ "ಎಷ್ಟು ಜನ ಸಿಕ್ಕಿಹಾಕಿಕೊಂಡರೆಂಬುದನ್ನು ನೀನು ತಿಳಿದಿದ್ದರೆ! ಅಬ್ಬ! ಆದರೆ 'ಅವರು' ಸಿಕ್ಕಿಕೊಳ್ಳುವುದಿಲ್ಲ. ನನ್ನ ಮಾತನ್ನು ತೆಗೆದುಕೋ. ಅವರು ಸುರಂಗದಲ್ಲಿ ಅಡಗಿ ಕೊಂಡಿದ್ದಾರೆ, ಉಳಿದ ಎಲ್ಲ ಕ್ರಾಂತಿಕಾರರಂತೆ. ಪುನಃ ಮುಂದಿನ ವಸಂತಋತುವಿನಲ್ಲಿ ಚಳು ವಳಿಯನ್ನು ಆರಂಭಿಸುತ್ತಾರೆ. ಟೆರೆಂಟಿಗೆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದ ಯಜಮಾನ ಟೆರೆಂಟಿಯ ಹೆಂಡತಿ ಮತ್ತು ಅವರ ಮಕ್ಕಳಾದ ಜೆನೆಚ್ಕ ಮತ್ತು ಮೋತ್ಯರನ್ನು ಮನೆಯಿಂದ ಹೊರಗೆ ಹಾಕಿದ್ದಾನೆ. ಪರಿಸ್ಥಿತಿ ಹೀಗಿದೆ." ಎಂದು ಪೇತ್ಯನ ಕಿವಿಯಲ್ಲಿ ನುಡಿದ. ಗಾವ್ರಿಕ್ ತನ್ನ ಹುಬ್ಬುಗಳನ್ನು ತೊಂದರೆಯಲ್ಲಿರುವವನಂತೆ ಕೆರೆದುಕೊಂಡ.

"ಅವರನ್ನು ಏನು ಮಾಡಬೇಕೆಂದು ನನಗೆ ತಿಳಿಯದಾಗಿದೆ ಕಾರ್ಖಾನೆಯ ಉಪನಗರ ದಿಂದ ಅಜ್ಜನ ಗುಡಿಸಲಿಗೆ ವಾಪಸು ಕರೆತರಬೇಕಾಗಿ ಕಾಣುತ್ತದೆ. ಅಜ್ಜನ ಸ್ಥಿತಿ ಕೆಟ್ಟಿದೆ. ಅವನು ಬೇಗ ಸಾಯುವಂತೆ ಕಾಣುತ್ತಾನೆ. ಎಂದಾದರೂ ಒಂದುದಿನ ಗುಡಿಸಲಿನ ಕಡೆಗೆ ಬಾ. ಆದರೆ ಇಷ್ಟು ಬೇಗ ಬೇಡ. ಈ ಚೀಲಗಳನ್ನು ಅಡಗಿಸುವುದೇ ಈಗಿನ ಮೊದಲ ಕೆಲಸವಾಗಿದೆ. ಏ ಕಳುವೆ ಮರುಸು ನೀನಿನ್ನೂ, ಎಂದಾದರೂ ನೀನೆನ್ನವಳು.' ಎಂದು ಹಾಡಿ ಕೈಕುಲುಕು ಮಿತ್ರ!" ಎಂದ ಗಾವ್ರಿಕ್ ಪೇತ್ಯನ ಹಸ್ತದೊಳಕ್ಕೆ ತನ್ನ ಚಪ್ಪಟೆ ಕೈಯನ್ನು ತುರುಕಿ ಅಲ್ಲಿಂದ ಓಡಿದ. ಅವನ ಹರಿದ ಬೂಡ್ಸುಗಳು ಮಹಡಿ ಮೆಟ್ಟಲಿನಮೇಲೆ ದಬದಬಶಬ್ದ ಮಾಡಿದುವು.

ಪೇತ್ಯ ಮಕ್ಕಳ ಕೊಠಡಿಗೆ ಓಡಿಹೋಗಿ ಪುಸ್ತಕಗಳ ಅಡಿಯಲ್ಲಿ ತನ್ನ ಚರ್ಮದ ಚೀಲ ದೊಳಗೆ ಗಾವ್ರಿಕ್ ಕೊಟ್ಟ ಸಣ್ಣ ಚೀಲಗಳನ್ನು ಮುಚ್ಚಿಟ್ಟ.

ಅಷ್ಟುಹೊತ್ತಿಗೆ ಬಾಗಿಲನ್ನು ಇದ್ದಕ್ಕಿದ್ದಹಾಗೆ ದಬಾರನೆ ನೂಕಿಕೊಂಡು ತಂದೆ ಕೊಠ ಯೊಳಕ್ಕೆ ಬಂದರು. ಅವರ ಕೈಯಲ್ಲಿ ಹರಿದು ಅಂದಗೆಡಿಸಿದ ಕೋಟು ಇದ್ದಿತು. "ಇದರರ್ಥ ವೇನು ?" ಎಂದು ಅವರು ಬಹಳ ಮೆದುವಾದ ದನಿಯಲ್ಲಿ ಹೇಳಿದುದನ್ನು ಕೇಳಿ ಪೇತ್ಯನಿ

ಮೂರ್ಛೆ ಬರುವುದರಲ್ಲಿದ್ದಿತು.

"ದೇವರಾಣೆಗೂ, ಶಿಲುಬೆಯು...." ಎಂದು ಪೇತ್ಯ ಗೊಣಗುತ್ತ ತಡವರಿಸುತ್ತ ಆರಂಭಿಸಿದ. ಆದರೆ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಳ್ಳುವ ಧೈರ್ಯ ಅವನಿಗೆ ಬರಲಿಲ್ಲ.

"ಇದರ ಅರ್ಥವೇನು ಎಂದೆ?" ತಲೆಯಿಂದ ಕಾಲಿನವರೆಗೂ ಕಂಪಿಸುತ್ತಾ ಕೆಂಡದಂತಾಗಿದ್ದರು ತಂದೆ.

ಅದೇ ನಿಮಿಷದಲ್ಲಿ ಎ ದೆ ಬಿ ರಿ ಯು ವಂ ತೆ ಪಾವಲಿಕ್ ಹಜಾರದಲ್ಲಿ ಗೋಳಿಡುತ್ತಿದ್ದ. ತಂದೆಯ ಕೋಪದ ಕೂಗನ್ನು ಪ್ರತಿಧ್ವನಿಸುವಂತೆ ಇದ್ದಿತು ಅದು. ಆ ಪುಟ್ಟ ಬಾಲಕ ಭಯದಿಂದ ತತ್ತರಿಸುತ್ತ ಓಡಿಬಂದು ತಂದೆಯ ಮಂಡಿಗಳಿಗೆ ಕೈಗಳನ್ನು ಸುತ್ತು ಹಾಕಿಕೊಂಡ. ಅವನು ಬಾಯನ್ನು ಚಚ್ಚೌಕವಾಗಿ ಮಾಡಿಕೊಂಡು ಗೋಳಿಡುತ್ತಿದ್ದಾಗ ಗಂಟಲಿನಲ್ಲಿ ಅದಿರುತ್ತಿದ್ದ ಪುಟ್ಟ ಕಿರುನಾಲಗೆಯೂ ಕೂಡ ಕಾಣಿಸುತ್ತಿದ್ದಿತು. ಧಾರಾಕಾರವಾಗಿ ಕಣ್ಣೀರಿನ ಪ್ರವಾಹ ಹರಿಯುತ್ತಿದ್ದಿತು. ನಡುಗುತ್ತಿದ್ದ ಅವನ ಕೈಯಲ್ಲಿ ದುಡ್ಡಿನ ಡಬ್ಬಿ ಇದ್ದಿತು. ಅದರೊಳಗೆ ದುಡ್ಡಿಗೆ ಬದಲಾಗಿ ತಗಡು ಮತ್ತು ಕಬ್ಬಿಣದ ಚೂರುಗಳು ತುಂಬಿದ್ದುದು ಕಾಣಿಸುತ್ತಿತ್ತು.

"ಅಽಽ ಪ್ಪಽಽ ಹಿಕ್....ಪೇಽಽ ತ್ಯಽಽ..,.ಹಿಕ್,...ಕದ್ದುಬಿಟ್ಟಿದ್ದಾನೆ." ಎಂದು ಬಿಕ್ಕಳಿಸುತ್ತ ತೊದಲು ನುಡಿಯಲ್ಲಿ ಹೇಳಿದ.

"ನನ್ನಾಣೆ—" ಎಂದು ಪೇತ್ಯ ಆರಂಭಿಸಿದ. ಆದರೆ ತಂದೆಯವರು ಅಷ್ಟು ಹೊತ್ತಿಗೆ ಅವನ ಹೆಗಲನ್ನು ಬಿಗಿಯಾಗಿ ಹಿಡಿದುಕೊಂಡು "ಥೂ, ಅಪ್ರಯೋಜಕ! ನೀನೊಬ್ಬ ಅಯೋಗ್ಯ! ಸುಳ್ಳ! ಜೂಜುಕೋರ!" ಎಂದು ಗರ್ಜಿಸಿದರು. ಬಹು ಜೋರಾಗಿ ಪೇತ್ಯನನ್ನು ಅಲ್ಲಾಡಿಸುತ್ತಿದ್ದುದನ್ನು ನೋಡಿದಾಗ ಆ ಹುಡುಗನ ಒಡಲಿನಿಂದ ಪ್ರಾಣವನ್ನೇ ಅಲ್ಲಾಡಿಸಿ ಬಿಡಬೇಕೆಂದು ಅವರು ಪ್ರಯತ್ನಿಸುತ್ತಿದ್ದಂತೆ ಕಂಡುಬರುತ್ತಿತ್ತು. ಅವರ ದವಡೆ ನಡುಗುತ್ತಿತ್ತು. ಅದೇ ರೀತಿ ಅವರ ಮೂಗು ಕನ್ನಡಕವೂ ಕೂಡ ಆಡುತ್ತಿತ್ತು. ಆ ಮೂಗು ಕನ್ನಡಕ ಅವರ ಬೆವರಿದ ಮೂಗಿನಿಂದ ಕಳಚಿಕೊಂಡು ಕರಿಯ ದಾರದಮೇಲೆ ನೇತಾಡುತ್ತಿತ್ತು.

"ಅವುಗಳನ್ನು ಈ ಕ್ಷಣ ಇಲ್ಲಿ ತಂದುಕೊಡು. ಅದನ್ನೇನೆಂದು ಕರೆಯುತ್ತೀಯೆ ಬಂಡಿಯೋ ದಂಡಿಯೋ—"

"ಗುಂಡಿಗಳು" ಮಾತನ್ನು ವಿನೋದಕ್ಕೆ ತಿರುಗಿಸಬೇಕೆಂದು ಪೇತ್ಯ ವಕ್ರವಾದ ಮುಗುಳುನಗೆಯನ್ನು ಬೀರುತ್ತ ಹೇಳಿದ.

ತನ್ನ ಮಗನ ಬಾಯಿಂದ "ಗುಂಡಿಗಳು" ಎಂಬ ಪದವನ್ನು ಕೇಳಿದರೋ ಇಲ್ಲವೋ ತಂದೆಯವರ ಕೋಪ ಉರಿಯಲಾರಂಭಿಸಿತು.

"ಗುಂಡಿಗಳೊ? ಬಹಳ ಸೊಗಸಾಗಿದೆ! ಎಲ್ಲಿ ಅವು? ಈ ನಿಮಿಷ ಇಲ್ಲಿ ತಂದುಕೊಡು. ಆ ಬೀದಿ ಕಸ, ಆ ಜೂಜಿನ ಗೊಳಕೆ ಎಲ್ಲಿ? ಬೆಂಕಿಗೆ ಹಾಕು ಅವುಗಳನ್ನೆಲ್ಲ! ಒಲೆಯೊಳಕ್ಕೆ ಬಿಸಾಡು! ಅವುಗಳ ಸುಳಿವುಕೂಡ ಇಲ್ಲಿರಬಾರದು!" ಕೊಠಡಿಯೊಳಗಿನ ಎಲ್ಲ ವಸ್ತುಗಳ ಕಡೆ ಹುಡುಕುನೋಟವನ್ನು ಬೀರಿ ಪೇತ್ಯನ ಚರ್ಮದ ಚೀಲವನ್ನು ತೆಗೆದುಕೊಳ್ಳಲು ಹೋದರು. ತಂದೆ ಆ ಚೀಲವನ್ನು ತೆಗೆದುಕೊಂಡು ಉದ್ವೇಗದಿಂದ ದಾಪುಗಾಲನ್ನು ಹಾಕುತ್ತ ಸರಸರನೆ ಅಡಿಗೆಯ ಮನೆಯ ಕಡೆಗೆ ಹೋಗಲಾರಂಭಿಸಿದರು. ಸತ್ತ ಬೆಕ್ಕಿನ ಮರಿಗಳನ್ನು ಚೀಲದಲ್ಲಿ

ತೆಗೆದುಕೊಂಡು ಹೋಗುವಂತೆ ಗೊಣಗುತ್ತ ಆ ಚೀಲವನ್ನು ತೆಗೆದುಕೊಂಡು ಹೋಗುತ್ತಿದ್ದರು. ಪೇತ್ಯ ಅಳುತ್ತ ಅವರ ಹಿಂದೆಯೇ ಅಡಿಗೆಯ ಮನೆಗೆ ಒಡುತ್ತ ಹೋದ. ತನ್ನ ಷರಟಿನ ತೋಳನ್ನು ಮೇಲಕ್ಕೆ ಎಳೆದುಕೊಳ್ಳುತ್ತ "ಅಪ್ಪ, ಅಪ್ಪ! ಅಪ್ಪಾ!" ಎಂದು ಕೂಗಿಕೊಂಡ. ತಂದೆ ಒರಟಾಗಿ ಪೇತ್ಯನನ್ನು ಪಕ್ಕಕ್ಕೆ ತಳ್ಳಿ ಒಲೆಯ ಮೇಲಿದ್ದ ಪಾತ್ರೆಯನ್ನು ತೆಗೆದು ರಭಸದಿಂದ ಉರಿಯುತ್ತಿದ್ದ ಒಲೆಗೆ ಚೀಲವನ್ನು ತುರುಕಿಬಿಟ್ಟರು. ತಮ್ಮ ಷರಟಿನ ತೋಳು ಮಸಿಯಾದುದನ್ನು ಕೂಡ ಅವರು ಗಮನಿಸಲಿಲ್ಲ, ಹುಡುಗ ಭಯದಿಂದ ತತ್ತರಿಸಿಹೋದ.

"ಓಡಿಹೋಗಿ!" ಎಂದು ಗಟ್ಟಿಯಾಗಿ ಕಿರಿಚಿಕೊಂಡ. ಆದರೆ ಅದೇ ಸಮಯಕ್ಕೆ ಒಲೆಯ ಒಳಗೆ ಆನೆ ಪಟಾಕಿಗಳು ಹೊಡೆದ ಸದ್ದು ಕೇಳಿಸಿತು. ಅದರ ಹಿಂದೆಯೇ ಒಲೆಯೊಳಗೆ ಆಸ್ಫೋಟನೆಯಾಯಿತು. ಒಲೆಯ ಬಾಯಿಂದ ವಿವಿಧ ವರ್ಣಜಾಲಗಳ ಜ್ವಾಲೆ ಮೇಲಕ್ಕೆದ್ದಿತು. ಒಲೆಯ ಬಳಿಯಿದ್ದ ಬೇಯುತ್ತಿದ್ದ ಹಿಟ್ಟಿನ ಮುದ್ದೆಯ ಚೂರುಗಳು ಮೇಲಕ್ಕೆ ಹಾರಿ ತಾರಸಿಗೆ ಅಂಟಿಕೊಂಡುವು. ಒಲೆ ಸಿಡಿದು ಬಿರುಕು ಬಿಟ್ಟಿತು. ತೀಕ್ಷ್ಣವಾದ ಹೊಗೆ ಆ ಬಿರುಕುಗಳಿಂದ ರಭಸವಾಗಿ ಹೊರಹೊರಟು ಇಡೀ ಅಡಿಗೆ ಮನೆಯನ್ನು ತುಂಬಿತು.

ತಕ್ಷಣ ಒಲೆಯ ಮೇಲೆ ನೀರನ್ನು ಸುರಿದರು. ಕೊನೆಯಲ್ಲಿ ಬೂದಿಯನ್ನು ಕೆದಕಿ ನೋಡಿದಾಗ ಪಿಸ್ತೂಲಿಗೆ ಉಪಯೋಗಿಸುವ ಇದ್ದಿಲಿನಂತೆ ಕಪ್ಪಗಾದ ತೋಟಾಗಳ ಡಬ್ಬಿಗಳು ಕೈಗೆ ಸಿಕ್ಕಿದುವು.

ಆದರೆ ಪೇತ್ಯನಿಗೆ ಮುಂದೇನಾಯಿತೆಂಬ ಒಂದು ವಿಷಯವೂ ತಿಳಿಯಲಿಲ್ಲ. ಅವನನ್ನು ಕರೆದುಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿದರು. ಅವನ ಮೈ ಕೆಂಡದಂತೆ ಸುಡುತ್ತಿತ್ತು. ದೇಹದ ಶಾಖವನ್ನು ಪರೀಕ್ಷಿಸಿದಾಗ ಒಂದುನೂರ ಮೂರೂವರೆ ಡಿಗ್ರಿ ಜ್ವರ ಇದ್ದುದು ಕಂಡು ಬಂದಿತು.

೪೨. ಕುಲಿಕೊವ್ಹೊ ಮೈದಾನ

ಕೆಂಜ್ವರ ಕಳೆಯಿತೋ ಇಲ್ಲವೋ ನ್ಯುಮೋನಿಯಾ ಆರಂಭವಾಯಿತು. ಪೇತ್ಯ ಚಳಿಗಾಲವೆಲ್ಲ ಜ್ವರದಿಂದ ನರಳುತ್ತಲೇ ಇದ್ದ. ಈಸ್ಟರ್‌ಹಬ್ಬದ ಹಿಂದಿನ ದಿನದವರೆಗಿನ ನಲವತ್ತು ದಿನಗಳ ಲೆಂಟ್‌ಕಾಲದ ಮಧ್ಯದಲ್ಲಿ ಮಾತ್ರ ಮನೆಯಲ್ಲೇ ಹೆಜ್ಜೆಯಿಡುವಂತಾದ.

ವಸಂತ ಋತು ಮುಂದೆ ಬರುವುದರಲ್ಲಿದ್ದಿತು. ಅದನ್ನು ವಸಂತ ಪೂರ್ವವೆಂದು ಕರೆಯಬಹುದಾಗಿತ್ತು. ಇತ್ತ ಚಳಿಗಾಲವೂ ಅಲ್ಲ, ಅತ್ತ ನಿಜವಾದ ವಸಂತವೂ ಅಲ್ಲ.

ದಕ್ಷಿಣದಿಂದ ಬರುವ ಅಲ್ಪಕಾಲದ ಹಿಮವು ನಿಂತಿದ್ದಿತು. ಪೇತ್ಯ ಪ್ರತಿವರ್ಷದಂತೆ ಆ ಹಿಮಗಾಲದ ಆನಂದವನ್ನು ಪಡೆಯಲಾಗಲಿಲ್ಲ. ಈಗ ಶೀತರಹಿತ ಒಡೆಸ್ಸದ ಶುದ್ಧ ಮಾರ್ಚ್ ತಿಂಗಳು ನಡೆಯುತ್ತಿತ್ತು.

ನಡುಗುವ ಕಾಲುಗಳ ಬಲದಿಂದ ಏನೊಂದೂ ಕೆಲಸವಿಲ್ಲದೆ ಮನೆಯ ಕೊಠಡಿಗಳಲ್ಲಿಯೇ ಪೇತ್ಯ ಓಡಾಡುತ್ತಿದ್ದ. ಹಾಸಿಗೆಯಿಂದ ಎದ್ದಾಗಲೇ ತನ್ನ ಕಾಲುಗಳು ತುಂಬ ಕೃಶವಾಗಿ ಸಣ್ಣವಾಗಿವೆಯೆಂಬುದನ್ನು ಅವನು ತಿಳಿದುದು. ಕತ್ತಲೆ ಆವರಿಸಿದ್ದ ಪಕ್ಕದ ಕೊಠಡಿಯಲ್ಲಿ ನಿಲುಗನ್ನ

ತಿಯ ಮುಂದೆ ನಿಂತಾಗ ತನ್ನ ಎಲುಬು ಎದ್ದು ಕಾಣುತ್ತಿದ್ದ ಬಿಳಿಚಿಕೊಂಡ ಮುಖವನ್ನು ಅನು ಕಂಪೆಯಿಂದ ಪರೀಕ್ಷಿಸಿದ. ಅವನ ಕಣ್ಣುಗಳ ಕೆಳಗೆ ನೀಲಿ ಛಾಯೆ ನೆಲಸಿತ್ತು. ತನ್ನ ಮುಖ ಪೇತ್ಯನಿಗೇ ಗುರುತು ಸಿಗದಷ್ಟು ವ್ಯತ್ಯಾಸವಾಗಿದ್ದಿತು. ಇದನ್ನು ನೋಡಿ ಪೇತ್ಯ ಚಕಿತನಾದ.

ಅವನು ಎದ್ದು ಓಡಾಡಲು ತೊಡಗಿದ ಆ ಮೊದಲನೆಯ ದಿನದ ಅರ್ಧ ದಿವಸವೆಲ್ಲ ಒಬ್ಬನೇ ಆ ಮನೆಯಲ್ಲಿ ಏಕಾಂಗಿಯಂತೆ ಇದ್ದ. ತಂದೆ ಶಾಲೆಗೆ ಹೋಗಿದ್ದರು. ತಾತ್ಯಾನ ಕಾವಲಿಕನನ್ನು ಹೊರಗೆ ಸುತ್ತಾಡಿಸಿಕೊಂಡು ಬರಲು ಹೋಗಿದ್ದಳು.

ನಿರ್ಜನವಾದ ಆ ಕೊಠಡಿಗಳ ಶಬ್ದಗಳು ಪೇತ್ಯನ ತಲೆಯು ಸ್ವಲ್ಪ ತಿಳಿಯುವಂತೆ ಮಾಡಿದುವು. ಗಡಿಯಾರದ ಕ್ಲಿಕ್ ಕ್ಲಿಕ್ ಶಬ್ದವು ತಡೆಯಿಲ್ಲದೆ ನಡೆಯುತ್ತಿದ್ದು ಅನಿವಾರ್ಯವಾಗಿ ಭೀತಿಯ ಅಲೆಗಳನ್ನೆಬ್ಬಿಸುತ್ತಿದ್ದಿತು. ಪೇತ್ಯ ಕಿಟಕಿಯ ಬಳಿಗೆ ಹೋದ. ಚಳಿಗಾಲದಲ್ಲಿ ಭದ್ರವಾಗಿ ಮುಚ್ಚಿದ್ದ ಕಿಟಕಿಯ ಬಾಗಿಲುಗಳನ್ನಿನ್ನೂ ತೆರೆದಿರಲಿಲ್ಲ. ಎರಡು ಚೌಕಟ್ಟುಗಳ ನಡುವೆ ಹಳದಿಯ ಉಣ್ಣೆ ಮತ್ತು ಹತ್ತಿಯದಾರದ ಸುರುಳಿಯಿದ್ದಿತು.

ಬೂದಿಬಣ್ಣದ ಒಣಗಿದ ಅಂದವಿಲ್ಲದ ದಾರಿಯೂ, ಕುಲಿಕೋವೋ ಮೈದಾನದ ಗಟ್ಟಿನೆಲವೂ, ಅತ್ಯಲ್ಪವಾಗಿ ತೇವದ ಅಂಶವಿದ್ದ ಬೂದಿಬಣ್ಣದ ಆಕಾಶವೂ ಪೇತ್ಯನ ಕಣ್ಣಿಗೆ ಬಿದ್ದುವು. ಅಡಿಗೆ ಮನೆಯ ಕಿಟಕಿಯಿಂದ ನೋಡಿದಾಗ ಖಾಲಿ ಸ್ಥಳದಲ್ಲಿ ಲೈಲಕ್ ಗಿಡಗಳ ನೀಲಿ ಕುಡಿಗಳು ಕಾಣಿಸಿದುವು.

ಕಹಿಯಾದ ಅದರ ತೊಗಟೆಯನ್ನು ಹಲ್ಲಿನಿಂದ ಕಿತ್ತರೆ ಅದರಡಿಯಲ್ಲಿ ಮನೋಹರವಾದ ಪಿಸ್ತಾ ಬೀಜದಂತೆ ಹಸುರುಬಣ್ಣದ ಕಾಂಡವು ಕಾಣಿಸುವುದೆಂದು ಅವನು ತಿಳಿದಿದ್ದ.

ಬಹು ಹೊತ್ತಿಗೊಂದೊಂದು ಬಾರಿ ಬಾರಿಸುತ್ತಿದ್ದ ಗಂಟೆಗಳ ವಿಷಣ್ಣವಾದ ಮಂದ್ರ ಸ್ವರವು ಗಾಳಿಯಲ್ಲಿ ಕಂಪಿಸುತ್ತ ತೇಲಿಬರುತ್ತಿತ್ತು. ಅದನ್ನು ಕೇಳಿದ ಪೇತ್ಯನ ಮನಸ್ಸನ್ನು ಶೂನ್ಯ ಭಾವನೆಯೂ ವಿಷಾದವೂ ತುಂಬಿದುವು.

ಆದರೆ ಈ ಉತ್ಸಾಹಶೂನ್ಯವಾದ ಚಳಿಯ ಜಗತ್ತಿನಲ್ಲಿ ವಸಂತದ ಶಕ್ತಿಗಳು ಸುಪ್ತವಾಗಿದ್ದುವು. ವಸಂತವು ತನ್ನ ವರ್ಣಜಾಲಗಳೊಡನೆ ಸಮಸ್ತ ವೈಭವದೊಡನೆ ಪ್ರಕಟವಾಗಲು ನಿಯಮಿತವಾದ ಕಾಲವನ್ನು ನಿರೀಕ್ಷಿಸುತ್ತಿತ್ತು. ವಸಂತಾಗಮನದ ಮುನ್ಸೂಚನೆಯ ಅರಿವು ಮನಸ್ಸಿಗೆ ಉಂಟಾಗತೊಡಗಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ ಇದು ಗಂಟೆಯಾಕಾರದ ಹೂವು ಬಿಡುವ ಹೈಅಸಿಂತ್ ಗಿಡದ ಗಡ್ಡೆಗಳಲ್ಲಿ ಕಂಡುಬರುತ್ತಿದ್ದಿತು.

ಮನೆಯೊಳಗೆ ಕತ್ತಲೆಯ ಉಗ್ರಾಣದ ಕೋಣೆಯಲ್ಲಿ ಮನೆಯೊಳಗಿನ ವಸಂತವು ತಲೆಮರೆಸಿಕೊಂಡಿತ್ತು. ಉಗ್ರಾಣದ ಮನೆಯಲ್ಲಿ ತಾತ್ಯಾನ ಗೋಡೆಯುದ್ದಕ್ಕೂ ಬೋಗುಣಿಯಾಕಾರದ ಕುಂಡಗಳನ್ನು ಇರಿಸಿದ್ದಳು. ಅವುಗಳಲ್ಲಿ ಡಚ್‌ಗೆಡ್ಡೆಗಳನ್ನು ನೆಡಲಾಗಿತ್ತು. ಅವು ಕುಡಿಯಿಡುವುದು ಕತ್ತಲೆಯಲ್ಲಿ ಮಾತ್ರ, ಎಂದು ಪೇತ್ಯ ತಿಳಿದುಕೊಂಡಿದ್ದ. ಉಗ್ರಾಣದ ಕತ್ತಲು ಮನೆಯಲ್ಲಿ ಅವು ಮೊಳಕೆಯಿಡುವ ರಹಸ್ಯಕಾರ್ಯವು ನಡೆಯುತ್ತಿದ್ದಿತು.

ರೇಷ್ಮೆಯಂತಿದ್ದ ಗೆಡ್ಡೆಯ ಮೇಲಿನ ಸಿಪ್ಪೆಯನ್ನು ಸೀಳಿಕೊಂಡು ಕಾಂತಿಹೀನವಾದ ದೃಢವಾದ ಮೊಳಕೆಯ ಗುಂಡು ತುದಿ ಹೊರಕ್ಕೆ ತಲೆಹಾಕುತ್ತಿತ್ತು. ಈಸ್ಟರ್ ಹಬ್ಬದ ಹೊತ್ತಿಗೆ ಸರಿಯಾಗಿ ದೃಢವಾಗಿ ನಿಂತ ತೆಳು ಪಾಟಲ, ಬಿಳಿ, ಊದಾ ಬಣ್ಣಗಳ ಹೂವುಗಳು ಇದ್ದಕ್ಕಿ

ದ್ದಂತೆ ದಪ್ಪವಾದ ಗಿಡದ ಕಾಂಡಗಳ ಮೇಲೆ ತಲೆಯೆತ್ತಿ ನಿಲ್ಲುತ್ತವೆ ಎಂಬುದು ಪೇತ್ಯನಿಗೆ ಗೊತ್ತಿದ್ದಿತು.

ಮೇಷಸಂಕ್ರಾಂತಿಯ ಈ ಜನರಹಿತ ಉತ್ಸಾಹರಹಿತ ಜಗತ್ತಿನಲ್ಲಿ ಪೇತ್ಯನ ಬಾಲಹೃದಯ ಏಕಾಂಗಿಯಾಗಿ ಜಡತ್ವವನ್ನನುಭವಿಸುತ್ತಿತ್ತು.

ಹಗಲುಗಳು ದೀರ್ಘವಾಗ ತೊಡಗಿದ್ದವು. ಮಧ್ಯಾಹ್ನದ ಊಟದ ಅನಂತರ ಸಂಜೆಯ ವರೆಗಿನ ಬೇಸರದ ಗಂಟೆಗಳನ್ನು ಕಳೆಯುವುದೇ ಪೇತ್ಯನಿಗೆ ಕಷ್ಟಕರವಾಗಿ ಪರಿಣಮಿಸಿತು. ಆಗಿನ ಗಂಟೆಗಳು ಯುಗಗಳಂತೆ ತೋರುತ್ತಿದ್ದುವಲ್ಲದೆ ಅವೆಷ್ಟು ನಿರುತ್ಸಾಹಕರವಾಗಿದ್ದುವು. ಕಾರ್ಬ್ಯಾನೆಯ ಉಪನಗರಕ್ಕೆ ಹೋಗುವ ದೀರ್ಘವಾದ ಜನರಹಿತವಾದ ರಸ್ತೆಗಳಿಗಿಂತಲೂ ಆ ಗಂಟೆಗಳು ನಿಡಿದಾಗಿ ಕಾಣಿಸುತ್ತಿದ್ದುವು.

ಮನೆಯ ಹತ್ತಿರ ಓಡಾಡಲು ಪೇತ್ಯನಿಗೆ ಈಗ ಅನುಮತಿ ದೊರಕಿತು. ಮನೆಯ ಮುಂದಿನ ಒಣಗಿದ ಕಾಲುಹಾದಿಯಮೇಲೆ ಪೇತ್ಯ ನಿಧಾನವಾಗಿ ನಡೆಯಹತ್ತಿದ. ರೈಲು ನಿಲ್ದಾಣದಿಂದ ಆಚೆ ದಿಗಂತದಲ್ಲಿ ಸೂರ್ಯನು ಮುಳುಗುವ ಕಾಲದಲ್ಲಿ ಕಣ್ಣನ್ನು ಸಣ್ಣಗೆಮಾಡಿಕೊಂಡು ಸೂರ್ಯನನ್ನು ನೋಡಿ ಆನಂದಿಸುತ್ತಿದ್ದ.

ರೈಲು ನಿಲ್ದಾಣವೇ ಪಟ್ಟಣದ ಎಲ್ಲೆಯೆಂಬ ಸಂಕುಚಿತ ಜ್ಞಾನವು ಇದೇ ಒಂದುವರ್ಷದ ಹಿಂದಿನವರೆಗೆ ಪೇತ್ಯನಿಗೆ ಇದ್ದಿತು. ಅದರಿಂದಾಚೆಯ ವಿಷಯ ಭೂವಿವರಣೆಯಲ್ಲಿದೆಯೆಂದು ಭಾವಿಸಿದ್ದ. ಆದರೆ ಆಗ ಅವನ ಆ ಅಜ್ಞಾನ ಮಾಯವಾಗಿದ್ದಿತು. ಪಟ್ಟಣವು ರೈಲು ನಿಲ್ದಾಣದಿಂದ ಆಚೆಗೆ ಬಹುದೂರ ವಿಸ್ತರಿಸಿತ್ತೆಂಬ ಸತ್ಯಸಂಗತಿಯ ಅರಿವು ಪೇತ್ಯನಿಗೆ ಈಗ ಆಗಿದ್ದಿತು. ನಿಲ್ದಾಣದಿಂದಾಚೆಗೆ ಉದ್ದುದ್ದವಾದ ಧೂಳಿನ ಬೀದಿಗಳು ಉಪನಗರಗಳ ಭಾಗಗಳಲ್ಲಿ ಹರಡಿದ್ದುವು. ಆ ಬೀದಿಗಳು ಪಶ್ಚಿಮದಿಕ್ಕಿಗೆ ಬೆಳೆದುಕೊಂಡು ಹೋಗಿರುವುದನ್ನು ಪೇತ್ಯ ಸ್ಪಷ್ಟವಾಗಿ ಚಿತ್ರಿಸಿಕೊಂಡ.

ದೂರದಲ್ಲಿ ಹಾಳು ಸುರಿಯುತ್ತಿದ್ದ ಎರಡು ಇಟ್ಟಿಗೆ ಮನೆಗಳ ಮಧ್ಯದ ವಿಸ್ತಾರವಾದ ಸ್ಥಳವನ್ನು ಆಕ್ರಮಿಸಿಕೊಂಡು ಅರುಣ ಸೂರ್ಯನು ದೊಡ್ಡದಾಗಿ ಕಾಣಿಸುತ್ತಿದ್ದನು. ಸೂರ್ಯನಿಂದ ಕಿರಣಗಳು ಹೊರಬರುತ್ತಿರಲಿಲ್ಲವಾದರೂ ಅದರ ತೀಕ್ಷ್ಣವಾದ ಮಂಕು ಬೆಳಕು ಕಣ್ಣುಗಳನ್ನು ಕುರುಡುಮಾಡಿಬಿಡುವಂಥದಾಗಿರುತ್ತಿತ್ತು.

ಈಸ್ಟರ್ ಹಬ್ಬಕ್ಕೆ ಎರಡುವಾರಗಳ ಮೊದಲೆ ಮರವನ್ನು ತುಂಬಿಕೊಂಡ ಗಾಡಿಗಳು ಕುಲಿಕೊವೊ ಮೈದಾನಕ್ಕೆ ಬರುತ್ತಿದ್ದುವು. ಬಡಗಿಗಳು, ಕೂಲಿಯಾಳುಗಳು ಮತ್ತು ಮೇಲ್ವಿಚಾರಕರು ಕಾಣಿಸಿಕೊಳ್ಳುತ್ತಿದ್ದರು. ಎಲ್ಲ ದಿಕ್ಕುಗಳಲ್ಲಿಯೂ ಅಳತೆಪಟ್ಟಿಗಳಿಂದ ನೆಲದ ಮೇಲೆ ಗೀರು ಹಾಕಲಾಗುತ್ತಿತ್ತು. ಮಡಿಸುವ ಹಳದಿಯ ಇಂಚುಪಟ್ಟಿಗಳನ್ನು ಅಂಗಿಗಳ ಹೊರ ಜೇಬಿನಲ್ಲಿ ಇಟ್ಟುಕೊಂಡ ಕಂಟ್ರಾಕ್ಟರುಗಳು ನೆಲವನ್ನು ಅಳತೆಮಾಡಿ ಗುರುತಿಸುತ್ತಿದ್ದರು. ಈಸ್ಟರ್ ಹಬ್ಬದ ಜಾತ್ರೆಗಾಗಿ ಅಂಗಡಿಗಳನ್ನು ಕಟ್ಟುವ ಕೆಲಸ ಹೀಗೆ ಆರಂಭವಾಗುತ್ತಿದ್ದಿತು.

ದೊಡ್ಡ ದೊಡ್ಡ ಮೊಳೆಗಳಿದ್ದ ಪೆಟ್ಟಿಗೆಗಳು, ಕೊಡಲಿಗಳು, ಗರಗಸಗಳು ಮರದ ದಿಮ್ಮಿಗಳು, ಹತ್ತರಿ ಹಿಡಿದ ಮರದ ಚೂರುಗಳು—ಇವುಗಳ ನಡುವೆ ಓಡಾಡುತ್ತ ಎಲ್ಲಿ ಯಾವ ಅಂಗಡಿಯನ್ನು ಕಟ್ಟುವರೆಂಬುದನ್ನು ಊಹಿಸುವುದರಲ್ಲಿ ಪೇತ್ಯನಿಗೆ ಮಹದಾನಂದವಾಗುತ್ತಿದ್ದಿತು. ಪ್ರ

ಸೊಂದು ಕಂಬ, ಪ್ರತಿಯೊಂದು ಹೊಸ ಕಾಲುವೆ ಅಥವಾ ತೋಡು, ಅಳತೆಪಟ್ಟಿಯಿಂದ ನೆಲವನ್ನು ಅಳೆದು ಗೂಟಗಳನ್ನು ಹೊಡೆದು ಮಾಡಿದ ಗುರುತು—ಇವೊಂದೊಂದೂ ಪೇತ್ಯನ ಕಲ್ಪನೆಯನ್ನು ಕೆರಳಿಸುತ್ತಿದ್ದುವು.

ಗಗನದಲ್ಲಿ ವಿಹರಿಸಲೆತ್ನಿಸುತ್ತಿದ್ದ ತನ್ನ ಭಾವನಾ ಪ್ರಪಂಚದಲ್ಲಿ ಪೇತ್ಯ ಆಶ್ಚರ್ಯಕರವಾದ ಹಾಗೂ ಅದ್ಭುತರಮ್ಯವಾದ ಅಂಗಡಿಗಳನ್ನು ಚಿತ್ರಿಸಿಕೊಳ್ಳುತ್ತಿದ್ದ. ಆದರೆ ಮರುಕ್ಷಣದಲ್ಲಿ ಅವನ ವಿವೇಕವು ಕಳೆದ ವರ್ಷದಂತೆಯೇ ಎಲ್ಲವೂ ಇರುವುದೆಂಬ ಸತ್ಯಸಂಗತಿಯನ್ನು ಸಾರಿಹೇಳುತ್ತಿದ್ದಿತು. ಕಳೆದ ವರ್ಷದವುಗಳಿಂದ ಉತ್ತಮವೂ ಅಲ್ಲ, ಕಳಪೆಯೂ ಅಲ್ಲ. ಆದರೆ ಗರಿಗೆದರಿದ ಕಲ್ಪನೆ ಇದನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ; ಹಿಂದೆಂದೂ ನೋಡದೆ ಇದ್ದ ನಿತ್ಯ ನೂತನವಾದುದನ್ನು ಅದು ಅಪೇಕ್ಷಿಸುತ್ತಿತ್ತು.

ಪೇತ್ಯ ಏನಾದರೂ ಹೊಸ ಸಮಾಚಾರ ತಿಳಿಯಬಹುದೆಂದು ಕೆಲಸಗಾರರುಗಳ ಮತ್ತು ಕಂಟ್ರಾಕ್ಟರುಗಳ ಬಳಿ ಸುಳಿದಾಡುತ್ತಿದ್ದ.

"ರೀ, ಇಲ್ಲಿ ಏನನ್ನು ಕಟ್ಟುತ್ತೀರಿ ಎಂಬುದನ್ನು ತಿಳಿಸುತ್ತೀರಾ ?"

"ಒಂದು ಅಂಗಡಿ, ಗೊತ್ತಿಲ್ವೆ ?"

"ಅದು ಗೊತ್ತು. ಆದರೆ ಯಾವ ರೀತಿಯದು ?"

"ಮರದಿಂದ ಕಟ್ಟಿದ್ದು."

ಆ ಮನುಷ್ಯನನ್ನು ಹೂಗಳಿದಂತಾಗಲೆಂದು ಹೆಮ್ಮೆಯ ನಗುವನ್ನು ಪೇತ್ಯ ಬೀರಿದ.

"ಅದೂ ನನಗೆ ಗೊತ್ತಿದೆ. ನೀವು ಒಳ್ಳೆಯ ತಮಾಷೆಯಾಗಿ ಮಾತಾಡುತ್ತೀರಪ್ಪಾ. ಆ ಅಂಗಡಿಯಲ್ಲಿ ಏನಿರುತ್ತದೆ ಎಂದು ಕೇಳಿದೆ? ಸರ್ಕಸ್ಸೆ ?"

"ಅದು ಸರಿ."

"ಹೇಗೆ? ಸರ್ಕಸ್ಸು ದುಂಡಾಗಿರಬೇಡವೇ?"

"ಹಾಗಿಲ್ಲದೆ ಇದ್ದರೆ ಇದು ಸರ್ಕಸ್ಸು ಆಗುವುದಿಲ್ಲ."

"ಮೇಣದ ಬೊಂಬೆಗಳನ್ನು ಮಾಡುವ ಅಂಗಡಿಯೋ?"

"ಇರಬಹುದು."

"ಇಷ್ಟು ಚಿಕ್ಕ ಅಂಗಡಿ ಸಾಕೆ?"

"ಹಾಗಿದ್ದರೆ ಮೇಣದ ಬೊಂಬೆ ತಯಾರಿಕೆ ಅಂಗಡಿಯಾಗುವುದಿಲ್ಲ."

"ಅಂದ ಮೇಲೆ ಇದು ನಿಜವಾಗಿ ಎಂಥದು ಆಗುತ್ತದೆ?"

"ಕಕ್ಕಸು."

ಇದನ್ನು ಕೇಳಿ ಪೇತ್ಯನಾಚಿದ. ಆದರೆ ಪುನಃ ಇನ್ನೂ ಜೋರಾಗಿ ನಕ್ಕ. ಏನಾದರೂ ವಿಷಯ ಆ ಕೆಲಸಗಾರನಿಂದ ತಿಳಿಯುವ ಹಾಗಿದ್ದರೆ ಅದಕ್ಕೆ ಬದಲಾಗಿ ಸ್ವಲ್ಪ ಅಪಮಾನವನ್ನು ಸಹಿಸಲೂ ಪೇತ್ಯ ಸಿದ್ಧನಾಗಿದ್ದ.

"ಹ್ಹ ಹ್ಹ ಹ್ಹ! ಆದರೆ ನಿಜವಾಗಿ ಇಲ್ಲಿ ಏನನ್ನು ಕಟ್ಟುತ್ತಿದ್ದೀರಿ?"

"ಹೋಗಪ್ಪ ಹೋಗು. ಇದು ನಿನಗೆ ಯೋಗ್ಯವಾದ ಸ್ಥಳವಲ್ಲ. ನಿನಗೆ ಸ್ಕೂಲಿಗೆ ತಡವಾಗುತ್ತದೆ. ಹೋಗು"

"ನಾನಿನ್ನೂ ಶಾಲೆಗೆ ಹೋಗುತ್ತಿಲ್ಲ. ನನಗೆ ಕೆಂಜ್ವರ ಬಂದಿತ್ತು, ಬಳಿಕ ನ್ಯುಮೋನಿಯ ಬಂದಿತು."

"ಇಲ್ಲಿ ಸುಮ್ಮನೆ ಪೀಡಿಸಬೇಡ. ಮನೆಗೆ ಹೋಗಿ ಮಲಗಿಕೋ."

ಅಪರಿಹಾರ್ಯವಾದ ಸಮಸ್ಯೆಯ ಬಗೆಗೆ ತಲೆ ಕೆಡಿಸಿಕೊಳ್ಳುತ್ತಾ ಪೇತ್ಯ ಮುಖವನ್ನು ಸೊಟ್ಟ ಮಾಡಿಕೊಂಡು ಅಲ್ಲಿಂದ ಕಾಲೆಳೆದುಕೊಂಡು ಹೊರಟ. ಅಂಗಡಿಗಳನ್ನು ಕಟ್ಟಿ ಛಾವಣಿ ಕ್ಯಾನ್‌ವಾಸ್ ಬಟ್ಟೆಗಳನ್ನು ಹೊದಿಸಿ ಚಿತ್ರದ ಹಲಗೆಗಳನ್ನು ತೂಗುಹಾಕಿದ ಹೊರತು ಯಾವುದು ಯಾವ ಅಂಗಡಿ ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾಗಿದ್ದಿತು. ಈಸ್ಟರ್ ಭಾನುವಾರದ ದಿವಸ ಕಾಂತಿಹೀನವಾದ ಗಿಡದ ಕಾಂಡದ ಮೇಲೆ ಹೂವು ಬಿಡುವ ಹೈಯಸಿಂತ ಗಂಟೆಯ ಹೂವಿನ ಬಣ್ಣವನ್ನು ಊಹಿಸುವುದು ಹೇಗೆ ಅಸಾಧ್ಯವಾಗಿದ್ದಿತೋ ಅಷ್ಟೇ ಅಸಾಧ್ಯವಾಗಿದ್ದಿತು ಈ ಅಂಗಡಿಗಳನ್ನು ಮೊದಲೆ ಊಹಿಸಿ ಹೇಳುವುದು.

ಪವಿತ್ರ ಶನಿವಾರದ ದಿವಸ ರಹಸ್ಯ ಪೂರ್ಣವಾದ ಗೂಡೆಗಳೂ ಕಬ್ಬಿಣದ ಪೆಟ್ಟಿಗೆಗಳೂ ಬಂದು ಬಿದ್ದುವು. ಅವುಗಳ ಮೇಲೆ "ಎಚ್ಚರಿಕೆಯಿಂದ ಎತ್ತಿಡಿ" ಎಂದು ಬರೆದ ಚೀಟಿಗಳನ್ನು ಅಂಟಿಸಿದ್ದಿತು. ಅವುಗಳಲ್ಲಿ ಏನು ತುಂಬಿದ್ದಿತೆಂಬುದನ್ನು ಒಡೆಸ್ಸನಗರದ ಯಾವ ಹುಡುಗನೂ ಹೇಳಲಾರದವನಾಗಿದ್ದ.

ಸ್ಥೂಲವಾಗಿ ಬುರುಡೆ ಹೊಡೆಯಬಹುದಾಗಿತ್ತು. ಇದರಲ್ಲಿ ಮೇಣದ ಬೊಂಬೆಗಳಿವೆ ಇದರಲ್ಲಿ ಯಕ್ಷಿಣಿಯವನ ಮೇಜ ಇದೆ; ಅಥವಾ ದೊಡ್ಡ ದೊಡ್ಡ ಹಾವುಗಳಿವೆ. ಅವುಗಳ ನಾಲಗೆ ಗಳು ಸೀಳಿವೆ, ಅವುಗಳಿಗೆ ತೆಳುಪೊರೆಯ ಕಣ್ಣುಗಳಿವೆ-ಎಂದೆಲ್ಲ ಹೇಳಲು ಅಡ್ಡಿಯಿರಲಿಲ್ಲ. ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಮತ್ಸ್ಯಕನ್ಯೆ ಇರಬೇಕೆಂದೂ, ಅವಳ ದೇಹ ಹೆಂಗಸಿನದು, ಅವಳಿಗೆ ಕಾಲಿಗೆ ಬದಲಾಗಿ ಮಚ್ಚೆ ಇರುವ ಬಾಲವಿದೆಯೆಂದೂ ಊಹಿಸುತ್ತಿದ್ದರು. ಆದರೆ ಅವಳು ನೀರಿಲ್ಲದೆ ಹೇಗೆ ಬದುಕಿದ್ದಳು ಎಂಬುದು ಒಂದು ಬಗೆಹರಿಯಲಾರದ ಪ್ರಶ್ನೆಯಾಗಿದ್ದಿತು. ಅವಳ ದೇಹ ದೊಳಗೆ ಒಂದು ಸ್ನಾನದ ತೊಟ್ಟಿ ಇದ್ದಿರಬೇಕು. ಇಲ್ಲದೆ ಇದ್ದರೆ ಹಸಿಯಮಣ್ಣನ್ನು ಅವಳಲ್ಲಿ ತುಂಬಿದ್ದಿರಬೇಕು. ಇದೆಲ್ಲ ಊಹಾರಾಜ್ಯದ ಕಲ್ಪನೆಗಳಾಗಿದ್ದುವೇ ಹೊರತು ಇದು ಹೀಗೆ ಎಂದು ಹೇಳುವವರಿರಲಿಲ್ಲ.

ಜಾತ್ರೆ ಎಷ್ಟು ಹೊತ್ತಿಗೆ ಆರಂಭವಾಗುವುದೋ ಎಂದು ಚಡಪಡಿಸುತ್ತಿದ್ದ ಪೇತ್ಯ. ಇನ್ನೂ ಯಾವುದೂ ಸಿದ್ಧವೇ ಆಗಿಲ್ಲ; ಈ ಬಾರಿ ಜಾತ್ರೆ ಆರಂಭವಾಗಲಾರದು, ನಿಂತುಹೋಗಬಹುದು ಎಂದು ಪೇತ್ಯ ಅನುಮಾನಿಸುತ್ತಲೇ ಇದ್ದ. ಆದರೆ ಅವನ ಸಂದೇಹಗಳಿಗೆ ಆಧಾರವೇ ಇರಲಿಲ್ಲ. ಈಸ್ಟರ್ ರವಿವಾರದ ಹೊತ್ತಿಗೆ ಎಲ್ಲವೂ ಸಿದ್ಧವಾಗಿದ್ದಿತು. ಚಿತ್ರದ ಹಲಗೆಗಳನ್ನು ನೇತುಹಾಕ ಯಾಗಿತ್ತು, ಬಾವುಟದ ಕಂಬಗಳಿಗೆ ಸುಣ್ಣ ಬಳಿದಾಗಿತ್ತು, ಉದ್ದವಾದ ಹಸುರು ಪೀಪಾಯಿಗಳಿಂದ ಹಿಂದಿನ ದಿನವೇ ನೆಲಕ್ಕೆ ನೀರನ್ನು ಚಿಮುಕಿಸಲಾಗಿತ್ತು. ನೀರುಬಿದ್ದುದರಿಂದ ಕಪ್ಪುನೆಲ ಈ ಹೊಳೆಯುತ್ತಿದ್ದಿತು.

ಒಂದು ಮಾತಿನಲ್ಲಿ ಹೇಳುವುದಾದರೆ ಈಸ್ಟರ್ ಹಬ್ಬ (ಪಂಚಾಂಗಕ್ಕೆ ಚಾಚೂ ವ್ಯತ್ಯಾಸ ವಾಗದಂತೆ) ಬಂದು ಕಣ್ಮನಗಳನ್ನು ಅರಳಿಸಿತು.

ಗಂಟೆಗಳು ಏಕರೀತಿಯಾಗಿ ನಾದವನ್ನು ಸೂಸುತ್ತಿದ್ದುವು. ತುಪ್ಪುಳಿನಂತಿದ್ದ ಮೋಡಗ

ಡುವೆ ಗೆಲುವಾದ ಸೂರ್ಯ ಓಡಾಡುತ್ತಿದ್ದ. ತಾತ್ಯಾನ ಬಿಳಿಯ ಕಸೂತಿ ಅಂಚಿನ ಉಡು
ನ್ನು ಧರಿಸಿದ್ದಳು. ಅವಳು ವಿಶೇಷ ಅಡಿಗೆಗಾಗಿ ಹಂದಿಯ ತೊಡೆಯ ಮಾಂಸವನ್ನು ಚೂರು
ಾಡಿ ತೆಗೆದಳು. ಅದರ ಹಿಂಭಾಗದ ಚರ್ಮವನ್ನು ಪಿಸ್ತೂಲಿನ ಚರ್ಮದ ಒರೆಯಂತೆ ಮುಂದ
ಾಗಿಯೂ ದುಂಡಾಗಿಯೂ ತೆಗೆದಳು.

ಸಕ್ಕರೆಯ ಕುರಿಮರಿಗಳನ್ನು ಮಾಡಿ ಈಸ್ಟರ್ ಕಡಬುಗಳಮೇಲೆ ನಿಲ್ಲಿಸಿದ್ದರು. ಪಾಟಲ
ರ್ಣದ ಕ್ರಿಸ್ತನಬೊಂಬೆಯು ಕಾಗದದಿಂದ ಮಾಡಿದ ಚರ್ಚ್‌ಧ್ವಜವನ್ನು ಕೈಯಲ್ಲಿ ಹಿಡಿದು
ರ್ತಕನಂತೆ ತಂತಿಯಮೇಲೆ ಲಗಾಟವನ್ನು ಹಾಕುತ್ತಿದ್ದಿತು. ನೀರು ಬಳ್ಳಿಗಳಿಂದ ಒಂದು ಗುಡ್ಡ
ಾಕಾರವನ್ನು ಮಾಡಿ ಅದರ ಬಳಿ ಮೊಟ್ಟೆಗಳನ್ನು ಇಡಲಾಗಿದ್ದಿತು. ಆ ಮೊಟ್ಟೆಗಳಿಗೆ ಬೆಣ್ಣೆ
ಯಿಂದ ಉಜ್ಜಿ ಮೆರುಗುಕೊಡಲಾಗಿದ್ದಿತು. ಆ ಮೆರುಗಿನಲ್ಲಿ ಹೊಸದಾಗಿ ಬಣ್ಣಹಾಕಿದ ಕಿಟಕಿ
ಗಳು ಪ್ರತಿಫಲಿಸುತ್ತಿದ್ದುವು.

ಗುಂಗುರುಗುಂಗುರಾಗಿದ್ದ ಹೈಯಸಿಂತ್ ಹೂವಿನ ಗಿಡಗಳನ್ನು ಕುಂಡಗಳಲ್ಲಿ ಇಡಲಾಗಿ
ತ್ತು. ಅವುಗಳಿಗೆ ನುಲಿದು ಸುಕ್ಕು ಮಾಡಿದ ಕಡುಗೆಂಪು ವರ್ಣದ ಕಾಗದವನ್ನು ಸುತ್ತಲಾಗಿ
ತ್ತು. ಅವು ಒಂದು ರೀತಿಯ ಕಟುಮಧುರಪರಿಮಳವನ್ನೂ ಸ್ಮಶಾನಸದೃಶವಾಸನೆಯನ್ನೂ ಬೀರು
ತ್ತಿದ್ದುವು. ಈಸ್ಟರ್ ಮೇಜಿನ ಮೇಲಿನಿಂದ ಹೊಗೆಯ ರೂಪದಲ್ಲಿ ಮೇಲೆಕ್ಕೆದ್ದು ಬಿಸಿಲಿನಲ್ಲಿ
ಸ್ಪಷ್ಟವಾಗಿ ಕಾಣಿಸುತ್ತಿದೆಯೋ ಎನ್ನಿಸುವಷ್ಟು ಅದರ ಪರಿಮಳ ಘನರೂಪವಾಗಿದ್ದಿತು.

ಆದರೆ ಈಸ್ಟರ್ ಭಾನುವಾರ ಪೇತ್ಯನ ಪಾಲಿಗೆ ಬಹುದೀರ್ಘವಾದುದೂ ನಿರುತ್ಸಾಹಕರ
ವಾದುದೂ ಆಗಿದ್ದಿತು. ಏಕೆಂದರೆ ಅಂದು ಅತಿಥಿಗಳನ್ನು ಆಹ್ವಾನಿಸಿ ಸಂತೋಷಕೂಟವನ್ನು
ಏರ್ಪಡಿಸುತ್ತಿರಲಿಲ್ಲ, ಅಂದು ಯಾವ ವಿನೋದಕಾರ್ಯಕ್ರಮಗಳೂ ಇರುತ್ತಿರಲಿಲ್ಲ. ಅವುಗಳಿಗೆ
ಅವಕಾಶವೂ ಇರಲಿಲ್ಲ, ಆ ದಿನವನ್ನು ದೇವರಿಗೆ ಮೀಸಲಾಗಿಡಲಾಗಿತ್ತು. ಆದರೆ ಮಧ್ಯಾಹ್ನ
ತ್ತು ಮೂರನೆಯ ದಿನ ಸಾರ್ವಜನಿಕರು ಆಮೋದ ಪ್ರಮೋದಗಳಲ್ಲಿ ತೊಡಗಲು ಪೋಲೀಸ್
ಅಧಿಕಾರಿಗಳ ಪೂರ್ಣ ಅನುಮತಿ ಇರುತ್ತಿದ್ದಿತು.

ಮಧ್ಯಾಹ್ನ ಹನ್ನೆರಡು ಗಂಟೆ ಹೊಡೆಯುತ್ತಿದ್ದಂತೆ ಜಾತ್ರೆಯಲ್ಲಿ ಕಾರ್ಯನಿರ್ವಹಣೆಗೆ
ನಿಯುಕ್ತನಾಗಿದ್ದ ಪೋಲೀಸ್ ಅಧಿಕಾರಿಯು ಸೀಟಿ ಹೊಡೆದ. ಕೂಡಲೆ ತ್ರಿವರ್ಣಧ್ವಜವು
ಕೊಲಿಕೋವೊ ಮೈದಾನದ ಮಧ್ಯದಲ್ಲಿದ್ದ ಸುಣ್ಣ ಬಳಿದ ಎತ್ತರವಾದ ಕಂಬದ ತುದಿಗೆ ಏರಿತು.

ಮರುನಿಮಿಷ ಕಟ್ಟೆಹರಿಯಿತು. ಸೈನ್ಯದ ವಾದ್ಯಮೇಳದ ತುರ್ಕಿನಗಾರಿಗಳು ಭೋರ್ಗರೆ
ದುವು. ತಂತಿಯವಾದ್ಯಗಳೂ ವಿನೋದರಾಟಳದ ಆರ್ಗನ್‌ವಾದ್ಯಗಳೂ ಬಾಜಿಸಲಾರಂಭಿಸಿ
ದುವು. ಸುಣ್ಣ ಬಳಿದ ವೇದಿಕೆಗಳ ಮೇಲೆ ನಿಂತ ಕೆಂಪುತಲೆಯ ವಿದೂಷಕರೂ ಗಾರುಡಿಗರೂ
ರೀತಿಯ ಕೀರಲು ದನಿಯಲ್ಲಿ ಕೂಗುತ್ತ ತಮ್ಮ ತಮ್ಮ ಅಂಗಡಿಗಳಿಗೆ ಬರುವಂತೆ ಸಾರ್ವಜನಿಕ
ರನ್ನು ಆಹ್ವಾನಿಸಲಾರಂಭಿಸಿದರು. ವಿನೋದರಾಟಳದ ಗಾಜಿನ ಮಣಿಗಳೂ, ಪೀಠಗಳೂ,
ಕುದುರೆಗಳೂ ಗರಗರನೆ ಸುತ್ತಲಾರಂಭಿಸಿದುವು.

ಹಗುರವಾದ ಪುಟ್ಟ ತೂಗುದೋಣಿಗಳು ಮೋಡಗಳ ಚುಕ್ಕಿಗಳಿಂದ ಕೂಡಿದ ನೀಲಾ
ಕಾಶದವರೆಗೆ ಎನ್ನುವವರೆಗೂ ಮೇಲಕ್ಕೆ ಹಾರುತ್ತಿದ್ದುವು. ಸಮಸ್ತ ದಿಕ್ಕುಗಳಿಂದಲೂ ಹಿತ್ತಾಳೆ
ಬೆಗಳ, ತ್ರಿಕೋಣಾಕಾರದ ಉಕ್ಕಿನ ಕಂಬಿಯ ಗಂಟೆಗಳ ಶಬ್ದಗಳು ಒಂದೇಸಮನೆ ಮೇಲಿಂದ

ಮೇಲೆ ತಲೆಯಮೇಲೆ ಹೊಡೆದಂತೆ ಬಂದು ಮುತ್ತುತ್ತಿದ್ದುವು. ಒಬ್ಬ ತನ್ನ ತಲೆಯಮೇ
ಹೊಳೆಯುವ ಗಾಜಿನ ಜಾಡಿಯಲ್ಲಿ ಬಣ್ಣದ ತಣ್ಣೀರನ್ನು ಹೊತ್ತುಕೊಂಡು ಸಾರುತ್ತ ಮಾರ
ಮಾಡುತ್ತ ಬರುತ್ತಿದ್ದ. ಆ ಜಾಡಿಯ ನೀರಿನಲ್ಲಿ ಕೆಲವು ನಿಂಬೆಯ ಹೋಳುಗಳೂ, ಒಂ
ಚೂರು ಮಂಜುಗೆಡ್ಡೆಯೂ ತೇಲಾಡುತ್ತಿದ್ದುವು. ಅಲ್ಲದೆ ಆ ನೀರಿನ ಮೂಲಕ ಸೂರ್ಯ
ಬೆಳ್ಳಿಯಲ್ಲಿ ಮಾಡಿದಂತೆ ಪ್ರಸನ್ನವಾಗಿ ಕಾಣುತ್ತಿದ್ದ.

ಕೊಳೆಯಾದ ಕಕೇಷಿಯದ ಫರ್ ಕೂದಲಿನ ಕಪ್ಪು ಟೋಪಿಯನ್ನು ಧರಿಸಿದ್ದ, ಸಿಡು
ಕಲೆಯಮುಖದ ಪೋರ್ಟ್ ಆರ್ಥರಿನ ಒಬ್ಬ ಕದೀಮನು ಕಾಲುಗಳಲ್ಲಿದ್ದ ಬೂಡ್ಸುಗಳ
ಕಳಚಿಟ್ಟು ಎಣ್ಣೆ ಸವರಿದ ಕಂಬವನ್ನು ಹತ್ತುತ್ತಿದ್ದ. ಅದರ ತುದಿಯಲ್ಲಿ ಬಹುಮಾನವ
ಇಟ್ಟಿದ್ದ ಕ್ಷೌರದ ಕತ್ತಿಯನ್ನೂ ಕ್ಷೌರದ ಸಾಬೂನನ್ನೂ ಗೆಲ್ಲುವ ಆಸೆ ಅವನದಾಗಿದ್ದಿತು.

ಪ್ರತಿದಿನ ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಸೂರ್ಯನು ಮುಳುಗುವವರೆಗೆ ಕ
ಕೋವೊ ಮೈದಾನದ ಈ ಉನ್ಮಾದಕರವಾದ ಜಾತ್ರೆ ಏಳು ದಿವಸಗಳಕಾಲ ನಿರಂತರವ
ನಡೆಯಿತು. ನೆರೆಹೊರೆಯ ಕೂಲಿಗಾರರ ಮೊಹಲ್ಲಗಳಿಂದ ಮತ್ತು ಉಪನಗರಗಳಿಂದ ಬ
ಅತಿಥಿಗಳ ಗುಂಪಿನಿಂದ ಬಾಚಿ ಮನೆಯು ತುಂಬಿಹೋಗಿ ಗುಜುಗುಜು ಎನ್ನುತ್ತಿದ್ದಿತು.

ಪೇತ್ಯ ಬೆಳಗಿನಿಂದ ಮುತ್ಸಂಜೆವರೆಗೆ ಕುಲಿಕೋವೊ ಮೈದಾನದಲ್ಲಿ ಕಾಲ ಕಳೆಯುತ್ತಿ
ಗಾವ್ರಿಕನನ್ನು ತಾನು ಈ ಜಾತ್ರೆಯಲ್ಲಿ ಯಾವಾಗಲಾದರೂ ಸಂಧಿಸಬಹುದೆಂಬ ಬಯಕೆ ಅವನ
ಕಾಡುತ್ತಿದ್ದಿತು. ಕೆಂಪು ಬಣ್ಣದ ಕಾರ್ಡರಾಯ್ ಬಟ್ಟೆಯ ಷರಾಯಿಯನ್ನೂ ಲಂಗರುಚಿಪ್ಪ
ಗುಂಡಿಗಳುಳ್ಳ ನಾವಿಕಟೋಪಿಯನ್ನೂ ಧರಿಸಿದ ಯಾರಾದರೂ ದೂರದಲ್ಲಿ ಜನಗಳ ಗುಂಪಿ
ಕಣ್ಣಿಗೆ ಬಿದ್ದರೆ ಸಾಕು ಅವನೇ ಗಾವ್ರಿಕನಿರಬಹುದೆಂದು ಗುಂಪನ್ನು ಸೀಳಿಕೊಂಡು ಆ ದಿ
ನುಗ್ಗುತ್ತಿದ್ದ. ಗಾವ್ರಿಕ್ ಹಿಂದಿನ ಈಸ್ಟರ್ ಹಬ್ಬಕ್ಕೆ ಹಾಕಿಕೊಂಡಿದ್ದ ಬಟ್ಟೆಗಳನ್ನು ಅವನು
ತಿರಲಿಲ್ಲ. ಅಂಥ ಬಟ್ಟೆಗಳನ್ನು ಹಾಕಿದ್ದವರನ್ನು ದೂರದಿಂದ ಕಂಡಾಗಲೆಲ್ಲ ಅವನೇ ಇರಬೇಕೆ
ಎಂಬ ಭ್ರಾಂತಿ ಪೇತ್ಯನಿಗೆ. ಆದರೆ ಅವನ ಆ ಪ್ರಯತ್ನ ನಿರರ್ಥಕವಾಗುತ್ತಿದ್ದಿತು.

ಕಾರ್ಖಾನೆಯ ಉಪನಗರದ ಗಂಧ ಆ ಜಾತ್ರೆಯ ಜನಗಳಲ್ಲಿ ಕಂಡುಬರುತ್ತಿದ್ದಿತು. ಅ
ಬಹುಪಾಲು ಗಂಡಸರು ಟಿರೆಂಟಿಯಂತೆ ಕಬ್ಬಿಣದ ಕೋಲುಗಳನ್ನು ಹಿಡಿದುಕೊಂಡಿರುತ್ತಿ
ಮತ್ತು ಅಲ್ಲಿಗೆ ಬರುತ್ತಿದ್ದ ಬಹುಪಾಲು ಹುಡುಗಿಯರು ಮೋತ್ಯಳಂತೆ ನೀಲಿಯ ಓಲೆಗ
ಧರಿಸಿರುತ್ತಿದ್ದರು.

ಆದರೆ ಪೇತ್ಯನ ನಂಬಿಕೆ ನಿಜವಾಗಲಿಲ್ಲ. ಜಾತ್ರೆಯ ಕೊನೆಯದಿನವೂ ಮುಗಿ
ಬಂದಿತು. ಕೊನೆಯ ಬಾರಿಗೆ ವಾದ್ಯಮೇಳದವರು 'ಗೃಹಾಭಿಲಾಷೆ' ಯ ಹಾಡನ್ನು ಬಾಜಿ
ಧ್ವಜವನ್ನು ಕೆಳಕ್ಕೆ ಇಳಿಸಿಯಾಯಿತು. ಪೋಲೀಸರ ಸೀಟಿಗಳ ಶಬ್ದ ಅಲೆಅಲೆಯಾಗಿ
ಬರುತ್ತಿದ್ದಿತು. ಮೈದಾನ ಖಾಲಿಯಾಯಿತು. ಮುಂದಿನ ಈಸ್ಟರ್ ಹಬ್ಬದವರೆಗೆ ಪು
ಜಾತ್ರೆಯನ್ನು ಕಾಣುವಂತಿಲ್ಲ.

ವಿಷಣ್ಣ ತೇಜಸ್ಸಿನ ಸೂರ್ಯನು ನೀರವವಾಗಿದ್ದ ಅಂಗಡಿಗಳ, ನಿಶ್ಚಲವಾದ ಕ
ಚಕ್ರಗಳ ಮತ್ತು ಬೆತ್ತಲೆ ಧ್ವಜಸ್ತಂಭಗಳ ಹಿಂದಿನಿಂದ ಮಂಕಾಗಿ ಉರಿಯುತ್ತ ಮುಳುಗುತ್ತಿ

ಹಬ್ಬ ಇದ್ದಕ್ಕಿದ್ದಂತೆ ಮುಗಿದು ಹೋದ ಅನಂತರದ ಈ ಅಸಹನೀಯವಾದ ವಿಷಾದ

ುದ ನಿಶ್ಶಬ್ದತೆಗೆ ಆಗ್ಗೆ ಸರ್ಕಸ್ಸಿನ ಸಿಂಹದ ರಕ್ತ ಹೆಪ್ಪುಗಟ್ಟಿಸುವ ಗರ್ಜನೆ, ಕಿರುಬನ ಎಳೆದು ಬ್ಬಂತೆ ಬರುವ ಕಠೋರ ಕೂಗು ಇವುಗಳಿಂದ ಭಂಗಬರುತ್ತಿದ್ದಿತು.

ಮಾರನೆಯ ಬೆಳಿಗ್ಗೆ ಸಾಮಾನಿನ ಗಾಡಿಗಳು ಬಂದುವು. ಎರಡು ದಿವಸಗಳ ಬಳಿಕ ತ್ರಿಯು ನಡೆದ ಕುರುಹು ಕೂಡ ಅಲ್ಲಿರಲಿಲ್ಲ. ಪುನಃ ಕುಲಿಕೋವೊ ಮೈದಾನ ತನ್ನ ಎಂದಿನ ಪ್ಪನೆಲದ ಹೊದಿಕೆಯನ್ನು ಧರಿಸಿತು. ಹಗಲೆಲ್ಲ ಸಾರ್ಜೆಂಟುಗಳು ಒಂದು ರೀತಿಯ ಅರೆ ಡಿನ ದನಿಯಲ್ಲಿ ಅಧಿಕಾರಿಗಳಿಗೆ ತರಬೇತು ಕೊಡುತ್ತಿದ್ದುದನ್ನು ಅಲ್ಲಿ ಸಾಮಾನ್ಯವಾಗಿ ಕಾಣ ಹುದಾಗಿತ್ತು. ಅವರ ಆಜ್ಞಾವಾಚಕಗಳು ಮಾತ್ರ ಕೇಳಿಬರುತ್ತಿದ್ದುವು.

"ಬಲಕ್ಕೆ ತಿರುಗು! ಒಂದು-ಎರಡು!"

"ಎಡಕ್ಕೆ ತಿರುಗು! ಒಂದು-ಎರಡು!"

ಹಗಲುಗಳು ನಿಡಿದಾಗುತ್ತ ಹೋದುವು ಮತ್ತು ಆ ಹಗಲುಗಳನ್ನು ಕಳೆಯುವುದೂ ಕಷ್ಟ ಾಯಿತು. ಅಂಥ ಒಂದು ದಿವಸ ಗಾವ್ರಿಕನನ್ನು ಭೇಟಿ ಮಾಡಲು ಪೇತ್ಯ ಸಮುದ್ರದ ದಡಕ್ಕೆ ೋದ.

೪೩. ಹಾಯಿ

ಅಜ್ಜ ಮರಣಶಯ್ಯೆಯಲ್ಲಿದ್ದ. ಗಾವ್ರಿಕ್ ಈ ವಿಷಯವನ್ನು ಮನಗಂಡಿದ್ದ. ಅಲ್ಲದೆ ಮೋತ್ಯ ುತ್ತು ಅವಳ ತಾಯಿ, ಸಮುದ್ರದ ದಡಕ್ಕೆ ಬಂದು ಗಾವ್ರಿಕನೊಡನೆ ತನ್ನ ಹೆಚ್ಚಿನ ಕಾಲವನ್ನು ಳೆಯುತ್ತಿದ್ದ ಪೇತ್ಯ - ಇವರುಗಳೂ ಕೂಡ ಈ ವಿಷಯವನ್ನು ಅರಿತಿದ್ದರು. ಅಜ್ಜನಿಗೂ ಈ ಷಯ ಗೊತ್ತಾಗಿಹೋಗಿದ್ದಿತು.

ಏಪ್ರಿಲ್ ತಿಂಗಳ ನಸುಬಿಸುಪಾದ ಬಿಸಿಲಿನಲ್ಲಿ ಗುಡಿಸಲಿನ ಹೊರಗೆ ಇಡಲಾಗಿದ್ದ ಒಂದ್ಬ ಬ್ಬಿಣದ ಮಂಚದಮೇಲೆ ಬೆಳಗಿನಿಂದ ಸಂಜೆಯವರೆಗೂ ಅಜ್ಜ ಮಲಗಿರುತ್ತಿದ್ದ. ಪೇತ್ಯ ಬಹು ಾಲದ ಅನಂತರ ಕಾಹಿಲೆ ಕಳೆದಮೇಲೆ ಗಾವ್ರಿಕನನ್ನು ನೋಡಲು ಬಂದ. ಆ ಮೊದಲನೆಯ ಲ ಅಜ್ಜನ ಬಿಳಚಿಕೊಂಡ ಮುಖವನ್ನೂ ದಿಂಬಿನ ಕೆಂಪುಬಣ್ಣದ ಹಿನ್ನೆಲೆಯಲ್ಲಿ ತೆಳುನೀಲಿಯ ವನ ಮುಖಕಾಂತಿಯನ್ನೂ ಕಂಡು ಚಿಂತಾಗ್ರಸ್ತನಾದ.

ಉದ್ದವಾದ ಬಿಳಿಯ ಗಡ್ಡದೊಡನೆ ಕಂಗೊಳಿಸುತ್ತಿದ್ದ ಶುದ್ಧವಾದ ಶಾಂತ ಮುಖದಲ್ಲಿ ಂದು ವಿಶಿಷ್ಟ ಸೌಂದರ್ಯವನ್ನೂ ಘನತೆಯನ್ನೂ ನೋಡಿ ಪೇತ್ಯ ಚಕಿತನಾಗಿದ್ದ. ಆದರೆ ಎಲ್ಲ ಕ್ಕಿಂತಲೂ ಆಶ್ಚರ್ಯಕರವಾಗಿದ್ದುದೆಂದರೆ ಆ ಮುಖ ವಯೋಮಿತಿಯನ್ನು ಮೀರಿ ಕಾಲಮಾನದ ಎಲ್ಲೆಯನ್ನು ದಾಟಿದ್ದುದು.

"ಓ, ಅಜ್ಜ !" ಎಂದ ಪೇತ್ಯ.

ಮುದುಕ ರಕ್ತಹೀನವಾದ ನೇರಿಳೆಬಣ್ಣದ ರೆಪ್ಪೆಯ ಕಣ್ಣುಗಳನ್ನು ಆ ಹುಡುಗನ ಕಡೆಗೆ ತಿರುಗಿಸಿದ. ವಿಶ್ವವಿದ್ಯಾನಿಲಯದ ಪ್ರಾವೇಶಿಕ ಶಾಲೆಗೆ ಸಂಬಂಧಪಟ್ಟ ಸಮವಸ್ತ್ರವನ್ನು ಧರಿಸಿದ್ದ ಹುಡುಗನನ್ನು ಬಹುಕಾಲ ದೃಷ್ಟಿಸಿ ನೋಡಿದ. ಆದರೆ ಆ ನೋಟದಲ್ಲಿ ಅಜ್ಜ ಹುಡುಗನ ಗುರುತು ಹಿಡಿದ ಲಕ್ಷಣಗಳು ಕಂಡುಬರಲಿಲ್ಲ.

"ನಾನು, ಪೇತ್ಯ. ಕನೆತ್ನಾಯ ರಸ್ತೆಯ ಕುಲಿಕೋವೊ ಬಯಲಿನ ಮೂಲೆಯ ಮನೆಯವನು ಅಜ್ಜ!"

ಅಜ್ಜ ದೂರದಲ್ಲಿ ಏನನ್ನೋ ದೃಷ್ಟಿಸಿ ನೋಡುವವನಂತೆ ನಿಶ್ಚಲನಾಗಿದ್ದ.

"ನಿನಗೆ ಜ್ಞಾಪಕವಿಲ್ಲವೆ, ಅಜ್ಜ? ಹೋದವರ್ಷ ಸೀಸದ ಮುಳುಗು ಗುಂಡನ್ನು ನೀನ ಮಾಡಿಕೊಟ್ಟೆಯಲ್ಲ, ನನಗೇ ಅಲ್ಲವೆ?" ಪೇತ್ಯ ಕೇಳಿದ.

ದೂರದ ಮೋಡದಂತೆ ನೆನಪಿನ ನೆರಳು ಆ ಮುದುಕನ ಮುಖದಲ್ಲಿ ಮೂಡಿತು. ಬೊಚ್ಚ ಬಾಯಿಯನ್ನು ಪ್ರದರ್ಶಿಸುತ್ತ ಸ್ಪಷ್ಟವಾದ ತಿಳಿವಿನ ಮುಗುಳು ನಗೆಯನ್ನು ಬೀರಿದ.

"ಮುಳುಗು ಗುಂಡು? ಹೌದು, ಸೀಸದ ಮುಳುಗುಗುಂಡು." ಎಂದು ವಿಶೇಷ ಪ್ರಯತ್ ಮಾಡದೆ ಬಹು ಮೃದುವಾಗಿ ಉಚ್ಚರಿಸಿದ. ತುಟಿಗಳನ್ನು ಅಗಿಯುತ್ತ ಪೇತ್ಯನತ್ತ ವಾತ್ಸಲ ಪೂರ್ಣ ನೋಟವನ್ನು ಬೀರಿದ.

"ಇಷ್ಟರಲ್ಲೇ ಎಷ್ಟು ಬೆಳೆದಿದ್ದೀಯೆ. ಬಹಳ ಒಳ್ಳೆಯವ. ಈಗ ಆಡಿಕೋ ಹೋಗ ಮಗು. ಸಮುದ್ರದಡದಮೇಲೆ ಕಲ್ಲುಗಳನ್ನಿಟ್ಟುಕೊಂಡು ಆಟವಾಡುಹೋಗು. ಆದರೆ ನೀರಿ ಎಲ್ಲಿಯಾದರೂ ಬಿದ್ದುಬಿಟ್ಟೀಯೆ, ಜೋಕೆ." ಎಂದ.

ಅಜ್ಜ ಪೇತ್ಯನನ್ನು ಮೊಮ್ಮಗನೆಂದೇ ಭಾವಿಸಿದ್ದಿರಬೇಕು. ಹೊರಗೆ ಹಳದಿಯ ಗಿಡಗಳ ನಡುವೆ ಮಂಡಿಯೂರಿಕೊಂಡು ಓಡಾಡುತ್ತಿದ್ದ ತನ್ನ ಮರುಮಗ ಜೆನೆಚ್ಕನಂತೆಯೇ ಪೇತ ಎಂದು ಅವನ ಮನಸ್ಸಿನಲ್ಲಿ ಸುಳಿದಿರಬೇಕು.

ಆಗಿಂದಾಗ್ಗೆ ಅಜ್ಜ ತನ್ನ ಮನೆಯ ಕಡೆಗೆ ತಲೆಯೆತ್ತಿ ಮೆಚ್ಚುಗೆಯ ನೋಟವನ್ನು ಬೀರು ತ್ತಿದ್ದ. ಟೆರೆಂಟಿಯ ಹೆಂಡತಿ ಮಕ್ಕಳು ಅಲ್ಲಿಗೆ ಬಂದು ವಾಸಿಸಲಾರಂಭಿಸಿದ ಸಮಯದಿಂದ ಅ ಸ್ಥಳವು ಗುರುತು ಸಿಕ್ಕದಷ್ಟು ಮಾರ್ಪಟ್ಟಿದ್ದಿತು. ಕಾರ್ಖಾನೆಯ ಉಪನಗರದ ಒಂದು ಮೂಲ ಯನ್ನೇ ಅಲ್ಲಿಗೆ ಎತ್ತಿತಂದಿಟ್ಟದ್ದಂತೆ ಭಾಸವಾಗುತ್ತಿದ್ದಿತು. ಟೆರೆಂಟಿಯ ಹೆಂಡತಿ ಈಸ್ಟರ್ ಹಬ್ ಕ್ಕಾಗಿ ಮಣ್ಣಿನ ನೆಲವನ್ನು ಸಾರಿಸಿ ಹೊಸದರಹಾಗೆ ಮಾಡಿದ್ದಳು; ಗುಡಿಸಿಲಿನ ಒಳಗೆ ಹೊರ ಎರಡು ಕಡೆಗಳಲ್ಲೂ ಗೋಡೆಗಳಿಗೆ ಸುಣ್ಣವನ್ನು ಹಾಕಿದ್ದಳು. ಪುನರುಜ್ಜೀವನಗೊಳಿಸಿದ ಗುಡಿಸಲಿನ ಕಿಟಕಿಗಳನ್ನು ಸ್ವಚ್ಛಗೊಳಿಸಿ ಅಂಚುಗಳಿಗೆ ನೀಲಿಯ ಬಣ್ಣವನ್ನು ಬಳಿಯ ಲಾಗಿದ್ದಿತು. ಅವು ಬಿಸಿಲಿನಲ್ಲಿ ಬೆಳಗುತ್ತ ನೋಡಲು ಆನಂದಕರವಾಗಿದ್ದುವು.

ಗುಡಿಸಲಿನ ಸುತ್ತ ಐರಿಸ್ ಗಿಡಗಳನ್ನು ಬೆಳೆಸಲಾಗಿದ್ದಿತು. ಅವು ಈಗ ಹಚ್ಚ ಹಸುರಾ ತಮ್ಮ ಕತ್ತಿಯಾಕಾರದ ಎಲೆಗಳಿಂದ ಕಣ್ಣಿಗೆ ಆಹ್ಲಾದಕರವಾಗಿದ್ದುವು. ಇನ್ನೇನು ಅವು ಹೂ ಬಿಡುವ ಸ್ಥಿತಿಯಲ್ಲಿದ್ದುವು. ಆ ಗಿಡಗಳ ನಡುವೆ ಮೋತ್ಯ ತನ್ನ ಬೊಂಬೆಗಳನ್ನು ಕೂರಿಸಿದ್ದಳ ಬೇಸಿಗೆಯ ನಿವಾಸಗಳಲ್ಲಿ ವಾಸಿಸುವ ಶ್ರೀಮಂತ ಮಹಿಳೆಯರು ತನ್ನ ಬೊಂಬೆಗಳು ಎಂ ಮೋತ್ಯ ಭಾವಿಸಿದ್ದಳು.

ಗಾಳದ ಹುರಿಯ ಮೇಲೆ ವಿವಿಧ ವರ್ಣಗಳ ಬಟ್ಟೆಗಳನ್ನು ಒಣಗುಹಾಕಲಾಗಿದ್ದಿತ ಮೋತ್ಯ ತರಕಾರಿ ಗಿಡಗಳ ಮಡಿಗೆ ನೀರನ್ನು ಹಾಕುತ್ತಿದ್ದಳು. ಗಿಡಗಳಿಗೆ ನೀರುಸಿಂಪಡಿಸು ಡಬ್ಬವು ಭಾರವಾಗಿದ್ದುದರಿಂದ ಅದನ್ನು ಎರಡೂ ಕೈಗಳಿಂದ ಬಿಗಿಯಾಗಿ ಹೊಟ್ಟೆಗೆ ಅಮು ಹಿಡಿದುಕೊಂಡಿದ್ದಳು. ಹಿಂದುಗಡೆಯಿಂದ ಅವಳ ತಲೆಯ ಕೂದಲು ಹುಡುಗರ ಕೂದ

ನಂತೆ ಕಾಣಿಸುತ್ತಿದ್ದಿತು. ಎರಡು ಕಂಬಗಳಿಗೆ ಸೇರಿಸಿದ ತಂತಿಗೆ ಕಟ್ಟಿದ್ದ ರುಡ್ಕೊ ನಾಯಿ ಕುಳಿ ನಗುವನ್ನು ಬೀರುತ್ತ ಹಿಂದಕ್ಕೂ ಮುಂದಕ್ಕೂ ನಡೆದಾಡುತ್ತಿದ್ದಿತು. ತರಕಾರಿ ಮಡಿಯ ಬಳಿ ಮಣ್ಣಿನ ಒಲೆಯಿಂದ ಹೊಗೆ ಸುರುಳಿ ಸುರುಳಿಯಾಗಿ ಮೇಲಕ್ಕೇಳುತ್ತಿತ್ತು. ತಳವಿಲ್ಲದ ಒಂದು ಕಬ್ಬಿಣದ ಕೊಡವನ್ನು ಹೊಗೆ ಕೊಳವೆಯಂತೆ ಆ ಒಲೆಗೆ ಸೇರಿಸಲಾಗಿದ್ದಿತು. ಅದರ ಬಾಯಿಯಿಂದ ಹೊಗೆ ಹೊರಕ್ಕೆ ಹೊರಡುತ್ತಿದ್ದಿತು. ಹೊಗೆ ಹತ್ತಿದ ಅಂಬಲಿಯ ವಾಸನೆ ಮೂಗಿಗೆ ಬರುತ್ತಿದ್ದಿತು.

ಮೋತ್ಯಳ ತಾಯಿ ಲಂಗವನ್ನು ಮುದುರಿಕೊಂಡು ನೀರಿನ ಬಾನಿಯ ಬಳಿ ಬಗ್ಗಿಕೊಂಡು ಬಟ್ಟೆ ಒಗೆಯುತ್ತಿದ್ದಳು. ಅವಳ ಸುತ್ತಮುತ್ತ ಸಾಬೂನಿನ ಗುಳ್ಳೆಗಳು ಗಾಳಿಯಲ್ಲಿ ಹಾರಾಡುತ್ತಿದ್ದುವು.

ಇದ್ದಕ್ಕಿದ್ದಹಾಗೆ ಒಂದೊಂದು ಸಲ ಅಜ್ಜ ತನ್ನ ಹಿಂದಿನ ಕಾಲವನ್ನು ಸ್ಮರಿಸಿಕೊಂಡು ಪುನಃ ತಾನು ನಲವತ್ತರ ವಯಸ್ಸಿನಲ್ಲಿದ್ದೇನೆಯೋ ಎಂದು ಭಾವಿಸುತ್ತಿದ್ದ. ಅವನ ಕಲ್ಪನೆಯಲ್ಲಿ ಅಜ್ಜಿ ಈಗತಾನೆ ಗುಡಿಸಿಲಿನ ಗೋಡೆಗಳಿಗೆ ಬಣ್ಣ ಹಾಕಿದ್ದಳು; ಅವನ ಮೊಮ್ಮಗ ಟಿರೆಂಟಿ ಹೂವಿನ ಗಿಡಗಳ ನಡುವೆ ನಾಗಾಲುಗಳಲ್ಲಿ ಹರಿದಾಡುತ್ತಿದ್ದಾನೆ; ಗುಡಿಸಲಿನ ಸೂರಿನ ಮೇಲೆ ಹೊಚ್ಚ ಹೊಸ ಹಾಯಿಯನ್ನು ಸುತ್ತಿಕಟ್ಟಿದ ದೋಣಿಯ ಧ್ವಜಸ್ತಂಭವಿದೆ. ಈಗ ತಾನು ಧ್ವಜಸ್ತಂಭವನ್ನು ಹೆಗಲಿಗೇರಿಸಿಗೊಂಡು ಕೈಯಲ್ಲಿ ಹುಟ್ಟುಗಳನ್ನು ಹಿಡಿದು ಕಂಕುಳುಗಳಲ್ಲಿ ಕೆಂಪುಸೀಸಗಳನ್ನು ಹಚ್ಚಿದ ಮರದ ಚುಕ್ಕಾಣಿ ಹಲಗೆಯನ್ನು ಇರುಕಿಸಿಕೊಂಡು ಕಡಲ ದಡಕ್ಕೆ ಹೊರಡುವವನಿದ್ದಾನೆ. ಅಲ್ಲಿ ಇನ್ನೇನು ದೋಣಿಯನ್ನು ಸಿದ್ಧಪಡಿಸಿ ಹಾಯಿಯನ್ನು ಏರಿಸುವವನಿದ್ದಾನೆ.

ಆದರೆ ಹಿಂದಿನ ದಿನಗಳ ಜೀವನದ ಕನಸು ಕೇವಲ ಅಲ್ಪ ಕಾಲ ಉಳಿಯುತ್ತಿದ್ದಿತು ಸಂಸಾರ ತಾಪತ್ರಯದ ಚಿಂತೆ ಬಂದು ಮುದುಕನ ಹೃದಯ ಕುಗ್ಗಿಹೋಗುತ್ತಿದ್ದಿತು. ಬಹಳ ಪ್ರಯಾಸದಿಂದ ಮೇಲಕ್ಕೆದ್ದು ಕುಳಿತು ಗಾವ್ರಿಕನನ್ನು ಕೂಗುತ್ತಿದ್ದ.

"ಏನು ಬೇಕು, ಅಜ್ಜ?"

ಬಹು ಹೊತ್ತು ತುಟಿಗಳನ್ನು ಅಗಿಯುತ್ತಿದ್ದು ಮಾತನಾಡಲು ಶಕ್ತಿ ಬಂದಂತಾದಾಗ ದೋಣಿ, ದೋಣಿಯನ್ನು ಯಾರೂ ಹೊತ್ತುಕೊಂಡು ಹೋಗಿಲ್ಲವಲ್ಲ?" ಎರಡು ಹುಬ್ಬುಗಳನ್ನೂ ಪ್ಪಾರು ಚಾವಣಿಯಂತೆ ಮೇಲಕ್ಕೆತ್ತುತ್ತ ನಿಧಾನವಾಗಿ ಪ್ರಶ್ನಿಸುತ್ತಿದ್ದ.

"ಸುರಕ್ಷಿತವಾಗಿದೆ, ಅಜ್ಜ. ಮಲಗಿಕೋ, ಆಯಾಸಮಾಡಿಕೊಳ್ಳಬೇಡ." ಗಾವ್ರಿಕ್ ಉತ್ತರ ಕೊಡುತ್ತಿದ್ದ

"ಅದಕ್ಕೆ ತಾರು ಬಣ್ಣ ಬಳಿಯಬೇಕಾಗಿದ್ದಿತು."

"ನಾನು ತಾರು ಬಣ್ಣವನ್ನು ಬಳಿಯುತ್ತೇನೆ, ಚಿಂತಿಸಬೇಡ; ಮಲಗಿಕೋ."

ವಿಧೇಯನಂತೆ ಅಜ್ಜ ಪುನಃ ಮಲಗುತ್ತಿದ್ದ. ಆದರೆ ಒಂದು ನಿಮಿಷ ಕಳೆದ ಬಳಿಕ ಮೋತ್ಯನ್ನು ಕರೆಯುತ್ತಿದ್ದ.

"ಅಲ್ಲಿ ಏನುಮಾಡುತ್ತಿದ್ದೀಯೆ ಕಂದ?"

"ಆಲುಗಡ್ಡೆಗಳಿಗೆ ನೀರು ಹಾಕುತ್ತಿದ್ದೇನೆ."

"ಬುದ್ಧಿವಂತ ಹುಡುಗಿ. ಅವುಗಳಿಗೆ ಚೆನ್ನಾಗಿ ನೀರುಹಾಕು. ಕಳೆಗಳನ್ನು ಕಿತ್ತುಹಾಕು

ತ್ತಿದ್ದೀಯಲ್ಲವೆ?"

"ಹೌದು, ಅಜ್ಜ"

"ಇಲ್ಲದೆ ಇದ್ದರೆ ಕಳೆಗಳು ತುಂಬಿಕೊಂಡು ಆಲೂಗಡ್ಡೆಗಳು ಸರಿಯಾಗಿ ಬೆಳೆಯುವುದಿಲ್ಲ ಆಗಲಿ ಈಗ ಹೋಗಿ ಬೊಂಬೆಗಳ ಜತೆಯಲ್ಲಿ ಸ್ವಲ್ಪ ಹೊತ್ತು ಆಟವಾಡು. ಸ್ವಲ್ಪಹೊತ್ತು ವಿಶ್ರಮಿಸಿಕೋ."

ಪುನಃ ಅರ್ಧಮೇಲಕ್ಕೆದ್ದಿದ್ದ ಅಜ್ಜ ಹಿಂದಕ್ಕೆ ಹಾಸಿಗೆಯ ಮೇಲೆ ಧೊಪ್ಪನೆ ಬಿದ್ದುಬಿಡುತ್ತಿದ್ದ

ಅಷ್ಟು ಹೊತ್ತಿಗೆ ರುಡ್ಕೊ ಬಗುಳಲಾರಂಭಿಸುತ್ತಿತ್ತು. ಮುದುಕ ಪೊದೆಯಂಥ ಕಣ್ಣು ಗಳನ್ನು ಕೋಪದಿಂದ ಅತ್ತಕಡೆಗೆ ತಿರುಗಿಸಿ "ಬಾಯಿ ಮುಚ್ಚು, ರುಡ್ಕೊ! ಸುಮ್ಮನೆ ಬಿದ್ದಿರು!" ಎನ್ನುತ್ತಿದ್ದ. ನಾಯಿಯನ್ನು ಅಪ್ಪಣೆಯ ದನಿಯಲ್ಲಿ ಎಚ್ಚರಿಸುತ್ತಿದ್ದೇನೆಂದು ಅಜ್ಜನ ಭಾವ ನೆಯಾಗಿತ್ತು. ಆದರೆ ನಿಜವಾಗಿಯೂ ಅವನ ಬಾಯಿಂದ ಹೊರಬೀಳುತ್ತಿದುದು ಗೊಣಗುಟ್ಟು ಶಬ್ದಮಾತ್ರ.

ತುಂಬ ಹೊತ್ತು ದೂರದಲ್ಲಿ ಏನನ್ನೋ ದೃಷ್ಟಿಸುತ್ತ ನಿಶ್ಚಲವಾಗಿ ಅಜ್ಜ ಮಲಗಿರುತ್ತಿದ್ದ ದಡದ ಮೇಲಿನ ಎರಡು ಗುಡ್ಡಗಳ ನಡುವೆ ಹಲವಾರು ಬೆಸ್ತರ ದೋಣಿಗಳ ನೀಲಿಯ ತ್ರಿಕೋಣಾ ಕಾರದ ಹಾಯಿಗಳನ್ನು ಅವನು ಕಾಣುತ್ತಿದ್ದ. ಆ ಹಾಯಿಗಳನ್ನು ನೋಡುತ್ತಿದಂತೆ ಅ ತನ್ನಲ್ಲಿ ತಾನೆ ಮಾತನಾಡಿಕೊಳ್ಳುತ್ತಿದ್ದ.

"ಹೌದು, ನಿಜ. ಗಾಳಿಗೆ ಹಾಯಿಯೆಂದರೆ ಪ್ರೀತಿ. ಆಹಾ ಒಂದು ಸ್ವಂತ ಹಾಯಿ ಇದ್ದವನೆ ಜಗತ್ತಿನಲ್ಲಿ ಭಾಗ್ಯಶಾಲಿ. ಹಾಯಿ ಎಲ್ಲಿಗೆಂದರೆ ಅಲ್ಲಿಗೆ ಕರೆದೊಯ್ಯುವುದು. ಹಾಯಿ ಇದ್ದರೆ ನಿಮಗೆ ಇಷ್ಟವಾದ ಸ್ಥಳಕ್ಕೆ ಹೋಗಬಹುದು. ದೊಫಿನೋವ್ಕಗೆ ಬೇಕಾದರೂ ಹೋ ಬಹುದು, ಲಸ್ಟ್‌ಡಾರ್ಫ್‌ಗಾದರೂ ಹೋಗಬಹುದು. ಹಾಯಿ ನಿಮ್ಮನ್ನು ಒಚಕೊವ್‌ಗಾಗ ಖೆರನ್ಸ್‌ಗಾಗಲಿ ಅಥವ ಎವ್ಪತೋರಿಯಗೇ ಆಗಲಿ ಕರೆದುಕೊಂಡು ಹೋಗಿ ಬಿಡುವುದು. ಹಾ ಯಿಲ್ಲದೆ ಕೇವಲ ಹುಟ್ಟುಗಳನ್ನು ಮಾತ್ರ ಹೊಂದಿದ್ದರೆ ಏನು ಪ್ರಯೋಜನ! ರಂಗನ ಮು ಸಿಂಗನೆ! ಇಲ್ಲಿಂದ ಬಾಲ್ಶಾಯಿಫಾಂಟಾನಿಗೆ ಹೋಗಬೇಕಾದರೆ ನಾಲ್ಕುಗಂಟೆಗಳ ಕಾಲ ಪೂ ರಟ್ಟೆ ನೋಯಿಸಿಕೊಳ್ಳಬೇಕು. ಪುನಃ ಹಿಂದಕ್ಕೆ ಬರಬೇಕಾದರೆ ಇನ್ನೊಂದು ನಾಲ್ಕು ಗಂಟೆಗ ಮೀನುಗಾರರಿಗೆ ಹಾಯಿ ಅತ್ಯಗತ್ಯವಾದುದೆಂಬುದರಲ್ಲಿ ಸಂಶಯವೇ ಇಲ್ಲ. ಹಾಯಿಯಿಲ್ಲ ಸಮುದ್ರದಮೇಲೆ ದೋಣಿ ಇಳಿಸುವುದರ ಪ್ರಯೋಜನವೇನು? ನಾಚಿಕೆಯಾಗುತ್ತದೆ ಅ ಆತ್ಮವಿಲ್ಲದ ಮನುಷ್ಯನಂತೆ ಹಾಯಿಯಿಲ್ಲದ ದೋಣಿ!"

ಅಜ್ಜ ಯಾವಾಗ ಯೋಚಿಸಿದರೂ ಅದು ಹಾಯಿಯ ವಿಚಾರವೇ ಆಗಿರುತ್ತಿತ್ತು. ಒ ರಾತ್ರಿ ಟೆರೆಂಟಿ ಮನೆಯವರನ್ನು ನೋಡಿಕೊಂಡು ಹೋಗಬೇಕೆಂದು ಒಂದೇ ಒಂದು ನಿಮಿಷ ಕ ಬಂದಿದ್ದ. ಟೆರೆಂಟಿ ಮಕ್ಕಳಿಗೆ ಕೆಲವು ಬಹುಮಾನಗಳನ್ನು ತಂದಿದ್ದ. ಹೆಂಡತಿಗೆ ಸಾವ ಗಳಿಗಾಗಿ ಮೂರು ರೂಬಲ್‌ಗಳನ್ನು ಕೊಟ್ಟ. ಇನ್ನೊಂದೆರಡು ದಿನಗಳಲ್ಲಿ ಹೊಸ ಹಾಯಿಯ ದೋಣಿಗೆ ಹೊಂದಿಸಿಕೊಡುವುದಾಗಿ ಹೇಳಿದ. ಆಗಿನಿಂದ ಅಜ್ಜ ಗೆಲುವಾದ. ಹೊಸಹಾಯಿ ಕನಸು ಅಜ್ಜನ ಮನಸ್ಸನ್ನು ಯಾವಾಗಲೂ ತುಂಬಿರುತ್ತಿದ್ದಿತು. ಅದು ಗಟ್ಟಿಮುಟ್ಟಾಗಿ, ಯಾಗಿ, ಹೊಸ ಗಾಳಿಯಲ್ಲಿ ಪಟಪಟನೆ ಹೊಡೆಯುತ್ತ ತನ್ನ ಕಣ್ಣೆದುರಿಗೆ ವಾಸ್ತವ

ರುವಂತೆ ಅವನಿಗೆ ಕಾಣಿಸುತ್ತಿತ್ತು. ಒಂದೇ ಸಮನೆ ಹಾಯಿಯ ವಿಷಯವನ್ನು ಆಲೋಚಿಸಿ ಲೋಚಿಸಿ ಆಯಾಸದಿಂದ ಅರ್ಧಪ್ರಜ್ಞೆಯ ಅವಸ್ಥೆಯಲ್ಲಿ ಬಿದ್ದುಬಿಡುತ್ತಿದ್ದ. ತಾನೆಲ್ಲಿದ್ದೇನೆ, ನು ಮಾಡುತ್ತಿದ್ದೇನೆ ಎಂಬುದು ಅವನಿಗೆ ಆಗ ಗೊತ್ತಾಗುತ್ತಿರಲಿಲ್ಲ. ಆದರೆ ಅವನ ಇಂದ್ರಿಯ ಳು ಮಾತ್ರ ನಿಷ್ಕ್ರಿಯವಾಗಿರುತ್ತಿರಲಿಲ್ಲ.

ಕ್ರಮಕ್ರಮವಾಗಿ ತಾನು ಯಾರು ಯಾರಲ್ಲ ಎಂಬ ವಿವೇಚನೆ ಮಾಯವಾಗಲಾರಂಭಿಸು ತ್ತು. ಆ ಸ್ಥಿತಿಯಲ್ಲಿ ಯಾವ ಶಬ್ದವಾಗಲಿ, ಪರಿಮಳವಾಗಲಿ, ಬಣ್ಣವಾಗಲಿ ಅದರಲ್ಲಿ ತಾನೂ ಮುಳುಗಿ ಹೋಗುತ್ತಿದ್ದ. ತಾನೇ ಅದು ಎಂದು ತಿಳಿಯಲಾರಂಭಿಸುತ್ತಿದ್ದ. ಕೋಸುಗಡ್ಡೆಯ ಮೇಲೆ ಕುಳಿತಿದ್ದ ಚಿಟ್ಟೆ ಇವನ ಬಳಿ ಹಾರಾಡಲಾರಂಭಿಸಿತು. ಅದರ ದಂತದಂಥ ರೆಕ್ಕೆಗಳ ಮೇಲೆ ನಿಂಬೆಹಣ್ಣಿನ ರೇಖೆಗಳು ಮೂಡಿದ್ದುವು. ಅದು ಅಜ್ಜನ ಬಳಿ ಬಂದಾಗ ಅಜ್ಜನೂ ಕೂಡ ಚಿಟ್ಟೆಯಾಗಿ ಬಿಟ್ಟ, ಅದರ ಹಾರಾಟವೂ ಕೂಡ ತಾನೇ ಆಗಿದ್ದ.

ಸಮುದ್ರದ ಅಲೆ ದಡದ ಕಲ್ಲುಗಳ ಮೇಲೆ ಅಪ್ಪಳಿಸಿತು. ಅದರ ಮಧುರವಾದ ಶಬ್ದವೂ ತಾನೇ ಆದಂತೆ ಅಜ್ಜ ಭಾವಿಸಿದ. ಗಾಳಿಯಲ್ಲಿ ಹಾರಿಬಂದ ಸಮುದ್ರದ ನೀರಿನ ತುಂತುರುಗಳಿಂದ ನೆನೆದ ಅವನ ತುಟಿ ಉಪ್ಪುಪ್ಪಾಯಿತು. ಅವನೇ ಗಾಳಿ ಮತ್ತು ಉಪ್ಪು.

ಒಂದು ಮಗು ಹಳದಿಯ ಹೂವಿನ ಗಿಡಗಳ ನಡುವೆ ಕುಳಿತಿತ್ತು. ಆ ಕ್ಷಣ ತಾನೇ ಆ ಮಗುವಾಗಿದ್ದ. ಮಗುವು ತೆಗೆದುಕೊಳ್ಳಲು ಕೈನೀಡಿದ್ದ ಆ ಹಳದಿಯ ಹೂವುಗಳೂ ತಾನೇ.

ತಾನೇ ಹಾಯಿ, ತಾನೇ ಸೂರ್ಯ, ಸಮುದ್ರ......ಸಮಸ್ತವೂ ತಾನೇ ತಾನಾದ.

ಆದರೆ ಅಜ್ಜ ಹಾಯಿಯನ್ನು ಕಣ್ಣಿನಿಂದ ನೋಡುವವರೆಗೆ ಬದುಕಲಿಲ್ಲ.

ಒಂದು ದಿನ ಬೆಳಗ್ಗೆ ಪೇತ್ರ್ಯ ಗಾವ್ರಿಕನನ್ನು ನೋಡುವ ಉದ್ದೇಶದಿಂದ ಗುಡಿಸಿಲಿನ ಬಳಿ ಬಂದಾಗ ಅಲ್ಲಿ ಹೊರಗೆ ಅಜ್ಜ ಮಲಗಿರುವುದನ್ನು ಕಾಣಲಿಲ್ಲ. ಅವನ ಮಂಚ ಇದ್ದ ಕಡೆ ಒಂದು ಬೆಂಚನ್ನು ಇಡಲಾಗಿದ್ದಿತು. ಆ ಸ್ಥಳದಲ್ಲಿ ತನ್ನ ಕಪ್ಪುಕೊರಳಿಗೆ ಕೀವ್‌ಶಿಲುಬೆಯನ್ನು ನೇತು ಹಾಕಿಕೊಂಡಿದ್ದ ಎತ್ತರವಾದ ಮುದುಕನೊಬ್ಬ ಒಂದು ಹಲಗೆಯನ್ನು ಹತ್ತರಿ ಹೊಡೆಯುತ್ತಿದ್ದ. ಉದ್ದವಾದ ಮರದ ಹತ್ತರಿ ಹುಡಿಯು ಸುರುಳಿಸುರುಳಿಯಾಗಿ ಸುಲುಚಿಕೊಂಡು ಅಲ್ಲಿ ಬಿದ್ದಿತು. ಆ ಬಡಗಿಯ ಬಳಿಯಲ್ಲಿ ಬಿಗಿಯಾದ ಬೂಡ್ಸುಗಳನ್ನೂ ಅಷ್ಟೇನೂ ಆಕರ್ಷಕವಲ್ಲದ ಹೊಸ ಚೀಟಿ ಬಟ್ಟೆಯ ಉಡುಪನ್ನೂ ಧರಿಸಿ ಮೋತ್ಯ ನಿಂತಿದ್ದಳು.

"ಅಜ್ಜ ಇಂದು ಸತ್ತುಹೋದರು. ನೀನು ನೋಡುತ್ತೀಯಾ ?" ಹುಡುಗನ ಬಳಿಗೆ ಬಂದು ಪ್ರಶ್ನಿಸಿದಳು.

ತನ್ನ ತಣ್ಣನೆಯ ಕೈಗಳಿಂದ ಪೇತ್ಯನ ಕೈಯನ್ನು ಹಿಡಿದುಕೊಂಡು ಗುಡಿಸಿಲಿನೊಳಕ್ಕೆ ಕರೆದುಕೊಂಡುಹೋದಳು. ನಡೆಯುವಾಗ ಎಲ್ಲಿ ತನ್ನ ಬೂಡ್ಸು ಶಬ್ದ ಮಾಡುವುದೋ ಎಂದು ಎಚ್ಚರಿಕೆಯಿಂದ ಹೆಜ್ಜೆ ಹಾಕಿದಳು.

ಭಾರದಿಂದ ಕುಗ್ಗುತ್ತಿದ್ದ ಅದೇ ಮಂಚದ ಮೇಲೆ ಅಜ್ಜನ ದೇಹ ಮಲಗಿತ್ತು. ಕಣ್ಣುಗಳು ಮುಚ್ಚಿದ್ದುವು, ಅಲ್ಲದೆ ಉಬ್ಬಿಕೊಂಡಿರುವಂತೆ ತೋರುತ್ತಿದ್ದುವು. ಗದ್ದವನ್ನು ಸೇರಿಸಿ ಒಂದು ಕರ ವಸ್ತ್ರವನ್ನು ಕಟ್ಟಿತ್ತು. ಅವನ ದೊಡ್ಡ ಕೈಗಳನ್ನು ಮಡಿಸಿ ಎದೆಯಮೇಲಕ್ಕೆ ಇರಿಸ ಲಾಗಿದ್ದಿತು. ಕೈಮುಗಿದಿರುವಂತೆ ಹಸ್ತಗಳನ್ನು ಜೋಡಿಸಲಾಗಿದ್ದಿತು. ಅದರ ಮುಂದೆ ಸಂತ

ನಿಕೊಲಾಸನ ಮೂರ್ತಿಯಿದ್ದಿತು. ಒಂದು ಹಸ್ತದ ಮೇಲೆ ಹಳದಿಯ ಸಣ್ಣ ಮೇಣದ ಬ
ಯಿದ್ದಿತು. ಚೆನ್ನಾಗಿ ತೊಳೆದು ಶುಚಿಮಾಡಿದ್ದ ಕಿಟಕಿಯ ಮೂಲಕ ಪ್ರಕಾಶಮಾನವಾ
ಸೂರ್ಯನ ಬೆಳಕು ಗುಡಿಸಲಿನ ಒಳಕ್ಕೆ ಬಿದ್ದಿದ್ದುದರಿಂದ ಆ ಬೆಳಕಿನಲ್ಲಿ ಮೇಣದ ಬತ್ತಿ
ಉರಿಯು ತಟ್ಟನೆ ಕಾಣಿಸುತ್ತಿರಲಿಲ್ಲ. ಮೇಣದಬತ್ತಿಯ ಮೇಲುಭಾಗದಲ್ಲಿ ಮೇಣ ಕರಗಿ ಸ
ದಾಗಿ ಕುಳಿಯಾಗಿದ್ದಂತೆ ತೋರುತ್ತಿತ್ತು. ಗಾಳಿಯಲೆಯಂತೆ ಉರಿಯು ಕಪ್ಪು ಕುಡಿಯನ್ನ
ಸುತ್ತಿಕೊಂಡಿದ್ದುದನ್ನು ಕಾಣಬಹುದಾಗಿದ್ದಿತು.

ಎರಡು ದಿವಸಗಳ ಬಳಿಕ ಅಜ್ಜನ ದೇಹವನ್ನು ಸಮಾಧಿಮಾಡಲಾಯಿತು.

ಶವಸಂಸ್ಕಾರದ ಹಿಂದಿನ ರಾತ್ರಿ ಟಿರೆಂಟಿ ಬಂದಿದ್ದ. ಆತನಿಗೆ ಅಜ್ಜನ ಮರಣದ ವಿಷ
ಮೊದಲು ಗೊತ್ತಿರಲಿಲ್ಲ. ಅವನು ಹೆಗಲಿನ ಮೇಲೆ ದೊಡ್ಡದೊಂದು ಗಂಟನ್ನು ಹೊತ್ತು ತಂದಿದ್ದ
ತಾನು ಮಾತುಕೊಟ್ಟಿದ್ದಂತೆ ಟಿರೆಂಟಿ ಹಾಯಿಯನ್ನು ತೆಗೆದುಕೊಂಡುಬಂದಿದ್ದ. ಅದನ್ನು ಒಂದ
ಮೂಲೆಯಲ್ಲಿ ಹಾಕಿ ಬಣ್ಣ ಹಾಕದೆ ಇದ್ದ ಪೀತದಾರು ಮರದ ಶವದ ಪೆಟ್ಟಿಗೆಯಲ್ಲಿಟ್ಟಿದ್ದ ಅಜ್ಜ
ದೇಹವನ್ನು ಒಂದುಕ್ಷಣ ನೋಡುತ್ತ ನಿಂತುಕೊಂಡ. ಅನಂತರ ಶಿಲುಬೆಯ ಸಂಜ್ಞೆಯನ್ನ
ಮಾಡದೆ ಆ ದೇಹದ ಗಟ್ಟಿಯಾದ ತಣ್ಣನೆಯ ತುಟಿಗಳ ಮೇಲೆ ಮುತ್ತಿಕ್ಕಿ ಮಾತನಾಡದೆ ಅಲ್ಲಿಂ
ಹೊರಟುಬಿಟ್ಟ.

ಗಾವ್ರಿಕ್ ಮಾಲಿಫಾಂಟಾನ್‌ವರೆಗೆ ಟಿರೆಂಟಿಯ ಜತೆಯಲ್ಲಿ ನಡೆದುಹೋದ. ಟಿರೆಂಟಿ ಶ
ಸಂಸ್ಕಾರದ ವಿಷಯವಾಗಿ ಕೆಲವುಸಲಹೆಗಳನ್ನು ಕೊಟ್ಟ. ಶವಸಂಸ್ಕಾರ ಸಮಾರಂಭದಲ್ಲಿ ಅವನ
ಹಾಜರಿರುವುದು ಸಾಧ್ಯವಿರಲಿಲ್ಲ ಎಂಬುದು ಸ್ವಯಂವೇದ್ಯವಾಗಿತ್ತು. ಅನಂತರ ಗಾವ್ರಿಕನ ಕ
ಕುಲುಕಿ ಟಿರೆಂಟಿ ಕತ್ತಲೆಯಲ್ಲಿ ಮಾಯವಾದ.

ನಸುಹೊಂಬಣ್ಣದ ಮೀಸೆ ಬಿಟ್ಟಿದ್ದ ನಾಲ್ವರು ಬೆಸ್ತರು ಹಗುರವಾದ ಮುಚ್ಚಳವಿಲ್ಲ
ಶವದ ಪೆಟ್ಟಿಗೆಯನ್ನು ಹೆಗಲುಗಳ ಮೇಲೆ ಹೊತ್ತುಕೊಂಡು ನಡೆದರು. ಮುಂದುಗಡೆಯಲ್ಲಿ ಶ
ಸಂಸ್ಕಾರದ ನಿರ್ವಾಹಕನು ಸಂಸ್ಕಾರ ಸಮಯದ ಹಳೆಯ ಸಮವಸ್ತ್ರವನ್ನು ತೊಟ್ಟು ಹೆಗಲಿ
ಮೇಲೆ ಒರಟಾದ ಒಂದು ಶಿಲುಬೆಯನ್ನು ಹೊತ್ತುಕೊಂಡು ನಡೆದ. ಅವನ ಹಿಂದುಗಡೆ ಸ್ನಾ
ಮಾಡಿ ಒಳ್ಳೆಯ ಬಟ್ಟೆಯನ್ನು ಧರಿಸಿ ತಲೆ ಬಾಚಿಕೊಂಡ ಗಾವ್ರಿಕ್ ನಡೆದುಹೋಗುತ್ತಿದ್ದ
'ಕೊಲಿವೊ' ಭಕ್ಷ್ಯವಿದ್ದ ಪಾತ್ರೆಯನ್ನು ಟವಲ್ಲಿನ ಮೇಲೆ ಅವನು ಇಟ್ಟುಕೊಂಡಿದ್ದ. ಶವದ ಪೆಟ
ಗೆಯ ಹಿಂದುಗಡೆಯಲ್ಲಿ ಮೋತ್ಯಳ ತಾಯಿ ಕಂಕುಳಲ್ಲಿ ಜೆನೆಚ್ಕನನ್ನು ಎತ್ತಿಕೊಂಡು ನಡೆದುಹೋಗ
ತ್ತಿದ್ದಳು. ಅವಳ ಜತೆಯಲ್ಲಿ ಪೇತ್ಯ, ಮೋತ್ಯ ಮತ್ತು ಕೆಲವು ನೆರೆಹೊರೆಯ ಬೆಸ್ತರು ತಮ
ಭಾನುವಾರದ ಉಡುಪಿನಲ್ಲಿದ್ದರು. ಹೊರಟಾಗ ಅವರು ಎಂಟು ಜನ ಮಾತ್ರವಾಗಿದ್ದರು
ಆದರೆ ಶ್ಮಶಾನಯಾತ್ರೆಯ ಈ ಮೆರವಣಿಗೆ ಸಮಾಧಿಭೂಮಿಯ ಹತ್ತಿರ ಸೇರಿದಂತೆಲ್ಲ ಗುಂಪ
ದೊಡ್ಡದಾಗುತ್ತ ನಡೆಯಿತು.

ಪೋಲೀಸ್‌ಠಾಣೆಯಲ್ಲಿ ಏಟುತಿಂದು ಸತ್ತ ಮುದುಕನ ಶವಸಂಸ್ಕಾರದ ಸುದ್ದಿ ಲಾಂಗರಾನ
ನಿಂದ ಲಸ್ಟ್‌ಡಾರ್ಫ್‌ವರೆಗೆ ಒಡೆಸ್ಸ ಸಮುದ್ರದ ತೀರದುದ್ದಕ್ಕೂ ಅದಾವ ರೀತಿಯಲ್ಲಿ ಹರಡಿತೊ
ದೇವನೇ ಬಲ್ಲ! ಮಾಲಿ ಫಾಂಟಾನ್, ಸ್ರೆಡ್ನಿ ಫಾಂಟಾನ್, ವಾಲ್ಟುಖ್, ಆರ್ಕೇಡಿಯ, ಜೊಲೆ
ತೊಯಿಬರ್ಗ್—ಮೊದಲಾದ ಎಲ್ಲ ಕಡೆಗಳಿಂದಲೂ ಬೆಸ್ತರ ಕುಟುಂಬಗಳೂ ಗುಂಪುಗಳ

ಟ್ಸೊಟ್ಸಿಗೆ ಸಮುದ್ರದಡದ ಗಲ್ಲಿಗಳಿಂದ ಪ್ರವಾಹದಂತೆ ಬಂದು ಸೇರಲಾರಂಭಿಸಿದುವು. ದಟ್ಟ ರಿದ್ರನಾದ ಅಜ್ಜನ ಶವವನ್ನು ಈಗ ಸುಮಾರು ಮುನ್ನೂರು ಜನಗಳ ಗುಂಪು ಮೌನದಿಂದ ಂಬಾಲಿಸುತ್ತಿದ್ದಿತು.

ಆಗ ಏಪ್ರಿಲ್ ತಿಂಗಳ ಕೊನೆಯಾಗಿದ್ದಿತು. ಮಳೆ ಮೋಡ ಕೂಡಿಕೊಳ್ಳುತ್ತಿದ್ದಿತು. ಬ್ಬಚ್ಚಿಗಳು ಧೂಳಿನಲ್ಲಿ ರೆಕ್ಕೆಯನ್ನು ಬಡಿಯುತ್ತ ಸ್ನಾನಮಾಡುತ್ತಿದ್ದುವು. ತೋಟಗಳ ಮೇಲು ಡೆ ಗಗನವು ತಾರೆಣ್ಣೆಯಂತೆ ಕಪ್ಪಗಾಗಿದ್ದಿತು. ಆ ಕಪ್ಪು ಬಾನಿನ ಹಿನ್ನೆಲೆಯಲ್ಲಿ ಮರಗಳ ಸುರು ಎಲೆಗಳು ಮಳೆಯನ್ನು ನಿರೀಕ್ಷಿಸುತ್ತ ಬಳುಕುತ್ತಲಿದ್ದುವು. ಹುಂಜಗಳು ಮನೆಯ ಹಿತ್ತಿಲು ಳಲ್ಲಿ ನಿದ್ದೆಯಲ್ಲಿ ಕೂಗುವಂತೆ ಕೂಗಿದುವು. ಮಂದವಾದ ತೇವದಿಂದೊಡಗೂಡಿದ್ದ ಮೇಘ ಳು ಸೂರ್ಯರಶ್ಮಿಯನ್ನು ತಡೆಹಿಡಿದಿದ್ದುವು.

ಸಮಾಧಿಭೂಮಿಯ ಬಳಿ ಕಾರ್ಖಾನೆಯ ಜನರೂ ರೈಲು ಕಾರ್ಖಾನೆಯ ಜನರೂ ಮೆರ ಣಿಗೆಯನ್ನು ಕೂಡಿಕೊಂಡರು. ಈ ಕೂಲಿಗಾರರು ಚುಮ್ಕ, ಸಖಾಲಿನ್‌ಚಿಕ್, ಒಡೆಸ್ಸ ಾಮಾನುಗಳ ರೈಲು ನಿಲ್ದಾಣ, ಮೋಲ್ದವನ್ಕ, ಕಾರ್ಖಾನೆಯ ಉಪನಗರ ಮತ್ತು ದೂರನಗರ ಳೇ ಮೊದಲಾದ ಎಲ್ಲ ಕಡೆಗಳಿಂದಲೂ ಬಂದಿದ್ದರು. ಸಮಾಧಿ ಭೂಮಿಯ ಹೊರಬಾಗಿಲುಗಳ ೂಲಕ ಪ್ರವಾಹದಂತೆ ಒಳಕ್ಕೆ ಬರುತ್ತಿದ್ದ ಭಾರಿ ಗುಂಪನ್ನು ನೋಡಿ ಅಲ್ಲಿ ಕೆಲಸದ ಮೇಲಿದ್ದ ೀಲೀಸಿನವರಿಗೆ ಅತ್ಯಾಶ್ಚರ್ಯವಾಯಿತು.

ನಗರದಲ್ಲಿ ಆಯಾ ದರ್ಜೆಯ ಜನರಿಗೆ ಬೇರೆ ಬೇರೆ ನಿವಾಸಸ್ಥಾನಗಳಿದ್ದಂತೆಯೇ ಸಮಾಧಿ ೂಮಿಯಲ್ಲೂ ಕೂಡ ಸತ್ತವರ ಅಂತಸ್ತುಗಳಿಗೆ ತಕ್ಕಂತೆ ಸಮಾಧಿ ಭೂಮಿಯನ್ನು ಬೇರ್ಪಡಿಸ ಾಗಿದ್ದಿತು. ಮುಖ್ಯರಸ್ತೆ, ಆರಾಧನ ಮಂದಿರದ ಚೌಕ, ಪೇಟೆ, ಸಾಲುಮರಗಳ ಬೀದಿ, ತವರ ಸಾಲುಗಳು ಎಂಬುದಾಗಿ ವಿಭಾಗಿಸಲಾಗಿದ್ದಿತು. ಐಶ್ವರ್ಯದ ಮುಂದೆ ಸಾವು ಕೂಡ ರ್ಬಲವೂ ನಿಸ್ಸಹಾಯಕವೂ ಆಗಿದ್ದಿತು. ಸತ್ತಮೇಲೂ ಕೂಡ ಮನುಷ್ಯ ದರಿದ್ರಇಲ್ಲವೇ ಧನ ಂತನಾಗಿ ಉಳಿಯುತ್ತಿದ್ದ.

ಮರಗಳ ನೆರಳುಗಳು ಬೀಳುತ್ತಿದ್ದ ಗೋರಿಗಳ ರಸ್ತೆಯಲ್ಲಿ ಅಮೃತ ಶಿಲೆಯ, ಕರಿಯ ಕಲ್ಲಿನ ಮಾನುಗಳ ಸಮಾಧಿಯ ಕಟ್ಟಡಗಳನ್ನು ದಾಟಿಕೊಂಡು ಮುಂದೆ ಹೋದರು. ಆ ಸಮಾಧಿಯ ಟ್ಟಡಗಳು ಚಿಕ್ಕವಾಗಿದ್ದರೂ ಅಲ್ಲಿ ವೈಭವ ಪ್ರದರ್ಶನಕ್ಕೆ ಏನೂ ಕೊರತೆ ಇರಲಿಲ್ಲ. ಆ ಕಟ್ಟ ಗಳ ಹಿಂಭಾಗಕ್ಕೆ ಕಬ್ಬಿಣದ ಬೇಲಿಯನ್ನು ಹಾಕಲಾಗಿದ್ದಿತು. ಆ ಬೇಲಿಯ ಆವರಣಗಳಲ್ಲಿ ರ್ಮುಖದ ಕಲ್ಲಿನ ದೇವದೂತರುಗಳು ತಮ್ಮ ರೆಕ್ಕೆಗಳನ್ನು ಇಳಿಸಿಕೊಂಡು ನಿಂತಿದ್ದರು. ವುಗಳ ಸುತ್ತ ಮರ್ಟಲ್ ಮತ್ತು ಸೈಪ್ರೆಸ್ ವೃಕ್ಷಗಳ ಅಚ್ಚಹಸುರು ಹರಡಿದ್ದಿತು.

ಈ ಭಾಗದ ಒಂದೊಂದು ನಿವೇಶನವನ್ನೂ ವಿಶೇಷವಾಗಿ ಹಣಸುರಿದು ಕೊಳ್ಳಲಾಗಿತ್ತು. ಶ್ವರ್ಯವಂತರ ಮತ್ತು ಕುಬೇರರ ಪೀಳಿಗೆಯವರು ಅವುಗಳ ಒಡೆಯರಾಗಿದ್ದರು.

ಗುಂಪು ಈ ಧನಿಕರ ಮತ್ತು ಲಕ್ಷ್ಮೀಪುತ್ರರ ರಸ್ತೆಯನ್ನು ಕಳೆದು ಅಲ್ಪ ಹಣವಂತರ ಸಮಾ ಗಳಿದ್ದ ಭಾಗಕ್ಕೆ ಬಂದಿತು. ಅಲ್ಲಿ ಸುಂದರವಾದ ಸಮಾಧಿಗೃಹಗಳಿರಲಿಲ್ಲ. ಕಬ್ಬಿಣದ ಬೇಲಿ ಹಿಂದೆ ಸುಂದರ ಶಿಲಾಫಲಕಗಳಿದ್ದುವು. ಅವುಗಳ ಸುತ್ತ ಪಾಟಲ ಮತ್ತು ಹಳದಿ ವರ್ಣಗಳ ಲಿಮರಗಳಿದ್ದುವು. ಹೆಸರುಗಳನ್ನು ಕೆತ್ತಿದ ಸ್ಥಳದ ಚಿನ್ನದ ಮೆರುಗನ್ನು ಮಳೆ ತೊಳೆದು

ಹಾಕಿದ್ದಿತು. ಶ್ಮಶಾನದ ಚಿಕ್ಕಪುಟ್ಟ ಬಸವನ ಹುಳುಗಳು ಕಾಲವಶದಿಂದ ಹೊಳಪನ್ನು ಕಳೆ ಕೊಂಡಿದ್ದ ಶಿಲಾಫಲಕಗಳನ್ನು ಮುಚ್ಚಿದ್ದುವು.

ಅವುಗಳನ್ನು ದಾಟಿ ಮುಂದೆ ಹೋದರೆ ಕಾಣುವುದು ಮರದ ಬೇಲಿಗಳ ಹಿಂದೆ ಕಾಣಿಸು ಗರಿಕೆ ಹುಲ್ಲು ತುಂಬಿದ ಮಣ್ಣಿನ ಗುಡ್ಡೆಗಳು. ಇದೂ ಕಳೆದ ಬಳಿಕ ಬಂದೂಕಗಳಂತೆ ಕಾ ಸುವ ಶಿಲುಬೆಗಳನ್ನುಳ್ಳ ಬಡಸಿಪಾಯಿಗಳ ಹಾಳು ಸುರಿಯುವ ಸಮಾಧಿಗಳು. ಆದರೆ ಅಜ್ಜ ಅಂತಸ್ತಿಗೆ ಇದೂಕೂಡ ನಿಲುಕತಕ್ಕಂಥದಾಗಿರಲಿಲ್ಲ. ಗೋಡೆಯ ಬಳಿ ಮರಗಳ ನಡು ಖಾಲಿಇದ್ದ ಒಂದು ಸ್ಥಳದಲ್ಲಿ ಅಜ್ಜನ ದೇಹವನ್ನು ಹೂಳಲಾಯಿತು. ಈಸ್ಟರ್ ಹಬ್ಬದ ಕೆನ್ನೀಲಿ ಕೋಳಿಮೊಟ್ಟೆಗಳ ಚಿಪ್ಪುಗಳು ಅಲ್ಲಿ ಚೆಲ್ಲಿದ್ದುವು. ಮೊದಲು ಅವುಗಳನ್ನು ತೆಗೆದು ನೆಲವ ಬಿಡಿಸಿಕೊಳ್ಳಬೇಕಾಯಿತು. ಗೋಡೆಯ ಹಿಂದುಗಡೆ ಬಂದೂಕು ಧಾರಿ ಸೈನಿಕರ ತಲೆಗಳು ಆಗ ಕಾಣಹತ್ತಿದುವು. ಶವದೊಡನೆ ಬಂದಿದ್ದವರು ಸಮಾಧಿಯ ಸುತ್ತ ವೃತ್ತಾಕಾರದಲ್ಲಿ ನಿಂ ಕೊಂಡರು. ದರಿದ್ರನ ಹಗುರವಾದ ಶವದ ಪೆಟ್ಟಿಗೆಯನ್ನು ನಿಧಾನವಾಗಿ ಬಟ್ಟೆಯ ಚೂರ ಳೊಡನೆ ಇಳಿಸಲಾಯಿತು. ಪೇತ್ಯ ಒಮ್ಮೆ ಸುತ್ತ ಕಣ್ಣುಹಾಯಿಸಿದಾಗ ಕೂಲಿಗಾರರ ಮ ಬೆಸ್ತರ ಟೋಪಿಗಳನ್ನು ಹಿಡಿದುಕೊಂಡಿರುವ ದಪ್ಪ ದಪ್ಪನೆಯ ಕೈಗಳೂ ತಗ್ಗಿಸಿದ ಮುಖಗಳ ಗೋಚರಿಸಿದುವು.

ಶೋಕ ಪೂರ್ಣವಾದ ಮೌನ ಆವರಿಸಿದ್ದನ್ನೂ ಗಾಳಿಯ ನಿಶ್ಚಲತೆಯನ್ನೂ ನೋಡಿದೊ ಬಹುಬೇಗ ಪ್ರಕೃತಿಯಲ್ಲಿ ಭಯಂಕರ ವ್ಯಾಪಾರವೊಂದು ನಡೆಯುವ ಸಂಭವವಿದ್ದಿತು ಎಂ ತಿಳಿಯುತ್ತಿತ್ತು. ಸುಂಟರಗಾಳಿಯೋ, ಬಿರುಗಾಳಿಯೋ ಅಥವಾ ಭೂಕಂಪವೋ ಗಾಳಿ ಗಿರ ದೊಡನೆ ಆರಂಭವಾಗಬಹುದಾಗಿತ್ತು. ಆದರೆ ಸ್ವಲ್ಪ ಹೊತ್ತು ನೀರವತೆಯ ಅಧಿಕಾರದ ತಾಂಡವಾಡುತ್ತಿತ್ತು.

ಮೋತ್ಯಳಿಗೂ ಕೂಡ ಈ ನೀರವತೆಯ ದಮನಶಕ್ತಿಯು ಅರಿವಾಯಿತು, ಅವಳು ಒಂ ಕೈಯಿಂದ ಪೇತ್ಯನ ನಡುಪಟ್ಟಿಯನ್ನೂ ಇನ್ನೊಂದು ಕೈಯಿಂದ ತಾಯಿಯ ಲಂಗವನ್ನೂ ಹಿಡಿ ಕೊಂಡಿದ್ದಳು. ಸಮಾಧಿಯಲ್ಲಿನ ಶವದ ಮೇಲೆ ಹಳದಿಯ ಮಣ್ಣಿನ ಗುಡ್ಡೆ ಮೇಲಕ್ಕೇರುತ್ತಿ ದನ್ನು ನೋಡುತ್ತ ಮೋತ್ಯ ನಿಶ್ಚಲಳಾಗಿ ನಿಂತಿದ್ದಳು.

ಕೊನೆಗೆ ಬಹು ಮಂದವಾದ ಚಲನೆಯ ಶಬ್ದ ಗುಂಪಿನಲ್ಲಿ ಉಂಟಾಯಿತು. ಒಬ್ಬರ ಮೇಲೊಬ್ಬರಂತೆ ಜನಗಳು ನಿಧಾನವಾಗಿ ಆತುರಪಡದೆ ನೂಕಾಡದೆ ಹೊಸ ಸಮಾಧಿಯ ಬ ಬರಲಾರಂಭಿಸಿದರು. ಬಳಿಕ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡು ಬಾಗಿ ಮೊದಲು ಮೋ ತಾಯಿಯ ಕೈಯನ್ನು ತಮ್ಮ ಹಸ್ತದಲ್ಲಿ ತೆಗೆದುಕೊಂಡು ಕೈ ಕುಲುಕುತ್ತ ಬಂದರು.

'ಕೊಲೆವೊ' ಭಕ್ಷ್ಯವಿದ್ದ ಪಾತ್ರೆಯನ್ನು ಗಾವ್ರಿಕ್‌ಪೇತ್ಯನ ಕೈಗೆ ಕೊಟ್ಟಿದ್ದ. ಈಗ ಗಾವ್ರಿ ಮರದ ಹೊಸ ಚಮಚದಿಂದ ಕೊಲೆವೊ ಭಕ್ಷ್ಯವನ್ನು ತೆಗೆದುಕೊಂಡು ಮುಂದೆ ನೀಡಿದ ಜ ಬೊಗಸೆಗೂ ಟೋಪಿಗೂ ಹಾಕುತ್ತ ಬಂದ. ಗಾವ್ರಿಕ್ ಆ ಕೆಲಸವನ್ನು ಬಹು ಚೊಕ್ಕ ನಿರ್ವಹಿಸಿದ. ಮಿತವಾಗಿ ಎಲ್ಲರಿಗೂ ಸ್ವಲ್ಪ ಸ್ವಲ್ಪ ಭಕ್ಷ್ಯವನ್ನು ಹಂಚುತ್ತ ಬಂದ. ಅಲ್ಲಿದ್ದ ಯಾರ ಕೈಯೂ ಬರಿದಾಗಬಾರದು ಎಂಬುದೇ ಅವನ ಉದ್ದೇಶವಾಗಿದ್ದಿತು. ಬಹು ಮಯ ಯಿಂದ ಪ್ರತಿಯೊಬ್ಬನೂ ಒಂದು ಕಾಳನ್ನೂ ಚೆಲ್ಲದಂತೆ ಭಕ್ಷ್ಯವನ್ನು ಬಾಯಿಗೆ ಹಾಕಿಕೊ

ನ್ನ ಹಿಂದಿನವನಿಗೆ ಸ್ಥಳ ಮಾಡಿಕೊಡುತ್ತ ಅಲ್ಲಿಂದ ಹೊರಟು ಹೋಗುತ್ತಿದ್ದ. ತಮ್ಮ ಶೋಕ ನ್ನು ಹಂಚಿಕೊಂಡ ಪರಿಚಿತರಿಗೂ ಸ್ನೇಹಿತರಿಗೂ ಅಜ್ಜನ ಮನೆಯವರು ಸಲ್ಲಿಸಬಹುದಾಗಿದ್ದದು ಅಲ್ಪಕಾಣಿಕೆ ಮಾತ್ರವಾಗಿದ್ದಿತು.

'ಕೊಲಿವೊ' ಸ್ವೀಕರಿಸಲು ಬಂದ ಕೆಲವು ಜನ ಮೀನುಗಾರರಿಗೆ ಗಾವ್ರಿಕ್ ಬಗ್ಗಿ ನಮಸ್ಕರಿಸಿ ಬೆರೆಂಟಿ ನಿಮಗೆ ನಮಸ್ಕಾರ ತಿಳಿಸಹೇಳಿದ್ದಾರೆ. ಮೇ ದಿವಸದ ವಿಹಾರ ನಾಳೆ ಹನ್ನೆರಡು ಂಟೆಗೆ ಇದೆ ಎಂಬುದನ್ನು ಮರೆಯ ಕೂಡದು. ಆರ್ಕೇಡಿಯ ಎದುರಿನಲ್ಲಿ ನಿಮ್ಮ ನಿಮ್ಮ ದೋಣಿ ಳನ್ನು ತೆಗೆದುಕೊಂಡು ಬರಬೇಕು ಎಂದು ಹೇಳಿದ್ದಾರೆ ಎಂದು ತಿಳಿಸುತ್ತ ಬಂದ.

"ನಾವು ಅಲ್ಲಿರುತ್ತೇವೆ." ಇದು ಅವರ ಉತ್ತರವಾಗಿರುತ್ತಿತ್ತು.

ಪಾತ್ರೆಯ ಅಡಿಯಲ್ಲಿ ಕೊನೆಗೆ ನಾಲ್ಕು ತುಂಡು ಮಿಠಾಯಿಗಳು ಮಾತ್ರ ಉಳಿದಿದ್ದುವು. ಕೊನೆ ಕೊನೆಗೆ ಬಂದವರಿಗೆ ಬಹು ಮರ್ಯಾದೆಯಿಂದ ಬಗ್ಗಿ ನಮಸ್ಕರಿಸಿ "ನಮ್ಮನ್ನು ದಯ ಟ್ಟು ಕ್ಷಮಿಸಿ." ಎಂದು ಗಾವ್ರಿಕ್ ಹೇಳುತ್ತ ಬಂದ. ಉಳಿದ ನಾಲ್ಕು ತುಂಡುಗಳಲ್ಲಿ ಮೂರು ತುಂಡು ಮಿಠಾಯಿಗಳನ್ನು ಜೆನೆಚ್ಕ, ಮೋತ್ಯ, ಪೇತ್ಯರುಗಳಿಗೆ ಹಂಚಿ ತನ್ನನ್ನು ಮರೆಯದೆ ಒಂದನ್ನು ತನಗೂ ಉಳಿಸಿಕೊಂಡ.

"ಮಿಠಾಯಿ ಅಷ್ಟೇನೂ ಕೆಟ್ಟಿಲ್ಲ. ಅದು ಕ್ರಾಬ್ಮಾಲ್ನಿಕೊವ್ ಸಹೋದರರ ಅಂಗಡಿಯದು ಅಜ್ಜನ ನೆನಪಿಗಾಗಿ ತಿನ್ನು. ನಾಳೆ ಮೇ ದಿವಸದ ವಿಹಾರಕ್ಕಾಗಿ ನೀನೂ ಬರುತ್ತೀಯೋ?" ಮಿಠಾಯಿಯನ್ನು ಪೇತ್ಯನ ಕೈಗೆ ಇಡುತ್ತ ಗಾವ್ರಿಕ್ ಕೇಳಿದ.

"ಆಗಲಿ." ಎಂದ ಪೇತ್ಯ. ಅನಂತರ ಅಜ್ಜನ ಸಮಾಧಿಯ ಕಡೆಗೆ ಮುಖಮಾಡಿ ನಿಂತು ಕೊಂಡು ಎಲ್ಲರೂ ಮಾಡಿದಂತೆ ಬಗ್ಗಿ ನಮಸ್ಕರಿಸುವುದರ ಮೂಲಕ ಗೌರವವನ್ನರ್ಪಿಸಿದ.

ಗುಂಪು ನಿಧಾನವಾಗಿ ಚದುರಿತು. ಸಮಾಧಿ ಭೂಮಿ ನಿರ್ಜನವಾಯಿತು. ಗೋಡೆಯ ಆಚೆಕಡೆಯಿಂದ ದೂರದಿಂದ ಯಾವನೋ ಒಬ್ಬ ಹಾಡು ಹಾಡಲು ಆರಂಭಿಸಿದ. ಅವನೊಡನೆ ಹಲವು ಜನರು ದನಿಗೂಡಿಸಿದ್ದರು.

ಶುಭಮಸ್ತು, ಸಂಗಾತಿ! ಬೀಳ್ಕೊಡುವೆ ನಾನಿನ್ನ,
ಧೈರ್ಯಸಾಹಸದಿ ನೀ ಘನಪಥವ ಸವೆಸಿರ್ಪೆ. . . .

ಆದರೆ ತಕ್ಷಣ ಪೋಲೀಸರ ಸೀಟಿಯ ಧ್ವನಿ ಮೊಳಗಿತು. ಹಾಡು ನಿಂತಿತು. ಗೋಡೆಯ ಆಚೆಯಿಂದ ಯಾರೋ ಓಡಿದಂತೆ ಕಾಲು ಸಪ್ಪಳವಾಯಿತು. ಅನಂತರ ಎಲ್ಲವೂ ಶಾಂತ.

ಸಮಾಧಿಯ ಮೇಲೆ ಒಂದೆರಡು ಮಳೆಯ ಹನಿಗಳು ಬಿದ್ದುವು. ಆದರೆ ಅದು ಕೇವಲ ಕಿರುಕುಳದ ಮಳೆಯಾಗಿದ್ದಿತು. ಮಳೆ ನಿಜವಾಗಿ ಆರಂಭಿಸುವ ಹೊತ್ತಿಗೆ ಅದು ನಿಂತಾಗಿದ್ದಿತು. ವಾತಾವರಣ ಮೊದಲಿಗಿಂತಲೂ ಹೆಚ್ಚು ಮಂಕಾಗಿ ಕಾಣಿಸಿತು, ಮೊದಲಿಗಿಂತಲೂ ಮಳೆಯ ಸೆಕೆ ಹೆಚ್ಚಾಯಿತು.

ಮೋತ್ಯ, ಅವಳತಾಯಿ ಮತ್ತು ಗಾವ್ರಿಕ್ ಮೂವರೂ ಕೊನೆಯಬಾರಿಗೆ ಶಿಲುಬೆಯ ಸಂಜ್ಞೆ ಯನ್ನು ಮಾಡಿಕೊಂಡು ಅಲ್ಲಿಂದ ಮನೆಗೆ ಹೊರಟರು. ಪೇತ್ಯ ತನ್ನ ಸ್ನೇಹಿತರಿಗೆ ವಂದಿಸಿದ.

"ಮರೆಯ ಬೇಡ!" ಗಾವ್ರಿಕ್ ಅರ್ಥಪೂರ್ಣವಾಗಿ ಹೇಳಿದ.

"ಓಹೋ, ಅಲ್ಲದೆ ಮತ್ತೆ!" ಪೇತ್ಯ ಗಂಭೀರವಾಗಿ ತಲೆ ಅಲ್ಲಾಡಿಸಿದ. ಅನಂತರ ಶಾಂತ

ಮನೋಭಾವದಿಂದ ಮೋತ್ಯಳ ಬಳಿಗೆ ನಡೆದು ಹೋದ. "ಮೋತ್ಯ, ಮೇ ದಿನದ ವಿಹಾರವೆಂ
ಏನರ್ಥ?" ಎಂದು ಪಿಸುಮಾತಿನಲ್ಲಿ ಕೇಳಿದ. ಹುಡುಗಿಯೊಬ್ಬಳಿಗೆ ಪ್ರಶ್ನೆಹಾಕಿ ವಿಷಯವ
ತಿಳಿಯ ಬೇಕಾಯಿತಲ್ಲ ಎಂಬ ನಾಚಿಕೆಯಿಂದ ಪೇತ್ಯ ಕುಗ್ಗಿಹೋಗಿದ್ದ.

ಮೋತ್ಯಳ ಮುಖ ಗಂಭೀರವಾಯಿತು. "ಕೆಲಸಗಾರರ ಈಸ್ಟರ್ ಹಬ್ಬ" ಎಂದು ಅವ
ಉತ್ತರ ಕೊಟ್ಟಳು.

೪೪. ಮೇ ದಿನದ ವಿಹಾರ

ರಾತ್ರಿಯೆಲ್ಲ ಬೆಚ್ಚನೆಯ ಸಣ್ಣಮಳೆ ಬಿದ್ದಿತ್ತು. ಮಳೆ ಏಪ್ರಿಲ್‌ನಲ್ಲಿ ಆರಂಭವಾದು
ಮೇನಲ್ಲಿ ಮುಗಿದಿತ್ತು. ಸುಮಾರು ಎಂಟು ಗಂಟೆಯಾದ ಸ್ವಲ್ಪ ಹೊತ್ತಿನಲ್ಲಿ ಗಾಳಿಯು ಕೊನೆ
ಮಳೆಹನಿಗಳನ್ನು ಹೊತ್ತುಕೊಂಡು ಹೊರಟು ಹೋಗಿತ್ತು. ಆಕಾಶ ಇನ್ನೂ ನಿರ್ಮಲವಾಗಿರಲಿ
ಈಗ ಆಕಾಶ ಸಮುದ್ರದಲ್ಲಿ ಲೀನವಾದಂತೆ ಆಗಿತ್ತು. ಸಮುದ್ರದಿಂದ ಹಬೆಯು ಮೇಲೇಳುತ್ತಿತ್ತು
ಈಗ ಕ್ಷಿತಿಜವೆಂಬುದಿದೆಯೆಂಬ ಭಾವನೆ ಬರುವಂತಿರಲಿಲ್ಲ. ಸ್ನಾನದ ಗುಡಿಸಲುಗಳು ಹಾ
ಬಿಳುಪಿನಂಥ ಗಾಳಿಯಲ್ಲಿ ಉಯ್ಯಲಾಡುತ್ತಿರುವಂತೆ ತೋರುತ್ತಿದ್ದುವು. ಹಸಿರುಗಾಜಿನ ಬ
ಕ್ಕಿದ್ದ ನೀರಿನಲ್ಲಿ ಹೊಳೆಯುತ್ತಿದ್ದ ಪ್ರತಿಬಿಂಬಗಳು ಡೊಂಕು ಡೊಂಕಾಗಿ ತೂಗಾಡುತ್ತಿದ್ದುವು.

ನೀರುಬೆಚ್ಚಗಿದ್ದುದೇ ಅಲ್ಲದೆ ಅದು ಬಿಸಿನೀರಿನಂತೆ ಹಬೆಯನ್ನು ಬಿಡುತ್ತಿದ್ದಿತು. ಗಾವ್ರಿ
ಮತ್ತು ಪೇತ್ಯ ಆನಂದದಿಂದ ದೋಣಿಯನ್ನು ನಡೆಸಿಕೊಂಡು ಹೊರಟರು. ಹುಟ್ಟು ಹಾಕುವು
ರಲ್ಲಿ ಯಾರು ಯಾರನ್ನು ಮಿಾರಿಸುತ್ತಾರೆಂಬ ಸ್ಪರ್ಧೆಯು ಮೊದಲು ಆರಂಭವಾಯಿತು. ಆ
ಗಾವ್ರಿಕನ ಸಮಕ್ಕೆ ಪೇತ್ಯ ಬರಬಲ್ಲನೆ? ಓದುವ ಹುಡುಗನನ್ನು ಆ ಪುಟ್ಟ ಮಿಾನುಗಾರನು ಸುಲ
ವಾಗಿ ಮಿಾರಿಸಿದ. ಆಗ ದೋಣಿ ವೃತ್ತಾಕಾರವಾಗಿ ಸುತ್ತಲಾರಂಭಿಸಿತು.

"ನಿಮ್ಮ ಹುಚ್ಚಾಟ ಸಾಕು, ನಿಲ್ಲಿಸಿ. ಎಲ್ಲಾದರೂ ದೋಣಿ ಮಗುಚಿಕೊಂಡೀತು
ದೋಣಿಯ ಹಿಂಭಾಗದಲ್ಲಿ ಕುಳಿತುಕೊಂಡು ಕಬ್ಬಿಣದ ಕೈಬೆತ್ತವನ್ನು ಕೈಯ್ಯಲ್ಲಾಡಿಸುತ್ತಿ
ಟೆರೆಂಟಿ ಕುಳಿತಲ್ಲಿಂದಲೇ ಹುಡುಗರನ್ನು ಕುರಿತು ಹೇಳಿದ. ಆಗ ಹುಡುಗರು ತಮ್ಮ ಸ್ಪರ್ಧೆಯನ
ನಿಲ್ಲಿಸಿದರು. ಆದರೆ ಅವರು ಇನ್ನೊಂದು ರೀತಿಯ ಆಟವನ್ನಾರಂಭಿಸಿದರು. 'ನೀರು ಹೆಚ್ಚಾ
ಹಾರದಂತೆ ಯಾರು ಹುಟ್ಟು ಹಾಕುತ್ತಾರೆ ನೋಡೋಣ' ಎಂದು ಮೊದಲು ಮಾಡಿದರು. ಅ
ವರೆಗೆ ಅವರು ಹುಟ್ಟುಹಾಕುತ್ತಿದ್ದುದರಲ್ಲಿ ಹೆಚ್ಚು ನೀರು ಹಾರುತ್ತಿರಲಿಲ್ಲ. ಆದರೆ ಈಗ ನೀ
ಹಾರದಂತೆ ಹುಟ್ಟುಹಾಕಬೇಕೆಂದು ಹೊರಟರೋ ಇಲ್ಲವೋ! ಉದ್ದೇಶಪೂರ್ವಕವಾಗಿಯೆ
ಎಂಬಂತೆ ನೀರು ಹುಟ್ಟುಗಳಿಂದ ಹಾರಲಾರಂಭಿಸಿತು. ಹುಡುಗರಿಬ್ಬರೂ ಒಬ್ಬರನ್ನೊಬ್ಬ
ಭುಜಕ್ಕೆ ಭುಜ ತಾಕಿಸಿ ತೊಡೆಗೆ ತೊಡೆ ತಾಗಿಸಿ ಹುಟ್ಟನ್ನು ಎಳೆಯಲಾರಭಿಸಿದರು.

"ಹೋಗೋ, ಅಲೆಮಾರಿ!" ಜೋರಾಗಿ ನಗುತ್ತ ಪೇತ್ಯ ಕೂಗುಹಾಕಿದ.

"ನೀನೇ ಅಲೆಮಾರಿ!" ಗಾವ್ರಿಕ್ ತುಟಿ ಕಚ್ಚಿಕೊಂಡು ಪ್ರತ್ಯುತ್ತರ ಕೊಟ್ಟ. ಇದ್ದಕ್ಕಿ
ಹಾಗೆ ಅಕಸ್ಮಾತ್ತಾಗಿ ಅವನ ಹುಟ್ಟಿನಿಂದ ನೀರಿನ ಬುಗ್ಗೆ ಮೇಲಕ್ಕೆ ಹಾರಿತು. ಆ ನೀರಿನ
ತಪ್ಪಿಸಿಕೊಳ್ಳಲು ಟೆರೆಂಟಿ ದೋಣಿಯ ನೆಲಕ್ಕೆ ಬಿದ್ದುಕೊಳ್ಳುವಂತೆ ಬಾಗಬೇಕಾಯಿತು. ಇಬ್ಬ

ಡುಗರಿಗೂ ನಗುವಿನಿಂದ ಉಸಿರುಕಟ್ಟಿತು. ಪೇತ್ಯ ಬಹು ಗಟ್ಟಿಯಾಗಿ ನಕ್ಕ ಕಾರಣದಿಂದ ವನ ತುಟಿಗಳ ಮೇಲೆ ಎಂಜಲಿನ ಗುಳ್ಳೆಗಳುಂಟಾದುವು.

"ಯಾಕೆ ನೀರು ಹಾರಿಸುತ್ತೀರಿ ಸುಮ್ಮಸುಮ್ಮನೆ? ನಿಮಗೇನು ಹುಚ್ಚೋ, ಬೆಪ್ಪೋ ?"

"ನಿಮಗೇನು ಅದನ್ನು ಕಟ್ಟಿಕೊಂಡು. ಸುಮ್ಮನೆ ಕುಳಿತಿರಿ."

ಟಿರೆಂಟಿಗೆ ಕೋಪವೇನೋ ಬಂದಿತು. ಆದರೆ ಹುಡುಗರ ಹುಚ್ಚಾಟ ಅವನಿಗೂ ಮುಲೇರಿಸಿತು. ರೋಷದಿಂದ ದೋಣಿಯ ಅಂಚನ್ನು ಹಿಡಿದು ಶಕ್ತಿಯನ್ನೆಲ್ಲ ಬಿಟ್ಟು ಜೋರಾಗಿ ಲ್ಲಾಡಿಸಿಬಿಟ್ಟ. ಆಗ ಹುಡುಗರಿಬ್ಬರೂ ಹುಚ್ಚರಂತೆ ಕಿರಿಚಿದರು. ಅನಂತರ ತಮ್ಮ ಹುಟ್ಟು ಂದ ನೀರನ್ನು ಜೋರಾಗಿ ಬಡಿಯುತ್ತ ಇಬ್ಬರೂ ಸೇರಿ ಟಿರೆಂಟಿಯನ್ನು ಬಹುಮಟ್ಟಿಗೆ ನೀರಿ ದ ತೊಯ್ಯುವಂತೆ ಮಾಡಿದರು. ಟಿರೆಂಟಿ ಅಲ್ಲಿಗೇ ಅವರನ್ನು ಬಿಡಲಿಲ್ಲ, ತಕ್ಷಣ ನೀರಿನ ಗೆ ಬಗ್ಗಿದ್ದೇ ತನ್ನ ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡು ರಭಸವಾಗಿ ಕೈಗಳನ್ನಾಡಿಸುತ್ತ ಡುಗರ ಕಡೆಗೆ ನೀರನ್ನು ಹೊಡೆಯಲಾರಂಭಿಸಿದ. ಮರುನಿಮಿಷದಲ್ಲಿ ಮೂವರೂ ನೀರಿನಿಂದ ಮು ಹೋದರು. ನಗುತ್ತ ಪಿಚಕ್ಕನೆ ಉಗಿಯುತ್ತ ಅಡ್ಡಲಾಗಿರುವ ಪೀಠದ ಹಲಗೆಯ ಲೆ ಅಂಗತ್ತನಾಗಿ ಮಲಗಿಕೊಂಡು ಆಯಾಸದಿಂದ ನರಳಲಾರಂಭಿಸಿದರು.

ಗಾಳಿಯು ಮಂಜನ್ನು ತೆಗೆದುಕೊಂಡು ಹೋಗುತ್ತಿದ್ದಿತು. ದೋಣಿಯ ಪಕ್ಕದಲ್ಲಿ ಅಕ್ಕ ತ್ತಾಗಿ ಕನ್ನಡಿಯನ್ನು ತಂದು ಇಟ್ಟಂತೆ ಸೂರ್ಯನು ನೀರಿನ ಮೂಲಕ ಹೊಳೆಯುತ್ತ ಕಣ್ಣು ನ್ನು ಮಂಜು ಮಾಡುತ್ತಿದ್ದ.

ಸರಕ್ಕನೆ ಬದಲಾಯಿಸುವ ಚಿತ್ರದಂತೆ ಮಂಜಿನಿಂದ ಆವೃತ್ತವಾಗಿದ್ದ ಸಮುದ್ರದ ತೀರ ವಾಗಿ ಕಣ್ಣುಗಳೆದುರಿಗೆ ಎದ್ದು ನಿಂತಿತು. ತನ್ನ ನೀಲಿ, ಮತ್ತು ಹಸುರು ವರ್ಣಗಳ ವೈವಿಧ್ಯ ಡನೆ ಪ್ರಕಾಶಮಾನವಾದ ಮೇ ದಿನ ಹೊಳೆಯಲಾರಂಭಿಸಿತು.

"ಒಳ್ಳೆಯದು, ಇಲ್ಲಿಗೆ ನಮ್ಮ ತಮಾಷೆ ಸಾಕು." ಟಿರೆಂಟಿ ಕಟ್ಟುನಿಟ್ಟಾಗಿ ಹೇಳಿದ. ಅಂಗಿಯ ಳಿನಿಂದ ನೆನೆದ ಹಣೆಯನ್ನು ಒರೆಸಿಕೊಂಡ. ಹಣೆಯಮೇಲೆ ರೇಷ್ಮೆಯಂತೆ ನಯವಾದ ಯ ಗಾಯದ ಕಲೆ ಕಾಣಿಸಿತು. "ಇನ್ನು ನಮ್ಮ ಗುರಿಯನ್ನು ಮುಟ್ಟಬೇಕು." ಎಂದ ಪುನಃ. ಹುಡುಗರು ಗಂಭೀರವಾಗಿ ತಮ್ಮ ಹುಟ್ಟುಗಳಿಗೆ ಕೈಹಾಕಿದರು.

ಪೇತ್ಯ ನಾಲಗೆಯನ್ನು ಕಚ್ಚಿಕೊಂಡು ತಿದಿಯಂತೆ ಉಸಿರು ಬಿಡುತ್ತ ಹುಟ್ಟು ಹಾಕಲಾರಂಭಿ ನಿಜ ಹೇಳಬೇಕೆಂದರೆ ಅವನಿಗೆ ಸ್ವಲ್ಪ ಆಯಾಸವಾಗಿದ್ದಿತು. ಆದರೆ ಗಾವ್ರಿಕನ ಎದು ಈ ಸತ್ಯವನ್ನು ಒಪ್ಪಿಕೊಳ್ಳುವವನಾಗಿರಲಿಲ್ಲ ಅವನು.

ಅವನ ಮನಸ್ಸನ್ನು ಒಂದು ಯೋಚನೆ ಕಾಡಿಸುತ್ತಿದ್ದಿತು. ಮೇ ದಿನದ ವಿಹಾರ ಆರಂಭ ದ್ದಿತೋ ಇಲ್ಲವೋ ಎಂಬುದನ್ನು ತಿಳಿಯಲು ಅತಿ ಕಾತುರನಾಗಿದ್ದ ಅವನು. ಆದರೆ ಈ ರುವನ್ನು ಕೇಳಲು ಹಿಂಜರಿದ. ಉಪನಗರದ ಬಳಿ ಹಿಂದೆ ಒಂದು ಸಲ ಆದಂತೆ ದಡ್ಡನೆನ್ನಿಸಿ ಲು ಅವನು ಸಿದ್ಧನಿರಲಿಲ್ಲ. ಮೇ ದಿನದ ವಿಹಾರವೆಂಬುದು ಕೆಲಸಗಾರರ ಈಸ್ಟರ್ ಹಬ್ಬ ವೋತ್ಯ ಹೇಳಿದ್ದಳು. ಈಗ ಅರ್ಧ ಗಂಟೆಯಿಂದ ಒಂದೇ ಸಮನೆ ದೋಣಿಯನ್ನು ನಡೆಸಿ ಡು ಬಂದಿದ್ದಾಗಿದೆಯಾದರೂ ಈಸ್ಟರ್ ಹಬ್ಬದ ಸಂಕೇತವಾದ ಈಸ್ಟರ್ ಕಡುಬಾಗಲಿ, ರ್ ಮೊಟ್ಟೆಗಳಾಗಲಿ ಅಥವಾ ಹಂದಿಯ ತೊಡೆಯ ಮಾಂಸವಾಗಲಿ ಕಂಡು ಬರಲಿಲ್ಲ.

ಅದರ ವಾಸನೆಯೂ ಇಲ್ಲ. ಅಥವಾ ಇದು ಹೀಗೆಯೋ ಏನೋ. ಇದು ಸಾಧಾರಣ ಈಸ
ಅಲ್ಲ, ಕೂಲಿಗಾರರ ಈಸ್ಟರ್. ಇನ್ನೂ ಎಷ್ಟು ಹೊತ್ತು ಹುಡುಗ ತಾಳ್ಮೆಯಿಂದಿದ್ದಾನು! ಟೆ
ಯನ್ನು ಕುರಿತು ಪೇತ್ಯ

"ರೀ. ಮೇ ದಿನದ ವಿಹಾರ ಆರಂಭವಾಗಿದೆಯೇ?" ಎಂದು ಕೇಳಿಯೇ ಬಿಟ್ಟ.

"ಇಲ್ಲ, ಇನ್ನೂ ಇಲ್ಲ."

"ಇನ್ನೂ ಯಾವಾಗ? ಬೇಗ ಆರಂಭವಾಗುತ್ತದೆಯೋ?" ಈ ಮಾತುಗಳು ಬಾಯಿಂದ ಹ
ಬರುತ್ತಿರುವಂತೆ ಪೇತ್ಯ ಅತಿಶಯ ಉಲ್ಲಾಸಕರವಾದ ಮುಗುಳುನಗೆಯನ್ನು ಬೀರಿದ. ದೊ
ರೊಡನೆ ಇಂಥ ಪ್ರಶ್ನೆಗಳನ್ನು ಹುಡುಗರು ಹಾಕಿದಾಗ ಸಾಮಾನ್ಯವಾಗಿ ಬರುತ್ತಿದ್ದ ಉತ್ತರಗಳ
ಎಂಬುದನ್ನು ಅವನು ಅನುಭವದಿಂದ ತಿಳಿದುಕೊಂಡಿದ್ದ. "ಅದು ಶುರುವಾದಾಗ ಆರಂಭವ
ತ್ತದೆ." "ಅಂದರೆ ಯಾವಾಗ ಆರಂಭವಾಗುತ್ತೆ?"; "ಶುರುವಾದಾಗ." ಹೀಗಲ್ಲದೆ ಟೆರೆಂಟಿ ದೊ
ವರಿಗೆ ಉತ್ತರ ಕೊಡುವಂತೆ ಸಹಜವಾಗಿ ತನ್ನ ಪ್ರಶ್ನೆಗೂ ಉತ್ತರ ಕೊಟ್ಟುದನ್ನು ನೋಡಿ ಅವ
ಆಶ್ಚರ್ಯವಾಯಿತು.

"ಮಾಲಿ ಫಾಂಟಾನ್‌ನಿಂದ ಒಬ್ಬರು ಬರಬೇಕು. ಅನಂತರ ಆರಂಭಿಸೋಣ." ಎ
ಟೆರೆಂಟಿ. ಮಾಲಿ ಫಾಂಟಾನಿನಲ್ಲಿ ಅವರು ಒಬ್ಬನನ್ನು ಕರೆದುಕೊಂಡರು. ಬೆತ್ತವನ್ನೂ
ದಿಂದ ಹೆಣೆದ ಚೀಲವನ್ನೂ ಕೈಯ್ಯಲ್ಲಿ ಹಿಡಿದುಕೊಂಡಿದ್ದ ಅವನು ಸೊಗಸುಗಾರನಂತೆ ಕಾ
ತ್ತಿದ್ದ. ಒಂದೇ ನೆಗೆತಕ್ಕೆ ದೋಣಿಯೊಳಕ್ಕೆ ಹಾರಿ ಬಂದು ಟೆರೆಂಟಿಯ ಪಕ್ಕದಲ್ಲಿ ಕು
ಗುಟ್ಟಾಗಿ ದಡದ ಕಡೆಗೆ ದೃಷ್ಟಿಯನ್ನು ಬೀರಿ "ತಿರುಗಿಸಿಕೊಂಡು ಹೊರಡಿ" ಎಂದು ಹೇ
ಅವನು ಯಾರೂ ಅಲ್ಲ, ನಾವಿಕ. ಅಬ್ಬ ನೋಡಲು ಎಷ್ಟು ನಾಜೂಕಾಗಿದ್ದಾನೆ ಎಂದುಕೊ
ಪೇತ್ಯ. ನಾವಿಕನ ಅನಿರೀಕ್ಷಿತ ಭವ್ಯವ್ಯಕ್ತಿತ್ವದಿಂದ ಅಪ್ಪಳಿಸಲ್ಪಟ್ಟ ಆ ಹುಡುಗರು ಪರವ
ಯಿಂದ ಅವನನ್ನು ನೋಡುತ್ತ ನಿಂತರು. ಮನುಷ್ಯನೊಬ್ಬ ಇಷ್ಟೊಂದು ಶೋಭಾಯಮಾನ
ಕಾಣುತ್ತಾನೆಂದು ಅವರು ಆಲೋಚಿಸಿಯೂ ಇರಲಿಲ್ಲ.

ಟೆರೆಂಟಿ ಕೆನೆಬಣ್ಣದ ಷರಾಯಿಯನ್ನೂ, ಹಸುರು ಕಾಲುಚೀಲಗಳನ್ನೂ, ಅಚ್ಚಬಿ
ಕ್ಯಾನವಾಸ್ ಬೂಡ್ಸುಗಳನ್ನೂ ಧರಿಸಿದ್ದ. ಅಷ್ಟೇ ಅಲ್ಲ. ನಾವಿಕನ ನೀಲಿಬಣ್ಣದ ಅಂ
ಜೇಬಿನಿಂದ ಕೆಂಪು ಕರವಸ್ತ್ರ ಇಣಿಕಿಹಾಕುತ್ತಿತ್ತು. ಕತ್ತಿನಲ್ಲಿ ರಂಜಿಸುತ್ತಿದ್ದ ಟೈಯಿನ
ಇಂದ್ರನೀಲವರ್ಣದ ಕುದುರೆ ಲಾಳದ ಚಿತ್ರ ಮತ್ತು ಅದರ ನಡುವೆ ನವಿಲುಗರಿಕಣ್ಣಿನ ಅಲಂ
ಶೋಭಾಯಮಾನವಾಗಿದ್ದುವು. ಆದರೆ ಅಷ್ಟೇ ಅಂದುಕೊಂಡಿರ? ಅಲ್ಲ. ಷರಟಿನ ಮುಂಭಾ
ಗಂಜಿ ಹಾಕಿ ಇಸ್ತ್ರಿ ಮಾಡಿದ್ದುದರಿಂದ ಅದು ಸ್ವಲ್ಪ ಮುಂದಕ್ಕೆ ಉಬ್ಬಿಕೊಂಡಿದ್ದಿತು.
ಪಟ್ಟಿಗೂ ಗಂಜಿ ಹಾಕಿ ಇಸ್ತ್ರಿ ಮಾಡಿದ್ದಿತು. ಅದರ ಕರ್ಣಗಳು ಕೆಳಕ್ಕೆ ಬಗ್ಗಿ ಅವನ
ಗಳಿಗೆ ತಗಲುತ್ತಿದ್ದುವು. ಆದರೆ ಅಷ್ಟೇ ಅಲ್ಲ. ತಲೆಯಮೇಲೆ ಹುಲ್ಲಿನ ಟೋಪಿ ಅವನ ತಲೆ
ಅಲಂಕರಿಸಿದ್ದಿತು. ಗೀರಿನ ರೇಷ್ಮೆ ಪಟ್ಟಿ ತಲೆಯ ಹಿಂಭಾಗದಲ್ಲಿ ಎಸಳುಗಳಂತೆ ಕುಳಿತಿ
ಇಷ್ಟೇ ಎಂದು ಸುಮ್ಮನಾಗಬೇಡಿ. ಇಲ್ಲಿಗೆ ಮುಗಿಯಲಿಲ್ಲ ಅವನ ವರ್ಣನೆ. ಇನ್ನೂ ಸ
ಗಡಿಯಾರದ ಸರಪಳಿ ಅವನ ಹೊಟ್ಟೆಯ ಮೇಲೆ ಇಳಿ ಬಿದ್ದಿತ್ತು. ಅದರ ಮೇಲೆ ಹೊಳೆ
ಹರಳುಗಳನ್ನು ಮೆಟ್ಟಲಾಗಿತ್ತು. ಸುಂದರವಾದ ಬೆರಳುಗಳನ್ನು ಮುಚ್ಚಿಕೊಂಡ ಬೂದು

ೈಚೀಲಗಳಿದ್ದುವು. ಇಲ್ಲಿಗೆ ಅವನ ವೇಷಭೂಷಣಗಳ ವರ್ಣನೆ ಮುಗಿಯಿತೆನ್ನಬಹುದು. ಆ ಹುಡುಗರ ಮನಸ್ಸಿನಲ್ಲಿ ಸೇನಾಧಿಕಾರಿಗಳ ಶಾಲೆಯ ಗುಮಾಸ್ತರೋ ಅಥವಾ 'ಕ್ವಾಸ್' ಪಾನೀಯ ಗಳನ್ನು ಮಾರುವವರೋ ಇವರಲ್ಲಿ ಯಾರು ಬಹು ಸುಂದರರೆಂಬ ಪ್ರಶ್ನೆಯಿದ್ದಿತು. ಆದರೆ ಈಗ ಸೊಗಸುಗಾರನನ್ನು ನೋಡಿದಾಗ ಈ ಭೂಲೋಕದ ಮನ್ಮಥನ ಅಲಂಕಾರವನ್ನೀಕ್ಷಿಸಿದಾಗ ಈ ಪ್ರಶ್ನೆಯನ್ನು ಕುರಿತು ತಾವು ಆಲೋಚಿಸುವುದೂ ನಗುಪಾಟಲು ಎಂಬುದಾಗಿ ಅರ್ಥವಾಯಿತು. ಬೇಗಸಾಗಿ ತಿರುವಿ ನಿಲ್ಲಿಸಿದ ನಾವಿಕನ ಮೀಸೆಯ ಮುಂದೆ ಎಲ್ಲ 'ಕ್ವಾಸ್' ಪಾನೀಯದ ಹಾರಾಟಗಾರರನ್ನೂ ನಿವಾಳಿಸಬೇಕೆನ್ನಿಸಿತು. ಠಾಕುಠೀಕಾಗಿ ಅಲಂಕಾರಮಾಡಿಕೊಂಡ ಮನುಷ ನನ್ನು ನೋಡುವುದರಲ್ಲಿ ತಲ್ಲೀನರಾದ ಹುಡುಗರು ದೋಣಿಗೆ ಹುಟ್ಟುಹಾಕುವುದನ್ನು ಮರೆತು ಬಿಟ್ಟರು.

"ನೋಡು, ಪೇತ್ಯ. ನೋಡು. ಎಂಥ ಕೈಚೀಲಗಳನ್ನು ಧರಿಸಿದ್ದಾನೆ!" ಗಾವ್ರಿಕ್ ಆಶ್ಚರ್ಯವನ್ನು ವ್ಯಕ್ತಪಡಿಸಿದ.

ನಾವಿಕ ಹಲ್ಲುಗಳ ಮೂಲಕ ಪಿಚಕ್ಕನೆ ಉಗುಳಿದ. ಆ ಉಗುಳು ಹುಡುಗರು ತಮ್ಮ ಕನಸಿನಲ್ಲಿ ಕೂಡ ಉಗಿಯಲಾರದಷ್ಟು ದೂರ ಹೋಗಿ ಬಿದ್ದಿತು. "ನನ್ನ ಕೈಮೇಲಿನ ಲಂಗರನು ಎಲ್ಲರೂ ಏತಕ್ಕೆ ನೋಡುತ್ತಾರೋ ಕಾಣೆ?" ಕೋಪದ ಕಣ್ಣುಗಳಿಂದ ಗಾವ್ರಿಕನನ್ನು ನೋಡುತ್ತ ನುಡಿದ. "ನಾನು ಅದನ್ನು ಮುಚ್ಚಿಕೊಂಡಿದ್ದೇನೆ. ಸಾಕು ನಿಮ್ಮ ಹುಚ್ಚಾಟ, ನಡೆಯಿರಿ ಹುಡುಗರೆ."

ಇದ್ದಕ್ಕಿದ್ದಂತೆ ದರ್ಪವನ್ನು ತಂದುಕೊಂಡು ಮೀಸೆಯನ್ನು ತಿರುವಿದ. ಟೆರೆಂಟಿಯನ್ನು ದೃಷ್ಟಿಸಿ ನೋಡಿದರೆ ಅವನು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದ. ಆಗ ನಾವಿಕ "ಏಯ್ ದೋಣಿಯ ಹಿಂಭಾಗದಲ್ಲಿ ಕುಳಿತಿರುವವನೇ! ನನ್ನ ಆಜ್ಞೆಯನ್ನು ಆಲಿಸು! ಹುಟ್ಟುಗಳ ಮೇಲೆ ಕೈಹಾಕಿ; ಒಟ್ಟಿಗೆ ಎಳೆಯಿರಿ. ಬಲಕ್ಕೆ ತಿರುಗಿಸಿ, ಹಿಂದಕ್ಕೆ ತೆಗೆದುಕೊಳ್ಳಿ." ಎಂದು ಹಡಗಿನ ಅಧಿಕಾರಿಯಂತೆ ಗರ್ಜಿಸಿದ.

ಹುಡುಗರು ಹುಟ್ಟುಗಳನ್ನು ಬಗ್ಗಿ ಎಳೆದರು. ಮಧ್ಯಾಹ್ನದ ಬಿಳಿಯ ಜ್ಯೋತಿಯು ಮಿನುಗು ತ್ತಿದ್ದ ವಿಸ್ತಾರವಾದ ಸಮುದ್ರದ ಕಡೆಗೆ ದೋಣಿ ತಿರುಗಿತು. ದಡದಿಂದ ಅರ್ಧಮೈಲಿಯಲ್ಲಿ ಅವರ ಮುಂದುಗಡೆಗೆ ದೂರದಲ್ಲಿ ಬೆಸ್ತರ ದೋಣಿಗಳ ಗುಂಪು ಕಾಣಿಸಿತು.

ಹುಚ್ಚು ಭಯವೊಂದು ಪೇತ್ಯನನ್ನು ಆಕ್ರಮಿಸಿತು. ಕಳೆದ ಶರತ್ಕಾಲದಲ್ಲಿ ಪೋಲೀಸರಿಂದ ಸುತ್ತುಗಟ್ಟಲ್ಪಟ್ಟಿದ್ದ ನಗರದ ಭಾಗವನ್ನು ಗಾವ್ರಿಕನೊಡನೆ ಪ್ರವೇಶಿಸಿದಾಗ ಉಂಟಾದ ಅನುಭವ ಕ್ಕಿಂತ ಇದು ಬೇರೆಯಾದುದಾಗಿರಲಿಲ್ಲ. ಹುಡುಗರು ಆಗ ಒಬ್ಬಂಟಿಗರಾಗಿದ್ದರು. ಈಗ ಅವರೊಡನೆ ಸಾಹಸಿಗಳೂ ನಿಗೂಢ ಶಕ್ತಿಯುಳ್ಳವರೂ ಆದ ವಯಸ್ಕರು ಇದ್ದರು. ಆದರೆ ಅವರು ಈ ಹುಡುಗರನ್ನು ಹಿಂದೆ ನೋಡಿಯೇ ಇಲ್ಲವೋ ಎಂಬಂತೆ ವಿಚಿತ್ರ ವರ್ತನೆಯನ್ನು ತೋರಿಸುತ್ತಿದ್ದರು. ತನ್ನನ್ನು ಅವರು ಚೆನ್ನಾಗಿ ಬಲ್ಲರೆಂಬ ವಿಷಯದಲ್ಲಿ ಪೇತ್ಯನಿಗೆ ಸಂದೇಹವಿರ ಲಿಲ್ಲ. ಒಂದುಸಲ ನಾವಿಕ "ನಾವಿಲ್ಲಿದ್ದೇವೆ, ತಮ್ಮ. ಇನ್ನೂ ಬದುಕಿ ಶತ್ರುಗಳನ್ನು ಮರ್ದನ ಮಾಡುತ್ತಿದ್ದೇವೆ." ಎಂದು ಹೇಳುವಂತೆ ಪೇತ್ಯನ ಕಡೆಗೆ ಕಣ್ಣುರೆಪ್ಪೆ ಹೊಡೆದಿದ್ದ. ಪೇತ್ಯನೂ ಕೂಡ ಇದೇ ಮೊದಲು ತಾನು ನಾವಿಕನನ್ನು ನೋಡುತ್ತಿರುವುದು ಎಂಬಂತೆ ನಟಿಸುತ್ತಿದ್ದ.

ಮನಸ್ಸಿಗೆ ಕೊಂಚ ಕಿರಿಕಿರಿಯಾಗುತ್ತಿದ್ದರೂ ಇದೆಲ್ಲ ಉತ್ಸಾಹಕರವಾಗಿಯೇ ಇದ್ದಿತು. ಒಟ್ಟಿನ
ಆ ದೋಣಿಯವರು ಮಹದಾನಂದದಿಂದ ಕೊಬ್ಬಿದ್ದರು ಎನ್ನಬಹುದಾಗಿದ್ದಿತು.

ಮೊದಲೆ ಏರ್ಪಾಟಾಗಿದ್ದಂತೆ ಆರ್ಕೇಡಿಯ ಎದುರಿಗೆ ಸಮುದ್ರದಲ್ಲಿ ಹಲವಾರು ಬೆಸ್ತ ದೋಣಿಗಳು ಅಲೆಯಮೇಲೆ ತೂಗಾಡುತ್ತಾ ನಿಂತಿದ್ದುವು. ಇವರ ದೋಣಿಯೂ ಕೂಡ ಗುಂಪನ್ನು ಕೂಡಿಕೊಂಡಿತು. ವಿವಿಧ ವರ್ಣರಂಜಿತವಾಗಿದ್ದ ಇಡೀ ದೋಣಿಗಳ ವ್ಯೂಹ ಅಜ್ಜನ ಹಳೆಯ ದೋಣಿಯನ್ನು ಸುತ್ತುವರಿಯಿತು.

ಮಾಲಿ ಫಾಂಟಾನ್, ಸ್ರೆಡ್ನಿ ಫಾಂಟಾನ್, ವಾಲ್ತುಖ್, ಆರ್ಕೇಡಿಯ, ಮತ್ತು ಜೋ ತಾಯ್ ಬೆರೆಗ್ ಮೊದಲಾದ ಕಡೆಗಳಿಂದ ಬೆಸ್ತರು ತಮ್ಮ ದೋಣಿಗಳೊಡನೆ ಅಲ್ಲಿ ನೆರೆದಿದ್ದ ಹಿಂದಿನ ದಿನ ಅಜ್ಜನ ಶವದ ಮೆರವಣಿಗೆಯಲ್ಲಿ ಸೇರಿದ್ದವರೆಲ್ಲ ಅಲ್ಲಿದ್ದಂತಿದ್ದಿತು. ಅಲ್ಲದೆ ಲ ಡಾರ್ಫ್, ದೋಫಿನೋವ್ಕ ಮತ್ತು ಒಚಕೊವ್ ಮೊದಲಾದ ದೂರದೂರ ಪ್ರದೇಶಗಳಿಂದ ಕು ಕೆಲವು ಬೆಸ್ತರು ಬಂದಿದ್ದರು.

ಅವರೆಲ್ಲ ಹಳೆಯ ಮಿತ್ರರೂ ನೆರೆಹೊರೆಯವರೂ ಆಗಿದ್ದರು. ಅವರು ದೋಣಿಗಳ ಅಂ ಮೇಲೆ ಬಗ್ಗಿ ಕುಳಿತುಕೊಂಡು ಪರಸ್ಪರ ಸಲ್ಲಾಪಗಳಲ್ಲಿ ಮುಳುಗಿದ್ದರು. ಅವರ ಮಾತುಗ ಒಟ್ಟುಗೂಡಿ ಸಂತೆಯ ಮಾಳದ ಗಲಾಟೆಯಂತೆ ಇದ್ದಿತು. ಹೊಸದಾಗಿ ಬಂದ ಒಂದೊ ದೋಣಿಯನ್ನೂ ಗೆಲುವಿನಿಂದ ಕೂಗಿ ಆಹ್ವಾನಿಸುತ್ತಲಿದ್ದರು. ಉತ್ಸಾಹದಲ್ಲಿ ನೀರು ಮಳೆಯ ಹಾರುತ್ತಿದ್ದಿತು ಮತ್ತು ಹುಟ್ಟುಗಳು ನೀರಿಗೆ ಅಪ್ಪಳಿಸಿದ ಶಬ್ದವಾಗುತ್ತಿದ್ದಿತ್ತು.

ಅಜ್ಜನ ದೋಣಿ ಅಲೆಯ ಮೇಲೆ ಜೋಲಾಡುತ್ತ ಇತರ ದೋಣಿಗಳ ಅಂಚುಗಳಿಗೆ ಉಜ್ಜ ದೋಣಿಗಳ ಗುಂಪಿನ ಮಧ್ಯವನ್ನು ಸೇರಿತು. ಅಜ್ಜನ ದೋಣಿಯ ಸುತ್ತ ಇತರ ದೋಣಿಗಳಿದ್ದು ಅಲ್ಲಿ ಖಾಲಿಯಾದ ಸಾಜೆನ್ ಬಾಷರ್ ಬೀರ್ ಸೀಸೆಗಳು ನೀರಿನ ಮೇಲಾಗಲೆ ತೇಲುತ್ತಿದ್ದು ಆಗ ಎಲ್ಲ ಕಡೆಯಿಂದ "ಹೋ ಟಿರೆಂಟಿ!" ಎಂಬ ಕೂಗು ಹೊರಟಿತು.

"ಅಲ್ಲಿ ನೋಡಿಕೊಳ್ಳಿ. ಈ ನಮ್ಮ ಮರದ ತೊಟ್ಟಿಗೆ ನಿಮ್ಮ ಕಬ್ಬಿಣದ ತಗಡು ಹೊದಿ ದೋಣಿಗಳನ್ನು ತಗುಲಿಸಿ ಮುಳುಗಿಸಿಬಿಡಬೇಡಿ!"

"ಏ ಅಲೆಮಾರಿಗಳಾ, ನಮ್ಮ ಮುಖಂಡನಿಗೆ ದಾರಿ ಬಿಡಿ!"

"ಲೋ ಟಿರೆಂಟಿ, ನಿನ್ನ ಆ ಸೊಗಸುಗಾರನನ್ನು ಎಲ್ಲಿಂದ ಹಾರಿಸಿಕೊಂಡು ಬಂದೆ. ದೇ ಗತಿ! ಆ ಹ ಹಾ . . . ಲ ಲ ಲಾ . . . ಲಲಾ . . .!"

ಟಿರೆಂಟಿ ಟೋಪಿಯನ್ನು ಬೀಸುತ್ತ ಕೆನ್ನೆಯನ್ನು ಉಬ್ಬಿಸಿಕೊಂಡು ಎಲ್ಲರಿಗೂ ಪ್ರಾಮುಖ್ಯತೆಯನ್ನು ತೋರಿಸಿಕೊಳ್ಳುತ್ತ ನಾಚಿಕೊಂಡವನಂತೆ ಬಗ್ಗಿ ನಮಸ್ಕರಿಸಿದ.

"ಈ ಬಡಪಾಯಿ ಒಬ್ಬನ ಮೇಲೆ ಎಲ್ಲರೂ ಏಕಕಾಲದಲ್ಲಿ ಬೀಳಬೇಡಿ. ಒಬ್ಬೊಬ್ಬ ನಮಸ್ಕಾರ ತೆಗೆದುಕೊಳ್ಳಿ. ಫೆದ್ಯ! ನಮಸ್ಕಾರ. ಸ್ಟೇಪನ್! ನಮಸ್ಕಾರ ತೆಗೆದುಕೊಳ್ಳ ಅಜ್ಜ ವಾಸಿಲಿ! ನಿನಗೆ ನಮೋ. ಓ ಮಿತ್ಯ! ಇನ್ನೂ ಬದುಕಿದ್ದೀಯಾ? ಮಾಲಿಫಾಂಟಾನಿನ ವಿ ಗಳೆಲ್ಲೋ ನಿನ್ನನ್ನು ನುಂಗಿಹಾಕಿಬಿಟ್ಟಿವೆ ಎಂದು ಮಾಡಿಕೊಂಡಿದ್ದೆ. ನೌಷ, ಎಡಗಡೆಗೆ ಗಿಸಿಕೋ!"

ಟಿರೆಂಟಿ ಮುಖವನ್ನು ತಿರುಗಿಸುತ್ತ ತನ ಹಳೆಯ ಮಿತ್ರರೊಡನೆ ವಿನೋದವಾಗಿ

ಡಿದ. ಸುತ್ತಲಿದ್ದ ದೋಣಿಗಳ ಹೆಸರುಗಳನ್ನು ಓದುತ್ತ ತೃಪ್ತಿಯ ಉಸಿರನ್ನು ಬಿಟ್ಟ.

"ಒಂದು ಸೋನ್ಯ, ಎರಡು, ಮೂರು, ನಾಲ್ಕು 'ಸೋನ್ಯ'; ಲಸ್ತ್‌ದಾರ್ಫ್‌ನಿಂದ ಬಂದುದು ನ್ನೊಂದು ಮತ್ತು ಲಾಂಗರಾನ್‌ನಿಂದ ಉಳಿದ ಮೂರು. ಹೋ! ಒಟ್ಟು ಎಂಟು 'ಸೋನ್ಯ'ಗಳು. ದ್ಯ, ವೀರ, ಲ್ಯೂಬ, ಷುರ, ಮೋತ್ಯ . . . ಅಮ್ಮಾ, ಇದೆಂಥ ಸ್ಥಳವಿದು! ನಾನು ಮನೆಗೆ ಹೋಗ ೇಕು!" ಟೋಪಿಯಿಂದ ಮುಖವನ್ನು ಮುಚ್ಚಿಕೊಳ್ಳುತ್ತ ಕೃತಕ ಭೀತಿಯನ್ನು ನಟಿಸಿದ.

ಮೇಲೆ ಹೆಸರಿಸಿದವುಗಳೇ ಅಲ್ಲದೆ ನಾಲ್ಕು 'ಓಲ್ಗ'ಗಳು, ಅರ್ಧ ಡಜನ್ 'ನಟಾಷ'ಗಳು, ಂದು ಡಜನ್ನಿಗೆ ಕಡಮೆಯಿಲ್ಲದಂತೆ 'ಮೂರು ಬಿಷಪ್ಪುಗಳು,' ಮತ್ತು ಒಚಕೊವ್‌ನಿಂದ ಬಂದಿದ್ದ ಶುಭಪುರಾತನ ಪುಷ್ಕಿನ್' ಎಂಬ ಗೂಢನಾಮದ ದೋಣಿ-ಇವುಗಳೂ ಕೂಡ ಬಂದಿದ್ದುವು.

ನಿಶ್ಶಬ್ದತೆ ಮೂಡಿ ಎಲ್ಲರೂ ಸಿದ್ಧರಾದಾಗ ಟೆರೆಂಟಿ ನಾವಿಕನನ್ನು ಮೊಳಕೈಯಿಂದ ತಿವಿದು ಶುರುಮಾಡು ರೊಡಿಯಾನ್" ಎಂದ.

ನಾವಿಕ ನಿಧಾನವಾಗಿ ತನ್ನ ಹ್ಯಾಟನ್ನು ತಲೆಯಿಂದ ತೆಗೆದು ತೊಡೆಯ ಮೇಲಿಟ್ಟುಕೊಂಡ. ಟ್ಟ ಬಾಚಣಿಗೆಯಿಂದ ಮೀಸೆಯನ್ನು ಬಾಚಿಕೊಂಡ. ಅನಂತರ ಮೇಲಕ್ಕೆದ್ದು ತಾನು ಕೆಳಗೆ ೀಳದಂತೆ ಕಾಲುಗಳನ್ನು ಅಗಲಿಸಿಕೊಂಡು ನಿಂತುಕೊಂಡ. ಬಹು ಸ್ಪಷ್ಟವಾಗಿ ಗಟ್ಟಿಯಾಗಿ ಲ್ಲರಿಗೂ ಕೇಳಿಸುವಂತೆ ಮಾತನಾಡತೊಡಗಿದ. "ಒಡೆಸ್ಸದ ಒಡನಾಡಿ ಮೀನುಗಾರರೇ! ನಿಮ ಲ್ಲ ಮೇ ದಿನದ ಶುಭಾಶಯಗಳು!"

ಅನಂತರ ಅವನ ಮುಖದ ಮೂಳೆಗಳು ಹೊರಚಾಚಿಕೊಂಡು ದೃಢಸಂಕಲ್ಪವನ್ನು ಪ್ರದರ್ಶಿಸಿದುವು.

"ನಾನು ಯಾರು, ಈ ಸೊಗಸಾದ ವೇಷಭೂಷಣಗಳನ್ನು ಧರಿಸಿದ ನಾನು ಇಲ್ಲಿಗೆ ಹೇಗೆ ಂದೆ ಎಂಬುದನ್ನು ನಿಮ್ಮಲ್ಲಿ ಕೆಲವರು ತಿಳಿಯಬಯಸಬಹುದು. ನಾನು ರಷ್ಯ ಸಮಾಜವಾದಿ- ಪ್ರಜಾಪ್ರಭುತ್ವಾತ್ಮಕ ಶ್ರಮಿಕಪಕ್ಷದ ಹಾಗೂ ಬೋಲ್ಷೆವಿಕ್ ಪಕ್ಷದ ಸದಸ್ಯ. ಒಡೆಸ್ಸದ ಜಂಟಿ ಮಿತಿಯವರು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನೂ ನಿಮ್ಮಂತೆಯೇ ಒಬ್ಬ ಕೂಲಿಗಾರ ಮತ್ತು ನಾವಿಕ. ಆದರೆ ನನ್ನ ಗಂಜಿ ಹಾಕಿ ಇಸ್ತ್ರಿಮಾಡಿದ ಷರಟು, ಬಿಳಿಯ ಷರಾಯಿ ಮೊದ ಾದುವುಗಳು ಹೇಗೆ ಬಂದುವು ಎಂದು ಕೇಳುತ್ತೀರಲ್ಲವೆ. ಈಗ ಇದರ ಉತ್ತರವನ್ನು ಮ್ಮಿಂದಲೇ ಹೊರಡಿಸಿ ವಿವರಿಸುತ್ತೇನೆ ನೋಡಿ. ಇಲ್ಲಿರುವ ನೀವುಗಳೆಲ್ಲ ಒಡೆಸ್ಸದ ಮೀನು ಾರರು, ನೀವು ನನ್ನ ಪ್ರಶ್ನೆಗೆ ಉತ್ತರ ಕೊಡಬಲ್ಲಿರಿ. ರಾಣಿ ಮೀನಿನ ಚರ್ಮದ ಸೌಂದರ್ಯ ವನ್ನು ನೀವೆಲ್ಲ ಬಲ್ಲಿರಿ. ರಾಣಿ ಮೀನು ಜಲರೇಷ್ಮೆಯಂತೆ ನುಣುಪಾದ ಆಕಾಶನೀಲಿಯ ಚರ್ಮ ವನ್ನೂ, ಅದರ ಮೇಲೆ ಅಚ್ಚನೀಲಿಯ ಪಟ್ಟೆಗಳನ್ನೂ ಏಕೆ ಧರಿಸಿದೆ ಹೇಳಿ? ನಿಮಗೆ ಗೊತ್ತಿಲ್ಲ ಅಲ್ಲವೆ? ನಾನು ಹೇಳುತ್ತೇನೆ ಕೇಳಿ. ನೀಲಿಗಟ್ಟಿನ ಸಮುದ್ರದಲ್ಲಿ ಅದು ಸಂಚರಿಸುತ್ತಿದ್ದರೆ ಅದನ್ನು ಗುರುತುಹಿಡಿಯಲು ಕಷ್ಟವಾಗುತ್ತದೆ. ಗಾಳದ ಕೊಕ್ಕೆಗಳಿಗೆ ಅದನ್ನು ಸಿಕ್ಕಿಹಾಕಿಸಿ ಕೊಳ್ಳುವುದು ನಿಮಗೆ ಕಷ್ಟವಾಗುತ್ತದೆ. ಅಲ್ಲವೆ ?"

ದೋಣಿಯಲ್ಲಿ ಕುಳಿತಿದ್ದವರಿಂದ ನಗುವಿನ ಲಹರಿ ಹರಿಯಿತು. ನಾವಿಕ ಕಣ್ಣು ರೆಪ್ಪೆ ಹೊಡೆದು ತಲೆದೂಗಿ ಹೇಳಿದ, "ನೋಡಿದಿರಾ, ನಾನೂ ಅಂಥ ಒಂದು ಮೀನು. ಶತ್ರುಗಳ ಕಣ್ಣಿಗೆ ಬೀಳಬಾರದೆಂಬ ಉದ್ದೇಶದಿಂದ ಈ ರೀತಿಯ ಹೊಸ ವೇಷವನ್ನು ಧರಿಸಿದ ಮೀನು."

ಮೊದಲಿಗಿಂತಲೂ ಜೋರಾದ ನಗು ಹರಿದು ಬಂದಿತು.

"ಒಳ್ಳೆಯ ಭರ್ಜರಿ ಮೀನು!"

"ದೊಡ್ಡ ಹಂದಿ ಮೀನು ಕಣ್ರೋ!"

"ಯಾವತ್ತಾದರೂ ಒಂದು ದಿವಸ ಗಾಳದ ಕೊಕ್ಕೆಗೆ ಸಿಕ್ಕಿಹಾಕಿಕೊಳ್ಳುತ್ತೇನೆ ಎ ಭಯವಿಲ್ಲವೋ?"

ಜನಗಳ ವ್ಯಾಖ್ಯಾನಗಳೂ ಗಲಾಟೆಯೂ ನಿಲ್ಲುವವರೆಗೆ ಸುಮ್ಮನಿದ್ದು ಬಳಿಕ "ನನ್ನನ್ನು ಹಿ ಯಲು ಪ್ರಯತ್ನಿಸಿ ನೋಡೋಣ. ನಾನು ನುಣುಚಿಕೊಂಡು ಬಿಡುತ್ತೇನೆ." ಎಂದ ನಾವಿಕ.

"ಸಂಗಾತಿಗಳೇ, ನನ್ನ ಸುತ್ತ ದೃಷ್ಟಿಯನ್ನೋಡಿಸಿದಾಗ ನಮ್ಮ ಕಡಲು ಮತ್ತು ನ ಭೂಮಿಯ ವಿಷಯವನ್ನು ಕುರಿತು ಆಲೋಚಿಸದೆ ಇರಲಾರೆ. ಸೂರ್ಯನು ತೇಜಸ್ಸಿನಿ ಬೆಳಗುತ್ತಾನೆ. ನೂರಾರು ಜಾತಿಯ ಮೀನುಗಳಿಂದ ಸಮುದ್ರ ಕಿಕ್ಕಿರಿದು ತುಂಬಿದೆ. ನ ಹೊಲಗಳ ತುಂಬ ಗೋಧಿಯ ತೆನೆಗಳು ಹರಡಿವೆ. ಹಣ್ಣಿನ ತೋಟಗಳಲ್ಲಿ ತರಹೇವಾರಿ ಹ ಗಳನ್ನು ಹೊತ್ತ ಮರಗಳು ನಿಂತಿವೆ. ಸೇಬು, ಏಪ್ರಿಕಾಟ್ ಚೆರಿ, ಪಿಯರ್ಸ್-ಎಷ್ಟು ಬಗೆ ಹಣ್ಣುಗಳು ರಸ ಮಿಡಿಯುತ್ತಿವೆ. ದ್ರಾಕ್ಷಿಹಣ್ಣುಗಳಿಗೆ ಕಡಮೆಯೇ? ಅಪಾರವಾಗಿ ದ್ರಾಕ್ಷಿಬ ಗಳು ಹರಡಿವೆ. ಸ್ಟೆಪ್ಪಿ ಹುಲ್ಲುಗಾವಲಿನಲ್ಲಿ ಕುದುರೆಗಳು, ಎತ್ತುಗಳು, ಹಸುಗಳು, ಕುರಿಗ ಹಿಂಡುಹಿಂಡಾಗಿವೆ. ಭೂಮಿತಾಯಿಯ ಹೊಟ್ಟೆಯಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣ ಮೊದಲಾದ ಲೋ ಸಂಪತ್ತು ಭರ್ತಿಯಾಗಿದೆ. ಭೂಮಿತಾಯಿಯ ಮಕ್ಕಳಿಗೆ ಇನ್ನೇನು ಬೇಕು? ನಮಗೆಲ್ಲ ಬೇ ದಷ್ಟು ಸಮೃದ್ಧಿಯಾಗಿದೆ, ಅಥವಾ ನಮ್ಮ ಕಣ್ಣಿಗೆ ಆ ರೀತಿ ಎಲ್ಲರೂ ಸುಖಶಾಂತಿಯಿಂದ ತ ಹೊಂದುವಷ್ಟು ಸಮೃದ್ಧವಾಗಿದೆ ಎಂದು ತೋರುತ್ತದಲ್ಲವೆ. ಆದರೆ ವಾಸ್ತವಾಂಶವೇನು ಎಂ ದನ್ನು ನೋಡಿ. ಒಂದು ಚೂರೂ ಕೆಲಸ ಮಾಡದೆ ಎಲ್ಲವನ್ನೂ ತಾವೇ ಬಾಚಿಕೊಳ್ಳುತ್ತಿ ಧನಿಕರೇ ನಮಗೆ ಎಲ್ಲೆಲ್ಲೂ ಕಾಣಿಸುತ್ತಾರೆ; ಮತ್ತು ಎಲ್ಲೆಲ್ಲೂ ಬಡವರು ತುಂಬಿದ್ದಾರೆ. ಹಗ ರಾತ್ರಿ ದುಡಿಯುವ ಬಡಪಾಯಿಗಳು ಪಾಪಿಗಳು. ಇಷ್ಟು ದುಡಿಯುತ್ತಾರಲ್ಲ ದುಡಿಮೆಯ ಅವರಿಗೇನಾದರೂ ಇದೆಯೆ? ಇದು ಹೇಗಾಯಿತು? ಕೇಳಿ ನಾನು ಹೇಳುತ್ತೇನೆ. ಉತ್ತರ ಬ ಸುಲಭವಾದುದು. ಈಗ ಮೀನುಗಾರರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ರೇನು ಮಾಡುತ್ತಾರೆ? ಮೀನುಗಳನ್ನು ಹಿಡಿಯುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ದು ಕಷ್ಟಪಟ್ಟು ಸಮುದ್ರದಲ್ಲಿ ಹಿಡಿದ ಮೀನುಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ ಅಲ್ಲಿ ಅವರಿಗೆ ಏನು ದೊರೆಯುತ್ತದೆ ಹೇಳಿ. ನೂರು ಕಪ್ಪೆ ಮೀನುಗಳಿಗೆ ಮೂವತ್ತೋ ವತ್ತೋ ಕೊಪೆಕ್ಕುಗಳು!"

ನಾವಿಕ ಮಾತನ್ನು ನಿಲ್ಲಿಸಿ ಸುತ್ತ ಒಂದು ಸಲ ದಿಟ್ಟಿಸಿನೋಡಿದ. 'ಡಾಲ್ಫಿನ್' ಕೊಳಕು ದೋಣಿಯ ಮೂತಿಯಮೇಲೆ ಬಿದ್ದುಕೊಂಡಿದ್ದ ಅಜ್ಜನಂತೆ ಕಾಣುತ್ತಿದ್ದ ಮು ನೊಬ್ಬ "ಮೂವತ್ತು ಗಿಟ್ಟಿದರೆ ನಮ್ಮ ಅದೃಷ್ಟ. ಮೊನ್ನೆತಾನೆ ನಾನು ನಾನೂರು ಮೀನುಗ ತೆಗೆದುಕೊಂಡು ಹೋದೆ. ಮಾರುಕಟ್ಟೆಯ ಅಂಗಡಿಯವಳು ಇಪ್ಪತ್ತೈದಕ್ಕಿಂತ ಮೇಲೆ ಕೆ ವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು. ಆದರೆ ಮರು ನಿಮಿಷ ಅವುಗಳನ್ನೇ ಎಂಬತ್ತರಂತೆ ತೆಗೆದುಕೊಳ್ಳಲಾರಂಭಿಸಿದಳು." ಎಂದ.

ಎಲ್ಲ ಮಿಾನುಗಾರರೂ ಒಟ್ಟಿಗೆ ಮಾತಾನಾಡಲಾರಂಭಿಸಿದರು. ನಾವಿಕ ಅವರ ಹುಣ್ಣನ್ನು ನಕಿದ್ದ. 'ದೋಣಿಗೆ ಹಾಯಿಯಲ್ಲದ ಮೇಲೆ ಅದೆಂಥ ಜನ್ಮ, ಅದು ನಾಯಿ ಜನ್ಮ' ಎಂದ ಬ್ಬ. ಮಾರುಕಟ್ಟೆಯವರ ಉರುಳಿಗೆ ತಾವು ಸಿಕ್ಕಿಬಿದ್ದಿದ್ದೇವೆಂದು ಉಳಿದವರು ಕೂಗಿ ಂಡರು.

ಹಿರಿಯರು ಹೀಗೆ ಗಲಾಟೆಯನ್ನು ಮಾಡುತ್ತಿದ್ದಾಗ ಹುಡುಗರು ಈ ಸಂದರ್ಭವನ್ನು ದುಕೊಳ್ಳಲಿಲ್ಲ. ಕೆಲವು ಜನ ಬೆಸ್ತರು ತಮ್ಮ ಮಕ್ಕಳನ್ನು ಜತೆಯಲ್ಲಿ ಕರೆದುಕೊಂಡು ದಿದ್ದರು. ಹೊಚ್ಚ ಹೊಸ ಚೀಟಿ ಬಟ್ಟೆಯ ಫ್ರಾಕುಗಳನ್ನು ಧರಿಸಿದ ಸಭ್ಯಹುಡುಗಿಯರೂ, ಗಾಲಿನ ಗಂಟುಮೋರೆಯ ಸಿಹಿ ಬಾದಾಮಿ ಬಣ್ಣದ ಕೆನ್ನೆಗಳ ಚರ್ಮದ ಮೇಲೆ ಹೊಳೆ ುವ ಮಚ್ಚೆಗಳನ್ನು ಹೊಂದಿದ್ದ ಹುಡುಗರೂ ದೋಣಿಗಳಲ್ಲಿ ಕುಳಿತಿದ್ದರು. ಹುಡುಗರು ುವಾದ ಬಟ್ಟೆಯ ರಷ್ಯನ್ ಕವಚಗಳನ್ನೂ ಲಂಗರಿನ ಚಿಹ್ನೆಯ ಗುಂಡಿಗಳುಳ್ಳ ಬೆಸ್ತರ ೋಪಿಗಳನ್ನೂ ಧರಿಸಿದ್ದರು. ಅವರೆಲ್ಲ, ಸ್ವಾಭಾವಿಕವಾಗಿ, ಗಾವ್ರಿಕನ ಗೆಳೆಯರೇ ಆಗಿದ್ದರು. ವರು ಗಲಾಟೆಮಾಡುವುದರಲ್ಲಿ ತಾವು ದೊಡ್ಡವರಿಗಿಂತ ಕಡಿಮೆ ಎನ್ನಿಸಿಕೊಳ್ಳಲಿಲ್ಲ.

ತಕ್ಷಣ ಹುಡುಗರು ಕೀಟಲೆಗಾರಂಭಿಸಿದರು. ಎರಡು ನಿಮಿಷಗಳು ಕಳೆಯುವುದಕ್ಕಿಲ್ಲ ಳ್ಳಿಯ ಕಡಲ ಕಾಳಗವೇ ಅವರಲ್ಲಿ ಆರಂಭವಾಗಿದ್ದಿತು. ಗಾವ್ರಿಕನ ಮುಖಕ್ಕೆ ಸತ್ತ ಕಪ್ಪೆ ಾನೊಂದು ಬಡಿಯಿತು. ಪೇತ್ಯನ ಟೋಪಿ ನೀರಿಗೆ ಬಿದ್ದು ಇನ್ನೇನು ಮುಳುಗುವುದರಲ್ಲಿದ್ದಿತು. ಗಲಾಟೆ ಮತ್ತು ನೀರಿನ ಅಪ್ಪಳಿಸುವಿಕೆಯನ್ನು ನೋಡಿ "ಬಾಯಿ ಮುಚ್ಚುತ್ತೀರೋ, ಇಲ್ಲ ಬ್ಬೊಬ್ಬರ ಕಿವಿಯನ್ನೂ ಕಿತ್ತುಹಾಕಿಬಿಡಲೋ!" ಎಂದು ಗಟ್ಟಿಯಾಗಿ ಟೆರೆಂಟಿ ಅರಚಿದ. ಆ ಾಟೆಗೂ ಮಿಾರಿದ ಎತ್ತರದ ದನಿಯಲ್ಲಿ ನಾವಿಕ ಆರಂಭಿಸಿದ.

"ನಿಜಸ್ಥಿತಿ ಏನೆಂಬುದನ್ನು ನೋಡಿ. ಬೆವರು ಸುರಿಸಿ ನಾವು ದುಡಿದು ಸಂಪಾದಿಸಿದುದರ ುಕ್ಕಾಲು ಭಾಗವನ್ನು ನಮ್ಮ ಯಜಮಾನರುಗಳು ದೋಚಿಕೊಂಡು ಬಿಡುತ್ತಾರೆ. ಇದರ ವಿರುದ್ಧ ಾವೇನು ಮಾಡಬಲ್ಲೆವು ಹೇಳಿ? ನಮ್ಮ ತಲೆಯನ್ನು ಏನಾದರೂ ಮೇಲಕ್ಕೆತ್ತಿದೆವೋ ಬಿತ್ತು ಲೆಯ ಮೇಲೆ ಖಡ್ಗ ಎನ್ನಿ. ನಮ್ಮನ್ನೆಲ್ಲ ಬಡಿದು ಬಾಯಿಗೆ ಹಾಕಿಕೊಳ್ಳುತ್ತಿದ್ದಾರೆ. ಸಂಗಾತಿ ಳೇ, ತಿಳಿಯಿರಿ. 'ಪೊತ್ಯೆಮ್ಕಿನ್' ಹಡಗಿನ ಮೇಲೆ ನಮ್ಮ ರಕ್ತಧ್ವಜವನ್ನು ಹಾರಿಸಿದೆವು, ಆದರೆ ದನ್ನು ಹೆಚ್ಚುಕಾಲ ಉಳಿಸಿಕೊಳ್ಳಲಾಗಲಿಲ್ಲ. ನಾವೊಂದು ಚಳುವಳಿಯನ್ನು ಆರಂಭಿಸಿದೆವು, ದರೆ ಅದಕ್ಕೂ ಬಿದ್ದಿತು ಪೆಟ್ಟು. ರಷ್ಯದ ನಮ್ಮ ಪವಿತ್ರ ಭೂಮಿಯಮೇಲೆ ಕೂಲಿಗಾರರ ರಕ್ತ ಷ್ಟೊಂದು ಚೆಲ್ಲಿದೆ ಎಂಬುದನ್ನು ಯೋಚಿಸಲೂ ಭಯವಾಗುತ್ತದೆ. ಗಲ್ಲುಯಂತ್ರದ ಮೇಲೆ, ತ್ರಹಿಂಸೆಯ ಮಾಳಿಗೆಗಳಲ್ಲಿ ಮತ್ತು ರಹಸ್ಯ ಪೋಲೀಸರ ಕತ್ತಲೆ ಕೋಣೆಗಳಲ್ಲಿ ನಮ್ಮ ಹೋದರರೆಷ್ಟು ಜನ ಪ್ರಾಣವನ್ನು ತೆತ್ತಿಲ್ಲ! ನಾನಿದನ್ನೆಲ್ಲ ನಿಮಗೆ ಹೇಳಬೇಕಾಗಿಲ್ಲ; ನಿಮಗೇ ೆನ್ನಾಗಿ ಗೊತ್ತಿದೆ. ಇನ್ನೂ ನಿನ್ನೆ ತಾನೆ ನಿಮ್ಮ ಶ್ರೇಷ್ಠ ಮುದುಕನೊಬ್ಬನನ್ನು ಮಣ್ಣುಮಾಡಿ ದ್ದೀರಿ. ತನ್ನ ಮೊಮ್ಮೊಕ್ಕಳು ಅವರ ಮಕ್ಕಳು ಸುಖವಾಗಿರಲೆಂದು ಅವನು ಸದ್ದಿಲ್ಲದೆ ತನ್ನ ಪ್ರಾಣವನ್ನು ಅರ್ಪಿಸಿದ. ಅವನ ಘನ ಕೂಲಿಗಾರ ಹೃದಯವು ಬಡಿಯುವುದು ನಿಂತುಹೋಗಿದೆ. ನಿಮಗೆಲ್ಲ ಅತ್ಯಮೂಲ್ಯವಾಗಿದ್ದ ಆತನ ಆತ್ಮ ಹಾರಿಹೋಗಿದೆ. ಅದು ಎಲ್ಲಿದೆ ಈಗ? ಅದು ಇಲ್ಲಿಂದ ಹೊರಟು ಹೋಗಿದೆ, ಪುನಃ ಹಿಂದಿರುಗುವಂತಿಲ್ಲ. ಈಗ ಅದು ಕಡಲ ಬಿಳಿಯ ಪಕ್ಷಿಯಂತೆ

ನಮ್ಮೆಲ್ಲರ ತಲೆಯಮೇಲೆ ಹಾರಾಡುತ್ತಿರಬಹುದು. ನಮ್ಮ ಸ್ವಾತಂತ್ರ್ಯಕ್ಕಾಗಿ ನಾವು ಪುನಃ ಪ
ಹೊಡೆದಾಡುತ್ತೇವೆ, ಖಂಡಿತ ನಮ್ಮನ್ನು ನಾವು ಬಿಟ್ಟುಕೊಡುವುದಿಲ್ಲ; ದಮನ ನೀತಿಯನ್ನು ಅ
ಸರಿಸುತ್ತಿರುವ ಮತ್ತು ನಮ್ಮನ್ನು ತುಳಿಯುತ್ತಿರುವ ಸರ್ಕಾರವನ್ನು ಉರುಳಿಸುವವರೆಗೂ ನಾ
ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂಬ ನಮ್ಮ ನಿರ್ಧಾರವನ್ನು ಕಂಡು ಅದಕ್ಕೆ ಆನ
ವಾಗುತ್ತಿರಬೇಕು."

ನಾವಿಕ ಪುನಃ ನಿಶ್ಶಬ್ದನಾದ. ಕರವಸ್ತ್ರದಿಂದ ಹಣೆಯ ಬೆವರನ್ನು ಒರೆಸಿಕೊಂಡ. ಗ
ಬೀಸಿದಾಗ ಆ ಕೆಂಪು ಕರವಸ್ತ್ರ ಬಾವುಟದಂತೆ ಪಟಪಟನೆ ಹಾರಾಡಿತು.

ಸಂಪೂರ್ಣ ಮೌನ ದೋಣಿಗಳನ್ನು ಆವರಿಸಿತ್ತು. ದಡದಿಂದ ಪೋಲೀಸರ ಸೀಟಿ
ಶಬ್ದ ಕೇಳಿಬರಲಾರಂಭಿಸಿತ್ತು. ನಾವಿಕ ಆ ಕಡೆಗೆ ನೋಡಿ ಕಣ್ಣು ಮಿಟುಕಿಸಿದ.

"ನಮ್ಮ ಸ್ನೇಹಿತರಿಗಾಗಲೆ ಚಿಂತೆ ಹತ್ತಿದೆ. ನೀವೇನೂ ಲಕ್ಷಿಸಬೇಡಿ. ಆ ಹಂದಿಗ
ತಮಗೆ ಇಷ್ಟಬಂದಂತೆ ಕೂಗಿಕೊಳ್ಳಲಿ. ಅದರಿಂದ ಅವರು ಏನನ್ನು ಸಾಧಿಸುತ್ತಾರೆ
ನೋಡೋಣ!"

ನಾವಿಕ ದಡದ ಕಡೆಗೆ ಮೂಗು ಮುರಿದ. ಸುಂದರವಾದ ಕೊಡೆಗಳೂ, ಗರಿಟೋಪಿಗಳ
ದಡದಲ್ಲಿ ಹರಡಿದ್ದುವು.

ಮರುಕ್ಷಣದಲ್ಲಿ ಸೊಗಸಾದ 'ನದ್ಯ ಮತ್ತು ವೀರ' ದೋಣಿಯಲ್ಲಿ ಹಾಯಾಗಿ ಒರಗಿದ್ದ ಫೇ
ರಾಗಮಾಲಿಕೆಯಲ್ಲಿ "ಮನೆಯ ಹಂಬಲ" ಎಂಬ ಹಾಡಿನ ನಡಿಗೆಯನ್ನು ನುಡಿಸಲಾರಂಭಿಸಿದ.

ಬಣ್ಣದ ಪೊಟ್ಟಣಗಳು, ಒಣ ಸೀನೀರಿನ ಮಿಾನುಗಳು, ಬ್ರೆಡ್ಡು ಮತ್ತು ಶೀಸೆಗಳು ಎ
ದಲೋ ಇದ್ದಕ್ಕಿದ್ದ ಹಾಗೆ ಬಂದಂತೆ ದೋಣಿಗಳಲ್ಲಿ ಕಾಣಿಸಿಕೊಂಡುವು. ನಾವಿಕ ತನ್ನ ದಾ
ಹಣಿಗೆ ಚೀಲದೊಳಕ್ಕೆ ಕೈಹಾಕಿ ಮಿಠಾಯಿಗಳನ್ನೂ ತಿಂಡಿಗಳನ್ನೂ ತೆಗೆದು ದೋಣಿಯವರಿಗ
ಸಮನಾಗಿ ಹಂಚಿದ. ಸೊಗಸಾದ ಒಣಗಿದ ಸೀನೀರಿನ ಮಿಾನು, ಎರಡು ಮಿಠಾಯಿ ಸುರ
ಮತ್ತು ಒಂದು ಕೆನ್ನೀಲಿಯ ಪೊಟ್ಟಣ-ಇವುಗಳು ಪೇತ್ಯನ ಪಾಲಿಗೆ ಬಂದುವು.

ಮೇ ದಿನದ ವಿಹಾರವು ಉಲ್ಲಾಸಕರವಾದ ಕೂಲಿಗಾರರ ನಿಜವಾದ ಈಸ್ಟರ್ ಹಬ್ಬ
ಆಗಿತ್ತು.

ಪೋಲೀಸಿನವರು ಸಮುದ್ರತೀರದಲ್ಲಿ ಓಡಾಡುತ್ತ ಶಿಳ್ಳಿಯನ್ನು ಊದುತ್ತಿದ್ದರು. ದೋ
ಗಳು ಬೇರೆಬೇರೆ ದಿಕ್ಕುಗಳನ್ನು ಹಿಡಿದು ಚಲಿಸಲಾರಂಭಿಸಿದುವು.

ಕ್ಷಿತಿಜದ ಆ ತುದಿಯಲ್ಲಿ ಮೋಡಗಳು ತಲೆಹಾಕಿದುವು. ಫೇದ್ಯ ಆಕಾಶದ ಕಡೆಗೆ ಮ
ಮಾಡಿಕೊಂಡು ತೋಳುಗಳನ್ನು ದೋಣಿಯ ಆಚೀಚೆಯ ಅಂಚುಗಳ ಮೇಲೆ ಬಿಟ್ಟುಕೊಂ
ಮಲಗಿದ. ಸುಸ್ಪಷ್ಟವಾದ ತಾರ ಸ್ವರದಲ್ಲಿ ಪ್ರಸಿದ್ಧವಾದ ನಾವಿಕರ ಹಾಡನ್ನು ಹಾಡಲಾರಂಭಿ

ಗಂಭೀರ ಸಾಗರ ವಿದೆನಿತು ವಿಸ್ತಾರ
ಕಣ್ಣಿಗೆ ಕಾಣಿಸದಿರುವುದಿದರ ತೀರ
ಸಖನೇ, ಸಾಗುತಿರುವೆವಾವತಿದೂರ
ಒಲವಿನ ತಾಯ್ನೆಲವ ಬಿಟ್ಟು ಬಲುದೂರ.

ಹುಟ್ಟುಗಳು ಮಿಂಚಿದುವು. ಹಾಡೂ ತೇಲುತ್ತ ಹೋಯಿತು.

"ನೇಹಿಗನೆ! ಬಲು ಸೋತಿಹುದೆನ್ನಯ ಮತಿ,
ದಾರಿ ಕಾಣಿಸದು ಮುಂದಿನ್ನೇನು ಗತಿ."
ನುಡಿದನಿಂತುರಿಗಾಹಿ ದೋಣಿಯೊಡೆಯನಿಗಾಗ ....

ಈಗ ಹಾಡು ಕಿವಿಗೆ ಕೇಳಿಸುವುದು ನಿಲ್ಲುತ್ತ ಬಂದಿತು.

"ಹುಟ್ಟುಗಳನ್ನು ಸಿದ್ಧವಾಗಿಟ್ಟುಕೊಳ್ಳಿ!" ಎಂದು ಹುಡುಗರಿಗೆ ನಾವಿಕ ಆಜ್ಞೆಮಾಡಿದ. ೋರಾಗಿ ಹುಟ್ಟುಹಾಕಿ!" ಅನಂತರ ಟೆರೆಂಟಿಯ ಬೆನ್ನನ್ನು ತಟ್ಟುತ್ತ ನಾವಿಕ ಹಾಡಿದ.

ಪುಟ್ಟ ಬಿಳಿಯ ಹಡಗು ಕಾಣುತಿದೆ
ಆಳವಾದ ಕಪ್ಪು ಕಡಲಿನಲಿ.
ಎನ್ನೊಲವಿನ ನೀರ ಪಯಣಿಗನು
ಬೇಗ ಮನೆಗೆ ಬರುವ ನಲಿಯುತಲಿ.

"ಬನ್ರೋ ಪೋಲಿಗಳಾ! ದನಿಗೂಡಿಸಿ!"

ಟೆರೆಂಟಿ ಮತ್ತು ಆ ಎರಡು ಹುಡುಗರೂ ಉಬ್ಬಿನಿಂದ ಜತೆಗೆ ಹಾಡಲಾರಂಭಿಸಿದರು.

ಏಕಳುವೆ ಮರುಸ್ಕ ನೀನಿನ್ನು
ಎಂದಾದರೂ ನೀನೆನ್ನವಳು.
ಬಂದುಬಿಡುವೆ ನಿನ್ನ ಬಳಿಗಿನ್ನು
ನೂರೆತೆರೆಯ ಕಡಲನು ಕಳೆದುಳಿದು.

ಕಡಲ ಬಿಳಿಯ ಪಕ್ಷಿಯೊಂದು ರೆಕ್ಕೆಗಳನ್ನು ಹರಡಿಕೊಂಡು ದೋಣಿಯ ಮೇಲುಗಡೆ ್ಲಲ್ಲದಂತೆ ಗಾಳಿಯಲ್ಲಿ ತೇಲಿಕೊಂಡು ಹೋಯಿತು. ಬಿಳಿ ಹಕ್ಕಿಯು ಹಾರುತ್ತಿದ್ದಂತೆ ಡನ್ನು ಹವಳದಂತೆ ಹೊಳೆಯುವ ಕೊಕ್ಕಿನಲ್ಲಿ ಅಂತುಕೊಂಡು ಬಹುದೂರ ಒಯ್ಯುತ್ತಿದೆಯೋ ಬಂತೆ ಭಾಸವಾಗುತ್ತಿದ್ದಿತು. ಬಹು ಹೊತ್ತು ಹುಡುಗರು ಕಣ್ಣಿಂದಲೇ ಆ ಪಕ್ಷಿಯನ್ನು ಬಾಲಿಸಿದರು. ಮಂಜನಂತೆ ಧವಳವಾದ ಅಜ್ಜನ ಆತ್ಮ ತನ್ನ ಮೊಮ್ಮಕ್ಕಳನ್ನೂ ತನ್ನ ದೋಣಿ ನ್ನೂ ನೋಡಲು ಈ ರೂಪದಲ್ಲಿ ಬಂದಿದೆಯೇ ಎಂದು ಭಾವಿಸಿದರು.

ಹೀಗೆ ಮೇ ದಿನದ ವಿಹಾರ ಅಂತ್ಯಗೊಂಡಿತು.

ಆದರೆ ಅವರು ನೇರವಾಗಿ ದಡವನ್ನು ಸೇರಲಿಲ್ಲ. ಸರಿಯಾದ ಸಮಯವನ್ನು ನಿರೀಕ್ಷಿಸುತ್ತ ಮಾರು ಎರಡು ಗಂಟೆಗಳ ಕಾಲ ನೀರಿನ ಮೇಲೇ ಸುತ್ತುಹೊಡೆಯುತ್ತಿದ್ದರು. ಮೊದಲು ಟೆರೆಂಟಿ ನ್ನು ಜೊಲೊತಾಯ್ ಬೆರೆಗ್ ಬಳಿ ದಡಕ್ಕೆ ಸೇರಿಸಿ ನಾವಿಕನನ್ನು ಲಾಂಗ್‌ರಾನ್‌ಗೆ ಕರೆದು ಂಡು ಹೋದರು.

ದಡದ ಮೇಲೆ ಕಾಲಿಡುವುದಕ್ಕೆ ಮೊದಲು ನಾವಿಕ ಬಹುಹೊತ್ತು ಸುತ್ತಮುತ್ತ ಪರೀಕ್ಷಿಸಿ ೀಡಿದ. ಕೊನೆಗೆ ಕೈಯನ್ನು ಬೀಸುತ್ತ "ಇನ್ನು ನಮ್ಮ ಅದೃಷ್ಟ!" ಎಂದು ಹೇಳಿ ಜರ್ಮನ್ ಳ್ಳಿಯ ಕುದುರೆ ತಲೆಯ ಹಿಡಿಯಿದ್ದ ಬೆತ್ತವನ್ನು ಕಂಕುಳಲ್ಲಿ ಇರುಕಿಕೊಂಡು ದೋಣಿಯಿಂದ ಡಕ್ಕೆ ಹಾರಿದ. "ಮುಂದಿನ ನಮ್ಮ ಸವಿ ಭೇಟಿಯ ಕಾಲವನ್ನು ಎದುರುನೋಡೋಣ. ನಿಮಗೆ ದನೆಗಳು." ಎಂಬು ಆತುರದಲ್ಲಿ ಹೇಳಿದ. ಅನಂತರ ಗಾಳಿಸಂಚಾರಕ್ಕಾಗಿ ಬಂದಿದ್ದ ಜನಗಳ ಡುವೆ ಮಾಯವಾದ.

ಪೇತ್ಯ ಊಟದ ಹೊತ್ತಿಗೆ ಮನೆಯನ್ನು ಸೇರಿಕೊಂಡ. ಹೊಸದಾಗಿ ಹುಟ್ಟುಹಾಕಿದ್ದರಿ ಅವನ ಅಂಗೈಯಲ್ಲಿ ಗುಳ್ಳೆಗಳಾಗಿದ್ದುವು. ಒಂದೇ ಒಂದು ದಿವಸದ ಶ್ರಮದಿಂದ ಅವನ ಮು ಕೆಂಪಗೆ ನಿಗಿನಿಗಿ ಎನ್ನುತ್ತಿದ್ದಿತು.

೪೫. ಅನುಕೂಲ ಮಾರುತ

ಒಂದು ವಾರ ಕಳೆಯಿತು.

ಈ ಅವಧಿಯಲ್ಲಿ ಸಮುದ್ರತೀರದಲ್ಲಿದ್ದ ತನ್ನ ಸ್ನೇಹಿತನನ್ನು ಭೇಟಿಮಾಡಲು ಪೇ ಒಮ್ಮೆಯೂ ಹೋಗಿರಲಿಲ್ಲ. ಬೇಸಗೆಯ ರಜಕ್ಕಾಗಿ ಹೊಲಮನೆಗೆ ಹೋಗಲು ಸಿದ್ಧತೆಗಳ ಮಾಡಿಕೊಳ್ಳುತ್ತಿದ್ದ. ಪೇಟೆಯಲ್ಲಿ ಬೇಕಾದ ವಸ್ತುಗಳನ್ನು ಕೊಳ್ಳಲು ಕೆಲವು ಸಮಯ ತ ಯೊಡನೆ ಕೆಲವು ವೇಳೆ ಚಿಕ್ಕಮ್ಮನೊಡನೆ ಪೇಟೆಗೆ ಹೋಗಿಬರುತ್ತಿದ್ದ.

ನಿಜವಾದ ಬೇಸಗೆ ಆಗಲೆ ಮೊದಲಾಗಿದ್ದಿತು.

ಒಡೆಸ್ಸದಲ್ಲಿ ಮೇ ಮತ್ತು ಜೂನ್ ತಿಂಗಳುಗಳಿಗೆ ಯಾವ ಹೆಚ್ಚಿನ ವ್ಯತ್ಯಾಸವೂ ಇರಲಿ ನಗರದಲ್ಲಿ ದಗೆ ಏರುತ್ತಿತ್ತು. ಉಪ್ಪರಿಗೆಯ ಮೊಗಸಾಲೆ ಮತ್ತು ಅಂಗಡಿಗಳ ಮುಂದು ಗಳಲ್ಲಿ ಕೆಂಪು ಅಂಚನ್ನು ಕಟ್ಟಿದ ಪಟಪಟಿಯ ಬಟ್ಟೆಗಳನ್ನು ನೆಳಲಿಗಾಗಿ ಕಟ್ಟಲಾಗಿದ್ದಿತು. ಆ ತಾನೆ ಹೂವು ಬಿಡಲಾರಂಭಿಸಿದ್ದ ಜಾಲಿಯ ಮರಗಳ ನೆರಳು ಆ ಬಟ್ಟೆಗಳ ಮೇಲೆ ಬಿ ನೋಡಲು ಅಂದವಾಗಿದ್ದಿತು.

ನಾಯಿಗಳು ನೀರನ್ನು ಹುಡುಕುತ್ತ ನಾಲಗೆಯನ್ನು ಚಾಚಿಕೊಂಡು ಬೀದಿಗಳಲ್ಲಿ ಓಡಲಾ ಭಿಸಿದ್ದುವು. ಮನೆಗಳ ನಡುವಿನಿಂದ ಜ್ವಲಿಸುತ್ತಿರುವ ಸಮುದ್ರದ ದೃಶ್ಯ ಇದ್ದಕ್ಕಿದ್ದಂತೆ ಕಣ್ಣಿ ಬೀಳುತ್ತಿದ್ದಿತು. ನಗರದ ಕೇಂದ್ರದಲ್ಲಿ ದೊಡ್ಡ ಕ್ಯಾನ್‌ವಾಸ್ ಬಟ್ಟೆಗಳ ಮೇಲ್ಕಟ್ಟುಗಳ ನೆ ನಲ್ಲಿ ಚಿಲ್ಲರೆ ಕೊಡುವವರೂ ಹೂವಾಡಗಿತ್ತಿಯರೂ ಪುಟ್ಟ ಹಸುರು ಮೇಜಗಳ ಬಳಿ ಕ ತಿರುತ್ತಿದ್ದರು.

ಬಿಸಿಲಿನಿಂದ ಮೆತ್ತಗಾದ ರಸ್ತೆಯ ತಾರು ಹಿಮ್ಮಡಿಗಳಿಗೆ ಅಂಟಿಕೊಳ್ಳುತ್ತಿದ್ದಿತು. ಬಾ ಗಳಲ್ಲಿ ಕುದಿಯುವಂತೆ ಎಲ್ಲೆಲ್ಲೂ ತಾರು ಗುಳ್ಳೆಯೇಳುತ್ತಿದ್ದಿತು.

ದಿನವೆಲ್ಲ ಒಂದಲ್ಲ ಒಂದು ಸಾಮಾನನ್ನು ಕೊಂಡುಕೊಳ್ಳುತ್ತ ಅಂಗಡಿಯಿಂದ ಅಂಗ ಹೋಗುವುದೆಂದರೆ ಅದೆಷ್ಟು ಆನಂದ. ಹಳ್ಳಿಗಳಲ್ಲಿ ರಜಾದಿನಕ್ಕೆ ಬೇಕಾಗುವ 'ಕ್ರೋಕೇ' ಆ ಕಬ್ಬಿಣದ ಕಮಾನು, ಪಾದರಕ್ಷೆಗಳು, ಚಿಟ್ಟೆಬಲೆಗಳು, ಮೀನು ಹಿಡಿಯುವ ಗಾಳದ ಕೋಲುಗ ರಬ್ಬರ್ ಚೆಂಡುಗಳು, ಬಾಣಬಿರುಸು- ಮೊದಲಾದುವುಗಳನ್ನು ಕೊಂಡುಕೊಂಡು ಆ ಕಾಗ ಚಿಕ್ಕಪುಟ್ಟ ಪೊಟ್ಟಣಗಳನ್ನೆಲ್ಲ ಕೈಯಲ್ಲಿ ಹಿಡಿದುಕೊಂಡು ಮೇಲ್ಹೊವಣಿಯಿಲ್ಲದ ಬೇಸಗೆಯ ಕು ಟ್ರಾಮುಗಾಡಿಗಳಲ್ಲಿ ಮನೆಗೆ ಬರುವುದೆಂದರೆ ಅದೊಂದು ಹಬ್ಬ!

ಪೇತ್ಯನ ಶರೀರವು ನಗರದ ಸೆಕೆಯಲ್ಲಿ ಸೊರಗುತ್ತಿದ್ದರೂ ಅವನ ಮನಸ್ಸು ಆಗಲೆ ಹಳ್ಳಿ ಕಡೆಗೆ ಓಡುತ್ತಿದ್ದಿತು; ಆಗಲೆ ಹಡಗನ್ನು ಏರಿ ಸಮುದ್ರದ ಮೇಲಿನ ನೀಲಿಯ ತಂಪುಗಾಳಿಯ ಅನುಭವಿಸುತ್ತ ಯಾನ ಮಾಡುತ್ತಿದ್ದಿತು.

ಒಂದು ದಿನ ಬೆಳಗ್ಗೆ ಅಷ್ಟು ಹೊತ್ತಿಗೇ ಪರಿಚಿತವಾದ ಸಿಳ್ಳಿನ ಧ್ವನಿ ಪೇತ್ಯನಿಗೆ ಕೇಳಿ

ವ್ರಿಕ್ ಮನೆಯ ಅಂಗಳದ ಮಧ್ಯದಲ್ಲಿ ಕಾಣಿಸಿದ. ಕೂಡಲೆ ಪೇತ್ಯ ಮಹಡಿಯಿಳಿದು ಬಂದ. ವ್ರಿಕನ ಮುಖದಲ್ಲಿ ಏನೋ ಚಿಂತೆ ಇಣಿಕಿ ಹಾಕುತ್ತಿದ್ದಿತು. ಅವನ ಕಳೆಗುಂದಿದ ಮುಖ, ಗಿಯಾಗಿ ಕಚ್ಚಿದ ತುಟಿಗಳು, ಮತ್ತು ಅವನ ಕಣ್ಣುಗಳಲ್ಲಿನ ಅಸ್ವಾಭಾವಿಕವಾದ ಹೊಳಪು- ವುಗಳು ಏನೋ ಅಸಂದರ್ಭ ನಡೆದಿದೆಯೆಂಬುದನ್ನು ಸೂಚಿಸುತ್ತಿದ್ದುವು. ಪೇತ್ಯನ ಹೃದಯ ಂಕೋಚಗೊಂಡಿತು.

"ಏನು ವಿಷಯ"? ತನಗೆ ಗೊತ್ತಿಲ್ಲದಂತೆಯೇ ಅವನ ಧ್ವನಿ ಮೃದುವಾಗಿ ಬಂದಿತು. ವ್ರಿಕ್ ಹುಬ್ಬು ಗಂಟಿಕ್ಕಿ ಪಕ್ಕಕ್ಕೆ ತಿರುಗಿಕೊಂಡ.

"ಏನೂ ಇಲ್ಲ. ಇಂದು ನಮ್ಮೊಡನೆ ದೋಣಿಯಲ್ಲಿ ಬರುತ್ತೀಯೋ?"

"ಯಾವಾಗ?"

"ಈಗ. ನೀನು, ಮೋತ್ಯ ಮತ್ತು ನಾನು ಮೂವರೂ ದೋಣಿಗೆ ಹಾಯಿಯನ್ನೇರಿಸಿಕೊಂಡು."

"ಸುಳ್ಳು."

"ನಾಯಿಗಳು ಸುಳ್ಳು ಹೇಳುತ್ತಾರೆ. ನಾನಲ್ಲ."

"ಹಾಯಿಯನ್ನೇರಿಸಿ ಕೊಂಡೋ?"

"ಇಲ್ಲದಿದ್ದರೆ ಥೂ ಎಂದು ನನ್ನ ಮುಖಕ್ಕೆ ಉಗಿದು ಬಿಡು."

"ಆನಂದ ವಿಹಾರವೋ?"

"ಏನು ಬೇಕಾದರೂ ಕರೆದುಕೋ. ಬರುತ್ತೀಯೋ?"

"ಇದೇನು ಪ್ರಶ್ನೆ!"

"ಹಾಗಿದ್ದರೆ ಛಟ್ಟನೆ ಹೊರಡು."

ಹಾಯಿಯನ್ನೇರಿಸಿಕೊಂಡು ದೋಣಿಯಲ್ಲಿ ಆನಂದ ವಿಹಾರ! ಸ್ವಾಭಾವಿಕವಾಗಿ ಟೋಪಿ ಯನ್ನು ತೆಗೆದುಕೊಂಡುಬರಲು ಪುನಃ ಮಹಡಿಯೇರಿ ಹೋಗಿಬರುವಷ್ಟೂ ಪೇತ್ಯನಿಗೆ ತಾಳ್ಮೆಯಿರು ದು ಕಷ್ಟವಾಗಿದ್ದಿತು. ಹತ್ತು ನಿಮಿಷಗಳು ಕಳೆಯುವುದರೊಳಗೆ ಹುಡುಗರಿಬ್ಬರೂ ಸಮುದ್ರ ೀರವನ್ನು ಸೇರಿದ್ದರು.

ಧ್ವಜಸ್ತಂಭವನ್ನು ಸರಿಯಾಗಿ ನಿಲ್ಲಿಸಿ ಅದಕ್ಕೆ ಹಾಯಿಯನ್ನು ಮಡಿಸಿ ಕಟ್ಟಿದ್ದಿತು. ದೋಣಿ ರ್ಧ ನೀರಿನ ಮೇಲೆ ಅರ್ಧ ದಡದಮೇಲೆ ನಿಂತಿದ್ದು ಗಾಳಿಗೆ ಅಲ್ಲಾಡುತ್ತಿದ್ದಿತು. ಮೋತ್ಯ ರಿಗಾಲಿನಲ್ಲಿ ದೋಣಿಯೊಳಗೆ ನಿಂತಿದ್ದಳು. ದೋಣಿಯ ಹಿಂತುದಿಯಲ್ಲಿದ್ದ ಪೆಟ್ಟಿಗೆಯೊಳಕ್ಕೆ ರದ ನೀರಿನ ಪಾತ್ರೆಯನ್ನೂ ಬ್ರೆಡ್ಡನ್ನೂ ಇಡುತ್ತಿದಳು.

ದೋಣಿಗೆ ಹೆಗಲುಕೊಟ್ಟು ತಳ್ಳುತ್ತ ಗಾವ್ರಿಕ್ "ನೀನೂ ಒಂದು ಕೈಹಾಕು" ಎಂದ. ೋಣಿಯನ್ನು ಹೆಚ್ಚು ಕಷ್ಟವಿಲ್ಲದೆ ನೀರಿನ ಮೇಲಕ್ಕೆ ತಳ್ಳಿ ಅದರೊಳಕ್ಕೆ ಇಬ್ಬರೂ ನೆಗೆದು ಕುಳಿತರು.

"ಇಗೋ ಹೊರಟೆವು!"

ನೀಳ ಚೌಕದ ಹೊಸ ಹಾಯಿಯನ್ನು ಬಿಡಿಸಿ ಗಾವ್ರಿಕ್ ಚತುರತೆಯಿಂದ ಅದನ್ನು ನಿಲ್ಲಿಸಿದ. ಬಿರುಸಾದ ಗಾಳಿ ಹಾಯಿಯೊಳಕ್ಕೆ ತುಂಬಿಕೊಂಡಿತು. ದೋಣಿ ಮುಂದಕ್ಕೆ ಹರಿಯಿತು. ದೋಣಿಯ ಹಿಂತುದಿಯಲ್ಲಿ ಬಗ್ಗಿ ಕುಳಿತುಕೊಂಡು ಗಾವ್ರಿಕ್ ಪ್ರಯತ್ನಪೂರ್ವಕವಾಗಿ ಭಾರವಾದ

ಚುಕ್ಕಾಣಿ ಹಲಗೆಯನ್ನು ಸೇರಿಸಿ ಅದನ್ನು ಹಿಡಿಕೆಗೆ ಸಿಕ್ಕಿಸಿದ. ಚುಕ್ಕಾಣಿ ಹಲಗೆಯ ಹಿ ಕ್ಕೊಳಪಟ್ಟು ದೋಣಿ ನೆಟ್ಟಗೆ ಹೋಗಲಾರಂಭಿಸಿತು.

"ಎಚ್ಚರಿಕೆ ಅಲ್ಲಿ ನೋಡು!"

ಪೇತ್ಯ ದೋಣಿಯ ನೆಲದಮೇಲೆ ಕುಳಿತುಕೊಂಡು ತಲೆಯನ್ನು ಬಗ್ಗಿಸಿದ. ಗಾಳಿ ಬೀಸಿ ದರಿಂದ ಹಡಗಿನ ಹಾಯಿಯನ್ನು ಚಾಚುವುದಕ್ಕೆ ಅದರ ತಳಕ್ಕೆ ಸೇರಿಸಿದ್ದ ಮರದ ದಿಮ್ಮಿ ಎಡಗಡೆಯಿಂದ ಬಲಗಡೆಗೆ ತಿರುಗಿ ಅವನ ತಲೆಯ ಮೇಲೆಯೇ ಹೋಯಿತು. ಆಗ ಅವನ ಕಣ ದುರಿಗೆ ಥಳಥಳಿಸುತ್ತ ವಿಶಾಲವಾದ ಸಮುದ್ರ ಕಾಣಿಸಿತು; ಸಮುದ್ರದಡದ ಮೊಣಕಾಲೆತ್ತ ಕಳೆಗಳ ಮತ್ತು ಕಾಡುಕೊತ್ತಂಬರಿ ಗಿಡಗಳ ನಡುವೆ ನಿಂತುಕೊಂಡು ಮೋತ್ಯಳ ತಾಯಿ ಕೈಯನ ಕಣ್ಣಿಗೆ ನೆರಳಾಗುವಂತೆ ಹಣೆಯ ಸಮಕ್ಕೆ ಹಿಡಿದುನೋಡುತ್ತಿದ್ದ ದೃಶ್ಯ ಕಣ್ಮರೆಯಾಯಿತು.

ಗಾವ್ರಿಕ್ ಚುಕ್ಕಾಣಿ ಹಿಡಿಕೆಯನ್ನು ತಿರುಗಿಸಿ ಅದು ಬಿಗಿಯಾಗಿ ನಿಲ್ಲುವಂತೆ ಅದ ಬೆನ್ನನ್ನು ಕೊಟ್ಟುಕೊಂಡು ತನ್ನ ಭಾರವನ್ನೆಲ್ಲ ಅದರಮೇಲೆ ಬಿಟ್ಟ. ಧ್ವಜಸ್ತಂಭವು ಒಂದು ಕಡ ವಾಲಿತು. ದೋಣಿಯ ಒಂದು ಪಕ್ಕದಲ್ಲಿ ನೀರು ಗುಳುಗುಳಿಸಿತು. ಮೆಲಕ್ಕೆ ಮೂತಿಯ ಕೊಂಡು ನೆಗೆಯುತ್ತ ತನ್ನ ಚಪ್ಪಟೆತಳದಿಂದ ಅಲೆಗಳಿಗೆ ಛಟೀರನೆ ತಗುಲುತ್ತ ದೋಣಿ ದಡ ಸಮಾನಾಂತರವಾಗಿ ಸಮುದ್ರದ ಮೇಲೆ ಹೋಗಲಾರಂಭಿಸಿತು.

"ಎಲ್ಲಿಗೆ?" ಎಂದು ಪ್ರಶ್ನಿಸಿದ.

"ನೋಡುತ್ತಿರು."

"ದೂರವೋ?"

"ನಿನಗೇ ಗೊತ್ತಾಗುವುದು."

ಅದೇ ಗಂಭೀರವಾದ ಪೆಡಸಾದ ಮಿಂಚು ಗಾವ್ರಿಕನ ಕಣ್ಣುಗಳಲ್ಲಿ ಹೊಳೆಯುತ್ತಿದ್ದಿ ಪೇತ್ಯ ಮೋತ್ಯಳ ಕಡೆಗೆ ದೃಷ್ಟಿಯನ್ನು ತಿರುಗಿಸಿದ. ಅವಳು ಹಡಗಿನ ಮೂತಿಯ ಮೇ ಎರಡು ಪಕ್ಕಗಳಿಗೂ ಕಾಲುಗಳನ್ನು ಇಳಿಬಿಟ್ಟುಕೊಂಡು ಕುಳಿತು ಮುಂದುಗಡೆಯಲ್ಲೇ ನೆ ದೃಷ್ಟಿಯಿಟ್ಟಿದ್ದಳು. ಅವಳ ಕೆನ್ನೆಗಳು ಬಿಗಿತಗೊಂಡು ಒಳಕ್ಕೆ ಎಳೆದುಕೊಳ್ಳಲ್ಪಟ್ಟಿದ್ದು ಗಾಳಿ ಜಡೆಗೆ ಸಾಕಾಗದ ಅವಳ ತಲೆಗೂದಲನ್ನು ಹಾರಿಸುತ್ತಿತ್ತು.

ಸ್ವಲ್ಪಕಾಲ ಮೂವರೂ ನಿಶ್ಶಬ್ದವಾಗಿದ್ದರು. ಇದ್ದಕ್ಕಿದ್ದಂತೆ ಗಾವ್ರಿಕ್ ನೀಲಿಯ ಉಕ್ಕಿ ಅಗಲವಾದ ಗಡಿಯಾರವನ್ನು ಜೇಬಿನಿಂದ ಹೊರಕ್ಕೆ ತೆಗೆದ. ಅದನ್ನು ಕಿವಿಗೆ ಇಟ್ಟುಕೊಂ ಅದರ ಟಿಕ್ ಟಿಕ್ ಶಬ್ದವನ್ನು ಆಲಿಸಿದ. ಅನಂತರ ಬೆರಳಿನ ಉಗುರಿನಿಂದ ಸುಲಭವಾಗಿ ಅ ಮುಚ್ಚಳವನ್ನು ತೆಗೆದ. ಅವನ ಕೈಬೆರಳ ಉಗುರಿನ ಮೇಲೆ ಬಿಳಿಯ ಚುಕ್ಕೆಗಳು ಇದ್ದು ಇದು ಅದೃಷ್ಟದ ಗುರುತೆಂಬ ನಂಬಿಕೆ ಎಲ್ಲರಿಗೂ ಸರ್ವೇಸಾಧಾರಣವಾಗಿದ್ದಿತು

ಮಿಲಿಗುಟ್ಟುವ ಅಡರ್ ಜಾತಿಯ ಸಣ್ಣ ವಿಷಸರ್ಪವನ್ನಾಗಲಿ, ಒಂದು ಮುಷ್ಟಿ ಬಾಳುವ ವಜ್ರದ ಹರಳುಗಳನ್ನಾಗಲಿ ಜೇಬಿನಿಂದ ಗಾವ್ರಿಕ್ ಹೊರತೆಗೆದಿದ್ದರೆ ಪೇತ್ಯ ಇಷ್ಟೊಂದು ಆಶ್ಚರ್ಯವಾಗುತ್ತಿರಲಿಲ್ಲ. ಎಲಾ ಇವನ, ಸ್ವಂತ ಜೇಬುಗಡಿಯಾರ! ಸ್ವ ಬೈಸಿಕಲ್ಲನ್ನಾಗಲಿ, ಮಾಂಟೆಕ್ರಿಸ್ಟೋ ಪಿಸ್ತೂಲನ್ನಾಗಲಿ ಹೊಂದಿರುವುದಕ್ಕೆ ಸಮಾನ! ಇದ ಕುರಿತು ಆಲೋಚಿಸುವುದೇ ಕಷ್ಟ! ಪೇತ್ಯನ ಉಸಿರು ಕಟ್ಟಿತು. ತನ್ನ ಕಣ್ಣುಗಳನ್ನೇ ಅ

ಬದಾದ. ಪೇತ್ಯ ತಾನು ಪೂರ್ತಿ ಸ್ತೋತಂತೆಯೇ ಎಂದು ಭಾವಿಸಿದ.

ಹೀಗೆ ಪೇತ್ಯ ಆಶ್ಚರ್ಯಪಡುತ್ತಿರುವಲ್ಲಿ ಗಾವ್ರಿಕ್ ತನ್ನ ತೋರುಬೆರಳಿನಿಂದ ಗಡಿಯಾರದ ೀಲಿನ ಅಂಕಿಗಳನ್ನು ಎಣಿಸುತ್ತಿದ್ದ. "ಒಂದು ಗಂಟೆ, ಎರಡು, ಮೂರು, ನಾಲ್ಕು, ಐದು . , ." ದು ಬಾಯಲ್ಲಿ ತನ್ನಷ್ಟಕ್ಕೆ ತಾನೇ ಮೆತ್ತಗೆ ಹೇಳಿಕೊಂಡ. "ಒಂಬತ್ತರ ಮೇಲೆ ಸ್ವಲ್ಪ ತ್ತಾಗಿದೆ ಸರಿ, ಸರಿಯಾದ ಹೊತ್ತಿಗೆ ಅಲ್ಲಿಗೆ ಹೋಗಬಹುದು." ಎಂದ.

"ಎಲ್ಲಿ ನೋಡೋಣ!" ಪೇತ್ಯ ತಡೆಯಲಾರದೆ ಕೇಳಿದ.

"ಕೈತೆಗೆ. ಇದು ಮಾರುವುದಕ್ಕಿಲ್ಲ."

"ಇದು ನಿನ್ನದೆ?"

"ಅಲ್ಲ."

ಗಾವ್ರಿಕ್ ಪೇತ್ಯನ ತೋಳನ್ನು ಹಿಡಿದು ಅವನನ್ನು ಹತ್ತಿರಕ್ಕೆ ಎಳೆದುಕೊಂಡು "ಇದು ಮಿತಿಯವರದು. ತಿಳಿಯತೆ?" ಎಂದು ಪಿಸುಮಾತಿನಲ್ಲಿ ಹೇಳಿದ.

"ಹಾಗೋ?" ಪೇತ್ಯನೂ ಕೂಡ ಪಿಸುಮಾತಿನಲ್ಲಿಯೇ ಎಂದ.

"ಇಲ್ಲಿ ಬಾ, ಕೇಳು," ಗಾವ್ರಿಕ್ ಕಡೆಗಣ್ಣಿನಿಂದ ಮೋತ್ಯಳನ್ನು ಈಕ್ಷಿಸುತ್ತ ಹೇಳಲಾರಂಭಿಸಿದ:

"ನಮ್ಮ ನಾವಿಕನನ್ನು ಪೋಲೀಸರು ಹಿಡಿದುಬಿಟ್ಟರು. ಗೊತ್ತಾಯಿತೆ? ಈಗ ಅವನು ಜೈಲಿ ್ಲಿದ್ದಾನೆ. ಐದು ದಿವಸಗಳಾಯಿತು. ಮೇ ದಿನದ ವಿಹಾರದ ಅನಂತರ ಲ್ಯಾಂಗರಾನ್‌ನಲ್ಲಿ ರವಾಗಿ ಹಿಡಿದು ಬಿಟ್ಟರು. ಆದರೆ ಅವನ ಬಳಿ ಇದ್ದ ಕಾಗದ ಪತ್ರಗಳೆಲ್ಲ ಬೇರೆ ಹೆಸರಿನಲ್ಲಿವೆ. ನ್ದರಿಂದ ಹೆಚ್ಚು ತೊಂದರೆಯಾಗಿಲ್ಲ. ಆದರೆ ಆ ಹಾಳಾದ ಸರ್ಪಗಳಿಗೇನಾದರೂ ನಿಜಸ್ಥಿತಿ ದು ಬಿಟ್ಟರೆ ನಾವು ಇಲ್ಲಿಂದಲೇ ಅವನ ಆತ್ಮಶಾಂತಿಗಾಗಿ ಕೊನೆಯ ಪ್ರಾರ್ಥನೆಯನ್ನು ಸಲ್ಲಿಸ ಕಾಗಿ ಬರುತ್ತದೆ. ಏಕೆಂದರೆ ನಿಜಸ್ಥಿತಿ ತಿಳಿದ ತಕ್ಷಣ ಅವನನ್ನು ಗಲ್ಲಿಗೇರಿಸದೆ ಇರುವುದೇ ್ಲ. ಗೊತ್ತಾಯಿತೆ ನಾ ಹೇಳಿದ್ದು? ಅವನ ವಿಷಯ ಯಾವ ನಿಮಿಷದಲ್ಲಾದರೂ ಪತ್ತೆಯಾಗುವ ನರಿಕೆಯಿದೆ. ಅವನ ಮೀಸೆಯನ್ನು ಬೋಳಿಸಿದರೆ ಆಯಿತು. ನಾವಿಕನನ್ನು ಗುರುತಿಸುವ ಫ್ರ ಯಾವನಾದರೂ ಒಬ್ಬ ಅವರಿಗೆ ಸಿಕ್ಕಿಯೇ ಸಿಕ್ಕುತ್ತಾನೆ. ಈಗ ನೋಡಿದೆಯೋ ಎಂಥ ಚಿನಲ್ಲಿ ಅವನು ಸಿಕ್ಕಿಬಿದ್ದಿದ್ದಾನೆ?"

"ನೀನು ಏನೋ ಠಕ್ಕು ಮಾಡುತ್ತಾ ಇದ್ದೀಯೆ." ಪೇತ್ಯ ದಿಗಿಲಿನಿಂದ ಹೇಳಿದ.

"ನಾನು ಏನು ಮಾತಾಡುತ್ತಾ ಇದ್ದೇನೆ ಎನ್ನುವುದು ನನಗೆ ತಿಳಿಯದು ಎಂದು ಮಾಡಿ ೀಯಾ? ನಾನು ಏನಾದರೂ ಹೇಳಿದರೆ ಅದು ನಿಜವೇ ಹೊರತು ಮತ್ತೆ ಬೇರೆ ಅಲ್ಲ. ಇಲ್ಲಿ ಕೇಳು ನು ಹೇಳುವುದನ್ನು, ಅವನು ಯಾರು ಎಂಬ ರಹಸ್ಯ ಪೋಲೀಸಿನವರಿಗೆ ತಿಳಿಯುವುದಕ್ಕೆ ದಲೆ ಅವನು ಜೈಲಿನಿಂದ ತಪ್ಪಿಸಿಕೊಳ್ಳುವಂತೆ ಸಮಿತಿಯವರು ಸನ್ನಾಹ ಮಾಡುತ್ತಿದ್ದಾರೆ. ವತ್ತು ಅದು ನಡೆಯಬೇಕಾಗಿದೆ. ಹತ್ತೂವರೆ ಗಂಟೆಗೆ ಸರಿಯಾಗಿ ಅವನು ಜೈಲಿನಿಂದ ಪರಾರಿ ಾಗುತ್ತಾನೆ. ಅಲ್ಲಿಂದ ನೇರವಾಗಿ ಬಾಲ್ಷಾಯಿ ಫಾಂಟಾನಿಗೆ ಹೋಗುತ್ತಾನೆ. ಅಲ್ಲಿಂದ ನಮ್ಮ ೋಣಿಯಲ್ಲಿ ಪ್ರಯಾಣಮಾಡಿ ಅವನು ರುಮೇನಿಯ ದೇಶಕ್ಕೆ ಹಿಂದಿರುಗುತ್ತಾನೆ. ಈಗ ೊತ್ತಾಯಿತೆ ಈಗ ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು? ಬಾಲ್ಷಾಯಿ ಫಾಂಟಾನಿಗೆ. ಈಗ ೋಣಿಯನ್ನು ಅಲ್ಲಿಗೆ ತೆಗೆದುಕೊಂಡು ಹೋಗಬೇಕು. ಸಮಯಕ್ಕೆ ಸರಿಯಾಗಿ ಅಲ್ಲಿರಲು

ಸಹಾಯವಾಗುವಂತೆ ಟಿರೆಂಟಿ ಸಮಿತಿಯಿಂದ ಈ ಗಡಿಯಾರವನ್ನು ತಂದು ಕೊಟ್ಟಿದ್ದಾ ಗಾವ್ರಿಕ್ ಪುನಃ ಗಡಿಯಾರವನ್ನು ಹೊರಕ್ಕೆ ತೆಗೆದು ಲಕ್ಷ್ಯವಿಟ್ಟು ಸಮಯವನ್ನು ಪರೀಕ್ಷಿಸಿದ.

"ಓ, ಆಗಲೆ ಹತ್ತುಗಂಟೆ. ನಾವು ಅಲ್ಲಿಗೆ ಕಾಲಕ್ಕೆ ಸರಿಯಾಗಿ ಹೋಗುತ್ತೇವೆ."

"ಅವನು ಹೇಗೆ ಜೈಲಿನಿಂದ ತಪ್ಪಿಸಿಕೊಳ್ಳುತ್ತಾನೆ? ಅಲ್ಲಿರುವ ಪಹರೆಯವರು ಸುಮ್ಮ ತ್ತಾರೆಯೆ?" ಪೇತ್ಯ ಪಿಸುಮಾತಿನಲ್ಲಿ ಪ್ರಶ್ನಿಸಿದ.

"ಅದೇನು ಮಹಾ. ಹತ್ತೂವರೆಗಂಟೆಗೆ ಅವನನ್ನು ಪೋಲೀಸಿನವರು ಕಾಲಾಡಿಸಲು ಬ ತ್ತಾರೆ. ಅಲ್ಲೇ ಜೈಲಿನ ಅಂಗಳದಲ್ಲಿ ಅವನು ಓಡಾಡಬಹುದು. ಅಲ್ಲಿ ಎದುರಿಗಿರುವ ತರ ತೋಟಗಳನ್ನು ದಾಟಿಕೊಂಡು ಮಾಲಿ ಫಾಂಟಾನ್ ರಸ್ತೆಗೆ ಅವನು ಬರಬೇಕು. ಅಲ್ಲಿ ಕು ಗಾಡಿಯನ್ನು ನಿಲ್ಲಿಸಿಕೊಂಡು ಟಿರೆಂಟಿ ಅವನಿಗಾಗಿ ಕಾಯುತ್ತಿರುತ್ತಾನೆ. ಅಲ್ಲಿಂದ ಅವರು ನೇರವ ದೋಣಿಗೆ ಬರುತ್ತಾರೆ. ತಿಳಿಯಿತೆ?"

"ಹೌದು. ಆದರೆ ಅವನು ಜೈಲಿನ ಗೋಡೆಯನ್ನು ಹೇಗೆ ಹತ್ತಿಬರುತ್ತಾನೆ.? ಗೋಡೆಯೋ ಎರಡು ಮಹಡಿಯಷ್ಟು ಎತ್ತರ. ಅವನು ಗೋಡೆಯನ್ನು ಏರುವಷ್ಟರಲ್ಲಿ ಬಂದ ದಿಂದ ಹೊಡೆದು ಕೆಡವುತ್ತಾರೆ."

ಗಾವ್ರಿಕ್ ಈ ಮಾತುಕೇಳಿ ಬೇವಿನಹಣ್ಣನ್ನು ತಿಂದಂತೆ ಮುಖ ಗಂಟು ಹಾಕಿಕೊಂಡ.

"ಇಲ್ಲಿ ಕೇಳು. ಅವನು ಯಾತಕ್ಕೆ ಗೋಡೆಯನ್ನು ಏರಬೇಕು. ಟಿರೆಂಟಿ ಅ ಸಿಡಿಸುತ್ತಾನೆ."

"ಹಾಗೆಂದರೇನು?"

"ನೀನೊಬ್ಬ ಬಚ್ಚಕಣೋ. ಗೋಡೆಗೆ ಮದ್ದನ್ನಿಟ್ಟು ಸಿಡಿಸುತ್ತಾನೆ ಎಂದರೆ ಗೊತ್ತಾಗ ವಂತೆ. ಗೋಡೆಯಲ್ಲಿ ದೊಡ್ಡರಂಧ್ರವಾಗುವಂತೆ ಸಿಡಿಮದ್ದನ್ನಿಟ್ಟಿರುತ್ತಾನೆ. ನಿನ್ನೆಯ ಕತ್ತಲೆಯಲ್ಲಿ ಸಮಿತಿಯವನೊಬ್ಬ ಗೋಡೆಯ ಕೆಳಗಡೆ ಡೈಮನ್ನೈಟನ್ನು ಇಟ್ಟಿದ್ದಾನೆ. ಗಡಿಯಾರದ ಮುಳ್ಳು ಸರಿಯಾಗಿ ಹತ್ತೂವರೆ ಗಂಟೆಯ ಚುಕ್ಕಿಯ ಮೇಲಕ್ಕೆ ಬಂದಾಗ, ನ ನನ್ನು ಜೈಲಿನ ಒಳಗಡೆ ಸಂಚಾರಕ್ಕೆ ಬಿಟ್ಟಾಗ, ಟಿರೆಂಟಿ ಈಚೆಯಕಡೆಯಿಂದ ಡೈಮನ್ನೈಟಿಗೆ ಸಿರುವ ಮದ್ದಿನ ಬತ್ತಿಗೆ ಬೆಂಕಿಯನ್ನು ಕೊಟ್ಟು ಗಾಡಿಯ ಬಳಿಗೆ ಓಡಿಹೋಗಿ ಅಲ್ಲಿ ಕಾಯು ತ್ತಾನೆ. ಆ ಡೈಮನ್ನೈಟು ಥಮಾರ್ ಎನ್ನುತ್ತದೆ."

ಪೇತ್ಯ ಗಾವ್ರಿಕನನ್ನು ತೀಕ್ಷ್ಣವಾದ ದೃಷ್ಟಿಯಿಂದ ದಿಟ್ಟಿಸಿ ನೋಡಿದ.

"ಏನು ಥಮಾರ್ ಎನ್ನುವುದು?"

"ಡೈಮನ್ನೈಟು."

"ಹಾಗೆಂದರೆ?"

"ಡೈಮನ್ನೈಟು, ಸಿಡಿಯುತ್ತದಲ್ಲ ಅದು. ಯಾಕೆ ಹಾಗೆ ಕೇಳುತ್ತೀಯೆ?" ಗಾವ್ರಿಕನಿ ಮಾತಿನಲ್ಲಿ ಏನಾದರೂ ತಪ್ಪಿರಬಹುದೇನೋ ಎಂಬ ಸಂದೇಹ ಉಂಟಾದುದರಿಂದ ಅವನ ಲಿನ ಆತ್ಮವಿಶ್ವಾಸ ಕುಂದಿತು.

"ಡೈಮನ್ನೈಟು ಅಲ್ಲ. ಡೈನಮೈಟು, ಗೊತ್ತಾಯಿತೆ." ಪೇತ್ಯ ಪಾಠ ಕಲಿಸುವವನಂತೆ ಹ

"ನೀನು ಏನುಬೇಕಾದರೂ ಕರೆದುಕೋ. ಅದು ಗೋಡೆಯನ್ನು ಸಿಡಿಸಿದರೆ ಸಾಕು."

ಈಗ ಪೇತ್ಯನಿಗೆ ಗಾವ್ರಿಕನ ಮಾತುಗಳ ಅರ್ಥಸ್ಪಷ್ಟವಾಯಿತು. ಮದ್ದು ಸಿಡಿದು ಗೋಡೆ ರುಳಿಬೀಳುವ ಚಿತ್ರವನ್ನು ಕಲ್ಪಿಸಿಕೊಂಡಾಗ ಪೇತ್ಯ ರೋಮಾಂಚಗೊಂಡ. ಅವನು ತನ್ನ ಹಿತನನ್ನು ಅಗಲವಾಗಿ ಕಣ್ಣು ಬಿಟ್ಟುಕೊಂಡು ನೋಡುತ್ತ

"ಇದು ನಿಜವೆಂದು ಆಣೆ ಮಾಡುತ್ತೀಯಾ?" ಎಂದು ಕೇಳಿದ.

"ಓಹೋ, ಅದಕ್ಕೇನು, ನಿನ್ನಾಣೆಗೂ ಇದು ಸತ್ಯ."

"ಶಿಲುಬೆಯ ಸಂಜ್ಞೆಯನ್ನು ಮಾಡಿಕೋ?"

"ಚರ್ಚಿನ ಮೇಲಿರುವ ಪವಿತ್ರವಾದ ಶಿಲುಬೆಯ ಆಣೆಗೂ ಸತ್ಯ."

ಗಾವ್ರಿಕ್ ಬಾಲ್ಷಾಯಿ ಫಾಂಟಾನಿನ ಚರ್ಚಿನ ಗುಮ್ಮಟದ ಕಡೆಗೆ ಮುಖಮಾಡಿಕೊಂಡು ತ್ಸಾಹದಿಂದ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಂಡ. ಆದರೆ ಪೇತ್ಯ ಮಿತ್ರನ ಮಾತನ್ನು ಲೆ ನಂಬಿಬಿಟ್ಟಿದ್ದ. ಕೇವಲ ಔಪಚಾರಿಕವಾಗಿ ಗಾವ್ರಿಕನನ್ನು ಆಣೆಮಾಡುವಂತೆ ಪ್ರೇರೇಪಿಸಿದ್ದ. ವ್ರಿಕನ ಮಾತು ಸತ್ಯವೆಂಬುದನ್ನು ಪೇತ್ಯ ಮನಃಪೂರ್ವಕವಾಗಿ ನಂಬಿದ್ದ.

ಗಾವ್ರಿಕ್ ಹಾಯಿಯನ್ನು ಕೆಳಕ್ಕೆ ಇಳಿಸಿದ. ಒರಟಾದ ನಿರ್ಜನವಾದ ದಡದಲ್ಲಿ ದೋಣಿ ಸು ದಡವನ್ನು ಸೇರಲು ಕಟ್ಟಿದ್ದ ಇಳಿದಾಣಕ್ಕೆ ದೋಣಿ ತಗುಲಿತು.

"ಕರವಸ್ತ್ರ ಜೇಬಿನಲ್ಲಿದೆಯೆ?" ಗಾವ್ರಿಕ್ ಪೇತ್ಯನನ್ನು ಪ್ರಶ್ನಿಸಿದ.

"ಇದೆ."

"ಎಲ್ಲಿ ತೋರಿಸು."

ಪೇತ್ಯ ಜೇಬಿನಿಂದ ಒಂದು ಕರವಸ್ತ್ರವನ್ನು ತೆಗೆದ. ಅದನ್ನು ನೋಡಿದ್ದರೆ ತಾತ್ಯಾನ ಕ್ಕಮ್ಮ ಖಂಡಿತ ಮೂರ್ಛೆ ಹೋಗುತ್ತಿದ್ದಳು. ಆದರೆ ಗಾವ್ರಿಕನಿಗೆ ತನ್ನ ಕೆಲಸಕ್ಕೆ ಅದು ಕಾಗಿದ್ದುದರಿಂದ ಅವನು ತೃಪ್ತಿಗೊಂಡು

"ಇದು ಉಪಯೋಗಕ್ಕೆ ಬರುತ್ತದೆ. ಸರಿಯಾಗಿ ಇಟ್ಟುಕೊಂಡಿರು." ಎಂದು ತಲೆಯನ್ನು ಲ್ಲಾಡಿಸುತ್ತ ಗಾವ್ರಿಕ್ ಗಂಭೀರವಾಗಿ ಹೇಳಿದ. ಅನಂತರ ಗಡಿಯಾರವನ್ನು ನೋಡಿಕೊಂಡ. ಲ ಹತ್ತು ಗಂಟೆಯ ಮೇಲೆ ಸ್ವಲ್ಪ ಮುಂದೆಹೋಗಿತ್ತು.

ನಾನು ದೋಣಿಯಲ್ಲೇ ಇರುತ್ತೇನೆ. ನೀನು ಮತ್ತು ಮೋತ್ಯ ಇಬ್ಬರೂ ಗುಡ್ಡವನ್ನು ಏರಿ ೋಗಿ ಅಲ್ಲಿಯ ಗಲ್ಲಿಯಲ್ಲಿ ನಿಂತುಕೊಳ್ಳಿ. ಅಲ್ಲಿ ನೀವು ಅವರನ್ನು ಭೇಟಿಮಾಡಬೇಕು. ನೀವು ವರನ್ನು ನೋಡಿದ ತಕ್ಷಣ ಕರವಸ್ತ್ರವನ್ನು ಬೀಸಿ. ಆಗ ನಾನು ದೋಣಿಯ ಹಾಯಿಯನ್ನು ಸುತ್ತೇನೆ. ತಿಳಿಯಿತೆ ಪೇತ್ಯ?"

"ಹೂ. ಆದರೆ ಪಹರೆಯವನು ಅವರನ್ನು ಕೊಂದುಹಾಕಿದರೋ?"

"ಪಹರೆಯವನು ಆ ಸಮಯಕ್ಕೆ ತಪ್ಪಿಸಿಕೊಳ್ಳುತ್ತಾನೆ. ಅವನು ದೊಫಿನೋವ್ಸ್ಕದವನು, ಮ್ಮ ಸ್ನೇಹಿತ. ಈಗ ನೀವು ಹೋಗಿ. ಪೇತ್ಯ, ಅವರನ್ನು ಕಂಡ ಒಡನೆ ಕರವಸ್ತ್ರವನ್ನು ಬೀಸು. ನ್ನ ಕೈಲಾಗುತ್ತದೆ ತಾನೆ?"

"ಇದೆಂಥ ಪ್ರಶ್ನೆ ಇದು!"

ಪೇತ್ಯ ಮತ್ತು ಮೋತ್ಯ ದೋಣಿಯಿಂದ ಹೊರಟು ದಡಸೇರಿ ಗುಡ್ಡದ ಮೇಲಕ್ಕೆ ಹತ್ತಿ ೋದರು.

ಲಸ್ಟಡಾರ್ಫ್‌ನಿಂದ ಲಾಂಗ್‌ರಾನ್‌ವರೆಗೆ ಸಮುದ್ರ ತೀರದ ಒಳಹೊರಗುಗಳೆಲ್ಲ ಹುಡುಗರಿಗೆ ಚೆನ್ನಾಗಿ ಪರಿಚಿತವಾಗಿದ್ದುವು. ಕಾಡು ಊದಾ ಬಣ್ಣದ ಹೂವುಗಳ ಪೊ ನಡುವಿನಿಂದ ದಾರಿಮಾಡಿಕೊಂಡು ಆ ಹುಡುಗ ಹುಡುಗಿಯರಿಬ್ಬರೂ ಸಮುದ್ರ ತೀರದ ದಿ ತುದಿಯನ್ನು ತಲಪಿದರು. ಅಲ್ಲಿದ್ದ ಎರಡು ಮನೆಗಳ ನಡುವಿನ ಒಂದು ಗಲ್ಲಿಯಲ್ಲಿ ಕೊಂಡರು. ಆ ಸ್ಥಳದಿಂದ ಅವರಿಗೆ ರಸ್ತೆ ಮತ್ತು ಸಮುದ್ರ ಎರಡೂ ಸ್ಪಷ್ಟವಾಗಿ ಕಾ ತ್ತಿದ್ದುವು. ಕೆಳಗೆ ಆಳದಲ್ಲಿ ಸಮುದ್ರದಡದ ಸಣ್ಣ ಇಳಿದಾಣದ ಬಳಿ ಪುಟ್ಟ ದೋಣಿಯ ಅಲೆಗಳ ಮೇಲೆ ತೂಗಾಡುತ್ತಿದ್ದಿತು. ದೃಷ್ಟಿಯಿಟ್ಟು ನೋಡಿದ ವಿನಹ ಗಾವ್ರಿಕ್ ಅಲ್ಲಿರು ಕಾಣಿಸುತ್ತಿರಲಿಲ್ಲ.

"ಇಲ್ಲಿ ಕೇಳು, ಮೋತ್ಯ. ನಾನು ಈ ಉಪ್ಪುನೇರಳೆ ಮರವನ್ನು ಹತ್ತಿ ಕುಳಿತುಕೆ ಅಲ್ಲಿಂದ ನೋಡುತ್ತಿರುತ್ತೇನೆ. ನೀನೂ ಕೂಡ ರಸ್ತೆಯ ಕಡೆಗೆ ಕಣ್ಣಿಟ್ಟಿರು. ನಮ್ಮ ಯಾರು ಮೊದಲು ಅವರನ್ನು ಕಾಣುತ್ತಾರೆ ನೋಡೋಣ." ಎಂದು ಹೇಳಿದ ಪೇತ್ಯ. ಹೇಳಬೇಕೆಂದರೆ ಪೇತ್ಯ ಮರವನ್ನು ಹತ್ತಬೇಕಾದ ಕಾರಣವೇ ಇರಲಿಲ್ಲ. ಏಕೆಂದರೆ ಅ ಸ್ಥಳದಿಂದ ಮುಂದಿನ ನೋಟ ಸ್ಪಷ್ಟವಾಗಿದ್ದಿತು. ಆದರೆ ಪೇತ್ಯ ತಾನು ಒಂದು ಅಧಿಕಾರ ದಲ್ಲಿದ್ದೇನೆಂದು ತಿಳಿದಿದ್ದನಾದುದರಿಂದ ಆಜ್ಞೆಗಳನ್ನು ನೀಡಿ ಕಾರ್ಯನಿರ್ವಹಿಸಲು ಕ ನಾಗಿದ್ದ. ತಾನು ನಿಂತಿದ್ದ ಸ್ಥಳದಿಂದ ಓಡುತ್ತ ಮರದ ಬಳಿಗೆ ಹೋದ. ಗುರುಗುರು ಶಬ್ದವಾಗುವಂತೆ ಉಸಿರುಬಿಡುತ್ತ ಮರವನ್ನು ಏರಿದ. ಪೇತ್ಯನಿಗೆ ಗೊತ್ತಾಗುವುದಕ್ಕೆ ಮೊ ಮಂಡಿಯ ಹತ್ತಿರ ಷರಾಯಿ ಹರಿದುಹೋಗಿದ್ದಿತು. ಆದರೆ ಅದಕ್ಕಾಗಿ ಅವನು ಈಗ ಮಾಡಲಿಲ್ಲ. ಬದಲಾಗಿ ಅದು ಅವನಿಗೆ ಹೆಮ್ಮೆಯನ್ನುಂಟುಮಾಡಿತ್ತು. ಅವನು ಕೊಂಬೆಯ ಮೇಲೆ ಸವಾರಿ ಕುಳಿತು ಹುಬ್ಬೇರಿಸಿ ನೋಡಲಾರಂಭಿಸಿದ.

"ಯಾಕೆ ಸುಮ್ಮನೆ ನಿಂತಿದ್ದೀಯಾ? ಎರಡು ಹೆಜ್ಜೆ ಮುಂದಕ್ಕೆ ಹೋಗಿ ನೋಡು, ಮೊ

"ನೇರವಾಗಿ."

ಆ ಹುಡುಗಿ ನಿಷ್ಠೆಯಿಂದ ಕೂಡಿದ ಹೆದರಿದ ಕಣ್ಣುಗಳಿಂದ ಪೇತ್ಯನ ಕಡೆಗೆ ದೃಷ್ಟಿ ಸಿದಳು. ಎರಡು ಕೈಗಳಿಂದಲೂ ಲಂಗವನ್ನು ಎಳೆದು ಹಿಡಿದುಕೊಂಡು ಗಂಭೀರವಾಗಿ ಹೆ ನ್ನಿಡುತ್ತ ಗಲ್ಲಿಯಿಂದ ರಸ್ತೆಯಕಡೆಗೆ ಹೊರಟಳು.

"ಮೋತ್ಯ, ಒಂದು ನಿಮಿಷ ನಿಲ್ಲು ! ಇಲ್ಲಿ ಕೇಳು !"

ಮೋತ್ಯ ನಿಂತುಕೊಂಡಳು.

"ನೀನು ಅವರನ್ನು ನೋಡಿದ ತಕ್ಷಣ ನನಗೆ ಕೂಗಿಹೇಳು. ನಾನು ಮೊದಲು ನಾನು ಕೂಗು ಹಾಕುತ್ತೇನೆ. ಗೊತ್ತಾಯಿತೆ ?"

"ಹಾಗೆಯೇ ಆಗಲಿ." ಶಿಳ್ಳಿನಂತೆ ಉತ್ತರಕೊಟ್ಟಳು.

ಮೋತ್ಯ ಪೇತ್ಯನ ಕಡೆಗೆ ಬೆನ್ನು ತಿರುಗಿಸಿ ಅರಳುವ ಕಾಲ ಸಮೀಪಿಸಿದ್ದ ಹಚ್ಚ ಜಾಲಿಮರಗಳ ನೆರಳಿನಲ್ಲಿ ಹೆಜ್ಜೆಯಿಡುತ್ತ ಮುಂದುವರಿದಳು. ರಸ್ತೆಯ ಧೂಳಿನಲ್ಲಿ ಹೆಜ್ಜೆಯ ಗುರುತುಗಳು ಮೂಡಿದುವು. ಗಲ್ಲಿಯ ತಿರುವಿನ ವರೆಗೆ ಹೋಗಿ ಅಲ್ಲಿ ಒಂದು ನಿಂತಿದ್ದು ಹಿಂದಿರುಗಿದಳು.

"ನನಗೆ ಇನ್ನೂ ಅವರು ಕಾಣಿಸಿಲ್ಲ. ನಿನಗೋ ?" ಮೋತ್ಯ ಪ್ರಶ್ನಿಸಿದಳು.

"ನನಗೂ ಇಲ್ಲ. ಇನ್ನೂ ಸ್ವಲ್ಪಮುಂದೆ ಹೋಗಿ ನೋಡಿಕೊಂಡು ಬಾ." ಪೇತ್ಯ ಹೇಳಿದ.

ಹುಡುಗಿ ಪುನಃ ಗಲ್ಲಿಯ ತಿರುವಿಗೆ ಹೋದಳು. ತನ್ನ ಕಡೆ ಅವರ ಸುಳಿವಿಲ್ಲವೆಂದು ಪುನಃ ಂದಿರುಗಿ ಬಂದು ಹೇಳಿದಳು.

"ಇಲ್ಲೂ ಅಷ್ಟೇ. ಇನ್ನೂ ಎರಡು ಹೆಜ್ಜೆ ಮುಂದೆ ಹೋಗು."

ಮೊದಲಿಗೆ ಈ ಆಟ ಮೆಚ್ಚಿಕೆಯಾಯಿತು. ಆದರೆ ಬಹುಹೊತ್ತು ಮರದ ಕೊಂಬೆಯ ಮೇಲೆ ಕುಳಿತುಕೊಂಡು ಗಲ್ಲಿಯ ಆ ಕೊನೆಯಲ್ಲಿ ಗಾಡಿ ಬರುತ್ತಿದೆಯೇ ಇಲ್ಲವೇ ಎಂಬುದನ್ನು ಂದೇ ಸವನೆ ದೃಷ್ಟಿಸಿ ನೋಡುತ್ತ ಕಣ್ಣಿಗೆ ಶ್ರಮವುಂಟುಮಾಡುವುದು ಅಷ್ಟೇನೂ ಹಿತವಾಗಿ ರಿಣಮಿಸಲಿಲ್ಲ.

ಇಡೀ ಘಟನೆಯ ಸ್ಪಷ್ಟಚಿತ್ರವನ್ನು ಅವನು ಕಲ್ಪಿಸಿಕೊಂಡು ಆನಂದಿಸಲಾರಂಭಿಸಿದ. ಗಾಡಿ ರ್ರನೆ ಹಾರುತ್ತ ಬರುತ್ತದೆ. ಕುದುರೆಯ ಬಾಯಲ್ಲಿ ನೊರೆ ಉದುರುತ್ತಿರುತ್ತದೆ. ಗಾಡಿ ಹೊಡೆ ಯುವವನು ತಲೆಯಮೇಲುಗಡೆ ಸೊಂಯ್ ಸೊಂಯ್ ಎಂದು ಚಾವಟಿಯನ್ನು ಬೀಸುತ್ತಿರುತ್ತಾನೆ. ರೆಂಟಿ ಮತ್ತು ನಾವಿಕ ಕೈಯಲ್ಲಿ ಪಿಸ್ತೂಲುಗಳನ್ನು ಹಿಡಿದು ಗಾಡಿಯಿಂದ ಕೆಳಕ್ಕೆ ಧುಮುಕು ತ್ತಾರೆ. ಜೈಲಿನ ಕಾವಲು ದಳದವರು ಅವರನ್ನು ಬೆನ್ನಟ್ಟಿಕೊಂಡು ಬರುತ್ತಿರುತ್ತಾರೆ. ಟಿರೆಂಟಿ ುತ್ತು ನಾವಿಕ ಅವರ ಮೇಲೆ ಪಿಸ್ತೂಲುಗಳನು ಹಾರಿಸುತ್ತಾರೆ. ಒಬ್ಬರಾದಮೇಲೊಬ್ಬರಂತೆ ಟ್ಟಿಸಿಕೊಂಡು ಬರುತ್ತಿರುವ ಕಾವಲು ದಳದ ಸಿಪಾಯಿಗಳು ಸತ್ತುಬೀಳುತ್ತಾರೆ. ಆಗ ಪೇತ್ಯ ರುಸಿನಿಂದ ಕರವಸ್ತ್ರವನ್ನು ಬೀಸುತ್ತಾನೆ. ಅನಂತರ ಮರದಮೇಲಿನಿಂದ ಕೆಳಕ್ಕೆ ಥಟ್ಟನೆ ುಮುಕುತ್ತಾನೆ. ಗಾವ್ರಿಕನಿಗೆ ಹಾಯಿಯನ್ನು ಏರಿಸುವುದರಲ್ಲಿ ಸಹಾಯ ಮಾಡುವುದಕ್ಕಾಗಿ ಲ್ಲರಿಗಿಂತ ಮುಂದಾಗಿ ಸಮುದ್ರದ ದಡಕ್ಕೆ ಓಡುತ್ತಾನೆ. ಆಗ ಮೋತ್ಯಳಿಗೆ ಅವರು ಬಂದ ವಿಷಯ ಂತ್ತಾಗುತ್ತದೆ. ಆದರೆ ಅದಕ್ಕಾಗಿ ಯಾರು ಏನು ಮಾಡಬಲ್ಲರು? ಎಷ್ಟಾದರೂ ಅವಳು ುಡುಗಿ....

ಈ ರೀತಿ ಪೇತ್ಯ ಚಿತ್ರವನ್ನು ಕಲ್ಪಿಸಿಕೊಳ್ಳುತ್ತಿದ್ದ. ಕಾಲವು ಮಾತ್ರ ನಿಲ್ಲದೆ ಮುಂದೆ ೋಗುತ್ತಿದ್ದಿತು. ಯಾರೂ ಗಾಡಿಯಲ್ಲಿ ಬಂದಂತೆ ಕಾಣಲಿಲ್ಲ. ಥೂ, ಬೇಜಾರು! ಕಣ್ಣು ಂಜಾಗಿಸುತ್ತಿದ್ದ ರಸ್ತೆಯ ಕಡೆಗೆ ಎಷ್ಟು ಎಂದು ನೋಡುವುದು. ಇಂಗ್ಲಿಷ್ ಸಾರಥಿಯಂತೆ ುಡುಪನ್ನು ಧರಿಸಿದವನು ಗಾಡಿ ಹೊಡೆಯುತ್ತಿದ್ದ ಒಂದು ಕುದುರೆಗಾಡಿಯೂ ಒಂದು ಮಂಜು ಡ್ಡೆಯನ್ನು ಸಾಗಿಸುವ ಗಾಡಿಯೂ ಆ ಕಡೆ ಹಾದು ಹೋದುವಲ್ಲದೆ ಮತ್ತೇನೂ ಕಂಡು ಬರಲಿಲ್ಲ. ಂಜುಗಡ್ಡೆಯ ಗಾಡಿಯನ್ನು ನೋಡಿ ಅವನಿಗೆ ಬಾಯಾರಿಕೆಯಾಯಿತಲ್ಲದೆ ತುಂಬ ಸೆಕೆ ಎನ್ನಿ ತು.

ಮತ್ತೇನೂ ಕೆಲಸವಿಲ್ಲದ ಆ ಕಾಲವನ್ನು ಮರದಮೇಲೆ ಕುಳಿತುಕೊಂಡೇ ಹತ್ತಿರದ ನೆಯ ಆಮೂಲಾಗ್ರ ಪರೀಕ್ಷೆಯಿಂದ ತುಂಬಿದ. ಮನೆಯ ಸುತ್ತ ಹಚ್ಚ ಹುಲ್ಲು ಹಸಲೆ ಶೋಭಿ ತ್ತಿದ್ದಿತು. ಮಧ್ಯೆ ಕಾಲು ಹಾದಿಗೆ ಕಲ್ಲನ್ನು ಹಾಕಿ ಗಚ್ಚು ಮಾಡಿದ್ದಿತು. ನಡುನಡುವೆ ತುಜ ರಗಳು ತಲೆಯೆತ್ತಿ ನಿಂತಿದ್ದುವು. ನಡುವೆ ಒಂದು ಪ್ರತಿಮೆ ನಿಂತಿದ್ದಿತು. ಅದರ ಮೇಲೆ ನೆರ ನೆ ಚುಕ್ಕೆಗಳು ಬಿದ್ದಿದ್ದುವು. ಅಲ್ಲೊಂದು ಹೂವಿನ ಕುಂಡ ನಿಲ್ಲಿಸಿದ್ದು, ಅದರೊಳಗಿನಿಂದ

ಉದ್ದವಾದ ಚೂಪಾದ ಕತ್ತಾಳೆ ಜಾತಿಯ ಗಿಡದ ಎಲೆಗಳು ಇಳಿಬಿದ್ದಿದ್ದುವು. ಅಲ್ಲೊಬ್ಬ
ಗಾರ ತನ್ನ ಎದುರಿಗಿನ ದೃಶ್ಯವನ್ನು ಚಿತ್ರಿಸುತ್ತಿದ್ದ.

ಚಿತ್ರಗಾರನು ತನ್ನ ಮೀಸೆಯನ್ನು ಸಣ್ಣನಾಗಿ ಸುಲಿದು ನಿಲ್ಲಿಸಿದ್ದ. ಅವನಿಗೆ ಮೊನ
ಗಡ್ಡವಿದ್ದಿತು.

ಛತ್ರಿಯ ಕೆಳಗೆ ಮಡಿಕೆ ಕುರ್ಚಿಯ ಮೇಲೆ ಅವನು ಕುಳಿತಿದ್ದ. ಹಿಂದಕ್ಕೆ ಬಾಗಿ
ಮರದ ಚೌಕಟ್ಟಿಗೆ ತೂಗು ಹಾಕಿದ್ದ ಕ್ಯಾನವಾಸ್ ಬಟ್ಟೆಯಮೇಲೆ ಕುಂಚವನ್ನು
ತ್ತಿದ್ದ. ಒಂದು ಸಲ ತಲೆಯೆತ್ತಿನೋಡಿ ಕುಂಚವನ್ನು ಕ್ಯಾನವಾಸ್ ಬಟ್ಟೆಯಮೇಲೆ ಎಳೆಯ
ಇನ್ನೊಂದು ಸಲ ತಲೆಯೆತ್ತಿ ನೋಡಿ ಇನ್ನೊಂದು ಸಲ ಕುಂಚವನ್ನು ಆಡಿಸುತ್ತ ಚಿತ್ರ
ಚಿತ್ರದಲ್ಲಿ ಮಗ್ನನಾಗಿದ್ದ.

ನೀಡಿದ ಎಡಗೈಯಲ್ಲಿ ಬಣ್ಣದ ಹಲಗೆಯಿದ್ದಿತು. ಬಾದಾಮಿಯಾಕಾರದ ಆ ಹಲಗೆ
ಕ್ಕಿಂತಲೂ ಸುಂದರವಾಗಿದ್ದಿತು. ಹುಚ್ಚು ಹುಚ್ಚಾಗಿದ್ದರೂ ಯಾವುದೋ ಒಂದು ವಿ
ಐಂದ್ರಜಾಲಿಕ ವರ್ಣಗಳ ಸಂಯೋಜನೆಯು ಸಾಗರ, ವ್ಯೋಮ, ಭೂಮಿ, ತೃಣ,
ಮಂಡಲ, ದೋಣಿ ಮೊದಲಾದ ಪ್ರಾಕೃತಿಕ ದೃಶ್ಯಗಳ ಎಲ್ಲ ವರ್ಣ ವಿನ್ಯಾಸಗಳನ್ನೂ
ಸೂಸುತ್ತಿದ್ದಿತು.

ಇಷ್ಟರಲ್ಲಿ ಒಂದು ಧೂಳು ತುಂಬಿದ ಗಾಡಿ ಆ ಗಲ್ಲಿಗೆ ಬಂದಿದ್ದಿತು. ಅದರಿಂದ
ಇಬ್ಬರು ನಿಧಾನವಾಗಿ ನಡೆದು ಬರುತ್ತಿದ್ದರು. ಅವರ ಮುಂದುಗಡೆಯಲ್ಲಿ ಮೋತ್ಯ "ಅ
ಬಂದರು. ಅವರು ಬಂದರು. ಕರವಸ್ತ್ರವನ್ನು ಬೀಸು." ಎಂದು ಕೂಗುತ್ತ ಬಂದಳು.
ನಿಗೆ ತಾನು ಮರದಿಂದ ಕೆಳಕ್ಕೆ ಬೀಳುತ್ತಿರುವಂತೆ ಭಾಸವಾಯಿತು. ಕರವಸ್ತ್ರವನ್ನು
ವಾಗಿ ಜೇಬಿನಿಂದ ಎಳೆದುಕೊಂಡದ್ದೇ ಬಿರುಸಾಗಿ ತಲೆಯ ಮೇಲುಗಡೆ ಅದನ್ನು ಬೀಸಲಾ
ಸಿದ.

ನೀರಿನ ಮೇಲೆ ದೋಣಿ ಜೋರಾಗಿ ಒಲೆದಾಡಲಾರಂಭಿಸಿತು. ಗಾವ್ರಿಕ್ ನಗೆದಾ
ತನ್ನ ಕೈಗಳನ್ನು ಬೀಸುತ್ತಿದ್ದುದನ್ನು ಪೇತ್ಯ ಕಂಡ.

ಟೆರೆಂಟಿ ಮತ್ತು ನಾವಿಕ ಇಬ್ಬರೂ ಪೇತ್ಯ ಕುಳಿತಿದ್ದ ಮರದಡಿಯಿಂದ ಸಾಗಿ
ಹೋದರು. ಕೆಂಪಾದ ಅವರ ಮುಖಗಳಿಂದ ಬೆವರು ಇಳಿಯುತ್ತಿದ್ದಿತು. ಅವರ ಭಾ
ಉಸಿರಾಟದ ಶಬ್ದ ಪೇತ್ಯನಿಗೆ ಕೇಳಿಸುತ್ತಿದ್ದಿತು. ನಾವಿಕ ಕಷ್ಟಪಟ್ಟುಕೊಂಡು ಕುಂಟುತ್ತ
ತ್ತಿದ್ದಂತೆ ಕಂಡು ಬಂದಿತು. ಅವನ ತಲೆಯ ಮೇಲೆ ಟೋಪಿಯಿರಲಿಲ್ಲ. ಅವನು ಮ
ರದ ದಿನ ಹಾಕಿಕೊಂಡಿದ್ದ ಕೆನೆ ಬಣ್ಣದ ಸೊಗಸಾದ ಶರಾಯಿ ಹರಿದು ಇಟ್ಟಿಗೆಯ ಧೂ
ತುಂಬಿದ್ದಿತು. ಅವನ ಷರಟಿನ ಮುಂಭಾಗ್ಗ ಕೊಳೆಯಾಗಿ ಅರ್ಧ ಹರಿದಿದ್ದಿತು. ಅದರ
ಬೆವರಿಳಿದು ಹೊಳೆಯುತ್ತಿದ್ದ ಉಬ್ಬಿದ ಎದೆ ಹೊರಕ್ಕೆ ಕಾಣಿಸುತ್ತಿದ್ದಿತು. ನಾವಿಕ
ಮುಷ್ಟಿಯು ಅವನ ನೀಲಿಯ ಮಲಿನರಕ್ತನಾಳಗಳಿಂದ ಬಿಗಿದು ಬಂಧಿಸಲ್ಪಟ್ಟಿದ್ದಂತೆ ಭಾ
ತ್ತಿದ್ದಿತು. ಅವನ ಮೀಸೆ ಕೆಳಕ್ಕೆ ಬಾಗಿದ್ದಿತು. ಕೂದಲಿನ ಕೂಳೆಗಳಿಂದ ತುಂಬಿದ್ದ
ಮುಖದಲ್ಲಿ ಕೆನ್ನೆಯ ಮೂಳೆಗಳು ಹೊರಕ್ಕೆ ಚಾಚಿಕೊಂಡಿದ್ದುವು. ಆದರೆ ಅವನ ಕಣ
ಒರಟಾದ ಹೊಳಪು ಇದ್ದಿತು. ಗಂಟಲು ಒಳಕ್ಕೂ ಹೊರಕ್ಕೂ ತುಡಿಯುತ್ತಿತ್ತು.

"ಠೀ!" ಎಂದು ಕೂಗಿದ ಪೇತ್ಯ.

ಟೆರೆಂಟಿ ಮತ್ತು ನಾವಿಕ ಕತ್ತೆತ್ತಿ ಮೇಲೆ ನೋಡಿ ಮುಖವನ್ನು ಸೊಟ್ಟಗೆ ಮಾಡಿದರು. ಾವಿಕ ತನ್ನನ್ನು ನೋಡಿ ಕಣ್ಣು ಕೂಡ ಮಿಟಕಿಸಿದನೆಂದು ಪೇತ್ಯ ಭಾವಿಸಿದ.

ಆದರೆ ಆಗಲೆ ಅವರು ಸಮುದ್ರದ ಕಡೆಗೆ ದಡದ ದಿಣ್ಣೆಯ ಇಳಿಜಾರಿನಲ್ಲಿ ಓಡುತ್ತಿದ್ದರು· ವರ ಹಿಂದೆ ಧೂಳಿನ ಮೋಡ ಓಡುತ್ತಿತ್ತು.

"ನಾನು ಅವರನ್ನು ಮೊದಲು ನೋಡಿದೆ!" ಎಂದಳು ಮೋತ್ಯ.

ಪೇತ್ಯ ಮರದಿಂದ ಇಳಿದು ಬಂದ. ಮೋತ್ಯಳ ಮಾತು ಕೇಳಿಸಲೇ ಇಲ್ಲ ಎನ್ನುವಂತೆ ವನು ನಟಿಸಿದ. ಹಾಯಿಯನ್ನು ಏರಿಸುತ್ತಿದ್ದ ಸಣ್ಣ ದೋಣಿಯನ್ನು ಮೇಲಿನಿಂದ ಆ ಹುಡುಗ ುಡುಗಿಯರಿಬ್ಬರೂ ಒಬ್ಬರ ಮಗ್ಗುಲಲ್ಲಿ ಒಬ್ಬರು ನಿಂತು ನೋಡುತ್ತಿದ್ದರು. ನಾವಿಕನ ಸಣ್ಣ ಕಾರವು ದೋಣಿಯೊಳಕ್ಕೆ ನೆಗೆದುದನ್ನು ಅವರು ಕಂಡರು. ಹಾಯಿಯೊಳಕ್ಕೆ ಗಾಳಿ ತುಂಬಿ ದರ ಆಚೆಯ ಪಕ್ಕ ಉಬ್ಬಿಕೊಂಡಿತು. ಹೂವಿನ ದಳವನ್ನೆಂತೋ ಅಂತು ಆ ದೋಣಿಯನ್ನು ೀರಿನ ಮೇಲೆ ಗಾಳಿ ತೇಲಿಸಿಕೊಂಡು ಹೋಯಿತು. ದೋಣಿಯು ಇಳಿದಾಣದ ಬಳಿ ಟೆರೆಂಟಿ ುತ್ತು ಗಾವ್ರಿಕ್ ಮಾತ್ರ ನೋಡುತ್ತ ನಿಂತಿದ್ದರು. ಒಂದು ನಿಮಿಷದ ಬಳಿಕ ಟೆರೆಂಟಿಯೂ ಾಯವಾದ.

ಈಗ ಗಾವ್ರಿಕ್ ಒಬ್ಬನೇ ಆದ. ಪೇತ್ಯ ಮತ್ತು ಮೋತ್ಯರ ಕಡೆ ತಿರುಗಿ ಕೈಬೀಸಿ ನಿಧಾನ ಾಗಿ ಸಮುದ್ರದ ದಡದ ದಿಣ್ಣೆಯನ್ನು ಹತ್ತಲಾರಂಭಿಸಿದ.

ಅಲೆಗಳ ಉಬ್ಬರವಿಳಿತದಿಂದ ಉಸಿರಾಡಿದಂತೆ ತೋರುತ್ತಿದ್ದ ನೀಲವರ್ಣದ ವಿಸ್ತಾರವಾದ ಾಗರದ ಮೇಲೆ ದೋಣಿ ಉಬ್ಬುತ್ತ ಇಳಿಯುತ್ತ ಮುಂದುವರಿಯುತ್ತಿದ್ದಿತು.

"ದೋಣಿಯಲ್ಲಿ ಅವನೊಬ್ಬನೇ ಆಗಿದ್ದಾನಲ್ಲ ?" ಎಂದ ಪೇತ್ಯ.

"ಏನೂ ತೊಂದರೆಯಿಲ್ಲ. ಅವನ ಆಹಾರಕ್ಕಾಗಿ ಒಂದು ದೊಡ್ಡ ಬ್ರೆಡ್ಡಿನ ತುಂಡನ್ನೂ, ಟ್ಟು ಬೇಯಿಸಿದ ಎಂಟು ಕಡಲು ಮೀನುಗಳನ್ನೂ ದೋಣಿಯಲ್ಲಿ ಇಟ್ಟಿದ್ದೇವೆ." ಎಂದ ಉತ್ತರ ಿಟ್ಟಳು ಮೋತ್ಯ.

ಗಾವ್ರಿಕ್ ಬೇಗ ಬಂದು ಪೇತ್ಯ ಮತ್ತು ಮೋತ್ಯರನ್ನು ಕೂಡಿಕೊಂಡ.

"ದೇವರ ದಯದಿಂದ ಅವನನ್ನು ದಾಟಿಸಿದ್ದಾಯಿತು. ಒಳ್ಳೆಯ ಸಾಹಸವೇ ಆಯಿತು." ವ್ರಿಕ್ ಶಿಲುಬೆಯ ಸಂಜ್ಞೆಯನ್ನು ಮಾಡಿಕೊಳ್ಳುತ್ತ ಹೇಳಿದ.

"ದೋಣಿಯ ಗತಿಯೇನು ! ಅದು ಕೈಬಿಟ್ಟು ಹೋದಂತೆಯೇ ?" ಪೇತ್ಯ ಪ್ರಶ್ನಿಸಿದ.

"ಹೌದು. ಅದರ ಆಸೆ ಇನ್ನಿಲ್ಲ." ಗಾವ್ರಿಕ್ ತಲೆಯನ್ನು ಕೆರೆದುಕೊಳ್ಳುತ್ತ ಖಿನ್ನನಾಗಿ ಡಿದ.

"ನೀನು ದೋಣಿಯಿಲ್ಲದೆ ಏನು ಮಾಡುತ್ತೀಯೆ ? ನಿನ್ನ ಜೀವನ ಹೇಗೆ ನಡೆಯುತ್ತದೆ ?"

"ಚಿಂತೆಯಿಲ್ಲ ಬಿಡು. ಹೇಗಾದರೂ ನಿಭಾಯಿಸುವುದು."

ಈಗ ಅವರಿಗೆ ಮುಂದಿನ ಕೆಲಸದ ಆತುರವೇನೂ ಇರಲಿಲ್ಲ. ಆ ಮೂವರೂ ವಿರಾಮವಾಗಿ ಲಿಯನ್ನು ಹತ್ತಿ ಚಿತ್ರಗಾರನ ಹಿಂಭಾಗದಿಂದ ಮೌನವಾಗಿ ಅವನ ಚಿತ್ರವನ್ನು ನೋಡಲಾರಂಭಿ ್ರು.

ಪ್ರಕೃತಿದೃಶ್ಯದ ಚಿತ್ರಣ ಮುಗಿದಿತ್ತು. ಕ್ಯಾನ್‌ವಾಸ್ ಬಟ್ಟೆಯ ಮೇಲಿನ ಬಣ್ಣದ ವನ್ನು ಕಾತುರದ ಕಣ್ಣುಗಳಿಂದ ಮೌನವಾಗಿ ಅವರು ನೋಡಲಾರರಂಭಿಸಿದರು. ಒಂದಷ್ಟ ಆ ಕ್ಯಾನ್‌ವಾಸ್ ಬಟ್ಟೆಯಮೇಲೆ ಇಡೀ ಜಗತ್ತಿನ ರಹಸ್ಯಮಯ ಚಿತ್ರ ಪ್ರಕಾಶಿಸುತ್ತಿದ್ದ ಸತ್ಯ ಜಗತ್ತಿಗೆ ಸಂಪೂರ್ಣ ವಿಭಿನ್ನವಾದ ಆದರೆ ಅದೇ ಸಮಯದಲ್ಲಿ ಅಭಿನ್ನವಾದ ವಾ ಜಗತ್ತಾಗಿತ್ತದು!

"ಸಮುದ್ರ ಅದೇ ಇದು. ಆದರೆ ಇಲ್ಲಿ ದೋಣಿ ಇಲ್ಲ." ಬಹು ಮೆಲುದನಿಯಲ್ಲಿ ಮೋ ಹೇಳಿದಳು! ಪೇತ್ಯನ ಹೆಗಲಿನ ಮೇಲೆ ತನಗರಿವಾಗದಂತೆ ಅವಳು ತನ್ನ ಕೈಯನ್ನಿಟ್ಟಳು. ಕ್ಷಣದಲ್ಲಿ ಅದರ ಅರಿವಾದಾಗ ಉಕ್ಕಿ ಬರುತ್ತಿದ್ದ ನಗುವನ್ನು ತುಟಿಗಳ ನಡುವೆಯೇ ತಡೆ ದಳು.

ಆ ಸಮಯಕ್ಕೆ ಸರಿಯಾಗಿ ಚಿತ್ರಗಾರ ತೆಳ್ಳನೆಯ ಕುಂಚದಿಂದ ಸ್ವಲ್ಪಮಾತ್ರ ಬಿ ಬಣ್ಣವನ್ನು ಎತ್ತಿಕೊಂಡು ಆಗತಾನೆ ಚಿತ್ರಿಸಿದ್ದ ಹೊಂಬಣ್ಣದಿಂದ ಮಿರುಗುತಿದ್ದ ಸಮು ನೀಲಿಯ ನಡುವೆ ಉಬ್ಬಾಗಿ ಒಂದು ಡೊಂಕಾದ ಬೊಟ್ಟನ್ನು ಇಟ್ಟ.

"ಸದ್ಯ, ಅದು ಹಾಯಿ!" ಚಿತ್ರದ ಮಾಯಾಶಕ್ತಿಗೊಳಗಾಗಿದ್ದ ಮೋತ್ಯ ತೃಪ್ತಿಯ ರನ್ನು ಬಿಟ್ಟಳು.

ಈಗ ಚಿತ್ರದ ಸಮುದ್ರಕ್ಕೂ ಸತ್ಯ ಸಮುದ್ರಕ್ಕೂ ಯಾವ ವ್ಯತ್ಯಾಸವೂ ಕಾಣಬರ ಎಲ್ಲವೂ ಅದೇ ತದ್ವತ್ತಾಗಿದ್ದಿತು. ಹಾಯಿಯೂ ಕೂಡ ಅದೇ. ಒಬ್ಬರನ್ನೊಬ್ಬರು ಸೋಕಿ ನಿಂ ಮೂವರೂ ಒಂದುಸಲ ಸತ್ಯಸಮುದ್ರದ ಕಡೆಗೂ ಇನ್ನೊಂದು ಸಲ ಚಿತ್ರದ ಸಮುದ್ರದ ಕ ದೃಷ್ಟಿಯನ್ನು ಹಾಯಿಸುತ್ತ ಆ ಸೌಂದರ್ಯಸಾಗರದಲ್ಲಿ ಮಿಾಯುತ್ತಲಿದ್ದರು. ಕಡಲ ಬಿಳಿಯ ರೆಕ್ಕೆಯನ್ನು ಬೀಸುತ್ತ ಹಾರಿ ಹೋಗುತ್ತ ಕ್ರಮೇಣ ದಿಗಂತದಲ್ಲಿ ಕರಗಿ ಹೋಗುವಂತೆ, ಅ ಅಪಾರ ಸಾಗರದ ನೊರೆ ನೀಲಿಯಲ್ಲಿ ಅಜ್ಜನ ದೋಣಿಯ ಪುಟ್ಟಹಾಯಿ ಕಣ್ಣುಗಳಿಂದ ಅ ವಾಗುತ್ತಲಿದ್ದಿತು.

ನೋಡಿತ್ತ ಹರಡಿಹುದಮಲ ನೀರ ವಿಸ್ತಾರ,
ಮೇಲೆ ನೋಡಲ್ಲಿ ಹೊಂಗ ... ಳಪಪಾರ,
ಬಿರುಗಾಳಿಯಲೆ ಬಯಕೆ ...
ಬಿರುಗಾಳಿಯಲೆ ದೊರೆಯ ...

ಬಿಳಿ ಹಾಯಿ

೧೯೩೭ ರಲ್ಲಿ ಪ್ರಕಟವಾದ 'ಬಿಳಿ ಹಾಯಿ' ವ್ಯಾಲೆಂಟಿನ್ ಕಾತ್ಯೇವ್‌ನ ಇತರ ಬರೆಹಗಳಿಗಿಂತ ಭಿನ್ನವಾದುದು. ೧೯೦೫ರ ರಷ್ಯದ ಮೊದಲನೆ ಕ್ರಾಂತಿಯ ಕಾಲದ ಒಡೆಸ್ಸ ನಗರದ ಚಿತ್ರವನ್ನು ಕಟ್ಟಿಕೊಡುವ ಸುರಮ್ಯ ಐತಿಹಾಸಿಕ ಕಾದಂಬರಿ 'ಬಿಳಿ ಹಾಯಿ'. ಸರಕಾರವನ್ನು ವಿರೋಧಿಸಿ ದಂಗೆಯೆದ್ದ 'ಪೊತ್ಯೆಮ್ಕಿನ್' ಎಂಬ ಕಪ್ಪುಸಮುದ್ರದ ನೌಕಾದಳದ ಹಡಗಿನಿಂದ ಪರಾರಿಯಾದ ಬಂಡಾಯಗಾರ ನಾವಿಕ ಪೋಲೀಸರ ಕಣ್ಣು ತಪ್ಪಿಸಿ ಅನೇಕ ಅಪಾಯಕರವಾದ ಸನ್ನಿವೇಶಗಳನ್ನು ದಾಟಿ ಒಡೆಸ್ಸ ನಗರವನ್ನು ಸೇರಿದ. ಒಡೆಸ್ಸ ನಗರದ ಒಡಲಿನಲ್ಲಿದ್ದ ಜಟಿಲವಾದ ಸುರಂಗ ಮಾರ್ಗಗಳಲ್ಲಿ ಅಡಗಿಕೊಂಡಿದ್ದು ಕ್ರಾಂತಿಕಾರರ ಸಮಿತಿಯ ಸಹಕಾರದೊಡನೆ ಚಳುವಳಿಯಲ್ಲಿ ಭಾಗವಹಿಸಿ ಪೋಲೀಸರೊಡನೆ ಯುದ್ಧವನ್ನು ಹೂಡಿದ. ಕೊನೆಯಲ್ಲಿ ಪೋಲೀಸರಿಂದ ಬಂಧಿತನಾದ ನಾವಿಕ ಜೈಲಿನಿಂದ ಪಾರಾಗಿ ಬೆಸ್ತರ ದೋಣಿಯೊಂದರಲ್ಲಿ ತಪ್ಪಿಸಿಕೊಂಡು ಹೋದ.

ಒಡೆಸ್ಸದ ಶಾಲಾಮಾಸ್ತರರ ಮಗನಾದ ಎಂಟೊವರೆ ವರ್ಷದ ಪೇತ್ಯ ಮತ್ತು ಒಂಬತ್ತು ವರ್ಷದ ಬೆಸ್ತರ ಹುಡುಗ ಗಾವ್ರಿಕ್ ಎಂಬ ಇಬ್ಬರು ಬಾಲಕರ ಸಾಹಸದ ಪ್ರತೀಕವಾಗಿದೆ 'ಬಿಳಿ ಹಾಯಿ' ಕಾದಂಬರಿ. ಹುಡುಗರ ಮಾನಸಿಕ ವ್ಯಾಪಾರವನ್ನೂ, ಅವಲೋಕನ ಶಕ್ತಿಯನ್ನೂ, ಸಾಹಸಪ್ರವೃತ್ತಿಯನ್ನೂ ಬಹು ಸುಂದರವಾಗಿ ವರ್ಣಿಸಲಾಗಿದೆ. ಚಳುವಳಿಯಿಂದ ತತ್ತರಿಸಿ ಹೋದ ಒಡೆಸ್ಸನಗರ, ಹೋರಾಟ, ಬಾಂಬುಗಳ ಸಿಡಿತ, ಪೋಲೀಸರ ಅತ್ಯಾಚಾರ, ಶ್ರಮಜೀವಿಗಳ ಶೋಷಣೆ— ಮೊದಲಾದ ಚಿತ್ರಗಳು ಕಾದಂಬರಿಗೆ ರೋಮಾಂಚದ ಉಸಿರನ್ನು ತುಂಬಿದರೂ ಅಂದಿನ ಒಡೆಸ್ಸ ನಗರದ ಜೀವಂತಚಿತ್ರವು ಕಾದಂಬರಿಗೆ ವಾಸ್ತವಿಕತೆಯ ಮೆರುಗನ್ನು ಕೊಟ್ಟಿದೆ.